# ತೌಹೀದ್‌ನ ನೈಜ ವಿಶ್ವಾಸ

ಮನ್‌ಹಜ್ ಅಲ್‌ಅಂಬಿಯಾ ಕಾಲ್ & ಗೈಡೆನ್ಸ್ ಸೆಂಟರ್ – ಮಂಗಳೂರು

بسم الله الرحمن الرحيم

**ಪರಮ ದಯಾಮಯನೂ ಕರುಣಾಮಯಿಯೂ**
**ಆದ ಅಲ್ಲಾಹನ ನಾಮದಿಂದ**

# عقيدة التوحيد

وَبَيَانُ مَا يُضَادُّهَا أَوْ يَنْقُصُهَا مِنَ الشِّرْكِ الْأَكْبَرِ وَالْأَصْغَرِ وَالتَّعْطِيلِ وَالْبِدَعِ وَغَيْرِ ذَلِكَ

بقلم فضيلة الشيخ

معالي الدكتور صالح بن فوزان بن عبد الله الفوزان

عضو هيئة كبار العلماء

# ತೌಹೀದ್‌ನ ನೈಜ ವಿಶ್ವಾಸ

**ಏಕದೇವ ವಿಶ್ವಾಸ ಮತ್ತು ಇದಕ್ಕೆ ವಿರುದ್ಧವಾಗಿರುವ, ಇದನ್ನು ನ್ಯೂನಗೊಳಿಸುವ ಹಿರಿಯ ಶಿರ್ಕ್(ದೇವ ಸಹಭಾಗಿತ್ವ), ಲಘುತರ ಶಿರ್ಕ್(ದೇವ ಸಹಭಾಗಿತ್ವ), ನಿರ್ಗುಣವಾದ, ಧಾರ್ಮಿಕ ನವೀನವಾದ ಮುಂತಾದವುಗಳ ವಿವರಣೆ**

**ಡಾ| ಶೈಖ್ ಸ್ವಾಲಿಹ್ ಬಿನ್ ಫೌಝಾನ್ ಬಿನ್ ಅಬ್ದುಲ್ಲಾ ಅಲ್ ಫೌಝಾನ್,**
**ಹಿರಿಯ ವಿದ್ವಾಂಸರ ಒಕ್ಕೂಟದ ಸದಸ್ಯರು –ಸೌದಿ ಅರೇಬಿಯಾ**

ಅನುವಾದ
**ಉಮರ್ ಬಿನ್ ಅಹ್ಮದ್ ಮದನಿ**

**ಬೆಲೆ ರೂ. 75.00**

ಪ್ರಕಾಶಕರು:
**ಮನ್‌ಹಜ್ ಅಲ್‌ಅಂಬಿಯಾ ಕಾಲ್ & ಗೈಡೆನ್ಸ್ ಸೆಂಟರ್**
**ಮಂಗಳೂರು**

ALL RIGHTS RESERVED © جميع الحقوق محفوظة

no part of this book may be reproduced or transmitted in any form or by any means, electronic, mechanical, including photocopy, recording, or any information storage and retrieval system, without permission in writing from the publisher

**First Edition: May 2009**
**Second Edition: Nov 2012**

| | |
|---|---|
| Title: | Thawheedna naija vishwasa |
| Author: | Shaikh Salih ibn Fawzan ibn Abdillah al Fawzan |
| Translator: | Umar bin Ahmed Madani |
| Printers: | Pixel Graphics & Designers, Mangalore |
| Copies: | 1000 |
| Price: | ₹ 75.00 (seventy five only) |

Typesetting & DTP :

IMAGE PUBLICATIONS
Salafi Complex, APMC Road,
PUTTUR - 574 201

PUBLISHERS:

Manhaj-Al-Ambiya
Call & Guidance Centre
Mangalore - 575 001
*email: al.ambiya@gmail.com*
*dawathu-salafiyya@hotmail.com*

# كلمة الناشر

بسم الله الرحمن الرحيم

الحمد لله والصلاة والسلام على رسوله محمد وآله وصحبه ومن اهتدى بهداه . أما بعد انتشرت في بعض المجتمعات الإسلامية مخالفات متعددة حول العقيدة التوحيد وفي هذه الأيام كثرت الخرافات ودعاتها وكثر فيها المتعالمون والمفتون بغير علم. وذلك في أمور خطيرة لا ينبغي أن يتكلم فيها إلا الراسخون في العلم لذا وقع الاختيار منا على ترجمة الكتاب لمعالي الشيخ الدكتور/ صالح بن فوزان الفوزان رحمه الله وهو«عقيدة التوحيد وبيان ما يضادها أو ينقصها من الشرك الأكبر والأصغر والتعطيل والبدع وغير ذلك» إلى لغة ولايتنا الكندية المحلية وقام بترجمتها الشيخ عمر بن أحمد المدنى حفظه الله

ومما لا شك فيه أن علم العقيدة الإسلامية هو العلم الأساسي الذي تجدر العناية به تعلماً وتعليماً وعملاً بموجبه لتكون الأعمال صحيحة مقبولة عند الله نافعة للعاملين كما قال المصنف الكريم في المقدمة

ونسأل الله أن يجعله في ميزان الحسنات للمصنف والمترجم وأن ينفع بها المسلمين وأن يضاعف الأجر لكل من سعى في نشرها وإيصالها إلى من يستفيد منها إنه سبحانه جواد كريم. هذه النسخة طبع على نفقة حملة مشعر الحرام جزاهم الله الخير.

وصلى الله على نبينا محمد وآله وصحبه وسلم.

الناشرون

# ಒಳಪುಟಗಳಲ್ಲಿ...

ಪ್ರಕಾಶಕರ ಮಾತು 11

ಮುನ್ನುಡಿ 13

ಭಾಗ–1 15

ಅಧ್ಯಾಯ–1 : ಧರ್ಮದ ಬುನಾದಿಯಾಗಿರುವ ಅಕೀದ (ನೈಜ ವಿಶ್ವಾಸ)ದ ವಿವರಣೆ, ಅದರ ಪ್ರಾಧಾನ್ಯತೆ 16

ಅಧ್ಯಾಯ–2 : ಅಕೀದಃದ ಮೂಲಗಳು, ಅವುಗಳನ್ನು ಪಡೆಯಲು ಸಲಫುಸ್ಸಾಲಿಹೀನ್ (ಸಜ್ಜನ ಪೂರ್ವಿಕ)ರು ಕೈಗೊಂಡಂತಹ ಮಾರ್ಗ 18

ಅಧ್ಯಾಯ–3 : ನೈಜವಿಶ್ವಾಸದಿಂದ ವ್ಯತಿ ಚಲನೆ– ಈ ಬಗ್ಗೆ ಎಚ್ಚರ ವಹಿಸಬೇಕಾದ ಕ್ರಮಗಳು 20

ಭಾಗ–2 27

ತೌಹೀದ್(ಏಕದೇವ ವಿಶ್ವಾಸ)ನ ಅರ್ಥ ವಿವರಣೆ ಹಾಗೂ ಅದರ ಶಾಖೆಗಳು

1. ತೌಹೀದ್ ಅರ್ರುಬೂಬಿಯ್ಯ: 28

ಅಧ್ಯಾಯ–1 : ತೌಹೀದ್ ಅರ್ರುಬೂಬಿಯ್ಯದ ಅರ್ಥ ವಿವರಣೆ–ಇದನ್ನು ಬಹುದೇವಾರಾಧಕರು ಒಪ್ಪಿಕೊಂಡ ಬಗೆ 29

ಅಧ್ಯಾಯ–2 : ಕುರ್‌ಆನ್‌ನಲ್ಲೂ, ಸುನ್ನತ್‌ನಲ್ಲೂ 'ರಬ್ಬ್' ಎಂಬ ಪದದ ಅರ್ಥವ್ಯಾಪ್ತಿ ಮತ್ತು ಈ ಬಗ್ಗೆ ಪಥಭ್ರಷ್ಟ ಪಂಥಗಳ ಕಲ್ಪನೆಗಳು 34

ಅಧ್ಯಾಯ–3 : ಅಲ್ಲಾಹನೆಡೆಗೆ ಈ ವಿಶ್ವ ಹಾಗೂ ಅದರ ಸ್ವಾಭಾವಿಕ ವ್ಯವಸ್ಥೆಗಳ ಶರಣಾಗತಿ ಹಾಗೂ ವಿಧೇಯತೆ 42

ಅಧ್ಯಾಯ–4 : ಸೃಷ್ಟಿಕರ್ತನ ಅಸ್ತಿತ್ವವನ್ನು ಹಾಗೂ ಆತನ ಏಕತೆಯನ್ನು ದೃಢೀಕರಿಸುವ ಕುರ್‌ಆನ್‌ನ ವಿಧಾನ 45

ಅಧ್ಯಾಯ–5 : ತೌಹೀದ್ ಅರ್–ರುಬೂಬಿಯ್ಯವು ತೌಹೀದ್ ಅಲ್–ಉಲೂಹಿಯ್ಯದೆಡೆಗೆ ಸಾಗಿಸುತ್ತದೆ ಮತ್ತು ಅದನ್ನು ಅನಿವಾರ್ಯವಾಗಿಸುತ್ತದೆಂಬುದರ ವಿವರಣೆ 50

ತೌಹೀದ್ ಅಲ್ ಉಲೂಹಿಯ್ಯ 55

ಅಧ್ಯಾಯ–1 : ವಿವರಣೆ ತೌಹೀದ್ ಅಲ್ ಉಲೂಹಿಯ್ಯದ ಅರ್ಥ ಮತ್ತು ಅದು ಪ್ರವಾದಿಗಳ ಧರ್ಮಾಹ್ವಾನದ ತಿರುಳಾಗಿತ್ತೆಂಬ ಸತ್ಯ 56

ಅಧ್ಯಾಯ–2 : ಶಹಾದತೈನ್‌ನ ಅರ್ಥ ವಿವರಣೆ ಹಾಗೂ ಅದರ ಅಪಾರ್ಥದ ಕುರಿತು ಸ್ಪಷ್ಟನೆ. ಅದರ ಸ್ತಂಭಗಳು, ಅದರ ಶರ್ತಗಳು, ಅದರ ಬೇಡಿಕೆಗಳು ಮತ್ತು ಅದನ್ನು ನಿಷ್ಫಲಗೊಳಿಸುವವುಗಳು 61

ಅಧ್ಯಾಯ–3 : ಶರೀಅತ್ ಶಾಸನ 73

ಅಧ್ಯಾಯ–4 : ಇಬಾದತ್ (ಆರಾಧನೆ) ಅದರ ಅರ್ಥ ಮತ್ತು ಅದರ ಘಟಕಗಳು 76

ಅಧ್ಯಾಯ 5 : ಆರಾಧನೆಯ ಕುರಿತು ತಪ್ಪು ಕಲ್ಪನೆಗಳಿಗೆ ಸ್ಪಷ್ಟೀಕರಣ 78

ಅಧ್ಯಾಯ–6

ನೈಜ ಉಬೂದಿಯ್ಯದ ಸ್ತಂಭಗಳ ಕುರಿತು ಸ್ಪಷ್ಟೀಕರಣ 80

ತೌಹೀದ್ ಅಲ್–ಅಸ್ಮಾವಸ್ಸಿಫಾತ್ 83

ಭಾಗ–3

ಶಿರ್ಕ್ ಮತ್ತು ಮನುಷ್ಯ ಜೀವನದಲ್ಲಿ ಪ್ರತ್ಯಕ್ಷಗೊಂಡ ವ್ಯತಿಚಲನೆಯ ವಿವರಣೆ ಹಾಗೂ ಕುಫ್ರ್, ನಾಸ್ತಿಕತೆ, ಶಿರ್ಕ್ ಹಾಗೂ ನಿಫಾಕ್ (ಕಪಟ ವಿಶ್ವಾಸ) ಮುಂತಾದವುಗಳ ಮೇಲೆ ಚೆಲ್ಲಲಾದ ಚಾರಿತ್ರಿಕ ಬೆಳಕು ಮತ್ತು ಈ ವಿಭಾಗದಲ್ಲಿ ಈ ಕೆಳಗಿನ ಅಧ್ಯಾಯಗಳು ಒಳಗೊಳ್ಳುತ್ತವೆ. 98

ಅಧ್ಯಾಯ 1 : ಮನುಷ್ಯ ಜೀವನದಲ್ಲಿ ಪ್ರಕಟವಾದ ವ್ಯತಿಚಲನೆ 99

ಅಧ್ಯಾಯ 2 : ಶಿರ್ಕ್ : ಅದರ ಪರಿಚಯ ಹಾಗೂ ಅದರ ವಿಧಗಳು 103

ಅಧ್ಯಾಯ 3 : ಕುಫ್ರ್ : ಅದರ ಪರಿಚಯ ಹಾಗೂ ಅದರ ವಿಧಗಳು 112

ಅಧ್ಯಾಯ 4 : ಕಪಟ ವಿಶ್ವಾಸ ಅದರ ಪರಿಚಯ ಮತ್ತು ವಿಧಗಳು 117

ಅಧ್ಯಾಯ 5 : ಜಾಹಿಲಿಯ್ಯ (ಮೌಢ್ಯ) ಕರ್ಮಭ್ರಷ್ಟತೆ, ಮಾರ್ಗಭ್ರಷ್ಟತೆ, ಧರ್ಮತ್ಯಾಗ ಮುಂತಾದವುಗಳ ವಾಸ್ತವಿಕತೆ ಇವುಗಳ ವಿಧಗಳು ಮತ್ತು ನಿಯಮಗಳು 123

ಭಾಗ–4

ತೌಹೀದ್‌ನ್ನು ಭಂಗಗೊಳಿಸುವ ಮಾತು ಮತ್ತು ಕೃತಿಗಳು ಅಥವಾ ಅದಕ್ಕೆ ಲೋಪವುಂಟು ಮಾಡುವ ಸಂಗತಿಗಳು 131

ಅಧ್ಯಾಯ–1 : ಹಸ್ತ ರೇಖೆ ಕೈ ಲಕ್ಷಣ ಅಥವಾ ಪಾತ್ರೆ ಇತ್ಯಾದಿಗಳನ್ನು ನೋಡಿ ಮತ್ತು ನಕ್ಷತ್ರಗಳನ್ನು ನೋಡಿ ಅದೃಶ್ಯ ಜ್ಞಾನವನ್ನು ಹೇಳುವುದಾಗಿ ವಾದಿಸುವುದು. 133

ಅಧ್ಯಾಯ–2 : ಮಾಟ ಮಂತ್ರ, ಜೋತಿಷ್ಯ ಹೇಳುವುದು ಮತ್ತು ನಕ್ಷತ್ರ ನೋಡುವ ಕೆಲಸ. 135

ಅಧ್ಯಾಯ–3 : ಗೋರಿಗಳಿಗೆ ಬಲಿ, ಕಾಣಿಕೆಗಳನ್ನು ಮತ್ತು ಹದಿಯ ನೀಡುವುದು ಮತ್ತು ಅವುಗಳನ್ನು ಆದರಿಸುವುದು. 140

ಅಧ್ಯಾಯ–4 : ವಿಗ್ರಹಗಳು ಮತ್ತು ಸ್ಮಾರಕಗಳಿಗೆ ಮಹತ್ವ ನೀಡುವುದು 145

ಅಧ್ಯಾಯ–5 : ಧರ್ಮವನ್ನು ತಮಾಷೆ ಮಾಡುವುದು ಮತ್ತು ಅದರ ಪವಿತ್ರತೆಯನ್ನು ಅವಹೇಳನ ಮಾಡುವುದು. 148

ಅಧ್ಯಾಯ–6 : ಅಲ್ಲಾಹನ ಕಾನೂನಿನ ಹೊರತು ಇತರ ಕಾನೂನುಗಳ ಪ್ರಕಾರ ತೀರ್ಪು ನೀಡುವುದು. 151

ಅಧ್ಯಾಯ–7 : ಶರೀಅತ್ ಕಾನೂನು ಮತ್ತು ಹಲಾಲ್ – ಹರಾಮ್ ಅನ್ನು ಸ್ಥಾಪಿಸುವ ಹಕ್ಕಿದೆಯೆಂದು ವಾದಿಸುವುದು 160

ಅಧ್ಯಾಯ–8 : ನೂತನವಾದಿ ಸಿದ್ಧಾಂತಗಳು ಮತ್ತು ಮೌಢ್ಯದ ಜಮಾಅತ್‌ಗಳೊಂದಿಗಿನ ಸಂಬಂಧದ ನಿಯಮಗಳು 164

ಅಧ್ಯಾಯ–9 : ಜೀವನದ ಬಗ್ಗೆ ಭೌತಿಕ ದೃಷ್ಟಿಕೋನ 170

ಅಧ್ಯಾಯ–10 : ಮಂತ್ರಿಸಿ ಊದುವುದು, ನೂಲುಗಳು, ತಾಯಿತಗಳು 176

ಅಧ್ಯಾಯ–11 : ಅಲ್ಲಾಹೇತರರ ಮೇಲೆ ಆಣೆ ಹಾಕುವುದು, ಸೃಷ್ಟಿಗಳನ್ನು ಮಧ್ಯವರ್ತಿ ಮಾಡುವುದು ಮತ್ತು ಅವುಗಳೊಂದಿಗೆ ಸಹಾಯ ಯಾಚನೆ. 180

ಭಾಗ –5

ರಸೂಲುಲ್ಲಾಹಿ(ﷺ), ಅಹ್ಲ್ ಬೈತ್ ಮತ್ತು ಸಹಾಬಿಗಳ ಕುರಿತ ವಿಶ್ವಾಸದ ಅನಿವಾರ್ಯತೆ. 189

ಅಧ್ಯಾಯ –1 : ಅಲ್ಲಾಹನ ಸಂದೇಶವಾಹಕರು(ﷺ)ರ ಪ್ರೀತಿ ಮತ್ತು ಶ್ರೇಷ್ಠಗೊಳಿಸುವುಕೆಯ ಅನಿವಾರ್ಯತೆ ಮತ್ತು ಅದರ ಅತಿಯಾದ ಹೊಗಳುವಿಕೆಯ ನಿಷೇಧ ಮತ್ತು ಅವರ(ﷺ) ಸ್ಥಾನ, ಸಾಮರ್ಥ್ಯ,ಶ್ರೇಷ್ಠತೆಗಳಿಗೆ ವಿವರಣೆ 190

ಅಧ್ಯಾಯ –2 : ಅಲ್ಲಾಹನ ಸಂದೇಶವಾಹಕ(ﷺ)ರವರ ಅನುಸರಣೆಯ ಅನಿವಾರ್ಯತೆಯ ವಿವರಣೆ. 198

ಅಧ್ಯಾಯ –3 : ಅಲ್ಲಾಹನ ಸಂದೇಶವಾಹಕರು(ﷺ)ರವರ ಮೇಲೆ ದರೂದ್ ಮತ್ತು ಸಲಾಮ್ ಕಳುಹಿಸುವ ರೀತಿಯ ವಿವರಣೆ. 202

ಅಧ್ಯಾಯ –4 : ಪ್ರವಾದಿ ಪರಿವಾರದ ಶ್ರೇಷ್ಠತೆ : ಯಾವುದೇ ಕೊರತೆ ಮಾಡದೆ, ಅತಿಶಯ ಮಾಡದೆ ಅವರಿಗೆ ಅರ್ಹವಾದ ಸ್ಥಾನ ನೀಡುವುದರ ವಿವರಣೆ. 204

ಅಧ್ಯಾಯ –5 : ಸಹಾಬಿಗಳ ಶ್ರೇಷ್ಠತೆ, ಅದರ ಬಗ್ಗೆ ಅಗತ್ಯವಾದ ವಿಶ್ವಾಸ ಮತ್ತು ಅವರ ನಡುವೆ ನಡೆದಿರುವುದರ ಬಗ್ಗೆ ಅಹ್ಲುಸುನ್ನತ್ ವಲ್ ಜಮಾಅತ್‌ನ ನಿಲುವು 207

ಅಧ್ಯಾಯ –6 : ಸಹಾಬಿಗಳನ್ನು ಮತ್ತು ಸನ್ಮಾರ್ಗದ ಹಿರಿಯ ಇಮಾಮರನ್ನು ತೆಗಳುವುದರ ನಿಷೇಧ. 214

ಭಾಗ–6

ನವೀನಾಚಾರಗಳು 221

ಅಧ್ಯಾಯ –1 : ಬಿದ್‌ಅತ್‌ನ ಅರ್ಥ ಮತ್ತು ಅದರ ವಿಧಗಳು – ಆದೇಶಗಳು 222

ಅಧ್ಯಾಯ –2 : ಮುಸ್ಲಿಮರ ಜೀವನದಲ್ಲಿ ಬಿದ್‌ಅತ್‌ನ ಉದ್ಭವ ಮತ್ತು ಅವುಗಳ ಕಾರಣಗಳು 227

ಅಧ್ಯಾಯ –3 : ಬಿದ್‌ಅತ್‌ಗಳ ಕುರಿತು ಮುಸ್ಲಿಮ್ ಉಮ್ಮತ್‌ನ ನಿಲುವು ಮತ್ತು ಅದರ ನಿರ್ನಾಮಕ್ಕಾಗಿ ಅಹ್ಲುಸ್ಸುನ್ನತ್ ವಲ್‌ಜಮಾಅತ್‌ನ ಕ್ರಮ 233

ಅಧ್ಯಾಯ –4 : ಇಂದಿನ ಕೆಲವು ಹೊಸ ಬಿದ್‌ಅತ್‌ಗಳ ನಮೂನೆಗಳು 237

1. ಮಿಲಾದುನ್ನಬೀ ಸಡಗರ, ಉತ್ಸವ

2. ಕೆಲವು ಸ್ಥಳಗಳು, ಕುರುಹುಗಳು ಮತ್ತು ಜೀವಂತ ಅಥವಾ ಮೃತ ವ್ಯಕ್ತಿಗಳ ಬರ್ಕತ್ ಪಡೆಯುವುದು.

3. ಇಬಾದತ್ ಮತ್ತು ಸಾಮಿಪ್ಯದ ಕ್ಷೇತ್ರದಲ್ಲಿ ಬಿದ್‌ಅತ್

# ಪ್ರಕಾಶಕರ ಮಾತು

بِسْمِ اللَّهِ الرَّحْمَٰنِ الرَّحِيمِ

ಸರ್ವಸ್ತುತಿಗಳು ಅಲ್ಲಾಹನಿಗೆ ಮೀಸಲು, ಅಲ್ಲಾಹನ ಅನುಗ್ರಹ ಹಾಗೂ ಶಾಂತಿಯು ಅವನ ಸಂದೇಶವಾಹಕರಾದ ಮುಹಮ್ಮದ್(ﷺ)ರವರ ಮೇಲೂ, ಅವರ ಕುಟುಂಬದ ಮೇಲೂ, ಅವರ ಅನುಯಾಯಿಗಳ ಮೇಲೂ ವರ್ಷಿಸಲಿ.

ತೌಹೀದ್‌ನ ನೈಜ ವಿಶ್ವಾಸದ ಸುತ್ತಮುತ್ತ ಹಲವಾರು ವಿರುದ್ಧವಾದಗಳು ಇಂದು ಇಸ್ಲಾಮೀ ಸಮುದಾಯಗಳಲ್ಲಿ ಸಾಕಷ್ಟು ಹಬ್ಬಿವೆ. ಇಂದಿನ ದಿನಗಳಲ್ಲಿ ಅನಾಚಾರಗಳ ಹೆಚ್ಚಳವಾಗುತ್ತಿರುವಂತೆಯೇ ಅವುಗಳ ಪ್ರಚಾರಕರು ಹಾಗೂ ಅವುಗಳೆಡೆಗೆ ಕರೆಯುವವರೂ ವರ್ಧಿಸುತ್ತಿದ್ದಾರೆ. ಯಾವುದೇ ಜ್ಞಾನದ ಆಧಾರವಿಲ್ಲದೆ ಇದನ್ನು ಪ್ರಚಾರಮಾಡುತ್ತಿರುವ ಅನಾಚಾರಗಳಿಗೆ ಬಲಿಯಾದವರ ಸಂಖ್ಯೆಯೂ ಕಡಿಮೆಯೇನಲ್ಲ. ಇಂತಹ ಸನ್ನಿವೇಶದಲ್ಲಿ ಈ ಕಳವಳಕಾರಿ ಬೆಳವಣಿಗೆಯ ವಿರುದ್ಧ ಧ್ವನಿಯೆತ್ತಬೇಕಾದವರು ಜ್ಞಾನದಲ್ಲಿ ಸುದೃಢರಾಗಿರುವವರಾಗಿದ್ದಾರೆ. ಆದ್ದರಿಂದ ನಾವು ಸೌದಿ ಅರೇಬಿಯಾದ ವಿದ್ವಾಂಸರ ಒಕ್ಕೂಟದ ಹಿರಿಯ ಸದಸ್ಯರುಗಳಲ್ಲೊಬ್ಬರಾದ ಡಾ। ಸ್ವಾಲಿಹ್ ಬಿನ್ ಫೌಝಾನ್ ಅಲ್‌ಫೌಝಾನ್(ಹಫಿದಹುಲ್ಲಾಹ್)ರವರ ಅಕೀದತು ತೌಹೀದ್ ಎಂಬ ಪ್ರಭಾವೀ ಗ್ರಂಥವನ್ನು ಕನ್ನಡಕ್ಕೆ ಭಾಷಾಂತರಿಸಲು ನಿರ್ಧರಿಸಿದೆವು. ಇದನ್ನು ಕನ್ನಡಕ್ಕೆ ಅನುವಾದಿಸಿದವರು ಉಮರ್ ಬಿನ್ ಅಹ್ಮದ್ ಮದನಿಯವರಾಗಿದ್ದಾರೆ.

ಇಸ್ಲಾಮಿನ ಬುನಾದಿಯಾದ ನೈಜ ಏಕದೇವ ವಿಶ್ವಾಸವನ್ನು ಕಲಿಯುವುದು ಹಾಗೂ ಕಲಿಸುವುದು ಅತ್ಯಂತ ಮಹತ್ವವಿರುವುದಾಗಿದ್ದು ಇದನ್ನು ಜೀವನದಲ್ಲಿ ಜಾರಿಗೆ ತಂದರೆ ಮಾತ್ರ ನಾವು ಮಾಡುವ ಕರ್ಮಗಳು ಅಲ್ಲಾಹನ ಬಳಿ ಸ್ವೀಕಾರಾರ್ಹವಾಗಬಲ್ಲವು, ಈ ಮಾತನ್ನು ಗ್ರಂಥಕರ್ತರು ತಮ್ಮ ಮುನ್ನುಡಿಯಲ್ಲಿ ಪ್ರಸ್ತಾವಿಸಿದ್ದಾರೆ.

ಈ ಕೃತಿಯನ್ನು ಗ್ರಂಥಕರ್ತರ, ಅನುವಾದಕರ ಸತ್ಕರ್ಮಗಳ ತಕ್ಕಡಿಯಲ್ಲಿ ಸೇರಿಸಲೆಂದೂ, ಇದರ ಪ್ರಯೋಜನವು ಮುಸ್ಲಿಮರಿಗೆ ತಲುಪಲೆಂದೂ ನಾವು ಅಲ್ಲಾಹನಲ್ಲಿ ಪ್ರಾರ್ಥಿಸುತ್ತೇವೆ. ಇದನ್ನು ಹೊರತರಲು ನೆರವಾದ ಶೇಖ್ ಅಬೂರಾಷಿದ್ ಕುವೈತ್, ಇವರಿಗೂ, ಇದನ್ನು ಅಚ್ಚುಕಟ್ಟಾಗಿ ವಿನ್ಯಾಸಗೊಳಿಸಿದ ಇಮೇಜ್ ಪಬ್ಲಿಕೇಷನ್ ಪುತ್ತೂರು ಇವರಿಗೂ, ಇದನ್ನು ಜನಮನಗಳಿಗೆ ತಲುಪಿಸಲು ಇದರ ಹಿಂದೆ ಕಾರ್ಯ ನಿರ್ವಹಿಸಿದ ಗಲ್ಫ್ ವಲಯದ ಕರ್ನಾಟಕ ಸಲಫಿ ಅಸೋಸಿಯೇಷನ್‌ಗಳ ಸರ್ವ ಸದಸ್ಯರಿಗೂ ಅಲ್ಲಾಹನು ತಕ್ಕ ಪ್ರತಿಫಲವನ್ನು ನೀಡಲಿ.

# ಮುನ್ನುಡಿ

بِسْمِ اللَّهِ الرَّحْمَٰنِ الرَّحِيمِ

ಸರ್ವಸ್ತುತಿಯು ಸಕಲ ಲೋಕಗಳ ಪಾಲಕಪ್ರಭುವಾದ ಅಲ್ಲಾಹುವಿಗೆ ಮೀಸಲು. ಸತ್ಯಸಂಧರೂ ವಿಶ್ವಸ್ಥರೂ, ಅವನ ಪ್ರವಾದಿಯೂ, ನಮ್ಮೆಡೆಗೆ ಬಂದ ಪ್ರವಾದಿಯೂ ಆದ ಮುಹಮ್ಮದ್(ﷺ)ರ ಮೇಲೆ ಅವನ ಅನುಗ್ರಹ, ಶಾಂತಿ ವರ್ಷಿಸಲಿ, ಅವರ ಕುಟುಂಬದ ಮೇಲೂ ಅವರ ಅನುಚರರೆಲ್ಲರ ಮೇಲೂ ವರ್ಷಿಸಲಿ.

ಈ ಹೊತ್ತಗೆಯನ್ನು ಏಕದೇವ ವಿಶ್ವಾಸದ ಜ್ಞಾನದ ಕುರಿತಾಗಿ ಬರೆಯಲಾಗಿದೆ. ಇದರಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿರುವ ಜೊತೆಗೆ ಸರಳ ವಾಕ್ಯಗಳೆಡೆಗೆ ಹೆಚ್ಚಿನ ಗಮನ ಕೊಡಲಾಗಿದೆ, ನಮ್ಮ ಮಹಾನ್ ವಿದ್ವಾಂಸರುಗಳಾದ ಶೈಖುಲ್ ಇಸ್ಲಾಮ್ ಇಬ್ನು ತೈಮಿಯ್ಯ, ಅಲ್ಲಾಮ ಇಬ್ನುಲ್ ಕಯ್ಯಿಮ್, ಶೈಖುಲ್ ಇಸ್ಲಾಮ್ ಮುಹಮ್ಮದ್ ಬಿನ್ ಅಬ್ದುಲ್ ವಹ್ಹಾಬ್ ಮತ್ತು ಅವರ ಶಿಷ್ಯರು ಮುಂತಾದವರ ಗ್ರಂಥಗಳಿಂದ ಇದಕ್ಕೆ ಬೇಕಾದ ವಸ್ತು ವಿಷಯಗಳನ್ನು ಆರಿಸಿಕೊಳ್ಳಲಾಗಿದೆ. ಇಸ್ಲಾಮೀ ವಿಶ್ವಾಸ ಜ್ಞಾನವು ಕಲಿಯಲು ಹಾಗೂ ಶಿಕ್ಷಣ ನೀಡಲು ಅತ್ಯಂತ ಮಹತ್ವವಿರುವಂತಹ ಒಂದು ಮೂಲಭೂತ ಜ್ಞಾನವಾಗಿದೆಯೆಂಬುದರಲ್ಲಿ ಎರಡು ಮಾತಿಲ್ಲ. ಇದು ಸತ್ಕರ್ಮಗಳನ್ನೆಸಗುವವರಿಗೆ ಅವರ ಕರ್ಮವು ಅಲ್ಲಾಹನ ಬಳಿ ಸ್ವೀಕಾರಾರ್ಹವಾಗಿ, ಅದು ಅವರಿಗೆ ಪ್ರಯೋಜನವಾಗಬೇಕೆಂಬ ಉದ್ದೇಶದಿಂದ ರಚಿತವಾಗಿದೆ. ನಮ್ಮ ಈ ಕಾಲದಲ್ಲಿ ದೇವಾಸ್ತಿತ್ವದ ನಿರಾಕರಣೆ, ಮೂರ್ತಿ ಪೂಜೆ, ಪ್ರವಾದಿಯವರ ಮಾರ್ಗದರ್ಶನಕ್ಕೆ ವಿರುದ್ಧವಾದ ಧಾರ್ಮಿಕ ನವೀನವಾದ ಮುಂತಾದವುಗಳ ಪ್ರವಾದಿ ಚರ್ಯೆಯನ್ನು ಆಧಾರವಾಗಿಸಿದ ಸರಿಯಾದ ವಿಶ್ವಾಸದ ಆಯುಧವನ್ನು ಯಾರು ಹೊಂದಿರುವುದಿಲ್ಲವೋ ಅವನ ಪಾಲಿಗೆ ಅಪಾಯಕಾರಿಗಳಾಗಿ ಪರಿಣಮಿಸುತ್ತವೆ. ಈ ಮಾರ್ಗಭ್ರಷ್ಠ ಪಥಗಳೆಲ್ಲವೂ ಅವನನ್ನು ಎಳೆದುಕೊಂಡು ಹೋಗಲು ತುದಿಗಾಲಲ್ಲಿ ನಿಂತಿವೆ. ಆದ್ದರಿಂದಲೇ ಮುಸ್ಲಿಮರಿಗೆ ಅಧಿಕೃತ ಮೂಲಗಳಿಂದ ಸರಿಯಾದ ವಿಶ್ವಾಸದ ಶಿಕ್ಷಣ ನೀಡುವುದು ಅತ್ಯಗತ್ಯವಾಗಿರುತ್ತದೆ.

ಅಲ್ಲಾಹನು ನಮ್ಮ ಪ್ರವಾದಿ ಮುಹಮ್ಮದ್(ﷺ)ರ ಮೇಲೂ, ಅವರ ಕುಟುಂಬದ ಮೇಲೂ ಅವರ ಅನುಚರರ ಮೇಲೂ ಅನುಗ್ರಹವನ್ನು ವರ್ಷಿಸಲಿ.(ಆಮೀನ್)

**ಶೇಖ್ ಸ್ವಾಲಿಹ್ ಬಿನ್ ಫೌಝಾನ್ ಅಬ್ದುಲ್ಲಾ ಅಲ್ ಫೌಝಾನ್,**

**ಹಿರಿಯ ವಿದ್ವಾಂಸರ ಒಕ್ಕೂಟದ ಸದಸ್ಯರು – ಸೌದಿ ಅರೇಬಿಯಾ**

# ಭಾಗ–1

ಇದು ಮೂರು ಅಧ್ಯಾಯಗಳನ್ನು ಒಳಗೊಂಡಿದೆ.

## ಅಧ್ಯಾಯ–1

## ವಿಶ್ವಾಸ(ಅಕೀದ) ಎಂಬ ಪದದರ್ಥ, ಅದರ ಪ್ರಾಮುಖ್ಯತೆ, ಧರ್ಮದ ಅಡಿಗಲ್ಲಾಗಿರುವ ಅದರ ಮಹತ್ವ

## ಅಧ್ಯಾಯ–2

## ನೈಜ ವಿಶ್ವಾಸದ ಮೂಲಗಳು, ಅವುಗಳನ್ನು ಪಡೆಯಲು ಸಜ್ಜನ ಪೂರ್ವಿಕರು ಕೈಗೊಂಡಂತಹ ಮಾರ್ಗ

## ಅಧ್ಯಾಯ–3

## ನೈಜವಿಶ್ವಾಸದಿಂದ ವ್ಯತಿಚಲನೆ, ಈ ಬಗ್ಗೆ ಎಚ್ಚರವಹಿಸಲು ಇರುವಂತಹ ಮಾರ್ಗಗಳು

### ಅಧ್ಯಾಯ–1

# ಧರ್ಮದ ಬುನಾದಿಯಾಗಿರುವ ಅಕೀದ (ನೈಜ ವಿಶ್ವಾಸ)ದ ವಿವರಣೆ, ಅದರ ಪ್ರಾಧಾನ್ಯತೆ

**ಅಕೀದ:** ಅಂದರೆ ಅರಬಿ ಭಾಷೆಯಲ್ಲಿ ಒಂದು ವಸ್ತುವನ್ನು ಇನ್ನೊಂದಕ್ಕೆ ಬಿಗಿಯುವುದು. ನಾನು ಒಂದು ವಿಷಯದಲ್ಲಿ ಅಕೀದ ಪಡೆದುಕೊಂಡೆನು. ಅಂದರೆ ಆ ವಿಷಯದಲ್ಲಿ ಒಬ್ಬನ ಆತ್ಮಸಾಕ್ಷಿ ಮತ್ತು ಹೃದಯವು ಕಟ್ಟಿ ಹಾಕಲ್ಪಟ್ಟಿದೆ ಎಂದರ್ಥ.

ಮನುಷ್ಯನು ತನ್ನ ಧರ್ಮವನ್ನು ಸ್ವೀಕರಿಸುವುದು ಸಹ ಈ ಪದದ ವ್ಯಾಪ್ತಿಯಲ್ಲಿ ಬರುತ್ತದೆ. ಉದಾ : ಅವನಿಗೆ ಸರಿಯಾದ ಅಕೀದ(ವಿಶ್ವಾಸ)ವಿದೆ. ಅಂದರೆ ಸಂದೇಹಗಳಿಂದ ಮುಕ್ತವಾದ ವಿಶ್ವಾಸವು ಅವನಿಗಿದೆ ಎಂದರ್ಥ. ಅಕೀದ ಎಂಬುದು ಹೃದಯದ ಕ್ರಿಯೆಯಾಗಿದೆ. ಇದು ಯಾವುದಾದರೂ ಸಂಗತಿಯ ಮೇಲೆ ವಿಶ್ವಾಸವಿಟ್ಟು ಅದನ್ನು ಸತ್ಯವೆಂದು ಒಪ್ಪಿಕೊಳ್ಳುವುದೇ ಆಗಿರುತ್ತದೆ.

ಶರೀಅತ್ (ಧರ್ಮ ಸಿದ್ಧಾಂತ)ದಲ್ಲಿ ‘ಅಕೀದ’ ಎಂದರೆ ಅಲ್ಲಾಹನಲ್ಲೂ, ಅವನ ಮಲಕ್‌ಗಳಲ್ಲೂ, ಅವನ ಗ್ರಂಥಗಳಲ್ಲೂ. ಅವನ ಸಂದೇಶವಾಕರಲ್ಲೂ, ಪ್ರಳಯ ದಿನದಲ್ಲೂ, ಒಳಿತು ಕೆಡುಕುಗಳನ್ನೊಳಗೊಂಡ ವಿಧಿಯ ಮೇಲೂ ವಿಶ್ವಾಸವಿಡುವುದಾಗಿರುತ್ತದೆ. ಇವುಗಳು ಅರ್ಕಾನುಲ್ ಈಮಾನ್ (ಸತ್ಯವಿಶ್ವಾಸದ ಘಟಕಗಳು) ಎಂಬುದಾಗಿ ಕರೆಯಲ್ಪಡುತ್ತವೆ.

ಶರೀಅತ್‌ನಲ್ಲಿ ಎರಡು ವಿಧಗಳಿವೆ:

**1. ವಿಶ್ವಾಸಗಳು**

**2. ಕರ್ಮಗಳು**

ವಿಶ್ವಾಸಗಳೆಂದರೆ: ಕರ್ಮಗಳ ರೂಪಕ್ಕೆ ಸಂಬಂಧಿಸಿದ್ದಲ್ಲ. ಅವುಗಳು ಅಲ್ಲಾಹನ ಪ್ರಭುತ್ವದ ಮೇಲಿರುವ ವಿಶ್ವಾಸ ಹಾಗೂ ಅವನ ಕಡ್ಡಾಯ ಆರಾಧನೆಯ ಮೇಲೂ, ಸತ್ಯವಿಶ್ವಾಸದ ಇತರ ಘಟಕಗಳ ಮೇಲೂ ಇಡುವ ವಿಶ್ವಾಸಗಳಾಗಿರುತ್ತವೆ. ಇವು ಮೂಲಗಳಾಗಿ ಪರಿಗಣಿಸಲ್ಪಡುತ್ತವೆ.

ಕರ್ಮಗಳೆಂದರೆ: ನಮಾಝ್, ಝಕಾತ್(ಕಡ್ಡಾಯದಾನ), ವ್ರತಾನುಷ್ಠಾನ ಮತ್ತಿತರ ಕರ್ಮಗಳ ನಿಯಮಗಳಿಗೆ ಸಂಬಂಧಿಸಿದಂತಹ ಕ್ರಿಯಾ ರೂಪಗಳಾಗಿವೆ. ಇವುಗಳನ್ನು ಶಾಖೆಗಳೆಂದು ಕರೆಯಲಾಗುತ್ತದೆ. ಏಕೆಂದರೆ ಇವುಗಳೂ ವಿಶ್ವಾಸಗಳ ಭದ್ರ ಬುನಾದಿಯ ಮೇಲೆ ರೂಪುಗೊಡರೆ ಮಾತ್ರ ಸರಿಯಾದುದು ಆಗಿರುತ್ತವೆ. ಇಲ್ಲವಾದರೆ ನಿಷ್ಫಲವಾಗಿ ಬಿಡುತ್ತವೆ.[1]

---

1 ಶರ್ಹುಲ್ ಅಕೀದಃ ಅಸ್ಸಫಾರೀನಿಯ್ಯಃ 1/4

ಸರಿಯಾದ ಅಕೀದ ಎಂದರೆ ಅದು ಧರ್ಮದ ಬುನಾದಿಯಾಗಿದ್ದು ಅದರ ಮೂಲಕವೇ ಕರ್ಮಗಳು ಸರಿಯಾಗುತ್ತವೆ. ಅಲ್ಲಾಹನು ಹೇಳಿದ್ದಾನೆ:

﴿ فَمَن كَانَ يَرْجُوا۟ لِقَآءَ رَبِّهِۦ فَلْيَعْمَلْ عَمَلًا صَٰلِحًا وَلَا يُشْرِكْ بِعِبَادَةِ رَبِّهِۦٓ أَحَدًۢا ﴿١١٠﴾ ﴾

**“ಇನ್ನು ಯಾರು ತನ್ನ ಪಾಲಕ ಪ್ರಭುವಿನ ಭೇಟಿಯನ್ನು ಬಯಸುತ್ತಾನೋ ಅವನು ಸತ್ಕರ್ಮಗಳನ್ನು ಮಾಡಲಿ ಹಾಗೂ ತನ್ನ ಪಾಲಕ ಪ್ರಭುವಿನ ಆರಾಧನೆಯಲ್ಲಿ ಇನ್ಯಾರನ್ನೂ ಸಹಭಾಗಿಯನ್ನಾಗಿ ನಿಶ್ಚಯಿಸದಿರಲಿ”** (2)

ಮತ್ತೊಂದೆಡೆ ಹೇಳುತ್ತಾನೆ:

﴿ وَلَقَدْ أُوحِىَ إِلَيْكَ وَإِلَى ٱلَّذِينَ مِن قَبْلِكَ لَئِنْ أَشْرَكْتَ لَيَحْبَطَنَّ عَمَلُكَ وَلَتَكُونَنَّ مِنَ ٱلْخَٰسِرِينَ ﴿٦٥﴾ ﴾

**“(ಓ ಪ್ರವಾದಿ) ಮತ್ತು ನಿಸ್ಸಂದೇಹವಾಗಿಯೂ ನಿನ್ನೆಡೆಗೂ, ನಿನ್ನ ಮುಂಚಿನವ (ಸಂದೇಶವಾಹಕ)ರ ಕಡೆಗೂ ವಹ್ಯ್ (ದಿವ್ಯವಾಣಿ) ಮಾಡಲಾಗಿರುತ್ತದೆ ಅಂದರೆ ನೀನೇನಾದರೂ (ಅಲ್ಲಾಹನಿಗೆ) ಸಹಭಾಗಿಗಳನ್ನು ನಿಶ್ಚಯಿಸಿದ್ದಲ್ಲಿ ಖಂಡಿತ ನಿನ್ನ ಕರ್ಮವು ನಿಷ್ಫಲವಾಗುವುದು ಹಾಗೂ ನಷ್ಟ ಹೊಂದಿದವರಲ್ಲಿ ನೀನು ಸೇರುವುದು ದಿಟವಾಗಿರುತ್ತದೆ.”** (3)

ಇದೇ ಅಧ್ಯಾಯದ ಆರಂಭದಲ್ಲಿ ಅಲ್ಲಾಹ್ ಹೇಳುತ್ತಾನೆ:

﴿ فَٱعْبُدِ ٱللَّهَ مُخْلِصًا لَّهُ ٱلدِّينَ ﴿٢﴾ أَلَا لِلَّهِ ٱلدِّينُ ٱلْخَالِصُ ﴾

**“ಆದ್ದರಿಂದ ನೀನು ಅಲ್ಲಾಹನನ್ನು ಏಕನಿಷ್ಠನಾಗಿಯೂ, ಧರ್ಮವನ್ನು ಅವನಿಗೆ ಮೀಸಲಾಗಿಟ್ಟುಕೊಂಡು ಆರಾಧನೆ ಮಾಡು. ತಿಳಿದುಕೊಳ್ಳಿರಿ–ಏಕನಿಷ್ಠ ಧರ್ಮ(ವಿಧೇಯತೆ) ವು ಅಲ್ಲಾಹನಿಗೆ ಮೀಸಲಾಗಿರುವುದು.”** (4)

ಕರ್ಮಗಳೆಲ್ಲವೂ ಅಲ್ಲಾಹನಿಗೆ ನಿಶ್ಚಯಿಸುವ ಸಹಭಾಗಿತ್ವದಿಂದ ಮುಕ್ತವಾಗಿದ್ದರೆ ಮಾತ್ರ ಸ್ವೀಕೃತವಾಗುತ್ತವೆ ಎಂಬುದು ಈ ಪವಿತ್ರ ವಾಕ್ಯಗಳಿಂದ ತಿಳಿದು ಬರುತ್ತದೆ ಹಾಗೂ ಪ್ರವಾದಿಗಳೆಲ್ಲರ ಮೇಲೆ ಅಲ್ಲಾಹನ ಶಾಂತಿ, ಕಾರುಣ್ಯವು ಇರಲಿ. ಅವರ ಪ್ರಥಮ ಆದ್ಯತೆಯು ಜನರ ವಿಶ್ವಾಸವನ್ನು ಸರಿಪಡಿಸುವುದಾಗಿತ್ತು. ಅವರು ತಮ್ಮ ಜನರನ್ನು ಮೊತ್ತ ಮೊದಲಿಗೆ ಏಕೈಕ ಅಲ್ಲಾಹನನ್ನು ಆರಾಧಿಸಲು ಕರೆ ನೀಡಿದರು. ಅವನ ಹೊರತಾದ ಇತರರ ಆರಾಧನೆಯನ್ನು ತೊರೆಯಲೂ ಹೇಳಿದರು. ಈ ಬಗ್ಗೆ ಅಲ್ಲಾಹನು ಹೇಳುತ್ತಾನೆ:

---

2 ಕುರ್‌ಆನ್ 18:110

3 ಕುರ್‌ಆನ್ 39:65

4 ಕುರ್‌ಆನ್ 39:2–3

﴿ وَلَقَدْ بَعَثْنَا فِى كُلِّ أُمَّةٍ رَّسُولًا أَنِ ٱعْبُدُوا۟ ٱللَّهَ وَٱجْتَنِبُوا۟ ٱلطَّٰغُوتَ ﴾

**"ಮತ್ತು ನಿಶ್ಚಯವಾಗಿಯೂ ನಾವು ಎಲ್ಲ ಸಮುದಾಯದಲ್ಲೂ ಸಂದೇಶವಾಹಕನನ್ನು ನಿಯೋಗಿಸಿರುತ್ತೇವೆ. (ಜನರೇ) ನೀವು ಅಲ್ಲಾಹನನ್ನು (ಮಾತ್ರ) ಆರಾಧಿಸಿರಿ ಹಾಗೂ (ಎಲ್ಲ) ಮಿಥ್ಯ ದೇವರುಗಳನ್ನು ತೊರೆದು ಬಿಡಿರಿ ಎಂದು (ಅವರಿಗೆ ಸಂದೇಶ ನೀಡಿದ್ದೆವು)."** [5]

ಪ್ರತಿಯೊಬ್ಬ ಸಂದೇಶವಾಹಕನೂ ತನ್ನ ಜನರ ಮುಂದಿಟ್ಟಿರುವುದೇನೆಂದರೆ:

﴿ ٱعْبُدُوا۟ ٱللَّهَ مَا لَكُم مِّنْ إِلَٰهٍ غَيْرُهُۥٓ ﴾

**"ಜನರೇ ಅಲ್ಲಾಹನನ್ನು ಮಾತ್ರ ಆರಾಧಿಸಿರಿ. ನಿಮಗೆ ಅವನ ಹೊರತು ಇನ್ನ್ಯಾವ ಆರಾಧ್ಯ ದೇವನಿಲ್ಲ."**[6] ಎಂಬುದಾಗಿತ್ತು. ಇದೇ ಮಾತನ್ನು ಪ್ರವಾದಿ ನೂಹ್, ಹೂದ್, ಸ್ವಾಲಿಹ್, ಶುಐಬ್ ಮತ್ತಿತರ ಎಲ್ಲಾ ಪ್ರವಾದಿಗಳು ತಮ್ಮ ಜನರಿಗೆ ಹೇಳಿದ್ದರು.

ಪ್ರವಾದಿ ಮುಹಮ್ಮದ್(ﷺ)ರು ಕೂಡ ತಮ್ಮ ಪ್ರವಾದಿತ್ವ ಸಿದ್ಧಿಯ ಬಳಿಕ ಹದಿಮೂರು ವರ್ಷಗಳ ಕಾಲ ತಮ್ಮ ಊರಾದ ಮಕ್ಕಾದಲ್ಲಿ ಉಳಿದುಕೊಂಡು ಇದೇ ಏಕದೇವತ್ವದ ಸಂದೇಶದೆಡೆಗೂ, ವಿಶ್ವಾಸದ ಶುದ್ಧೀಕರಣಕ್ಕೂ ಜನರನ್ನು ಕರೆದರು. ಏಕೆಂದರೆ ಇದುವೇ ಧರ್ಮದ ಬುನಾದಿಯಾಗಿತ್ತು. ಇದೇ ಪ್ರಕಾರ ಈ ಪ್ರವಾದಿಗಳನ್ನು ಎಲ್ಲಾ ಕಾಲದ ಇಸ್ಲಾಂ ಧರ್ಮದ ಪ್ರಚಾರಕರು, ಇತರ ಸುಧಾರಕರೂ ಚಾಚೂ ತಪ್ಪದೆ ಪಾಲಿಸಿದರು. ಹೀಗೆ ಅವರು ಏಕದೇವ ಸಿದ್ಧಾಂತದ ಮೂಲಕ ಜನರನ್ನು ಕರೆಯಲು ಆರಂಭಿಸುತ್ತಾರೆ ಹಾಗೂ ವಿಶ್ವಾಸವನ್ನು ಸರಿಪಡಿಸುವುದಕ್ಕೆ ಕರೆ ನೀಡುತ್ತಾರೆ. ಅನಂತರವೇ ಇತರ ವಿಷಯಗಳೆಡೆಗೆ ಹಾಗೂ ಧಾರ್ಮಿಕ ನಿಯಮಗಳೆಡೆಗೆ ಗಮನ ಹರಿಸುತ್ತಾರೆ.

## ಅಧ್ಯಾಯ–2

# ಅಕೀದಃದ ಮೂಲಗಳು, ಅವುಗಳನ್ನು ಪಡೆಯಲು ಸಲಫುಸ್ಸಾಲಿಹೀನ್(ಸಜ್ಜನ ಪೂರ್ವಿಕ)ರು ಕೈಗೊಂಡಂತಹ ಮಾರ್ಗ

ಅಕೀದವು 'ತೌಕೀಫಿಯ್ಯ' (ಸ್ಥಿರವಾದುದು)ವಾಗಿರುತ್ತದೆ. ಇದು ಶಾಸನಕರ್ತನು ನಿಶ್ಚಯಿಸಿದ ಪುರಾವೆಯಿಂದಲೇ ಸಾಬೀತಾಗುತ್ತದೆ. ಇದರಲ್ಲಿ ಅಭಿಪ್ರಾಯಗಳಿಗೂ, ಸಮಾಲೋಚನೆಗಳಿಗೂ ಅವಕಾಶವಿರುವುದಿಲ್ಲ. ಇದರ ಮೂಲವು ಕುರ್‌ಆನ್ ಹಾಗೂ ಪ್ರವಾದಿಯ ಚರ್ಯೆಗಳಿಗೆ ಮಾತ್ರ ಸೀಮಿತವಾಗಿದೆ. ಏಕೆಂದರೆ ತನ್ನ ಕುರಿತು ತನಗೆ ಸಂದಾಯವಾಗಬೇಕಾದುದರ ಕುರಿತೂ, ತಾನು ಯಾವುದರಿಂದೆಲ್ಲಾ ಪರಿಶುದ್ಧನಾಗಿರುವೆ

5 ಕುರ್‌ಆನ್ 16:36

6 ಕುರ್‌ಆನ್ 7:59,65,73,85

ಎಂಬುದರ ಕುರಿತು ಅತ್ಯಂತ ಅರಿವುಳ್ಳವನು ಅಲ್ಲಾಹನ ಹೊರತು ಇನ್ಯಾರೂ ಅಲ್ಲ ಮತ್ತು ಅಲ್ಲಾಹನ ನಂತರ ಅವನ ಕುರಿತು ಅತ್ಯಂತ ಅರಿವುಳ್ಳ ವ್ಯಕ್ತಿಯೆಂದರೆ ಅದು ಪ್ರವಾದಿ ಮುಹಮ್ಮದ್(ﷺ) ಆಗಿದ್ದಾರೆ. ಈ ಕಾರಣದಿಂದಲೇ ಸಜ್ಜನರಾದ ಪೂರ್ವಿಕರೂ, ಅವರನ್ನು ಅನುಸರಿಸಿದವರೂ ತಮ್ಮ ವಿಶ್ವಾಸವನ್ನು ಪಡೆದುಕೊಂಡಿದ್ದಂತಹ ಮಾರ್ಗವು ಕುರ್‌ಆನ್‌ಗೂ, ಪ್ರವಾದಿಚರ್ಯೆಗೂ ಮಾತ್ರ ಸೀಮಿತವಾಗುತ್ತದೆ.

ಈ ಪವಿತ್ರ ಗ್ರಂಥ ಹಾಗೂ ಪ್ರವಾದಿಚರ್ಯೆಯು ವಿಶ್ವಾಸದ ಕುರಿತು ಏನು ವಿವರಿಸಿದೆಯೋ ಅವುಗಳಲ್ಲಿ ಅವರು ಸಂಪೂರ್ಣವಾಗಿ ವಿಶ್ವಾಸವಿರಿಸಿದರು. ಹಾಗೂ ದೃಢವಾಗಿ ನಂಬಿದರು ಮತ್ತು ಅದರ ಆಧಾರದಲ್ಲೇ ಕರ್ಮಗಳನ್ನು ಕೈಗೊಂಡರು. ಈ ಗ್ರಂಥ ಹಾಗೂ ಪ್ರವಾದಿಚರ್ಯೆಯು ಏನನ್ನು ತಿಳಿಸಿರುವುದಿಲ್ಲವೋ ಅವುಗಳನ್ನೆಲ್ಲ ಅಲ್ಲಾಹನಿಂದ ದೂರವಿರಿಸಿದರು. ಹಾಗೂ ಅವುಗಳನ್ನು ತಳ್ಳಿ ಹಾಕಿದರು. ಆದ ಕಾರಣ ಅವರ ನಡುವೆ ವಿಶ್ವಾಸದ ವಿಚಾರದಲ್ಲಿ ಭಿನ್ನಾಬಿಪ್ರಾಯವುಂಟಾಗಲಿಲ್ಲ. ಮಾತ್ರವಲ್ಲ ಅವರ ವಿಶ್ವಾಸವು ಒಂದೇ ಆಗಿತ್ತು. ಅವರ ಸಮೂಹವು ಒಂದೇ ಆಗಿತ್ತು. ಇದೇಕೆಂದರೆ ಯಾರು ಅಲ್ಲಾಹನ ಗ್ರಂಥವನ್ನೂ, ಅವನ ಪ್ರವಾದಿಯ ಸುನ್ನತನ್ನೂ ಬಿಗಿ ಹಿಡಿಯುವರೋ ಅವರನ್ನು ಅವನು ಒಗ್ಗೂಡಿದ ಸ್ಥಿತಿಯಲ್ಲೂ, ಸರಿಯಾದ ಅಕೀದದಲ್ಲೂ, ಏಕೈಕ ಮನ್‌ಹಜ್(ಮಾರ್ಗರೇಖೆ)ನಲ್ಲೂ ಇರುವಂತೆ ಮಾಡುತ್ತಾನೆಂದು ಭರವಸೆಕೊಟ್ಟಿದ್ದರ ಫಲವಾಗಿತ್ತು.

ಅಲ್ಲಾಹನು ಹೇಳುತ್ತಾನೆ:

﴿ وَٱعۡتَصِمُواْ بِحَبۡلِ ٱللَّهِ جَمِيعٗا وَلَا تَفَرَّقُواْۚ ﴾

**“ನೀವೆಲ್ಲರೂ ಸೇರಿ ಅಲ್ಲಾಹನ ಹಗ್ಗವನ್ನು ಭದ್ರವಾಗಿ ಹಿಡಿದುಕೊಳ್ಳಿರಿ ಹಾಗೂ ನೀವು ಭಿನ್ನಭಿನ್ನರಾಗಿ ಬಿಡದಿರಿ.”** (7)

ಮತ್ತೊಂದೆಡೆ ಹೇಳುತ್ತಾನೆ:

﴿ فَإِمَّا يَأۡتِيَنَّكُم مِّنِّي هُدٗى فَمَنِ ٱتَّبَعَ هُدَايَ فَلَا يَضِلُّ وَلَا يَشۡقَىٰ ١٢٣ ﴾

**“ಇನ್ನು ನಿಮ್ಮಲ್ಲಿಗೆ ನನ್ನ ಬಳಿಯಿಂದ ಸನ್ಮಾರ್ಗವು ಬಂದು ಬಿಟ್ಟರೆ ಮುಂದೆ ಯಾರು ನನ್ನ ಸನ್ಮಾರ್ಗವನ್ನು ಅನುಸರಿಸುತ್ತಾನೋ ಆಗ ಅವನು ಮಾರ್ಗಭ್ರಷ್ಟನಾಗಲಾರನು ಹಾಗೂ ಅವನು ಹತಭಾಗ್ಯನೂ ಆಗಲಾರನು.”** (8)

ಆದ್ದರಿಂದ ಇವರೇ ರಕ್ಷಣೆ ಹೊಂದಲಿರುವ ಸಮೂಹ (ಫಿರ್‌ಕತುನ್ನಾಜಿಯ) ವೆಂಬುದಾಗಿ ಕರೆಯಲ್ಪಡುತ್ತಾರೆ. ತಮ್ಮ ಸಮುದಾಯವು 73 ಗುಂಪುಗಳಾಗಿ ವಿಂಗಡನೆ

**7** ಕುರ್‌ಆನ್ 3:103

**8** ಕುರ್‌ಆನ್ 20:123

ಹೊಂದಲಿವೆ ಎಂದು ಪ್ರವಾದಿಯವರು ಹೇಳಿದ ಸಂದರ್ಭದಲ್ಲಿ ಈ ಸಮೂಹವು ರಕ್ಷಣೆ ಹೊಂದಲಿರುವುದಾಗಿ ಸಾಕ್ಷ್ಯ ನೀಡಿದ ಇವರ ಹೊರತು ಇತರೆಲ್ಲರೂ ನರಕ–ಕ್ಕೆ ಸೇರುತ್ತಾರೆಂದು ಹೇಳಿದ್ದಾರೆ. ಈ ಒಂದು ಸಮೂಹವು ಯಾವುದೆಂದು ಅವರಲ್ಲಿ ಕೇಳಿದಾಗ ಹೇಳಿದರು:

«هِيَ مَنْ كَانَ عَلَى مِثْلِ مَا أَنَا عَلَيْهِ الْيَوْمَ وَأَصْحَابِي»

**“ಇಂದು ನಾನು ಹಾಗೂ ನನ್ನ ಅನುಚರರು ಇರುವಂತಹ ಮಾರ್ಗದಲ್ಲಿ ಯಾರಿರುತ್ತಾರೋ ಅವರು.”** [9]

ವಾಸ್ತವದಲ್ಲಿ ಅವರ ಮಾತು ನಿಜವಾಗಿ ಬಿಟ್ಟಿದೆ. ಅವರು ತಮ್ಮ ವಿಶ್ವಾಸ ನಂಬಿಕೆಯನ್ನು ಕುರ್‌ಆನ್ ಮತ್ತು ಪ್ರವಾದಿ ಚರ್ಯೆಯನ್ನು ಬಿಟ್ಟು ಸಂಪ್ರದಾಯವಾದಿ ಧರ್ಮಶಾಸ್ತ್ರಗಳಿಂದಲೂ, ಗ್ರೀಕರ ತತ್ವಶಾಸ್ತ್ರಗಳಿಂದ ವರದಿಯಾಗಿರುವಂತಹ ತರ್ಕಶಾಸ್ತ್ರಗಳಿಂದಲೂ, ಪಡೆಯತೊ ಡಗಿದಾಗ ನೈಜವಿಶ್ವಾಸದಲ್ಲಿ ವ್ಯತಿಚಲನೆ ಹಾಗೂ ಗುಂಪುಗಾರಿಕೆಯುಂಟಾಗಿ ಏಕ ತತ್ವದಿಂದ ಭಿನ್ನರಾಗಿಬಿಟ್ಟರು ಮತ್ತು ಇಸ್ಲಾಮೀ ಸಮೂಹದ ಒಗ್ಗಟ್ಟು ಧ್ವಂಸವಾಗತೊಡಗಿತು.

## ಅಧ್ಯಾಯ–3

## ನೈಜವಿಶ್ವಾಸದಿಂದ ವ್ಯತಿ ಚಲನೆ– ಈ ಬಗ್ಗೆ ಎಚ್ಚರವಹಿಸಬೇಕಾದ ಕ್ರಮಗಳು

ನೈಜ ವಿಶ್ವಾಸದಿಂದ ವ್ಯತಿಚಲಿಸುವುದು ನಾಶಕ್ಕೆ ಕಾರಣವಾಗಿರುತ್ತದೆ. ಏಕೆಂದರೆ ನೈಜ ವಿಶ್ವಾಸವು ಕರ್ಮಗಳು ಫಲಕಾರಿಯಾಗುವುದರ ಕಡೆಗೆ ಮುನ್ನಡೆಸುವ ಬಲಿಷ್ಠ ಶಕ್ತಿಯಾಗಿದೆ. ದೇವವಿಶ್ವಾಸವಿಲ್ಲದ ವ್ಯಕ್ತಿಯು ತನಗೆ ಬರುವ ಎಲ್ಲಾ ರೀತಿಯ ಸಂದೇಹಗಳಿಗೂ, ಅನುಮಾನಗಳಿಗೂ ಬಲಿ ಬೀಳುತ್ತಾನೆ. ಜೀವನದ ನಿಜವಾದ ಐಶ್ವರ್ಯದಿಂದ ವಂಚಿತನಾಗಿ ಅವನಿಂದ ನಿಜವಾದ ದೃಷ್ಟಿಕೋನಗಳು ಮರೆಯಾಗಿ ಬಿಡುತ್ತವೆ. ಪರಿಣಾಮವಾಗಿ ಅವನು ಈ ಇಕ್ಕಟ್ಟುಗಳಿಂದೆಲ್ಲ ಮುಕ್ತನಾಗಲಿಕ್ಕಾಗಿ ಪ್ರಯತ್ನಿಸಿ, ಆತ್ಮಹತ್ಯೆ ಮಾಡಲು ಸಹ ಹೇಸದೆ, ತನ್ನ ವ್ಯಕ್ತಿತ್ವವನ್ನು ನಾಶ ಮಾಡುತ್ತಾನೆ. ಹೀಗೆಯೇ ಇಂದು ಸನ್ಮಾರ್ಗ ವಂಚಿತರಾಗಿ ಬಿಟ್ಟವರಿಗೆ ನಡಯುತ್ತಲಿದೆ. ಯಾವ ಸಮಾಜದಲ್ಲಿ ನೈಜ ವಿಶ್ವಾಸದ ಚಲನೆಯಿರುವುದಿಲ್ಲವೊ ಅದು ಸಂಶಯಗ್ರಸ್ತ ಸಮಾಜವಾಗಿದ್ದು, ಅದು ತನ್ನ ನಿಜವಾದ ಜೀವನದ ಐಶ್ವರ್ಯಗಳನ್ನೆಲ್ಲಾ ಕಳೆದುಕೊಂಡಿರುತ್ತದೆ. ಸಮಾಜದ

9 ಅಹ್ಮದ್

ನಾಶಕ್ಕೆ ಕಾರಣವಾಗುವಂತಹ ಲೌಕಿಕವಾದ ಸಾಕಷ್ಟು ಅನುಕೂಲತೆಗಳಿದ್ದರೂ ಅವುಗಳು ನೈಜವಿಶ್ವಾಸದ ಬಲವಿಲ್ಲದ ಇಂದಿನ ರಾಷ್ಟ್ರಗಳ ನೈತಿಕ ಅಧಃಪತನದಂತೆಯೇ ಕುಸಿದು ಬೀಳಲಿದೆ. ಈ ಭೌತಿಕವಾದ ಸಾಧನಾನುಕೂಲತೆ ಸರ್ವರಿಗೂ ಪ್ರಯೋಜನಕಾರಿಯಾಗಲು ಸರಿಯಾದ ಮಾರ್ಗದರ್ಶನವು ಅತ್ಯಗತ್ಯವಾಗಿರುತ್ತದೆ. ಈ ಮಾರ್ಗದರ್ಶನವು ನೈಜವಿಶ್ವಾಸದ ಹೊರತು ಇನ್ನಾವುದರಲ್ಲೂ ಲಭ್ಯವಿರುವುದಿಲ್ಲ.

ಅಲ್ಲಾಹನು ಹೇಳುತ್ತಾನೆ:

﴿ يَٰٓأَيُّهَا ٱلرُّسُلُ كُلُوا۟ مِنَ ٱلطَّيِّبَٰتِ وَٱعْمَلُوا۟ صَٰلِحًا ۖ ﴾

**"ಓ ಸಂದೇಶವಾಹಕರೇ, ನೀವು ಧರ್ಮಬದ್ಧ ಶುದ್ಧ ಪದಾರ್ಥಗಳಿಂದ ಸೇವಿಸಿರಿ ಹಾಗೂ ಸತ್ಕರ್ಮಗಳನ್ನೆಸಗಿರಿ."** (10)

ಮತ್ತೊಂದೆಡೆ ಹೇಳುತ್ತಾನೆ:

﴿ ۞ وَلَقَدْ ءَاتَيْنَا دَاوُۥدَ مِنَّا فَضْلًا ۖ يَٰجِبَالُ أَوِّبِى مَعَهُۥ وَٱلطَّيْرَ ۖ وَأَلَنَّا لَهُ ٱلْحَدِيدَ
﴿١٠﴾ أَنِ ٱعْمَلْ سَٰبِغَٰتٍ وَقَدِّرْ فِى ٱلسَّرْدِ ۖ وَٱعْمَلُوا۟ صَٰلِحًا ۖ إِنِّى بِمَا تَعْمَلُونَ بَصِيرٌ ﴿١١﴾
وَلِسُلَيْمَٰنَ ٱلرِّيحَ غُدُوُّهَا شَهْرٌ وَرَوَاحُهَا شَهْرٌ ۖ وَأَسَلْنَا لَهُۥ عَيْنَ ٱلْقِطْرِ ۖ وَمِنَ ٱلْجِنِّ مَن
يَعْمَلُ بَيْنَ يَدَيْهِ بِإِذْنِ رَبِّهِۦ ۖ وَمَن يَزِغْ مِنْهُمْ عَنْ أَمْرِنَا نُذِقْهُ مِنْ عَذَابِ ٱلسَّعِيرِ ﴿١٢﴾
يَعْمَلُونَ لَهُۥ مَا يَشَآءُ مِن مَّحَٰرِيبَ وَتَمَٰثِيلَ وَجِفَانٍ كَٱلْجَوَابِ وَقُدُورٍ رَّاسِيَٰتٍ ۚ ٱعْمَلُوٓا۟
ءَالَ دَاوُۥدَ شُكْرًا ۚ وَقَلِيلٌ مِّنْ عِبَادِىَ ٱلشَّكُورُ ﴿١٣﴾ ﴾

**"ಮತ್ತು ನಿಶ್ಚಯವಾಗಿಯೂ ನಾವು ದಾವೂದನಿಗೆ ನಮ್ಮ ಕಡೆಯಿಂದ ಮಹಾನ್ ಅನುಗ್ರಹವೊಂದನ್ನು ಕರುಣಿಸಿದ್ದೆವು. ಓ ಪರ್ವತವೇ, ನೀನು ಅವನೊಂದಿಗೆ ಸ್ತುತಿ ಕೀರ್ತನೆಯನ್ನು ಆವರ್ತಿಸುತ್ತಿರು ಮತ್ತು ಪಕ್ಷಿಗಳೇ, (ನೀವೂ ಹೀಗೆ ಮಾಡಿರಿ) ಮತ್ತು ನಾವು ಅವನಿಗೆ ಕಬ್ಬಿಣವನ್ನು ಮೆದುಗೊಳಿಸಿ ಕೊಟ್ಟಿದ್ದೆವು. ನೀನು ವಿಶಾಲವಾದವುಗಳನ್ನು (ಕವಚಗಳನ್ನು) ನಿರ್ಮಿಸು ಮತ್ತು (ಕವಚಗಳ) ಕೊಂಡಿಗಳಲ್ಲಿ ಸಮ ಪ್ರಮಾಣವನ್ನು ನಿಶ್ಚಯಿಸು ಮತ್ತು (ಓ ದಾವೂದ್ ಕುಟುಂಬವೇ) ನೀವು ಸತ್ಕರ್ಮಗಳನ್ನು ಕೈಗೊಳ್ಳಿರಿ, ನಿಸ್ಸಂಶಯವಾಗಿಯೂ ನಾನು ನೀವು ಮಾಡುತ್ತಿರುವುದೆಲ್ಲದರ ಸೂಕ್ಷ್ಮವೀಕ್ಷಕನಾಗಿದ್ದೇನೆ ಮತ್ತು ಸುಲೈಮಾನನಿಗೆ ವಾಯುವನ್ನೂ (ನಾವು ಅಧೀನಗೊಳಿಸಿಕೊಟ್ಟೆವು) ಅದರ ಪ್ರಾತಃಕಾಲದ ಸಂಚಾರದ ಅವಧಿಯು ಒಂದು ತಿಂಗಳು ಹಾಗೂ ಸಾಯಂಕಾಲದ ಸಂಚಾರದ ಅವಧಿಯು ಒಂದು ತಿಂಗಳಷ್ಟಾಗಿರುತ್ತದೆ. ಮತ್ತು ನಾವು ಅವನಿಗೆ ತಾಮ್ರದ ಉಗಮವನ್ನು**

**10** ಕುರ್‌ಆನ್ 23:51

**ಕರಗಿಸಿ ಕೊಟ್ಟಿದ್ದೆವು. ಅವನ ಮುಂದೆ ಅವನ ಪಾಲಕ ಪ್ರಭುವಿನ ಆದೇಶದ ಪ್ರಕಾರ ದುಡಿಯುತ್ತಿದ್ದಂತಹ ಜಿನ್ನ್ (ಯಕ್ಷಭೂತ)ಗಳಿಂದಲೂ (ಅವನಿಗೆ ಅಧೀನಗೊಳಿಸಿದ್ದೆವು). ನಮ್ಮ ಆದೇಶವನ್ನು ಅವರ ಪೈಕಿ ಯಾರು ಉಲ್ಲಂಘಿಸುತ್ತಾನೋ ನಾವು ಅವನಿಗೆ ಧಗಧಗಿಸುವ ನರಕಾಗ್ನಿಯ ಸವಿಯನ್ನುಣ್ಣಿಸುವೆವು. ಅವರು ಅವನಿಗೆ ಅವನಿಚ್ಚಿಸಿದ ಉನ್ನತ ಸೌಧಗಳನ್ನು, ಚಿತ್ರಗಳನ್ನೂ, ಕೊಳದಂತಿರುವ ಹರಿವಾಣಗಳನ್ನು (ತಂತಮ್ಮ ಸ್ಥಾನಗಳಲ್ಲಿ) ನಿಶ್ಚಯಿಸಿ (ಅಡಿಗೆಯ) ಕೊಪ್ಪರಿಗೆಗಳನ್ನು ನಿರ್ಮಿಸಿಕೊಡುತ್ತಿದ್ದರು. ಓ ದಾವೂದ್ ಸಂತತಿಗಳೇ, ನೀವು ಕೃತಜ್ಞತಾಪೂರ್ವಕವಾಗಿ ಕರ್ಮಗಳನ್ನು ಕೈಗೊಳ್ಳಿರಿ ಮತ್ತು (ವಾಸ್ತವದಲ್ಲಿ) ನನ್ನ ದಾಸರ ಪೈಕಿ ಕೃತಜ್ಞತೆಯುಳ್ಳವರು ಅತ್ಯಲ್ಪ ಮಂದಿ ಮಾತ್ರವಿರುತ್ತಾರೆ.”** [11]

ನೈಜ ವಿಶ್ವಾಸದ ಬಲವು ಲೌಕಿಕ ಸಂಪತ್ತುಗಳಿಂದ ದೂರವಿರಬಾರದು. ಒಂದು ವೇಳೆ ನೈಜ ವಿಶ್ವಾಸವು ಮಿಥ್ಯ ವಿಶ್ವಾಸದ ಕಾರಣದಿಂದ ಬೇರ್ಪಟ್ಟು ಹೋದರೆ ಆಗ ಭೌತಿಕ ಸವಲತ್ತುಗಳು ಸರ್ವನಾಶಕ್ಕೆ ಕಾರಣವಾಗುತ್ತವೆ. ಇದು ನಾವಿಂದು ಭೌತಿಕತೆಯು ನಿಯಂತ್ರಿಸುತ್ತಿರುವ ರಾಷ್ಟ್ರಗಳಲ್ಲಿ ಕಾಣುವಂತೆಯೇ ಆಗಿ ಬಿಡುತ್ತದೆ. ಅವುಗಳನ್ನು ನೈಜ ವಿಶ್ವಾಸವು ಮುನ್ನಡೆಸುತ್ತಿಲ್ಲ.

ನೈಜ ವಿಶ್ವಾಸದ ಕುರಿತು ಅಜ್ಞಾನ ಇದು ಅದನ್ನು ಕಲಿಯುವುದರ ಹಾಗೂ ಶಿಕ್ಷಣ ನೀಡುವುದರ ಬಗ್ಗೆ ಅಲಕ್ಷ್ಯ ಹೊಂದುವುದರಿಂದ ಉಂಟಾಗುತ್ತದೆ. ಇಲ್ಲವೇ ಸಾಕಷ್ಟು ಪರಿಜ್ಞಾನವನ್ನೂ, ಪರಿಗಣನೆಯನ್ನೂ ಹೊಂದಿಲ್ಲದಿರುವುದರ ನಿಮಿತ್ತವಾಗಿರುತ್ತದೆ. ಇದರ ಫಲವಾಗಿ ಹೊಸ ಪೀಳಿಗೆಯವರು ಇದನ್ನು ಅರಿತಿರುವುದಿಲ್ಲ. ಅದರ ವಿರುದ್ಧ ಸಂಗತಿಗಳ ಕುರಿತು ಪರಿಜ್ಞಾನ ಹೊಂದಿರುವುದಿಲ್ಲ. ಹೀಗೆ ಸತ್ಯವನ್ನು ಮಿಥ್ಯವೆಂದೂ, ಮಿಥ್ಯವನ್ನು ಸತ್ಯವೆಂದೂ ನಂಬತೊಡಗುತ್ತಾರೆ. ವಾಸ್ತವದಲ್ಲಿ ಇಸ್ಲಾಮಿನ ಹಿಡಿತವು ಅಜ್ಞಾನಕಾಲವಾಗಿತ್ತೇನೆಂಬುದನ್ನು ಅರಿಯದೆ ಇಸ್ಲಾಮಿನ ಉಚ್ಚ ಸಂಸ್ಕೃತಿಯಲ್ಲಿ ಬೆಳೆದ ಒಬ್ಬನಿಂದಲೇ ಇಸ್ಲಾಮಿನ ಹಿಡಿತವು ಒಂದೊಂದಾಗಿ ಕಳಚಿ ಬೀಳುವುದು.

ಪೂರ್ವಿಕರಾದ ತಾತ-ಮುತ್ತಾತಂದಿರು ಇದ್ದುದರ ಪಕ್ಷ ವಹಿಸುವುದು: ಅದು ಮಿಥ್ಯವಾಗಿದ್ದರೂ ಅದನ್ನೇ ಬಿಗಿಹಿಡಿದಿರುವುದು. ಸತ್ಯವು ಅದಕ್ಕೆ ವಿರುದ್ಧವಾಗಿದ್ದರೂ ಸತ್ಯವನ್ನು ಬಿಟ್ಟುಬಿಡುವುದು. ಅಲ್ಲಾಹನು ಈ ಬಗ್ಗೆ ಹೇಳುತ್ತಾನೆ:

﴿ وَإِذَا قِيلَ لَهُمُ ٱتَّبِعُواْ مَآ أَنزَلَ ٱللَّهُ قَالُواْ بَلْ نَتَّبِعُ مَآ أَلْفَيْنَا عَلَيْهِ ءَابَآءَنَآ ۗ أَوَلَوْ كَانَ ءَابَآؤُهُمْ لَا يَعْقِلُونَ شَيْـًٔا وَلَا يَهْتَدُونَ ﴿١٧٠﴾ ﴾

**“ಮತ್ತು ಅವರೊಂದಿಗೆ ನೀವು ಅಲ್ಲಾಹನು ಅವತೀರ್ಣಗೊಳಿಸಿದ ಖುರ್‌ಆನನ್ನು ಅನುಸರಿಸಿರಿ ಎಂದು ಹೇಳಲಾದಾಗ ಅವರು ಹೇಳುತ್ತಾರೆ. ಹಾಗಲ್ಲ, ನಾವು ನಮ್ಮ ಪೂರ್ವಿಕರನ್ನು ಯಾವುದರಲ್ಲಿದ್ದುದಾಗಿ ಕಂಡಿರುವೆವೋ ಅದನ್ನು ಅನುಸರಿಸುತ್ತೇವೆ. ಏನು?**

11 ಖುರ್‌ಆನ್ 34:10-13

**ಅವರ ಪೂರ್ವಿಕರು ಕಿಂಚಿತ್ ವಿವೇಕಬುದ್ಧಿಯಿಂದ ಯೋಚಿಸುವುದಾಗಲಿ, ಸನ್ಮಾರ್ಗ ಪಡೆಯುವುದಾಗಲೀ, ಮಾಡದಿದ್ದರೂ (ಅವರನ್ನು ಹಿಂಬಾಲಿಸುವರೇ)?”** (12)

ಜನರ ಮಾತುಗಳನ್ನು ಅವಲಂಬಿಸಿ ನೈಜ ವಿಶ್ವಾಸದ ವಿಚಾರದಲ್ಲಿ ಪುರಾವೆ ಇಲ್ಲದೆಯೇ ಅದರ ಅಧಿಕೃತತೆಯ ಕುರಿತು ನಿಖರ ಜ್ಞಾನವಿಲ್ಲದೆಯೇ ಜಹ್‌ಮಿಯ, ಮುಅತಝಿಲ, ಅಶ್‌ಅರಿಯ, ಸೂಫಿಪಂಥಗಳು ಬೇರೆಯಾಗಿ ಬಿಟ್ಟಿರುವರು. ಅವರು ತಮ್ಮ ಮಾರ್ಗಭ್ರಷ್ಠ ನಾಯಕರನ್ನು ಅಂಧವಾಗಿ ಅನುಕರಿಸಿ ಅವರ ವಾದಗಳಿಗೆ ಆದ್ಯತೆ ನೀಡಿ ನೈಜ ವಿಶ್ವಾಸದಿಂದ ವ್ಯತಿಚಲಿಸಿದರು.

ಸಂತರ, ಸಜ್ಜನರ ಕುರಿತು ಅತಿಯಾದ ನಂಬಿಕೆಯಿರಿಸುವುದು, ಅವರ ಜ್ಞಾನಕ್ಕಿಂತ ಹೆಚ್ಚಿನ ಔನ್ನತ್ಯ ನೀಡುವುದು, ಅಲ್ಲಾಹನಿಗೆ ಸೀಮಿತ ಗುಣಗಳಾದ ಶುಭವನ್ನುಂಟು ಮಾಡುವಿಕೆ, ತೊಂದರೆಗಳನ್ನು ನೀಗಿಸುವಿಕೆ ಮುಂತಾದವುಗಳನ್ನು ಅವರ ಮೇಲೆ ಆರೋಪಿಸುವುದು, ಪ್ರಾರ್ಥನೆ ಸ್ವೀಕೃತವಾಗುವುದಕ್ಕೂ, ಬಯಸಿದ ಕಾರ್ಯಗಳ ಈಡೇರಿಕೆಗೂ ಅಲ್ಲಾಹನ ಮತ್ತು ಅವನ ದಾಸರ ನಡುವಿನ ಸೇತುವೆಗಳಾಗಿ ಅವರನ್ನೂ ಪರಿಗಣಿಸುವುದು. ಕೊನೆಗೆ ಅಲ್ಲಾಹನ ಸ್ತುತಿ ಬಿಟ್ಟು ಅವರ ಆರಾಧನೆಯೆಡೆಗೆ ವಾಲುವುದು, ಅವರ ಸಮಾಧಿಗಳಿಗೆ ಬಲಿದಾನ, ಹರಕೆಗಳನ್ನು ಅರ್ಪಿಸಿ ಸಾಮೀಪ್ಯ ಬಯಸುವುದು, ಪ್ರಾರ್ಥನೆ, ಸಹಾಯಯಾಚನೆ ಯುಂಟಾಗಿ ಪ್ರವಾದಿ ನೂಹರ ಜನಾಂಗವು ತಮ್ಮಲ್ಲಿನ ಸಜ್ಜನರ ಕುರಿತು ಇರಿಸಿದಂತೆಯೇ ವಿಶ್ವಾಸವಿರಿಸುವುದು. ಅಲ್ಲಾಹನು ಅವರು ಹೇಳಿದುದನ್ನು ಹೀಗೆ ವಿವರಿಸುತ್ತಾನೆ:

﴿ وَقَالُوا۟ لَا تَذَرُنَّ ءَالِهَتَكُمْ وَلَا تَذَرُنَّ وَدًّا وَلَا سُوَاعًا وَلَا يَغُوثَ وَيَعُوقَ وَنَسْرًا ﴿٢٣﴾ ﴾

**“ನೀವು ನಿಮ್ಮ ಆರಾಧ್ಯ ದೇವರುಗಳನ್ನು ಸರ್ವಥಾ ತ್ಯಜಿಸಬೇಡರಿ ಹಾಗೂ (ವಿಶೇಷತಃ) ವದ್ದನನ್ನಾಗಲಿ, ಸುವಾಅನನ್ನಾಗಲಿ, ಯಗೂಸನನ್ನಾಗಲಿ ಮತ್ತು ಯಊಕ ಹಾಗೂ ನಸ್ರ್‌ನನ್ನಾಗಲಿ ತ್ಯಜಿಸಬೇಡಿರಿ.”** (13)

ಇದು ಹೆಚ್ಚಿನ ಸ್ಥಳಗಳಲ್ಲಿ ಇಂದು ಗೋರಿಗಳನ್ನು ಪೂಜಿಸುವವರಲ್ಲೂ ಕಂಡುಬರುತ್ತದೆ.

ಅಲ್ಲಾಹನ ಪ್ರಾಕ್ರತಿಕ ದೃಷ್ಟಾಂತಗಳ ಕುರಿತೂ, ಕುರ್‌ಆನಿನ ಸೂಕ್ತಿಗಳ ಕುರಿತೂ ಅಲಕ್ಷ್ಯ ತೋರುವುದು. ಲೌಕಿಕ ಸಮೃದ್ಧಿಯ ವೈಭವಕ್ಕೆ ಮಾರುಹೋಗುವುದು. ಕೊನೆಗೆ ಅದು ಮಾನವ ಸಾಮರ್ಥ್ಯದಿಂದ ಮಾತ್ರ ಪಡೆಯಬಹುದೆಂದು ನಂಬುವುದು ಹೀಗೆ ಅವರು ವ್ಯಕ್ತಿಯನ್ನು ಪೂಜಿಸತೊಡಗುತ್ತಾರೆ. ಲೌಕಿಕ ಆಡಂಬರಗಳಲ್ಲಿ ತನ್ನ ಸ್ವಸಾಮರ್ಥ್ಯದಿಂದ ಮಾತ್ರ ಪಡೆದಿದ್ದರು ಎಂದು ಹೇಳುತ್ತಾರೆ. ಇದಕ್ಕೆ ಮೊದಲು ಕಾರೂನ್ ಈ ರೀತಿಯೇ ಹೇಳಿರುತ್ತಾನೆ. ಅವನು ಹೇಳಿದನು:

---

**12** ಕುರ್‌ಆನ್ 2:170

**13** ಕುರ್‌ಆನ್ 71:23

﴿ قَالَ إِنَّمَآ أُوتِيتُهُۥ عَلَىٰ عِلۡمٍ عِندِيٓۚ ﴾

**"ವಾಸ್ತವದಲ್ಲಿ ಇದೆಲ್ಲ ನನ್ನ ಬಳಿಯ ಜ್ಞಾನದಿಂದಲೇ ಪಡೆದಿರುವೆ."** (14)

ಇದೇ ರೀತಿ ಒಬ್ಬ ಮನುಷ್ಯನು ಹೇಳುತ್ತಾನೆ:

﴿ هَٰذَا لِي ﴾

**"ಇದೆಲ್ಲವೂ ನನ್ನದು"** (15)

﴿ إِنَّمَآ أُوتِيتُهُۥ عَلَىٰ عِلۡمٍۚ ﴾

**"ವಾಸ್ತವದಲ್ಲಿ ಇದೆಲ್ಲವೂ ನನ್ನ ನಿಖರ ಜ್ಞಾನದಿಂದಲೇ ಪಡೆದಿರುವೆ."** (16)

ಆದರೆ ಅವರು ಈ ಅಂತರಿಕ್ಷ ಲೋಕಗಳನ್ನು ಸೃಷ್ಟಿಸಿದವನೆಂದು ಚಿಂತಿಸುವುದಾಗಲೀ, ಗ್ರಹಿಸಿಕೊಳ್ಳುವುದಾಗಲೀ ಮಾಡುವುದಿಲ್ಲ. ಈ ವೈಭವಯುತ ಲೋಕಗಳ ವಿಶಿಷ್ಟತೆಗಳನ್ನು ಸೃಷ್ಟಿಸಿದವನಾರೆಂದೂ ಆಲೋಚಿಸುವುದಿಲ್ಲ ಮತ್ತು ಮನುಷ್ಯನಿಗೆ ವಿಶಿಷ್ಟ ಸಾಮರ್ಥ್ಯಗಳನ್ನು ನೀಡಿ ಅವುಗಳ ಮೂಲಕ ಪ್ರಯೋಜನ ಪಡೆಯುವ ಶಕ್ತಿಯನ್ನು ನೀಡಿರುವುದು ಯಾರೆಂದೂ ಅರಿಯುವುದಿಲ್ಲ.

﴿ وَٱللَّهُ خَلَقَكُمۡ وَمَا تَعۡمَلُونَ ٩٦ ﴾

**"ಅಲ್ಲಾಹನು ನಿಮ್ಮನ್ನೂ, ನೀವು ಮಾಡುತ್ತಿರುವುದನ್ನೂ ಸೃಷ್ಟಿಸಿರುತ್ತಾನೆ."** (17)

﴿ أَوَلَمۡ يَنظُرُواْ فِي مَلَكُوتِ ٱلسَّمَٰوَٰتِ وَٱلۡأَرۡضِ وَمَا خَلَقَ ٱللَّهُ مِن شَيۡءٖ ﴾

**"ಆಕಾಶಗಳ ಹಾಗೂ ಭೂಮಿಯ ಸಾಮ್ರಾಜ್ಯಾಧಿಪತ್ಯದಲ್ಲೂ ಅಲ್ಲಾಹನು ಸೃಷ್ಟಿಸಿದ ಪ್ರತಿಯೊಂದು ವಸ್ತುವಿನ ಬಗ್ಗೆ ಅವರು ವಿಚಾರಮಾಡಿ ನೋಡುವುದಿಲ್ಲವೇ?"** (18)

﴿ ٱللَّهُ ٱلَّذِي خَلَقَ ٱلسَّمَٰوَٰتِ وَٱلۡأَرۡضَ وَأَنزَلَ مِنَ ٱلسَّمَآءِ مَآءٗ فَأَخۡرَجَ بِهِۦ مِنَ ٱلثَّمَرَٰتِ رِزۡقٗا لَّكُمۡۖ وَسَخَّرَ لَكُمُ ٱلۡفُلۡكَ لِتَجۡرِيَ فِي ٱلۡبَحۡرِ بِأَمۡرِهِۦۖ وَسَخَّرَ لَكُمُ ٱلۡأَنۡهَٰرَ ٣٢ وَسَخَّرَ لَكُمُ ٱلشَّمۡسَ وَٱلۡقَمَرَ دَآئِبَيۡنِۖ وَسَخَّرَ لَكُمُ ٱلَّيۡلَ وَٱلنَّهَارَ ٣٣ وَءَاتَىٰكُم مِّن كُلِّ مَا سَأَلۡتُمُوهُۚ وَإِن تَعُدُّواْ نِعۡمَتَ ٱللَّهِ لَا تُحۡصُوهَآۗ ﴾

14 ಕುರ್‌ಆನ್ 28:78
15 ಕುರ್‌ಆನ್ 41:50
16 ಕುರ್‌ಆನ್ 39:49
17 ಕುರ್‌ಆನ್ 37:96
18 ಕುರ್‌ಆನ್ 7:185

**"ಅಲ್ಲಾಹನೆಂದರೆ ಆಕಾಶಗಳನ್ನೂ, ಭೂಮಿಯನ್ನೂ ಸೃಷ್ಟಿಸಿದವನು ಮತ್ತು ಆಕಾಶದಿಂದ ಮಳೆಯನ್ನು ಸುರಿಸಿದವನು, ತರುವಾಯ ಅದರಿಂದ ನಮಗೆ ಫಲಬೆಳೆಗಳನ್ನು ಉತ್ಪಾದಿಸಿದವನು ಮತ್ತು ಅವನು ನಿಮಗೆ ಹಡಗನ್ನು ಅದು ಅವನ ಅಪ್ಪಣೆಯಿಂದ ಸಮುದ್ರದಲ್ಲಿ ಚಲಿಸುತ್ತಿರಲೆಂದು ಅಧೀನಗೊಳಿಸಿದನು ಮತ್ತು ಅವನು ನದಿಗಳನ್ನು ನಿಮಗೆ ಅಧೀನಗೊಳಿಸಿದನು ಮತ್ತು ಅವನು ನಿಮಗೆ ಸೂರ್ಯನನ್ನೂ, ಚಂದ್ರನನ್ನೂ ನಿರಂತರವಾಗಿ ಚಲಿಸುತ್ತಿರುವ ಸ್ಥಿತಿಯಲ್ಲಿ ಮತ್ತು ನೀವು ಬೇಡುತ್ತಿರುವುದೆಲ್ಲವನ್ನೂ ನಿಮಗೆ ನೀಡಿರುವನು ಮತ್ತು ಅಲ್ಲಾಹನ ಅನುಗ್ರಹವನ್ನು ನೀವು ಎಣಿಸಿ ನೋಡುವುದಾದರೆ ನಿಮಗೆ ಅದನ್ನು ಲೆಕ್ಕ ಹಾಕಲು ಸಾಧ್ಯವಿಲ್ಲ. ವಾಸ್ತವದಲ್ಲಿ ಮನುಷ್ಯನು ಅಕ್ರಮಿಯೂ, ಕೃತಘ್ನನೂ ಆಗಿದ್ದಾನೆ."** (19)

ಹೆಚ್ಚಿನ ವೇಳೆ ಒಬ್ಬನು ಹುಟ್ಟಿ ಬೆಳೆದ ಮನೆ, ಪರಿಸರವು ಸುರಕ್ಷಿತವಾದ ವಿಶ್ವಾಸಗಳಿಂದ ದೂರವಿರುತ್ತದೆ. ಅದು ಅವನ ಮೇಲೆ ಪ್ರಭಾವ ಬೀರುತ್ತದೆ. ಪ್ರವಾದಿಯವರು ಈ ಬಗ್ಗೆ ಹೇಳುತ್ತಾರೆ:

«كُلُّ مَوْلُودٍ يُولَدُ عَلَى الْفِطْرَةِ فَأَبَوَاهُ يُهَوِّدَانِهِ أَوْ يُنَصِّرَانِهِ أَوْ يُمَجِّسَانِهِ»

**"ಪ್ರತಿಯೊಂದು ಮಗುವೂ ಸಹಜ ಪ್ರಕೃತಿಯಲ್ಲೇ ನಿಷ್ಕಳಂಕವಾಗಿ ಹುಟ್ಟುತ್ತದೆ. ಆದರೆ ಅವನ ತಂದೆ ತಾಯಂದಿರು ಅವನನ್ನು ಯಹೂದನನ್ನಾಗಿಯೂ, ಕ್ರೈಸ್ತನನ್ನಾಗಿಯೂ, ಬಹುದೇವಾರಾಧಕನನ್ನಾಗಿಯೂ ಮಾಡುತ್ತಾರೆ."** (20)

ಮಗುವಿನ ಚಿಂತನೆಗಳು ರೂಪುಗೊಳ್ಳಲು ತಂದೆ–ತಾಯಿಗಳು ಹೆಚ್ಚಿನ ಪಾತ್ರವಹಿಸುತ್ತಾರೆ.

ಶಿಕ್ಷಣ ಹಾಗೂ ಜ್ಞಾನ ಪಡೆಯುವ ಮಾರ್ಗಗಳೆಲ್ಲವೂ ಹೆಚ್ಚಾಗಿ ಇಸ್ಲಾಮೀ ಜಗತ್ತಿನಲ್ಲಿ ಶಿಕ್ಷಣದ ಪ್ರಧಾನ ಅಂಶಕ್ಕೆ ನಿರ್ಬಂಧ ಹೇರಿದೆ. ಶಿಕ್ಷಣ ಪಡೆಯಲು ಮಾರ್ಗವು ಧಾರ್ಮಿಕ ಶಿಕ್ಷಣಕ್ಕಿಂತ ಮುಖ್ಯವಾಗಿ ಇತರ ಜ್ಞಾನಗಳಿಗೆ ಮಹತ್ವ ನೀಡುತ್ತದೆ. ನೈತಿಕ ಶಿಕ್ಷಣವನ್ನು ಮುಖ್ಯವೆಂದು ಪರಿಗಣಿಸುವುದಿಲ್ಲ. ದೃಶ್ಯ, ಶ್ರಾವ್ಯ ಹಾಗೂ ಪಠ್ಯ ಮಾಧ್ಯಮಗಳು ಹೆಚ್ಚಿನ ವೇಳೆ ನೈಜ ವಿಶ್ವಾಸವನ್ನು ವಿಕೃತಗೊಳಿಸುವ, ವ್ಯತಿಚಲಿಸುವ ಮಾರ್ಗಗಳಾಗಿರುತ್ತವೆ. ಇಲ್ಲವೇ ಭೌತಿಕತೆಯ ಉಪಾಧಿಗಳಾಗಿರುತ್ತವೆ. ಅವುಗಳಲ್ಲಿ ಗುಣನಡತೆಗಳ ಹಾಗೂ ವಿಶ್ವಾಸದ ಸುಧಾರಣೆಗೆ ಪ್ರಾಧಾನ್ಯತೆ ನೀಡಲಾಗುವುದಿಲ್ಲ ಮತ್ತು ಪಥಭ್ರಷ್ಠ ಪಂಥಗಳನ್ನು ತಡೆ ಹಾಕುವುದಕ್ಕೂ ಪ್ರಯತ್ನಿಸಲಾಗುವುದಿಲ್ಲ. ಪರಿಣಾಮವಾಗಿ ಸತ್ಯನಿಷೇಧಿಗಳಾದ ಅಸಂಖ್ಯಾತ ಸೈನ್ಯಗಳ ಮುಂದೆ ಪ್ರತಿರೋಧ ಶಕ್ತಿಯಿಲ್ಲದ ದುರ್ಬಲ ಪೀಳಿಗೆಯು ಹುಟ್ಟಿ ಬರುತ್ತದೆ.

ಈ ಪಥಭ್ರಷ್ಠತೆಗಳಿಂದ ಸುರಕ್ಷಿತವಾಗಿರಲು ಏನು ಮಾಡಬೇಕು?

ಸಂಕ್ಷಿಪ್ತವಾಗಿ ಈ ಕೆಳಗಿನಂತೆ ತಿಳಿಯಬಹುದು:

---

**19** ಕುರ್‌ಆನ್ 14:32–34

**20** ಬುಖಾರಿ ಮತ್ತು ಮುಸ್ಲಿಮ್

1. ಮೊತ್ತಮೊದಲಿಗೆ ನಾವು ಅಲ್ಲಾಹನ ಗ್ರಂಥ ಕುರ್‌ಆನ್‌ನೆಡೆಗೂ, ಪ್ರವಾದಿಯ ಜೀವನಚರ್ಯೆಯೆಡೆಗೂ ನೈಜವಿಶ್ವಾಸವನ್ನು ಪಡೆಯಲಿಕ್ಕೋಸ್ಕರ ಮರಳಬೇಕಾಗಿದೆ. ಹೀಗೆಯೇ ಸಜ್ಜನರಾದ ಪೂರ್ವಿಕರು ಇವರೆಡರಿಂದ ತಮ್ಮ ನೈಜವಿಶ್ವಾಸವನ್ನು ಪಡೆದುಕೊಳ್ಳುತ್ತಿದ್ದರು. ಈ ಸಮುದಾಯದ ಮೊದಲಿನವರು ಯಾವುದರ ಮೂಲಕ ಸುಧಾರಣೆಯಾದರೋ ಅದರ ಮೂಲಕವೇ ಹೊರತು ಕೊನೆಯವರ ಸುಧಾರಣೆಯಾಗಲಾರದು. ಅದೂ ಸಹ ಅವರಿಗೆ ಪಥಭ್ರಷ್ಠ ಗುಂಪುಗಳ ವಿಶ್ವಾಸಗಳೇನೆಂಬುದನ್ನೂ, ಅವುಗಳನ್ನು ತೊಡೆದುಹಾಕುವ ಮಾರ್ಗಗಳೇನೆಂಬುದನ್ನೂ ತಿಳಿಸಿ ಅವುಗಳಿಂದ ಸುರಕ್ಷಿತರಾಗಿರುವ ದಾರಿಗಳನ್ನು ತೋರಿಸಿಕೊಟ್ಟಿರಬೇಕು. ಏಕೆಂದರೆ ಇವುಗಳ ಬಗ್ಗೆ ಎಚ್ಚರ ವಹಿಸದ ವ್ಯಕ್ತಿಯು ಮಿಥ್ಯವಿಶ್ವಾಸಗಳಿಗೆ ಬಲಿಯಾಗಲು ಹೆಚ್ಚಿನ ಸಾಧ್ಯತೆಯಿರುತ್ತದೆ.

2. ಸರಿಯಾದ ನಂಬಿಕೆ ವಿಶ್ವಾಸಗಳನ್ನು ಸಜ್ಜನರಾದ ಪೂರ್ವಿಕರ ವಿಶ್ವಾಸದಂತೆಯೂ, ಶಿಕ್ಷಣದ ಹಲವು ಘಟ್ಟಗಳಲ್ಲಿ ನೀಡಲು ಹೆಚ್ಚಿನ ಗಮನ ನೀಡಬೇಕು. ಅವುಗಳು ಪ್ರವಾದಿ ಚರ್ಯೆಯಿಂದ ಅಧಿಕೃತಗೊಂಡ ಮಾರ್ಗದಲ್ಲೇ ಆಗಿರಬೇಕು. ಈ ವಿಚಾರದಲ್ಲಿ ಸೂಕ್ಷ್ಮವಾಗಿ ಪರಿಶೀಲನೆ ನಡೆಯುತ್ತಿರಬೇಕು.

3. ಕಳಂಕರಹಿತವಾದ ಪೂರ್ವಿಕರ ಗ್ರಂಥಗಳನ್ನು ನೆಚ್ಚಿಕೊಳ್ಳಬೇಕು ಮತ್ತು ಸೂಫಿ, ಧಾರ್ಮಿಕ ನವೀನವಾದಿ ಪಂಥ, ಜಹ್‌ಮಿಯ, ಮುಅತಝಿಲ, ಅಶ್‌ಅರಿಯ್ಯ, ಮಾತುರಿದಿಯ್ಯ ಮುಂತಾದ ಎಲ್ಲ ಪಥಭ್ರಷ್ಠ ಪಂಥಗಳ ಮಿಥ್ಯ ವಿಶ್ವಾಸಗಳನ್ನು ಸ್ಪಷ್ಟಪಡಿಸಿ, ಅವುಗಳಿಂದ ದೂರವಿರಬೇಕಾದ ರೀತಿಯನ್ನು ತಿಳಿಸುವ ಅಧ್ಯಾಯಗಳನ್ನು ಮಾತ್ರ ಒಳಪಡಿಸಿದ ಗ್ರಂಥಗಳ ಅಧ್ಯಯನ ನಡೆಸಬೇಕು ಹಾಗೂ ಅವರ ಗ್ರಂಥಗಳನ್ನೆಲ್ಲ ದೂರವಿಡಬೇಕು.

4. ಸಜ್ಜನ ಪೂರ್ವಿಕರ ವಿಶ್ವಾಸಗಳ ಮೂಲಕ ಪಥಭ್ರಷ್ಠರ ಮಿಥ್ಯ ಮಾರ್ಗಗಳಿಂದ ಜನರನ್ನು ತಡೆದು, ಸುಧಾರಣೆ ಮಾಡುವ ಧರ್ಮಪ್ರಚಾರಕರ ಜೀವನೋಪಾಯಕ್ಕೆ ಮಾರ್ಗ ರೂಪಿಸಬೇಕು.

ಭಾಗ–2

# ತೌಹೀದ್(ಏಕದೇವ ವಿಶ್ವಾಸ)ನ ಅರ್ಥ ವಿವರಣೆ ಹಾಗೂ ಅದರ ಶಾಖೆಗಳು

ತೌಹೀದ್ (ಏಕದೇವ ವಿಶ್ವಾಸ) ಎಂದರೆ ಸೃಷ್ಟಿ, ನಿಯಂತ್ರಣ, ಯೋಜನೆ, ಮುಂತಾದವುಗಳಲ್ಲಿ ಅಲ್ಲಾಹನನ್ನು ಏಕೈಕನೆಂದು ನಂಬುವುದು. ಆರಾಧನೆಗಳನ್ನು ಅವನಿಗೇ ಸೀಮಿತಗೊಳಿಸುವುದು, ಅವನ ಹೊರತಾದ ಎಲ್ಲ ವ್ಯಕ್ತಿ, ಎಲ್ಲ ಶಕ್ತಿ, ಎಲ್ಲ ವಸ್ತುಗಳ ಆರಾಧನೆಯನ್ನೂ ತೊರೆದುಬಿಡುವುದು. ಅವನಿಗಿರುವಂತಹ ಅತ್ಯುತ್ತಮ ನಾಮಗಳನ್ನೂ, ಉನ್ನತ ಗುಣವಿಶೇಷಣಗಳನ್ನು ಸತ್ಯವೆಂದು ಒಪ್ಪಿಕೊಳ್ಳುವುದು, ಎಲ್ಲಾ ರೀತಿಯ ನ್ಯೂನ್ಯತೆಗಳಿಂದ ಅವನು ಪವಿತ್ರನೆಂದು ನಂಬುವುದು ಆಗಿರುತ್ತದೆ. ವಿವರಣೆಯಲ್ಲಿ ಒಳಗೊಳ್ಳುವ ಏಕದೇವ ವಿಶ್ವಾಸದಲ್ಲಿ ಮೂರು ವಿಭಾಗಗಳಿವೆ.

## 1. ತೌಹೀದ್ ಅರ್ರುಬೂಬಿಯ್ಯ:

ಈ ವಿಭಾಗದಲ್ಲಿ ಈ ಕೆಳಗಿನ ಅಧ್ಯಾಯಗಳಿವೆ.

**ಅಧ್ಯಾಯ–1**

**ತೌಹೀದ್ ಅರ್ರುಬೂಬಿಯ್ಯದ ಅರ್ಥ ವಿವರಣೆ, ಇದರಲ್ಲಿರುವ ನೈಸರ್ಗಿಕ ವಿಶ್ವಾಸ ಹಾಗೂ ಇದನ್ನು ಬಹುದೇವಾರಾಧಕರು ಒಪ್ಪಿರುವ ಬಗೆ.**

**ಅಧ್ಯಾಯ–2**

**ರಬ್ (ಪಾಲಕ ಪ್ರಭು) ಪದವನ್ನು ಕುರ್ಆನ್ ಮತ್ತು ಪ್ರವಾದಿಯ ಸುನ್ನತ್ ಪ್ರಕಾರ ಅರ್ಥ ವಿವರಣೆ, ಈ ಬಗ್ಗೆ ಮಾರ್ಗಭ್ರಷ್ಠ ಸಮುದಾಯಗಳ ಕಲ್ಪನೆಗಳು, ಇವುಗಳ ಖಂಡನೆ.**

**ಅಧ್ಯಾಯ–3**

**ಇಡೀ ಜಗತ್ತಿನ ಚರಾಚರ ವಸ್ತುಗಳ ವಿಧೇಯತೆ ಹಾಗೂ ಅಲ್ಲಾಹನನ್ನು ಅನುಸರಿಸುತ್ತಿರುವ ವಿವರಣೆ.**

**ಅಧ್ಯಾಯ–4**

**ಸೃಷ್ಠಿ, ಸ್ಥಿತಿ ಮುಂತಾದವುಗಳಲ್ಲಿ ಅಲ್ಲಾಹನು ಏಕೈಕನೆಂದು ಸಾರಲು ಖುರ್ಆನ್ ಸ್ವೀಕರಿಸಿದ ಮಾರ್ಗದ ವಿವರಣೆ.**

**ಅಧ್ಯಾಯ–5**

**ತೌಹೀದ್‌ಉಲೂಹಿಯ್ಯ (ಆರಾಧ್ಯನಾಗಿ ಅಲ್ಲಾಹನು ಏಕೈಕನೆಂದು ನಂಬುವುದು)ದ ಸ್ಥಾಪನೆಗೆ ತೌಹೀದ್ ಅರ್ರುಬೂಬಿಯ್ಯದ ಪಾತ್ರವೇನೆಂಬುದರ ವಿವರಣೆ.**

## ಅಧ್ಯಾಯ–1

# ತೌಹೀದ್ ಅರ್ರುಬೂಬಿಯ್ಯದ ಅರ್ಥ ವಿವರಣೆ–ಇದನ್ನು ಬಹುದೇವಾರಾಧಕರು ಒಪ್ಪಿಕೊಂಡ ಬಗೆ

ತೌಹೀದ್ (ಏಕದೇವವಿಶ್ವಾಸ) ಅಂದರೆ ಅಲ್ಲಾಹನ ಪಾಲಕಪ್ರಭುತ್ವದಲ್ಲೂ, ಆರಾಧನೆಯು ಅವನಿಗೇ ಸಲ್ಲಬೇಕು ಎಂಬುದರಲ್ಲೂ ಅವನಿಗಿರುವಂತಹ ನಾಮಗಳಲ್ಲೂ, ಉನ್ನತ ಗುಣ ವಿಶೇಷಣಗಳಲ್ಲೂ ಅವನು ಏಕೈಕನೆಂದು ಒಪ್ಪಿಕೊಳ್ಳುವುದಾಗಿರುತ್ತದೆ. ಈ ತೌಹೀದ್‌ನಲ್ಲಿ ಮೂರು ವಿಧಗಳಿವೆ.

1. **ತೌಹೀದ್ ಅರ್ರುಬೂಬಿಯ್ಯ**
2. **ತೌಹೀದ್ ಅಲ್‌ಉಲೂಹಿಯ್ಯ**
3. **ತೌಹೀದ್ ಅಲ್‌ಅಸ್ಮಾವಸಿಫಾತ್**

ಇವುಗಳ ನಡುವಿನ ವ್ಯತ್ಯಾಸವನ್ನು ತಿಳಿಸಲು ಇವುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ವಿವರಿಸುವುದು ಅತ್ಯಗತ್ಯವಾಗಿರುತ್ತದೆ.

**ತೌಹೀದ್ ಅರ್ರುಬೂಬಿಯ್ಯ:** ಇದು ಅಲ್ಲಾಹನು ಸಕಲ ಸೃಷ್ಟಿಗಳಿಗೆ ಏಕೈಕ ಸೃಷ್ಟಿಕರ್ತನಾಗಿದ್ದಾನೆಂಬ ವಿಶ್ವಾಸದೊಂದಿಗೆ ಅವನು ತನ್ನ ಕೆಲಸ ಕಾರ್ಯಗಳಲ್ಲೂ ಏಕೈಕನೆಂದು ನಂಬುವುದಾಗಿರುತ್ತದೆ. ಅವನು ಹೇಳುತ್ತಾನೆ:

﴿ ٱللَّهُ خَٰلِقُ كُلِّ شَيۡءٖ ﴾

**"ಅಲ್ಲಾಹನು ಸಕಲ ವಸ್ತುಗಳ ಸೃಷ್ಟಿಕರ್ತನಾಗಿರುತ್ತಾನೆ."** (21)

ಮತ್ತು ಅವನು ಮನುಷ್ಯನು ಸೇರಿ ಸರ್ವ ಚರಾಚರಗಳಿಗೂ ಅನ್ನಾಧಾರ ನೀಡುವವನು.

﴿ ۞ وَمَا مِن دَآبَّةٖ فِي ٱلۡأَرۡضِ إِلَّا عَلَى ٱللَّهِ رِزۡقُهَا ﴾

**"ಯಾವೊಂದು ಜೀವಿಯೂ ಸಹ ಅಲ್ಲಾಹನು ಅದರ ಅನ್ನಾಧಾರವನ್ನು ವಹಿಸಿಕೊಂಡಿರುವುದರ ಹೊರತು ಇರುವುದಿಲ್ಲ"** (22)

ಅವನು ಸಕಲ ಸಾಮ್ರಾಜ್ಯಗಳ ಅಧಿಪತಿಯೂ, ಇಡೀ ಪ್ರಪಂಚದ ಕಾರ್ಯಕ್ರಮಗಳ ನಿರೂಪಕನಾಗಿರುವನು. ಅವನು ಕೆಲವರನ್ನು ತನ್ನ ಆಪ್ತರನ್ನಾಗಿಸುತ್ತಾನೆ. ಇನ್ನು ಕೆಲವರನ್ನು ದೂರವಿರಿಸುತ್ತಾನೆ. ಕೆಲವರಿಗೆ ಘನತೆ ಗೌರವಗಳನ್ನು ಕೊಟ್ಟರೆ, ಇನ್ನು ಕೆಲವರಿಗೆ ನಿಂದ್ಯತೆ,

---

**21** ಕುರ್‌ಆನ್ 39:62

**22** ಕುರ್‌ಆನ್ 11:6

ಅಧಃಪತನ ನೀಡುತ್ತಾನೆ. ಎಲ್ಲ ಕಾರ್ಯಗಳಲ್ಲೂ ಸರ್ವ ಸಮರ್ಥನಾಗಿದ್ದಾನೆ. ಅವನು ರಾತ್ರಿ ಹಗಲನ್ನು ಬದಲಿಸುತ್ತಿರುತ್ತಾನೆ. ಜೀವನ, ಮರಣವನ್ನೂ ನೀಡುತ್ತಿರುತ್ತಾನೆ.

﴿ قُلِ ٱللَّهُمَّ مَٰلِكَ ٱلْمُلْكِ تُؤْتِى ٱلْمُلْكَ مَن تَشَآءُ وَتَنزِعُ ٱلْمُلْكَ مِمَّن تَشَآءُ وَتُعِزُّ مَن تَشَآءُ وَتُذِلُّ مَن تَشَآءُ ۖ بِيَدِكَ ٱلْخَيْرُ ۖ إِنَّكَ عَلَىٰ كُلِّ شَىْءٍ قَدِيرٌ ﴿٢٦﴾ تُولِجُ ٱلَّيْلَ فِى ٱلنَّهَارِ وَتُولِجُ ٱلنَّهَارَ فِى ٱلَّيْلِ ۖ وَتُخْرِجُ ٱلْحَىَّ مِنَ ٱلْمَيِّتِ وَتُخْرِجُ ٱلْمَيِّتَ مِنَ ٱلْحَىِّ ۖ وَتَرْزُقُ مَن تَشَآءُ بِغَيْرِ حِسَابٍ ﴿٢٧﴾ ﴾

**"ಹೇಳು (ಓ ಪ್ರವಾದಿ) ಓ ಅಲ್ಲಾಹ್, ನೀನಿಚ್ಛಿಸಿದವರಿಗೆ ನೀನು ಅಧಿಕಾರವನ್ನು ನೀಡುವೆ. ನೀನಿಚ್ಛಿಸಿದವರಿಂದ ಅಧಿಕಾರವನ್ನು ಕಸಿಯುವೆ, ನೀನಿಚ್ಛಿಸಿದವರಿಗೆ ಘನತೆ ಗೌರವ ಕೊಟ್ಟು ಆದರಿಸುವೆ, ನೀನಿಚ್ಛಿಸಿದವರನ್ನು ನಿಂದ್ಯರನ್ನಾಗಿಸುವೆ, ನಿನ್ನ ಕೈಯಲ್ಲಿ ಮಾತ್ರವೇ ಸಕಲ ಒಳಿತುಗಳು. ಸರ್ವ ಸಂಗತಿಗಳಲ್ಲೂ ಸಮರ್ಥನಾಗಿರುವೆ. ನೀನು ರಾತ್ರಿಯನ್ನು ಹಗಲಿನೊಳಗೆ ಪೋಣಿಸುವೆ ಹಾಗೂ ಹಗಲನ್ನೂ ರಾತ್ರಿಯೊಳಗೂ ಪೋಣಿಸುವೆ ಹಾಗೂ ನಿರ್ಜೀವಿಯಿಂದ ಸಜೀವಿಯನ್ನು ಹೊರತೆಗೆಯುವೆ ಮತ್ತು ಸಜೀವಿಯಿಂದ ನಿರ್ಜೀವಿಯನ್ನು ಹೊರತೆಗೆಯುವೆ ಮತ್ತು ನೀನಿಚ್ಛಿಸಿದವರಿಗೆ ಲೆಕ್ಕವಿಲ್ಲದಷ್ಟು ಅನ್ನಾಧಾರ ನೀಡಿ ಪೋಷಿಸುವೆ."** (23)

ಪರಮ ಪವಿತ್ರನಾದ ಅಲ್ಲಾಹನು ಸೃಷ್ಟಿಸುವುದರಲ್ಲೂ, ಅನ್ನಾಧಾರ ನೀಡುವುದರಲ್ಲೂ ತನಗೆ ಸಹಭಾಗಿಯಿರುವುದನ್ನು ಅಲ್ಲಗಳೆದ ಹಾಗೆಯೇ ತನಗೆ ಸಾಮ್ರಾಜ್ಯಧಿಕಾರದಲ್ಲಿ ಯಾವೊಬ್ಬ ಸಹಭಾಗಿಯಾಗಲೀ, ಸಹಾಯಕನಾಗಲೀ ಇರುವುದನ್ನೂ ಖಂಡತುಂಡವಾಗಿ ಅಲ್ಲಗಳೆದಿದ್ದಾನೆ. ಆ ಮಹೋನ್ನತನು ಹೇಳಿದ್ದಾನೆ:

﴿ هَٰذَا خَلْقُ ٱللَّهِ فَأَرُونِى مَاذَا خَلَقَ ٱلَّذِينَ مِن دُونِهِۦ ۚ ﴾

**"ಇಗೋ ಇದು ಅಲ್ಲಾಹನ ಸೃಷ್ಟಿ, ಇನ್ನು ನೀವು ಅವನ ಹೊರತಾದವರು ಸೃಷ್ಟಿಸಿರುವುದನ್ನು ನನಗೆ ತೋರಿಸಿಕೊಡಿರಿ."** (24)

ಮತ್ತೊಂದೆಡೆ ಹೇಳುತ್ತಾನೆ:

﴿ أَمَّنْ هَٰذَا ٱلَّذِى يَرْزُقُكُمْ إِنْ أَمْسَكَ رِزْقَهُۥ ۚ ﴾

**"ಅವನು ತನ್ನ ಅನ್ನಾಧಾರವನ್ನು ತಡೆಹಿಡಿದು ಬಿಟ್ಟರೆ ನಿಮಗೆ ಅನ್ನಾಧಾರ ನೀಡುವವನಾದರೂ ಯಾರು?"** (25)

---

**23** ಕುರ್‌ಆನ್ 3:26–27

**24** ಕುರ್‌ಆನ್ 31:11

**25** ಕುರ್‌ಆನ್ 67:21

ಇದೇ ರೀತಿ ಅವನು ತನ್ನ ಸಕಲ ಸೃಷ್ಟಿಗಳ ಮೇಲೆ ತಾನು ಏಕೈಕ ಪಾಲಕ ಪ್ರಭುವಾಗಿರುವುದನ್ನು ಸಾರಿ ಬಿಟ್ಟಿದ್ದಾನೆ.

﴿ ٱلْحَمْدُ لِلَّهِ رَبِّ ٱلْعَٰلَمِينَ ﴿٢﴾ ﴾

**“ಸರ್ವ ಲೋಕಗಳ ಪಾಲಕ ಪ್ರಭುವಾದ ಅಲ್ಲಾಹುವಿಗೆ ಸರ್ವಸ್ತುತಿಯು ಮೀಸಲು.”** [26]

ಅವನು ಇನ್ನೊಂದೆಡೆ ಹೇಳುತ್ತಾನೆ:

﴿ إِنَّ رَبَّكُمُ ٱللَّهُ ٱلَّذِى خَلَقَ ٱلسَّمَٰوَٰتِ وَٱلْأَرْضَ فِى سِتَّةِ أَيَّامٍ ثُمَّ ٱسْتَوَىٰ عَلَى ٱلْعَرْشِ يُغْشِى ٱلَّيْلَ ٱلنَّهَارَ يَطْلُبُهُۥ حَثِيثًا وَٱلشَّمْسَ وَٱلْقَمَرَ وَٱلنُّجُومَ مُسَخَّرَٰتٍۭ بِأَمْرِهِۦٓ ۗ أَلَا لَهُ ٱلْخَلْقُ وَٱلْأَمْرُ ۗ تَبَارَكَ ٱللَّهُ رَبُّ ٱلْعَٰلَمِينَ ﴿٥٤﴾ ﴾

**“ನಿಶ್ಚಯವಾಗಿಯೂ ನಿಮ್ಮ ಪಾಲಕ ಪ್ರಭುವು ಅಲ್ಲಾಹನಾಗಿದ್ದಾನೆ. ಅವನೆಂದರೆ ಆಕಾಶಗಳನ್ನೂ, ಭೂಮಿಯನ್ನೂ ಆರು ದಿನಗಳಲ್ಲಿ ಸೃಷ್ಟಿಸಿದವನು. ತರುವಾಯ ಅರ್ಶ್‌ನ ಮೇಲೆ ಇಸ್ತಿವಾ ಆದನು. ಅವನು ರಾತ್ರಿಯನ್ನು ಹಗಲಿನ ಮೇಲೆ ಆಚ್ಛಾದಿಸುವನು. ಅದು ಅದನ್ನು ಕ್ಷಿಪ್ರಗತಿಯಲ್ಲಿ ಹಿಂಬಾಲಿಸುತ್ತದೆ ಮತ್ತು ಸೂರ್ಯನನ್ನೂ, ಚಂದ್ರನನ್ನೂ, ನಕ್ಷತ್ರಗಳನ್ನೂ ಅವನ ಆದೇಶಗಳಿಗೆ ವಿಧೇಯರಾಗಿರುವ ಸ್ಥಿತಿಯಲ್ಲಿರಿಸಿರುವನು. ತಿಳಿದುಕೊಳ್ಳಿರಿ: ಸೃಷ್ಟಿ ಹಾಗೂ ನಿಯಂತ್ರಣವು ಅವನಿಗೇ ಮೀಸಲಿದೆ. ಸಕಲ ಲೋಕಗಳ ಪಾಲಕ ಪ್ರಭುವಾದ ಅಲ್ಲಾಹನು ಅದೆಷ್ಟು ಮಂಗಳಮಯನಾಗಿದ್ದಾನೆ”** [27]

ಅಲ್ಲಾಹನು ತನ್ನೆಲ್ಲಾ ಸೃಷ್ಟಿಗಳನ್ನು ತನ್ನ ಪಾಲಕ ಪ್ರಭುತ್ವವನ್ನು ಒಪ್ಪಿಕೊಂಡಿರುವ ಸ್ಥಿತಿಯಲ್ಲೇ ಸೃಷ್ಟಿಸಿರುವನು. ಎಷ್ಟರವರೆಗೆಂದರೆ ಅವನಿಗೆ ಸಹಭಾಗಿಗಳನು ಕಲ್ಪಿಸಿದ ಬಹುದೇವಾರಾಧಕರು ಸಹ ಅವನ ಪಾಲಕಪ್ರಭುತ್ವವನ್ನು ಅಂಗೀಕರಿಸಿರುವರು. ಅಲ್ಲಾಹನು ಹೇಳುತ್ತಾನೆ:

﴿ قُلْ مَن رَّبُّ ٱلسَّمَٰوَٰتِ ٱلسَّبْعِ وَرَبُّ ٱلْعَرْشِ ٱلْعَظِيمِ ﴿٨٦﴾ سَيَقُولُونَ لِلَّهِ ۚ قُلْ أَفَلَا تَتَّقُونَ ﴿٨٧﴾ قُلْ مَنۢ بِيَدِهِۦ مَلَكُوتُ كُلِّ شَىْءٍ وَهُوَ يُجِيرُ وَلَا يُجَارُ عَلَيْهِ إِن كُنتُمْ تَعْلَمُونَ ﴿٨٨﴾ سَيَقُولُونَ لِلَّهِ ۚ قُلْ فَأَنَّىٰ تُسْحَرُونَ ﴿٨٩﴾ ﴾

**“ಕೇಳು (ಓ ಪ್ರವಾದಿ) ಏಳು ಆಕಾಶಗಳ ಪಾಲಕ ಪ್ರಭು ಹಾಗೂ ಮಹಾ ಅರ್ಶ್ (ದಿವ್ಯಪೀಠ)ನ ಪಾಲಕ ಪ್ರಭು ಯಾರು? (ಖಂಡಿತ) ಅವರು ಹೇಳುವರು: ಅಲ್ಲಾಹ್ ಎಂದು,**

**26** ಕುರ್‌ಆನ್ 1:2

**27** ಕುರ್‌ಆನ್ 7:54

**ಕೇಳು: ಹಾಗಿದ್ದೂ ನೀವು ಭಯಭಕ್ತಿ ಹೊಂದುವುದಿಲ್ಲವೇ? ನೀನು ಕೇಳು: ಪ್ರತಿಯೊಂದು ವಸ್ತುವಿನ ಸಾರ್ವಭೌಮತ್ವವು ಯಾರ ಪಾಲಿಗಿದೆ? ಅವನಾದರೋ (ಎಲ್ಲರಿಗೂ) ರಕ್ಷಣೆ ನೀಡುವನು ಮತ್ತು ಅವನ ವಿರುದ್ಧ ರಕ್ಷಣೆ ನೀಡಲಾಗಲು ಸಾಧ್ಯವಿಲ್ಲ. (ಅವನು ಯಾರು) ನೀವು ತಿಳಿದವರಾಗಿದ್ದರೆ ಹೇಳಿರಿ, ಅಗತ್ಯವಾಗಿ ಅವರು ಹೇಳುವರು: ಅಲ್ಲಾಹ್; ಕೇಳು: ಹೀಗಿರುವಾಗ ನೀವು ಹೇಗೆ ಮಾಟ ಬಾಧಿತರಂತೆ ಆಗಿಬಿಡುವಿರಿ.”** [28]

ಈ ವಿಧದ ತೌಹೀದ್‌ಗೆ ಆದಂರ ಸಂತತಿಯಲ್ಲಿ ಯಾವೊಂದು ಸಮುದಾಯವು ವಿರುದ್ಧವಾಗಿ ನಿಂತಿರುವುದಿಲ್ಲ. ಮಾತ್ರವಲ್ಲ ಅವರ ಹೃದಯಗಳು ಇದನ್ನು ಒಪ್ಪಿಕೊಳ್ಳಲೆಂದೇ ಸೃಷ್ಟಿಸಲ್ಪಟ್ಟಿದೆ. ಈ ಸಹಜ ಗುಣವು ಇತರೆಲ್ಲವನ್ನು ಒಪ್ಪಿಕೊಳ್ಳುವುದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿದೆ. ಸಂದೇಶವಾಹಕರು ತಮ್ಮ ಜನತೆಗೆ ಹೇಳಿರುವುದಾಗಿ ಅಲ್ಲಾಹನು ಒಂದೆಡೆ ಉಲ್ಲೇಖಿಸುತ್ತಾನೆ:

﴿ ۞ قَالَتْ رُسُلُهُمْ أَفِي ٱللَّهِ شَكٌّ فَاطِرِ ٱلسَّمَٰوَٰتِ وَٱلْأَرْضِ ﴾

**“ಅಲ್ಲಾಹನ ಸಂದೇಶವಾಹಕರು ಹೇಳಿದರು. ಏನು? ಅಲ್ಲಾಹನ ವಿಚಾರದಲ್ಲಿ ಸಂದೇಹವಿರಲು ಸಾಧ್ಯವೇ? ಅವನು ಆಕಾಶಗಳ ಹಾಗೂ ಭೂಮಿಯ ಆರಂಭಕರ್ತನಾಗಿದ್ದಾನೆ.”** [29]

ಅಲ್ಲಾಹನ ಅಸ್ತಿತ್ವವನ್ನು ಅಲ್ಲಗಳೆಯುವುದರಲ್ಲೂ ಹಾಗೂ ಬಾಹ್ಯ ನೋಟಕ್ಕೆ ಅವನನ್ನು ನಿಷೇಧಿಸಿದಂತೆ ಕಂಡು ಬಂದವರಲ್ಲೂ ಕುಪ್ರಸಿದ್ಧನಾಗಿರುವುದು ಫಿರ್‌ಔನ್ ಮಾತ್ರ, ವಾಸ್ತವದಲ್ಲಿ ಅವನು ಅಂತರಂಗದಲ್ಲಿ ಅಲ್ಲಾಹನ ಬಗ್ಗೆ ದೃಢವಾಗಿ ನಂಬಿದ್ದನು. ಪ್ರವಾದಿ ಮೂಸಾ(عليه السلام) ಅವನೊಡನೆ ಹೇಳಿರುವ ಮಾತಿನಲ್ಲಿ ಈ ಸಂಗತಿಯು ಅಡಗಿದೆ.

﴿ قَالَ لَقَدْ عَلِمْتَ مَآ أَنزَلَ هَٰٓؤُلَآءِ إِلَّا رَبُّ ٱلسَّمَٰوَٰتِ وَٱلْأَرْضِ بَصَآئِرَ ﴾

**“ಅವರು (ಮೂಸಾ عليه السلام) ಹೇಳಿದರು: ಇವುಗಳನ್ನೆಲ್ಲಾ ಸುಸ್ಪಷ್ಟ ದೃಷ್ಟಾಂತವಾಗಿ ಆಕಾಶಗಳ ಹಾಗೂ ಭೂಮಿಯ ಪಾಲಕ ಪ್ರಭುವಾದ ಅಲ್ಲಾಹನ ಹೊರತು ಇನ್ನಾರೂ ಇಳಿಸಿರುವುದಿಲ್ಲವೆಂದು ನೀನು ಚೆನ್ನಾಗಿ ತಿಳಿದಿರುವೆ.”** [30]

ಮತ್ತು ಅಲ್ಲಾಹನು ಅವನ ಬಗ್ಗೆಯೂ, ಅವನ ಜನತೆಯ ಬಗ್ಗೆಯೂ ಹೀಗೆ ಹೇಳಿರುವನು:

﴿ وَجَحَدُوا۟ بِهَا وَٱسْتَيْقَنَتْهَآ أَنفُسُهُمْ ظُلْمًا وَعُلُوًّا ﴾

**“ಮತ್ತು ಅವರು ಅವುಗಳನ್ನೆಲ್ಲಾ (ದೃಷ್ಟಾಂತಗಳನ್ನೆಲ್ಲ) ತಾವು ಅವುಗಳನ್ನು ದೃಢವಾಗಿ**

---

**28** ಕುರ್‌ಆನ್ 23:86–89

**29** ಕುರ್‌ಆನ್ 14:10

**30** ಕುರ್‌ಆನ್ 17:102

**ನಂಬಿದ್ದರೂ ಸಹ ತಮ್ಮ ಅಕ್ರಮದಿಂದಲೂ, ಧಿಕ್ಕಾರದಿಂದಲೂ ನಿಷೇಧಿಸಿಬಿಟ್ಟರು.”** [31]

ಇಂದು ಅಲ್ಲಾಹನ ಅಸ್ತಿತ್ವವನ್ನು ನಿಷೇಧಿಸುವ ಹಲವು ಪಂಥಗಳು ತಮ್ಮ ಅಹಂಕಾರದ ಕಾರಣದಿಂದಲೇ ಬಾಹ್ಯ ನೋಟಕ್ಕೆ ನಿಷೇಧಿಸುತ್ತಾರೆ. ವಾಸ್ತವದಲ್ಲಿ ಅವರು ಯಾವೊಂದು ವಸ್ತುವು ಸಹ ಅದನ್ನು ಯಾರಾದರೂ ಅಸ್ತಿತ್ವಕ್ಕೆ ತರದೆ ಅಸ್ತಿತ್ವದಲ್ಲಿರಲು ಸಾಧ್ಯವಿಲ್ಲ ಎಂದೂ, ಯಾವೊಂದು ಸೃಷ್ಟಿಯೂ ಸಹ ಅದರ ಸೃಷ್ಟಿಕರ್ತನಿಲ್ಲದೆ ಇರಲು ಸಾಧ್ಯವಲ್ಲವೆಂದು, ಯಾವುದೇ ಪ್ರಭಾವವು ಸಹ ಪ್ರಭಾವ ಬೀರುವನಿಲ್ಲದೆ ಇರಲು ಸಾಧ್ಯವಿಲ್ಲವೆಂದೆಲ್ಲಾ ಒಳಗೊಳಗೇ ಒಪ್ಪಿಕೊಂಡಿರುತ್ತಾರೆ. ಅಲ್ಲಾಹನು ಹೇಳುತ್ತಾನೆ:

﴿ أَمْ خُلِقُوا۟ مِنْ غَيْرِ شَىْءٍ أَمْ هُمُ ٱلْخَـٰلِقُونَ ﴿٣٥﴾ أَمْ خَلَقُوا۟ ٱلسَّمَـٰوَٰتِ وَٱلْأَرْضَ ۚ بَل لَّا يُوقِنُونَ ﴿٣٦﴾ ﴾

**“ಏನು ಅವರು ಯಾವುದೇ ಅಸ್ತಿತ್ವದ ಹೊರತಾಗಿ ಸೃಷ್ಟಿಸಲಟ್ಟಿದ್ದಾರೆಯೇ? ಅಥವಾ ಅವರು ಸ್ವತಃ ಸೃಷ್ಟಿಕರ್ತರೇ? ಏನು ಅವರು ಆಕಾಶಗಳನ್ನೂ, ಭೂಮಿಯನ್ನೂ ಸೃಷ್ಟಿಸಿದ್ದಾರೆಯೇ? ಹಾಗಲ್ಲ ಅವರು ದೃಡವಾಗಿ ನಂಬುವುದಿಲ್ಲ.”** [32]

ಇಡೀ ವಿಶ್ವವನ್ನೊಮ್ಮೆ ನೀನು ಆಳವಾಗಿ ಅಭ್ಯಸಿಸು. ಅದರ ಆಕಾಶಗಳಿರಲಿ, ಅದರ ಭೂಮಿಯಿರಲಿ, ಅದರ ಸಕಲ ಭಾಗಗಳಿರಲಿ ಅವುಗಳ ನಿರ್ಮಾಪಕನ, ಸೃಷ್ಟಿಕರ್ತನ, ಒಡೆಯನ ಅಸ್ತಿತ್ವದ ಕುರುಹನ್ನು ಖಂಡಿತ ಕಾಣುವೆ. ಅದರ ನಿರ್ಮಾತೃನನ್ನು ಬುದ್ಧಿಯಿಂದ ನಿಷೇಧಿಸಿದರೆ ಸಕಲ ಜ್ಞಾನವನ್ನೂ ನಿಷೇಧಿಸಿದಂತಾಗುತ್ತದೆ. ಇವೆರಡರಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲ. (ಸರಿಯಾದ ಜ್ಞಾನವು ಸೃಷ್ಟಿಕರ್ತನ ಅಸ್ತಿತ್ವವನ್ನು ದೃಢೀಕರಿಸುತ್ತದೆ.) ಅಲ್ಲಾಹನ ಅಸ್ತಿತ್ವವನ್ನು ನಿರಾಕರಿಸುವ ನಾಟಕವನ್ನಾಡುವ ಗುಂಪುಗಳು ಅಹಂಕಾರದಿಂದ ಹಾಗೂ ವಿಚಾರ ಶೂನ್ಯತೆಯಿಂದ ಹೊರತು ನಿಷೇಧಿಸುವುದಿಲ್ಲ. ಯಾರು ಇಂತಹ ಅಸಂಬದ್ಧವನ್ನಾಡುತ್ತಾನೋ ಅವನು ತನ್ನ ಬದ್ದಿಹೀನತೆಯನ್ನು ಪ್ರಕಟಗೊಳಿಸಲೂ, ತಾನು ಎಲ್ಲರ ಮುಂದೆ ಹಾಸ್ಯಾಸ್ಪದ ವಸ್ತುವಾಗಲೂ ಕರೆ ನೀಡಿದಂತಾಗುತ್ತದೆ. ಕವಿಯೊಬ್ಬನು ಹೇಳಿರುತ್ತಾನೆ.

**“ನಿಜ ಆರಾಧ್ಯನ ಹೇಗೆ ಧಿಕ್ಕರಿಸುವನೋ? ನಿಷೇಧಿ ಹೇಗೆ ತಾನೆ ಅವನ ನಿಷೇಧಿಸುವನೋ?**

**ನಿಜವಾಗಿ ಸಕಲದರಲ್ಲೂ ಅವನ ಕುರುಹು ಅಡಗಿದೆ. ಅವೆಲ್ಲ ಅವನು ಏಕೈಕನೆಂದೇ ಸಾರಿವೆ.”**

---

**31** ಕುರ್‌ಆನ್ 27:14

**32** ಕುರ್‌ಆನ್ 52:35–36

## ಅಧ್ಯಾಯ–2

# ಕುರ್‌ಆನ್‌ನಲ್ಲೂ, ಸುನ್ನತ್‌ನಲ್ಲೂ 'ರಬ್ಬ್' ಎಂಬ ಪದದ ಅರ್ಥವ್ಯಾಪ್ತಿ ಮತ್ತು ಈ ಬಗ್ಗೆ ಪಥಭ್ರಷ್ಟ ಪಂಥಗಳ ಕಲ್ಪನೆಗಳು

1. 'ರಬ್ಬ್' ಪದದ ಅರ್ಥವ್ಯಾಪ್ತಿ ಖುರ್‌ಆನ್ ಮತ್ತು ಸುನ್ನತ್‌ನ ಬೆಳಕಿನಲ್ಲಿ:

'ರಬ್ಬ್' ಪದದ ಮೂಲವು 'ರಬ್ಬ–ಯರುಬ್ಬು'ವಿನಿಂದಾಗಿದೆ. ಅಂದರೆ ಒಂದು ವಸ್ತುವನ್ನು ಹಂತಹಂತವಾಗಿ ಬೆಳೆಸುತ್ತಾ, ಪೋಷಿಸುತ್ತಾ ಪರಿಪೂರ್ಣ ಹಂತಕ್ಕೆ ತರುವುದು ಎಂದರ್ಥ. ಕೆಲವೊಮ್ಮೆ ಹೇಳಲಾಗುತ್ತದೆ 'ಅವನು ಅವನನ್ನು ಬೆಳೆಸಿದನು'. 'ಅವರು ಅವನನ್ನು ಪೋಷಿಸಿ ಬೆಳೆಸಿದರು' ಆದ್ದರಿಂದ 'ರಬ್' ಪದವು ಹೀಗೆ ಮಾಡುವ ಕರ್ತೃನ ಕುರಿತು ಹೇಳುವ ಕರ್ತೃ ನಾಮವಾಗಿದೆ. 'ಅರ್‌ರಬ್ಬ್' ಎಂಬುದನ್ನು ಸಂಪೂರ್ಣವಾಗಿ ಸಕಲ ಅಸ್ತಿತ್ವಗಳ ಹಿಂದಿನ ಪೋಷಕ ಶಕ್ತಿಯಾದ ಅಲ್ಲಾಹನಿಗೇ ಹೊರತು ಇನ್ಯಾರಿಗೂ ಬಳಸಲಾಗುವುದಿಲ್ಲ. ಉದಾಹರಣೆಗೆ:

﴿ رَبِّ ٱلْعَٰلَمِينَ ﴿٢﴾ ﴾

**"ಸಕಲ ಲೋಕಗಳ ರಬ್(ಪಾಲಕ ಪ್ರಭು)"** (33)

﴿ قَالَ رَبُّكُمْ وَرَبُّ ءَابَآئِكُمُ ٱلْأَوَّلِينَ ﴿٢٦﴾ ﴾

**"ನಿಮ್ಮ ರಬ್ಬ್ (ಪಾಲಕ ಪ್ರಭು)ವೂ, ನಿಮ್ಮ ಪೂರ್ವಿಕರೆಲ್ಲರ ರಬ್ಬ್ (ಪಾಲಕ ಪ್ರಭು) ಆಗಿದ್ದೇನೆ."** (34)

ಈ ಪದವನ್ನು ಅಲ್ಲಾಹನ ಹೊರತು ಇನ್ನಾರಿಗೂ ಬಳಸಲಾಗುವುದಿಲ್ಲ. ಆದರೆ ಇತರರಿಗೆ ಉಪಯೋಗಿಸುವಾಗ ಇದನ್ನು ವಸ್ತುವಿನೊಂದಿಗೆ ಯಾವುದಾದರೂ ಜೊತೆ ಸೇರಿರಬೇಕು. ಉದಾಹರಣೆಗೆ ಈ ಮನೆಯ 'ರಬ್' (ಯಜಮಾನ) ಈ ಕುದುರೆಯ 'ರಬ್' (ಒಡೆಯ) ಇದೇ ರೀತಿ ಪ್ರವಾದಿ ಯೂಸುಫರ ಮಾತಿನ ಉಲ್ಲೇಖವೂ ಇದೆ.

﴿ ٱذْكُرْنِى عِندَ رَبِّكَ فَأَنسَٰهُ ٱلشَّيْطَٰنُ ذِكْرَ رَبِّهِۦ ﴾

**"ನೀನು ನಿನ್ನ ರಬ್ಬ್(ರಾಜ)ನ ಬಳಿ ನನ್ನನ್ನು ಜ್ಞಾಪಿಸು. ಆದರೆ ಶೈತಾನನು ಅವನನ್ನು ಅವನ ರಬ್ಬ್ (ರಾಜ)ನ ಬಳಿ ಇದನ್ನು ಜ್ಞಾಪಿಸಲು ಮರೆಯಿಸಿ ಬಿಟ್ಟನು."** (35)

ಮತ್ತು ಅಲ್ಲಾಹನು ಹೇಳುತ್ತಾನೆ:

---

**33** ಕುರ್‌ಆನ್ 1:2

**34** ಕುರ್‌ಆನ್ 26:26

**35** ಕುರ್‌ಆನ್ 12:42

﴿ قَالَ ٱرۡجِعۡ إِلَىٰ رَبِّكَ ﴾

**“(ಯೂಸುಫ್) ಹೇಳಿದನು: ನೀನು ನಿನ್ನ ರಬ್ಬ್ (ರಾಜನ)ನೆಡೆಗೆ ಮರಳಿ ಹೋಗು.”**(36)

ಮತ್ತೊಂದೆಡೆ ಹೇಳುತ್ತಾನೆ:

﴿ أَمَّآ أَحَدُكُمَا فَيَسۡقِى رَبَّهُۥ خَمۡرًاۖ ﴾

**“ನಿಮ್ಮಲ್ಲೊಬ್ಬನ ವಿಚಾರವೇನೆಂದರೆ ಅವನು ತನ್ನ ರಬ್ಬ್(ರಾಜ)ನಿಗೆ ಮದ್ಯ ಕುಡಿಸುತ್ತಾನೆ.”**(37)

ಮತ್ತು ಪ್ರವಾದಿಯವರು ಕಾಣೆಯಾದ ಒಂಟೆಯ ಬಗ್ಗೆ ಹೇಳಿದ ಮಾತೊಂದು ಹೀಗಿದೆ:

«حَتَّى يَجِدَهَا رَبَّهَا»

**“ಕೊನೆಗೆ ಅದು ತನ್ನ ರಬ್ಬ್(ಒಡೆಯ)ನನ್ನು ಕಂಡಿತು.”** (38)

ಇದರಿಂದ ಸ್ಪಷ್ಟವಾಗುವುದೇನೆಂದರೆ ‘ಅರ್ರಬ್ಬ್’ ಎಂಬ ಪದವು ಅಲ್ ಎಂಬ ಪ್ರತ್ಯಯದೊಂದಿಗೂ, ಯಾವುದಾದರೂ ವಸ್ತುವಿನೊಂದಿಗೆ ಜೊತೆ ಸೇರಿಸಿದಾಗಲೂ ಸಂಪೂರ್ಣವಾಗಿ ಅಲ್ಲಾಹನಿಗೆ ಬಳಸಲಾಗುತ್ತದೆ. ಉದಾ: ಅರ್ರಬ್ಬ್, ಸಕಲ ಲೋಕಗಳ ರಬ್ಬ್ (ಪಾಲಕಪ್ರಭು) ಜನರ ರಬ್ ಮತ್ತು ‘ರಬ್’ ಪದವು ಯಾವುದಾದರೂ ವಸ್ತುವಿಗೆ ಸೇರಿಸಿಕೊಂಡಲ್ಲದೆ ಜನರಿಗೆ ಸಂಪೂರ್ಣವಾಗಿ ಬಳಸಲಾಗುವುದಿಲ್ಲ. ಉದಾಹರಣೆಗೆ ಮನೆಯ ರಬ್ (ಯಜಮಾನ) ಈ ಗೃಹದ ರಬ್ (ಒಡೆಯ) ಮತ್ತು ಒಂಟೆಯ ರಬ್ (ಮಾಲೀಕ) ಇತ್ಯಾದಿ.

ಸಕಲ ಲೋಕಗಳ ‘ರಬ್’ನ ಅರ್ಥವನ್ನು ಹೀಗೆ ತಿಳಿಯಬಹುದು; ಅವರೆಲ್ಲರ ಸೃಷ್ಟಿಕರ್ತ, ಒಡೆಯ, ಅವರನ್ನು ತನ್ನ ಅನುಗ್ರಹದಿಂದ ತನ್ನ ಸಂದೇಶವಾಹಕರನ್ನು ಕಳುಹಿಸುವ ಮೂಲಕ, ತನ್ನ ಗ್ರಂಥಗಳನ್ನು ಇಳಿಸಿಕೊಡುವುದರ ಮೂಲಕ ಸರಿಪಡಿಸುವವನು, ಪೋಷಿಸಿ ಬೆಳೆಸುವವನು, ಮತ್ತು ಅವರ ಕರ್ಮಗಳಿಗೆ ತಕ್ಕ ಪ್ರತಿಫಲವನ್ನು ನೀಡುವವನು. ಅಲ್ಲಾಮ ಇಬ್ನುಲ್ ಕಯ್ಯಿಂ(ﷺ) ಹೇಳುತ್ತಾರೆ: **“ನಿಜವಾಗಿ ಅರ್ರುಬೂಬಿಯ್ಯವು ದಾಸರಿಗೆ ವಿಧಿ ನಿಷೇಧಗಳನ್ನು ಅನಿವಾರ್ಯವಾಗಿಸುತ್ತದೆ. ಮತ್ತು ಅವರ ಒಳಿತುಗಳಿಗೆ ಪ್ರತಿಫಲವಾಗಿ ಒಳಿತನ್ನೂ, ಅವರ ಕೆಡುಕುಗಳಿಗೆ ಪ್ರತಿಫಲವಾಗಿ ಕೆಡುಕನ್ನೂ ಅನಿವಾರ್ಯವಾಗಿಸುತ್ತದೆ.”** (39) ಇದುವೇ ಅರ್ರುಬೂಬಿಯ್ಯದ ವಾಸ್ತವಿಕತೆ.

**36** ಕುರ್‌ಆನ್ 12:50

**37** ಕುರ್‌ಆನ್ 12:41

**38** ಬುಖಾರಿ ಮತ್ತು ಮುಸ್ಲಿಮ್

**39** ಮದಾರಿಜು ಸ್ಸಾಲಿಕೀನ್ 1/8

2. ಪಥಭ್ರಷ್ಟ ಸಮುದಾಯಗಳ ಕಲ್ಪನೆಗಳಲ್ಲಿ 'ರಬ್ಬ್' ಎಂಬ ಪದ

ಅಲ್ಲಾಹನು ಸೃಷ್ಟಿಗಳನ್ನು ತೌಹೀದ್‌ನ ಬುನಾದಿಯ ಮೇಲೂ ಸಹಜವಾಗಿ ಸೃಷ್ಟಿಸಿದ್ದಾನೆ. ಇದಕ್ಕೆ ಪೂರಕವಾಗಿ ಅಲ್ಲಾಹನು ಹೇಳುತ್ತಾನೆ:

﴿ فَأَقِمْ وَجْهَكَ لِلدِّينِ حَنِيفًا ۚ فِطْرَتَ ٱللَّهِ ٱلَّتِى فَطَرَ ٱلنَّاسَ عَلَيْهَا ۚ لَا تَبْدِيلَ لِخَلْقِ ٱللَّهِ ۚ ﴾

**"ಇನ್ನು ನಿನ್ನ ಮುಖವನ್ನು ನೇರಮಾರ್ಗಸ್ಥನಾಗಿ ಧರ್ಮದೆಡೆಗೆ ನೇರ ನಿಲ್ಲಿಸು. ಇದು ಅಲ್ಲಾಹನ ಪ್ರಕೃತಿಯಾಗಿದೆ. ಈ ಪ್ರಕೃತಿಯ ಮೇಲೆ ಜನರನ್ನೆಲ್ಲಾ ಅವನು ಸೃಷ್ಟಿಸಿರುವನು. ಅಲ್ಲಾಹನ ಸೃಷ್ಟಿಗೆ ಯಾವ ಬದಲಾವಣೆಯೂ ಇಲ್ಲ."** (40)

ಮತ್ತು ಅತ್ಯುನ್ನತನಾದ ಅವನು ಹೇಳಿದನು:

﴿ وَإِذْ أَخَذَ رَبُّكَ مِنۢ بَنِىٓ ءَادَمَ مِن ظُهُورِهِمْ ذُرِّيَّتَهُمْ وَأَشْهَدَهُمْ عَلَىٰٓ أَنفُسِهِمْ أَلَسْتُ بِرَبِّكُمْ ۖ قَالُوا۟ بَلَىٰ ۛ شَهِدْنَآ ۛ ﴾

**"ಮತ್ತು ನಿನ್ನ ಪಾಲಕ ಪ್ರಭುವು ಆದಮನ ಸಂತಾನಗಳಿಂದ ಅವರ ಬೆನ್ನುಗಳಿಂದ ಅವರ ಸಂತತಿಗಳನ್ನು ಹೊರ ತೆಗೆದುಕೊಂಡು, ಅವರೆಲ್ಲರನ್ನು ಸ್ವತಃ ಅವರ ಮೇಲೆಯೇ ಸಾಕ್ಷಿಗಳನ್ನಾಗಿಸುತ್ತಾ ಕೇಳಿದ ಸಂದರ್ಭವನ್ನೂ ಸ್ಮರಿಸು. ನಾನು ನಿಮ್ಮ ಪಾಲಕ ಪ್ರಭುವಲ್ಲವೇನು? ಅವರೆಲ್ಲ ಹೇಳಿದರು: ಏಕಿಲ್ಲ, ಖಂಡಿತ (ನೀನೇ ನಮ್ಮ ಪ್ರಭು) ನಾವು ಇದಕ್ಕೆ ಸಾಕ್ಷ್ಯವಹಿಸುತ್ತೇವೆ."** (41)

ಹೀಗೆ ಅಲ್ಲಾಹನ ರುಬೂಬಿಯ್ಯವು ಹಾಗೂ ಅವನೆಡೆಗೆ ತಿರುಗಿ ಬಿಡುವುದು ಸಹ ಒಂದು ಸಹಜ ಗುಣವಾಗಿದೆ ಮತ್ತು ಶಿರ್ಕ್(ಅಲ್ಲಾಹನಿಗೆ ಸಹಭಾಗಿಗಳನ್ನು ಕಲ್ಪಿಸುವುದು) ಹೊರಗಿನಿಂದ ಬಂದು ಒಳನುಗ್ಗಿದ ನವೀನ ಸಂಗತಿಯಾಗಿದೆ. ಪ್ರವಾದಿ(ﷺ)ರವರು ಹೇಳಿದರು:

«كُلُّ مَوْلُودٍ يُولَدُ عَلَى الْفِطْرَةِ فَأَبَوَاهُ يُهَوِّدَانِهِ أَوْ يُنَصِّرَانِهِ أَوْ يُمَجِّسَانِهِ»

**"ಪ್ರತಿಯೊಂದು ಮಗುವೂ ನಿಷ್ಕಳಂಕವಾಗಿ ಸಹಜ ಪ್ರಕೃತಿಯಲ್ಲೇ ಹುಟ್ಟುತ್ತದೆ. ಆದರೆ ಅದರ ತಂದೆತಾಯಂದಿರು ಅದನ್ನು ಯಹೂದನನ್ನಾಗಿಯೂ, ಕ್ರೈಸ್ತನನ್ನಾಗಿಯೂ, ಬಹುದೇವಾರಾಧಕನನ್ನಾಗಿಯೂ ಮಾಡುತ್ತಾರೆ."** (42)

---

**40** ಕುರ್‌ಆನ್ 30:30

**41** ಕುರ್‌ಆನ್ 7:172

**42** ಬುಖಾರಿ ಮತ್ತು ಮುಸ್ಲಿಮ್

ಒಂದೊಮ್ಮೆ ಒಬ್ಬ ದಾಸನನ್ನು ಅವನ ಸಹಜ ಪ್ರಕೃತಿಯಲ್ಲೇ ಬಿಟ್ಟುಬಿಟ್ಟಿದ್ದರೆ ಅವನು ತೌಹೀದ್‌ನೆಡೆಗೆ ತಿರುಗುತ್ತಿದ್ದನು. ಸಂದೇಶವಾಹಕರ ಕರೆಯನ್ನು ಸ್ವೀಕರಿಸುತ್ತಿದ್ದನು. ಅದು ಸಂದೇಶವಾಕರೆಲ್ಲರೂ ತಂದಂತಹ ಸಂದೇಶವಾಗಿತ್ತು. ಇದರ ಕುರಿತಾಗಿ ದಿವ್ಯಗ್ರಂಥಗಳು ಅವತೀರ್ಣಗೊಂಡವು. ಈ ಬಗ್ಗೆ ಪ್ರಾಪಂಚಿಕ ನಿದರ್ಶನಗಳು ತಿಳಿಸುತ್ತವೆ. ಆದರೆ ಪಥಭ್ರಷ್ಟತೆಯ ತರಬೇತಿಯು ಸತ್ಯನಿಷೇಧದ ವಾತಾವರಣವು ಮಗುವಿನ ಪ್ರವೃತ್ತಿಯನ್ನು ಬದಲಿಸಿ ಬಿಡುತ್ತದೆ. ಹೀಗೆ ಮಕ್ಕಳು ತಮ್ಮ ತಂದೆ ತಾಯಂದಿರನ್ನು ಮಾರ್ಗಭ್ರಷ್ಟತೆಯಲ್ಲೂ, ವ್ಯತಿಚಲನೆಯಲ್ಲೂ ಅಂಧವಾಗಿ ಅನುಸರಿಸತೊಡಗುತ್ತಾರೆ.

ಅತ್ಯುನ್ನತನಾದ ಅಲ್ಲಾಹನು ಕುದ್‌ಸೀ ಹದೀಸೊಂದರಲ್ಲಿ ಹೇಳುತ್ತಾನೆ:

«خَلَقْتُ عِبَادِي حُنَفَاءَ فَاجْتَالَتْهُمُ الشَّيَاطِينُ»

**“ನಾನು ನನ್ನ ದಾಸರನ್ನು ನೇರ ಮಾರ್ಗಸ್ಥರಾಗಿಯೇ ಸೃಷ್ಟಿಸಿರುತ್ತೇನೆ. ಆದರೆ ಶೈತಾನರು ಅವರನ್ನು ಅವರ ಮಾರ್ಗಕ್ಕೆ ಎಳೆದೊಯ್ದರು.”** (43)

ಅಂದರೆ ಅವರು ಅವರನ್ನು ವಿಗ್ರಹಗಳ ಆರಾಧನೆಯೆಡೆಗೆ ತಿರುಗಿಸಿಬಿಟ್ಟರು. ಅವರು ಅಲ್ಲಾಹನ ಹೊರತು ಅಸಂಖ್ಯಾತ ದೇವರುಗಳನ್ನು ಮಾಡಿಕೊಂಡರು. ಹೀಗೆ ಅವರು ಮಾರ್ಗಭ್ರಷ್ಟತೆಯಲ್ಲೂ, ಅಂಧಕಾರದಲ್ಲೂ, ಭಿನ್ನ ಭಿನ್ನ ಸಮುದಾಯವಾಗಿಯೂ, ಪರಸ್ಪರ ಭಿನ್ನತೆಯಲ್ಲೂ ಆಗಿಬಿಟ್ಟರು. ಅವರು ತಮ್ಮ ನೈಜ ಆರಾಧ್ಯನನ್ನು ತೊರೆದ ಕಾರಣ ಪ್ರತಿಯೊಬ್ಬರೂ ತಮಗಾಗಿ ಖಾಸಗಿ ದೇವರುಗಳನ್ನು ನಿಶ್ಚಯಿಸಿಕೊಂಡರು. ಈ ಮೂಲಕ ಅವರು ಪರೀಕ್ಷೆಗೆ ಬಲಿಯಾದರು. ಅಲ್ಲಾಹನು ಹೇಳುತ್ತಾನೆ:

﴿ فَذَٰلِكُمُ ٱللَّهُ رَبُّكُمُ ٱلْحَقُّ ۖ فَمَاذَا بَعْدَ ٱلْحَقِّ إِلَّا ٱلضَّلَٰلُ ۖ ﴾

**“ಅಗೋ ಅವನೇ ನಿಮ್ಮ ಪಾಲಕ ಪ್ರಭುವಾದ ಅಲ್ಲಾಹನು. ಆದ್ದರಿಂದ ಸತ್ಯದ ನಂತರ ಪಥಭ್ರಷ್ಟತೆಯಲ್ಲದೆ ಇನ್ನೇನಿದೆ?”** (44)

ಮಾರ್ಗಭ್ರಷ್ಟತೆಗೆ ಅಂತ್ಯ ಅಥವಾ ಸೀಮಾರೇಖೆಯೆಂಬುದಿರುವುದಿಲ್ಲ. ಸತ್ಯನಾದ ತನ್ನ ಪಾಲಕಪ್ರಭುವನ್ನು ತೊರೆದವನಿಗೆ ಇದು ಅನಿವಾರ್ಯ ಸಂಗತಿಯಾಗಿರುತ್ತದೆ. ಅಲ್ಲಾಹನು ಹೇಳುತ್ತಾನೆ:

﴿ ءَأَرْبَابٌ مُّتَفَرِّقُونَ خَيْرٌ أَمِ ٱللَّهُ ٱلْوَٰحِدُ ٱلْقَهَّارُ ﴿٣٩﴾ مَا تَعْبُدُونَ مِن دُونِهِۦٓ إِلَّآ أَسْمَآءً سَمَّيْتُمُوهَآ أَنتُمْ وَءَابَآؤُكُم مَّآ أَنزَلَ ٱللَّهُ بِهَا مِن سُلْطَٰنٍ ۚ ﴾

**“ಏನು? ಭಿನ್ನ ಭಿನ್ನರಾದ ದೇವರುಗಳು ಉತ್ತಮರೇ? ಅಥವಾ ಮಹಾಶಕ್ತಿಶಾಲಿಯಾದ**

---

43 ಅಹ್ಮದ್

44 ಕುರ್‌ಆನ್ 10:32

**ಏಕೈಕ ಅಲ್ಲಾಹನೇ? ವಾಸ್ತವದಲ್ಲಿ ನೀವು ಅವನ ಹೊರತು ಆರಾಧಿಸುವುದೇನಿದ್ದರೂ ಕೇವಲ ನೀವೂ ನಿಮ್ಮ ಪೂರ್ವಿಕರೂ ಇರಿಸಿಕೊಂಡಂತಹ ಕೆಲವು ಹೆಸರುಗಳೇ ಹೊರತು ಇನ್ನೇನಲ್ಲ. ಇವುಗಳ ಬಗ್ಗೆ ಅಲ್ಲಾಹನು ಯಾವೊಂದು ಪ್ರಮಾಣವನ್ನು ಇಳಿಸಿರುವುದಿಲ್ಲ."** [45]

ಗುಣಗಳಲ್ಲೂ, ಕಾರ್ಯಗಳಲ್ಲೂ ಸಮಾನರಾದ ಇಬ್ಬರು ದೇವರುಗಳು ಇದ್ದಾರೆಂಬ ನಂಬಿಕೆಯ ಆಧಾರದಲ್ಲಿ ಅರ್ರುಬೂಬಿಯ್ಯದಲ್ಲಿ ಶಿರ್ಕ್ (ಅಲ್ಲಾಹನಿಗೆ ಸಹಭಾಗಿ) ಕಲ್ಪಿಸಿರುವುದು ಎಲ್ಲೂ ಕಂಡು ಬರಲು ಸಾಧ್ಯವಿಲ್ಲ. ಆದರೆ ಬಹುದೇವಾರಾಧಕರಲ್ಲಿ ಕೆಲವರು ತನ್ನ ದೇವರುಗಳು ಪ್ರಪಂಚದ ಕೆಲವು ಆಗುಹೋಗುಗಳನ್ನು ನಿಯಂತ್ರಿಸಿಕೊಳ್ಳುತ್ತಿದ್ದಾರೆ ಎಂಬ ವಿಶ್ವಾಸ ಹೊಂದಿರುವುದರಿಂದ ಶೈತಾನನು ಅವರೊಂದಿಗೆ ಕುತಂತ್ರ ಪ್ರಯೋಗಿಸಿ ಅವರ ಆರಾಧನೆಯನ್ನು ಮಾಡಿಸುತ್ತಿದ್ದಾನೆ. ಹೀಗೆ ಪ್ರತಿಯೊಂದು ಜನಸಮುದಾಯದ ನಿಲುವಿಗೆ ಹೊಂದಿಕೊಂಡು ತಂತ್ರ ಪ್ರಯೋಗಿಸಿದ್ದಾನೆ. ಕೆಲವರನ್ನು ಮೃತ ಮಹಾಪುರುಷರಿಗೆ ಆದರ ನೀಡುವ ನೆಪದಲ್ಲಿ ಅವರ ರೂಪವನ್ನು ಹೋಲುವ ವಿಗ್ರಹಗಳನ್ನು ಅವರ ಕೈಗಳಲ್ಲಿ ಉಂಟುಮಾಡಿದನು. ಇದಕ್ಕೆ ಉದಾಹರಣೆ ಪ್ರವಾದಿ ನೂಹರ ಜನಾಂಗವಾಗಿದೆ. ಇನ್ನೂ ಕೆಲವರನ್ನು ನಕ್ಷತ್ರಗಳ ರೂಪಗಳಲ್ಲಿ ವಿಗ್ರಹಗಳನ್ನೂ ಉಂಟು ಮಾಡಿಸಿದನು. ಅವರು ಪ್ರಪಂಚದ ಹಲವು ಕ್ರಿಯೆಗಳಲ್ಲಿ ಪ್ರಭಾವ ಬೀರುತ್ತಾರೆ ಎಂದು ಆ ಜನರು ನಂಬಿದ್ದರು. ಅವರಿಗಾಗಿ ಭವನಗಳನ್ನೂ, ವಸತಿಗಳನ್ನೂ ನಿರ್ಮಾಣ ಮಾಡಿದರು.

ಈ ಆಕಾಶಕಾಯಗಳನ್ನು ಆರಾಧಿಸುವುದರಲ್ಲೂ ಅವರು ಭಿನ್ನ ಭಿನ್ನ ಗುಂಪುಗಳಾಗಿ ಬಿಟ್ಟರು. ಅವರ ಪೈಕಿ ಸೂರ್ಯನನ್ನು ಆರಾಧಿಸುವವರೂ, ಚಂದ್ರನನ್ನು ಆರಾಧಿಸುವವರೂ ಇದ್ದಾರೆ. ಇವೆರಡರ ಹೊರತಾದ ಇತರ ನಕ್ಷತ್ರಗಳನ್ನು ಆರಾಧಿಸುವವರಿದ್ದಾರೆ. ಅವುಗಳಿಗೆ ವಿಶೇಷ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಅವರ ಪೈಕಿ ಅಗ್ನಿ ಆರಾಧಕರೂ, ಭಾರತದಲ್ಲಿರುವಂತೆ ಬಸವ(ದನ)ವನ್ನೂ ಆರಾಧಿಸುವವರೂ, (ದೇವದೂತ) 'ದೇವತೆ'ಗಳನ್ನು ಆರಾಧಿಸುವವರೂ, ಮರ ಕಲ್ಲುಗಳನ್ನು ಆರಾಧಿಸುವವರೂ, ಗೋರಿಗಳನ್ನು ಸಮಾಧಿಗಳನ್ನು ಆರಾಧಿಸುವವರೂ ಇದ್ದಾರೆ. ಇವುಗಳಿಗೆಲ್ಲ ಅವರು ರುಬೂಬಿಯ್ಯದ ಹಲವು ಗುಣಗಳನ್ನು ಹೊರಿಸಿರುವುದೇ ಇದಕ್ಕೆಲ್ಲಾ ಕಾರಣವಾಗಿರುತ್ತದೆ.

ಅವರ ಪೈಕಿ ಕೆಲವರು ಈ ವಿಗ್ರಹಗಳು ಕೆಲವು ಅಗೋಚರ ವಸ್ತುಗಳನ್ನು ಪ್ರತಿನಿಧಿಸುತ್ತವೆಯೆಂದು ವಾದಿಸುವವರಿದ್ದಾರೆ. ಅಲ್ಲಾಮ ಇಬ್ನುಲ್ ಕಯ್ಯಿಂ(ﷺ) ಹೇಳುತ್ತಾರೆ: **"ವಿಗ್ರಹ ಪ್ರತಿಷ್ಠಾಪನೆಯು ವಾಸ್ತವದಲ್ಲಿ ಅಗೋಚರ ಆರಾಧ್ಯನ ರೂಪವನ್ನೂ ಪ್ರತಿಷ್ಠಾಪಿಸುವುದಾಗಿರುತ್ತದೆ. ಅವನ ಸ್ಥಾನವನ್ನಲಂಕರಿಸಲೆಂದು ಅವನ ರೂಪಭಾವಗಳ ಪಡಿಯಚ್ಚನ್ನು ಅದರಲ್ಲುಂಟುಮಾಡಲಾಗುತ್ತದೆ. ಹಾಗಿಲ್ಲದಿದ್ದರೆ ಬುದ್ಧಿಯಿರುವ ಯಾವೊಬ್ಬನೂ ತನ್ನ ಕೈಯಲ್ಲಿ ನಿರ್ಮಿತವಾದ ಮರದ ಅಥವಾ ಕಲ್ಲಿನ ಮೂರ್ತಿಯು ತನ್ನ**

45 ಕುರ್‌ಆನ್ 12:39–40

**ಆರಾಧ್ಯದೈವನಾಗಲು ಸಾಧ್ಯವಿಲ್ಲವೆಂಬುದನ್ನು ಒಪ್ಪಿಕೊಳ್ಳುತ್ತಾನೆ.”** (46)

ಇದೇ ರೀತಿ ಗೋರಿ ಪೂಜಕರು ಹಿಂದಿನವರಾಗಲಿ, ಇಂದಿನವರಾಗಲಿ ಮೃತ ಮಹಾಪುರುಷರು ತಮಗೆ ಶಿಫಾರಸ್ಸು ಮಾಡುತ್ತಾರೆ, ತಮ್ಮ ಬೇಡಿಕೆಗಳನ್ನು ಈಡೇರಲು ಮಧ್ಯವರ್ತಿಯಾಗುತ್ತಾರೆ ಎಂದೆಲ್ಲಾ ನಂಬುತ್ತಾರೆ ಮತ್ತು ಹೇಳುತ್ತಾರೆ:

﴿ مَا نَعْبُدُهُمْ إِلَّا لِيُقَرِّبُونَآ إِلَى ٱللَّهِ زُلْفَىٰٓ ﴾

**“ಇವರು ನಮ್ಮನ್ನು ಅಲ್ಲಾಹನೆಡೆಗೆ ಇನ್ನಷ್ಟು ಸಮೀಪಗೊಳಿಸಲೆಂದೇ ಹೊರತು ನಾವು ಇವರನ್ನೆಲ್ಲಾ ಆರಾಧಿಸುತ್ತಿಲ್ಲ.”** (47)

﴿ وَيَعْبُدُونَ مِن دُونِ ٱللَّهِ مَا لَا يَضُرُّهُمْ وَلَا يَنفَعُهُمْ وَيَقُولُونَ هَٰٓؤُلَآءِ شُفَعَٰٓؤُنَا عِندَ ٱللَّهِ ۚ ﴾

**“ಮತ್ತು ಅವರು ಅಲ್ಲಾಹನ ಹೊರತು ತಮಗೆ ಯಾವುದೇ ತೊಂದರೆ ಕೊಡುವುದನ್ನಾಗಲಿ, ತಮಗೆ ಪ್ರಯೋಜನ ನೀಡುವುದನ್ನಾಗಲಿ ಮಾಡದಂತಹವುಗಳನ್ನು ಆರಾಧಿಸುತ್ತಾರೆ ಮತ್ತು ಹೇಳುತ್ತಾರೆ: ಇವರೆಲ್ಲ ಅಲ್ಲಾಹನ ಬಳಿ ನಮ್ಮ ಶಿಫಾರಸ್ಸುಗಾರರಾಗಿರುತ್ತಾರೆ.”** (48)

ಇದೇ ರೀತಿ ಅರಬ್‌ನ ಕೆಲವು ಬಹುದೇವಾರಾಧಕರು ಮತ್ತು ಕ್ರೈಸ್ತರು ತಮ್ಮ ದೇವರುಗಳನ್ನು ಅಲ್ಲಾಹನ ಸಂತತಿಗಳೆಂದು ಕಲ್ಪಿಸಿಕೊಂಡಿರುತ್ತಾರೆ. ಅರಬ್‌ನ ಬಹುದೇವಾರಾಧಕರು ಮಲಕ್ ದೂತರನ್ನು ದೇವತೆಗಳೆಂದೂ, ಅವರೆಲ್ಲ ಅಲ್ಲಾಹನ ಪುತ್ರಿಯರೆಂದೂ ಆರಾಧಿಸುತ್ತಾರೆ ಮತ್ತು ಕ್ರೈಸ್ತರು ಪ್ರವಾದಿ ಈಸಾ ಮಸೀಹರನ್ನು ಅಲ್ಲಾಹನ ಪುತ್ರನೆಂದು ಆರಾಧಿಸುತ್ತಾರೆ.

3. ಈ ಮಿಥ್ಯ ಕಲ್ಪನೆಗಳನ್ನು ಖಂಡಿಸುವುದು:

ಅಲ್ಲಾಹನು ಈ ಎಲ್ಲ ಮಿಥ್ಯ ಕಲ್ಪನೆಗಳನ್ನು ತಳ್ಳಿ ಹಾಕಿದ್ದಾನೆ. ಅದು ಈ ಕೆಳಗಿನಂತಿವೆ:

1. ವಿಗ್ರಹ ಪೂಜಕರ ಬಗ್ಗೆ ಖಂಡನೆ:

ಅಲ್ಲಾಹನು ಹೇಳುತ್ತಾನೆ:

﴿ أَفَرَءَيْتُمُ ٱللَّٰتَ وَٱلْعُزَّىٰ ﴿١٩﴾ وَمَنَوٰةَ ٱلثَّالِثَةَ ٱلْأُخْرَىٰٓ ﴿٢٠﴾ ﴾

**“ಇನ್ನು ನೀವು ಲಾತ, ಉಝ್ಝಾಗಳ ಬಗ್ಗೆ ಚಿಂತಿಸಿ ನೋಡಿಲ್ಲವೇ? ಮತ್ತು ಮೂರನೆಯ**

---

**46** ಇಗಾಸತುಲ್ಲಹ್ಫಾನ್ 2/220

**47** ಕುರ್‌ಆನ್ 39:3

**48** ಕುರ್‌ಆನ್ 10:18

**ಬೇರೊಬ್ಬ ಮನಾತನ ಬಗ್ಗೆಯೂ (ಚಿಂತಿಸಿಲ್ಲವೇ)?"** [49]

ಈ ಸೂಕ್ತಿಯ ಅರ್ಥವನ್ನು ಇಮಾಮ್ ಕುರ್ತುಬಿಯ ಮಾತಿನಲ್ಲೇ ತಿಳಿಯೋಣ. **"ನೀವು ಈ ಆರಾಧ್ಯ ದೈವರುಗಳ ಅವಸ್ಥೆಯ ಬಗ್ಗೆ ಚಿಂತಿಸಿ ನೋಡಿಲ್ಲವೇ? ಅಲ್ಲಾಹನ ಸಹಭಾಗಿಗಳಾಗಲು ಇವುಗಳು ಏನಾದರೂ ಪ್ರಯೋಜನವನ್ನುಂಟು ಮಾಡಿತೇ? ಅಥವಾ ಏನಾದರೂ ತೊಂದರೆಯನ್ನುಂಟು ಮಾಡೀತೇ? ಪ್ರವಾದಿ(ﷺ)ರವರೂ, ಅವರ ಅನುಯಾಯಿಗಳೂ ಅವುಗಳನ್ನೆಲ್ಲಾ ನುಚ್ಚು ನೂರು ಮಾಡುತ್ತಿದ್ದಾಗ ಅವುಗಳು ಆತ್ಮ ರಕ್ಷಣೆಯನ್ನಾದರೂ ಮಾಡಿತೇ?"**

ಮತ್ತು ಅಲ್ಲಾಹನು ಹೇಳುತ್ತಾನೆ:

﴿ وَٱتۡلُ عَلَيۡهِمۡ نَبَأَ إِبۡرَٰهِيمَ ﴿٦٩﴾ إِذۡ قَالَ لِأَبِيهِ وَقَوۡمِهِۦ مَا تَعۡبُدُونَ ﴿٧٠﴾ قَالُواْ نَعۡبُدُ أَصۡنَامًا فَنَظَلُّ لَهَا عَٰكِفِينَ ﴿٧١﴾ قَالَ هَلۡ يَسۡمَعُونَكُمۡ إِذۡ تَدۡعُونَ ﴿٧٢﴾ أَوۡ يَنفَعُونَكُمۡ أَوۡ يَضُرُّونَ ﴿٧٣﴾ قَالُواْ بَلۡ وَجَدۡنَآ ءَابَآءَنَا كَذَٰلِكَ يَفۡعَلُونَ ﴿٧٤﴾ ﴾

**"ಅವರ ಮುಂದೆ ಇಬ್ರಾಹೀಮನ ವೃತ್ತಾಂತವನ್ನು ಓದಿ ಹೇಳು. ಅವನು ತನ್ನ ತಂದೆಗೂ, ತನ್ನ ಜನರಿಗೂ ನೀವು ಆರಾಧಿಸುತ್ತಿರುವುದಾದರೂ ಏನನ್ನು? ಎಂದು ಕೇಳಿದ ಸಂದರ್ಭವನ್ನು ಸ್ಮರಿಸಿರಿ. ಅವರು ಹೇಳಿದರು: ನಾವು ವಿಗ್ರಹಗಳನ್ನು ಆರಾಧಿಸುತ್ತೇವೆ. ಹಾಗೆಯೇ ನಾವು ಅವುಗಳ ಮುಂದೆ ಧ್ಯಾನಾಸಕ್ತರಾಗಿ ಕುಳಿತುಕೊಳ್ಳುತ್ತೇವೆ. ಅವನು ಕೇಳಿದನು: ನೀವು ಕರೆಯುವಾಗ ಅವುಗಳು ನಿಮ್ಮ ಕರೆಯನ್ನು ಆಲಿಸುತ್ತವೆಯೇ ಅಥವಾ ನಿಮಗೇನಾದರೂ ಲಾಭವನ್ನು ಅಥವಾ ನಷ್ಟವನ್ನುಂಟು ಮಾಡುತ್ತಿವೆಯೇನು? ಅವರು ಹೇಳಿದರು: ಹಾಗೇನಿಲ್ಲ, ನಾವು ನಮ್ಮ ತಾತ ಮುತ್ತಾತಂದಿರು ಈ ರೀತಿ ಮಾಡುವುದನ್ನು ಕಂಡಿರುತ್ತೇವೆ."** [50]

ವಾಸ್ತವದಲ್ಲಿ ಅವರು ಈ ವಿಗ್ರಹಗಳ ಪ್ರಾರ್ಥನೆಯನ್ನು ಕೇಳುವುದಾಗಲೀ, ಲಾಭನಷ್ಟವನ್ನುಂಟು ಮಾಡುವುದಾಗಲಿ ಮಾಡುವುದಿಲ್ಲ ಎಂಬ ವಿಷಯವನ್ನು ಒಪ್ಪಿಕೊಂಡಿರುತ್ತಾರೆ ಮತ್ತು ಅವರು ತಮ್ಮ ಪೂರ್ವಿಕರನ್ನು ಅಂಧವಾಗಿ ಅನುಕರಿಸುತ್ತ ಅವುಗಳ ಆರಾಧನೆಯನ್ನು ಮಾಡುತ್ತಿದ್ದರು. ಯಾರದೇ ಅಂಧಾನುಕರಣೆಯು ಮಿಥ್ಯ ಪ್ರಮಾಣವಾಗಿದೆ.

2. ನಕ್ಷತ್ರಗಳನ್ನೂ, ಸೂರ್ಯನನ್ನೂ, ಚಂದ್ರನನ್ನೂ ಆರಾಧಿಸುವವರನ್ನು ಅಲ್ಲಾಹನು ಈ ಮಾತಿನ ಮೂಲಕ ಖಂಡಿಸುತ್ತಾನೆ:

﴿ وَٱلشَّمۡسَ وَٱلۡقَمَرَ وَٱلنُّجُومَ مُسَخَّرَٰتِۭ بِأَمۡرِهِۦٓۗ ﴾

**49** ಕುರ್‌ಆನ್ 53:19–20

**50** ಕುರ್‌ಆನ್ 26:69–74

**"ಮತ್ತು ಸೂರ್ಯನನ್ನೂ, ಚಂದ್ರನನ್ನೂ, ನಕ್ಷತ್ರಗಳನ್ನೂ ಅವನ ಆದೇಶಗಳಿಗೆ ವಿಧೇಯರಾಗಿರುವ ಸ್ಥಿತಿಯಲ್ಲಿ ಸೃಷ್ಟಿಸಿರುತ್ತಾನೆ."** (51)

ಮತ್ತು ಅವನು ಹೇಳುತ್ತಾನೆ:

﴿ وَمِنْ ءَايَـٰتِهِ ٱلَّيْلُ وَٱلنَّهَارُ وَٱلشَّمْسُ وَٱلْقَمَرُ ۚ لَا تَسْجُدُوا۟ لِلشَّمْسِ وَلَا لِلْقَمَرِ وَٱسْجُدُوا۟ لِلَّهِ ٱلَّذِى خَلَقَهُنَّ إِن كُنتُمْ إِيَّاهُ تَعْبُدُونَ ﴿٣٧﴾ ﴾

**"ಮತ್ತು ರಾತ್ರಿಯೂ, ಹಗಲೂ, ಸೂರ್ಯನೂ, ಚಂದ್ರನೂ ಅವನ ದೃಷ್ಟಾಂತಗಳಲ್ಲಿ ಸೇರಿವೆ. ನೀವು ಸೂರ್ಯನಿಗಾಗಲೀ, ಚಂದ್ರನಿಗಾಗಲೀ ಸಾಷ್ಟಾಂಗ ಮಾಡಬೇಡಿರಿ. ನಿವು ಅವುಗಳನ್ನು ಸೃಷ್ಟಿಮಾಡಿದ ಅಲ್ಲಾಹನಿಗೆ ಸಾಷ್ಟಾಂಗ ಮಾಡಿರಿ; ನೀವು ಅವನನ್ನೇ ಆರಾಧಿಸುವವರಾಗಿದ್ದರೆ."** (52)

3. ಮಲಕ್, ದೇವತೆಗಳನ್ನೂ ಪ್ರವಾದಿ ಈಸಾ(عليه السلام)ರನ್ನೂ ಅವರು ಅಲ್ಲಾಹನ ಸಂತತಿಗಳೆಂದು ಆರಾಧಿಸುವವರನ್ನೂ ಅಲ್ಲಾಹನು ತನ್ನ ಈ ಮಾತುಗಳ ಮೂಲಕ ಖಂಡಿಸುತ್ತಾನೆ:

﴿ مَا ٱتَّخَذَ ٱللَّهُ مِن وَلَدٍ ﴾

**"ಅಲ್ಲಾಹನು ಯಾವೊಬ್ಬ ಪುತ್ರನನ್ನು ಮಾಡಿಕೊಂಡಿಲ್ಲ."** (53)

ಮತ್ತೊಂದೆಡೆ ಹೇಳುತ್ತಾನೆ:

﴿ أَنَّىٰ يَكُونُ لَهُۥ وَلَدٌ وَلَمْ تَكُن لَّهُۥ صَـٰحِبَةٌ ﴾

**"ಅವನಿಗೆ ಪುತ್ರನಾಗುವುದಾದರೂ ಹೇಗೆ? ವಸ್ತುತಃ ಅವನಿಗೆ ಜೊತೆಗಾರ್ತಿಯರೂ ಇಲ್ಲ."** (54)

ಇನ್ನೊಂದೆಡೆ ಹೇಳುತ್ತಾನೆ:

﴿ لَمْ يَلِدْ وَلَمْ يُولَدْ ﴿٣﴾ وَلَمْ يَكُن لَّهُۥ كُفُوًا أَحَدٌۢ ﴿٤﴾ ﴾

**"ಅವನು ಯಾರಿಗೂ ಜನ್ಮ ನೀಡಿಲ್ಲ ಮತ್ತು ಸ್ವತಃ ಅವನು ಯಾರಿಂದಲೂ ಜನಿಸಿದವನಲ್ಲ ಮತ್ತು ಅವನಿಗೆ ಸರಿಸಮಾನರಾಗಿ ಯಾರೂ ಇಲ್ಲ."** (55)

**51** ಕುರ್‌ಆನ್ 7:54
**52** ಕುರ್‌ಆನ್ 41:37
**53** ಕುರ್‌ಆನ್ 23:91
**54** ಕುರ್‌ಆನ್ 6:101
**55** ಕುರ್‌ಆನ್ 112:3–4

## ಅಧ್ಯಾಯ–3

# ಅಲ್ಲಾಹನೆಡೆಗೆ ಈ ವಿಶ್ವ ಹಾಗೂ ಅದರ ಸ್ವಾಭಾವಿಕ ವ್ಯವಸ್ಥೆಗಳ ಶರಣಾಗತಿ ಹಾಗೂ ವಿಧೇಯತೆ

ಭೂಮ್ಯಾಕಾಶಗಳಲ್ಲಿರುವ ಸೃಷ್ಟಿಗಳು ಅಂದರೆ ನಕ್ಷತ್ರಗಳು, ಆಕಾಶ ಕಾಯಗಳು, ಸಮುದ್ರ, ಮಲಕ್‌ದೂತರು, ಜಿನ್ನ್ ಹಾಗೂ ಮನುಷ್ಯವರ್ಗ ಇವುಗಳೆಲ್ಲವೂ ಅಲ್ಲಾಹನಿಗೆ ಶರಣಾಗತವಾಗಿವೆ. ಅವನ ಸಾರ್ವತ್ರಿಕ ಆದೇಶಕ್ಕೆ ವಿಧೇಯವಾಗಿವೆ. ಸರ್ವೋನ್ನತನಾದ ಅವನು ಹೇಳಿರುವನು:

﴿ وَلَهُۥٓ أَسۡلَمَ مَن فِي ٱلسَّمَٰوَٰتِ وَٱلۡأَرۡضِ طَوۡعٗا وَكَرۡهٗا ﴾

**“ಆಕಾಶಗಳು ಮತ್ತು ಭೂಮಿಯ ಸರ್ವವಸ್ತುಗಳು ಬಯಸಿಯೋ, ಬಯಸದೆಯೋ ಅಲ್ಲಾಹನಿಗೆ ಅಧೀನವಾಗಿಯೇ ಇವೆ.”** (56)

﴿ بَل لَّهُۥ مَا فِي ٱلسَّمَٰوَٰتِ وَٱلۡأَرۡضِۖ كُلّٞ لَّهُۥ قَٰنِتُونَ ١١٦ ﴾

**“ಇಲ್ಲ, ಭೂಮಿ ಆಕಾಶಗಳಲ್ಲಿರುವುದೆಲ್ಲ ಅವನಿಗೇ ಸೇರಿದ್ದು ಮತ್ತು ಸರ್ವವೂ ಅವನಿಗೆ ವಿಧೇಯತೆಯೊಂದಿಗೆ ಶರಣಾಗುತ್ತದೆ.”** (57)

﴿ أَلَمۡ تَرَ أَنَّ ٱللَّهَ يَسۡجُدُۤ لَهُۥ مَن فِي ٱلسَّمَٰوَٰتِ وَمَن فِي ٱلۡأَرۡضِ وَٱلشَّمۡسُ وَٱلۡقَمَرُ وَٱلنُّجُومُ وَٱلۡجِبَالُ وَٱلشَّجَرُ وَٱلدَّوَآبُّ وَكَثِيرٞ مِّنَ ٱلنَّاسِۖ ﴾

**“ಆಕಾಶಗಳಲ್ಲಿಯೂ, ಭೂಮಿಯಲ್ಲಿಯೂ ಇರುವ ಸರ್ವವೂ ಸೂರ್ಯ, ಚಂದ್ರ, ನಕ್ಷತ್ರಗಳೂ, ಪರ್ವತಗಳೂ, ಮರಗಳೂ ಮತ್ತು ಅನೇಕ ಮನುಷ್ಯರೂ ಅಲ್ಲಾಹನಿಗೆ ಸಾಷ್ಟಾಂಗ ವೆರಗುತ್ತಿರುವುದನ್ನು ನೀವು ನೋಡುವುದಿಲ್ಲವೇ?”** (58)

﴿ وَلِلَّهِ يَسۡجُدُۤ مَن فِي ٱلسَّمَٰوَٰتِ وَٱلۡأَرۡضِ طَوۡعٗا وَكَرۡهٗا وَظِلَٰلُهُم بِٱلۡغُدُوِّ وَٱلۡأٓصَالِ۩ ١٥ ﴾

**“ಆಕಾಶಗಳಲ್ಲೂ, ಭೂಮಿಯುಲ್ಲೂ ಇರುವ ಪ್ರತಿಯೊಂದು ವಸ್ತುವೂ ಇಚ್ಛಾಪೂರ್ವಕವಾಗಿಯೋ, ಅನಿಚ್ಛಾಪೂರ್ವಕವಾಗಿಯೋ ಅಲ್ಲಾಹನಿಗೆ ಸಾಷ್ಟಾಂಗವೆರಗುತ್ತಿರುವವು ಮತ್ತು ವಸ್ತುಗಳ ನೆರಳುಗಳು ಬೆಳಗು ಬೈಗುಗಳಲ್ಲಿ ಅಲ್ಲಾಹನಿಗೆ ಸಾಷ್ಟಾಂಗ ಮಾಡುತ್ತಿರುತ್ತವೆ.”** (59)

---

**56** ಕುರ್‌ಆನ್ 3:83
**57** ಕುರ್‌ಆನ್ 2:116
**58** ಕುರ್‌ಆನ್ 22:18
**59** ಕುರ್‌ಆನ್ 13:15

ಹೀಗೆ, ಈ ಎಲ್ಲಾ ವಿಶ್ವಗಳು ಮತ್ತು ಜಗತ್ತುಗಳು ಅಲ್ಲಾಹನಿಗೆ ವಿಧೇಯವಾಗಿದೆ ಹಾಗೂ ಆತನ ಪರಮೋನ್ನತಿಗೆ ಶರಣಾಗಿವೆ. ಅವುಗಳು ಆತನ ಇಚ್ಛೆಗೆ ಅನುಗುಣವಾಗಿ ಮತ್ತು ಆತನ ಆದೇಶಕ್ಕೆ ಅನುಗುಣವಾಗಿ ಮುಂದುವರಿಯುತ್ತಿರುತ್ತವೆ ಹಾಗೂ ಯಾವುದೂ ಕೂಡಾ ಈ ಯಾವುದೇ ವಿಷಯಗಳಲ್ಲಿ ಆತನ ಆಜ್ಞೋಲ್ಲಂಘನೆ ಮಾಡುವುದಿಲ್ಲ. ಅವುಗಳು ತಮ್ಮ ಕರ್ತವ್ಯಗಳನ್ನು ಪಾಲಿಸಲು ಸಂಸ್ಥಾಪಿಸುತ್ತವೆ ಮತ್ತು ತಮ್ಮ ಪಾತ್ರಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತವೆ ಮತ್ತು ಅವುಗಳು ತಮ್ಮ ಸೃಷ್ಟಿಕರ್ತನನ್ನು ಕೊರತೆಗಳಿಂದ, ದೌರ್ಬಲ್ಯಗಳಿಂದ ಹಾಗೂ ಲೋಪಗಳಿಂದೆಲ್ಲ ಪವಿತ್ರಗೊಳಿಸುತ್ತವೆ.

ಸರ್ವೋನ್ನತನಾದ ಅವನು ಹೀಗೆಂದನು:

﴿ تُسَبِّحُ لَهُ ٱلسَّمَٰوَٰتُ ٱلسَّبۡعُ وَٱلۡأَرۡضُ وَمَن فِيهِنَّۚ وَإِن مِّن شَيۡءٍ إِلَّا يُسَبِّحُ بِحَمۡدِهِۦ وَلَٰكِن لَّا تَفۡقَهُونَ تَسۡبِيحَهُمۡۗ ﴾

**“ಏಳು ಆಕಾಶಗಳು ಮತ್ತು ಭೂಮಿಯೂ ಅವುಗಳಲ್ಲಿರುವ ಸಕಲ ವಸ್ತುಗಳೂ ಪಾವಿತ್ರ್ಯವನ್ನು ಕೊಂಡಾಡುತ್ತಿವೆ. ಆತನ ಸ್ತುತಿಯನ್ನು ಪವಿತ್ರಗೊಳಿಸದ ಯಾವೊಂದೂ ಇಲ್ಲ. ಆದರೆ ನೀವು ಅವುಗಳ ಪ್ರಕೀರ್ತನೆಯನ್ನು ಅರಿಯುವುದಿಲ್ಲ.”** (60)

ಹೀಗೆ ಎಲ್ಲಾ ಸೃಷ್ಟಿಗಳು ಮಾತನಾಡುವ ಹಾಗೂ ಮೂಕ, ಜೀವ ಹಾಗೂ ನಿರ್ಜೀವ ಎಲ್ಲವೂ ಅಲ್ಲಾಹನಿಗೆ ವಿಧೇಯವಾಗಿದೆ ಹಾಗೂ ಆತನ ಸಾರ್ವತ್ರಿಕ ಆಜ್ಞೆಗೆ ವಿಧೇಯವಾಗಿದೆ. ಎಲ್ಲವೂ ಅಲ್ಲಾಹನನ್ನು ಕೊರತೆಗಳಿಂದ ಹಾಗೂ ಲೋಪಗಳಿಂದ ನಿಶ್ಯಬ್ದವಾಗಿಯೂ ಹಾಗೂ ಜೋರಾಗಿಯೂ ಅವನನ್ನು ಪವಿತ್ರಗೊಳಿಸುತ್ತವೆ. ಆದ್ದರಿಂದ ಒಬ್ಬ ಬುದ್ಧಿವಂತ ಮನುಷ್ಯನು ಸೃಷ್ಟಿಗಳ ಕುರಿತು ಪರ್ಯಾಲೋಚಿಸಿದರೆ ಇವುಗಳೆಲ್ಲವೂ ಸತ್ಯದೊಂದಿಗೆ ಹಾಗೂ ಸತ್ಯಕ್ಕಾಗಿ ಸೃಷ್ಟಿಸಲ್ಪಟ್ಟಿದೆ ಎಂದು ಅವನಿಗೆ ಮನದಟ್ಟಾಗುವುದು ಮತ್ತು ಇವುಗಳು ಇವುಗಳೆಲ್ಲವನ್ನು ನಿಯಂತ್ರಿಸುತ್ತಿರುವ ಒಬ್ಬನ ಸ್ವಾಧೀನದಲ್ಲಿದೆ ಮತ್ತು ಇವುಗಳು ಅವನ ಆಜ್ಞೆಯನ್ನು ಉಲ್ಲಂಘಿಸಲು ಅಥವಾ ಅವನಿಂದ ದೂರ ಸರಿಯಲು ಸಾಧ್ಯವಿಲ್ಲ ಎಂಬುದು ಅವನಿಗೆ ಅರಿವಾಗುವುದು. ಈ ಸ್ವಾಭಾವಿಕ ವ್ಯವಸ್ಥೆಯಿಂದಾಗಿ ಪ್ರತಿಯೊಬ್ಬ ಹಾಗೂ ಪ್ರತಿಯೊಂದೂ ತಮ್ಮ ಸೃಷ್ಟಿಕರ್ತನನ್ನು ದೃಢೀಕರಿಸುತ್ತವೆ.

ಶೈಖುಲ್ ಇಸ್ಲಾಮ್ ಇಬ್ನ್ ತೈಮಿಯ್ಯ ಹೇಳಿದ್ದಾರೆ: **“ಅವುಗಳು ಬಹುತೇಕ ರೀತಿಯಲ್ಲಿ ವಿನಯಶೀಲ, ಆಜ್ಞಾಪಾಲಕ ವಿಧೇಯ ಹಾಗೂ ಕರ್ತವ್ಯ ಪಾಲಕಗಳಾಗಿವೆ. ಅವುಗಳಲ್ಲಿ ತಮಗೆ ಆತನ ಅಗತ್ಯವಿರುವುದನ್ನು ಒಪ್ಪುವುದೂ ಒಂದು. ನಾವು ಕಾಣುವ ದೈವಿಕವಾದ ಆದೇಶ ಹಾಗೂ ಇಚ್ಛೆಯೆಡೆಗೆ ತಮ್ಮ ದೈನ್ಯತೆ ಹಾಗೂ ಸಮರ್ಪಣಾ ಮನೋಭಾವ ಮತ್ತು ಸಂಕಷ್ಟದ ಸಮಯದಲ್ಲಿ ಆತನೊಡನೆ ಮಾತ್ರ ಪ್ರಾರ್ಥನೆ. ಇವುಗಳು ಸೇರಿವೆ.**

---

**60** ಕುರ್‌ಆನ್ 17:44

**ಒಬ್ಬ ಸತ್ಯವಿಶ್ವಾಸಿಯು ತನ್ನ ಮೇಲೆ ಎರಗಿದ ಸಂಕಷ್ಟದ ಸಮಯದಲ್ಲಿ ಹಾಗೂ ಇತರ ಸಮಯಗಳಲ್ಲೂ ತನ್ನ ಎಲ್ಲಾ ಸಮಯದಲ್ಲೂ ತನ್ನ ಕಾರ್ಯಗಳನ್ನು ವಿಧೇಯಪೂರ್ವಕವಾಗಿ ಅಲ್ಲಾಹನಲ್ಲಿ ಬೇಡಿಕೊಳ್ಳುತ್ತಾನೆ. ಆದ್ದರಿಂದ ಅವನಿಗೆ ಯಾವುದಾದರೂ ಸಂಕಷ್ಟವೆರಗಿದಾಗ ಅವನು ಸಹನಾಶೀಲನಾಗಿ ಅಲ್ಲಾಹನಿಗೆ ಮೊರೆ ಹೋಗುತ್ತಾನೆ ಮತ್ತು ಅವನೊಂದಿಗೆ ವಿಧೇಯಪೂರ್ವಕವಾಗಿ ಬೇಡಿಕೊಳ್ಳುತ್ತಾನೆ."** [61]

ಸತ್ಯನಿಷೇಧಿಯಾದರೋ ತಾನು ಅಲ್ಲಾಹನ ಸಾರ್ವತ್ರಿಕ ಆದೇಶಕ್ಕೆ ತನ್ನನ್ನು ಸಮರ್ಥಿಸಿಕೊಳ್ಳುತ್ತಾನೆ. ಈ ವಿಶ್ವದ ಸಾಷ್ಟಾಂಗವೆರಗುವುದೆಂಬ ಅರ್ಥವು ಅದರ ದೈನ್ಯತೆಯಾಗಿದೆ. ಪ್ರತಿಯೊಂದು ಕೂಡಾ ತನಗೆ ಸೂಕ್ತವಾದ ರೀತಿಯಲ್ಲಿ ಆತನಿಗೆ ಸಾಷ್ಟಾಂಗವೆರಗುತ್ತದೆ ಮತ್ತು ಜಗದೊಡೆಯನೆಡೆಗೆ ದೈನ್ಯತೆಯನ್ನು ತೋರಿಸುತ್ತದೆ ಮತ್ತು ಪ್ರತಿಯೊಂದು ವಸ್ತುಗಳ ತಸ್ಬೀಹ್ (ಪರಕೀರ್ತನೆ) ಅವುಗಳಿಗೆ ಸಾಧ್ಯವಾದ ರೀತಿಯಲ್ಲಿ ಇರುತ್ತದೆ. ಇದು ಕೇವಲ ಅಲಂಕಾರಿಕವಾಗಿರದೇ ನೈಜವಾಗಿರುತ್ತದೆ.

ಸರ್ವೋನ್ನತನ ಮಾತು ಹೀಗಿದೆ:

﴿ أَفَغَيۡرَ دِينِ ٱللَّهِ يَبۡغُونَ وَلَهُۥٓ أَسۡلَمَ مَن فِي ٱلسَّمَٰوَٰتِ وَٱلۡأَرۡضِ طَوۡعٗا وَكَرۡهٗا وَإِلَيۡهِ يُرۡجَعُونَ ٨٣ ﴾

**"ಆಕಾಶಗಳ ಮತ್ತು ಭೂಮಿಯ ಸಕಲ ವಸ್ತುಗಳು ಬಯಸಿಯೋ, ಬಯಸದೆಯೋ ಅಲ್ಲಾಹನಿಗೆ ಶರಣಾಗಿಯೇ ಇರುವಾಗ, ಇವರು ಅಲ್ಲಾಹನ ಧರ್ಮದ ಹೊರತು ಇತರ ಧರ್ಮವನ್ನು ಬಯಸುತ್ತಾರೆಯೇ? ಅವರು, ಅವೆಲ್ಲವೂ ಅವನೆಡೆಗೆ ಮರಳಲಿಕ್ಕಿವೆ."** [62]

ಇದರ ಕುರಿತು ಶೈಖುಲ್ ಇಸ್ಲಾಮ್ ಇಬ್ನು ತೈಮಿಯ್ಯ ಹೀಗೆಂದಿದ್ದಾರೆ: **"ಎಲ್ಲಾ ಲೋಪದೋಷಗಳೀಂದ ಮುಕ್ತನಾದ ಅವನು ಈ ವಿಶ್ವದ ಬಯಸಿಯೋ ಬಯಸದೆಯೋ ನಡೆಯುವ ಶರಣಾಗತಿಯನ್ನು ಹೇಳುತ್ತಾನೆ. ಈ ಜಗತ್ತಿನ ಎಲ್ಲಾ ಸೃಷ್ಟಿಗಳೂ ಅವರು ಒಪ್ಪಿಕೊಳ್ಳಲಿ ಅಥವಾ ನಿಷೇಧಿಸಲಿ ಸಂಪೂರ್ಣ ರೀತಿಯಲ್ಲಿ ಅಲ್ಲಾಹನನ್ನು ಆರಾಧಿಸುತ್ತವೆ. ಅವೆಲ್ಲವೂ ಅವನಿಂದ ನಿಯಂತ್ರಿಸಲ್ಪಟ್ಟಿರುವುದರಿಂದ ಇಚ್ಛಾಪೂರ್ವಕವಾಗಿಯೋ, ಅನಿಚ್ಛಾಪೂರ್ವಕವಾಗಿಯೋ ಅವನಿಗೆ ಶರಣಾಗುತ್ತದೆ. ಆತನ ಸೃಷ್ಟಿಯಲ್ಲಿ ಆತನ ಇಚ್ಛೆ ಮತ್ತು ಆದೇಶಕ್ಕೆ ಒಳಪಡದ ಯಾವೊಂದೂ ಇಲ್ಲ. ಅವನಿಂದಲ್ಲದೇ ಯಾವುದೇ ಸಾಮರ್ಥ್ಯ ಮತ್ತು ಶಕ್ತಿ ಇಲ್ಲ. ಅವನು ಅವುಗಳೆಲ್ಲದರ ಪ್ರಭು ಹಾಗೂ ಸೃಷ್ಟಿಕರ್ತ, ರೂಪ ನೀಡುವವನು ಮತ್ತು ಅವನ ಹೊರತು ಎಲ್ಲವೂ ಒಂದು ಸ್ವಾಭಾವಿಕ ವ್ಯವಸ್ಥೆಯಡಿ ಆತನ ಪ್ರಭುತ್ವದ ಅಡಿಯಲ್ಲಿದೆ. ಎಲ್ಲವೂ ಬಡ ಹಾಗೂ ಆತನ ಪ್ರಾರ್ಥನೆಯ ಅಗತ್ಯವುಳ್ಳವುಗಳು. ಆತನ ಶಕ್ತಿಯ ಅಡಿಯಲ್ಲಿ**

**61** ಮಜ್ಮೂಉಲ್ ಫತಾವಾ 1/45

**62** ಕುರ್‌ಆನ್ 3:83

**ಇರುವುವು ಮತ್ತು ಅವನು ಎಲ್ಲಾ ಕುಂದು ಕೊರತೆಗಳಿಂದ ಮುಕ್ತನಾಗಿರುವನು. ಅವನು ಅನಿಯಂತ್ರಿತನು, ಸಂಪೂರ್ಣ ಶಕ್ತಿವಂತನು, ಎಲ್ಲಾ ವಸ್ತುಗಳ ಸೃಷ್ಟಿಕರ್ತನು, ಆಕಾರವನ್ನು ನೀಡುವವನು.”** [63]

## ಅಧ್ಯಾಯ–4

# ಸೃಷ್ಟಿಕರ್ತನ ಅಸ್ತಿತ್ವವನ್ನು ಹಾಗೂ ಆತನ ಏಕತೆಯನ್ನು ದೃಢೀಕರಿಸುವ ಕುರ್‌ಆನ್‌ನ ವಿಧಾನ

ಸೃಷ್ಟಿಕರ್ತನ ಅಸ್ತಿತ್ವವನ್ನು ಹಾಗೂ ಆತನ ಏಕತೆಯನ್ನು ದೃಢೀಕರಿಸುವ ಕುರ್‌ಆನ್‌ನ ವಿಧಾನವು ಸರಿಯಾದ ಸ್ವಾಭಾವಿಕ ಕ್ರಮ ಹಾಗೂ ಸುದೃಢ ವಿವೇಕಕ್ಕೆ ತಕ್ಕುದಾದ ರೀತಿಯಲ್ಲಿದೆ. ಸುಸ್ಪಷ್ಟ ಆಧಾರ ಪ್ರಮಾಣಗಳನ್ನು ನೀಡುವುದರ ಮೂಲಕ ಮಾತ್ರ ಇದು ಸಾಧ್ಯ. ಇದರಿಂದ ಮನುಷ್ಯನ ಬುದ್ಧಿಗೆ ಮನದಟ್ಟಾಗುತ್ತದೆ ಮತ್ತು ವಿರೋಧಿಗಳು ಸೋಲನ್ನನುಭವಿಸುತ್ತಾರೆ. ಅವುಗಳಲ್ಲಿ:

ಒಂದು:

ಪ್ರತಿಯೊಂದು ಸಂಭವಕ್ಕೂ ಒಂದು ಕಾರಣವಿರಬೇಕೆಂಬುದು ಎಲ್ಲರಿಗೂ ತಿಳಿದಿರುವಂತಹದು. ಈ ನೈಸರ್ಗಿಕ ವ್ಯವಸ್ಥೆಯಲ್ಲಿ ಎಲ್ಲರಿಗೂ ತಿಳಿದಿರಲೇಬೇಕಾದ ವಿಷಯ. ಇದು ಚಿಕ್ಕ ಮಕ್ಕಳಿಗೂ ಗೊತ್ತಿದೆ. ಉದಾಹರಣೆಗೆ ಒಂದು ಮಗುವಿಗೆ ಯಾರಾದರೊಬ್ಬ ಒಂದು ಪೆಟ್ಟು ಕೊಟ್ಟು ಆ ಮಗುವಿಗೆ ಕಾಣದಂತೆ ಅಡಗಿ ಕೂತರೆ ತನಗೆ ಯಾರು ಹೊಡೆದರು? ಎಂದು ಆ ಮಗು ಕೇಳುವುದು. ಆಗ ಯಾರಾದರೂ 'ನಿನಗೆ ಯಾರೂ ಹೊಡೆಯಲಿಲ್ಲ' ಎಂದು ಆ ಮಗುವಿಗೆ ಹೇಳಿದರೆ ಆ ಮಗುವಿನ ವಿವೇಕವು ಆಕಸ್ಮಿಕವಾಗಿಯೇ ತನಗೆ ಹೊಡೆತ ಬಿತ್ತು ಎಂಬುದನ್ನು ಎಂದಿಗೂ ಒಪ್ಪಿಕೊಳ್ಳದಿರಲಾರದು. ಆದ್ದರಿಂದ ಸರ್ವೋನ್ನತನು ಹೀಗೆ ಹೇಳಿದ್ದಾನೆ:

﴿ أَمۡ خُلِقُواْ مِنۡ غَيۡرِ شَيۡءٍ أَمۡ هُمُ ٱلۡخَٰلِقُونَ ٣٥ ﴾

**“ಅವರು ಶೂನ್ಯದಿಂದ ಸೃಷ್ಟಿಸಲ್ಪಟ್ಟಿರುವರೇ ಅಥವಾ ಅವರು ತಮ್ಮನ್ನು ತಾವೇ ಸೃಷ್ಟಿಸಿಕೊಂಡಿರುವರೇ?”** [64]

ಇದು ಪರಿಮಿತವಾದ ವಿಂಗಡನೆಯಾಗಿದೆ. ಈ ವಿಷಯಗಳು ಅಗತ್ಯವಾಗಿ ಅರಿತಿರಬೇಕೆಂದು ಮತ್ತು ಇದನ್ನು ನಿರಾಕರಿಸುವುದು ಸಾಧ್ಯವಿಲ್ಲವೆಂದು ಸೂಚಿಸಲು

---

**63** ಮಜ್ಮೂಉಲ್ ಫತಾವಾ 10/200

**64** ಕುರ್‌ಆನ್ 52:35

ಅಲ್ಲಾಹನು ಪ್ರಶ್ನಾರ್ಥಕವಾಗಿ ನೆನಪಿಸಿದ್ದಾನೆ. ಅತ್ಯುನ್ನತನಾದ ಅವನು ಹೇಳುತ್ತಾನೆ:

﴿ أَمْ خُلِقُوا۟ مِنْ غَيْرِ شَىْءٍ ﴾

**"ಅವರು ಶೂನ್ಯದಿಂದ ಸೃಷ್ಟಿಸಲ್ಪಟ್ಟಿರುವರೇ?"** (65)

ಅರ್ಥಾತ್, ಅವರನ್ನು ಯಾವುದೇ ಸೃಷ್ಟಿಕರ್ತನು ಸೃಷ್ಟಿಸಿಲ್ಲ ಅಥವಾ ಅವರು ತಮ್ಮನ್ನು ತಾವೇ ಸೃಷ್ಟಿಸಿಕೊಂಡಿದ್ದಾರೆ ಎಂಬ ಎರಡೂ ಅಂಶಗಳೂ ತಪ್ಪು. ಆದ್ದರಿಂದ ಅವರಿಗೆ ತಮ್ಮನ್ನು ಸೃಷ್ಟಿಸಿದ ಸೃಷ್ಟಿಕರ್ತನೊಬ್ಬ ಇರಲೇಬೇಕು. ಅವನೇ ಅಲ್ಲಾಹು ಎಲ್ಲಾ ಕುಂದುಕೊರತೆಗಳಿಂದ ಮುಕ್ತನಾದವನು ಮತ್ತು ಅವನಲ್ಲದೆ ಬೇರಾವ ಸೃಷ್ಟಿಕರ್ತನೂ ಇಲ್ಲ.

ಸರ್ವೋನ್ನತನಾದ ಅಲ್ಲಾಹು ಹೇಳುತ್ತಾನೆ:

﴿ هَٰذَا خَلْقُ ٱللَّهِ فَأَرُونِى مَاذَا خَلَقَ ٱلَّذِينَ مِن دُونِهِۦ ﴾

**"ಇದು ಅಲ್ಲಾಹನ ಸೃಷ್ಟಿ. ಈಗ ಅವನ ಹೊರತು (ನೀವು ಆರಾಧಿಸುವ) ಇತರರು ಏನನ್ನು ಸೃಷ್ಟಿಸಿದ್ದಾರೆಂಬುದನ್ನು ನನಗೆ ತೋರಿಸಿರಿ."** (66)

﴿ أَرُونِى مَاذَا خَلَقُوا۟ مِنَ ٱلْأَرْضِ ﴾

**"ಭೂಮಿಯ ಏನನ್ನು ಅವರು ಸೃಷ್ಟಿಸಿದ್ದಾರೆ?"** (67)

ಅಲ್ಲಾಹನು ಸೃಷ್ಟಿಸಿದಂತಹವುಗಳನ್ನು ಸೃಷ್ಟಿಸಿದವರನ್ನು ಇವರ ಸೃಷ್ಟಿಯು ಆತನ ಸೃಷ್ಟಿಯಂತೆ ಕಾಣುವವುಗಳನ್ನು ಇವರು ಭಾಗೀದಾರರನ್ನಾಗಿ ಮಾಡುತ್ತಿರುವರೇ? ಹೇಳಿರಿ.

﴿ أَمْ جَعَلُوا۟ لِلَّهِ شُرَكَآءَ خَلَقُوا۟ كَخَلْقِهِۦ فَتَشَٰبَهَ ٱلْخَلْقُ عَلَيْهِمْ ۚ قُلِ ٱللَّهُ خَٰلِقُ كُلِّ شَىْءٍ وَهُوَ ٱلْوَٰحِدُ ٱلْقَهَّٰرُ ﴿١٦﴾ ﴾

**"ಅಲ್ಲಾಹನು ಸರ್ವವಸ್ತುಗಳ ಸೃಷ್ಟಿಕರ್ತನು. ಅವನು ಏಕೈಕನೂ, ದಮನಿಸುವವನೂ ಆಗಿರುತ್ತಾನೆ."** (68)

﴿ إِنَّ ٱلَّذِينَ تَدْعُونَ مِن دُونِ ٱللَّهِ لَن يَخْلُقُوا۟ ذُبَابًا وَلَوِ ٱجْتَمَعُوا۟ لَهُۥ ﴾

**"ನೀವು ಅಲ್ಲಾಹನನ್ನು ಬಿಟ್ಟು ಯಾರನ್ನೆಲ್ಲ ಪ್ರಾರ್ಥಿಸುತ್ತೀರೋ ಅವರು ಒಂದು ನೊಣ(ವನ್ನು ಕೂಡಾ) ಸೃಷ್ಟಿಸಲಾರರು. ಇದಕ್ಕಾಗಿ ಅವರೆಲ್ಲರೂ ಒಟ್ಟುಗೂಡಿದರೂ**

---

**65** ಕುರ್‌ಆನ್ 52:35
**66** ಕುರ್‌ಆನ್ 31:11
**67** ಕುರ್‌ಆನ್ 46:4
**68** ಕುರ್‌ಆನ್ 13:16

**ಸರಿಯೇ." (69)**

﴿ وَٱلَّذِينَ يَدۡعُونَ مِن دُونِ ٱللَّهِ لَا يَخۡلُقُونَ شَيۡـٔٗا وَهُمۡ يُخۡلَقُونَ ٢٠ ﴾

**"ಅಲ್ಲಾಹನ ಹೊರತು ಅವರು ಯಾರನ್ನೂ ಕರೆದು ಪ್ರಾರ್ಥಿಸುತ್ತಿರುವರೋ ಅವರು ಯಾವುದನ್ನೂ ಸೃಷ್ಟಿಸಿಲ್ಲ. ಅವರೋ ಸ್ವತಃ ಸೃಷ್ಟಿಸಲ್ಪಟ್ಟವರಾಗಿರುವರು." (70)**

﴿ أَفَمَن يَخۡلُقُ كَمَن لَّا يَخۡلُقُۚ أَفَلَا تَذَكَّرُونَ ١٧ ﴾

**"ಹಾಗಿರುವಾಗ ಸೃಷ್ಟಿಸುವವನು ಏನನ್ನೂ ಸೃಷ್ಟಿಸಿದವನ ಹಾಗೆಯೆ? ನೀವು ಸ್ಮರಿಸುವುದಿಲ್ಲವೇ?" (71)**

ಇಷ್ಟೆಲ್ಲಾ ಸವಾಲೊಡ್ಡಿಯೂ ಕೂಡಾ, ಯಾರೂ ಕೂಡಾ ತಾವು ಯಾವುದನ್ನಾದರೂ ಸೃಷ್ಟಿಸಿದ್ದೇವೆಂದು ವಾದಿಸುವುದಿಲ್ಲ. ಆದ್ದರಿಂದ ಅಲ್ಲಾಹನೇ ಸೃಷ್ಟಿಕರ್ತನು ಹಾಗೂ ಅವನಿಗೆ ಭಾಗೀದಾರರಿಲ್ಲ ಎಂಬುದು ವ್ಯಕ್ತವಾಗುತ್ತದೆ.

ಎರಡು:

ಈ ಜಗತ್ತಿನ ಎಲ್ಲಾ ವಿಷಯಗಳ ಸಂಯೋಜನೆ ಹಾಗೂ ಅದರ ಅತ್ಯಂತ ಕ್ರಮಬದ್ಧ ನಿರ್ವಹಣೆ ಎಲ್ಲಾ ಆಧಾರಗಳೂ ಕೂಡಾ ಈ ಜಗತ್ತಿನ ವ್ಯವಹಾರಗಳನ್ನು ನಿಯಂತ್ರಿಸಿರುವವ ಒಬ್ಬನೇ ದೇವನು ಹಾಗೂ ಒಬ್ಬನೇ ಪ್ರಭು, ಅವನಿಗೆ ಯಾವುದೇ ಭಾಗೀದಾರರಿಲ್ಲ ಎಂಬುದನ್ನು ತೋರಿಸುತ್ತವೆ. ಸರ್ವೋನ್ನತನಾದ ಅವನು ಹೇಳಿದನು:

﴿ مَا ٱتَّخَذَ ٱللَّهُ مِن وَلَدٖ وَمَا كَانَ مَعَهُۥ مِنۡ إِلَٰهٍۚ إِذٗا لَّذَهَبَ كُلُّ إِلَٰهِۭ بِمَا خَلَقَ وَلَعَلَا بَعۡضُهُمۡ عَلَىٰ بَعۡضٖۚ ﴾

**"ಅಲ್ಲಾಹನು ತನಗೆ ಮಗನನ್ನು ಮಾಡಲಿಲ್ಲ ಅಥವಾ ಅವನ ಜೊತೆಗೆ ಆರಾಧನೆಗೆ ಯೋಗ್ಯವಾದ ಯಾವುದೇ ಆರಾಧ್ಯನೂ ಇಲ್ಲ. (ಒಂದು ವೇಳೆ ತುಂಬ ದೇವರಿರುತ್ತಿದ್ದರೆ) ನೋಡಿ, ಪ್ರತಿಯೊಬ್ಬ ದೇವನೂ ತಾನು ಸೃಷ್ಟಿಸಿದ್ದನ್ನು ಬೇರೆ ತೆಗೆದುಕೊಂಡು ಹೋಗುತ್ತಿದ್ದನು ಹಾಗೂ ಕೆಲವರು ಇನ್ನು ಕೆಲವರ ಮೇಲೆ ಔನ್ನತ್ಯ ಸಾಧಿಸಲು ಪ್ರಯತ್ನಿಸುತ್ತಿದ್ದರು." (72)**

ಆದ್ದರಿಂದ ನೈಜ ಆರಾಧ್ಯನು ನಿಶ್ಚಿತವಾಗಿಯೂ ಸೃಷ್ಟಿಕರ್ತನು ಹಾಗೂ ಎಲ್ಲಾ ವಸ್ತುಗಳನ್ನು ವ್ಯವಸ್ಥಿತಗೊಳಿಸುವವನೇ ಆಗಿರುತ್ತಾನೆ. ಒಂದು ವೇಳೆ ಅವನ ಜೊತೆ ಆತನ ಸಾಮ್ರಾಜ್ಯದಲ್ಲಿ ಪಾಲಿರುವಂತಹ ಬೇರೆ ಆರಾಧ್ಯ ದೇವರುಗಳಿರುತ್ತಿದ್ದರೆ

**69** ಕುರ್‌ಆನ್ 22:73
**70** ಕುರ್‌ಆನ್ 16:20
**71** ಕುರ್‌ಆನ್ 16:17
**72** ಕುರ್‌ಆನ್ 23:91

ಆತನಿಗೂ ಸೃಷ್ಟಿಗಳು ಹಾಗೂ ಆತನಿಗೂ ಒಂದು ಅಧಿಕಾರವಿರುತ್ತಿತ್ತು. ಆದ್ದರಿಂದ ಏಕೈಕ ಆರಾಧ್ಯನು ಇನ್ನೊಬ್ಬನ ಪಾಲುದಾರಿಕೆಯೊಂದಿಗೆ ಎಂದೂ ಸಂತೃಪ್ತಿ ಹೊಂದಲಾರನು. ಬದಲಾಗಿ ಒಬ್ಬನಿಗೆ ಇನ್ನೊಬ್ಬನನ್ನು ಸೋಲಿಸಿ, ತಾನೊಬ್ಬನೇ ಈ ಸಾಮ್ರಾಜ್ಯದ ಒಡೆಯ ಹಾಗೂ ಪ್ರಭುತ್ವವನ್ನು ಸಾಧಿಸುವ ಸಾಮರ್ಥ್ಯವಿದ್ದಿದ್ದರೆ ಅವನು ಅದನ್ನು ಮಾಡುತ್ತಿದ್ದ. ಒಂದು ವೇಳೆ ಅದು ಅವನಿಗೆ ಸಾಧ್ಯವಿಲ್ಲವೆಂದಾಗಿದ್ದರೆ ಭೂಮಿಯ ರಾಜರುಗಳು ಒಂಟಿಯಾಗಿ ತಮ್ಮ ರಾಜ್ಯವನ್ನು ಆಳುವಂತೆ ಅವನು ತನ್ನ ಭಾಗದ ಸಾಮ್ರಾಜ್ಯ ಹಾಗೂ ಸೃಷ್ಟಿಗಳನ್ನು ಬೇರೆಯಾಗಿಯೇ ಇರಿಸಿ ಒಂಟಿಯಾಗಿರುತ್ತಿದ್ದ. ಹೀಗೆ ಒಂದು ವೇಳೆ ವಿಭಜನೆಯಾಗಿದ್ದಾದರೆ ಕೆಳಗಿನ ಮೂರು ಸ್ಥಿತಿಗಳಲ್ಲಿ ಒಂದು ಆಗುತ್ತಿತ್ತು.

1) ಅವರಲ್ಲಿ ಯಾರಾದರೊಬ್ಬ ಇನ್ನೊಬ್ಬನ ಮೇಲೆ ಅಧಿಪತ್ಯವನ್ನು ಸಾಧಿಸುತ್ತಿದ್ದನು ಮತ್ತು ಸಾಮ್ರಾಜ್ಯವನ್ನು ತನ್ನದಾಗಿಸುತ್ತಿದ್ದನು.

2) ಪ್ರತಿಯೊಬ್ಬರೂ ಕೂಡಾ ಒಂಟಿ ಒಂಟಿಯಾಗಿ ತಮ್ಮ ಸಾಮ್ರಾಜ್ಯ ಹಾಗೂ ಸೃಷ್ಟಿಗಳ ಮೇಲೆ ಹಿಡಿತವಿರಿಸುತ್ತಿದ್ದರು.

3) ಎಲ್ಲರೂ ಕೂಡಾ ತನಗೆ ಬೇಕಾದ ಹಾಗೇ ವಿಷಯಗಳನ್ನು ಆಜ್ಞಾಪಿಸುವ ಒಬ್ಬ ರಾಜನ ಕೆಳಗೆ ಇರುತ್ತಿದ್ದರು ಮತ್ತು ಅವನು ನೈಜ ದೇವನಾಗಿರುತ್ತಿದ್ದನು ಹಾಗೂ ಇವರುಗಳೆಲ್ಲ ಅವನ ಸೇವಕರಾಗಿರುತ್ತಿದ್ದರು. ಇದುವೇ ವಾಸ್ತವ. ವಿಭಜನೆಯಾಗಲೀ, ಅವ್ಯವಸ್ಥೆಯಾಗಲೀ ಈ ಜಗತ್ತಿನಲ್ಲಿ ಸಂಭವಿಸಲಿಲ್ಲವಾದ್ದರಿಂದ ಎಲ್ಲಾ ವಿಷಯಗಳನ್ನು ನಿಯಂತ್ರಿಸುವವನು ಒಬ್ಬನೇ ಏಕೈಕ ಪ್ರಭುವೆಂದು ನಮಗೆ ಮನದಟ್ಟಾಗುತ್ತದೆ.

ಮೂರು:

ತಮ್ಮ ಕರ್ತವ್ಯಗಳ ಸವಿವರ ವಿಶೇಷತೆಗಳ ನಿರ್ವಹಿಸುವಿಕೆ ಹಾಗೂ ಸಂಸ್ಥಾಪನೆಯೆಡೆಗೆ ಸೃಷ್ಟಿಯನ್ನು ಒಳಪಡಿಸುವುದು. ಈ ವಿಶ್ವದಲ್ಲಿ ತನ್ನ ಕಾರ್ಯವನ್ನು ನಿರ್ವಹಿಸಲು ವಿರೋಧಿಸುವಂತಹ, ಪಾಲಿಸದಂತಹ ಯಾವ ಸೃಷ್ಟಿಯೂ ಇಲ್ಲ. ಫಿರ್‌ಔನ್ ಹೇಳಿದ ಸಂದರ್ಭದಲ್ಲಿ ಮೂಸಾ(عليه السلام) ಇದನ್ನು ಆಧಾರವಾಗಿ ಉಪಯೋಗಿಸಿದ್ದರು.

﴿ قَالَ فَمَن رَّبُّكُمَا يَـٰمُوسَىٰ ﴿٤٩﴾ ﴾

**"ಹಾಗಾದರೆ, ಓ ಮೂಸಾ, ನಿಮ್ಮಿಬ್ಬರ ಪ್ರಭು ಯಾರು?"** [73]

ಆಗ ಮೂಸಾ(عليه السلام) ಹೀಗೆ ಸ್ಪಷ್ಟ ಹಾಗೂ ಸಂಕ್ಷಿಪ್ತ ರೀತಿಯಲ್ಲಿ ಉತ್ತರಿಸಿದರು:

﴿ قَالَ رَبُّنَا ٱلَّذِىٓ أَعْطَىٰ كُلَّ شَىْءٍ خَلْقَهُۥ ثُمَّ هَدَىٰ ﴿٥٠﴾ ﴾

**"ನಮ್ಮ ಪ್ರಭು ಪ್ರತಿಯೊಂದು ವಸ್ತುವಿಗೆ ಆಕೃತಿ ಹಾಗೂ ಸ್ವಭಾವ ನೀಡಿ, ಬಳಿಕ ಅದಕ್ಕೆ**

73 ಕುರ್‌ಆನ್ 20:49

**ಸರಿಯಾದ ಮಾರ್ಗದರ್ಶನ ನೀಡಿದವನು.”** (74)

ಅರ್ಥಾತ್ ನಮ್ಮ ಪ್ರಭು ಎಲ್ಲಾ ಸೃಷ್ಟಿಗಳನ್ನು ಸೃಷ್ಟಿಸಿದವನು ಮತ್ತು ಅವುಗಳಿಗೆ ಅನುಗುಣವಾದ ರೂಪ ಹಾಗೂ ಸ್ವಭಾವವನ್ನು ನೀಡಿ, ಅವುಗಳಿಗೆ ದೊಡ್ಡ ಚಿಕ್ಕ ಹಾಗೂ ಮಧ್ಯಮ ಶರೀರಗಳು ಮತ್ತು ಅದರ ಎಲ್ಲಾ ಗುಣ ವಿಶೇಷಣಗಳನ್ನು ನೀಡಿದವನು. ನಂತರ ಅವನು ಅವುಗಳು ಸೃಷ್ಟಿಸಲ್ಪಟ್ಟಿರುವುದಕ್ಕೆ ಅನುಗುಣವಾಗಿ ಪ್ರತಿಯೊಂದಕ್ಕೂ ಮಾರ್ಗದರ್ಶನ ನೀಡಿದನು ಮತ್ತು ಇದು ಅಂತರ್ಜ್ಞಾನ ಹಾಗೂ ಸ್ವಾಭಾವಿಕ ಬುದ್ಧಿಯ ಮಾರ್ಗದರ್ಶನವಾಗಿದೆ ಮತ್ತು ಇದು ಎಲ್ಲಾ ಸೃಷ್ಟಿಗಳಲ್ಲಿ ಕಾಣಬಹುದಾದಂತಹ ಸಂಪೂರ್ಣ ಮಾರ್ಗದರ್ಶನವಾಗಿದೆ. ಆದ್ದರಿಂದ ನಾವು ಪ್ರತಿಯೊಂದು ಸೃಷ್ಟಿಯೂ ಕೂಡ ತನ್ನನ್ನು ಸೃಷ್ಟಿಸಿರುವುದರ ಪ್ರಯೋಜನಗಳೆಡೆಗೆ ಶ್ರಮಿಸುವುದನ್ನು ಮತ್ತು ತನಗೆ ಒದಗುವ ವಿಪತ್ತುಗಳಿಂದ ತನ್ನನ್ನು ರಕ್ಷಿಸಿಕೊಳ್ಳುವುದನ್ನು ಕಾಣಬಹುದು. ಎಷ್ಟರವರೆಗೆಂದರೆ ಅಲ್ಲಾಹನು ಜಾನುವಾರುಗಳಿಗೂ ತಮ್ಮ ಪ್ರಯೋಜನಗಳೆಡೆಗೆ ಹೋಗುವ ಮತ್ತು ತಮಗೆ ತೊಂದರೆಯಾಗುವವುಗಳಿಂದ ದೂರ ಸರಿಯುವಂತಹ ಮತ್ತು ತಮ್ಮ ಜೀವನ ಕಾರ್ಯ ನಿರ್ವಹಿಸುವಂತಹ ತಿಳುವಳಿಕೆಯನ್ನು ನೀಡಿರುವನು.

ಇದನ್ನು ಸರ್ವೋನ್ನತನಾದ ಅವನು ಹೇಳುತ್ತಾನೆ:

﴿ ٱلَّذِىٓ أَحۡسَنَ كُلَّ شَىۡءٍ خَلَقَهُۥ ﴾

**“ಆತನು ಮಾಡಿರುವ ಎಲ್ಲವನ್ನು ಚೆನ್ನಾಗಿಯೇ ಮಾಡಿರುತ್ತಾನೆ.”** (75)

ಹೀಗೆ, ಎಲ್ಲಾ ಸೃಷ್ಟಿಗಳನ್ನು ಸೃಷ್ಟಿಸಿದವನು ಮತ್ತು ಅವುಗಳಿಗೆ ಅತ್ಯುತ್ತಮ ರೂಪ ನೀಡಿದವನು. ಅದು ಎಷ್ಟು ಉತ್ತಮವೆಂದರೆ ನಮಗೆ ಅದಕ್ಕಿಂತ ಒಳ್ಳೆಯದನ್ನು ಕಲ್ಪಿಸಲು ಸಹ ಸಾಧ್ಯವಿಲ್ಲ ಮತ್ತು ಅವುಗಳಿಗೆ ಉಪಯುಕ್ತ ರೀತಿಯಲ್ಲಿ ಮಾರ್ಗದರ್ಶನ ನೀಡಿದವನು. ನಿಜವಾಗಿಯೂ ಪ್ರಭುವಾಗಿರುತ್ತಾನೆ. ಆದ್ದರಿಂದ ಅವನನ್ನು ನಿಷೇಧಿಸುವುದು, ವಾಸ್ತವದಲ್ಲಿ ಅತೀ ದೊಡ್ಡ ಸಂಗತಿಯನ್ನು ನಿಷೇಧಿಸುವುದಾಗಿದೆ ಮತ್ತು ಅದು ಅಹಂಭಾವ ಹಾಗೂ ಬಹಿರಂಗ ಸುಳ್ಳುಗಾರಿಕೆಯಾಗಿದೆ.

ಅಲ್ಲಾಹನು ತನ್ನ ಸೃಷ್ಟಿಗೆ ಅಗತ್ಯವಿರುವ ಎಲ್ಲವನ್ನೂ ಈ ಜಗತ್ತಿನಲ್ಲಿ ಕೊಟ್ಟಿದ್ದಾನೆ ಮತ್ತು ಅವುಗಳಿಗೆ ಪ್ರಯೋಜನಕಾರಿಯಾದವುಗಳ ಮಾರ್ಗದರ್ಶನವನ್ನೂ ನೀಡಿದ್ದಾನೆ. ಅವನು ಪ್ರತಿಯೊಂದಕ್ಕೂ ಅದಕ್ಕೆ ಹೊಂದಿಕೊಳ್ಳುವಂತಹ ರೂಪವನ್ನು ನೀಡಿರುವನು ಎಂಬುವುದರಲ್ಲಿ ಸಂಶಯವಿಲ್ಲ. ಅವನು ಪ್ರತಿಯೊಂದು ಗಂಡು ಹಾಗೂ ಹೆಣ್ಣಿಗೂ ಅವುಗಳ ವಿವಾಹ, ಪ್ರೀತಿ ಹಾಗೂ ಜೊತೆ ಇವುಗಳೆಲ್ಲವಕ್ಕೂ ಹೊಂದಿಕೊಳ್ಳುವಂತಹ ರೂಪವನ್ನು ಕೊಟ್ಟಿರುವನು. ಅವನು ಪ್ರತಿಯೊಂದು ಶರೀರದ ಭಾಗಗಳನ್ನು ಅದರಿಂದ

**74** ಕುರ್‌ಆನ್ 20:50

**75** ಕುರ್‌ಆನ್ 32:7

ಉಪಯೋಗವಾಗುವಂತಹ ರೀತಿಯಲ್ಲಿ ಆಕಾರವನ್ನು ನೀಡಿರುವನು. ಈ ಎಲ್ಲಾ ಸ್ಪಷ್ಟ ಆಧಾರಗಳಿಂದ ಮನದಟ್ಟಾಗುವುದೆಂದರೆ ಹೀಗೆ ಮಹಿಮಾವಂತನು ಮತ್ತು ಸರ್ವೋನ್ನತನಾದ ಅವನು ಎಲ್ಲದರ ಒಡೆಯನಾಗಿರುವನು. ಅವನೇ ಆರಾಧನೆಗೆ ಅರ್ಹನಾದವನು ಮತ್ತು ಅವನಿಗಾರೂ ಭಾಗೀದಾರರಿಲ್ಲ. ಕವಿಯೊಬ್ಬರು ಹೇಳಿದ್ದಾರೆ.

**ಪ್ರತಿಯೊಂದರಲ್ಲೂ ಅವನ ಕುರುಹು ಇದೆ.**

**ಅದು ಅವನು ಏಕೈಕನೆಂದು ಸಾರುತ್ತದೆ.**

ಅವನ ರುಬೂಬಿಯ್ಯ ಅಂದರೆ ಸೃಷ್ಟಿಗಳ ಮೇಲೆ ಆತನ ಪ್ರಭುತ್ವ ಹಾಗೂ ಏಕತ್ವವನ್ನು ದೃಢೀಕರಿಸುವುದರ ಉದ್ದೇಶವು ಅವನನ್ನು ಮಾತ್ರ ಯಾವುದೇ ಭಾಗೀದಾರರಿಲ್ಲದೆ, ಆರಾಧಿಸುವುದು ಕಡ್ಡಾಯವೆನ್ನುವುದಕ್ಕೆ ಆಧಾರವಾಗಿದೆಯೆಂಬುದರಲ್ಲಿ ಸಂದೇಹವಿಲ್ಲ. ಅದುವೇ ತೌಹೀದ್ ಅಲ್-ಉಲೂಹಿಯ್ಯ. ಆದ್ದರಿಂದ ಒಬ್ಬ ಮನುಷ್ಯ ತೌಹೀದ್ ಅರ್-ರುಬೂಬಿಯ್ಯವನ್ನು ದೃಢೀಕರಿಸುತ್ತಾನೆ, ಆದರೆ ತೌಹೀದ್ ಅಲ್-ಉಲೂಹಿಯ್ಯವನ್ನು ದೃಢೀಕರಿಸುವುದಿಲ್ಲ ಅಥವಾ ಅದನ್ನು ಸರಿಯಾಗಿ ಸಂಸ್ಥಾಪಿಸುವುದಿಲ್ಲವೆಂದಾಗಿದ್ದರೆ ಅವನು ಮುಸ್ಲಿಮ್ ಅಥವಾ ಮುವಹ್ಹಿದ್ (ತೌಹೀದ್‌ಅನ್ನು ಸಂಪೂರ್ಣವಾಗಿ ದೃಢೀಕರಿಸುವವನೂ) ಅಲ್ಲ; ಮಾತ್ರವಲ್ಲ ಅವನೊಬ್ಬ ವಿರೋಧಿ ಸತ್ಯನಿಷೇಧಿಯಾಗುತ್ತಾನೆ. ಸರ್ವೋನ್ನತನಾದ ಅಲ್ಲಾಹನು ಇಚ್ಛಿಸಿದರೆ ಅದನ್ನು ಮುಂದಿನ ಭಾಗಗಳಲ್ಲಿ ಚರ್ಚಿಸೋಣ.

## ಅಧ್ಯಾಯ-5

# ತೌಹೀದ್ ಅರ್-ರುಬೂಬಿಯ್ಯವು ತೌಹೀದ್ ಅಲ್-ಉಲೂಹಿಯ್ಯದೆಡೆಗೆ ಸಾಗಿಸುತ್ತದೆ ಮತ್ತು ಅದನ್ನು ಅನಿವಾರ್ಯವಾಗಿಸುತ್ತದೆಂಬುದರ ವಿವರಣೆ

ಇದರ ಅರ್ಥವೇನೆಂದರೆ ಯಾರಾದರೂ ಸರ್ವೋನ್ನತ ಹಾಗೂ ಮಹಿಮಾವಂತನಾದ ಅಲ್ಲಾಹನಲ್ಲದೆ ಸೃಷ್ಟಿಕರ್ತ, ಪರಿಪಾಲಕ ಹಾಗೂ ಎಲ್ಲಾ ವಿಷಯಗಳ ನಿಯಂತ್ರಕ ಬೇರಾರೂ ಇಲ್ಲವೆಂಬುದನ್ನು ತಿಳಿದುಕೊಂಡರೆ ಎಲ್ಲಾ ಕುಂದುಕೊರತೆಗಳಿಂದ ಮುಕ್ತನಾದ ಅಲ್ಲಾಹನ ಹೊರತು ಬೇರಾರೂ ಆರಾಧನೆಗೆ ಹಕ್ಕುದಾರರಿಲ್ಲವೆಂಬುದನ್ನು ದೃಢೀಕರಿಸುವುದು ಅವನ ಮೇಲೆ ಕಡ್ಡಾಯವಾಗಿರುತ್ತದೆ. ಇದುವೇ ತೌಹೀದ್ ಅಲ್-ಉಲೂಹಿಯ್ಯ, ನಿಶ್ಚಯವಾಗಿಯೂ ಉಲೂಹಿಯ್ಯವು ಆರಾಧನೆಗೆ ಅರ್ಹನು ಎಂದಾಗಿದೆ. ಅಲ್ಲಾಹನು ಹೀಗೆ ಕರೆಯಲ್ಪಡುತ್ತಾನೆ. ಅವನಿಂದಲೇ ಸಹಾಯವನ್ನು ಕೇಳಬೇಕು. ಅವನ ಮೇಲೆಯೇ ಭರವಸೆಯಿಡಬೇಕು. ಬಲಿದಾನ ಮತ್ತು ಪ್ರತಿಜ್ಞೆಗಳೆಲ್ಲವೂ ಆತನಿಗೇ ಸಲ್ಲಬೇಕು

ಮತ್ತು ಎಲ್ಲಾ ತರಹದ ಆರಾಧನೆಗಳು ಆತನಿಗೇ ಸಲ್ಲಬೇಕು. ಆದ್ದರಿಂದ ತೌಹೀದ್ ಅರ್-ರುಬೂಬಿಯ್ಯವು, ತೌಹೀದ್ ಅಲ್-ಉಲೂಹಿಯ್ಯವು ಕಡ್ಡಾಯವೆನ್ನುವುದರ ಆಧಾರವಾಗಿದೆ ಮತ್ತು ಈ ಕಾರಣದಿಂದ ಹೆಚ್ಚಿನ ಕಡೆಗಳಲ್ಲಿ ತೌಹೀದ್ ಅಲ್-ಉಲೂಹಿಯ್ಯವನ್ನು ನಿರಾಕರಿಸುವವರಿಗೆ ಅವರು ಮೊದಲೇ ಒಪ್ಪಿಕೊಂಡಿರುವ ತೌಹೀದ್ ಅರ್-ರುಬೂಬಿಯ್ಯವನ್ನು ಆಧಾರವಾಗಿ ಕೊಡುತ್ತಾನೆ. ಸರ್ವೋನ್ನತನಾದ ಅವನ ಮಾತು ಹೀಗಿದೆ.

﴿ يَٰٓأَيُّهَا ٱلنَّاسُ ٱعۡبُدُواْ رَبَّكُمُ ٱلَّذِي خَلَقَكُمۡ وَٱلَّذِينَ مِن قَبۡلِكُمۡ لَعَلَّكُمۡ تَتَّقُونَ ٢١ ٱلَّذِي جَعَلَ لَكُمُ ٱلۡأَرۡضَ فِرَٰشٗا وَٱلسَّمَآءَ بِنَآءٗ وَأَنزَلَ مِنَ ٱلسَّمَآءِ مَآءٗ فَأَخۡرَجَ بِهِۦ مِنَ ٱلثَّمَرَٰتِ رِزۡقٗا لَّكُمۡۖ فَلَا تَجۡعَلُواْ لِلَّهِ أَندَادٗا وَأَنتُمۡ تَعۡلَمُونَ ٢٢ ﴾

**“ಓ ಜನರೇ, ನಿಮ್ಮನ್ನು ಹಾಗೂ ನಿಮಗಿಂತ ಮುಂಚಿನವರನ್ನು ಸೃಷ್ಟಿಸಿದ ನಿಮ್ಮ ಪ್ರಭುವನ್ನು ಆರಾಧಿಸಿರಿ. ನೀವು ಭಯಭಕ್ತಿಯುಳ್ಳವರಾಗಬಹುದು. ಅವನು ನಿಮಗೆ ಭೂಮಿಯನ್ನು ವಿಶ್ರಾಂತಿ ಸ್ಥಳವನ್ನಾಗಿ ಮಾಡಿದನು ಮತ್ತು ಆಕಾಶವನ್ನು ಚಪ್ಪರವನ್ನಾಗಿ ಮಾಡಿದನು ಮತ್ತು ಆಕಾಶದಿಂದ ಮಳೆಯನ್ನು ಸುರಿಸಿದನು ಮತ್ತು ನಿಮಗೆ ಆಹಾರವಾಗಿ ಫಲಗಳನ್ನು ಹೊರತೆಗೆದನು. ಆದ್ದರಿಂದ ನೀವು ತಿಳಿದಿರುತ್ತಾ, ಅಲ್ಲಾಹನಿಗೆ ಪ್ರತಿಸ್ಪರ್ಧಿಗಳನ್ನು ಮಾಡಬೇಡಿರಿ.”** (76)

ಹೀಗೆ ಅವನು ಅವರಿಗೆ ತೌಹೀದ್ ಅಲ್-ಉಲೂಹಿಯ್ಯ ಎಂದರೆ ಅವನ ಆರಾಧನೆಯನ್ನು ಆದೇಶಿಸಿದನು. ಇದಕ್ಕೆ ತೌಹೀದ್ ಅರ್-ರುಬೂಬಿಯ್ಯವನ್ನು ಆಧಾರವಾಗಿ ನೀಡಿದನು. ಅಂದರೆ ಮುಂಚಿನ ಹಾಗೂ ನಂತರದ ಜನರ ಸೃಷ್ಟಿ, ಆಕಾಶಗಳ ಹಾಗೂ ಭೂಮಿಯ ಹಾಗೂ ಅವುಗಳ ಮಧ್ಯೆಯಿರುವ ಎಲ್ಲವುಗಳ ಸೃಷ್ಟಿ, ಗಾಳಿ ಬೀಸುವುದು, ಮಳೆಯನ್ನು ಕಳುಹಿಸುವುದು, ಸಸ್ಯಗಳನ್ನು ಬೆಳೆಸುವುದು, ದಾಸರಿಗೆ ಉಪಯುಕ್ತವಾದ ಫಲಗಳನ್ನು ಉತ್ಪಾದಿಸುವುದು. ಹೀಗೆ ಅವನಲ್ಲದೇ ಬೇರಾರೂ ಕೂಡಾ ಇವುಗಳನ್ನಾಗಲೀ, ಯಾವುದನ್ನೂ ಆಗಲೀ ಸೃಷ್ಟಿಸಿರದ ಸಂದರ್ಭದಲ್ಲಿ ಅವನೊಡನೆ ಇತರರನ್ನು ಭಾಗೀದಾರರನ್ನಾಗಿ ಮಾಡುವುದು ಯಾವ ರೀತಿಯಲ್ಲೂ ನೋಡಿದರೂ ಸರಿಯಲ್ಲ. ಸಹಜವಾಗಿಯೇ ತೌಹೀದ್ ಅರ್-ರುಬೂಬಿಯ್ಯದಲ್ಲಿ ರುಜುವಾತಾದ ತೌಹೀದ್ ಅಲ್-ಉಲೂಹಿಯ್ಯವನ್ನು ದೃಢೀಕರಿಸುವುದು ಸ್ವಾಭಾವಿಕವಾದದ್ದೇ ಆಗಿದೆ.

ಕಾರಣವೇನೆಂದರೆ ಒಬ್ಬ ವ್ಯಕ್ತಿಯು ಮೊದಲು ತನ್ನ ಸೃಷ್ಟಿಯ, ತನ್ನ ಪ್ರಯೋಜನ ಹಾಗೂ ಹಾನಿಯ ಮೂಲದ ಕುರಿತಾದ ಚಿಂತೆಯಲ್ಲಿ ಇರುತ್ತಾನೆ. ನಂತರ ಅವನು ಅಲ್ಲಾಹನಿಗೆ ತನ್ನನ್ನು ಹತ್ತಿರಮಾಡುವಂತಹ, ಅವನಿಗೆ ತೃಪ್ತಿಪಡಿಸುವಂತಹ ಮತ್ತು

76 ಕುರ್‌ಆನ್ 2:21–22

ತನ್ನ ಹಾಗೂ ಅವನ ನಡುವಿನ ಬಂಧವನ್ನು ಬಲಪಡಿಸುವಂತಹ ವಿಷಯಗಳೆಡೆಗೆ ಹೋಗುತ್ತಾನೆ. ಆದ್ದರಿಂದ ತೌಹೀದ್ ಅರ್–ರುಬೂಬಿಯ್ಯವು ತೌಹೀದ್ ಅಲ್–ಉಲೂಹಿಯ್ಯದ ಬಾಗಿಲು ಆಗಿದೆ. ಈ ಕಾರಣದಿಂದ ಅಲ್ಲಾಹನು ಈ ವಿಧಾನವನ್ನು ಮುಶ್ರಿಕರ ವಿರುದ್ಧ ಆಧಾರವಾಗಿ ಉಪಯೋಗಿಸಿದ್ದಾನೆ ಮತ್ತು ಮುಹಮ್ಮದ್(ﷺ)ರಿಗೆ ಇದನ್ನು ಆಧಾರವಾಗಿ ಉಪಯೋಗಿಸುವಂತೆ ಆಜ್ಞಾಪಿಸಿದ್ದಾನೆ. ಅತ್ಯುನ್ನತನಾದ ಅವನು ಹೀಗೆಂದಿರುವನು.

﴿ قُل لِّمَنِ ٱلْأَرْضُ وَمَن فِيهَآ إِن كُنتُمْ تَعْلَمُونَ ﴿٨٤﴾ سَيَقُولُونَ لِلَّهِ ۚ قُلْ أَفَلَا تَذَكَّرُونَ ﴿٨٥﴾ قُلْ مَن رَّبُّ ٱلسَّمَٰوَٰتِ ٱلسَّبْعِ وَرَبُّ ٱلْعَرْشِ ٱلْعَظِيمِ ﴿٨٦﴾ سَيَقُولُونَ لِلَّهِ ۚ قُلْ أَفَلَا تَتَّقُونَ ﴿٨٧﴾ قُلْ مَنۢ بِيَدِهِۦ مَلَكُوتُ كُلِّ شَىْءٍ وَهُوَ يُجِيرُ وَلَا يُجَارُ عَلَيْهِ إِن كُنتُمْ تَعْلَمُونَ ﴿٨٨﴾ سَيَقُولُونَ لِلَّهِ ۚ قُلْ فَأَنَّىٰ تُسْحَرُونَ ﴿٨٩﴾ ﴾

**"ಹೇಳಿರಿ, ಈ ಭೂಮಿ ಹಾಗೂ ಅದರೊಳಗಿರುವುದೆಲ್ಲ ಯಾರದು? ನಿಮಗೆ ತಿಳಿದರೆ (ಹೇಳಿರಿ, ಆಗ) ಅವರು ಹೇಳುತ್ತಾರೆ: ಅದು ಅಲ್ಲಾಹನದು ಹೇಳು: ನೀವು ಸ್ಮರಿಸುವುದಿಲ್ಲವೇ? ಹೇಳಿರಿ, ಏಳು ಆಕಾಶಗಳ ಹಾಗೂ ಅರ್ಶ್‌ನ ಪ್ರಭು ಯಾರು? ಅವರು ಹೇಳುವರು: ಅಲ್ಲಾಹ್. ನೀವು ಅಲ್ಲಾಹನನ್ನು ಭಯಪಡುವುದಿಲ್ಲವೇ, ಆತನ ಏಕತೆಯನ್ನು ನಂಬುವುದಿಲ್ಲವೇ? ಆತನ ಆಜ್ಞಾಪಾಲಕರಾಗುವುದಿಲ್ಲವೇ, ಆತನ ಏಕತೆಯನ್ನು ನಂಬುವುದಿಲ್ಲವೇ? ಪುನರುತ್ಥಾನ ದಿನ, ಸತ್ಕರ್ಮ ಹಾಗೂ ದುಷ್ಕರ್ಮಗಳ ಪ್ರತಿಫಲವನ್ನು ನೀವು ನಂಬುವುದಿಲ್ಲವೇ? ಹೇಳಿರಿ, ಯಾರ ಕೈಯಲ್ಲಿ ಸರ್ವ ವಸ್ತುಗಳ ಪರಮಾಧಿಕಾರವಿರುವುದು? ಎಲ್ಲರನ್ನೂ ಕಾಪಾಡುವವನು ಮತ್ತು ಅವನ ವಿರುದ್ಧ ಯಾವುದೇ ಸಂರಕ್ಷಣೆ ನೀಡಲಾಗುವುದಿಲ್ಲವೋ ಅವನು ಯಾರು? ನೀವು ಅರಿತವರಾಗಿದ್ದರೆ. ಅವರು ಹೇಳುವರು: ಅಲ್ಲಾಹ್ (ಎಲ್ಲವೂ ಅಲ್ಲಾಹನದು) ಹೇಳು: ಹಾಗಾದರೆ ಹೇಗೆ ನೀವು ಮೋಸ ಹೋಗಿರುವಿರಿ ಮತ್ತು ಸತ್ಯದಿಂದ ದೂರ ಸರಿಯುವಿರಿ?"** [77]

ಸರ್ವೋನ್ನತನಾದ ಅವನು ಹೇಳಿರುವನು:

﴿ ذَٰلِكُمُ ٱللَّهُ رَبُّكُمْ ۖ لَآ إِلَٰهَ إِلَّا هُوَ ۖ خَٰلِقُ كُلِّ شَىْءٍ فَٱعْبُدُوهُ ۚ ﴾

**"ಅವನೇ ಅಲ್ಲಾಹ್, ನಿಮ್ಮ ಪ್ರಭು, ಅವನಲ್ಲದೇ ಬೇರೆ(ಯಾರೂ) ಆರಾಧನೆಗೆ ಅರ್ಹರಿಲ್ಲ. ಸಕಲ ವಸ್ತುಗಳ ಸೃಷ್ಟಿಕರ್ತ. ಆದ್ದರಿಂದ ಅವನನ್ನು ಮಾತ್ರ ಆರಾಧಿಸಿರಿ."** [78]

ಹೀಗೆ ಅವನು ತನ್ನ ರುಬೂಬಿಯ್ಯದಲ್ಲಿ ಏಕೈಕನು ಎಂಬ ಸತ್ಯಾಂಶವನ್ನು, ಅವನು

77 ಕುರ್‌ಆನ್ 23:84–89

78 ಕುರ್‌ಆನ್ 6:102

ಮಾತ್ರ ಆರಾಧನೆಗೆ ಅರ್ಹನು ಎಂಬುದಕ್ಕೆ ಆಧಾರವಾಗಿ ಉಪಯೋಗಿಸಿದ್ದಾನೆ. ಸತ್ಯವಾಗಿಯೂ ಅಲ್ಲಾಹು ಈ ಸೃಷ್ಟಿಗಳನ್ನು ಸೃಷ್ಟಿಸಿದ ಉದ್ದೇಶವು ತೌಹೀದ್ ಅಲ್-ಉಲೂಹಿಯ್ಯವೇ ಆಗಿದೆ.

ಅತ್ಯುನ್ನತನಾದ ಅವನು ಹೇಳುತ್ತಾನೆ:

﴿ وَمَا خَلَقْتُ ٱلْجِنَّ وَٱلْإِنسَ إِلَّا لِيَعْبُدُونِ ﴿٥٦﴾ ﴾

**"ನಾನು ಜಿನ್ನ್ ಹಾಗೂ ಮನುಷ್ಯರನ್ನು ನನ್ನನ್ನು(ಮಾತ್ರ) ಆರಾಧಿಸಲಿಕ್ಕಾಗಿಯೇ ಸೃಷ್ಟಿಸಿದ್ದೇನೆ."** (79)

"ನನ್ನನ್ನು ಆರಾಧಿಸಿರಿ" ಎಂಬುದರ ಅರ್ಥ ನನ್ನೊಬ್ಬನನ್ನೇ ಆರಾಧಿಸಿರಿ ಎಂದು. ಒಬ್ಬ ದಾಸನು ಕೇವಲ ತೌಹೀದ್ ಅಲ್-ರುಬೂಬಿಯ್ಯವನ್ನು ಒಪ್ಪಿಕೊಂಡರಷ್ಟೇ ಮುವಹ್ಹಿದ್ ಆಗಲಾರ. ಅವನು ತೌಹೀದ್ ಅಲ್-ಉಲೂಹಿಯ್ಯವನ್ನೂ ಒಪ್ಪಬೇಕು ಮತ್ತು ಸಂಸ್ಥಾಪಿಸಬೇಕು. ಮುಶ್ರಿಕ್‌ಗಳು ತೌಹೀದ್ ಅರ್ರುಬೂಬಿಯ್ಯವನ್ನು ಒಪ್ಪಿದ್ದರು. ಆದರೂ ಅವರು ಇಸ್ಲಾಮ್‌ನ ಪರಿಧಿಯೊಳಗೆ ಬರಲಿಲ್ಲ. ಮುಶ್ರಿಕ್‌ಗಳು ಅಲ್ಲಾಹ್ ಸೃಷ್ಟಿಕರ್ತ, ಪರಿಪಾಲಕ, ಜೀವನ ಹಾಗೂ ಮರಣವನ್ನು ನೀಡುವನು ಎಂದೆಲ್ಲಾ ಅಂಶವನ್ನು ಒಪ್ಪಿಕೊಂಡರೂ ಕೂಡಾ ಪ್ರವಾದಿ(ﷺ)ರವರು ಅವರ ವಿರುದ್ಧ ಹೋರಾಡಿದ್ದರು.

ವಾಸ್ತವಿಕತೆಯು ಸರ್ವೋನ್ನತನಾದ ಅವನು ಹೇಳಿದಂತೆಯೇ ಆಗಿದೆ.

﴿ وَلَئِن سَأَلْتَهُم مَّنْ خَلَقَهُمْ لَيَقُولُنَّ ٱللَّهُ ﴾

**"ಮತ್ತು ನೀವು ಅವರಲ್ಲಿ ನಿಮ್ಮನ್ನು ಯಾರು ಸೃಷ್ಟಿಸಿದರೆಂದು ಕೇಳಿದರೆ, ಖಂಡಿತವಾಗಿಯೂ ಅವರು ಹೇಳುವರು: ಅಲ್ಲಾಹ್"** (80)

﴿ وَلَئِن سَأَلْتَهُم مَّنْ خَلَقَ ٱلسَّمَٰوَٰتِ وَٱلْأَرْضَ لَيَقُولُنَّ خَلَقَهُنَّ ٱلْعَزِيزُ ٱلْعَلِيمُ ﴿٩﴾ ﴾

**"ಮತ್ತು ನಿಶ್ಚಯವಾಗಿಯೂ ನೀವು ಅವರನ್ನೂ, ಆಕಾಶಗಳನ್ನು ಮತ್ತು ಭೂಮಿಯನ್ನು ಸೃಷ್ಟಿಸಿದವನು ಯಾರು? ಎಂದು ಕೇಳಿದರೆ ಅವರು ಖಂಡಿತವಾಗಿಯೂ ಹೇಳುವರು: ಅತೀ ಪ್ರಬಲನೂ, ಸರ್ವಜ್ಞನೂ ಆದವನು ಅವುಗಳನ್ನು ಸೃಷ್ಟಿಸಿದವನು ಎಂದವರು ಹೇಳುವರು."** (81)

---

**79** ಕುರ್‌ಆನ್ 51:56

**80** ಕುರ್‌ಆನ್ 43:87

**81** ಕುರ್‌ಆನ್ 43:9

﴿ قُلْ مَن يَرْزُقُكُم مِّنَ ٱلسَّمَآءِ وَٱلْأَرْضِ أَمَّن يَمْلِكُ ٱلسَّمْعَ وَٱلْأَبْصَٰرَ وَمَن يُخْرِجُ ٱلْحَىَّ مِنَ ٱلْمَيِّتِ وَيُخْرِجُ ٱلْمَيِّتَ مِنَ ٱلْحَىِّ وَمَن يُدَبِّرُ ٱلْأَمْرَ ۚ فَسَيَقُولُونَ ٱللَّهُ ﴾

**"ಹೇಳು, ಆಕಾಶದಿಂದ ಹಾಗೂ ಭೂಮಿಯಿಂದ ನಿಮಗೆ ಉಣಿಸುವವರು ಯಾರು? ಯಾರು ಶ್ರವಣ ಮತ್ತು ದೃಷ್ಟಿಗಳ ಒಡೆತನ ಹೊಂದಿದ್ದಾರೆ? ಯಾರು ನಿರ್ಜೀವದಿಂದ ಜೀವವನ್ನು ಮತ್ತು ಜೀವದಿಂದ ನಿರ್ಜೀವವನ್ನು ಹೊರತೆಗೆಯುವವನು ಮತ್ತು ಎಲ್ಲಾ ಸಂಗತಿಗಳನ್ನು ವ್ಯವಸ್ಥಿತವಾಗಿ ನಡೆಸುವವನು ಯಾರು? ಅವರು ಹೇಳುವರು: ಅಲ್ಲಾಹ್"** (82)

ಇಂತಹ ಸೂಕ್ತಿಗಳು ಕುರ್‌ಆನ್‌ನಲ್ಲಿ ಅನೇಕ ಕಡೆಗಳಲ್ಲಿವೆ. ಆದ್ದರಿಂದ ಯಾರಾದರೂ ತೌಹೀದ್ ಎಂದರೆ ಅಲ್ಲಾಹನ ಅಸ್ತಿತ್ವವನ್ನು ದೃಢೀಕರಿಸುವುದು ಅಥವಾ ಅವನು ಸೃಷ್ಟಿಕರ್ತ ಮತ್ತು ವಿಶ್ವದ ಎಲ್ಲಾ ವಸ್ತು, ವಿಷಯಗಳನ್ನು ಕ್ರಮಬದ್ಧವಾಗಿ ನಡೆಸುವವನು ಎಂಬುದನ್ನು ನಂಬುವುದು ಮಾತ್ರ ಎಂಬ ವಾದದಲ್ಲೇ ಇದ್ದು ಬಿಟ್ಟರೆ, ಅವನು ನಿಜವಾಗಿ ಪ್ರವಾದಿ(ﷺ)ರವರು ಆಹ್ವಾನಿಸಿದ ಆ ತೌಹೀದ್‌ನ ನೈಜತೆಯನ್ನು ಗುರುತಿಸಲಿಲ್ಲ. ಏಕೆಂದರೆ ಅವನು ಇವುಗಳಲ್ಲಿ ಯಾವುದನ್ನು ಉದ್ದೇಶಿಸಿದೆಯೋ ಅದಕ್ಕೆ ಹೋಗದೇ ತನ್ನನ್ನು ನಿಲ್ಲಿಸಿದ್ದಾನೆ ಮತ್ತು ಇದು ಯಾವುದರ ಅಗತ್ಯವನ್ನು ಹೇಳುತ್ತದೆಯೋ ಅದನ್ನು ತ್ಯಜಿಸಿದ್ದಾನೆ ಅಥವಾ ಅವನು ಆಧಾರಗಳಲ್ಲಿ ಮಾತ್ರ ನಿಂತಿದ್ದಾನೆ ಮತ್ತು ಅವು ಯಾವುದಕ್ಕೆ ಆಧಾರವೋ ಅದನ್ನು ತ್ಯಜಿಸಿದ್ದಾನೆ.

ಹೀಗೆ ಉಲೂಹಿಯ್ಯದ ವಿವರಣೆಯಿಂದ ಎಲ್ಲಾ ವಿಷಯಗಳಲ್ಲೂ ಸರ್ವ ಸಂಪೂರ್ಣವಾಗಿಯೇ ಯಾವುದೇ ಕೋನದಲ್ಲೂ ಎಲ್ಲೂ ಕೊರತೆಯಿಲ್ಲದೆ ಆರಾಧನೆಯೂ ಅಲ್ಲಾಹನಿಗೆ ಮಾತ್ರ ಎಂಬುದು ಸ್ಪಷ್ಟವಾಗುತ್ತದೆ. ಆರಾಧನೆಯೆಂದರೆ ಪ್ರಕೀರ್ತನೆ, ಬಾಗುವಿಕೆ, ಭಯ, ಪ್ರಾರ್ಥನೆ, ಆಶೆ, ಪಶ್ಚಾತ್ತಾಪದಿಂದ ಮರಳುವುದು, ಭರವಸೆ, ಸಹಾಯಯಾಚನೆ ಮತ್ತು ಅತೀ ಪ್ರೇಮದೊಂದಿಗೆ ಸಂಪೂರ್ಣ ಸಮರ್ಪಣೆ. ಇವುಗಳೆಲ್ಲವೂ ವಿವೇಕ, ಶರೀರ ಮತ್ತು ಸ್ವಾಭಾವಿಕ ವ್ಯವಸ್ಥೆ ಇವುಗಳೆಲ್ಲದರ ಮೂಲಕ ಸ್ಪಷ್ಟವಾಗುವುದೇನೆಂದರೆ ಈ ಆರಾಧನೆಗಳೆಲ್ಲವೂ ಅಲ್ಲಾಹನಿಗೆ ಮೀಸಲು. ಇವುಗಳಲ್ಲಿ ಯಾವೊಂದೂ ಕೂಡ ಅಲ್ಲಾಹನಲ್ಲದೆ ಬೇರೆಯವರಿಗೆ ಸಲ್ಲಬೇಕೆಂಬುದನ್ನು ತೌಹೀದ್ ಅಲ್–ಉಲೂಹಿಯ್ಯ ಒಪ್ಪುವುದಿಲ್ಲ.

---

82 ಕುರ್‌ಆನ್ 10:31

## ತೌಹೀದ್ ಅಲ್ ಉಲೂಹಿಯ್ಯ ಈ ಭಾಗಗಳನ್ನು ಒಳಗೊಂಡಿದೆ

ಅಧ್ಯಾಯ 1

ತೌಹೀದ್ ಅಲ್ ಉಲೂಹಿಯ್ಯದ ಅರ್ಥ ಮತ್ತು ಅದು ಪ್ರವಾದಿಗಳ ಧರ್ಮಾಹ್ವಾನದ ತಿರುಳಾಗಿತ್ತೆಂಬ ಸತ್ಯ

ಅಧ್ಯಾಯ 2

ಶಹಾದತೈನ್ (ಎರಡು ಸಾಕ್ಷ್ಯಗಳು) ಅವುಗಳ ಅರ್ಥಗಳು, ಸ್ತಂಭಗಳು, ಶರ್ತಗಳು, ಅಗತ್ಯಗಳು ಅವುಗಳನ್ನು ಶೂನ್ಯಗೊಳಿಸುವವುಗಳು.

ಅಧ್ಯಾಯ 3

ಶರೀಅತ್ (ಶಾಸನ)

ಅಧ್ಯಾಯ 4

ಇಬಾದತ್ (ಆರಾಧನೆ)–ಇದರ ಅರ್ಥ ಹಾಗೂ ಅದು ಏನನ್ನು ಒಳಗೊಂಡಿದೆ.

ಅಧ್ಯಾಯ 5

ಆರಾಧನೆಯ ಕುರಿತ ತಪ್ಪು ಕಲ್ಪನೆಗಳಿಗೆ ಉತ್ತರ

ಅಧ್ಯಾಯ 6

ಸರಿಯಾದ ಉಬೂದಿಯ್ಯದ ಸ್ತಂಭಗಳ ಕುರಿತು ಸಂಶಯ ನಿವಾರಣೆ

### ಅಧ್ಯಾಯ-1 ವಿವರಣೆ

## ತೌಹೀದ್ ಅಲ್ ಉಲೂಹಿಯ್ಯದ ಅರ್ಥ ಮತ್ತು ಅದು ಪ್ರವಾದಿಗಳ ಧರ್ಮಾಹ್ವಾನದ ತಿರುಳಾಗಿತ್ತೆಂಬ ಸತ್ಯ

ತೌಹೀದುಲ್ ಉಲೂಹಿಯ್ಯ: ಉಲೂಹಿಯ್ಯ ಎಂದರೆ ಅದು ಇಬಾದತ್ ಆಗಿದೆ.

ತೌಹೀದ್ ಅಲ್ ಉಲೂಹಿಯ್ಯದ ಅರ್ಥವು ಭಕ್ತರು ಅಲ್ಲಾಹನನ್ನು ಶರೀಅತ್ ಅನುಮತಿಸುವ ರೂಪದಲ್ಲಿ ಅವನ ಸಾಮೀಪ್ಯಕ್ಕಾಗಿ ಇಬಾದತ್‌ನಲ್ಲಿ ಏಕನಾಗಿಸುವುದು. ಪ್ರಾರ್ಥನೆ, ಹರಕೆ, ಬಲಿದಾನ, ಆಸೆಆಕಾಂಕ್ಷೆ, ಭಯ, ಭರವಸೆ, ಭೀತಿ, ಹೆದರಿಕೆ ಮತ್ತು ಪಶ್ಚಾತ್ತಾಪದಿಂದ ಮರಳುವಿಕೆ ಮುಂತಾದವುಗಳು ಇದರಲ್ಲಿ ಸೇರುತ್ತವೆ. ಇದು ತೌಹೀದ್‌ನ ವಿಧವಾಗಿದ್ದು ಮೊದಲಿನಿಂದ ಕೊನೆಯ ಪ್ರವಾದಿಗಳವರೆಗೆ ಎಲ್ಲಾ ಪ್ರವಾದಿಗಳ ಧರ್ಮದೆಡೆಗಿನ ಆಹ್ವಾನದ ತಿರುಳು ಇದೇ ಆಗಿತ್ತು. ಮಹೋನ್ನತನಾದ ಅವನು ಹೇಳಿದ್ದಾನೆ:

﴿ وَلَقَدْ بَعَثْنَا فِي كُلِّ أُمَّةٍ رَّسُولًا أَنِ اعْبُدُوا اللَّهَ وَاجْتَنِبُوا الطَّاغُوتَ ﴾

**“ನಿಶ್ಚಯವಾಗಿಯೂ ಪ್ರತಿಯೊಂದು ಸಮುದಾಯಕ್ಕೂ ನಾವು ಒಂದು ಸಂದೇಶವಾಹಕರನ್ನು, ಅಲ್ಲಾಹನನ್ನು(ಮಾತ್ರ) ಆರಾಧಿಸಿರಿ ಮತ್ತು ತಾಗೂತ್‌ಅನ್ನು ತೊರೆದುಬಿಡಿ ಎಂಬ ಸಂದೇಶದೊಂದಿಗೆ ಕಳುಹಿಸಿದೆವು.”** [83]

ಮಹೋನ್ನತನು ಹೇಳುತ್ತಾನೆ:

﴿ وَمَا أَرْسَلْنَا مِن قَبْلِكَ مِن رَّسُولٍ إِلَّا نُوحِي إِلَيْهِ أَنَّهُ لَا إِلَٰهَ إِلَّا أَنَا فَاعْبُدُونِ ﴿٢٥﴾ ﴾

**“ನಾವು ಯಾವುದೇ ಸಂದೇಶವಾಹಕರನ್ನು ‘ಲಾ ಇಲಾಹ ಇಲ್ಲಾ ಅನ’ (ನಾನಲ್ಲದೆ ಆರಾಧನೆಗೆ ಅರ್ಹನು ಬೇರಾರೂ ಇಲ್ಲ) ಆದ್ದರಿಂದ ನನ್ನನ್ನು ಆರಾಧಿಸಿರಿ (ನನ್ನನ್ನು ಮಾತ್ರ ಮತ್ತು ಬೇರಾರನ್ನು ಅಲ್ಲ) ಎಂಬ ದಿವ್ಯವಾಣಿಯೊಂದಿಗೆ ಅಲ್ಲದೇ ಕಳುಹಿಸಲಿಲ್ಲ.”** [84]

ಪ್ರತಿಯೊಬ್ಬ ಸಂದೇಶವಾಹಕರು ಕೂಡ ತಮ್ಮ ಜನಾಂಗವನ್ನು ತೌಹೀದ್ ಅಲ್-ಉಲೂಹಿಯ್ಯದೆಡೆಗೆ ಕರೆಯುವ ಮೂಲಕ ತಮ್ಮ ಧರ್ಮಾಹ್ವಾನವನ್ನು ಪ್ರಾರಂಭಿಸಿದ್ದರು. ನೂಹ್, ಹೂದ್ ಸಾಲೆಹ್, ಶುಐಬ್(عليهم السلام) ಏನು ಹೇಳಿದ್ದರೆಂಬುದನ್ನು ನೋಡಿ:

﴿ لَقَدْ أَرْسَلْنَا نُوحًا إِلَىٰ قَوْمِهِۦ فَقَالَ يَٰقَوْمِ ٱعْبُدُوا۟ ٱللَّهَ مَا لَكُم مِّنْ إِلَٰهٍ غَيْرُهُۥٓ ﴾

**“ನಿಶ್ಚಯವಾಗಿಯೂ ನಾವು ನೂಹ್‌ರನ್ನು ಅವರ ಜನರ ಕಡೆಗೆ ಕಳುಹಿಸಿದೆವು ಮತ್ತು**

---

**83** ಕುರ್‌ಆನ್ 16:36

**84** ಕುರ್‌ಆನ್ 21:25

ಅವರು ಹೇಳಿದರು: ಓ ಜನರೇ, ಅಲ್ಲಾಹನನ್ನು ಆರಾಧಿಸಿರಿ, ನಿಮಗೆ ಅವನಲ್ಲದೆ ಬೇರೆ ಇಲಾಹ್ (ಆರಾಧನೆಗೆ ಹಕ್ಕುದಾರನಾದವನು) ಇಲ್ಲ." (85)

﴿ وَإِلَىٰ عَادٍ أَخَاهُمْ هُودًا ۗ قَالَ يَـٰقَوْمِ ٱعْبُدُوا۟ ٱللَّهَ مَا لَكُم مِّنْ إِلَـٰهٍ غَيْرُهُۥٓ ۚ أَفَلَا تَتَّقُونَ ﴿٦٥﴾ ﴾

"ಮತ್ತು 'ಆದ್'ರೆಡೆಗೆ ಅವರ ಸಹೋದರ 'ಹೂದ್'ರನ್ನು ಕಳುಹಿಸಿದ್ದೆವು. ಅವರು ಹೇಳಿದರು: ಓ ಜನರೇ, ಅಲ್ಲಾಹನನ್ನು ಆರಾಧಿಸಿರಿ. ನಿಮಗೆ ಅವನಲ್ಲದೆ ಬೇರೆ ಇಲಾಹ್(ಆರಾಧನೆಗೆ ಹಕ್ಕುದಾರನಾದವನು) ಇಲ್ಲ." (86)

﴿ وَإِلَىٰ ثَمُودَ أَخَاهُمْ صَـٰلِحًا ۗ قَالَ يَـٰقَوْمِ ٱعْبُدُوا۟ ٱللَّهَ مَا لَكُم مِّنْ إِلَـٰهٍ غَيْرُهُۥ ۖ ﴾

"ಮತ್ತು 'ಸಮೂದ್'ರೆಡೆಗೆ ನಾವು ಅವರ ಸಹೋದರ ಸಾಲಿಹ್‌ರನ್ನು ಕಳುಹಿಸಿದೆವು. ಅವರು ಹೇಳಿದರು: ಓ ನನ್ನ ಜನರೇ, ಅಲ್ಲಾಹನನ್ನು ಆರಾಧಿಸಿರಿ. ನಿಮಗೆ ಅವನಲ್ಲದೇ ಬೇರೆ ಇಲಾಹ್ (ಆರಾಧನೆಗೆ ಹಕ್ಕುದಾರನಾದವನು) ಇಲ್ಲ." (87)

﴿ وَإِلَىٰ مَدْيَنَ أَخَاهُمْ شُعَيْبًا ۗ قَالَ يَـٰقَوْمِ ٱعْبُدُوا۟ ٱللَّهَ مَا لَكُم مِّنْ إِلَـٰهٍ غَيْرُهُۥ ۖ ﴾

"ಮತ್ತು ಮದ್‌ಯನ್(ಜನರ)ರೆಡೆಗೆ ಅವರ ಸಹೋದರ ಶುಐಬ್‌ರನ್ನು ಕಳುಹಿಸಿದೆವು. ಅವರು ಹೇಳಿದರು: ಓ ನನ್ನ ಜನರೇ, ಅಲ್ಲಾಹನನ್ನು ಆರಾಧಿಸಿರಿ. ನಿಮಗೆ ಅವನಲ್ಲದೇ ಬೇರೆ ಇಲಾಹ್ (ಆರಾಧನೆಗೆ ಹಕ್ಕುದಾರನಾದವನು)ಇಲ್ಲ." (88)

﴿ وَإِبْرَٰهِيمَ إِذْ قَالَ لِقَوْمِهِ ٱعْبُدُوا۟ ٱللَّهَ وَٱتَّقُوهُ ۖ ﴾

"ಮತ್ತು ಇಬ್ರಾಹೀಮ್ ತನ್ನ ಜನರಿಗೆ ಹೇಳಿದ ಸಂದರ್ಭ: ಅಲ್ಲಾಹನನ್ನು (ಮಾತ್ರ) ಆರಾಧಿಸಿರಿ ಮತ್ತು ಅವನನ್ನು ಭಯಪಡಿರಿ." (89)

ಮಹೋನ್ನತನಾದ ಅವನು ಮುಹಮ್ಮದ್(ﷺ)ರವರಿಗೆ ಹೀಗೆ ಅವತೀರ್ಣಗೊಳಿಸಿದನು:

﴿ قُلْ إِنِّىٓ أُمِرْتُ أَنْ أَعْبُدَ ٱللَّهَ مُخْلِصًا لَّهُ ٱلدِّينَ ﴿١١﴾ ﴾

"ಹೇಳಿರಿ, ದೀನ್‌ಅನ್ನು ನಿಷ್ಕಳಂಕವಾಗಿ ಅವನಿಗೇ ಸಮರ್ಪಿಸುವ ಮೂಲಕ

**85** ಕುರ್‌ಆನ್ 7:59
**86** ಕುರ್‌ಆನ್ 7:65
**87** ಕುರ್‌ಆನ್ 7:73
**88** ಕುರ್‌ಆನ್ 7:85
**89** ಕುರ್‌ಆನ್ 29:16

**ಅಲ್ಲಾಹನನ್ನು(ಮಾತ್ರ) ಆರಾಧಿಸುವಂತೆ ನನಗೆ ಆದೇಶಿಸಲಾಗಿದೆ.”** (90)

ಪ್ರವಾದಿ(ﷺ)ಹೇಳಿದರು:

«أُمِرْتُ أَنْ أُقَاتِلَ النَّاسَ حَتَّى يَشْهَدُوا أَنْ لَا إِلَهَ إِلَّا اللَّهُ وَأَنَّ مُحَمَّدًا رَسُولُ اللَّهِ»

**“ಅಲ್ಲಾಹನ ಹೊರತು ಆರಾಧನೆಗೆ ಹಕ್ಕುದಾರನಾದ ಯಾವುದೇ ಆರಾಧ್ಯನಿಲ್ಲ ಮತ್ತು ಮುಹಮ್ಮದ್ ಅಲ್ಲಾಹನ ಸಂದೇಶವಾಹಕ ಎಂಬುದನ್ನು ಸಾಕ್ಷ್ಯವಹಿಸುವ ತನಕ ಜನರೊಡನೆ ಹೋರಾಡಬೇಕೆಂದು ನನಗೆ ಆಜ್ಞಾಪಿಸಲಾಗಿದೆ.”** (91)

‘ಧರ್ಮದ ನಿಯಮವನ್ನು ಆಚರಿಸುವುದಕ್ಕೆ ಬದ್ಧನಾಗಿರುವ ಒಬ್ಬನಿಗೆ ಮೊದಲ ಕಡ್ಡಾಯ ಕರ್ಮವೇನೆಂದರೆ ಅಲ್ಲಾಹನಲ್ಲದೇ ಆರಾಧನೆಗೆ ಹಕ್ಕುದಾರನಾದ ಯಾವುದೇ ಆರಾಧ್ಯನಿಲ್ಲ’ ಎಂದು ಸಾಕ್ಷ್ಯವಹಿಸುವುದು ಮತ್ತು ನಂತರ ತಮ್ಮ ಅಗತ್ಯಗಳನ್ನು ನೆರವೇರಿಸುವುದು. ಸರ್ವೋನ್ನತನಾದ ಅವನು ಹೀಗೆಂದಿರುವನು:

﴿ فَٱعۡلَمۡ أَنَّهُۥ لَآ إِلَٰهَ إِلَّا ٱللَّهُ وَٱسۡتَغۡفِرۡ لِذَنۢبِكَ ﴾

**“ಆದ್ದರಿಂದ ಲಾ ಇಲಾಹ ಇಲ್ಲಲ್ಲಾಹ್(ಅಲ್ಲಾಹನಲ್ಲದೇ ಆರಾಧನೆಗೆ ಹಕ್ಕುದಾರನಾದವನು ಬೇರಾರೂ ಇಲ್ಲ) ಎಂಬುದನ್ನು ತಿಳಿದುಕೋ ಮತ್ತು ನಿನ್ನ ಪಾಪಗಳಿಗೆ ಕ್ಷಮೆ ಯಾಚಿಸು.”** (92)

ಇಸ್ಲಾಮನ್ನು ಪ್ರವೇಶಿಸಲಿಚ್ಛಿಸುವವನು ಮೊದಲು ಮಾಡಬೇಕಾದ ಕೆಲಸವು ಶಹಾದತೈನ್(ಎರಡು ಸಾಕ್ಷ್ಯ)ಗಳನ್ನು ಉಚ್ಚರಿಸುವುದಾಗಿದೆ. ಸಂದೇಶವಾಹಕರುಗಳ ಧರ್ಮಾಹ್ವಾನದ ಉದ್ದೇಶವು ತೌಹೀದ್ ಅಲ್–ಉಲೂಹಿಯ್ಯ ಆಗಿತ್ತೆಂಬುದು ಇದರ ಮೂಲಕ ಸ್ಪಷ್ಟವಾಗುತ್ತದೆ.

ಇದು ಏಕೆಂದರೆ ಅಲ್–ಉಲೂಹಿಯ್ಯ ಅಲ್ಲಾಹುವಿನ ಕುರಿತಾದ ವರ್ಣನೆಯಾಗಿರುತ್ತದೆ. ಅವನ ಅಲ್ಲಾಹ್ ಎಂಬ ಹೆಸರು ಇದನ್ನೇ ಸೂಚಿಸುತ್ತದೆ. ಆದ್ದರಿಂದ ಅಲ್ಲಾಹ್ ಉಲೂಹಿಯ್ಯವನ್ನು, ಅರ್ಥಾತ್ ಆರಾಧನೆಗೆ ಹಕ್ಕನ್ನು ಹೊಂದಿರುವವನು. ಇದು ‘ತೌಹೀದ್ ಅಲ್ ಇಬಾದ’ ಎಂದೂ ಅರಿಯಲ್ಪಡುತ್ತದೆ. ಉಬೂದಿಯ್ಯ (ಆರಾಧನೆ) ಎಂಬುದು ದಾಸನ ಒಂದು ವರ್ಣನೆಯಾಗಿರುವುದು. ಆತನ ಮುಂದೆ ತನ್ನ ಸಂಪೂರ್ಣ ಅವಲಂಬನೆಯಿಂದಾಗಿ ದಾಸ ಅಲ್ಲಾಹನನ್ನು ನಿಷ್ಕಳಂಕವಾಗಿ ಆರಾಧಿಸುವುದು ಕಡ್ಡಾಯವಾಗಿರುತ್ತದೆ. ಶೈಖುಲ್ ಇಸ್ಲಾಮ್ ಇಬ್ನುತೈಮಿಯ್ಯ(ﷺ) ಹೇಳಿದ್ದಾರೆ: **“ತಿಳಿಯಿರಿ, ಅಲ್ಲಾಹನ ಮುಂದೆ ಅವಲಂಬನೆ ದಾಸನ ಏನೆಂದರೆ ಅವನು ಅಲ್ಲಾಹನನ್ನು ಆರಾಧಿಸಬೇಕು**

---

**90** ಕುರ್‌ಆನ್ 39:11

**91** ಬುಖಾರಿ ಮತ್ತು ಮುಸ್ಲಿಮ್

**92** ಕುರ್‌ಆನ್ 47:19

**ಮತ್ತು ಯಾವುದನ್ನೂ ಆತನಿಗೆ ಭಾಗೀದಾರರನ್ನಾಗಿ ಮಾಡಬಾರದು ಮತ್ತು ಆತನಿಗೆ ಹೋಲಿಸಬಲ್ಲಂತಹ ಯಾವುದೇ ಭಾಗೀದಾರರಿಲ್ಲ. ಈ ಅವಲಂಬನೆಯ ಹೋಲಿಕೆಯು ಕೊಂಚ ಮಟ್ಟಿಗೆ ದೇಹವು ಆಹಾರ ಮತ್ತು ಪಾನೀಯವನ್ನು ಅವಲಂಬಿಸಿದಂತೆ ಇದೆ. ಈ ಎರಡು ಉದಾಹರಣೆಗಳ ನಡುವಿನ ವ್ಯತ್ಯಾಸವು ದೊಡ್ಡದಾಗಿರಬಹುದು, ನಿಶ್ಚಯವಾಗಿಯೂ ಒಬ್ಬ ದಾಸನ ನೈಜತೆಯು ಅವನ ಹೃದಯ ಹಾಗೂ ಅವನ ಆತ್ಮವಾಗಿದೆ ಮತ್ತು ಅಲ್ಲಾಹನ ಮೂಲಕವಲ್ಲದೆ ಬೇರೆ ಯಾವುದೇ ಸಂಸ್ಕರಣೆ ಅವುಗಳಿಗಿಲ್ಲ. ಆ ಅಲ್ಲಾಹುವಿನ ಹೊರತು ಯಾವನೂ ಕೂಡಾ ಆರಾಧನೆಗೆ ಹಕ್ಕುದಾರನಲ್ಲ ಮತ್ತು ಆತನ ಸ್ಮರಣೆಯ ಮೂಲಕವಲ್ಲದೆ ಬೇರೆ ಶಾಂತಿ ದೊರೆಯಲಾರದು. ಆದ್ದರಿಂದ ದಾಸನು ಅಲ್ಲಾಹನ ಹೊರತಾಗಿ ಹರ್ಷ ಮತ್ತು ಸಂತೋಷವನ್ನು ಗಳಿಸುವುದಾದರೆ ಅದು ಹಾಗೇ ಉಳಿಯಲಾರದು. ಬದಲಾಗಿ ಅದು ಒಂದು ವಿಧದಿಂದ ಇನ್ನೊಂದು ವಿಧಕ್ಕೆ ಮತ್ತು ಒಬ್ಬನಿಂದ ಮತ್ತೊಬ್ಬನಿಗೆ ಬದಲಾಗುವುದಷ್ಟೇ. ಆದರೆ ಅಲ್ಲಾಹುವಿನ ಕಡೆಯಿಂದ ಸಿಗುವ ಸಂತೋಷ, ಅವನು ಯಾವಾಗಲೂ ಅದನ್ನು ಪಡೆಯುತ್ತಾನೆ. ಮತ್ತು ಅವನೆಲ್ಲಿಗೆ ಹೋದರೂ ಅವನ ಪ್ರಭು ಅವನೊಂದಿಗಿರುತ್ತಾನೆ.”** [93]

ತೌಹೀದ್‌ನ ಈ ವಿಧವು ಸಂದೇಶವಾಕರುಗಳ ಧರ್ಮಾಹ್ವಾನದ ತಿರುಳಾಗಿತ್ತು. ಏಕೆಂದರೆ ಎಲ್ಲಾ ಕರ್ಮಗಳು ಈ ಬುನಾದಿಯ ಮೇಲೆ ನಿಂತಿದೆ. ಇದನ್ನು ವಾಸ್ತವೀಕರಿಸದೇ ಅವುಗಳು ಸರಿಯಾಗುವುದಿಲ್ಲ. ಒಂದು ವೇಳೆ ಇದನ್ನು ವಾಸ್ತವೀಕರಿಸದಿದ್ದರೆ ಇದರ ವಿರುದ್ಧವಾದ ಶಿರ್ಕ್ ಉಂಟಾಗುವುದು.

ಸರ್ವೋನ್ನತನಾದ ಅಲ್ಲಾಹು ಹೇಳಿದನು:

﴿ إِنَّ ٱللَّهَ لَا يَغۡفِرُ أَن يُشۡرَكَ بِهِۦ ﴾

**“ನಿಶ್ಚಯವಾಗಿಯೂ ಅಲ್ಲಾಹು ತನ್ನ ಆರಾಧನೆಯಲ್ಲಿ ತನಗೆ ಭಾಗೀದಾರರನ್ನಾಗಿ ಮಾಡುವುದನ್ನು ಕ್ಷಮಿಸಲಾರನು.”** [94]

ಸರ್ವೋನ್ನತನು ಹೇಳಿರುವನು:

﴿ وَلَوۡ أَشۡرَكُواْ لَحَبِطَ عَنۡهُم مَّا كَانُواْ يَعۡمَلُونَ ﴿٨٨﴾ ﴾

**“ಅವರು ಶಿರ್ಕ್(ಭಾಗೀದಾರಿಕೆ)ಯನ್ನು ನಿಶ್ಚಯಿಸಿದರೆ ಖಂಡಿತ ಅವರು ಮಾಡುತ್ತಿದ್ದಂತಹ ಕರ್ಮಗಳೆಲ್ಲ ವ್ಯರ್ಥವಾಗಿ ಬಿಡುತ್ತಿದ್ದವು.”** [95]

ಸರ್ವೋನ್ನತನಾದ ಅವನು ಹೇಳಿದನು:

---

**93** ಮಜ್ಮೂಉಲ್ ಫತಾವಾ 1/24

**94** ಕುರ್‌ಆನ್ 4:116

**95** ಕುರ್‌ಆನ್ 6:88

﴿ لَئِنْ أَشْرَكْتَ لَيَحْبَطَنَّ عَمَلُكَ وَلَتَكُونَنَّ مِنَ ٱلْخَٰسِرِينَ ﴿٦٥﴾ ﴾

**“ನೀನು ಒಂದು ವೇಳೆ ಅಲ್ಲಾಹುವಿನ ಆರಾಧನೆಯಲ್ಲಿ ಇತರರನ್ನು ಸೇರಿಸಿದರೆ, ನಿಶ್ಚಯವಾಗಿಯೂ ನಿನ್ನ ಎಲ್ಲಾ ಕರ್ಮಗಳು ವ್ಯರ್ಥವಾಗುವುದು ಮತ್ತು ನೀನು ನಿಜವಾಗಿಯೂ ನಷ್ಟಕ್ಕೊಳಗಾದವರಲ್ಲಾಗುವಿ.”** [96]

ಈ ಕಾರಣದಿಂದಲೇ ತೌಹೀದ್‌ನ ಈ ಪ್ರಕಾರವು ದಾಸರ ಮೇಲೆ ಪ್ರಥಮ ಬಾಧ್ಯತೆಯಾಗಿದೆ.

ಮಹೋನ್ನತನಾದ ಅವನು ಹೀಗೆ ಹೇಳಿರುವನು:

﴿ ۞ وَٱعْبُدُوا۟ ٱللَّهَ وَلَا تُشْرِكُوا۟ بِهِۦ شَيْـًٔا ۖ وَبِٱلْوَٰلِدَيْنِ إِحْسَٰنًا ﴾

**“ಅಲ್ಲಾಹನೊಬ್ಬನನ್ನೇ ಆರಾಧಿಸಿರಿ ಮತ್ತು ಆರಾಧನೆಯಲ್ಲಿ ಅವನೊಂದಿಗೆ ಯಾರನ್ನೂ ಸೇರಿಸದಿರಿ ಮತ್ತು ನಿಮ್ಮ ಮಾತಾಪಿತರಿಗೆ ಒಳ್ಳೆಯದನ್ನು ಮಾಡಿರಿ.”** [97]

ಸರ್ವೋನ್ನತನಾದ ಅವನು ಹೇಳಿದನು:

﴿ ۞ وَقَضَىٰ رَبُّكَ أَلَّا تَعْبُدُوٓا۟ إِلَّآ إِيَّاهُ وَبِٱلْوَٰلِدَيْنِ إِحْسَٰنًا ۚ ﴾

**“ಮತ್ತು ನಿಮ್ಮ ಪ್ರಭು ವಿಧಿಸಿರುತ್ತಾನೆ, ಏನೆಂದರೆ ಅವನೊಬ್ಬನೇ ಹೊರತು ಇನ್ಯಾರನ್ನೂ ಆರಾಧಿಸಬೇಡಿರಿ ಮತ್ತು ನಿಮ್ಮ ತಂದೆ ತಾಯಿಯರಿಗೆ ಒಳ್ಳೆಯದನ್ನು ಮಾಡಿರಿ.”** [98]

ಸರ್ವೋನ್ನತನಾದ ಅವನು ಹೇಳಿದನು:

﴿ ۞ قُلْ تَعَالَوْا۟ أَتْلُ مَا حَرَّمَ رَبُّكُمْ عَلَيْكُمْ ۖ أَلَّا تُشْرِكُوا۟ بِهِۦ شَيْـًٔا ۖ وَبِٱلْوَٰلِدَيْنِ إِحْسَٰنًا ۖ ﴾

**“ಹೇಳಿರಿ: ಇತ್ತ ಬನ್ನಿರಿ, ನಿಮ್ಮ ಪ್ರಭು ನಿಮ್ಮನ್ನು ಯಾವುದರಿಂದ ತಡೆದಿರುವನೋ ಎಂಬುದನ್ನು ನಾನು ಓದಿಹೇಳುವೆನು. ಅವನ ಆರಾಧನೆಯಲ್ಲಿ ಅವನೊಂದಿಗೆ ಬೇರೆ ಯಾವುದನ್ನೂ ಸೇರಿಸಬೇಡಿರಿ, ನಿಮ್ಮ ಮಾತಾಪಿತರೊಂದಿಗೆ ಒಳ್ಳೆಯ ರೀತಿಯಲ್ಲಿರಿ ಮತ್ತು ವಿಧೇಯರಾಗಿರಿ.”** [99]

---

**96** ಕುರ್‌ಆನ್ 39:65
**97** ಕುರ್‌ಆನ್ 4:36
**98** ಕುರ್‌ಆನ್ 17:23
**99** ಕುರ್‌ಆನ್ 6:151

## ಅಧ್ಯಾಯ–2

# ಶಹಾದತೈನ್‌ನ ಅರ್ಥ ವಿವರಣೆ ಹಾಗೂ ಅದರ ಅಪಾರ್ಥದ ಕುರಿತು ಸ್ಪಷ್ಟನೆ. ಅದರ ಸ್ತಂಭಗಳು, ಅದರ ಶರ್ತಗಳು, ಅದರ ಬೇಡಿಕೆಗಳು ಮತ್ತು ಅದನ್ನು ನಿಷ್ಫಲಗೊಳಿಸುವವುಗಳು

ಒಂದನೆಯದಾಗಿ, ಶಹಾದತೈನ್‌ನ ಅರ್ಥ:

1) ಲಾ ಇಲಾಹ ಇಲ್ಲಲ್ಲಾಹ್ (ಅಲ್ಲಾಹನಲ್ಲದೇ ಆರಾಧನೆಗೆ ಹಕ್ಕುದಾರನು ಯಾರೂ ಇಲ್ಲ) ಎಂಬ ಸಾಕ್ಷ್ಯದ ಅರ್ಥ.

ಅಲ್ಲಾಹ್‌ನನ್ನು ಬಿಟ್ಟು ಬೇರೆ ಯಾರೂ ಕೂಡಾ ಆರಾಧಿಸಲ್ಪಡಲು ಹಕ್ಕುದಾರರಲ್ಲ ಎಂಬ ವಿಶ್ವಾಸ ಹಾಗೂ ದೃಢೀಕರಣ, ಅದರಲ್ಲಿ ಸ್ಥಿರವಾಗಿರುವಿಕೆ ಮತ್ತು ಅದರ ಮೇಲೆ ಕಾರ್ಯವೆಸಗುವುದು. ಅದ್ದರಿಂದ ಲಾ ಇಲಾಹ ಎಂಬುದು ಅಲ್ಲಾಹನ ಹೊರತು ಇತರರ ಅದು ಯಾರೇ ಆಗಲಿ ಅವರ ಆರಾಧಿಸಲ್ಪಡುವ ಹಕ್ಕನ್ನು ನಿಷೇಧಿಸುತ್ತದೆ ಮತ್ತು 'ಇಲ್ಲಲ್ಲಾಹ್' ಎಂಬುವುದು ಅಲ್ಲಾಹ್ ಮಾತ್ರ ಆರಾಧನೆಗೆ ಹಕ್ಕುದಾರನು ಎಂಬುದನ್ನು ದೃಢೀಕರಿಸುತ್ತದೆ. ಈ ಪ್ರತಿಜ್ಞಾ ವಾಕ್ಯದ ಸಾಮಾನ್ಯ ಅರ್ಥವು ಅಲ್ಲಾಹ್‌ನಲ್ಲದೆ ಆರಾಧನೆಗೆ ನಿಜವಾಗಿಯೂ ಹಕ್ಕುದಾರರು ಯಾರೂ ಇಲ್ಲ. 'ಲಾ' ಎಂಬ ಪದವು 'ಬಿ ಹಕ್ಕಿನ್' (ಸತ್ಯವಾಗಿಯೂ) ಎಂಬ ಪದದೊಂದಿಗೆ ಬರಲೇಬೇಕು.

ಇಲ್ಲಿ 'ಅಸ್ತಿತ್ವ' ಎಂಬ ಪದವನ್ನು ಉಪಯೋಗಿಸಬಾರದು. (ಅಂದರೆ, ಅಲ್ಲಾಹನ ಹೊರತು ಬೇರೆ ಯಾವುದೇ ಆರಾಧ್ಯನ ಅಸ್ತಿತ್ವವಿಲ್ಲ) ಏಕೆಂದರೆ ಅಲ್ಲಾಹನ ಹೊರತು ಈಗ ಬಹಳಷ್ಟು ಮಿಥ್ಯಾರಾಧ್ಯರುಗಳು ಇದ್ದಾರೆ.

ಈ ಮಿಥ್ಯದೇವರುಗಳ ಆರಾಧನೆಯು ಅಲ್ಲಾಹನದೇ ಆರಾಧನೆಯಾಗಿದೆ ಎಂಬ ಅರ್ಥವು ಈ ವ್ಯಾಖ್ಯಾನದಿಂದ ಆಗುತ್ತದೆ ಮತ್ತು ಇದು ಅತೀ ಕೆಟ್ಟ ವ್ಯಾಖ್ಯಾನವಾಗಿದೆ. ಭೂಮಿಯಲ್ಲಿರುವ ಅತೀ ದೊಡ್ಡ ಸತ್ಯನಿಷೇಧಿ ಜನಾಂಗವಾದ 'ವಹ್‌ದ್ವತುಲ್–ವುಜೂದ್'ನ ಜನರ ಮದ್‌ಹಬ್ ಆಗಿದೆ ಇದು. ಈ ಕಲಿಮವನ್ನು ಕೆಲವರು ಅನೇಕ ಕೆಟ್ಟ ರೀತಿಯಲ್ಲಿ ವ್ಯಾಖ್ಯಾನ ಮಾಡಿದ್ದಾರೆ. ಅವುಗಳಲ್ಲಿ ಕೆಲವು ಹೀಗಿದೆ:

1) ಅಲ್ಲಾಹು ಅಲ್ಲದೇ ಆರಾಧಿಸಲ್ಪಡುವುದು ಯಾವುದೂ ಇಲ್ಲ. ಇದು ಮಿಥ್ಯ ಹಾಗೂ ಸುಳ್ಳು ವ್ಯಾಖ್ಯಾನವಾಗಿದೆ. ಏಕೆಂದರೆ ಸತ್ಯವಾಗಿಯೂ ಅಥವಾ ಮಿಥ್ಯವಾಗಿಯೂ ಆರಾಧಿಸಲ್ಪಡುವ ಎಲ್ಲ ವಸ್ತುಗಳೂ ಅಲ್ಲಾಹುವೇ ಆಗಿದೆ ಎಂದಾಗುತ್ತದೆ. ಇದರ ಈಗ ತಾನೇ ಅದರ ಸ್ಪಷ್ಟೀಕರಣವು ಮುಂದೆ ಹೋಯಿತು.

2) ಅಲ್ಲಾಹನಲ್ಲದೇ ಬೇರೆ ಸೃಷ್ಟಿಕರ್ತನಿಲ್ಲ. ಇದು ಸರಿಯಾದ ವ್ಯಾಖ್ಯಾನದ ಒಂದು ಭಾಗ ಮಾತ್ರ. ಆದರೆ ಇದು ಲಕ್ಷಿತ ಉದ್ದೇಶಿತ ಅರ್ಥ ಅಲ್ಲ. ಏಕೆಂದರೆ ಇದು ತೌಹೀದ್

ಅರ್–ರುಬೂಬಿಯ್ಯವನ್ನು ಮಾತ್ರ ದೃಢೀಕರಿಸುತ್ತದೆ ಮತ್ತು ಇದು ಸಾಕಾಗಲಾರದು. ಮಕ್ಕಾ ಮುಶ್ರಿಕರ ತೌಹೀದ್ ಇಷ್ಟೇ ಆಗಿತ್ತು.

3) ಅಲ್ಲಾಹನಿಗಲ್ಲದೆ ಬೇರೆ ಹಾಕಿಮಿಯ್ಯ (ನ್ಯಾಯ ತೀರ್ಮಾನ)ವಿಲ್ಲ. ಇದು ಕೂಡಾ ಅದರ ಒಂದು ಭಾಗಮಾತ್ರ. ಆದರೂ ಉದ್ದೇಶಿತ ಅರ್ಥ ಅಲ್ಲ ಮತ್ತು ಇದು ಮಾತ್ರ ಸಾಕಾಗಲಾರದು. ಏಕೆಂದರೆ ಒಬ್ಬನು ಕೇವಲ ಹಾಕಿಮಿಯ್ಯದ ವಿಷಯದಲ್ಲಿ ಮಾತ್ರ ಅಲ್ಲಾಹನನ್ನು ಏಕನಾಗಿಸಿದರೆ ಮತ್ತು ಪ್ರಾರ್ಥನೆಯಲ್ಲಿ ಅಥವಾ ಆರಾಧನೆಯ ಇತರ ವಿಷಯಗಳಲ್ಲಿ ಇತರರನ್ನು ಭಾಗೀದಾರರನ್ನಾಗಿಸಿದರೆ ಅವನು ಮುವಹ್ಹಿದ್ ಅಲ್ಲ.

ಮೇಲಿನ ಎಲ್ಲಾ ವ್ಯಾಖ್ಯಾನಗಳು ಮಿಥ್ಯ ಅಥವಾ ಕೊರತೆಯುಳ್ಳವುಗಳಾಗಿವೆ ಮತ್ತು ಇವುಗಳನ್ನು ಇಲ್ಲಿ ಸೂಚಿಸಿದರ ಕಾರಣವು ಈ ಕಾಲದಲ್ಲಿ ಕೆಲವು ಪುಸ್ತಕಗಳಲ್ಲಿ ಇಂತಹ ವಾದವನ್ನು ಕಾಣಬಹುದು. ಸಲಫಿಗಳ ಪ್ರಕಾರ ಸಾಕ್ಷ್ಯ ವಚನದ ಸರಿಯಾದ ವ್ಯಾಖ್ಯಾನವೇನೆಂದರೆ **"ಅಲ್ಲಾಹನ ಹೊರತು ಆರಾಧನೆಗೆ ಹಕ್ಕುದಾರನು ಯಾರೂ ಇಲ್ಲ"** ಎಂದಾಗಿದೆ.

**2) ಮುಹಮ್ಮದ್(ﷺ) ಅಲ್ಲಾಹನ ಪ್ರವಾದಿ ಎಂಬ ಸಾಕ್ಷ್ಯ ವಚನದ ಅರ್ಥ**

ಅವರು ಎಲ್ಲಾ ಜನರಿಗೂ ಅಲ್ಲಾಹನ ದಾಸ ಹಾಗೂ ಸಂದೇಶವಾಹಕರು ಎಂಬುದನ್ನು ಆಂತರಿಕ ಹಾಗೂ ಬಹಿರಂಗವಾಗಿಯೂ ಒಪ್ಪಿಕೊಳ್ಳುವುದು ಮತ್ತು ಅದಕ್ಕೆ ತಕ್ಕ ರೀತಿಯಲ್ಲಿ ನಡೆದುಕೊಳ್ಳುವುದು ಅಂದರೆ ಅವರು ಆದೇಶಿಸಿದ್ದನ್ನು ಪಾಲಿಸುವುದು, ಅವರು ನಮಗೆ ತಿಳಿಸಿದ್ದನ್ನು ದೃಢೀಕರಿಸುವುದು, ಅವರು ಯಾವುದನ್ನು ನಿಷೇಧಿಸಿದ್ದರೋ, ಯಾವುದರ ಕುರಿತು ಎಚ್ಚರಿಕೆ ನೀಡಿರುವರೋ ಅದರಿಂದ ದೂರವಿರುವುದು, ಅವರು ಶಾಸನಗೊಳಿಸಿದ ರೀತಿಗೆ ಅನ್ಯವಾದ ರೀತಿಯಲ್ಲಿ ಅಲ್ಲಾಹನನ್ನು ಆರಾಧಿಸದಿರುವುದು.

ಎರಡನೆಯದಾಗಿ, ಶಹಾದತೈನ್‌ನ ಸ್ತಂಭಗಳು

ಲಾ ಇಲಾಹ ಇಲ್ಲಲ್ಲಾಹ್ ಎಂಬ ವಚನವು 2 ಸ್ಥಂಭಗಳನ್ನು ಹೊಂದಿದೆ.

1. ನಿರಾಕರಣೆ
2. ದೃಢೀಕರಣೆ

**ಮೊದಲ ಸ್ತಂಭ : ನಿರಾಕರಣೆ**

ಲಾ ಇಲಾಹ ಎಂಬ ಭಾಗವು ಎಲ್ಲಾ ರೀತಿಯ ದೇವ ಸಹಭಾಗಿತ್ವವನ್ನು ನಿರಾಕರಿಸುತ್ತದೆ ಮತ್ತು ಅಲ್ಲಾಹನ ಹೊರತು ಎಲ್ಲಾ ಆರಾಧನೆಯ ವಸ್ತುಗಳನ್ನು ನಿಷೇಧಿಸುವುದು ಕಡ್ಡಾಯಗೊಳಿಸುತ್ತದೆ.

**ಎರಡನೇ ಸ್ತಂಭ :ದೃಢೀಕರಣ**

ಇಲ್ಲಲ್ಲಾಹ್ ಎಂಬ ಭಾಗವು ಅಲ್ಲಾಹು ಅಲ್ಲದೇ, ಬೇರೆ ಯಾರೂ ಆರಾಧನೆಗೆ

ಅರ್ಹರಲ್ಲ ಎಂಬುದನ್ನು ದೃಢೀಕರಿಸುತ್ತದೆ ಮತ್ತು ಅದರಂತೆ ನಡೆದುಕೊಳ್ಳುವುದನ್ನು ಕಡ್ಡಾಯಗೊಳಿಸುತ್ತದೆ.

ಈ ಎರಡೂ ಸ್ತಂಭಗಳ ಅರ್ಥವು ಕುರ್‌ಆನಿನ ಅನೇಕ ಸೂಕ್ತಿಗಳಲ್ಲಿ ವ್ಯಕ್ತಪಡಿಸಲಾಗಿದೆ.

ಮಹೋನ್ನತನಾದ ಆತನ ವಚನವು ಹೀಗಿದೆ:

﴿ فَمَن يَكْفُرْ بِٱلطَّٰغُوتِ وَيُؤْمِنۢ بِٱللَّهِ فَقَدِ ٱسْتَمْسَكَ بِٱلْعُرْوَةِ ٱلْوُثْقَىٰ ﴾

**“ಯಾರು ತಾಗೂತ್‌ಅನ್ನು ನಿಷೇಧಿಸುತ್ತಾನೋ ಮತ್ತು ಅಲ್ಲಾಹನೊಬ್ಬನ ಮೇಲೆಯೇ ವಿಶ್ವಾಸವಿಡುತ್ತಾನೋ, ಅವನು ಅತ್ಯಂತ ವಿಶ್ವಾಸಯೋಗ್ಯವಾದ ಆಧಾರವನ್ನು ಹಿಡಿದುಕೊಂಡನು. ಅದು ಎಂದಿಗೂ ಮುರಿಯಲಾರದಂಥಹವು.”** (100)

ಅವನ ವಚನವಾದ ‘ಯಾರು ತಾಗೂತನ್ನು ನಿಷೇಧಿಸುತ್ತಾನೋ’ ಎಂಬುದು ಪ್ರಥಮ ಸ್ಥಂಭವಾದ ಲಾ ಇಲಾಹದ ಅರ್ಥವಾಗಿದೆ ಮತ್ತು ಅವನ ವಚನವು ಮತ್ತು ಅಲ್ಲಾಹನಲ್ಲಿ ವಿಶ್ವಾಸವಿಡುತ್ತಾನೋ ಎಂಬುದು ಎರಡನೇ ಸ್ಥಂಭವಾದ ಇಲ್ಲಲ್ಲಾಹ್‌ನ ಅರ್ಥವಾಗಿದೆ.

ಇದೇ ರೀತಿಯಲ್ಲಿ ಇಬ್ರಾಹೀಮ್(ﷺ)ರವರು ಹೇಳಿದ ಅವನ ವಚನವು ಹೀಗಿದೆ:

﴿ إِنَّنِى بَرَآءٌ مِّمَّا تَعْبُدُونَ ﴿٢٦﴾ إِلَّا ٱلَّذِى فَطَرَنِى ﴾

**“ನಿಶ್ಚಯವಾಗಿಯೂ ನೀವು ಯಾವುದರ ಆರಾಧನೆಯನ್ನು ಮಾಡುತ್ತಿರುವಿರೋ ಅದರಿಂದ ನಾನು ಸಂಬಂಧಮುಕ್ತನು. ಆದರೆ ನನ್ನನ್ನು ಸೃಷ್ಟಿಸಿದವನ ಹೊರತು.”** (101)

ಅವನ ವಚನವಾದ ‘ನಿಶ್ಚಯವಾಗಿಯೂ ನಾನು ಮುಕ್ತನು’ ಎಂಬುದು ಪ್ರಥಮ ಸ್ಥಂಭವು ಸೂಚಿಸುವ ನಿರಾಕರಣೆಯಾಗಿದೆ ಮತ್ತು ಅವನ ವಚನವಾದ ‘ನನ್ನನ್ನು ಸೃಷ್ಟಿಸಿದವನೊಬ್ಬನ ಹೊರತು ಎಂಬುದರ ಅರ್ಥವು ಎರಡನೇ ಸ್ಥಂಭವು ಸೂಚಿಸುವ ದೃಢೀಕರಣೆಯಾಗಿದೆ.

ಮುಹಮ್ಮದ್ ಅಲ್ಲಾಹನ ಸಂದೇಶವಾಹಕರು ಎಂಬ ವಚನವು ಎರಡು ಸ್ತಂಭಗಳನ್ನು ಹೊಂದಿದೆ. ಅದು ನಮ್ಮ ವಚನವಾದ ಅವನ ದಾಸ ಮತ್ತು ಅವನ ಸಂದೇಶವಾಹಕರು ಎಂಬುದರಲ್ಲಿ ಸೇರಿಕೊಂಡಿದೆ ಮತ್ತು ಅವುಗಳು ಅವರಿಗೆ ಸಂಬಂಧಿಸಿ ಅತಿಶಯೋಕ್ತಿ ಮತ್ತು ಕೊರತೆ ಇವೆರಡನ್ನು ನಿರಾಕರಿಸುತ್ತದೆ. ಹೀಗೆ ಅವರು ಆತನ ದಾಸ ಹಾಗೂ ಸಂದೇಶವಾಹಕರ ಮತ್ತು ಈ ಎರಡು ಅತ್ಯುತ್ತಮ ವಿಶೇಷಣಗಳಲ್ಲಿ ಸೃಷ್ಟಿಯಲ್ಲಿ ಅತ್ಯಂತ ದೋಷರಹಿತರಾದವರು. ಇಲ್ಲಿ ದಾಸ ಎನ್ನುವ ಪದದ ಅರ್ಥವು ತನ್ನ ಒಡೆಯನಾದವನ ಆರಾಧನೆಯನ್ನು ಮಾಡುವವನು ಎಂದಾಗಿದೆ. ಅಂದರೆ ಅವರು(ﷺ) ಇತರ ಎಲ್ಲಾ

100 ಕುರ್‌ಆನ್ 2:256

101 ಕುರ್‌ಆನ್ 43:26,27

ಸೃಷ್ಟಿಗಳಂತೆ ಒಬ್ಬ ಸೃಷ್ಟಿಸಲ್ಪಟ್ಟ ಮನುಷ್ಯರಾಗಿರುವರು. ಅವರಿಗೆ ಸಂಭವಿಸುವುದು ಇವರಿಗೂ ಸಂಭವಿಸುತ್ತದೆ.

ಸರ್ವೋನ್ನತನಾದವನು ಹೇಳಿದನು:

﴿ قُلْ إِنَّمَآ أَنَا۠ بَشَرٌ مِّثْلُكُمْ ﴾

**"ಹೇಳಿರಿ, ನಾನು ನಿಮ್ಮಂತೆಯೇ ಓರ್ವ ಮನುಷ್ಯ."** (102)

ಅವರು(ﷺ) ಅಲ್ಲಾಹನಿಗೆ ಅಲ್-ಉಬೂದಿಯ್ಯವನ್ನು ನಿಜವಾದ ರೀತಿಯಲ್ಲಿ ಈಡೇರಿಸಿದರು. ಅಲ್ಲಾಹು ಅವರನ್ನು ಹೊಗಳಿದ್ದಾನೆ ಮತ್ತು ಹೇಳಿದ್ದಾನೆ:

﴿ أَلَيْسَ ٱللَّهُ بِكَافٍ عَبْدَهُۥ ﴾

**"ಅಲ್ಲಾಹು ತನ್ನ ದಾಸರಿಗೆ ಸಾಕಾಗಲಾರನೇ?"** (103)

ಮಹೋನ್ನತನಾದ ಅವನು ಹೇಳಿರುವನು:

﴿ ٱلْحَمْدُ لِلَّهِ ٱلَّذِىٓ أَنزَلَ عَلَىٰ عَبْدِهِ ٱلْكِتَٰبَ ﴾

**"ಸರ್ವಸ್ತುತಿಗಳು ಮತ್ತು ಕೃತಜ್ಞತೆಗಳು ಅಲ್ಲಾಹುವಿಗೆ ಮೀಸಲು, ಅವನು ತನ್ನ ದಾಸನಿಗೆ ಗ್ರಂಥವನ್ನು ಅವತೀರ್ಣಗೊಳಿಸಿದನು."** (104)

﴿ سُبْحَٰنَ ٱلَّذِىٓ أَسْرَىٰ بِعَبْدِهِۦ لَيْلًا مِّنَ ٱلْمَسْجِدِ ٱلْحَرَامِ ﴾

**"ತನ್ನ ದಾಸನನ್ನು ಮಸ್ಜಿದುಲ್ ಹರಾಮ್ ನಿಂದ ರಾತ್ರಿಯಲ್ಲಿ ಪ್ರಯಾಣ ಕರೆದುಕೊಂಡು ಹೋದವನು ಪರಮಪಾವನನು."** (105)

'ಸಂದೇಶವಾಹಕ'ನ ಅರ್ಥವು ಜನರನ್ನು ಅಲ್ಲಾಹನೆಡೆಗೆ ಆಹ್ವಾನಿಸುವವನು, ಶುಭವಾರ್ತೆ ಹಾಗೂ ಎಚ್ಚರಿಕೆಯನ್ನು ತರುವವನು. ಸಾಕ್ಷ್ಯ ವಚನವು ಎರಡು. ಅವರ ಸಾಕ್ಷ್ಯವು ಈ ಕೆಳಗಿನ ಎರಡು ವಿಶೇಷಣಗಳನ್ನು ಒಳಗೊಂಡಿದೆ.

ಅವರ(ﷺ)ವಿಷಯದಲ್ಲಿ ಅತಿಶಯೋಕ್ತಿ ಮತ್ತು ತಾತ್ಸಾರ ಇವೆರಡರ ನಿರಾಕರಣೆ. ನಿಜವಾಗಿಯೂ ಅವರ(ﷺ) ಉಮ್ಮತ್‌ನವರು ಎಂದು ಹೇಳಿಕೊಳ್ಳುವ ಅನೇಕರು ಅವರ ಕುರಿತು ಅತಿಶಯವಾಗಿ ಯೋಚಿಸಿದ್ದಾರೆ ಮತ್ತು ಅವರ ಕುರಿತು ಎಷ್ಟು ಹದ್ದು ಮೀರಿದ್ದಾರೆಂದರೆ ಅವರು ಅವರನ್ನು(ﷺ) ಅಲ್ಲಾಹನ ಭಕ್ತನ ಸ್ಥಾನದಿಂದ ಏರಿಸಿ

---

**102** ಕುರ್‌ಆನ್ 18:110
**103** ಕುರ್‌ಆನ್ 39:36
**104** ಕುರ್‌ಆನ್ 18:1
**105** ಕುರ್‌ಆನ್ 17:1

ಅಲ್ಲಾಹನೊಡನೆ ಆರಾಧನೆಯಲ್ಲಿ ಭಾಗೀದಾರಿಕೆ ಮಾಡುವ ಮಟ್ಟಕ್ಕೆ ಏರಿಸಿದ್ದಾರೆ. ಅವರು ಪ್ರವಾದಿವರ್ಯರಿಂದ ಸಹಾಯವನ್ನು ಯಾಚಿಸುತ್ತಾರೆ ಮತ್ತು ಅಲ್ಲಾಹನಿಗೆ ಮಾತ್ರ ಕೊಡಲು ಅಥವಾ ಮಾಡಲು ಸಾಮರ್ಥ್ಯವಿರುವಂತಹವುಗಳನ್ನು ಅವರಲ್ಲಿ ಕೇಳುತ್ತಾರೆ. ಅಂದರೆ ಅಗತ್ಯಗಳ ಈಡೇರಿಕೆ, ಮತ್ತು ಸಂಕಷ್ಟ ನಿವಾರಣೆ ಮುಂತಾದುವುಗಳು.

ಅದೇ ಸಮಯದಲ್ಲಿ ಇನ್ನು ಕೆಲವರು ಅವರ ಸಂದೇಶವನ್ನು ನಿರಾಕರಿಸುತ್ತಾರೆ ಮತ್ತು ಅವರ ಅನುಸರಣೆಯಲ್ಲಿ ತಾತ್ಸಾರ ತೋರಿಸುತ್ತಾರೆ ಮತ್ತು ಅವರು ಹೇಳಿದ್ದಕ್ಕೆ ವಿರುದ್ಧವಾಗಿ ಅಭಿಪ್ರಾಯ ಹೇಳಿಕೆಗಳನ್ನು ಅವಲಂಬಿಸುತ್ತಾರೆ ಮತ್ತು ಅವರು ತಮಗಿಷ್ಟ ಬಂದಂತೆ ಪ್ರವಾದಿವರ್ಯ(ﷺ)ರ ಹೇಳಿಕೆಗಳಲ್ಲಿ 'ತಅವೀಲ್' (ದುರ್ವ್ಯಾಖ್ಯಾನ) ಮಾಡುತ್ತಾರೆ.

ಮೂರನೆಯದಾಗಿ, ಶಹಾದತೈನ್‌ನ ಶರ್ತಗಳು:

ಅ) ಲಾಇಲಾಹ ಇಲ್ಲಲ್ಲಾಹ್ ಸಾಕ್ಷ್ಯವಚನದ ಶರತ್ತುಗಳು: ಇದು ಏಳು ಷರತ್ತುಗಳನ್ನು ಒಳಗೊಂಡಿದೆ ಮತ್ತು ಇವುಗಳೆಲ್ಲವನ್ನು ಒಳಗೂಡಿಸಿ ಹೇಳದೇ ಈ ಸಾಕ್ಷ್ಯವಚನವು ಒಬ್ಬನಿಗೆ ಪ್ರಯೋಜನಕಾರಿಯಾಗಲಾರದು.

1) ಜ್ಞಾನ : ಅಜ್ಞಾನವನ್ನು ಇಲ್ಲವಾಗಿಸುವಂತಹದು.

2) ಖಚಿತತೆ : ಸಂಶಯವನ್ನು ಇಲ್ಲವಾಗಿಸುವಂತಹದು.

3) ಸ್ವೀಕಾರ : ನಿರಾಕರಣೆಯನ್ನು ಇಲ್ಲವಾಗಿಸುವಂತಹದು.

4) ಪಾಲಿಸುವುದು : ತೊರೆಯುವಿಕೆಯನ್ನು ಇಲ್ಲವಾಗಿಸುವಂತಹದು.

5) ಏಕನಿಷ್ಠತೆ : ಶಿರ್ಕ್‌ಅನ್ನು ಇಲ್ಲವಾಗಿಸುವಂತಹದು.

6) ಸತ್ಯಪೂರ್ಣತೆ : ಸುಳ್ಳುಗಾರಿಕೆಯನ್ನು ಇಲ್ಲವಾಗಿಸುವಂತಹದು

7) ಪ್ರೀತಿ : ದ್ವೇಷವನ್ನು ಇಲ್ಲವಾಗಿಸುವಂತಹದು.

ವಿಸ್ತಾರವಾಗಿ ಹೇಳುವುದಾದರೆ ಅವುಗಳು ಹೀಗಿವೆ:

1. ಜ್ಞಾನ: ಶಹಾದತ್‌ನ ಜ್ಞಾನದ ಉದ್ದೇಶಿತ ಅರ್ಥವು ಅಜ್ಞಾನವನ್ನು ಇಲ್ಲವಾಗಿಸುವ ಮೂಲಕ ನಿರಾಕರಿಸುತ್ತದೆ ಮತ್ತು ದೃಢೀಕರಿಸುತ್ತದೆ. ಅತ್ಯುನ್ನತನಾದ ಅವನು ಹೇಳಿದನು:

﴿إِلَّا مَن شَهِدَ بِٱلۡحَقِّ وَهُمۡ يَعۡلَمُونَ ٨٦﴾

**“ಸತ್ಯದ ಸಾಕ್ಷ್ಯ ಹೇಳುವುದರ ಮತ್ತು ತಿಳಿದಿರುವಂತಹವರ ಹೊರತು.”** (106)

ಅಂದರೆ ಲಾ ಇಲಾಹ ಇಲ್ಲಲ್ಲಾಹ್ ಎಂದು ಸಾಕ್ಷ್ಯ ಹೇಳುವುದು. ನಮ್ಮ ನಾಲಿಗೆಯು ಏನನ್ನು ಹೇಳುತ್ತಿದೆಯೋ ಎಂಬುದನ್ನು 'ತಿಳಿದಿರುವಾಗ' ಮಾತ್ರ. ಏಕೆಂದರೆ ಒಬ್ಬ ಮನುಷ್ಯನು ತನ್ನ ನಾಲಗೆಯಲ್ಲಿ ಅದನ್ನು ಹೇಳಿ ಮತ್ತು ಅದರ ಅರ್ಥವು ಅವನಿಗೆ

**106** ಕುರ್‌ಆನ್ 43:86

ತಿಳಿಯದಿದ್ದರೆ ಅದು ಅವನಿಗೆ ಪ್ರಯೋಜನವಾಗಲಾರದು. ಏಕೆಂದರೆ ಆ ವಚನವು ಏನನ್ನು ಸೂಚಿಸುತ್ತದೆ ಮತ್ತು ಶ್ರುತಪಡಿಸುತ್ತದೆಯೋ ಅದರ ಮೇಲೆ ಅವನಿಗೆ ವಿಶ್ವಾಸವಿಲ್ಲ ಎಂದಾಗುತ್ತದೆ.

2. ಖಚಿತತೆ: ಈ ಸಾಕ್ಷ್ಯವನ್ನು ಹೇಳುವವನು ಅದು ಏನನ್ನು ಸೂಚಿಸುತ್ತದೆಯೋ ಅದರ ಬಗ್ಗೆ ಖಚಿತನಾಗಿರಬೇಕು. ಒಂದು ವೇಳೆ ಆ ವಚನವು ಸೂಚಿಸುವುದರ ಬಗ್ಗೆ ಸಂಶಯವಿದ್ದರೆ ಅದು ಅವನಿಗೆ ಪ್ರಯೋಜನಕಾರಿಯಾಗಲಾರದು, ಸರ್ವೋನ್ನತನಾದ ಅವನು ಹೇಳುತ್ತಾನೆ:

﴿ إِنَّمَا ٱلْمُؤْمِنُونَ ٱلَّذِينَ ءَامَنُوا۟ بِٱللَّهِ وَرَسُولِهِۦ ثُمَّ لَمْ يَرْتَابُوا۟ ﴾

**“ಸತ್ಯ ವಿಶ್ವಾಸಿಗಳು ಅವರು ಅಲ್ಲಾಹ್‌ನ ಮತ್ತು ಅವನ ಸಂದೇಶವಾಹಕರ ಮೇಲೆ ವಿಶ್ವಾಸವಿರಿಸುವವರು ಮತ್ತು ನಂತರ ಸಂಶಯ ಪಡದವರು.”** [107]

ಒಂದು ವೇಳೆ ಅವನು ಸಂಶಯವಿರುವವನಾದರೆ, ಅವನು ಮುನಾಫಿಕ್ ಅಥವಾ ಕಪಟ ವಿಶ್ವಾಸಿ. ಪ್ರವಾದಿ(ﷺ) ರವರು ಹೇಳಿದ್ದಾರೆ:

«مَنْ لَقِيتَ وَرَاءَ هَذَا الْحَائِطِ يَشْهَدُ أَنْ لَا إِلَهَ إِلَّا اللَّهُ مُسْتَيْقِنًا قَلْبُهُ فَبَشِّرْهُ بِالْجَنَّةِ»

**“ಯಾರಾದರೂ ತನ್ನ ಹೃದಯದಲ್ಲಿ ದೃಢತೆಯೊಂದಿಗೆ ‘ಲಾ ಇಲಾಹ ಇಲ್ಲಲ್ಲಾಹ್’ ಎಂದು ಸಾಕ್ಷ್ಯವಹಿಸುತ್ತಾ ಈ ಗೋಡೆಯ ಹಿಂದುಗಡೆ ಭೇಟಿಯಾದರೆ ಅವನಿಗೆ ಸ್ವರ್ಗದ ಶುಭವಾರ್ತೆಯನ್ನು ನೀಡಿರಿ.”** [108] ಆದ್ದರಿಂದ ಒಬ್ಬನಿಗೆ ಈ ವಚನದಲ್ಲಿ ದೃಢತೆಯಿಲ್ಲದಿದ್ದರೆ ಅವನು ಸ್ವರ್ಗ ಪ್ರವೇಶಕ್ಕೆ ಅನರ್ಹನಾಗುತ್ತಾನೆ.

3. ಸ್ವೀಕಾರ : ಆರಾಧನೆ ಅಲ್ಲಾಹನಿಗೆ ಮಾತ್ರ ಮತ್ತು ಅವನ ಹೊರತು ಬೇರೆಲ್ಲವುಗಳ ಆರಾಧನೆಯ ತಿರಸ್ಕಾರ. ಆದ್ದರಿಂದ ಯಾರಾದರೂ ಸಾಕ್ಷ್ಯವಚನ ಹೇಳಿ, ಅದನ್ನು ಸ್ವೀಕರಿಸದಿದ್ದರೆ ಮತ್ತು ಅದಕ್ಕೆ ಅಂಟಿಕೊಳ್ಳದೆ ಇದ್ದರೆ ಅಲ್ಲಾಹನು ಹೀಗೆ ಹೇಳಿದವರ ಗುಂಪಿನಲ್ಲಿ ಅವನು ಬರುತ್ತಾನೆ:

﴿ إِنَّهُمْ كَانُوٓا۟ إِذَا قِيلَ لَهُمْ لَآ إِلَٰهَ إِلَّا ٱللَّهُ يَسْتَكْبِرُونَ ﴿٣٥﴾ وَيَقُولُونَ أَئِنَّا لَتَارِكُوٓا۟ ءَالِهَتِنَا لِشَاعِرٍ مَّجْنُونٍ ﴿٣٦﴾ ﴾

**“ನಿಜವಾಗಿಯೂ ನಾವು ಅವರೊಂದಿಗೆ ‘ಲಾ ಇಲಾಹ ಇಲ್ಲಲ್ಲಾಹ್’ (ಅಲ್ಲಾಹನ**

---

**107** ಕುರ್‌ಆನ್ 49:15

**108** ಬುಖಾರಿ

**ಹೊರತು ಆರಾಧನೆಗೆ ಅರ್ಹರಾದ ಆರಾಧ್ಯ ಬೇರೆ ಯಾರೂ ಇಲ್ಲ) ಎಂದು ಹೇಳಿದಾಗ ಅವರು ಅಹಂಕಾರದಿಂದ ಬುಸುಗುಡುತ್ತಿದ್ದರು ಮತ್ತು ಅವರು ಹೇಳುತ್ತಿದ್ದರು: ಒಬ್ಬ ಭ್ರಾಂತ ಕವಿಗಾಗಿ ನಾವು ನಮ್ಮ ಇಲಾಹರನ್ನು (ದೇವರನ್ನು) ಬಿಟ್ಟು ಬಿಡಬೇಕೆ?"** (109)

ಗೋರಿ ಆರಾಧಕರ ಸ್ಥಿತಿಯೂ ಇದೇ ರೀತಿ ಆಗಿದೆ. ಇವರು 'ಲಾ ಇಲಾಹ ಇಲ್ಲಲ್ಲಾಹ್' ಎಂದು ಹೇಳುತ್ತಾರೆ. ಗೋರಿ ಆರಾಧನೆಯನ್ನು ಬಿಡುವುದಿಲ್ಲ, ಆದ್ದರಿಂದ ಅವರು ಲಾ ಇಲಾಹ ಇಲ್ಲಲ್ಲಾಹ್ ಅನ್ನು ಒಪ್ಪಿಕೊಂಡಿಲ್ಲ.

4. ಪಾಲಿಸುವುದು (ಅಲ್ಲಾಹನ ಅಜ್ಞಾಪಾಲಕನಾಗಿರುವುದು) ಅತ್ಯುನ್ನತನಾದ ಅವನು ಹೇಳಿರುವನು:

﴿ ۞ وَمَن يُسْلِمْ وَجْهَهُۥٓ إِلَى ٱللَّهِ وَهُوَ مُحْسِنٌ فَقَدِ ٱسْتَمْسَكَ بِٱلْعُرْوَةِ ٱلْوُثْقَىٰ ﴾

**"ಮತ್ತು ಯಾರಾದರೂ ಮುಹ್ಸಿನ್ (ಅಲ್ಲಾಹನಿಗಾಗಿ ಮಾತ್ರ ಸತ್ಕರ್ಮಗಳನ್ನೆಸಗುವವನು ಮತ್ತು ಸುನ್ನತ್‌ನ ಪ್ರಕಾರ ಸತ್ಕರ್ಮಗಳನ್ನೆಸಗುವವನು) ಆಗಿರುತ್ತಾ ತನ್ನ ಮುಖವನ್ನು ಅಲ್ಲಾಹನಿಗೆ ಸಮರ್ಪಿಸುವುದಾದರೆ, ಅವನು ಅತ್ಯಂತ ನಂಬಲರ್ಹ ಆಧಾರವನ್ನು ಹಿಡಿದುಕೊಂಡನು."** (110)

'ನಂಬಲರ್ಹ ಆಧಾರ' 'ಲಾ ಇಲಾಹ ಇಲ್ಲಲ್ಲಾಹ್' ಆಗಿದೆ ಮತ್ತು ತನ್ನ ಮುಖವನ್ನು ಸಮರ್ಪಿಸುವುದರ ಅರ್ಥವು ಅಲ್ಲಾಹನೆಡೆಗೆ ಏಕನಿಷ್ಠನಾಗಿದ್ದುಕೊಂಡು ಅವನ ಆಜ್ಞಾನುಸಾರಿಯಾಗಿರುವುದು.

5. ಸತ್ಯಪೂರ್ಣತೆ: ಈ ಸಾಕ್ಷ್ಯವಚನವು ಹೇಳುವಾಗ ಹೃದಯದಲ್ಲಿ ಅದರ ಸತ್ಯಪೂರ್ಣತೆಯ ಬಗ್ಗೆ ಸಾಕ್ಷ್ಯವಹಿಸುವುದು. ಒಂದು ವೇಳೆ ಒಬ್ಬನ ನಾಲಗೆಯು ಮಾತ್ರ ಈ ವಚನವನ್ನು ಹೇಳಿ ಅವನ ಹೃದಯವು ಅದರ ಸತ್ಯಪೂರ್ಣತೆಯ ಬಗ್ಗೆ ಸಾಕ್ಷ್ಯವಹಿಸದಿದ್ದರೆ, ಅವನು ಸುಳ್ಳುಗಾರ, ಕಪಟವಿಶ್ವಾಸಿಯಾಗಿರುವನು.

﴿ وَمِنَ ٱلنَّاسِ مَن يَقُولُ ءَامَنَّا بِٱللَّهِ وَبِٱلْيَوْمِ ٱلْـَٔاخِرِ وَمَا هُم بِمُؤْمِنِينَ ﴿٨﴾ يُخَـٰدِعُونَ ٱللَّهَ وَٱلَّذِينَ ءَامَنُوا۟ وَمَا يَخْدَعُونَ إِلَّآ أَنفُسَهُمْ وَمَا يَشْعُرُونَ ﴿٩﴾ فِى قُلُوبِهِم مَّرَضٌ فَزَادَهُمُ ٱللَّهُ مَرَضًا ۖ وَلَهُمْ عَذَابٌ أَلِيمٌۢ بِمَا كَانُوا۟ يَكْذِبُونَ ﴿١٠﴾ ﴾

**"ಮತ್ತು ಮನುಷ್ಯರಲ್ಲಿ ಕೆಲವರು ಹೇಳುತ್ತಾರೆ: ನಾವು ಅಲ್ಲಾಹ್‌ನಲ್ಲಿ ಹಾಗೂ ಅಂತ್ಯದಿನದಲ್ಲಿ ವಿಶ್ವಾಸವಿರಿಸಿದೆವು ಎಂದು ಹೇಳುತ್ತಾರೆ. ಆದರೆ ಅವರು ವಿಶ್ವಾಸವಿರಿಸುವುದಿಲ್ಲ. ಅವರು ಅಲ್ಲಾಹ್‌ನನ್ನು ಹಾಗೂ ವಿಶ್ವಾಸಿಗಳನ್ನು ವಂಚಿಸಲು ಪ್ರಯತ್ನಿಸುತ್ತಾರೆ. ಆದರೆ**

**109** ಕುರ್‌ಆನ್ 37:35,36

**110** ಕುರ್‌ಆನ್ 31:22

**ಅವರು ತಮ್ಮನ್ನು ತಾವೇ ವಂಚಿಸುತ್ತಿದ್ದಾರೆ ಮತ್ತು ಅವರು ಅವಲೋಕಿಸುವುದಿಲ್ಲ. ಅವರ ಹೃದಯಗಳಲ್ಲಿ ರೋಗವಿದೆ ಮತ್ತು ಅಲ್ಲಾಹನು ಅವರ ರೋಗವನ್ನು ಹೆಚ್ಚಿಸಿದನು. ಅವರು ಸುಳ್ಳು ಹೇಳುತ್ತಿದ್ದುದರಿಂದ ಅವರಿಗೆ ಕಠಿಣ ಶಿಕ್ಷೆಯಿದೆ."** [111]

6. ಏಕನಿಷ್ಠತೆ: ತನ್ನ ಕರ್ಮಗಳನ್ನು ಶಿರ್ಕ್‌ನ ಎಲ್ಲಾ ಕಳಂಕಗಳಿಂದ ದೂರವಿಡುವುದು. ಒಬ್ಬ ಮನುಷ್ಯ ಈ ಸಾಕ್ಷ್ಯವಚನವನ್ನು ಈ ಜಗತ್ತಿನ ಲಾಭಕ್ಕಾಗಿಯೋ ಅರ್-ರಿಯಾ ಅಥವಾ ತೋರಿಕೆಗಾಗಿಯೋ ಅಥವಾ ಪ್ರತಿಷ್ಠೆಗಾಗಿಯೋ ಹೇಳದಿರುವುದು ಉತ್ಬಾ(ﷺ) ರಿಂದ ವರದಿಯಾಗಿರುವ ಸಹೀಹ್ ಹದೀಸ್‌ನಿಂದ ಈ ವಿಷಯವು ಮನದಟ್ಟಾಗುತ್ತದೆ:

«فَإِنَّ اللَّهَ حَرَّمَ عَلَى النَّارِ مَنْ قَالَ لَا إِلَهَ إِلَّا اللَّهُ يَبْتَغِي بِذَلِكَ وَجْهَ اللَّهِ»

**"ನಿಶ್ಚಯವಾಗಿಯೂ ಅಲ್ಲಾಹನ ಮುಖವನ್ನು ಮಾತ್ರ ಅಪೇಕ್ಷಿಸುತ್ತಾ ಒಬ್ಬನು ಲಾ ಇಲಾಹ ಇಲ್ಲಲ್ಲಾಹ್ ಹೇಳಿದರೆ ಅಲ್ಲಾಹನು ಅವನಿಗೆ ನರಕಾಗ್ನಿಯನ್ನು ನಿಷಿದ್ಧಗೊಳಿಸುವನು."** [112]

7. ಪ್ರೀತಿ: ಈ ಸಾಕ್ಷ್ಯವಚನದ ಮೇಲೆ ಪ್ರೀತಿ, ಇದು ಸೂಚಿಸುವವುಗಳ ಮೇಲೆ ಪ್ರೀತಿ ಮತ್ತು ಇದರ ಶಿಕ್ಷಣಕ್ಕೆ ತಕ್ಕಂತೆ ನಡೆಯುವ ಜನರ ಮೇಲೆ ಪ್ರೀತಿ, ಮಹೋನ್ನತನಾದ ಅವನು ಹೇಳಿದನು:

﴿ وَمِنَ ٱلنَّاسِ مَن يَتَّخِذُ مِن دُونِ ٱللَّهِ أَندَادًا يُحِبُّونَهُمْ كَحُبِّ ٱللَّهِ ۖ وَٱلَّذِينَ ءَامَنُوٓا۟ أَشَدُّ حُبًّا لِّلَّهِ ۗ ﴾

**"ಮನುಷ್ಯರಲ್ಲಿ ಕೆಲವರು ಅಲ್ಲಾಹನ ಹೊರತು ಇತರರನ್ನು (ಆರಾಧನೆಯಲ್ಲಿ) ಅಲ್ಲಾಹನಿಗೆ ಪ್ರತಿಸ್ಪರ್ಧಿಗಳಾಗಿ ತೆಗೆದುಕೊಳ್ಳುತ್ತಾರೆ. ಅವರು ಅಲ್ಲಾಹನನ್ನು ಪ್ರೀತಿಸಿದಂತೆ ಅವರನ್ನೂ ಪ್ರೀತಿಸುತ್ತಾರೆ. ಆದರೆ ವಿಶ್ವಾಸವಿರಿಸುವವರು ಅಲ್ಲಾಹನನ್ನು (ಬೇರೆ ಎಲ್ಲವುಗಳಿಗಿಂತ) ಹೆಚ್ಚು ಪ್ರೀತಿಸುತ್ತಾರೆ."** [113]

ಹೀಗೆ, ಲಾ ಇಲಾಹ್ ಇಲ್ಲಲ್ಲಾಹ್‌ನ ಜನರು ಅಲ್ಲಾಹನನ್ನು ನಿಷ್ಕಳಂಕವಾಗಿ ಪ್ರೀತಿಸುತ್ತಾರೆ. ಆದರೆ ಶಿರ್ಕ್‌ನ ಜನರು ಅವನನ್ನು ಮತ್ತು ಅವನ ಜೊತೆಗೆ ಇತರರನ್ನು ಪ್ರೀತಿಸುತ್ತಾರೆ. ಲಾ ಇಲಾಹ ಇಲ್ಲಲ್ಲಾಹ್‌ನ ಶರ್ತವನ್ನು ಇದು ನಿರಾಕರಿಸುತ್ತದೆ.

ಆ) ಮುಹಮ್ಮದ್(ﷺ) ಅಲ್ಲಾಹನ ಸಂದೇಶವಾಹಕರು ಎಂಬ ಸಾಕ್ಷ್ಯವಚನದ ಶರ್ತಗಳು:

1. ಅವರ(ﷺ) ಸಂದೇಶವಾಹಕತ್ವವನ್ನು ಸಮ್ಮತಿಸುವುದು ಮತ್ತು ಹೃದಯದೊಳಗೆ ಅದರ ಮೇಲೆ ವಿಶ್ವಾಸವಿಡುವುದು.

---

**111** ಕುರ್‌ಆನ್ 2:8–10

**112** ಬುಖಾರಿ ಮತ್ತು ಮುಸ್ಲಿಮ್

**113** ಕುರ್‌ಆನ್ 2:165

2. ಮಾತಿನ ಮೂಲಕ ಘೋಷಿಸುವುದು ಮತ್ತು ನಾಲಗೆಯಲ್ಲಿ ಬಹಿರಂಗವಾಗಿ ದೃಢೀಕರಿಸುವುದು.

3. ಅವರು(ﷺ) ಯಾವ ಸತ್ಯದ ಉದ್ದೇಶದಿಂದ ಬಂದಿರುವರೋ ಅದನ್ನು ಪಾಲಿಸುವ ಮತ್ತು ಅವರು ಯಾವುದನ್ನು ನಿಷೇಧಿಸುವರೋ ಆ ಕೆಡುಕಿನಿಂದ ದೂರವಿರುವ ಮೂಲಕ ಅವರನ್ನು ಅನುಸರಿಸುವುದು.

4. ಪ್ರವಾದಿ(ﷺ)ರು ತಿಳಿಸಿರುವ ಭೂತ ಹಾಗೂ ಭವಿಷ್ಯದ ಅದೃಶ್ಯದ ವಿಚಾರಗಳನ್ನು ನಂಬುವುದು.

5. ತನ್ನ ಜೀವಕ್ಕಿಂತ ತನ್ನ ಸಂಪತ್ತಿಗಿಂತ, ಮಕ್ಕಳಿಗಿಂತ, ತಂದೆ, ತಾಯಂದಿರಿಗಿಂತ ಮತ್ತು ಎಲ್ಲಾ ಮನುಷ್ಯ ವರ್ಗಕ್ಕಿಂತ ಹೆಚ್ಚು ಅವರನ್ನು(ﷺ) ಪ್ರೀತಿಸುವುದು.

6. ಎಲ್ಲರ ಮಾತಿಗಿಂತ ಅವರ(ﷺ)ರ ಮಾತಿಗೆ ಮನ್ನಣೆ ನೀಡುವುದು ಮತ್ತು ಅವರ ಸುನ್ನತ್‌ನಂತೆ ನಡೆಯುವುದು.

ನಾಲ್ಕನೆಯದಾಗಿ, ಶಹಾದತೈನ್‌ನ ಬೇಡಿಕೆಗಳು

ಅ) ಲಾ ಇಲಾಹ ಇಲ್ಲಲ್ಲಾಹ್‌ನ ಅಗತ್ಯಗಳು ಅಲ್ಲಾಹನ ಹೊರತು ಇತರರ ಆರಾಧನೆಯನ್ನು ತೊರೆಯುವುದು. ಇದು ನಾವು ಹೇಳುವ ಲಾ ಇಲಾಹ್‌ನ ಭಾಗದ ನಿರಾಕರಣೆಯು ಸೂಚಿಸಿದಂತೆ ಆಗಿದೆ ಮತ್ತು ಅಲ್ಲಾಹನನ್ನೇ ಮಾತ್ರ ಯಾವುದೇ ಭಾಗೀದಾರರಿಲ್ಲದೇ ಆರಾಧಿಸುವುದು ನಮ್ಮ ಹೇಳಿಕೆಯಾದ ಇಲ್ಲಲ್ಲಾಹ್‌ನ ದೃಢೀಕರಣವು ಸೂಚಿಸಿದಂತೆ ಆಗಿದೆ.

ಶಹಾದತೈನ್ ಅನ್ನು ಹೇಳುವ ಬಹಳಷ್ಟು ಜನರು ಅದರ ಬೇಡಿಕೆಗಳ ವಿರುದ್ಧ ಹೋಗುತ್ತಾರೆ. ಅವರು ಗೋರಿಗಳು, ಗುಮ್ಮಟಗಳು, ತಾಗೂತ್‌ಗಳು, ಮರಗಳು ಹಾಗೂ ಕಲ್ಲುಗಳು ಮುಂತಾದ ಸೃಷ್ಟಿಗಳಿಗೆ ಆರಾಧ್ಯತ್ವವನ್ನು ಕಲ್ಪಿಸುತ್ತಾರೆ. ವಾಸ್ತವದಲ್ಲಿ ಅಲ್ಲಾಹು ಸೃಷ್ಟಿಗಳಿಗೆ ಉಲೂಹಿಯ್ಯವನ್ನು ನಿರಾಕರಿಸಿರುವನು. ಈ ಜನರು ತೌಹೀದ್ ಒಂದು ಬಿದ್‌ಅತ್ ಎಂದಷ್ಟೇ ನಂಬುತ್ತಾರೆ ಮತ್ತು ಅದರೆಡೆಗೆ ಆಹ್ವಾನಿಸುವವರನ್ನು ಇವರು ತಿರಸ್ಕರಿಸುತ್ತಾರೆ. ಅಲ್ಲಾಹನನ್ನು ಮಾತ್ರ ಆರಾಧಿಸುವವರನ್ನು ಇವರು ದೂಷಿಸುತ್ತಾರೆ.

ಆ) ಮುಹಮ್ಮದ್ ಅಲ್ಲಾಹ್‌ನ ಸಂದೇಶವಾಹಕರಾಗಿದ್ದಾರೆ ಎಂಬ ಸಾಕ್ಷ್ಯದ ಬೇಡಿಕೆಗಳೇನೆಂದರೆ, ಅವರಿಗೆ ವಿಧೇಯರಾಗಿರುವುದು, ಅವರ ಮೇಲೆ ವಿಶ್ವಾಸವಿರಿಸುವುದು, ಅವರು ನಿಷೇಧಿಸಿರುವುದನ್ನು ತೊರೆಯುವುದು, ಅವರ(ﷺ) ಸುನ್ನತ್ ನ ಮೇಲೆ ದೃಢವಾಗಿರುವುದು. ಅಂದರೆ ನೂತನವಾದಗಳಿಂದ ಮತ್ತು ಹೊಸದಾಗಿ ಕಂಡುಹಿಡಿದ ಆಚಾರಗಳಿಂದ ಮತ್ತು ಅವರ(ﷺ) ಮಾತಿಗಿಂತ ಇತರರ ಮಾತಿಗೆ ಮನ್ನಣೆ ಕಲ್ಪಿಸುವಂತಹ ಮೇರೆ ಮೀರಿದ ಸಂಗತಿಗಳಿಂದ ದೂರವಿರುವುದು.

ಐದನೆಯದಾಗಿ, ಶಹಾದತೈನ್ ಅನ್ನು ಭಂಗಗೊಳಿಸುವಂತಹವುಗಳು,

ಇವುಗಳು ಇಸ್ಲಾಮ್‌ಗೆ ಶೂನ್ಯಗೊಳಿಸುವಂತಹುದು. ಏಕೆಂದರೆ ಶಹಾದತೈನ್ ಅನ್ನು ಒಬ್ಬ ಮನುಷ್ಯ ಇಸ್ಲಾಮ್‌ಗೆ ಪ್ರವೇಶಿಸುವಾಗ ಉಚ್ಚರಿಸುತ್ತಾನೆ. ಈ ಶಹಾದತೈನ್ ಅನ್ನು ಉಚ್ಚರಿಸುವುದೆಂದರೆ ಅವುಗಳ ಉದ್ದೇಶವನ್ನು ಗುರುತಿಸುವುದು ಮತ್ತು ಇಸ್ಲಾಮಿನ ಘೋಷಣೆಯ ಈಡೇರಿಕೆಯಿಂದ ಕಡ್ಡಾಯವಾಗುವಂತಹವುಗಳನ್ನು ದೃಢವಾಗಿ ಸ್ಥಾಪಿಸುವುದು. ಆದ್ದರಿಂದ ಒಬ್ಬನು ಈ ದೃಢತೆಯನ್ನು ಬಿಟ್ಟರೆ ಅವನು ಶಹಾದತೈನ್ ಅನ್ನು ಘೋಷಿಸುವಾಗ ಮಾಡಿದ ಒಪ್ಪಂದವನ್ನು ನಿಷ್ಫಲಗೊಳಿಸಿದನು.

ಇಸ್ಲಾಮ್ ಅನ್ನು ಇನ್ನಿಲ್ಲವಾಗಿಸುವಂತಹ ಕಾರ್ಯಗಳು ಬಹಳ ಇವೆ ಮತ್ತು ಕರ್ಮಶಾಸ್ತ್ರಜ್ಞರು ತಮ್ಮ ಫಿಕ್ಹ್‌ನ ಪುಸ್ತಕಗಳಲ್ಲಿ ಸತ್ಯನಿಷೇಧದ ಅಧ್ಯಾಯ ಎಂಬ ತಲೆ ಬರಹದಡಿಯಲ್ಲಿ ಬರೆದಿರುವರು. ಶೈಖುಲ್ ಇಸ್ಲಾಮ್ ಮುಹಮ್ಮದ್ ಬಿನ್ ಅಬ್ದುಲ್ ವಹ್ಹಾಬ್‌ರವರು ಸೂಚಿಸಿದಂತೆ ಇಸ್ಲಾಮನ್ನು ಶೂನ್ಯಗೊಳಿಸುವಂತಹ ಹತ್ತು ಪ್ರಮುಖ ಕಾರ್ಯಗಳು ಇಂತಿವೆ.

1. ಅಲ್ಲಾಹನ ಆರಾಧನೆಯಲ್ಲಿ ಶಿರ್ಕ್

ಸರ್ವೋನ್ನತನಾದ ಅಲ್ಲಾಹು ಹೀಗೆಂದಿದ್ದಾನೆ:

﴿ إِنَّ ٱللَّهَ لَا يَغۡفِرُ أَن يُشۡرَكَ بِهِۦ وَيَغۡفِرُ مَا دُونَ ذَٰلِكَ لِمَن يَشَآءُۚ ﴾

**“ನಿಜವಾಗಿಯೂ, ಅಲ್ಲಾಹನು ತನ್ನೊಂದಿಗೆ ಭಾಗೀದಾರಿಕೆ ಮಾಡುವುದನ್ನು ಕ್ಷಮಿಸುವುದಿಲ್ಲ. ಆದರೆ ಅದರ ಹೊರತು (ಎಲ್ಲಾ ಪಾಪಗಳನ್ನು) ಅವನಿಚ್ಛಿಸಿದವರಿಗೆ ಕ್ಷಮಿಸುವನು.”** (114)

ಸರ್ವೋನ್ನತನಾದ ಅಲ್ಲಾಹನು ಹೇಳುತ್ತಾನೆ:

﴿ إِنَّهُۥ مَن يُشۡرِكۡ بِٱللَّهِ فَقَدۡ حَرَّمَ ٱللَّهُ عَلَيۡهِ ٱلۡجَنَّةَ وَمَأۡوَىٰهُ ٱلنَّارُۖ وَمَا لِلظَّٰلِمِينَ مِنۡ أَنصَارٖ ٧٢ ﴾

**“ಯಾರಾದರೂ ಆರಾಧನೆಯಲ್ಲಿ ಅಲ್ಲಾಹನೊಂದಿಗೆ ಯಾರನ್ನಾದರೂ ಪಾಲುದಾರರನ್ನಾಗಿ ಮಾಡಿದರೆ, ಅಲ್ಲಾಹು ಅವರಿಗೆ ಸ್ವರ್ಗವನ್ನು ನಿಷೇಧಿಸಿರುವನು ಮತ್ತು ಬೆಂಕಿಯೇ ಅವರ ವಾಸಸ್ಥಾನವಾಗಿರುವುದು ಮತ್ತು ಝಾಲಿಮೂನ್ (ಸತ್ಯನಿಷೇಧಿಗಳು ಮತ್ತು ದುಷ್ಕರ್ಮಿಗಳಿಗೆ) ಗಳಿಗೆ ಯಾರೂ ಸಹಾಯಕರಿಲ್ಲ”** (115)

ಅಲ್ಲಾಹ್‌ನ ಹೊರತು ಅಂದರೆ ಗೋರಿಗಳಿಗೆ, ಬಲಿಪೀಠಗಳಿಗೆ, ಜಿನ್ನ್‌ಗಳಿಗೆ ಬಲಿಯರ್ಪಣೆಯನ್ನೂ ಇದು ಒಳಗೊಂಡಿದೆ.

---

**114** ಕುರ್‌ಆನ್ 4:116

**115** ಕುರ್‌ಆನ್ 5:72

2. ಅಲ್ಲಾಹ್ ಮತ್ತು ಸೃಷ್ಟಿಗಳ ಮಧ್ಯೆ ಮಧ್ಯವರ್ತಿಗಳನ್ನು ಮಾಡುವುದು, ಅವರೊಂದಿಗೆ ಪ್ರಾರ್ಥಿಸುವುದು, ಅವರೊಂದಿಗೆ ಮಧ್ಯಸ್ಥಿಕೆಗಾಗಿ ಕೇಳುವುದು ಮತ್ತು ಅವರ ಮೇಲೆ ಭರವಸೆಯಿಡುವುದು ಮುಂತಾದವು. ಒಬ್ಬ ಮನುಷ್ಯನು ಹೀಗೆ ಮಾಡಿದರೆ ಅವನು ಕಾಫಿರ್ ಆಗುತ್ತಾನೆ. ಇದಕ್ಕೆ ಎಲ್ಲರ ಒಮ್ಮತಾಭಿಪ್ರಾಯವಿದೆ.

3. ಮುಶ್ರಿಕ್‌ಗಳನ್ನು ಸತ್ಯನಿಷೇಧಿಗಳೆಂದು ಒಪ್ಪದಿರುವುದು ಮತ್ತು ಅವರ ಸತ್ಯನಿಷೇಧದ ಬಗ್ಗೆ ಸಂಶಯ ಪಡುವುದು ಅಥವಾ ಅವರ ಮದ್‌ಹಬ್ ಸತ್ಯವೆಂದು ತೀರ್ಮಾನಿಸುವುದು, ಹೀಗಿದ್ದರೆ ಅದು ಕುಫ್ರ್ ಆಗಿದೆ.

4. ಮುಹಮ್ಮದ್(ﷺ)ರ ಮಾರ್ಗದರ್ಶನಕ್ಕಿಂತ ಬೇರೆ ಯಾವುದಾದರೂ ಮಾರ್ಗದರ್ಶನವು ಹೆಚ್ಚು ಸರಿಯಾದುದು ಎಂದು ನಂಬುವುದು ಅಥವಾ ಯಾವುದಾದರೂ ಒಂದು ತೀರ್ಮಾನವು ಅವರ(ﷺ) ತೀರ್ಮಾನಕ್ಕಿಂತ ಉತ್ತಮವೆಂದು ನಂಬುವುದು, ಅಂದರೆ ಕೆಲವರು ತಾಗೂತ್‌ಗಳ ನ್ಯಾಯತೀರ್ಮಾನವನ್ನು ಪ್ರವಾದಿ(ﷺ)ರವರ ನ್ಯಾಯತೀರ್ಮಾನಕ್ಕಿಂತ ಮುಂದೆ ಹಾಗೂ ಮೇಲೆ ಎಂದು ಪರಿಗಣಿಸುತ್ತಾರೆ ಮತ್ತು ಇಸ್ಲಾಮ್‌ಗಿಂತ ಮನುಷ್ಯ ನಿರ್ಮಿತ ಶಾಸನಗಳಿಗೆ ಶ್ರೇಷ್ಠತೆ ನೀಡುತ್ತಾರೆ. ಯಾರಾದರೂ ಹೀಗೆ ಮಾಡಿದರೆ ಅದು ಕುಫ್ರ್ ಆಗುವುದು.

5. ಪ್ರವಾದಿ ಮುಹಮ್ಮದ್(ﷺ)ರವರ ದೀನ್‌ನ ಯಾವುದನ್ನಾದರೂ ಪರಿಹಾಸ್ಯ ಮಾಡುವುದು. ಅದರ ಪ್ರತಿಫಲವನ್ನಾಗಲೀ ಅಥವಾ ಅದರ ಶಿಕ್ಷೆಯನ್ನಾಗಲೀ ಯಾವುದನ್ನೇ ಆದರೂ ಕೂಡಾ. ಅಲ್ಲಾಹನ ಈ ವಚನವು ಇದಕ್ಕೆ ಆಧಾರವಾಗಿದೆ:

﴿ قُلْ أَبِٱللَّهِ وَءَايَٰتِهِۦ وَرَسُولِهِۦ كُنتُمْ تَسْتَهْزِءُونَ ﴿٦٥﴾ لَا تَعْتَذِرُوا۟ قَدْ كَفَرْتُم بَعْدَ إِيمَٰنِكُمْ ﴾

**“ಹೇಳಿರಿ, ಅಲ್ಲಾಹ್ ಮತ್ತು ಅವನ ವಚನಗಳು ಮತ್ತು ಅವನ ಸಂದೇಶವಾಹಕರನ್ನು ನೀವು ತಮಾಷೆ ಮಾಡುತ್ತಿದ್ದೀರೋ? ನೆಪಗಳನ್ನೊಡ್ಡದಿರಿ. ನೀವು ವಿಶ್ವಾಸವಿಟ್ಟ ಬಳಿಕ ನಿಷೇಧಿಸಿದ್ದೀರಿ.”** [116]

6. ಜಾದು, ಮಾಟ ಮತ್ತು ಜನರ ಮಧ್ಯೆ ಐಕ್ಯ ಮತ್ತು ಅನೈಕ್ಯವನ್ನುಂಟು ಮಾಡುವ ಅದರ ವಿಧಗಳು (ವಿಶೇಷವಾಗಿ ಗಂಡ–ಹೆಂಡತಿಯ ಮಧ್ಯದಲ್ಲಿ) ಯಾರಾದರೂ ಅದನ್ನು ಮಾಡುತ್ತಾರಾದರೆ ಅಥವಾ ಅದರಿಂದ ಸಂತೋಷಪಟ್ಟರೆ ಅವನು ಕುಫ್ರ್ ಮಾಡಿದನು. ಅಲ್ಲಾಹನ ಈ ಸೂಕ್ತವು ಅದಕ್ಕೆ ಆಧಾರ:

﴿ وَمَا يُعَلِّمَانِ مِنْ أَحَدٍ حَتَّىٰ يَقُولَآ إِنَّمَا نَحْنُ فِتْنَةٌ فَلَا تَكْفُرْ ﴾

116 ಕುರ್‌ಆನ್ 9:65,66

**“ಈ ಇಬ್ಬರು (ಮಲಕ್‌ಗಳು) ಯಾರಿಗಾದರೂ ಅದನ್ನು ಕಲಿಸುವಾಗ ನಾವು ಒಂದು ಪರೀಕ್ಷೆಯಾಗಿದ್ದೇವೆ. ಆದ್ದರಿಂದ (ಈ ಜಾದುವನ್ನು ಕಲಿಯುವ ಮೂಲಕ) ಸತ್ಯನಿಷೇಧ ಮಾಡಬೇಡ ಎಂದು ಹೇಳದೆ ಕಲಿಸುತ್ತಿರಲಿಲ್ಲ.”** (117)

7. ಮುಸ್ಲಿಮರ ವಿರುದ್ಧ ಮುಶ್ರಿಕರಿಗೆ ಸಹಾಯ ಮಾಡುವುದು ಮತ್ತು ಪ್ರೋತ್ಸಾಹಿಸುವುದು.

﴿ وَمَن يَتَوَلَّهُم مِّنكُمْ فَإِنَّهُۥ مِنْهُمْ ۗ إِنَّ ٱللَّهَ لَا يَهْدِى ٱلْقَوْمَ ٱلظَّٰلِمِينَ ﴿٥١﴾ ﴾

**“ಮತ್ತು ನೀವು ಅವರಲ್ಲಿ ಯಾರನ್ನಾದರೂ ಸಹಾಯಕರಾಗಿ ತೆಗೆದುಕೊಂಡರೆ ಖಂಡಿತವಾಗಿಯೂ ಅವನೂ ಕೂಡಾ ಅವರಲ್ಲಿ ಒಬ್ಬನಾಗಿರುವನು. ನಿಶ್ಚಯವಾಗಿಯೂ ಅಲ್ಲಾಹನು ಝಾಲಿಮೂನ್ (ಬಹುದೇವಾರಾಧಕರು, ದುಷ್ಕರ್ಮಿಗಳು ಮತ್ತು ಅನ್ಯಾಯವಂತರು) ಗಳಿಗೆ ಮಾರ್ಗದರ್ಶನ ಮಾಡುವುದಿಲ್ಲ.”** (118)

8. ಕೆಲವು ಜನರು ತಾವು ಮುಹಮ್ಮದ್(ﷺ)ರವರ ಶರೀಅತ್‌ಗೆ ಒಳಗೊಂಡಿಲ್ಲವೆಂಬ ವಿಶ್ವಾಸವಿರಿಸುವುದು. ಮೂಸಾ(عليه السلام)ರವರ ಶರೀಅದಿಂದ ಖಿಳ್ರ್(عليه السلام) ಒಳಗೊಂಡಿಲ್ಲವೆಂಬ ವಿಶ್ವಾಸ ಕೆಲವರಿಗಿದೆ. ಯಾರಾದರೂ ಹೀಗೆ ವಿಶ್ವಾಸವಿಟ್ಟರೆ ಅವನು ಕಾಫಿರ್ ಆಗಿರುತ್ತಾನೆ. ನಾನಿದು ಏಕೆ ಹೇಳುವುದೆಂದರೆ ಕೆಲವು ಮಿತಿಮೀರಿದಂತಹ ಸೂಫಿಗಳು ತಾವು ಎಷ್ಟು ಉನ್ನತ ಮಟ್ಟಕ್ಕೆ ತಲುಪಿದ್ದೇವೆಂದರೆ ನಮಗಿನ್ನು ಮುಹಮ್ಮದ್(ﷺ)ರವರನ್ನು ಅನುಸರಿಸುವ ಅಗತ್ಯವಿಲ್ಲ ಎಂದವರು ವಾದಿಸುತ್ತಾರೆ.

9. ಅಲ್ಲಾಹ್‌ನ ಧರ್ಮದಿಂದ ವಿಮುಖನಾಗುವುದು, ಅದನ್ನು ಕಲಿಯದಿರುವ ಮೂಲಕ ಅದನ್ನನುಸರಿಸಿ ನಡೆಯದಿರುವ ಮೂಲಕ ಅಲ್ಲಾಹನ ದೀನ್‌ನಿಂದ ವಿಮುಖನಾಗುವುದು ಅತ್ಯುನ್ನತವಾದ ಅವನ ವಚನವು ಇದಕ್ಕೆ ಆಧಾರ.

﴿ وَمَنْ أَظْلَمُ مِمَّن ذُكِّرَ بِـَٔايَٰتِ رَبِّهِۦ ثُمَّ أَعْرَضَ عَنْهَآ ۚ إِنَّا مِنَ ٱلْمُجْرِمِينَ مُنتَقِمُونَ ﴿٢٢﴾ ﴾

**“ತನ್ನ ಪ್ರಭುವಿನ ವಚನಗಳನ್ನು ನೆನಪಿಸಿದ ಮೇಲೂ ಅಲ್ಲಿಂದ ವಿಮುಖಗೊಂಡವನಿಗಿಂತ ಅತೀ ದೊಡ್ಡ ಅಕ್ರಮಿ ಇನ್ನಾರಿರಬಹುದು? ನಿಶ್ಚಯವಾಗಿಯೂ ನಾವು ದುಷ್ಕರ್ಮಿಗಳಿಂದ ನಾವು ಅವರ ಪ್ರತೀಕಾರವನ್ನು ಪಡೆದೇ ತೀರುವೆವು.”** (119)

ಶೈಖ್ ಮುಹಮ್ಮದ್ ಇಬ್ನು ಅಬ್ದುಲ್ ವಹ್ಹಾಬ್(رحمه الله) ಹೇಳುತ್ತಾರೆ. ಒಬ್ಬ ತಮಾಷೆಯಲ್ಲಿ ಹೇಳಿದರೂ, ಗಂಭೀರವಾಗಿ ಹೇಳಿದರೂ, ಭಯದಿಂದ ಹೇಳಿದರೂ, ಬಲವಂತದಿಂದ ಹೊರತು ಎಲ್ಲವೂ ಒಂದೇ ಆಗಿದೆ ಮತ್ತು ಯಾವುದರಲ್ಲೂ ವ್ಯತ್ಯಾಸವಿಲ್ಲ. ಎಲ್ಲವೂ ಕೂಡಾ

---

**117** ಕುರ್‌ಆನ್ 2:102

**118** ಕುರ್‌ಆನ್ 5:51

**119** ಕುರ್‌ಆನ್ 32:22

ಅಪಾಯಕಾರಿ ಮತ್ತು ಹೆಚ್ಚು ಸಂಭ ವಿಸುವಂತಹವುಗಳಲ್ಲಿ ಅತ್ಯಂತ ದೊಡ್ಡವುಗಳಾಗಿವೆ. ಆದ್ದರಿಂದ ಒಬ್ಬ ಮುಸ್ಲಿಮನಿಗೆ ಅದರ ಕುರಿತು ಎಚ್ಚರಿಕೆಯಿಂದಿರುವುದು ಮತ್ತು ಅದ–ರಿಂದ ಭಯಪಟ್ಟು ದೂರವಿರುವುದು ಕಡ್ಡಾಯವಾಗಿದೆ. ನಾವು ಅಲ್ಲಾಹನೊಂದಿಗೆ ಆತನ ಕ್ರೋಧ ಹಾಗೂ ಕಠಿಣ ಶಿಕ್ಷೆಯ ಕಡೆಗೆ ಕೊಂಡು ಹೋಗುವುದರ ಕುರಿತು ಅಭಯವನ್ನು ಯಾಚಿಸುತ್ತೇವೆ.

## ಅಧ್ಯಾಯ–3
## ಶರೀಅತ್ ಶಾಸನ

ಶಾಸನ ಮಹೋನ್ನತನಾದ ಅಲ್ಲಾಹನೊಬ್ಬನದೇ ಹಕ್ಕಾಗಿದೆ. ಶಾಸನದ ಅರ್ಥವು ಅಲ್ಲಾಹನು ತನ್ನ ದಾಸರಿಗಾಗಿ ಅವತೀರ್ಣಗೊಳಿಸಿದ ಎಂದರೆ ತನ್ನ ಅಖೀದದೊಂದಿಗೆ ನಡೆಯುವಂತಹ ಮನ್‌ಹಜ್, ವ್ಯವಹಾರ ಮುಂತಾದುವು ಮತ್ತು ಹಲಾಲ್ ಹಾಗೂ ಹರಾಮ್‌ಗಳಾಗಿ ಮಾಡುವುದು. ಅದ್ದರಿಂದ ಯಾರೂ ಅಲ್ಲಾಹು ಹಲಾಲ್ ಎಂದು ತೀರ್ಮಾನಿಸಿದ್ದನ್ನಲ್ಲದೇ ಬೇರಾವುದನ್ನೂ ಹಲಾಲ್ ಎಂದು ತೀರ್ಮಾನಿಸುವಂತಿಲ್ಲ ಅಥವಾ ಅಲ್ಲಾಹು ಹರಾಮ್‌ಗೊಳಿಸಿರುವುದನ್ನಲ್ಲದೆ ಯಾವುದನ್ನೂ ಹರಾಮ್‌ಗೊಳಿಸಲು ಯಾರೂ ತೀರ್ಮಾನಿಸುವಂತಿಲ್ಲ. ಅತ್ಯುನ್ನತನಾದ ಅವನು ಹೇಳಿದನು:

﴿ وَلَا تَقُولُوا۟ لِمَا تَصِفُ أَلْسِنَتُكُمُ ٱلْكَذِبَ هَٰذَا حَلَٰلٌ وَهَٰذَا حَرَامٌ لِّتَفْتَرُوا۟ عَلَى ٱللَّهِ ٱلْكَذِبَ ﴾

**"ನಿಮ್ಮ ನಾಲಗೆಗಳು ಅಲ್ಲಾಹನ ಮೇಲೆ ಸುಳ್ಳನ್ನು ಸೃಷ್ಟಿಸಲಿಕ್ಕಾಗಿ 'ಇದು ಧರ್ಮಸಮ್ಮತ ಇದು ನಿಷಿದ್ಧ' ಎಂದು ಸುಳ್ಳಾಗಿಸುವುದನ್ನು ನೀವು ಹೇಳಬೇಡಿರಿ."** [120]

ಸರ್ವೋನ್ನತನಾದ ಅವನು ಹೇಳಿದನು:

﴿ قُلْ أَرَءَيْتُم مَّآ أَنزَلَ ٱللَّهُ لَكُم مِّن رِّزْقٍ فَجَعَلْتُم مِّنْهُ حَرَامًا وَحَلَٰلًا قُلْ ءَآللَّهُ أَذِنَ لَكُمْ ۖ أَمْ عَلَى ٱللَّهِ تَفْتَرُونَ ﴿٥٩﴾ ﴾

**"ಹೇಳಿರಿ, ಅಲ್ಲಾಹನು ನಿಮಗಾಗಿ ಇಳಿಸಿರುವ ಜೀವನಾಧಾರದ ಪೈಕಿ ನೀವಾಗಿಯೇ ಕೆಲವನ್ನು 'ನಿಷಿದ್ಧ' ಮತ್ತು ಕೆಲವನ್ನು 'ಧರ್ಮಸಮ್ಮತ'ಗೊಳಿಸಿರುವುದನ್ನುನೀವು ಕಂಡಿದ್ದೀರಾ? ಅಲ್ಲಾಹನು ನಿಮಗೆ ಇದರ ಅನುಮತಿ ನೀಡಿದ್ದಾನೋ ಅಥವಾ ನೀವು ಅಲ್ಲಾಹನ ಮೇಲೆ**

**120** ಕುರ್‌ಆನ್ 16:116

**ಸುಳ್ಳು ಹೊರಿಸುತ್ತಿರುವಿರೋ ಎಂದು ಇವರೊಡನೆ ಕೇಳಿರಿ."** (121)

ಕುರ್‌ಆನ್ ಮತ್ತು ಸುನ್ನತ್‌ನಿಂದ ಹೊರತು ಯಾವುದನ್ನಾದರೂ ಹಲಾಲ್ ಅಥವಾ ಹರಾಮ್ ಎಂದು ಘೋಷಿಸುವುದನ್ನು ಅಲ್ಲಾಹು ನಿಷೇಧಿಸಿದನು. ಅಲ್ಲದೆ ಈ ವರ್ತನೆಯನ್ನು ಅವನ ಮೇಲೆ ಸುಳ್ಳು ಹೊರಿಸುವುದು ಎಂದು ಅಲ್ಲಾಹು ತಿಳಿಸಿದ್ದಾನೆ. ಅಲ್ಲದೇ ಯಾರಾದರೊಬ್ಬ ಸೂಕ್ತ ಪ್ರಮಾಣ ಆಧಾರವಿಲ್ಲದೆ ತಾನೇ ಹಲಾಲ್ ಅಥವಾ ಹರಾಮ್ ಎಂದು ಘೋಷಿಸುವವನಾದರೆ ಅವನು ತನ್ನನ್ನು ತಾನು ಅಲ್ಲಾಹನಿಗೆ ಭಾಗೀದಾರನನ್ನಾಗಿ ಮಾಡಿದನು. ಏಕೆಂದರೆ ಶಾಸನಗೊಳಿಸುವುದು ಅಲ್ಲಾಹನೋರ್ವನ ಹಕ್ಕಾಗಿದೆ.

ಅತ್ಯುನ್ನತನಾದ ಅವನು ಹೇಳಿದನು:

﴿ أَمْ لَهُمْ شُرَكَـٰٓؤُا۟ شَرَعُوا۟ لَهُم مِّنَ ٱلدِّينِ مَا لَمْ يَأْذَنۢ بِهِ ٱللَّهُ ﴾

**"ಅಥವಾ ಅಲ್ಲಾಹು ಅನುಮತಿಸಿಲ್ಲದ, ಇವರಿಗಾಗಿ ಬೇರೆ ಧರ್ಮವನ್ನು ನಿರ್ಮಿಸಿದ ಯಾರಾದರೂ ಭಾಗೀದಾರರು ಅಲ್ಲಾಹನೊಂದಿಗೆ ಇವರಿಗಿದ್ದಾರೆಯೇ?"** (122)

ಯಾರಾದರೂ ಅಲ್ಲಾಹನ ಹೊರತು ಇತರ ಯಾರಾದರೂ ಶಾಸನಕಾರರನ್ನು ಈ ಹಕ್ಕು ಅವರಿಗಿಲ್ಲವೆಂದು ಅರಿತಿರುತ್ತಾ– ಅನುಸರಿಸಿದರೆ ಮತ್ತು ಅವರ ತೀರ್ಮಾನವನ್ನು ಒಪ್ಪಿಕೊಂಡರೆ ಅವನು ಅವನನ್ನು ಅಲ್ಲಾಹನಿಗೆ ಭಾಗೀದಾರನನ್ನಾಗಿ ಮಾಡಿದನು. ಸರ್ವೋನ್ನತನಾದ ಅಲ್ಲಾಹು ಹೇಳಿದ್ದಾನೆ:

﴿ وَإِنْ أَطَعْتُمُوهُمْ إِنَّكُمْ لَمُشْرِكُونَ ١٢١ ﴾

**"ನೀವು ಅವರನ್ನು ಅನುಸರಿಸಿದರೆ ಖಂಡಿತವಾಗಿಯೂ ನೀವು ಬಹುದೇವಾರಾಧಕರು."** (123)

ಅಂದರೆ ಅಲ್ಲಾಹು ವಿಧಿಸಲ್ಪಟ್ಟವುಗಳಲ್ಲಿ ಹರಾಮ್ ಮಾಡಿರುವಂತಹವುಗಳನ್ನು ಹಲಾಲ್ ಮಾಡುವವರು ಮತ್ತು ಹಲಾಲ್ ಮಾಡಿರುವವುಗಳನ್ನು ಹರಾಮ್ ಮಾಡುವವರು. ಇಂತಹವರನ್ನು ಅನುಸರಿಸಿದರೆ ಅವನು ಬಹುದೇವಾರಾಧಕ (ಮುಶ್ರಿಕ್) ಆಗುತ್ತಾನೆ. ಪರಮಪಾವನನು ಸೂಚಿಸಿದಂತೆ ಯಾರಾದರೂ ಅಲ್ಲಾಹು ಹರಾಮ್‌ಗೊಳಿಸಿರುವುದನ್ನು ಹಲಾಲ್‌ಗೊಳಿಸುವ ಮತ್ತು ಅಲ್ಲಾಹು ಹಲಾಲ್‌ಗೊಳಿಸಿರುವುದನ್ನು ಹರಾಮ್‌ಗೊಳಿಸುವಲ್ಲಿ ವಿದ್ವಾಂಸರುಗಳನ್ನು ಹಾಗೂ ಸನ್ಯಾಸಿಗಳನ್ನು ಅನುಸರಿಸಿದರೆ ಅವನು ಅವರನ್ನು ಅಲ್ಲಾಹನಿಗೆ ಭಾಗೀದಾರರನ್ನಾಗಿ ಮಾಡಿದನು. ಅತಿ ಉನ್ನತನಾದ ಅವನು ಹೇಳಿರುವನು:

---

**121** ಕುರ್‌ಆನ್ 10:59

**122** ಕುರ್‌ಆನ್ 42:21

**123** ಕುರ್‌ಆನ್ 6:121

﴿ ٱتَّخَذُوٓاْ أَحۡبَارَهُمۡ وَرُهۡبَٰنَهُمۡ أَرۡبَابٗا مِّن دُونِ ٱللَّهِ وَٱلۡمَسِيحَ ٱبۡنَ مَرۡيَمَ وَمَآ أُمِرُوٓاْ إِلَّا لِيَعۡبُدُوٓاْ إِلَٰهٗا وَٰحِدٗاۖ لَّآ إِلَٰهَ إِلَّا هُوَۚ سُبۡحَٰنَهُۥ عَمَّا يُشۡرِكُونَ ٣١ ﴾

**"ಅಲ್ಲಾಹನ ಹೊರತು ತಮ್ಮ ವಿದ್ವಾಂಸರನ್ನು ಮತ್ತು ತಮ್ಮ ಸನ್ಯಾಸಿಗಳನ್ನು ಪ್ರಭುಗಳನ್ನಾಗಿ ಮಾಡಿಕೊಂಡಿದ್ದಾರೆ ಮತ್ತು ಮರ್ಯಮರ ಪುತ್ರ ಈಸಾರನ್ನು ತಮ್ಮ ಪ್ರಭುವಾಗಿ ಮಾಡಿಕೊಂಡಿದ್ದಾರೆ. ವಾಸ್ತವದಲ್ಲಿ ಒಬ್ಬನೇ ಆರಾಧ್ಯನನ್ನು ಆರಾಧಿಸುವಂತೆ ಅವರು ಆದೇಶಿಸಲ್ಪಟ್ಟಿದ್ದರು. ಅವನ ಹೊರತು ಆರಾಧನೆಗೆ ಅರ್ಹನು ಬೇರೆ ಯಾರೂ ಇಲ್ಲ. ಅವನೊಂದಿಗೆ ಇವರು ಮಾಡುವ ಭಾಗೀದಾರಿಕೆಯಿಂದ ಅವನು ಅತ್ಯಂತ ಪರಿಶುದ್ಧನು."** (124)

ಇಸ್ಲಾಮ್ ಸ್ವೀಕಾರಕ್ಕಿಂತ ಮುಂಚೆ ಕ್ರೈಸ್ತರಾಗಿದ್ದ ಅದೀ ಇಬ್ನ್ ಹಾತಿಮ್ ಈ ಸೂಕ್ತವನ್ನು ಕೇಳಿದಾಗ ಹೇಳಿದರು: **"ಓ ಅಲ್ಲಾಹನ ಸಂದೇಶವಾಹಕರೇ, ನಾವು ಅವರನ್ನು ಆರಾಧಿಸುತ್ತಿರಲಿಲ್ಲ."** ಆಗ ಪ್ರವಾದಿ(ﷺ)ರವರು ಹೇಳಿದರು: **"ಅಲ್ಲಾಹು ಹರಾಮ್ ಮಾಡಿದ್ದುದನ್ನು ಅವರು ಹಲಾಲ್ ಮಾಡಿರಲಿಲ್ಲವೇ? ನೀವು ಅದನ್ನು ಹಲಾಲ್ ಎಂದು ಪರಿಗಣಿಸುತ್ತಿರಲಿಲ್ಲವೇ? ಅಲ್ಲಾಹು ಹಲಾಲ್ ಮಾಡಿರುವುದನ್ನು ಅವರು ಹರಾಮ್ ಮಾಡಿರಲಿಲ್ಲವೇ? ಮತ್ತು ನೀವು ಅದನ್ನು ಹರಾಮ್ ಎಂದು ಪರಿಗಣಿಸುತ್ತಿರಲಿಲ್ಲವೇ?"** ಆಗ ಅವರು ಹೇಳಿದರು: **"ನಿಜವಾಗಿಯೂ"**. ಆಗ ಪ್ರವಾದಿ(ﷺ) ಹೇಳಿದರು: **"ಅದುವೇ ಅವರ ಆರಾಧನೆಯಾಗಿದೆ."**

ಶೈಖ್ ಅಬ್ದುರ್ರಹ್ಮಾನ್ ಬಿನ್ ಹಸನ್(ﷀ) ಹೇಳಿದ್ದಾರೆ: "ಅಲ್ಲಾಹನಿಗೆ ಅವಿಧೇಯತೆ ತೋರಿಸಿ ಅವರ ವಿದ್ವಾಂಸರ ಹಾಗೂ ಸನ್ಯಾಸಿಗಳಿಗೆ ವಿಧೇಯತೆಯು ಅಲ್ಲಾಹನ ಹೊರತು ಅವರ ಆರಾಧನೆಯಾಗಿದೆ ಮತ್ತು ಅಲ್ಲಾಹು ಕ್ಷಮಿಸಲಾರದ ದೊಡ್ಡ ಶಿರ್ಕ್ ಆಗಿದೆ. ಸರ್ವೋನ್ನತನಾದ ಅಲ್ಲಾಹು ಹೇಳುತ್ತಾನೆ:

﴿ وَمَآ أُمِرُوٓاْ إِلَّا لِيَعۡبُدُوٓاْ إِلَٰهٗا وَٰحِدٗاۖ لَّآ إِلَٰهَ إِلَّا هُوَۚ سُبۡحَٰنَهُۥ عَمَّا يُشۡرِكُونَ ٣١ ﴾

**"ಒಬ್ಬನೇ ಆರಾಧ್ಯನನ್ನು ಆರಾಧಿಸುವಂತೆ ಅವರು ಆದೇಶಿಸಲ್ಪಟ್ಟಿದ್ದರು. ಅವನ ಹೊರತು ಆರಾಧನೆಗೆ ಅರ್ಹರಾದವರು ಯಾರೂ ಇಲ್ಲ. ಇವರು(ಅವನೊಂದಿಗೆ)ಮಾಡುವ ಭಾಗೀದಾರಿಕೆಯಿಂದ ಅವನು ಅತ್ಯಂತ ಪರಿಶುದ್ಧನು."** (125)

ಅಂತೆಯೇ ಅಲ್ಲಾಹನ ಇನ್ನೊಂದು ವಚನವು ಹೀಗಿದೆ:

**124** ಕುರ್‌ಆನ್ 9:31

**125** ಕುರ್‌ಆನ್ 9:31

﴿ وَلَا تَأْكُلُوا۟ مِمَّا لَمْ يُذْكَرِ ٱسْمُ ٱللَّهِ عَلَيْهِ وَإِنَّهُۥ لَفِسْقٌ ۗ وَإِنَّ ٱلشَّيَـٰطِينَ لَيُوحُونَ
إِلَىٰٓ أَوْلِيَآئِهِمْ لِيُجَـٰدِلُوكُمْ ۖ وَإِنْ أَطَعْتُمُوهُمْ إِنَّكُمْ لَمُشْرِكُونَ ﴿١٢١﴾ ﴾

**"ಅಲ್ಲಾಹನ ನಾಮ ಉಚ್ಚರಿಸದೆ ವಧಿಸಲ್ಪಟ್ಟ ಪ್ರಾಣಿಯನ್ನು ತಿನ್ನಬೇಡಿರಿ. ಹೀಗೆ ಮಾಡುವುದು ಫಿಸ್ಕ್ (ಪಾಪ ಮತ್ತು ಅಲ್ಲಾಹನಿಗೆ ಕೃತಘ್ನತೆಯಾಗಿದೆ) ಆಗಿದೆ ಮತ್ತು ನಿಶ್ಚಯವಾಗಿಯೂ ಶೈತಾನರು ತಮ್ಮ ಗೆಳೆಯರ ಮನಸ್ಸಿನಲ್ಲಿ ನಿಮ್ಮೊಂದಿಗೆ ತರ್ಕಿಸಲಿಕ್ಕಾಗಿ ಪ್ರೇರೇಪಿಸುತ್ತಾರೆ. ನೀವು ಅವರನ್ನು ಅನುಸರಿಸಿದರೆ ನಿಜವಾಗಿಯೂ ನೀವು ಬಹುದೇವಾರಾಧಕರು."** (126)

ಜನರಲ್ಲಿ ಬಹಳಷ್ಟು ಮಂದಿ ತಕ್‌ಲೀದ್ ಮಾಡುವವರ ಅವಸ್ಥೆಯು ಇದೇ ಆಗಿದೆ. ಅವರು ತಮ್ಮ ಇಮಾಮ್‌ಗಳು ಆಧಾರಕ್ಕೆ ಪುರಾವೆಗಳಿಗೆ ವಿರುಧ್ಧವಾಗಿರುವಾಗ ಆ ನೈಜ ಆಧಾರವನ್ನು ಕಡೆಗಣಿಸುತ್ತಾರೆ. ಇದು ಈ ರೀತಿಯ ಶಿರ್ಕ್‌ನ ಒಂದು ರೂಪವಾಗಿದೆ.

ಅಲ್ಲಾಹ್‌ನ ಶಾಸನವು ಕಡ್ಡಾಯವಾಗಿರುವುದು ಮತ್ತು ಇತರ ಎಲ್ಲಾ ಶಾಸನಗಳನ್ನು ತೊರೆಯುವುದು ಲಾ ಇಲಾಹ ಇಲ್ಲಲ್ಲಾಹ್ ನ ಬಾಧ್ಯತೆಯಾಗಿದೆ ಮತ್ತು ಸಹಾಯ ಯಾಚಿಸಲಾಗುವವನು ಅಲ್ಲಾಹನಾಗಿದ್ದಾನೆ.

## ಅಧ್ಯಾಯ–4
## ಇಬಾದತ್ (ಆರಾಧನೆ) ಅದರ ಅರ್ಥ ಮತ್ತು ಅದರ ಘಟಕಗಳು

ಇಬಾದತ್‌ನ (ಆರಾಧನೆಯ) ಅರ್ಥ:

ಇಬಾದತ್‌ನ ಬುನಾದಿಯು ದೈನ್ಯತೆ ಹಾಗೂ ಸಮರ್ಪಣೆಯಾಗಿದೆ. ದೀನ್‌ನಲ್ಲಿ ಅದಕ್ಕೆ ಬಹಳ ವ್ಯಾಖ್ಯೆಗಳಿದ್ದರೂ ಅವುಗಳ ಅರ್ಥವು ಮಾತ್ರ ಒಂದೇ ಆಗಿದೆ.

ಅವುಗಳ ಪೈಕಿ: ಇಬಾದತ್ ಎಂದರೆ ಅಲ್ಲಾಹನು ತನ್ನ ಸಂದೇಶವಾಹಕರುಗಳ ನಾಲಗೆಯ ಮೂಲಕ ಆದೇಶಿಸಿದವುಗಳನ್ನು ಚಾಚೂ ತಪ್ಪದೆ ಅನುಸರಿಸುವ ಮೂಲಕ ಅಲ್ಲಾಹನನ್ನು ಅನುಸರಣೆ ಮಾಡುವುದಾಗಿದೆ.

ಅವುಗಳ ಪೈಕಿ ಇಬಾದತ್ ಎಂದರೆ ಅತೀವ ದೈನ್ಯತೆ ಹಾಗೂ ಆತನ ಮೇಲೆ ಪ್ರೀತಿಯೊಂದಿಗೆ ಸಮರ್ಪಿಸುವುದು. ಅದರ ಸಂಪೂರ್ಣ ವ್ಯಾಖ್ಯೆಯೆಂದರೆ ಇಬಾದತ್ ಎಂಬುದು ಅಲ್ಲಾಹು ಪ್ರೀತಿಸುವ ಮತ್ತು ಅವನು ಸಂತೃಪ್ತಿ ಹೊಂದುವ ಆಂತರಿಕವಾದುದೋ ಅಥವಾ ಬಾಹ್ಯವಾದುದೋ ಆದ ಎಲ್ಲ ಮಾತು–ಕೃತಿಗಳ ಸಂಪೂರ್ಣವಾದ ಹೆಸರು

126 ಕುರ್‌ಆನ್ 6:121

ಇಬಾದತ್. ಹೃದಯ, ನಾಲಗೆ ಹಾಗೂ ಬಾಹುಗಳ ಆರಾಧನೆಯೆಂದು ವಿಂಗಡಿಸಲ್ಪಟ್ಟಿದೆ. ಭಯ, ನಿರೀಕ್ಷೆ, ಪ್ರೀತಿ, ಭರವಸೆ, ಆಸೆ ಮತ್ತು ಭೀತಿ ಇವುಗಳು ಹೃದಯದ ಇಬಾದತ್ ಆಗಿವೆ. ನಾಲಗೆ ಹಾಗೂ ಹೃದಯದ ಮೂಲಕ ತಹ್ಲೀಲ್, ತಕ್ಬೀರ್, ಸ್ತುತಿಸುವುದು, ಕೃತಜ್ಞತೆ ಇವುಗಳೆಲ್ಲ ನಾಲಗೆ ಹಾಗೂ ಹೃದಯದ ಆರಾಧನೆಯಾಗಿದೆ. ನಮಾಝ್, ಝಕಾತ್, ಹಜ್ಜ್ ಮತ್ತು ಜಿಹಾದ್ ಇವುಗಳು ಹೃದಯ ಹಾಗೂ ದೇಹದ ಆರಾಧನೆಯಾಗಿದೆ. ಹೃದಯ ನಾಲಗೆ ಹಾಗೂ ಬಾಹುಗಳಿಂದ ಬರುವಂತಹ ಇತರ ಅನೇಕ ಆರಾಧನೆಗಳಿವೆ.

ಆರಾಧನೆಯು ಅಲ್ಲಾಹನು ಸೃಷ್ಟಿಯನ್ನು ಸೃಷ್ಟಿಸಿರುವುದರ ಕಾರಣವಾಗಿದೆ. ಮಹೋನ್ನತನು ಹೇಳಿದ್ದಾನೆ:

﴿ وَمَا خَلَقْتُ ٱلْجِنَّ وَٱلْإِنسَ إِلَّا لِيَعْبُدُونِ ﴿٥٦﴾ مَآ أُرِيدُ مِنْهُم مِّن رِّزْقٍ وَمَآ أُرِيدُ أَن يُطْعِمُونِ ﴿٥٧﴾ إِنَّ ٱللَّهَ هُوَ ٱلرَّزَّاقُ ذُو ٱلْقُوَّةِ ٱلْمَتِينُ ﴿٥٨﴾ ﴾

**“ಮತ್ತು ನಾನು ಜಿನ್ನ್‌ಗಳನ್ನು ಹಾಗೂ ಮನುಷ್ಯರನ್ನು ನನ್ನನ್ನು(ಮಾತ್ರ) ಆರಾಧಿಸಲಿಕ್ಕಾಗಿ ಸೃಷ್ಟಿಸಿದ್ದೇನೆ. ನಾನು ಅವರಿಂದ ಯಾವುದೇ ಅನ್ನಾಧಾರವನ್ನು ಬಯಸುವುದಿಲ್ಲ ಮತು ನಾನೇನೂ ಅವರು ನನಗೆ ಉಣಿಸಬೇಕೆಂದೂ ಅಪೇಕ್ಷಿಸುವುದಿಲ್ಲ. ನಿಶ್ಚಯವಾಗಿಯೂ ಅಲ್ಲಾಹು ಎಲ್ಲರಿಗೂ ಅನ್ನಾಧಾರ ನೀಡುವವನು, ಶಕ್ತಿವಂತನೂ ಮಹಾ ಬಲಶಾಲಿಯೂ ಆಗಿರುತ್ತಾನೆ.”** [127]

ಜಿನ್ನ್ ಹಾಗೂ ಮನುಷ್ಯವರ್ಗದ ಸೃಷ್ಟಿಯ ಹಿಂದಿರುವ ಯುಕ್ತಿಯು ಅಲ್ಲಾಹನ ಆರಾಧನೆಯನ್ನು ಸಂಸ್ಥಾಪಿಸುವುದಾಗಿದೆ. ಅವನಿಗೆ ಇವರು ಮಾಡುವ ಆರಾಧನೆಯ ಅಗತ್ಯವಿಲ್ಲ. ಬದಲಾಗಿ ಇವರೇ ಅಲ್ಲಾಹನ ಮುಂದೆ ತಮ್ಮ ಅವಲಂಬನೆಯಿಂದಾಗಿ ಆ ಪ್ರಾರ್ಥನೆಯ ಅಗತ್ಯವುಳ್ಳವರಾಗಿದ್ದಾರೆ. ಆದ್ದರಿಂದ ಅವರು ಅವನನ್ನು ಆತನ ಶರೀಅದ ಪ್ರಕಾರ ಆರಾಧಿಸುತ್ತಾರೆ. ಆದ್ದರಿಂದ ಯಾರಾದರೂ ಅವನನ್ನು ಆರಾಧಿಸಲು ತಿರಸ್ಕರಿಸಿದರೆ ಅವನು ಸತ್ಯನಿಷೇಧಿ. ಯಾರಾದರೂ ಅವನನ್ನು ಬೇರೆಯವರ ಜೊತೆಯಲ್ಲಿ ಆರಾಧಿಸಿದರೆ ಅವನು ಮುಶ್ರಿಕ್, ಯಾರದಾದರೂ ಅವನೊಬ್ಬನನ್ನೇ ಆರಾಧಿಸುತ್ತಿದ್ದರೆ ಮತ್ತು ಆ ಆರಾಧನೆಯು ಆ ಆರಾಧ್ಯನು ವಿಧಿಸಿದ ರೀತಿಯಲ್ಲಿಲ್ಲದಿದ್ದರೆ ಅವನು ನೂತನವಾದಿ ಮತ್ತು ಯಾರಾದರೂ ಅವನು ವಿಧಿಸಿದ ರೀತಿಯಲ್ಲೇ ಆತನೊಬ್ಬನನ್ನೇ ಆರಾಧಿಸುತ್ತಿದ್ದರೆ ಅವನು ಸತ್ಯವಿಶ್ವಾಸಿ ಹಾಗೂ ಮುವಹ್ಹಿದ್ ಆಗಿದ್ದಾನೆ.

ಆರಾಧನೆಯ ವಿಧಗಳು ಹಾಗೂ ಅದರ ಘಟಕಗಳು:

ಆರಾಧನೆಯು ಸಹ ವಿವಿಧ ರೂಪಗಳನ್ನು ಹೊಂದಿದೆ ಮತ್ತು ಎಲ್ಲಾ ರೀತಿಯ ವಿಧೇಯತೆಯನ್ನು ಅಂದರೆ ಬಾಹ್ಯವಾಗಿ ನಾಲಗೆ ಮತ್ತು ಕೈಕಾಲುಗಳು ಮಾಡುವ

**127** ಕುರ್‌ಆನ್ 51:56–58

ಹೃದಯದಿಂದ ಹೊರಬರುವಂತಹದು, ದ್ರಿಕ್ಸ್, ತಸ್ಬೀಹ್, ತಹ್ಲೀಲ್, ಕುರ್‌ಆನ್ ಪಾರಾಯಣ, ನಮಾಝ್, ಝಕಾತ್, ಉಪವಾಸ, ಹಜ್ಜ್, ಜಿಹಾದ್, ಒಳಿತನ್ನು ಆಜ್ಞಾಪಿಸುವುದು ಮತ್ತು ಕೆಡುಕನ್ನು ತಡೆಯುವುದು, ಸಂಬಂಧಿಕರೊಂದಿಗೆ, ಅನಾಥರೊಂದಿಗೆ, ಬಡವರೊಂದಿಗೆ ಮತ್ತು ಯಾತ್ರಿಕರೊಂದಿಗೆ ಒಳ್ಳೆಯ ರೀತಿಯಲ್ಲಿರುವುದು. ಹಾಗೆಯೇ ಅಲ್ಲಾಹು ಹಾಗೂ ಅಲ್ಲಾಹನ ಪ್ರವಾದಿ(ﷺ) ಯವರ ಮೇಲೆ ಪ್ರೀತಿ, ಅಲ್ಲಾಹನ ಭಯ ಹಾಗೂ ಆತನೆಡೆಗೆ ಮರಳುವುದು ಮತ್ತು ದೀನ್ ಅನ್ನು ನಿಷ್ಕಳಂಕವಾಗಿ ಅವನಿಗೇ ಸಮರ್ಪಿಸುವುದು. ಆತನ ನಿಯಮಗಳಿಗೆ ಬದ್ಧನಾಗುವುದು ಮತ್ತು ಆತನ ಆದೇಶಗಳಿಗೆ ಸಂತೃಪ್ತನಾಗಿರುವುದು, ಆತನ ಮೇಲೆ ನಂಬಿಕೆಯಿಡುವುದು, ಆತನ ಕರುಣೆಯ ಬಗ್ಗೆ ನಿರೀಕ್ಷೆ ಮತ್ತು ಆತನ ಶಿಕ್ಷೆಗೆ ಭಯಪಡುವುದು. ಹೀಗೆ ಒಬ್ಬ ಸತ್ಯವಿಶ್ವಾಸಿಯ ಜೀವನದ ಎಲ್ಲಾ ವಿಷಯಗಳನ್ನು ಒಳಗೊಂಡಿರುತ್ತದೆ. ಒಬ್ಬನು ಅಲ್ಲಾಹನ ಸಾಮಿಪ್ಯ ಹೊಂದುವ ಉದ್ದೇಶವನ್ನು ಹೊಂದಿದ್ದರೆ ಅಥವಾ ಅದಕ್ಕೆ ಸಹಾಯಕವಾಗುವಂತಹ, ಆರಾಧನೆಯ ಉದ್ದೇಶದಿಂದ ತೆಗೆದುಕೊಳ್ಳುವ ಯಾವುದೇ ಅಭ್ಯಾಸಗಳು ಅಲ್ಲಾಹನಿಗೆ ಭಯಪಟ್ಟು ನಿದ್ರೆಯಲ್ಲಿ, ಮಾರಾಟದಲ್ಲಿ ಕೊಂಡುಕೊಳ್ಳುವುದರಲ್ಲಿ, ಜೀವನೋಪಾಯ ಅರಸುವಲ್ಲಿ, ವಿವಾಹದಲ್ಲಿ ಈ ಎಲ್ಲಾ ವಿಭಾಗದಲ್ಲೂ ಅಲ್ಲಾಹನನ್ನು ಅನುಸರಿಸುವುದಾದರೆ ಈ ಎಲ್ಲಾ ನೈಜ ಉದ್ದೇಶದಿಂದ ಮಾಡುವ ಅಭ್ಯಾಸಗಳು ಆರಾಧನೆಗಳಾಗುತ್ತದೆ ಮತ್ತು ಇದಕ್ಕೆ ಅಲ್ಲಾಹನಿಂದ ಪ್ರತಿಫಲವನ್ನು ಅವನು ಪಡೆಯುತ್ತಾನೆ. ಆರಾಧನೆಯೆಂದರೆ ಕೆಲವು ಜನಜನಿತ ಕ್ರಿಯೆಗಳಿಗೆ ಮಾತ್ರ ಸೀಮಿತವಾಗಿಲ್ಲ.

## ಅಧ್ಯಾಯ 5

## ಆರಾಧನೆಯ ಕುರಿತು ತಪ್ಪು ಕಲ್ಪನೆಗಳಿಗೆ ಸ್ಪಷ್ಟೀಕರಣ

ಆರಾಧನೆಯು ತೌಕೀಫಿಯ್ಯ ಅಂದರೆ ಕುರ್‌ಆನ್ ಹಾಗೂ ಸುನ್ನತ್‌ನಿಂದ ಆಧಾರಿತವಾಗಿ ಶಾಸನಬದ್ಧಗೊಳಿಸಿದ್ದು ಆಗಿದೆ. ಯಾವುದನ್ನು ನಿಯಮಗೊಳಿಸಿಲ್ಲವೋ ಅದು ತಿರಸ್ಕೃತವಾದ ನವೀನ ಆಚಾರಗಳಾಗಿವೆ. ಪ್ರವಾದಿ(ﷺ)ಹೇಳಿದರು:

«مَنْ عَمِلَ عَمَلًا لَيْسَ عَلَيْهِ أَمْرُنَا فَهُوَ رَدٌّ»

**“ಯಾರಾದರೂ ನಮ್ಮಿಂದ ಆದೇಶಿಸಲ್ಪಡದ ಒಂದು ಕ್ರಿಯೆಯನ್ನು ಮಾಡುವುದಾದರೆ ಅದು ತಿರಸ್ಕರಿಸಲ್ಪಡುವಂಥದ್ದು.”** [128]

ಅಂದರೆ ಅವನ ಕ್ರಿಯೆ ತಿರಸ್ಕರಿಸಲ್ಪಡುವುದಲ್ಲದೆ ಸ್ವೀಕರಿಸಲ್ಪಡುವುದಿಲ್ಲ. ಮಾತ್ರವಲ್ಲ

**128** ಬುಖಾರಿ ಮತ್ತು ಮುಸ್ಲಿಮ್

ವಿಧೇಯನಾಗಿರದೆ ಅವಿಧೇಯವಾಗಿರುವುದರ ಮೂಲಕ ಅವನು ಪಾಪವನ್ನು ಮಾಡಿದವನಾಗುತ್ತಾನೆ.

ಆರಾಧನೆಯನ್ನು ನೆರವರಿಸುವುದರ ಸುರಕ್ಷಿತ ಮನ್‌ಹಜ್ ಅಂದರೆ ತಾತ್ಸಾರ ಹಾಗೂ ಆಲಸ್ಯ ಮತ್ತು ತೀವ್ರತೆ ಹಾಗೂ ಹದ್ದು ಮೀರುವುದರ ನಡುವಿನ ನಿಲುವಾಗಿದೆ. ಅಲ್ಲಾಹನು ತನ್ನ ಪ್ರವಾದಿ(ﷺ)ರಿಗೆ ಹೇಳಿದ್ದಾನೆ:

﴿ فَٱسۡتَقِمۡ كَمَآ أُمِرۡتَ وَمَن تَابَ مَعَكَ وَلَا تَطۡغَوۡاْۚ ﴾

**"ಆದ್ದರಿಂದ ನಿನಗೆ ಮತ್ತು ನಿನ್ನೊಂದಿಗೆ (ನಿನ್ನ ಸಹಚರರಿಗೆ) ಪಶ್ಚಾತ್ತಾಪದೊಂದಿಗೆ ಮರಳುವವರೊಂದಿಗೆ ನೀನು ದೃಢವಾಗಿ ಹಾಗೂ ನೇರವಾಗಿ ನಿಲ್ಲು ಮತ್ತು ಹದ್ದು ಮೀರಬೇಡ."** (129)

ಆದ್ದರಿಂದ ಈ ಆರಾಧನೆಯನ್ನು ಮಾಡುವುದರ ಸುರಕ್ಷಿತ ಮನ್‌ಹಜ್‌ಗೆ ಮಾರ್ಗದರ್ಶನವನ್ನು ಈ ಸೂಕ್ತವು ಹೊಂದಿದೆ. ಆರಾಧನೆಯನ್ನು ಸೂಕ್ತವಾದ ರೀತಿಯಲ್ಲಿ ನೆರವೇರಿಸುವುದರ ಬಗ್ಗೆ ಇಸ್ತಿಖಾಮ (ದೃಢತೆ) ಯಾವುದೇ ತಾತ್ಸಾರ ಅಥವಾ ಮಿತಿ ಮೀರುವಿಕೆಯಿಲ್ಲದೆ, ನಿಯಮಬದ್ಧವಾಗಿ (ನಿನಗೆ ಆಜ್ಞಾಪಿಸಿದಂತೆ) ನೆರವೇರಿಸುವುದು ಮಾಡಬೇಕೆಂದು ಹೇಳಲಾಗಿದೆ.

ನಂತರ ಅವನು 'ನೀನು ಹದ್ದು ಮೀರಬೇಡ' ಎಂದು ಹೇಳುವುದರ ಮೂಲಕ ಅದನ್ನು ಬೆಂಬಲಿಸಿದನು. ಹದ್ದು ಮೀರುವುದೆಂದರೆ ಕಠಿಣತೆ ಹಾಗೂ ಹಠಮಾರಿತನದಿಂದ ಮೇರೆಯನ್ನು ಉಲ್ಲಂಘಿಸುವುದು ಮತ್ತು ಇದು ಮಿತಿಯನ್ನು ಮೀರುವುದಾಗಿದೆ. ಪ್ರವಾದಿ(ﷺ)ರವರು ಮೂರು ಸಹಾಬಿಗಳ ಆರಾಧನಾ ಕ್ರಿಯೆಯ ಬಗ್ಗೆ ಅದು ಸತ್ವರಹಿತವಾದದ್ದು ಎಂದು ಗುರುತಿಸಿದ್ದರು. ಅವರಲ್ಲೊಬ್ಬ ಸಹಾಬಿಯು ಹೇಳಿದರು, ನಾನು ನಮಾಝ್ ಮಾಡುತ್ತೇನೆ ಮತ್ತು ಮಲಗುವುದಿಲ್ಲ. ಮತ್ತೊಬ್ಬರು ಹೇಳಿದರು, 'ನಾನು ಮದುವೆಯಾಗುವುದಿಲ್ಲ' ಪ್ರವಾದಿ(ﷺ)ರವರು ಹೇಳಿದರು:

«أَمَّا أَنَا فَأَصُومُ وَأُفْطِرُ وَأَتَزَوَّجُ النِّسَاءَ فَمَنْ رَغِبَ عَنْ سُنَّتِي فَلَيْسَ مِنِّي»

**"ನಾನು ಉಪವಾಸ ಹಿಡಿಯುತ್ತೇನೆ ಹಾಗೂ ತೊರೆಯುತ್ತೇನೆ. ನಾನು ನಿದ್ರೆ ಮಾಡುತ್ತೇನೆ ಮತ್ತು ನಾನು ಮದುವೆ ಕೂಡಾ ಆಗುತ್ತೇನೆ. ಆದ್ದರಿಂದ ಯಾರು ನನ್ನ ಸುನ್ನತ್‌ನಿಂದ ವಿಮುಖರಾಗುತ್ತಾರೋ ಅವನು ನನ್ನವನಲ್ಲ."** (130)

ಅಖೀದದ ವಿಷಯದಲ್ಲಿ ವಿವಿಧ ದೃಷ್ಟಿಕೋನವಿರುವ ಎರಡು ಗುಂಪು ಪ್ರಸ್ತುತ ಈಗಲೂ ಇದೆ. ಮೊದಲ ಗುಂಪು ಆರಾಧನೆಯನ್ನು ಅರ್ಥಮಾಡಿಕೊಳ್ಳುವುದರಲ್ಲಿ

**129** ಕುರ್‌ಆನ್ 11:12

**130** ಬುಖಾರಿ ಮತ್ತು ಮುಸ್ಲಿಮ್

ನ್ಯೂನತೆಯಿರುವವರು, ಇವರು ಇಬಾದತ್ ಮಾಡುವುದರಲ್ಲಿ ಆಲಸ್ಯತನವನ್ನು ತೋರುತ್ತಾರೆ. ಎಷ್ಟೆಂದರೆ ಅದರ ಹೆಚ್ಚಿನ ರೂಪಗಳನ್ನು ಕೈಬಿಟ್ಟಿರುತ್ತಾರೆ. ಅವರು ತಮ್ಮ ಆರಾಧನೆಗಳನ್ನು ಮಸೀದಿಯಲ್ಲಿ ಮಾಡುವ ಕೆಲವು ಆರಾಧನೆಗಳಿಗೆ ಮಾತ್ರ ಸೀಮಿತಗೊಳಿಸುತ್ತಾರೆ. ಅವರು ಮನೆ, ಕಛೇರಿ, ಅಂಗಡಿ, ದಾರಿ, ವ್ಯವಹಾರ, ರಾಜಕೀಯ ಮತ್ತು ವ್ಯಾಜ್ಯಗಳಲ್ಲಿ ನ್ಯಾಯಪಡೆಯುವುದು ಅಥವಾ ಜೀವನದ ಬೇರಾವುದೇ ಸಮಯಗಳಲ್ಲಿರುವ ಆರಾಧನೆಗಳಿಗೆ ಅವರು ಪ್ರಾಧಾನ್ಯತೆ ನೀಡುವುದಿಲ್ಲ. ಹೌದು ಮಸೀದಿಗೆ ಶ್ರೇಷ್ಠತೆಯಿದೆ. ದಿನದ ಐದು ಹೊತ್ತಿನ ನಮಾಝ್‌ನ್ನು ಅಲ್ಲಿ ಮಾಡುವುದು ನಮಗೆ ಕಡ್ಡಾಯವಾಗಿರುತ್ತದೆ. ಆದರೂ ಇಬಾದತ್ ಮುಸ್ಲಿಮರ ಜೀವನದ ಎಲ್ಲಾ ಸಮಯದಲ್ಲೂ ಬರುತ್ತದೆ. ಅದು ಮಸೀದಿಯ ಒಳಗೂ ಹೊರಗೂ ಬರುತ್ತಿರುತ್ತದೆ.

ಎರಡನೆಯ ಗುಂಪು ಅಖೀದದ ಪ್ರಯೋಗದ ವಿಷಯಗಳಲ್ಲಿ ಮಿತಿಮೀರಿದ ತೀವ್ರತೆ ತೋರುವುದು. ಅವರು ಮುಸ್ತಹಬ್ಬ್ (ಅಪೇಕ್ಷಣೀಯ) ವಿಷಯಗಳನ್ನು ಕಡ್ಡಾಯಗೊಳಿಸಿದ್ದಾರೆ ಮತ್ತು ಸಮ್ಮತವಾದ ವಸ್ತುಗಳನ್ನು ಹರಾಮ್ ಮಾಡಿರುತ್ತಾರೆ. ಅವರ ಮನ್‌ಹಜ್‌ಅನ್ನು ಅನುಸರಿಸದವರನ್ನು ಪಥಭ್ರಷ್ಠರು ಎಂದು ಘೋಷಿಸುತ್ತಾರೆ. ವಸ್ತುತಃ ಇದು ಮುಹಮ್ಮದ್(ﷺ)ರವರ ಮಾರ್ಗದರ್ಶನವಾಗಿದೆ ಮತ್ತು ಕೆಟ್ಟ ವಿಷಯಗಳು ಹೊಸದಾಗಿ ಕಂಡುಹಿಡಿದ ವಿಚಾರಗಳಾಗಿವೆ.

## ಅಧ್ಯಾಯ–6

# ನೈಜ ಉಬೂದಿಯ್ಯದ ಸ್ತಂಭಗಳ ಕುರಿತು ಸ್ಪಷ್ಟೀಕರಣ

ಆರಾಧನೆಯು ಮೂರು ಸ್ಥಂಭಗಳಲ್ಲಿ ನಿಂತಿದೆ. ಪ್ರೀತಿ, ಭಯ ಹಾಗೂ ನಿರೀಕ್ಷೆ. ಪ್ರೀತಿಯು ನಮ್ರತೆಯೊಂದಿಗೆ ಮತ್ತು ಭಯವು ಆಶೆಯೊಂದಿಗೆ ಬರುತ್ತದೆ. ಆರಾಧನೆಯಲ್ಲಿ ಈ ಎಲ್ಲಾ ಮೂರು ವಿಷಯಗಳು ಒಳಗೊಂಡಿರಬೇಕು. ತನ್ನ ಸತ್ಯ ವಿಶ್ವಾಸಿಗಳಾದ ದಾಸರನ್ನು ವಿವರಿಸುತ್ತಾ ಸರ್ವೋನ್ನತನಾದ ಅಲ್ಲಾಹನು ಹೇಳುತ್ತಾನೆ:

﴿ يُحِبُّهُمْ وَيُحِبُّونَهُۥٓ ﴾

**“ಅವನು ಅವರನ್ನು ಮತ್ತು ಅವರು ಅವನನ್ನು ಪ್ರೀತಿಸುವ ಜನರು.”** (131)

ಮತ್ತು ಸರ್ವೋನ್ನತನು ಹೇಳಿದನು:

﴿ وَٱلَّذِينَ ءَامَنُوٓا۟ أَشَدُّ حُبًّا لِّلَّهِ ﴾

131 ಕುರ್‌ಆನ್ 5:54

**“ಆದರೆ ವಿಶ್ವಾಸವಿರಿಸುವವರು ಅಲ್ಲಾಹನನ್ನು (ಎಲ್ಲಕ್ಕಿಂತ) ಹೆಚ್ಚಾಗಿ ಪ್ರೀತಿಸುತ್ತಾರೆ.”** (132)

ತನ್ನ ಸಂದೇಶವಾಹಕರನ್ನು ಮತ್ತು ಪ್ರವಾದಿಗಳನ್ನು ವಿಶ್ಲೇಷಿಸುತ್ತಾ ಅವನು ಹೇಳುತ್ತಾನೆ:

﴿ إِنَّهُمْ كَانُوا۟ يُسَـٰرِعُونَ فِى ٱلْخَيْرَٰتِ وَيَدْعُونَنَا رَغَبًا وَرَهَبًا ۖ وَكَانُوا۟ لَنَا خَـٰشِعِينَ ﴿٩٠﴾ ﴾

**“ನಿಶ್ಚಯವಾಗಿಯೂ ಅವರು ಸತ್ಕರ್ಮಗಳನ್ನು ಮಾಡಲು ಧಾವಿಸುತ್ತಿದ್ದರು ಮತ್ತು ನಿರೀಕ್ಷೆ ಮತ್ತು ಭಯದೊಂದಿಗೆ ನಮ್ಮನ್ನು ಕರೆಯುತ್ತಿದ್ದರು ಮತ್ತು ನಮ್ಮ ಮುಂದೆ ವಿನಮ್ರರಾಗುತ್ತಿದ್ದರು.”** (133)

ಕೆಲವು ಸಲಫ್ (ಮುಂಗಾಮಿ) ಗಳು ಹೇಳಿದ್ದಾರೆ: ಅಲ್ಲಾಹನನ್ನು ಕೇವಲ ಪ್ರೀತಿಯಿಂದ ಮಾತ್ರ ಆರಾಧಿಸುವವನು ಭೌತಿಕವಾದಿ, ಕೇವಲ ನಿರೀಕ್ಷೆಯೊಂದಿಗೆ ಅಲ್ಲಾಹನನ್ನು ಆರಾಧಿಸುವವನು ಮುರ್ಜಿಅ. ಕೇವಲ ಭಯದಿಂದ ಮಾತ್ರ ಪ್ರಾರ್ಥಿಸುವವನು ಹರೂರಿ (ಖವಾರಿಜ್ ಕಡೆಯವನು) ಆಗಿದ್ದಾರೆ. ಯಾರಾದರೂ ಅಲ್ಲಾಹನನ್ನು ಪ್ರೀತಿ, ಭಯ ಹಾಗೂ ನಿರೀಕ್ಷೆಯೊಂದಿಗೆ ಪ್ರಾರ್ಥಿಸುತ್ತಾನೋ ಅವನು ಸತ್ಯವಿಶ್ವಾಸಿ ಹಾಗೂ ಮುವಹ್ಹಿದ್ ಆಗಿದ್ದಾನೆ. ಶೈಖುಲ್ ಇಸ್ಲಾಮ್ ಇಬ್ನು ತೈಮಿಯ್ಯರು ಇದನ್ನು ತಮ್ಮ ರಿಸಾಲಃ ಅಲ್ ಉಬೂದಿಯ್ಯ ಗ್ರಂಥದಲ್ಲಿ ಬರೆದಿದ್ದಾರೆ. ಅವರು ಹೀಗೂ ಹೇಳಿದ್ದಾರೆ: **“ಅಲ್ಲಾಹನ ದೀನ್ ಎಂದರೆ ಅವನನ್ನು ವಿಧೇಯತೆ ಹಾಗೂ ಸಮರ್ಪಣೆಯೊಂದಿಗೆ ಪ್ರಾರ್ಥಿಸುವುದಾಗಿದೆ. ಆರಾಧನೆಯ ಮೂಲ ಅರ್ಥವು ಸಮರ್ಪಣೆಯನ್ನು ಸೂಚಿಸುತ್ತದೆ. ಹೀಗೊಂದು ಹೇಳಿಕೆಯಿದೆ: ಒಂದು ದಾರಿಯು ಮುಅಬ್ಬದ್ ಅಂದರೆ ಅದರ ಮೂಲಕ ನಡೆಯುವ ಮೂಲಕ ಅದು ಪರಿಚಿತಗೊಂಡಿದೆ. ಆದರೂ ನಮ್ಮ ಬಾಧ್ಯತೆಯಾಗಿರುವ ಆರಾಧನೆಯು ಸಮರ್ಪಣೆಯ ಅರ್ಥದೊಂದಿಗೆ ಪ್ರೀತಿಯ ಅರ್ಥವನ್ನೂ ಒಳಗೊಂಡಿದೆ. ಇದು ಅಲ್ಲಾಹನಿಗೆ ಅತ್ಯುನ್ನತ ಮಟ್ಟದ ಸಮರ್ಪಣೆಯೊಂದಿಗೆ ಅತ್ಯುನ್ನತ ಮಟ್ಟದ ಪ್ರೀತಿಯನ್ನು ಒಳಗೊಂಡಿದೆ. ಒಬ್ಬನು ಒಬ್ಬನನ್ನು ದ್ವೇಷಿಸುತ್ತಾ ತನ್ನನ್ನು ಅವನಿಗೆ ಸಮರ್ಪಿಸಿದರೆ ಅವನಿಂದ ಅವನು ಆರಾಧಿಸಲ್ಪಟ್ಟಂತಾಗುವುದಿಲ್ಲ ಅಥವಾ ಒಬ್ಬನನ್ನು ಪ್ರೀತಿಸಿದರೆ ಮತ್ತು ತನ್ನನ್ನು ಅವನಿಗೊಪ್ಪಿಸದಿದ್ದರೆ ಆಗಲೂ ಕೂಡಾ ಅವನು ಅವನ ಆರಾಧಕನಾಗುವುದಿಲ್ಲ. ಒಬ್ಬನು ತನ್ನ ಮಕ್ಕಳನ್ನೂ, ಗೆಳೆಯರನ್ನು ಪ್ರೀತಿಸುವ ರೀತಿಗೆ ಇದನ್ನು ಹೋಲಿಸಬಹುದು. ಅಲ್ಲಾಹನ ಆರಾಧನೆಯ ಕುರಿತಂತೆ ಈ ಎರಡರಲ್ಲಿ ಯಾವೊಂದೂ ಸಾಕಾಗಲಾರದು. ಬದಲಾಗಿ ಒಬ್ಬ ದಾಸನು ಅಲ್ಲಾಹನನ್ನು ಎಲ್ಲಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಾನೆ ಮತ್ತು ಅಲ್ಲಾಹನಿಗೆ ಎಲ್ಲಕ್ಕಿಂತ ಶ್ರೇಷ್ಠತೆಯನ್ನು ನೀಡುತ್ತಾನೆ. ನಿಜವಾಗಿಯೂ ಸಂಪೂರ್ಣ ಪ್ರೇಮ ಹಾಹೂ ಸಮರ್ಪಣೆಗೆ**

**132** ಕುರ್‌ಆನ್ 2:165

**133** ಕುರ್‌ಆನ್ 21:90

**ಅಲ್ಲಾಹನ ಹೊರತು ಬೇರಾರೂ ಅರ್ಹರಿಲ್ಲ.”** [134]

ಇವುಗಳು ಆರಾಧನೆಯು ನಿಂತಿರುವ ಸ್ಥಂಭಗಳಾಗಿವೆ. ಅಲ್ಲಾಮಾ ಇಬ್ನುಲ್ ಖಯ್ಯಿಮ್ ತನ್ನ ನೂನಿಯ್ಯಃದಲ್ಲಿ ಹೇಳುತ್ತಾರೆ. **“ರಹ್ಮಾನ್‌ನಿಗೆ ಆರಾಧನೆಯು ಅವನ ಮೇಲೆ ಎಲ್ಲಕ್ಕೂ ಮಿಗಿಲಾದ ಪ್ರೀತಿಯಾಗಿದೆ. ಆರಾಧಕನ ಸಮರ್ಪಣೆ; ಅದರೊಟ್ಟಿಗೆ ಇವೆರಡೂ ಕಕ್ಷೆಗಳು. ಇವುಗಳ ಮೇಲೆ ಆರಾಧನೆಯ ವೃತ್ತವು ತಿರುಗುತ್ತಿರುವುದು. ಕಕ್ಷೆಗಳು ಸ್ಥಾಪಿಸಲ್ಪಡುವವರೆಗೂ ಇದು ಚಲಿಸದು. ಸಂದೇಶವಾಹಕರ ಆದೇಶವು ಇದು ತಿರುಗಲು ಕಾರಣವೇ ಹೊರತು. ಲಾಲಸೆ, ಆತ್ಮ ಅಥವಾ ಶೈತಾನ್ ಅಲ್ಲ.”**

ಅವರು(ﷺ) ಒಬ್ಬನು ತನ್ನ ಮಹ್‌ಬೂಬ್ (ಪ್ರೀತಿಸಲ್ಪಡುವವನು, ಇಲ್ಲಿ ಅಲ್ಲಾಹ್ ಆಗಿದ್ದಾನೆ)ಗಿರುವ ಆರಾಧನೆಯು ಪ್ರೀತಿ ಮತ್ತು ನಮ್ರತೆಯಲ್ಲಿ ಸುತ್ತುವುದನ್ನು ಒಂದು ವಸ್ತುವು ತನ್ನ ಅಕ್ಷದ ಸುತ್ತಲೂ ತಿರುಗುವುದಕ್ಕೆ ಹೋಲಿಸಿದ್ದಾರೆ. ಈ ಆರಾಧನೆಯ ತಿರುಗುವಿಕೆಯು ಸಂದೇಶವಾಹಕ(ﷺ)ರ ಆದೇಶದ ಮೇರೆಗೆ ತಿರುಗುತ್ತದೆ ಎಂದೂ ಅವರು ಹೇಳುತ್ತಾರೆ. ಅಲ್ಲದೆ ಇದು ಲಾಲಸೆಯಿಂದಾಗಲೀ, ಆತ್ಮದ ಅಥವಾ ಶೈತಾನ್‌ನ ಆದೇಶದಿಂದಾಗಲಿ ತಿರುಗುವುದಲ್ಲ. ಹೀಗಿದ್ದರೆ ಅದು ಆರಾಧನೆಯಾಗುವುದಿಲ್ಲ. ಯಾವುದನ್ನು ಸಂದೇಶವಾಹಕರು(ﷺ) ನಿಶ್ಚಯಿಸಿದರೋ ಅವುಗಳಿಂದ ಈ ಆರಾಧನೆಯ ವೃತ್ತವು ತಿರುಗುತ್ತದೆಯೇ ಹೊರತು ನೂತನವಾದದಿಂದಾಗಲೀ, ಅತಿಶಯವಾದದಿಂದಾಗಲೀ, ಲಾಲಸೆಯಿಂದಾಗಲೀ ಅಥವಾ ತಾತ-ಮುತ್ತಾತಂದಿರನ್ನು ಅಂಧವಾಗಿ ಅನುಸರಿಸುವುದರಿಂದಾಲೀ ತಿರುಗುವುದು.

---

**134** ಮಜ್ಮೂಅತು ತೌಹೀದಿ ನ್ನಜ್ದಿಯ್ಯಃ ಪುಟ 549

# ತೌಹೀದ್ ಅಲ್–ಅಸ್ಮಾವಸ್ಸಿಫಾತ್

## ಅಧ್ಯಾಯ 1

ನಾಮಗಳೂ ಹಾಗೂ ಗುಣವಿಶೇಷ(ಅಸ್ಮಾವಸ್ಸಿಫಾತ್)ಗಳನ್ನು ದೃಢಪಡಿಸುವುದಕ್ಕೆ ಖುರ್‌ಆನ್ ಸುನ್ನತ್ ಹಾಗೂ ಯುಕ್ತಿಗಳಿಂದ ಆಧಾರ.

## ಅಧ್ಯಾಯ 2

ಅಲ್ಲಾಹ್‌ನ ನಾಮಗಳು ಹಾಗೂ ಗುಣ ವಿಶೇಷಣಗಳ ಕುರಿತು ಅಹ್ಲುಸುನ್ನತ್ ವಲ್ ಜಮಾಅತ್‌ನ ಕಾರ್ಯವಿಧಾನ.

## ಅಧ್ಯಾಯ 3

ಎಲ್ಲಾ ಅಥವಾ ಕೆಲವು ನಾಮಗಳು ಹಾಗೂ ಗುಣವಿಶೇಷಣಗಳನ್ನು ನಿರಾಕರಿಸುವವರನ್ನು ಖಂಡಿಸುವುದು.

## ಅಧ್ಯಾಯ 1

# ನಾಮಗಳೂ ಹಾಗೂ ಗುಣವಿಶೇಷ(ಅಸ್ಮಾವಸ್ಸಿಫಾತ್)ಗಳನ್ನು ದೃಢಪಡಿಸುವುದಕ್ಕೆ ಖುರ್‌ಆನ್ ಸುನ್ನತ್ ಹಾಗೂ ಯುಕ್ತಿಗಳಿಂದ ಆಧಾರ.

ಒಂದನೆಯದಾಗಿ:

ನಾಮಗಳು ಹಾಗೂ ಗುಣವಿಶೇಷಣಗಳನ್ನು ದೃಢಪಡಿಸುವುದಕ್ಕೆ ಖುರ್‌ಆನ್, ಸುನ್ನತ್ ಹಾಗೂ ಯುಕ್ತಿಗಳಿಂದ ಆಧಾರ

1) ಗ್ರಂಥ (ಕುರ್‌ಆನ್) ಹಾಗೂ ಸುನ್ನತ್‌ನಿಂದ ಆಧಾರ:

ಹಿಂದಿನ ಪುಟಗಳಲ್ಲಿ ತೌಹೀದ್ ಮೂರು ವಿಧಗಳಾಗಿ ವಿಂಗಡಿಸಲ್ಪಟ್ಟಿದೆ. ತೌಹೀದ್ ಅರ್‍ರುಬೂಬಿಯ್ಯ, ತೌಹೀದ್ ಅಲ್ ಉಲೂಹಿಯ್ಯ, ತೌಹೀದ್ ಅಲ್ ಅಸ್ಮಾವಸ್ಸಿಫಾತ್ ಎಂಬ ಮೂರು ವಿಧ ಎಂಬುದನ್ನು ನಾವು ಸೂಚಿಸಿದ್ದೇವೆ. ಎರಡು ವಿಧಗಳಾದ ತೌಹೀದ್ ಅರ್‍ರುಬೂಬಿಯ್ಯ ಹಾಗೂ ಅಲ್ ಉಲೂಹಿಯ್ಯಗೆ ಬಹಳಷ್ಟು ಆಧಾರಗಳನ್ನು ಕೊಟ್ಟಿದ್ದೇವೆ. ಇನ್ನು ಮೂರನೆಯ ವಿಧವಾದ ತೌಹೀದ್ ಅಲ್ ಅಸ್ಮಾವಸ್ಸಿಫಾತ್‌ಗೆ ಆಧಾರವನ್ನು ನೀಡುತ್ತಿದ್ದೇವೆ. ಗ್ರಂಥದಲ್ಲಿ ನಾವು ಕಾಣುವ ಆಧಾರವು ಸರ್ವೋನ್ನತನಾದ ಆತನ ಸೂಕ್ತಿಯಾಗಿದೆ.

﴿ وَلِلَّهِ ٱلۡأَسۡمَآءُ ٱلۡحُسۡنَىٰ فَٱدۡعُوهُ بِهَاۖ وَذَرُواْ ٱلَّذِينَ يُلۡحِدُونَ فِيٓ أَسۡمَٰٓئِهِۦۚ سَيُجۡزَوۡنَ مَا كَانُواْ يَعۡمَلُونَ ١٨٠ ﴾

**"ಮತ್ತು ಅಲ್ಲಾಹನಿಗೆ ಸರ್ವ ಸಂಪೂರ್ಣ ಮತ್ತು ಅತೀ ಸುಂದರವಾದ ನಾಮಗಳಿವೆ. ಆದ್ದರಿಂದ ಅವುಗಳಿಂದ ಅವನನ್ನು ಕರೆಯಿರಿ ಮತ್ತು ಆತನ ಹೆಸರುಗಳನ್ನು ಸುಳ್ಳಾಗಿಸುವವರ ಸಂಗವನ್ನು ತೊರೆಯಿರಿ. ಸದ್ಯದಲ್ಲೇ ಅವರು ತಾವು ಮಾಡುತ್ತಿದ್ದುದರ ಪ್ರತಿಫಲವನ್ನು ಪಡೆಯುವರು."** [135]

ಈ ಸೂಕ್ತದಲ್ಲಿ ಅಲ್ಲಾಹು ತನ್ನ ಹೆಸರುಗಳನ್ನು ದೃಢಪಡಿಸುತ್ತಾನೆ ಮತ್ತು ಅವುಗಳು ದೋಷರಹಿತ ಮತ್ತು ಅತೀ ಸುಂದರವಾಗಿವೆಂಬುದನ್ನು ತಿಳಿಸುತ್ತಾನೆ. ಯಾ ಅಲ್ಲಾಹ್, ಯಾ ರಹ್ಮಾನ್ (ದಯಾಮಯನೂ), ಯಾ ರಹೀಮ್ (ಕರುಣಾಮಯಿ), ಯಾ ಹಯ್ಯ್ (ಚಿರಂತನನು), ಯಾ ಖಯ್ಯೂಮ್ (ಪರಿಪಾಲಕ ಹಾಗೂ ರಕ್ಷಕ), ಯಾ ರಬ್ಬಲ್ ಆಲಮೀನ್ (ಜಗತ್ತುಗಳ ಒಡೆಯನೇ) ಎಂಬಿತ್ಯಾದಿಯಾಗಿ ಕರೆಯುವುದರ ಮೂಲಕ ಅವನೊಂದಿಗೆ ಪ್ರಾರ್ಥಿಸಬೇಕೆಂದು ಅವನು ಆದೇಶಿಸುತ್ತಾನೆ. ನಾಮಗಳನ್ನು

135 ಕುರ್‌ಆನ್ 7:180

ನಿರಾಕರಿಸುವ ಮೂಲಕ ಅಥವಾ ಅವುಗಳಿಗೆ ತಪ್ಪು ಅರ್ಥ ನೀಡುವ, ದುರ್ವ್ಯಾಖ್ಯಾನ ಮಾಡುವ ಮೂಲಕ ಅಥವಾ ಇನ್ನಾವುದೇ ನಿರಾಕರಣೆಯ ಮೂಲಕ, ತನ್ನ ಹೆಸರುಗಳನ್ನು ನಿರಾಕರಿಸುವರ ಕುಕರ್ಮಗಳಿಗೆ ಪ್ರತೀಕಾರವನ್ನು ಪಡೆದೇ ತೀರುತ್ತೇನೆಂದು ಅಲ್ಲಾಹು ಎಚ್ಚರಿಕೆ ನೀಡುತ್ತಾನೆ. ಮಹೋನ್ನತನಾದ ಅವನು ಹೀಗೆ ಹೇಳಿದ್ದಾನೆ:

﴿ ٱللَّهُ لَآ إِلَٰهَ إِلَّا هُوَ لَهُ ٱلْأَسْمَآءُ ٱلْحُسْنَىٰ ﴿٨﴾ ﴾

**"ಅಲ್ಲಾಹ್ ಅವನಲ್ಲದೇ ಆರಾಧನೆಗೆ ಅರ್ಹರು ಯಾರೂ ಇಲ್ಲ. ಅವನಿಗೇ ಎಲ್ಲಾ ಅತಿ ಸುಂದರವಾದ ನಾಮಗಳು ಸಲ್ಲುತ್ತವೆ."** (136)

﴿ هُوَ ٱللَّهُ ٱلَّذِى لَآ إِلَٰهَ إِلَّا هُوَ عَٰلِمُ ٱلْغَيْبِ وَٱلشَّهَٰدَةِ هُوَ ٱلرَّحْمَٰنُ ٱلرَّحِيمُ ﴿٢٢﴾ هُوَ ٱللَّهُ ٱلَّذِى لَآ إِلَٰهَ إِلَّا هُوَ ٱلْمَلِكُ ٱلْقُدُّوسُ ٱلسَّلَٰمُ ٱلْمُؤْمِنُ ٱلْمُهَيْمِنُ ٱلْعَزِيزُ ٱلْجَبَّارُ ٱلْمُتَكَبِّرُ سُبْحَٰنَ ٱللَّهِ عَمَّا يُشْرِكُونَ ﴿٢٣﴾ هُوَ ٱللَّهُ ٱلْخَٰلِقُ ٱلْبَارِئُ ٱلْمُصَوِّرُ لَهُ ٱلْأَسْمَآءُ ٱلْحُسْنَىٰ يُسَبِّحُ لَهُۥ مَا فِى ٱلسَّمَٰوَٰتِ وَٱلْأَرْضِ وَهُوَ ٱلْعَزِيزُ ٱلْحَكِيمُ ﴿٢٤﴾ ﴾

**"ಅವನು ಅಲ್ಲಾಹ್, ಅವನಲ್ಲದೇ ಆರಾಧನೆಗೆ ಅರ್ಹರು ಬೇರಾರೂ ಇಲ್ಲ. ಮರೆಯಾಗಿರುವ ಹಾಗೂ ಪ್ರತ್ಯಕ್ಷವಾಗಿರುವವುಗಳೆಲ್ಲವನ್ನೂ ಅರಿತವನು ಅವನು. ಅವನು ಪರಮ ದಯಾಮಯವನೂ ಹಾಗೂ ಕರುಣಾಮಯಿ. ಅವನು ಅಲ್ಲಾಹ್. ಅವನಲ್ಲದೇ ಆರಾಧನೆಗೆಗೆ ಅರ್ಹರಾದವರು ಬೇರಾರೂ ಇಲ್ಲ. ಅವನು ಮಹಾರಾಜನೂ, ಅತ್ಯಂತ ಪವಿತ್ರ, ಎಲ್ಲಾ ಕೊರತೆಗಳಿಂದ ಮುಕ್ತವಿರುವವನು. ರಕ್ಷಣೆ ನೀಡುವವನು. ಮೇಲ್ವಿಚಾರಕನು, ಅತ್ಯಂತ ಪ್ರಬಲನು, ಬಲವಂತಪಡಿಸುವವನು, ಮಹೋನ್ನತನು. ಅವನೊಂದಿಗೆ ಮಾಡುವ ಎಲ್ಲಾ ಭಾಗೀದಾರಿಕೆಗಳಿಂದ ಅವನು ಪವಿತ್ರನು. ಅವನು ಅಲ್ಲಾಹು, ಸೃಷ್ಟಿಸುವವನು, ಸರ್ವವಸ್ತುಗಳ ಸಂಶೋಧಕನು, ರೂಪವನ್ನು ನೀಡುವವನು. ಅತ್ಯಂತ ಸಂಪೂರ್ಣ ಹಾಗೂ ಸುಂದರ ನಾಮಗಳು ಅವನಿಗೆ ಸೇರುವವು. ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವವುಗಳೆಲ್ಲವೂ ಅವನನ್ನು ಸ್ತುತಿಸುತ್ತವೆ ಮತ್ತು ಅವನು ಅತೀ ಪ್ರಬಲನೂ, ಅತೀ ಯುಕ್ತಿವಂತನೂ ಆಗಿದ್ದಾನೆ."** (137)

ಹೀಗೆ ಈ ಸೂಕ್ತಿಗಳು ಅಲ್ಲಾಹನ ನಾಮಗಳನ್ನು ದೃಢಪಡಿಸುತ್ತವೆ.

2) ಅಲ್ಲಾಹ್‌ನ ನಾಮಗಳನ್ನು ದೃಢೀಕರಿಸುವುದು ಕಡ್ಡಾಯವೆಂಬುದರ ಕುರಿತು ಸಂದೇಶವಾಹಕ(ﷺ)ರ ಸುನ್ನತ್‌ನಲ್ಲಿ ಆಧಾರ:

ಅಬೂಹುರೈರಾ(رضي الله عنه)ರವರಿಂದ ವರದಿ: ಪ್ರವಾದಿ(ﷺ)ಹೇಳಿದರು:

---

**136** ಕುರ್‌ಆನ್ 20:8

**137** ಕುರ್‌ಆನ್ 54:22–24

«إِنَّ لِلَّهِ تِسْعَةً وَتِسْعِينَ إِسْمًا مِائَةً إِلَّا وَاحِدًا مَنْ أَحْصَاهَا دَخَلَ الْجَنَّةَ»

**“ನಿಶ್ಚಯವಾಗಿಯೂ ಅಲ್ಲಾಹನಿಗೆ ತೊಂಬತ್ತೊಂಬತ್ತು ಹೆಸರುಗಳಿವೆ. ನೂರಕ್ಕೆ ಒಂದು ಕಡಿಮೆ. ಯಾರು ಅದನ್ನು ನೆನಪಿಟ್ಟುಕೊಳ್ಳುತ್ತಾನೋ ಮತ್ತು ಅರ್ಥಮಾಡಿಕೊಳ್ಳುತ್ತಾನೋ ಅವನು ಸ್ವರ್ಗಕ್ಕೆ ಪ್ರವೇಶಿಸುತ್ತಾನೆ.”** (138)

ಮತ್ತು ಅಲ್ಲಾಹನ ಹೆಸರುಗಳು ಇಷ್ಟಕ್ಕೆ ಮಾತ್ರ ಸೀಮಿತವಾಗಿಲ್ಲ. ಅಬ್ದುಲ್ಲಾಹ್ ಬಿನ್ ಮಸ್‌ಊದ್(ﷺ) ರವರ ವರದಿಯು ಹೀಗಿದೆ: ಪ್ರವಾದಿ(ﷺ)ಹೇಳಿದರು:

«أَسْأَلُكَ بِكُلِّ اسْمٍ هُوَ لَكَ سَمَّيْتَ بِهِ نَفْسَكَ أَوْ أَنْزَلْتَهُ فِي كِتَابِكَ أَوْ عَلَّمْتَهُ أَحَدًا مِنْ خَلْقِكَ أَوِ اسْتَأْثَرْتَ بِهِ فِي عِلْمِ الْغَيْبِ عِنْدَكَ أَنْ تَجْعَلَ الْقُرْآنَ الْعَظِيمَ رَبِيعَ قَلْبِي»

**“ನಿನಗೆ ನೀನು ಸ್ವತಃ ಇಟ್ಟ ಅಥವಾ ನಿನ್ನ ಗ್ರಂಥದಲ್ಲಿ ಅವತೀರ್ಣಗೊಳಿಸಿದ ಅಥವಾ ನಿನ್ನ ಸೃಷ್ಟಿಗೆ ನೀನು ಕಲಿಸಿದ ಅಥವಾ ನಿನ್ನ ಅದೃಶ್ಯ ಜ್ಞಾನದೊಂದಿಗಿರುವ ಎಲ್ಲಾ ಹೆಸರುಗಳಿಂದಲೂ ನಿನ್ನನ್ನು ನಾನು ಕೇಳುವುದೇನೆಂದರೆ ಪವಿತ್ರ ಕುರ್‌ಆನನ್ನು ನನ್ನ ಹೃದಯದ ವಸಂತವನ್ನಾಗಿ ಮಾಡು.”** (139)

ಅಲ್ಲಾಹನ ಪ್ರತಿಯೊಂದು ಹೆಸರೂ ಕೂಡಾ ಆತನ ಒಂದೊಂದು ಗುಣವಿಶೇಷವನ್ನು ಒಳಗೊಂಡಿದೆ. ಅಲ್‌ಅಲೀಮ್ (ಎಲ್ಲವನ್ನು ಅರಿತವನು) ಜ್ಞಾನವನ್ನು ಸೂಚಿಸಿದರೆ, ಅಲ್ ಹಕೀಮ್ (ಅತೀ ಯುಕ್ತಿವಂತ) ಯುಕ್ತಿಯನ್ನು ಸೂಚಿಸುತ್ತದೆ. ಅಸ್ಸಮೀಅ ಮತ್ತು ಅಲ್ ಬಸೀರ್, ಶ್ರವಣ ಹಾಗೂ ದಷ್ಟಿಯನ್ನು ಸೂಚಿಸುತ್ತದೆ. ಹೀಗೆಯೇ ಎಲ್ಲಾ ಹೆಸರುಗಳೂ ಅಲ್ಲಾಹ್‌ನ ಗುಣವಿಶೇಷಗಳನ್ನು ಸೂಚಿಸುತ್ತದೆ. ಸರ್ವೋನ್ನತನಾದ ಅಲ್ಲಾಹು ಹೇಳುತ್ತಾನೆ:

﴿ قُلْ هُوَ ٱللَّهُ أَحَدٌ ١ ٱللَّهُ ٱلصَّمَدُ ٢ لَمْ يَلِدْ وَلَمْ يُولَدْ ٣ وَلَمْ يَكُن لَّهُۥ كُفُوًا أَحَدٌۢ ٤ ﴾

**“ಹೇಳಿರಿ, ಅವನು ಅಲ್ಲಾಹು, ಏಕನು. ಅಲ್ಲಾಹು ಸ್ವಯಂತೃಪ್ತ, ಸರ್ವವೂ ಅವನನ್ನೇ ಅವಲಂಬಿಸಿರುವಂತಹ ಪಾಲಕನು. ಅವನಿಗೆ ಯಾವುದೇ ಸಂತಾನವಿಲ್ಲ ಮತ್ತು ಅವನು**

**138** ಬುಖಾರಿ ಮತ್ತು ಮುಸ್ಲಿಮ್

**139** (ಇದನ್ನು ಅಹ್ಮದ್ ತನ್ನ ಮುಸ್ನದ್‌ನಲ್ಲಿ ವರದಿ ಮಾಡಿದ್ದು ಇಬ್ನ್‌ಹಿಬ್ಬಾನ್ ಇದನ್ನು ದೃಢೀಕೃತವೆಂದಿದ್ದಾರೆ. ಅಲ್ಲಾಹನ ನಾಮಗಳು ತೊಂಬತ್ತೊಂಬತ್ತು ಮಾತ್ರವೆಂಬ ಸೀಮಿತಿಯನ್ನು ಪ್ರಸ್ತುತ ವರದಿಯು ಅಲ್ಲಗೆಳೆಯುತ್ತದೆ. ಹೀಗಿರುವಾಗ ಪ್ರಸ್ತುತ ಹದೀಸ್‌ನ ತಾತ್ಪರ್ಯವು ಹೀಗಿರಬಹುದು– ಅಲ್ಲಾಹನೇ ಅತ್ಯಂತ ಬಲ್ಲವನು–ಯಾರು ಈ ತೊಂಬತ್ತೊಂಬತ್ತು ನಾಮಗಳನ್ನು ಕಲಿತು ಅವುಗಳ ಮೂಲಕ ಅಲ್ಲಾಹನನ್ನು ಕರೆದನೋ, ಅವುಗಳ ಮೂಲಕ ಅವನ ಇಬಾದತ್ ಮಾಡಿದನೋ ಅಲ್ಲಾಹ್ ಅವನನ್ನು ಸ್ವರ್ಗಕ್ಕೆ ಪ್ರವೇಶಗೊಳಿಸುವನು. ಇದು ಈ ನಾಮಗಳಿಗೆ ಮಾತ್ರ ವಿಶೇಷವಾಗಿರುತ್ತದೆ.)

**ಯಾರಿಂದಲೂ ಜನಿಸಿಲ್ಲ ಮತ್ತು ಅವನಿಗೆ ಸರಿಸಮಾನರು ಅಥವಾ ಹೋಲಿಸಬಲ್ಲಂತಹವರು ಯಾರೂ ಇಲ್ಲ." [140]**

ಅನಸ್(ﷺ)ಹೇಳಿದ್ದಾರೆ: **"ಒಬ್ಬರು ಅನ್ಸಾರೀ ಮಸ್ಜಿದುಲ್ ಖುಬಾದಲ್ಲಿ ಜನರ ನೇತೃತ್ವ ವಹಿಸಿ ನಮಾಝ್ ಮಾಡುತ್ತಿದ್ದರು. ಪ್ರತಿ ಬಾರಿಯೂ ಅವರು ಪ್ರತಿಯೊಂದು ರಕಅತ್‌ನಲ್ಲಿ ಸೂರ ಓದುವಾಗಲೂ, ಅವರು ಹೇಳು: ಅವನು ಅಲ್ಲಾಹ್, ಅವನು ಏಕೈಕನು. (ಸೂರಃ ಇಖ್‌ಲಾಸ್) ಅನ್ನು ಅದರ ಕೊನೆಯವರೆಗೆ ಪಠಿಸಿ ನಂತರ ಬೇರೆ ಸೂರವನ್ನು ಅದ–ರೊಟ್ಟಿಗೆ ಓದುತ್ತಿದ್ದರು. ಇದರಿಂದ ಜನರು ಅವರೊಂದಿಗೆ ಹೀಗೆ ಹೇಳಿದರು, ನೀವು ಒಂದು ಸೂರಃವನ್ನು ಓದಿ ಅದು ಸಾಕಾಗುವುದಿಲ್ಲವೆಂದು ಇನ್ನೊಂದು ಸೂರಃವನ್ನು ಓದುತ್ತೀರಿ. ಒಂದೋ ಅದನ್ನು (ಮಾತ್ರ) ಓದಬೇಕು. ಅಥವಾ ಅದನ್ನು ಬಿಟ್ಟು ಬೇರೆ ಸೂರಃವನ್ನು ಓದಬೇಕು. ಆಗ ಅವರು ಹೇಳಿದರು, ನಾನು ಅದನ್ನು ಬಿಡುವುದಿಲ್ಲ. ನಿಮಗದು ಇಷ್ಟವಿಲ್ಲದಿದ್ದರೆ ನಾನು ನಿಮ್ಮನ್ನು ಬಿಡುತ್ತೇನೆ ಆ ಜನರು ಸಹಾಬಿಯನ್ನು ತಮ್ಮಲ್ಲಿನ ಶ್ರೇಷ್ಠರೆಂದು ಪರಿಗಣಿಸುತ್ತಿದ್ದರು ಮತ್ತು ಅವರಲ್ಲದೇ ಬೇರಾರೂ ತಮ್ಮನ್ನು ನಮಾಝ್‌ನಲ್ಲಿ ಮುನ್ನಡೆಸುವುದು ಅವರಿಗಿಷ್ಟವಿರಲಿಲ್ಲ. ಪ್ರವಾದಿ(ﷺ) ರವರು ಕೇಳಿದರು, ಓ ಇಂಥಿಂಥವರೇ, ಜನರು ಬಿಟ್ಟು ಬಿಡಲು ಹೇಳುವುದನ್ನು ಬಿಟ್ಟು ಬಿಡದಂತೆ ನಿಮ್ಮನ್ನು ತಡೆದುದಾವುದು? ಯಾವುದು ನಿಮ್ಮನ್ನು ಈ ಸೂರಾವನ್ನು ಪ್ರತೀ ರಕಾತ್‌ನಲ್ಲಿ ಓದುವಂತೆ ಮಾಡಿತ್ತು? ಆಗ ಅವರು ಹೇಳಿದರು, ಈ ಸೂರವನ್ನು ನಾನು ಪ್ರೀತಿಸುತ್ತೇನೆ. ಪ್ರವಾದಿ(ﷺ)ಹೇಳಿದರು: ಅದರ ಮೇಲಿನ ನಿಮ್ಮ ಪ್ರೀತಿಯು ನಿಮ್ಮನ್ನು ಸ್ವರ್ಗ ಪ್ರವೇಶೀಸುವಂತೆ ಮಾಡುವುದು." [141]**

ಮತ್ತು ಆಯಿಶಾ(ﷺ) ಹೇಳಿದ್ದಾರೆ: ಪ್ರವಾದಿ(ﷺ)ರವರು ಒಂದು ಸೈನ್ಯಕ್ಕೆ ಒಬ್ಬರನ್ನು ಕಳುಹಿಸಿದರು ಮತ್ತು ಆ ಸಹಾಬಿಯವರು ಆ ಜನರ ನಮಾಝ್‌ಗೆ ನೇತೃತ್ವ ವಹಿಸುತ್ತಿದ್ದರು. ಆ ಸಹಾಬಿ 'ಹೇಳು: ಅವನು ಅಲ್ಲಾಹ್, ಅವನು ಏಕೈಕನು.' ಈ ಸೂರಃದಿಂದಲೇ ಮುಗಿಸುತ್ತಿದ್ದರು. ಹಿಂತಿರುಗಿ ಬಂದಾಗ ಅವರು ಈ ವಿಷಯವನ್ನು ಪ್ರವಾದಿ(ﷺ)ರವರಿಗೆ ತಿಳಿಸಿದರು. ಅವನೇಕೆ ಹೀಗೆ ಮಾಡುತ್ತಾನೆಂದು ಅವನಲ್ಲಿ ಕೇಳಿರಿ. ಎಂದು ತಿಳಿಸಿದರು. ಆಗ ಅವರು ಅವರಲ್ಲಿ ಕೇಳಿದಾಗ ಅವರು ಹೇಳಿದರು. 'ಏಕೆಂದರೆ ಅದು ಪರಮ ಕರುಣಾಮಯಿಯ ಗುಣವಿಶೇಷಣವಾಗಿದೆ ಮತ್ತು ನಾನು ಅದನ್ನು ಓದುವುದನ್ನು ಪ್ರೀತಿಸುತ್ತೇನೆ. ಆಗ ಪ್ರವಾದಿ(ﷺ) ಹೇಳಿದರು. ಸರ್ವೋನ್ನತನಾದ ಅಲ್ಲಾಹು ಕೂಡಾ ಅವರನ್ನು ಪ್ರಿತಿಸುತ್ತಾನೆಂದು ಅವರಿಗೆ ತಿಳಿಸಿರಿ"

ಅಂದರೆ ಅದು ಸರ್ವೋನ್ನತನ ಗುಣ ವಿಶೇಷಣಗಳನ್ನು ಹೊಂದಿದೆ ಎಂದರ್ಥ.

ಪರಮಪಾವನ ಹಾಗೂ ಎಲ್ಲಾ ಕೊರತೆಗಳಿಂದ ಮುಕ್ತನಾದ ಅವನು ತನಗೆ ಒಂದು ಮುಖವಿದೆಯೆಂದು ತಿಳಿಸುತ್ತಾನೆ:

---

**140** ಕುರ್‌ಆನ್ 112:1–4

**141** ಬುಖಾರಿ

﴿ وَيَبْقَىٰ وَجْهُ رَبِّكَ ذُو الْجَلَالِ وَالْإِكْرَامِ ﴿٢٧﴾ ﴾

**"ಮತ್ತು ನಿನ್ನ ಪ್ರಭುವಿನ ಅತ್ಯುಜ್ವಲವಾದ ಮತ್ತು ಅತೀ ಗೌರವ ಪ್ರಧಾನವಾದ ಮುಖವು ಎಂದೆಂದೂ ಉಳಿಯುವುದು."** (142)

ಮತ್ತು ಅವನಿಗೆ ಎರಡು ಕೈಗಳಿವೆ.

ಅಲ್ಲಾಹ್ ಹೇಳಿದನು:

﴿ لِمَا خَلَقْتُ بِيَدَيَّ ﴾

**"ಓ ಇಬ್ಲೀಸ್, ನಾನು ನನ್ನ ಎರಡೂ ಕೈಗಳಿಂದ ಸೃಷ್ಟಿಸಿದವನಿಗೆ ಸಾಷ್ಟಾಂಗ ಮಾಡುವುದರಿಂದ ನಿನ್ನನ್ನು ತಡೆಯುವುದು?"** (143)

﴿ بَلْ يَدَاهُ مَبْسُوطَتَانِ ﴾

**"ಇಲ್ಲ, ಅವನ ಕೈಗಳು ವಿಶಾಲವಾಗಿ ಹರಡಿದೆ."** (144)

ಸರ್ವ ಕುಂದು ಕೊರತೆಗಳಿಂದಲೂ ಮುಕ್ತನಾದ ಅವನು ತಾನು ಸಂತುಷ್ಟನಾಗುತ್ತೇನೆ, ಪ್ರೀತಿಸುತ್ತೇನೆ, ಕೋಪಗೊಳ್ಳುತ್ತೇನೆ ಮತ್ತು ಅಸಂತುಷ್ಟನಾಗುತ್ತೇನೆ ಮಾತ್ರವಲ್ಲ ತಾನು ಸ್ವಯಂ ವಿವರಿಸಿದ ಮತ್ತು ತನ್ನ ಸಂದೇಶವಾಹಕರು(ﷺ) ತನ್ನ ಕುರಿತು ವಿವರಿಸಿದ ಗುಣಗಳನ್ನು ತಾನು ಹೊಂದಿದ್ದೇನೆ ಎಂದು ಅವನು ತಿಳಿಸಿದ್ದಾನೆ.

**ನಾಮಗಳು ಹಾಗೂ ಗುಣವಿಶೇಷತೆಗಳನ್ನು ದೃಢಪಡಿಸಲು ವಿವೇಕದಿಂದ ಆಧಾರ:**

1. ವಿಭಿನ್ನ ರೂಪದಲ್ಲಿರುವ ಸೃಷ್ಟಿಗಳು ಮತ್ತು ಅವುಗಳಿಗೆ ಬೇಕಾದ ಕಾರ್ಯಗಳನ್ನು ನಿರ್ವಹಿಸುವ ವ್ಯವಸ್ಥೆ ಮತ್ತು ಅದರ ಪೂರ್ವಯೋಜಿತ ಮಾರ್ಗದಲ್ಲೇ ಚಲನಗಳು, ಇವುಗಳು ಆತನ ಔನ್ನತ್ಯ, ಪ್ರಬಲತೆ, ಜ್ಞಾನ, ಯುಕ್ತಿ, ಆತನ ನಿರ್ಧಾರ ಹಾಗೂ ಇಚ್ಛೆಗಳನ್ನು ಸೂಚಿಸುತ್ತದೆ.

2. ಉದಾರತೆ ಮತ್ತು ಉಪಕಾರ, ತೊಂದರೆ ನಿವಾರಿಸುವುದು ಮತ್ತು ಸಂಕಷ್ಟಗಳಿಂದ ಮುಕ್ತಿ ನೀಡುವಿಕೆ ಇವುಗಳು ಅವನ ಕಾರುಣ್ಯ, ಅನುಕಂಪಗಳನ್ನು ಸೂಚಿಸುತ್ತದೆ.

3. ತಪ್ಪಿತಸ್ಥನಿಂದ ಪ್ರತೀಕಾರ ಮತ್ತು ಅವನಿಗೆ ಶಿಕ್ಷೆ ಇವುಗಳು ಅಲ್ಲಾಹನು ದ್ವೇಷಿಸುವವನ ಮೇಲಿನ ಆತನ ಕೋಪವನ್ನು ಸೂಚಿಸುತ್ತದೆ.

4. ವಿನಯಶೀಲರನ್ನು ಗೌರವಿಸುವುದು ಮತ್ತು ಅವರನ್ನು ಸ್ಥಿರಪಡಿಸುವುದು ಅವರ ಮೇಲಿನ ಆತನ ಸಂತುಷ್ಟಿ ಹಾಗೂ ಪ್ರೀತಿಯನ್ನು ಸೂಚಿಸುತ್ತದೆ

---

**142** ಕುರ್‌ಆನ್ 55:27

**143** ಕುರ್‌ಆನ್ 38:75

**144** ಕುರ್‌ಆನ್ 5:64

ಎರಡನೆಯದಾಗಿ:

**ಅಲ್ಲಾಹ್‌ನ ನಾಮ ಹಾಗೂ ಗುಣವಿಶೇಷತೆಗಳ ಕುರಿತು ಅಹ್ಲುಸ್ಸುನ್ನ: ವಲ್ ಜಮಾಅತ್‌ನ ಮನ್‌ಹಜ್(ವಿಧಾನ):**

ಸಲಫುಸ್ಸಾಲಿಹ್‌ಗಳ ಮತ್ತು ಅವರನ್ನು ಅನುಸರಿಸುವ, ಅಹ್ಲುಸ್ಸುನ್ನತ್ ವಲ್‌ಜಮಾಅತ್‌ನ ವಿಧಾನವೇನೆಂದರೆ, ಅಲ್ಲಾಹ್‌ನ ನಾಮಗಳು ಹಾಗೂ ಗುಣವಿಶೇಷಗಳು, ಕುರ್‌ಆನ್ ಹಾಗೂ ಸುನ್ನತ್‌ನಲ್ಲಿ ಹೇಳಿದ ರೀತಿಯಲ್ಲೇ ದೃಢೀಕರಿಸುವುದು. ಈ ವಿಧಾನವು ಈ ಕೆಳಗಿನ ತತ್ವಗಳಿಂದ ನಿರ್ಮಿಸಲ್ಪಟ್ಟಿದೆ.

1. ಅಲ್ಲಾಹನ ನಾಮಗಳು ಹಾಗೂ ಗುಣವಿಶೇಷಗಳನ್ನು ಗ್ರಂಥ ಹಾಗೂ ಸುನ್ನತ್‌ಗಳು ಯಾವ ಬಾಹ್ಯ ಅರ್ಥದಲ್ಲಿ ಸೂಚಿಸುತ್ತದೋ ಅದನ್ನು ಪದಗಳು ನೀಡುವ ಅರ್ಥದಲ್ಲೇ ದೃಢೀಕರಿಸುತ್ತಾರೆ. ಅದರ ಬಾಹ್ಯ ಅರ್ಥದಿಂದ ಸರಿಸಿ ವ್ಯಾಖ್ಯಾನಿಸುವುದಿಲ್ಲ. ಅಲ್ಲದೇ ಆ ಶಬ್ದಗಳ ಅರ್ಥಗಳನ್ನು ಮತ್ತು ಅವು ಸೂಚಿಸುವವುಗಳನ್ನು ಅವರು ನಿರಾಕರಿಸುವುದಿಲ್ಲ.

2. ಅವರು ಅಲ್ಲಾಹನ ಗುಣವಿಶೇಷತೆಗಳನ್ನು ಆತನ ಸೃಷ್ಟಿಯೊಂದಿಗೆ ಹೋಲಿಸಿ ಹದ್ದು ಮೀರುವುದಿಲ್ಲ. ಅತೀ ಉನ್ನತನಾದ ಅವನು ಹೇಳುತ್ತಾನೆ.

﴿لَيْسَ كَمِثْلِهِۦ شَيْءٌ ۖ وَهُوَ ٱلسَّمِيعُ ٱلْبَصِيرُ ۝١١﴾

**“ಅವನಂತೆಯೇ ಯಾವುದೂ ಇಲ್ಲ, ಮತ್ತು ಅವನು ಎಲ್ಲವನ್ನೂ ಕೇಳುವವನೂ, ಎಲ್ಲವನ್ನೂ ನೋಡುವವನೂ ಆಗಿರುತ್ತಾನೆ.”** (145)

3. ಅವರು ಅಲ್ಲಾಹನ ನಾಮಗಳು ಹಾಗೂ ಅವನ ಗುಣ ವಿಶೇಷತೆಗಳ ಕುರಿತು ದೃಢೀಕರಣಗಳು ಕುರ್‌ಆನ್ ಹಾಗೂ ಸುನ್ನತ್‌ನಲ್ಲಿ ಹೇಗೆ ಇದೆಯೋ ಅದನ್ನು ದಾಟಿ ಹೋಗುವುದಿಲ್ಲ. ಅವರು ಅಲ್ಲಾಹ್ ಹಾಗೂ ಆತನ ಸಂದೇಶವಾಹಕರು(ﷺ) ಯಾವುದನ್ನು ದೃಢೀಕರಿಸಿದ್ದಾರೋ ಅದನ್ನು ದೃಢೀಕರಿಸುತ್ತಾರೆ ಮತ್ತು ಅಲ್ಲಾಹ್ ಮತ್ತು ಅವನ ಸಂದೇಶವಾಹಕರು(ﷺ) ಯಾವುದನ್ನು ನಿರಾಕರಿಸಿದ್ದಾರೋ ಅದನ್ನು ನಿರಾಕರಿಸುತ್ತಾರೆ. ಅಲ್ಲಾಹ್ ಮತ್ತು ಆತನ ಸಂದೇಶವಾಹಕರು ಯಾವುದರ ಕುರಿತು ಮೌನ ತಾಳಿದ್ದಾರೋ ಅದರ ಕುರಿತು ಅವರೂ ಮೌನ ತಾಳುತ್ತಾರೆ.

4. ಅಲ್ಲಾಹನ ನಾಮಗಳು ಹಾಗೂ ಗುಣವಿಶೇಷಗಳ ಕುರಿತಾದ ಸೂಕ್ತಗಳು ಮುಹ್‌ಕಮ್ (ಸ್ಪಷ್ಟ ಹಾಗೂ ನಿಶ್ಚಿತ ಸೂಕ್ತಗಳು) ಆಗಿವೆಯೆಂದು ಅವರು ವಿಶ್ವಾಸವಿರಿಸುತ್ತಾರೆ. ಅವುಗಳ ಅರ್ಥ ಹಾಗೂ ವಿವರಣೆಗಳು ಸ್ಪಷ್ಟವಾದವುಗಳಾಗಿದ್ದು ಅವುಗಳು ಮುತಶಾಬಿಹಾತ್(ಅಸ್ಪಷ್ಟ)ಗಳಲ್ಲ. ಆದ್ದರಿಂದ ಅವರು ಗುಣವಿಶೇಷತೆಗಳ ಅರ್ಥದಿಂದ ಹಿಂದೆ ಸರಿಯುವವರಲ್ಲ. ತಮ್ಮ ವಿರುದ್ಧ ಸುಳ್ಳಾರೋಪ ಮಾಡುವವರಿಂದ

---

**145** ಕುರ್‌ಆನ್ 42:11

ಹಾಗೂ ತನ್ನ ಮನ್‌ಹಜ್‌ನ ಬಗ್ಗೆ ಅರಿವಿಲ್ಲದ ಈ ಕಾಲದ ಕೆಲವು ಗ್ರಂಥಕರ್ತರು ಹಾಗೂ ಲೇಖಕರಿಂದ ಇವರು ಸುಳ್ಳಿನ ಆರೋಪಕ್ಕೆ ಒಳಗಾಗಿದ್ದಾರೆ.

5. ಅಲ್ಲಾಹನ ಗುಣವಿಶೇಷತೆಗಳು ಅವು ಹೇಗಿವೆ ಎಂಬುದನ್ನು ಸೂಚಿಸುವುದರಿಂದ ಇವರು ತಮ್ಮನ್ನು ತಾವು ತಡೆಯುತ್ತಾರೆ. ಮತ್ತು ಅವರು ಈ ವಿಷಯಗಳಿಗೆ ಹೋಗುವುದಿಲ್ಲ.

ಮೂರನೆಯದಾಗಿ:

ಅಲ್ಲಾಹನ ಕೆಲವು ಅಥವಾ ಎಲ್ಲಾ ನಾಮಗಳು ಹಾಗೂ ಅವನ ಗುಣ ವಿಶೇಷಗಳನ್ನು ನಿರಾಕರಿಸುವವರು ಮೂರು ವಿಭಾಗದವರಾಗಿದ್ದಾರೆ.

ಮೊದಲ ವಿಭಾಗ ಜಹ್ಮಿಯ್ಯ :

ಇವರು ಅಲ್–ಜಹ್ಮ್ ಬಿನ್‌ಸಫ್ವಾನ್‌ನ ಅನುಯಾಯಿಗಳು ಇವರು ಎಲ್ಲಾ ನಾಮಗಳು ಮತ್ತು ಗುಣವಿಶೇಷತೆಗಳನ್ನು ನಿರಾಕರಿಸುತ್ತಾರೆ.

ಎರಡನೆಯ ವಿಭಾಗ ಅಲ್ ಮುಅತಝಿಲ :

ಇವರು ಹಸನ್ ಅಲ್ ಬಸ್ರಿಯವರ ವೃತ್ತಗಳನ್ನು ತೊರೆದ ಬಾಸಿಲ್ ಬಿನ್ ಅತಾನ ಅನುಯಾಯಿಗಳು. ಅವರು ಅಲ್ಲಾಹನ ನಾಮಗಳನ್ನು ದೃಢೀಕರಿಸುತ್ತಾರೆ. ಆದರೆ ಅವುಗಳು ಅರ್ಥಕ್ಕೆ ಯಾವ ಸಂಭಂಧ ಹೊಂದಿರದ ಕೇವಲ ಶಬ್ದಗಳಾಗಿವೆ ಎಂದು ವಿಶ್ವಾಸವಿಟ್ಟಿದ್ದಾರೆ ಮತ್ತು ಅವರು ಅವನ ಗುಣವಿಶೇಷಗಳೆಲ್ಲವನ್ನೂ ನಿರಾಕರಿಸುತ್ತಾರೆ.

ಮೂರನೆಯ ವಿಭಾಗ ಅಶ್‌ಅರಿಯ್ಯ ಮತ್ತು ಮಾತುರೀದಿಯ್ಯಗಳು ಮತ್ತು ಅವರ ಅನುಯಾಯಿಗಳು:

ಇವರು ಅಲ್ಲಾಹನ ನಾಮಗಳನ್ನು ಮತ್ತು ಕೆಲವು ಗುಣ ವಿಶೇಷತೆಗಳನ್ನು ದೃಢಪಡಿಸುತ್ತಾರೆ ಮತ್ತು ಕೆಲವನ್ನು ನಿರಾಕರಿಸುತ್ತಾರೆ.

ಈ ಎಲ್ಲಾ ಮದ್‌ಹಬ್‌ಗಳ ತಪ್ಪು ತಿಳುವಳಿಕೆಯೇನೆಂದರೆ ಅಲ್ಲಾಹನನ್ನು ಆತನ ಸೃಷ್ಟಿಗಳಿಗೆ ಹೋಲಿಸುವುದನ್ನು ತಪ್ಪಿಸುವುದು ತಮ್ಮ ಉದ್ದೇಶ ಎಂಬುವುದು. ಏಕೆಂದರೆ ಕೆಲವು ಸೃಷ್ಟಿಗಳು ಅಲ್ಲಾಹನ ಕೆಲವು ಹೆಸರಿನಿಂದ ಗುರುತಿಸಲ್ಪಡುತ್ತವೆ ಮತ್ತು ಕೆಲವು ಗುಣಗಳಿಂದ ಗುರುತಿಸಲ್ಪಡುತ್ತವೆ. ಅವರೇನು ಹೇಳುವುದೆಂದರೆ ಅವನ ನಾಮಗಳನ್ನು, ಅವನ ಗುಣವಿಶೇಷತೆಗಳನ್ನು ಮತ್ತು ಅವುಗಳ ಅರ್ಥಗಳನ್ನು ಬೇರೆಯವರಿಗೆ ನೀಡುವುದರಿಂದ ನಿಜವಾಗಿಯೂ ಅವನಿಗೆ ಅವುಗಳನ್ನು ಹೋಲಿಸಿದಂತಾಗುತ್ತದೆ. ಅದೇ ಸೃಷ್ಟಿಯನ್ನು ಸೃಷ್ಟಿಕರ್ತನಿಗೆ ಹೋಲಿಸಿದಂತಾಗುತ್ತದೆ ಎಂಬುದು ಇವರ ವಾದ. ಇದನ್ನು ನೋಡುವಾಗ ಅವರು ಈ ಕೆಳಗಿನಲ್ಲಿ ಒಂದನ್ನು ಮಾಡಲೇಬೇಕಾಗುತ್ತದೆ ಎಂದು ವ್ಯಕ್ತವಾಗುತ್ತದೆ.

ಅ) ಒಂದೋ ಅವರು ಅಲ್ಲಾಹನ ನಾಮಗಳನ್ನು ಮತ್ತು ಆತನ ಗುಣವಿಶೇಷಣಗಳನ್ನು ತಿಳಿಸುವ ವಚನಗಳನ್ನು ಅವುಗಳ ನೈಜ ಅರ್ಥಗಳಿಂದ ಸರಿಸಿ ತಾವೀಲ್ (ದುರ್ವ್ಯಾಖ್ಯಾನ) ಮಾಡಬೇಕಾಗುವುದು. ಉದಾಹರಣೆಗೆ ಆತನ ಮುಖವನ್ನು ಅಸ್ತಿತ್ವಕ್ಕೆ ಮತ್ತು ಆತನ ಕೈಯನ್ನು ಔದಾರ್ಯತೆಗೆ ಹೋಲಿಸುವುದು ಇತ್ಯಾದಿ.

ಅಶ್‌ಅರಿಯ್ಯಗಳೆಂದರೆ ಅಬುಲ್ ಹಸನ್ ಅಲ್‌ಅಶ್‌ಅರೀಯವರು ಅಹ್ಲುಸ್ಸುನ್ನತ್ ವಲ್ ಜಮಾಅತ್‌ಗೆ ಮರಳುವುದಕ್ಕಿಂತ ಮುಂಚೆ ಇದ್ದ ಮದ್‌ಹಬ್ ಅನ್ನು ಅನುಸರಿಸುವವರು, ಈ ಜನರು ಅವರ ಮುಂಚಿನ ಮದ್‌ಹಬ್ ಅನ್ನೇ ಅನುಸರಿಸುತ್ತಾರೆ. ಆದ್ದರಿಂದ ಇವರು ಅಶ್‌ಅರೀ (ﷺ) ಅವರ ಜನರು ಎಂದು ಹೇಳುವುದು ತಪ್ಪು.

ಮಾತುರೀದಿಯ್ಯಗಳು ಎಂದರೆ ಅಬುಲ್‌ಮನ್ಸೂರ್ ಅಲ್‌ಮಾತುರೀದಿಯ ಅನುಯಾಯಿಗಳು.

ಈ ವಚನಗಳ ಅರ್ಥವನ್ನು ಅಲ್ಲಾಹನಿಗೇ ತಫ್ವೀದ್ (ವಹಿಸಿ ಬಿಡುವುದು) ಮಾಡುವುದು, ಅವುಗಳ ಬಾಹ್ಯ ಅರ್ಥವು ಸ್ವೀಕಾರಾರ್ಹವಲ್ಲ, ಅವುಗಳ ಉದ್ದೇಶಿತ ಅರ್ಥವು ಅಲ್ಲಾಹನಿಗೇ ತಿಳಿದಿದೆ ಎಂದು ಅವರು ಹೇಳುತ್ತಾರೆ.

ನಾಮಗಳು ಹಾಗೂ ವಿಶೇಷಣೆಗಳನ್ನು ನಿರಾಕರಿಸಿದವರು ಮಕ್ಕಾದ ಕೆಲವು ಅರಬ್ ಮುಶ್ರಿಕರಾಗಿದ್ದರು. ಅವರ ಬಗ್ಗೆ ಅಲ್ಲಾಹು ಹೀಗೆ ಆಯತ್ ಇಳಿಸಿದನು:

﴿ كَذَٰلِكَ أَرۡسَلۡنَٰكَ فِيٓ أُمَّةٖ قَدۡ خَلَتۡ مِن قَبۡلِهَآ أُمَمٞ لِّتَتۡلُوَاْ عَلَيۡهِمُ ٱلَّذِيٓ أَوۡحَيۡنَآ إِلَيۡكَ وَهُمۡ يَكۡفُرُونَ بِٱلرَّحۡمَٰنِۚ ﴾

**“ಹೀಗೆ, ನಾವು ನಿಮ್ಮನ್ನು ಹಿಂದೆ ಬೇರೆ ಸಮುದಾಯಗಳು ಗತಿಸಿಹೋದಂತಹ ಒಂದು ಸಮುದಾಯಕ್ಕೆ ಕಳುಹಿಸಿದ್ದೇವೆ. ನಾವು ನಿಮಗೆ ಅವತೀರ್ಣಗೊಳಿಸಿದ್ದನ್ನು ಅವರಿಗೆ ಓದಿ ಹೇಳಲಿಕ್ಕಾಗಿ, ವಸ್ತುತಃ ಅವರು ಪರಮ ದಯಾಮಯನನ್ನು ನಿಷೇಧಿಸುತ್ತಿದ್ದರು.”** (146)

ಈ ಸೂಕ್ತವು ಅವತೀರ್ಣವಾದುದರ ಕಾರಣವು ಹೀಗಿದೆ. ಕುರೈಶರು ಪ್ರವಾದಿ(ﷺ) ಅರ್ರಹ್‌ಮಾನ್ (ಪರಮ ದಯಾಮಯನು) ಎಂದು ಹೇಳುವುದನ್ನು ಕೇಳುವಾಗ ಅದನ್ನು ನಿರಾಕರಿಸುತ್ತಿದ್ದರು. ಅಲ್ಲಾಹನು ಅವರ ಕುರಿತು ಹೀಗೆ ಅವತೀರ್ಣಗೊಳಿಸಿದನು.

“ವಸ್ತುತಃ ಅವರು ಪರಮ ದಯಾಮಯನನ್ನು ನಿಷೇಧಿಸುತ್ತಿದ್ದರು.” ಇಬ್ನು ಜರೀರ್ ಹೇಳುತ್ತಾರೆ: ಇದು ಹುದೈಬಿಯಾ ಸಂಧಿಯ ಸಮಯದಲ್ಲಿ ಪ್ರವಾದಿ(ﷺ) ಮತ್ತು ಮುಶ್ರಿಕರ ನಡುವಿನ ಒಪ್ಪಂದವನ್ನು ಬರೆಯುವವನು ಅರ್ರಹ್‌ಮಾನ್, ಅರ್ರಹೀಮ್ ಆದ ಅಲ್ಲಾಹನ ನಾಮದಿಂದ, ಎಂದು ಬರೆದಾಗ ಕುರೈಶರು ಹೇಳಿದರು: ಅರ್ರಹ್‌ಮಾನ್ ಎಂದರೆ, ನಮಗೆ ಗೊತ್ತಿಲ್ಲ ಎಂದು ಹೇಳಿದಾಗ ಅವತೀರ್ಣಗೊಂಡಿತು.

**146** ಕುರ್‌ಆನ್ 13:30

ಇಬ್ಬನು ಅಬ್ಬಾಸ್‌ರಿಂದಲೂ ಇಬ್ನ್ ಜರೀರ್ ವರದಿ ಮಾಡುತ್ತಾರೇನೆಂದರೆ ಪ್ರವಾದಿ (ﷺ) ಸುಜೂದ್‌ನಲ್ಲಿ ಯಾ ರಹ್ಮಾನ್ (ಓ ಪರಮದಯಾಮಯ) ಯಾ ರಹೀಮ್( ಓ ಪರಮ ಕರುಣಾಮಯಿ) ಎಂದು ಪ್ರಾರ್ಥಿಸುತ್ತಿದ್ದರು. ಆಗ ಮುಶ್ರಿಕರು ಹೀಗೆಂದರು. "ಇವನು ತಾನು ಒಬ್ಬನನ್ನೇ ಪ್ರಾರ್ಥಿಸುತ್ತೇನೆಂದು ಹೇಳುತ್ತಾನೆ, ಆದರೆ ಇಬ್ಬರೊಂದಿಗೆ ಪ್ರಾರ್ಥಿಸುತ್ತಾನೆ." ಆಗ ಅಲ್ಲಾಹ್ ಹೀಗೆ ಅವತೀರ್ಣಗೊಳಿಸಿದನು:

﴿ قُلِ ٱدْعُوا۟ ٱللَّهَ أَوِ ٱدْعُوا۟ ٱلرَّحْمَٰنَ ۖ أَيًّا مَّا تَدْعُوا۟ فَلَهُ ٱلْأَسْمَآءُ ٱلْحُسْنَىٰ ۚ ﴾

**"ಹೇಳಿರಿ, ಅಲ್ಲಾಹ್ ಎಂದು ಕರೆಯಿರಿ ಅಥವಾ ಅರ್ರಹ್‌ಮಾನ್ ಎಂದು ಕರೆಯಿರಿ. ನೀವು ಯಾವ ಹೆಸರಿನಿಂದ ಕರೆದರೂ ಒಂದೇ) ಅವನಿಗೆ ಅತ್ಯುತ್ತಮ ನಾಮಗಳಿವೆ."** (147)

ಸರ್ವೋನ್ನತನಾದ ಅವನು ಹೇಳುತ್ತಾನೆ:

﴿ وَإِذَا قِيلَ لَهُمُ ٱسْجُدُوا۟ لِلرَّحْمَٰنِ قَالُوا۟ وَمَا ٱلرَّحْمَٰنُ ﴾

**"ಪರಮ ದಯಾಮಯನಿಗೆ ಸಾಷ್ಟಾಂಗವೆರಗಿರಿ ಎಂದು ಅವರೊಡನೆ ಹೇಳಲಾದಾಗ ಅವರು ಹೇಳುತ್ತಾರೆ. ಮತ್ತು ಪರಮ ದಯಾಮಯನು ಯಾರು?"** (148)

ಹೀಗೆ, ಈ ಮುಶ್ರಿಕರು ತಮ್ಮ ನಂತರದ ಜಹ್ಮಿಯ್ಯ, ಮುಅತಝಿಲ, ಅಶ್‌ಅರಿಯ್ಯ ಮತ್ತು ಅಲ್ಲಾಹು ತನಗೆ ಸ್ವಯಂ ತಾನು ದೃಢೀಕರಿಸಿದ ಅಥವಾ ಅವನ ಸಂದೇಶವಾಹಕರಿಂದ (ﷺ) ದೃಢೀಕರಿಸಲ್ಪಟ್ಟ ನಾಮಗಳನ್ನು ಮತ್ತು ಅವನ ಗುಣವಿಶೇಷತೆಗಳನ್ನು ನಿರಾಕರಿಸುವ ಎಲ್ಲಾ ಗುಂಪಿನವರ ಮುಂಗಾಮಿಗಳಾದರು. ಹಿಂಬಾಲಕರಿಗೆ ತಕ್ಕ ಮುಂಗಾಮಿಗಳು..!!!

ಬಹಳ ವಿಭಿನ್ನ ಕೋನಗಳಿಂದ ಇವರ ಮೇಲೆ ಖಂಡನೆಯಿದೆ.

(ಖಂಡನೆ ಒಂದು)

ಅಲ್ಲಾಹ್(ಅವರು ಮಾಡುವ ಎಲ್ಲಾ ಭಾಗೀದಾರಿಕೆಗಳಿಂದ ಮುಕ್ತನಾದ ಪರಮ ಪಾವನನು ಮತ್ತು ಸರ್ವೋನ್ನತನು) ಮತ್ತು ಆತನ ಸಂದೇಶವಾಹಕರು ಹೆಸರುಗಳು ಮತ್ತು ಗುಣವಿಶೇಷತೆಗಳನ್ನು ಅವನಿಗೆ ದೃಢೀಕರಿಸಿದ್ದಾರೆ. ಆದ್ದರಿಂದ ಅವುಗಳೆಲ್ಲವನ್ನು ಅಥವಾ ಅವುಗಳಲ್ಲಿ ಕೆಲವನ್ನು ನಿರಾಕರಿಸುವುದು ಅಲ್ಲಾಹು ಮತ್ತು ಅವನ ಸಂದೇಶವಾಹಕರು (ﷺ) ದೃಢೀಕರಿಸಿದುದನ್ನು ನಿರಾಕರಿಸಿದಂತೆ ಇದು ಅಲ್ಲಾಹ್ ಮತ್ತು ಅವನ ಸಂದೇಶ ವಾಹಕರಿಗೆ(ﷺ) ವಿರುದ್ಧವಾಗಿದೆ.

(ಖಂಡನೆ ಎರಡು)

ಸೃಷ್ಟಿಗಳಲ್ಲಿ ಈ ಗುಣಗಳಿರುವುದು ಅಥವಾ ಕೆಲವು ಸೃಷ್ಟಿಗಳು ಈ ನಾಮಗಳಲ್ಲಿ

---

**147** ಕುರ್‌ಆನ್ 17:110

**148** ಕುರ್‌ಆನ್ 25:60

ಕೆಲವನ್ನು ಹೊಂದಿರುವುದು ಅಲ್ಲಾಹ್ ಮತ್ತು ಅವನ ಸೃಷ್ಟಿಗಳಿಗೆ ಸಮಾನತೆಯನ್ನುಂಟುಮಾಡುವುದಿಲ್ಲ. ಏಕೆಂದರೆ ಅಲ್ಲಾಹನಿಗಿರುವ ಹೆಸರು ಮತ್ತು ಗುಣವಿಶೇಷತೆಗಳು ಅವನಿಗೇ ಪ್ರತ್ಯೇಕವಾಗಿರು ವಂತಹದು ಮತ್ತು ಸೃಷ್ಟಿಗಳು ಹೊಂದಿರುವ ನಾಮಗಳು ಮತ್ತು ವಿಶೇಷತೆಗಳು ಅವರಿಗೇ ಪ್ರತ್ಯೇಕವಾಗಿ ಇರುವಂತಹದು. ಹೇಗೆಂದರೆ ಅಲ್ಲಾಹನ ಅಸ್ತಿತ್ವವು ಸೃಷ್ಟಿಗಳ ಅಸ್ತಿತ್ವದಂತಲ್ಲ. ಅವನು ಹೊಂದಿರುವ ನಾಮಗಳು ಹಾಗೂ ಗುಣಗಳು ಸೃಷ್ಟಿಗಳ ನಾಮಗಳು ಹಾಗೂ ಗುಣಗಳಂತಲ್ಲ. ಹಾಗೆಯೇ ಹೆಸರು ಮತ್ತು ಸಾಮಾನ್ಯ ಅರ್ಥಗಳಲ್ಲಿರುವ ಸಮಾನತೆಯು ನೈಜ ಅರ್ಥದಲ್ಲಿ ಸಮಾನತೆಯನ್ನುಂಟು ಮಾಡುವುದಿಲ್ಲ. ಅಲ್ಲಾಹ್ ಸ್ವತಃ ತನ್ನನ್ನು ಅಲೀಮ್(ಸರ್ವವನ್ನು ಅರಿಯುವವನು) ಮತ್ತು ಹಲೀಮ್(ಸಹಿಷ್ಣು) ಎಂದು ಹೆಸರಿಸಿದ್ದಾನೆ. ಅಂತೆಯೇ ಅವನು ತನ್ನ ದಾಸರನ್ನು ಅಲೀಮ್ ಎಂದು ಹೆಸರಿಸಿದ್ದಾನೆ.

﴿ وَبَشَّرُوهُ بِغُلَٰمٍ عَلِيمٍ ﴾ ٢٨

**“ಮತ್ತು ಅವರು ಅವನಿಗೆ ಒಬ್ಬ ಬುದ್ಧಿವಂತ ಹಾಗೂ ಜ್ಞಾನವುಳ್ಳ (ಅಲೀಮ್) ಮಗನ ಸುವಾರ್ತೆಯನ್ನು ನೀಡಿದರು.”** (149)

ಅಂದರೆ ಇಲ್ಲಿ ಇಸ್‌ಹಾಕ್(عليه السلام)ರನ್ನು ಅಲೀಮ್ ಎಂದು ಕರೆದಿದ್ದಾನೆ.

﴿ فَبَشَّرْنَٰهُ بِغُلَٰمٍ حَلِيمٍ ﴾ ١٠١

**“ಹೀಗೆ ನಾವು ಅವನಿಗೆ ಸಹಿಷ್ಣು(ಹಲೀಮ್)ವಾದ ಒಬ್ಬ ಮಗನ ಸುವಾರ್ತೆಯನ್ನು ನೀಡಿದೆವು.”** (150)

ಅರ್ಥಾತ್ ಇಲ್ಲಿನ ಉದ್ದೇಶ ಇಸ್ಮಾಈಲ್, ಪ್ರಸ್ತುತ ಅಲೀಮ್ ಇನ್ನೊಂದಕ್ಕೆ ಸಮಾನವಲ್ಲ, ಹಾಗೆಯೇ ಒಂದು ಹಲೀಮ್ ಇನ್ನೊಂದರಂತಲ್ಲ. ಅವನು ತನ್ನನ್ನು ಹೀಗೆ ಕರೆದಿದ್ದಾನೆ.

﴿ إِنَّ ٱللَّهَ كَانَ سَمِيعًۢا بَصِيرًا ﴾ ٥٨

**“ನಿಜವಾಗಿಯೂ ಅಲ್ಲಾಹು ಸರ್ವವನ್ನು ಕೇಳುವವನೂ, ಸರ್ವವನ್ನೂ ನೋಡುವವನೂ ಆಗಿರುತ್ತಾನೆ.”** (151)

ಅಂತೆಯೇ, ಅವನು ತನ್ನ ಕೆಲವು ದಾಸರನ್ನು ಸಮೀಅ್, ಬಸೀರ್ ಎಂದು ಕರೆದಿದ್ದಾನೆ.ಅವನು ಹೀಗೆಂದಿದ್ದಾನೆ:

**149** ಕುರ್‌ಆನ್ 51:28
**150** ಕುರ್‌ಆನ್ 37:101
**151** ಕುರ್‌ಆನ್ 4:58

﴿ إِنَّا خَلَقْنَا ٱلْإِنسَٰنَ مِن نُّطْفَةٍ أَمْشَاجٍ نَّبْتَلِيهِ فَجَعَلْنَٰهُ سَمِيعًۢا بَصِيرًا ﴿٢﴾ ﴾

**“ನಿಶ್ಚಯವಾಗಿಯೂ ನಾವು ಮನುಷ್ಯನನ್ನು ಮಿಶ್ರಿತ ಸ್ಖಲಿತ ಬಿಂದುಗಳಿಂದ ಸೃಷ್ಟಿಸಿದ್ದೇವೆ, ಅವನನ್ನು ಪರೀಕ್ಷಿಸಲಿಕ್ಕಾಗಿ, ಹೀಗೆ ನಾವು ಅವನಿಗೆ ಕೇಳುವ ಮತ್ತು ನೋಡುವ ಸಾಮರ್ಥ್ಯವನ್ನು ನೀಡಿದೆವು.”** [152]

ಇಲ್ಲಿ ಒಂದು ಸಮೀಅ್ ಇನ್ನೊಂದರಂತಲ್ಲ ಅಥವಾ ಒಂದು ಬಸೀರ್ ಇನ್ನೊಂದಕ್ಕೆ ಸಮಾನವಲ್ಲ. ಅವನು ತನ್ನನ್ನು ತಾನು ಅರ್ರವೂಫ್ (ಅತೀ ಉದಾರಿ) ಮತ್ತು ಅರ್ರಹೀಮ್ (ಪರಮ ಕರುಣಾಮಯಿ) ಎಂದು ಕರೆದಿದ್ದಾನೆ. ಅವನು ಹೀಗೆ ಹೇಳಿದ್ದಾನೆ:

﴿ إِنَّ ٱللَّهَ بِٱلنَّاسِ لَرَءُوفٌ رَّحِيمٌ ﴿٦٥﴾ ﴾

**“ನಿಶ್ಚಯವಾಗಿಯೂ ಮನುಕುಲದ ಬಗ್ಗೆ ಅಲ್ಲಾಹ್ ಬಹಳ ಉದಾರಿಯೂ (ಅರ್ರವೂಫ್) ಮತ್ತು ಬಹಳ ಕರುಣಾಯಯಿಯೂ (ಅರ್ರಹೀಮ್) ಆಗಿರುತ್ತಾನೆ.”** [153]

ಇನ್ನು ಅವನು ತನ್ನ ಕೆಲವು ದಾಸರನ್ನು ರವೂಫ್ ಮತ್ತು ರಹೀಮ್ ಎಂದು ಕರೆದಿದ್ದಾನೆ:

﴿ لَقَدْ جَآءَكُمْ رَسُولٌ مِّنْ أَنفُسِكُمْ عَزِيزٌ عَلَيْهِ مَا عَنِتُّمْ حَرِيصٌ عَلَيْكُم بِٱلْمُؤْمِنِينَ رَءُوفٌ رَّحِيمٌ ﴿١٢٨﴾ ﴾

**“ನಿಜವಾಗಿಯೂ, ನಿಮ್ಮ ನಡುವಿನಿಂದ ನಿಮಗೆ ಒಬ್ಬರು ಸಂದೇಶವಾಹಕರು ಬಂದಿದ್ದಾರೆ. ನಿಮಗೆ ನೋವಾಗುವುದು ಅಥವಾ ಕಷ್ಟವಾಗುವುದು ಅವರಿಗೆ ತುಂಬ ದುಃಖವನ್ನುಂಟು ಮಾಡುತ್ತದೆ. ಅವರು ನಿಮ್ಮ ಬಗ್ಗೆ ಅತ್ಯಾಸಕ್ತಿಯುಳ್ಳವರು, ವಿಶ್ವಾಸಿಗಳ ಬಗ್ಗೆ ಅನುಕಂಪವುಳ್ಳವರು, ಉದಾರರೂ (ರಊಫ್) ಮತ್ತು ಕರುಣಾಮಯಿಯೂ (ರಹೀಮ್) ಆಗಿದ್ದಾರೆ.”** [154]

ಇಲ್ಲಿ ಒಂದು ರವೂಫ್ ಇನ್ನೊಂದರಂತಲ್ಲ ಮತ್ತು ಒಂದು ರಹೀಮ್ ಇನ್ನೊಂದಕ್ಕೆ ಸಮಾನವಲ್ಲ. ಹಾಗೆಯೇ ಅವನು ತನ್ನನ್ನು ಗುಣವಿಶೇಷಣಗಳೊಂದಿಗೆ ವಿವರಿಸಿದ್ದಾನೆ ಮತ್ತು ಹಾಗೆಯೇ ಅದೇ ಗುಣ ವಿಶೇಷತೆಗಳಿಂದ ತನ್ನ ದಾಸರನ್ನೂ ಗುರುತಿಸಿದ್ದಾನೆ. ಅವನ ವಚನವು ಹೀಗಿದೆ:

﴿ وَلَا يُحِيطُونَ بِشَيْءٍ مِّنْ عِلْمِهِۦٓ ﴾

152 ಕುರ್‌ಆನ್ 76:2
153 ಕುರ್‌ಆನ್ 22:65
154 ಕುರ್‌ಆನ್ 9:128

**“ಮತ್ತು ಅವನ ಜ್ಞಾನದಿಂದ ಅವರು ಏನನ್ನೂ ಒಳಗೊಳ್ಳಲಾರರು.”** (155)

ಹೀಗೆ ಅವನು ಸ್ವತಃ ತನ್ನನ್ನು ತಾನು ಜ್ಞಾನವುಳ್ಳವನೆಂದು ಮತ್ತು ತನ್ನ ದಾಸರನ್ನೂ ಜ್ಞಾನವುಳ್ಳವರೆಂದು ವಿವರಿಸುತ್ತಾನೆ, ಅವನು ಹೀಗೆ ಹೇಳುತ್ತಾನೆ:

﴿ وَمَآ أُوتِيتُم مِّنَ ٱلْعِلْمِ إِلَّا قَلِيلًا ﴿٨٥﴾ ﴾

**“ಮತ್ತು ಜ್ಞಾನದಿಂದ ನೀವು ಸ್ವಲ್ಪವನ್ನಷ್ಟೇ ನೀಡಲ್ಪಟ್ಟಿರುತ್ತೀರಿ.”** (156)

ಮತ್ತು ಅವನು ಹೇಳಿದ್ದಾನೆ:

﴿ وَفَوْقَ كُلِّ ذِى عِلْمٍ عَلِيمٌ ﴿٧٦﴾ ﴾

**“ನಾವು ನಮಗಿಷ್ಟ ಬಂದವರ ದರ್ಜೆಯನ್ನು ಏರಿಸುತ್ತೇವೆ. ಎಲ್ಲಾ ಜ್ಞಾನಿಗಳಿಗಿಂತ ಮೇಲೆ ಓರ್ವ ಸರ್ವಜ್ಞಾನಿಯಿದ್ದಾನೆ.”** (157)

ಮತ್ತು ಅವನು ಹೇಳಿದನು:

﴿ وَقَالَ ٱلَّذِينَ أُوتُوا۟ ٱلْعِلْمَ ﴾

**“ಆದರೆ ಜ್ಞಾನ ನೀಡಲ್ಪಟ್ಟವರು ಹೇಳಿದರು.”** (158)

ಅವನು ತಾನು ಶಕ್ತಿಯನ್ನು ಹೊಂದಿರುವವನೆಂದು ತನ್ನನ್ನು ವಿವರಿಸುತ್ತಾನೆ:

﴿ إِنَّ ٱللَّهَ لَقَوِىٌّ عَزِيزٌ ﴿٤٠﴾ ﴾

**“ನಿಜವಾಗಿಯೂ ಅಲ್ಲಾಹು ಅತ್ಯಂತ ಬಲಿಷ್ಠನೂ ಅತೀ ಪ್ರಬಲನೂ ಆಗಿರುತ್ತಾನೆ.”** (159)

﴿ إِنَّ ٱللَّهَ هُوَ ٱلرَّزَّاقُ ذُو ٱلْقُوَّةِ ٱلْمَتِينُ ﴿٥٨﴾ ﴾

**“ನಿಶ್ಚಯವಾಗಿಯೂ ಅಲ್ಲಾಹನು ಆಹಾರ ನೀಡುವವನು, ಶಕ್ತಿವಂತನು ಮತ್ತು ಅತೀ ಬಲಿಷ್ಠನು.”** (160)

ತನ್ನ ದಾಸರನ್ನು ಶಕ್ತಿಯಿರುವವರಾಗಿ ಅವನು ವಿವರಿಸಿದ್ದಾನೆ. ಅವನು ಹೇಳಿದನು:

﴿ ۞ ٱللَّهُ ٱلَّذِى خَلَقَكُم مِّن ضَعْفٍ ثُمَّ جَعَلَ مِنۢ بَعْدِ ضَعْفٍ قُوَّةً ثُمَّ جَعَلَ مِنۢ

**155** ಕುರ್‌ಆನ್ 2:255
**156** ಕುರ್‌ಆನ್ 17:85
**157** ಕುರ್‌ಆನ್ 12:76
**158** ಕುರ್‌ಆನ್ 28:80
**159** ಕುರ್‌ಆನ್ 22:40
**160** ಕುರ್‌ಆನ್ 51:58

﴿بَعْدِ قُوَّةٍ ضَعْفًا وَشَيْبَةً﴾

**“ಅಲ್ಲಾಹ್ ನಿಮ್ಮನ್ನು ದುರ್ಬಲ (ಸ್ಥಿತಿ) ಯಿಂದ ಸೃಷ್ಟಿಸಿದನು. ನಂತರ ದೌರ್ಬಲ್ಯದ ಬಳಿಕ ಅವನು ಶಕ್ತಿ ನೀಡಿದನು ಮತ್ತು ಶಕ್ತಿಯ ನಂತರ (ನಿಮಗೆ) ಅವನು ದುರ್ಬಲತೆಯನ್ನು ಮತ್ತು ವೃದ್ಧಾಪ್ಯವನ್ನು ನೀಡಿದನು.”** (161) ಇತ್ಯಾದಿ.

ಅಲ್ಲಾಹ್‌ನ ನಾಮಗಳೂ ಹಾಗೂ ಅವನ ಗುಣವಿಶೇಷಗಳು ಪ್ರತ್ಯೇಕವಾಗಿ ಅವನಿಗೇ ಇರುವಂತಹದು ಮತ್ತು ಅವನಿಗೇ ಸರಿಹೊಂದುತ್ತವೆ ಮತ್ತು ಸೃಷ್ಟಿಗಳ ನಾಮಗಳೂ ಹಾಗೂ ಅವುಗಳ ಗುಣವಿಶೇಷಗಳು ಅವುಗಳಿಗೇ ಪ್ರತ್ಯೇಕವಾಗಿರುವಂತಹದು ಮತ್ತು ಅವುಗಳಿಗೇ ಸರಿ ಹೊಂದುತ್ತವೆ ಎಂಬುವುದು ತಿಳಿದ ವಿಷಯ. ಹೆಸರು ಮತ್ತು ಅದರ ಅರ್ಥವು ಒಂದೇ ಇರುವುದರಿಂದ ವಾಸ್ತವಿಕವಾಗಿ ಅವುಗಳು ಒಂದೇ ಇರಬೇಕೆಂದಿಲ್ಲ. ಇದು ಹೆಸರಿಸಲ್ಪಟ್ಟವರು ಮತ್ತು ವಿಶೇಷತೆ ನೀಡಲ್ಪಟ್ಟವರ ನಡುವೆ ವ್ಯತ್ಯಾಸವಿರುವುದರಿಂದಾಗಿದೆ. ಇದು ಸ್ಪಷ್ಟವಾದ ವಿಷಯ. ಸರ್ವಸ್ತುತಿಗಳೂ ಅಲ್ಲಾಹನಿಗೇ.

(ಖಂಡನೆ ಮೂರು)

ಸರ್ವ ಸಂಪೂರ್ಣವಾದ ಗುಣವಿಶೇಷಗಳನ್ನು ಹೊಂದಿಲ್ಲದ ಒಬ್ಬನು ಆರಾಧ್ಯನಾಗಲು ದೇವನಾಗಲು ಅರ್ಹನಲ್ಲ. ಇಬ್ರಾಹೀಮ್ (عليه السلام) ತನ್ನ ತಂದೆಯೊಂದಿಗೆ ಹೀಗೆಂದಿದ್ದರು:

﴿لِمَ تَعْبُدُ مَا لَا يَسْمَعُ وَلَا يُبْصِرُ﴾

**“ಕೇಳಲಾಗದ್ದನ್ನು ನೋಡಲಾಗದ್ದನ್ನು ನೀವೇಕೆ ಆರಾಧಿಸುತ್ತೀರಿ?”** (162)

ಸರ್ವೋನ್ನತನಾದ ಅಲ್ಲಾಹು, ಕರುವನ್ನು ಆರಾಧಿಸಿದವರ ಖಂಡನೆಯಾಗಿ ಹೀಗೆ ಹೇಳಿದನು:

﴿أَلَمْ يَرَوْا أَنَّهُ لَا يُكَلِّمُهُمْ وَلَا يَهْدِيهِمْ سَبِيلًا﴾

**“ಅವರು ನೋಡಲಿಲ್ಲವೇ? ಅದು ಅವರೊಂದಿಗೆ ಮಾತನಾಡುವುದೂ ಇಲ್ಲ ಅಥವಾ ದಾರಿಯನ್ನು ತೋರಿಸುವುದೂ ಇಲ್ಲ?”** (163)

(ಖಂಡನೆ ನಾಲ್ಕು)

ಗುಣವಿಶೇಷಗಳನ್ನು ದೃಢೀಕರಿಸುವುದು ಸಂಪೂರ್ಣತೆಯ ಲಕ್ಷಣ ಮತ್ತು ಅದನ್ನು ನಿರಾಕರಿಸುವುದು ಲೋಪದ ಲಕ್ಷಣವಾಗಿದೆ. ಯಾವುದೇ ಗುಣ ವಿಶೇಷಗಳಿಲ್ಲದವನು ಅವನು ಒಂದೋ ದುರ್ಬಲ ಅಥವಾ ಕೊರತೆಯುಳ್ಳವನು ಆಗಿರುತ್ತಾನೆ. ಅಲ್ಲಾಹನು

---

**161** ಕುರ್‌ಆನ್ 30:54

**162** ಕುರ್‌ಆನ್ 19:42

**163** ಕುರ್‌ಆನ್ 7:148

ಇವುಗಳಿಂದ ಮುಕ್ತನು.

(ಖಂಡನೆ ಐದು)

ಗುಣವಿಶೇಷಗಳ ದುರ್ವ್ಯಾಖ್ಯಾನಗಳಿಗೆ ಯಾವುದೇ ಆಧಾರವಿಲ್ಲ. ಇದು ಪೊಳ್ಳುತನವಾಗಿದೆ ಮತ್ತು ಅಂತಹ ದುರ್ವ್ಯಾಖ್ಯಾನಗಳನ್ನು ಹೊಂದಿರುವುದರ ತಾತ್ಪರ್ಯವು ಅಲ್ಲಾಹನು ಕುರ್‌ಆನಿನಲ್ಲಿ ನಮಗರ್ಥವಾಗದ ರೂಪದಲ್ಲಿ ನಮ್ಮೊಂದಿಗೆ ಸಂಭಾಷಿಸಿದ್ದಾನೆಂದು ತಿಳಿಯಬೇಕಾಗುತ್ತದೆ. ಅಲ್ಲಾಹು ಅವನ ಹೆಸರುಗಳನ್ನು ಉಪಯೋಗಿಸಿ ಪ್ರಾರ್ಥಿಸಲು ನಮಗೆ ಆದೇಶಿಸುತ್ತಾನೆ. ಹೀಗಿರುವಾಗ, ನಮಗೆ ಅರ್ಥವಾಗದ ಒಂದು ಹೆಸರಿನಿಂದ ಆತನನ್ನು ಪ್ರಾರ್ಥಿಸುವುದಾದರೂ ಹೇಗೆ? ಹಾಗೆಯೇ ಅವನು ನಮಗೆ ಸಂಪೂರ್ಣ ಕುರ್‌ಆನ್‌ಅನ್ನು ಚಿಂತಿಸಲು ಹೇಳುತ್ತಾನೆ. ಹಾಗಿರುವಾಗ ನಮಗೆ ಅರ್ಥವಾಗದಂತಹವುಗಳ ಕುರಿತು ನಾವು ಚಿಂತಿಸುವುದಾದರೂ ಹೇಗೆ?

ಇವುಗಳಿಂದ ನಮಗೆ ಮನದಟ್ಟಾಗುವುದೇನೆಂದರೆ, ಅಲ್ಲಾಹನ ನಾಮಗಳು ಹಾಗೂ ಆತನ ಗುಣವಿಶೇಷಗಳನ್ನು ಆತನಿಗೆ ಅನುಯೋಜ್ಯ ರೀತಿಯಲ್ಲಿ ದೃಢೀಕರಿಸುವುದು ಮತ್ತು ಸೃಷ್ಟಿಗೆ ಹೋಲಿಸುವುದನ್ನು ತಿರಸ್ಕರಿಸುವುದು ಅವನಿವಾರ್ಯವಾಗಿದೆ. ಅತ್ಯುನ್ನತನಾದ ಅಲ್ಲಾಹು ಹೇಳುತ್ತಾನೆ:

﴿ لَيْسَ كَمِثْلِهِۦ شَىْءٌ ۖ وَهُوَ ٱلسَّمِيعُ ٱلْبَصِيرُ ﴿١١﴾ ﴾

**“ಅವನಂತೆ ಯಾವುದೂ ಇಲ್ಲ ಮತ್ತು ಅವನು ಸರ್ವವನ್ನು ಕೇಳುವವನು ಮತ್ತು ಎಲ್ಲವನ್ನು ನೋಡುವವನು.”** (164)

ಹೀಗೆ ಅವನು ತಾನು ಯಾವುದಕ್ಕೂ ಸಾಮ್ಯವಾಗಿರುವುದನ್ನು ನಿರಾಕರಿಸುತ್ತಾನೆ ಮತ್ತು ಅವನು ತನಗೆ ಶ್ರವಣ ಮತ್ತು ದೃಷ್ಟಿಯಿದೆಯೆಂದು ದೃಢೀಕರಿಸುತ್ತಾನೆ. ವಿಶೇಷಣಗಳ ದೃಢೀಕರಣವವು ಸಾಮ್ಯತೆಯನ್ನು ಸೂಚಿಸುವುದಿಲ್ಲ. ಅಲ್ಲದೇ ಬೇರೆ ಯಾವುದಕ್ಕೂ ಅಲ್ಲಾಹನ ಹೋಲಿಕೆಯನ್ನು ನಿರಾಕರಿಸುತ್ತಾ, ಗುಣವಿಶೇಷಗಳನ್ನು ದೃಢೀಕರಿಸುವುದರ ಅನಿವಾರ್ಯತೆಯನ್ನು ಇದು ಸೂಚಿಸುತ್ತದೆ. ನಿರಾಕರಣೆ ಹಾಗೂ ದೃಢೀಕರಣದ ಕುರಿತು ಅಹ್ಲುಸ್ಸುನ್ನವಲ್‌ಜಮಾಅಃದ ವಿಶ್ವಾಸದ ತಾತ್ಪರ್ಯವೇನೆಂದು ಯಾವುದೇ ರೂಪಕಲ್ಪನೆಯಿಲ್ಲದೆ, ಸೃಷ್ಠಿ ಗುಣ ಆರೋಪದ ನಿರಾಕರಣೆಯೊಂದಿಗೆ ವಿಶೇಷ ಗುಣಗಳನ್ನು ನಿರಾಕರಿಸದೆಯೇ ಅವುಗಳನ್ನು ಒಪ್ಪಿಕೊಳ್ಳುವುದಾಗಿದೆ.

**164** ಕುರ್‌ಆನ್ 42:11

## ಭಾಗ–3

**ಶಿರ್ಕ್ ಮತ್ತು ಮನುಷ್ಯ ಜೀವನದಲ್ಲಿ ಪ್ರತ್ಯಕ್ಷಗೊಂಡ ವ್ಯತಿಚಲನೆಯ ವಿವರಣೆ ಹಾಗೂ ಕುಫ್ರ್, ನಾಸ್ತಿಕತೆ, ಶಿರ್ಕ್ ಹಾಗೂ ನಿಫಾಕ್(ಕಪಟ ವಿಶ್ವಾಸ) ಮುಂತಾದವುಗಳ ಮೇಲೆ ಚೆಲ್ಲಲಾದ ಚಾರಿತ್ರಿಕ ಬೆಳಕು ಮತ್ತು ಈ ವಿಭಾಗದಲ್ಲಿ ಈ ಕೆಳಗಿನ ಅಧ್ಯಾಯಗಳು ಒಳಗೊಳ್ಳುತ್ತವೆ.**

**ಅಧ್ಯಾಯ 1**

**ಮನುಷ್ಯ ಜೀವನದಲ್ಲಿ ಪ್ರಕಟವಾದ ವ್ಯತಿಚಲನೆ**

**ಅಧ್ಯಾಯ 2**

**ಶಿರ್ಕ್ : ಅದರ ಪರಿಚಯ ಹಾಗೂ ಅದರ ವಿಧಗಳು**

**ಅಧ್ಯಾಯ 3**

**ಕುಫ್ರ್ : ಅದರ ಪರಿಚಯ ಹಾಗೂ ಅದರ ವಿಧಗಳು**

**ಅಧ್ಯಾಯ 4**

**ಕಪಟ ವಿಶ್ವಾಸ ಅದರ ಪರಿಚಯ ಮತ್ತು ವಿಧಗಳು**

**ಅಧ್ಯಾಯ 5**

**ಜಾಹಿಲಿಯ್ಯ (ಮೌಢ್ಯ) ಕರ್ಮಭ್ರಷ್ಟತೆ, ಮಾರ್ಗಭ್ರಷ್ಟತೆ, ಧರ್ಮತ್ಯಾಗ ಮುಂತಾದವುಗಳ ವಾಸ್ತವಿಕತೆ ಇವುಗಳ ವಿಧಗಳು ಮತ್ತು ನಿಯಮಗಳು**

ಅಧ್ಯಾಯ–1

# ಮನುಷ್ಯನ ಜೀವನದಲ್ಲಿ ಪ್ರಕಟವಾದ ವ್ಯತಿಚಲನೆ

ಅಲ್ಲಾಹು ಸರ್ವಸೃಷ್ಟಿಗಳನ್ನೂ ತನ್ನ ಆರಾಧನೆಗಾಗಿ ಸೃಷ್ಟಿಸಿರುವನು ಮತ್ತು ಅವುಗಳಿಗೆ ಆಹಾರವನ್ನು ಒದಗಿಸಿರುವನು. ಅವುಗಳೆಲ್ಲಾ ತನ್ನನ್ನು ಆರಾಧನೆ ಮಾಡಲೆಂದಾಗಿದೆ. ಸರ್ವೋನ್ನತನಾದ ಅಲ್ಲಾಹು ಕುರ್‌ಆನ್‌ನಲ್ಲಿ ಹೀಗೆಂದಿದ್ದಾನೆ:

﴿ وَمَا خَلَقْتُ ٱلْجِنَّ وَٱلْإِنسَ إِلَّا لِيَعْبُدُونِ ﴿٥٦﴾ مَآ أُرِيدُ مِنْهُم مِّن رِّزْقٍ وَمَآ أُرِيدُ أَن يُطْعِمُونِ ﴿٥٧﴾ إِنَّ ٱللَّهَ هُوَ ٱلرَّزَّاقُ ذُو ٱلْقُوَّةِ ٱلْمَتِينُ ﴿٥٨﴾ ﴾

**“ನಾನು ಜಿನ್ನ್ ಹಾಗೂ ಮನುಷ್ಯರನ್ನು ನನ್ನನ್ನು ಮಾತ್ರ ಆರಾಧಿಸಲಿಕ್ಕಾಗಿ ಸೃಷ್ಟಿಸಿರುವೆನು. ನನಗೆ ಅವರು ಉಣಿಸಬೇಕೆಂದು ನಾನು ಬಯಸುವುದಿಲ್ಲ. ನಿಜವಾಗಿಯೂ ಅಲ್ಲಾಹನೇ ಅನ್ನಾಧಾರ ನೀಡುವವನು. ಶಕ್ತಿಯ ಒಡೆಯನು ಮತ್ತು ಮಹಾ ಬಲಿಶಾಲಿಯಾಗಿರುವನು.”** **(165)**

ಮನುಷ್ಯನನ್ನು ಅವನ ಸಹಜ ಪ್ರಕೃತಿಯಲ್ಲೇ ಬಿಟ್ಟು ಬಿಟ್ಟರೆ ಅವನು ಖಂಡಿತವಾಗಿಯೂ ಅಲ್ಲಾಹನ ಉಲೂಹಿಯ್ಯ(ಆರಾಧನೆಯಲ್ಲಿಏಕತ್ವ)ವನ್ನು ಒಪ್ಪಿಕೊಳ್ಳುವನು. ಅವನನ್ನು ಬಹಳವಾಗಿ ಪ್ರೀತಿಸುವವನು, ಅವನನ್ನು ಆರಾಧಿಸುವವನು ಮತ್ತು ಯಾವುದನ್ನು ಕೂಡಾ ಅವನಿಗೆ ಭಾಗೀದಾರರನ್ನಾಗಿ ಮಾಡಲಾರನು. ಆದರೆ ಮನುಷ್ಯ ಹಾಗೂ ಜಿನ್ನ್ ವರ್ಗದ ಶೈತಾನರುಗಳು ಪಿತೂರಿ ನಡೆಸುವಾಗ ಮತ್ತು ತಮ್ಮ ಮೋಸದ ಮಾತುಗಳಿಂದ ತಮ್ಮೆಡೆಗೆ ಸೆಳೆಯುವಾಗ ಅವನ ಒಳಗೆ ತಳಮಳವುಂಟಾಗುತ್ತದೆ. ಮತ್ತು ಹೀಗೆ ಅವರು/ ಶೈತಾನರು ಅವನನ್ನು ಸಿರಾತೆ ಮುಸ್ತಕೀಮ್ ನಿಂದ ದೂರಮಾಡಿ ತಪ್ಪು ದಾರಿಯಲ್ಲಿಕೊಂಡೊಯ್ಯುತ್ತಾರೆ. ನಿಜವಾಗಿ ತೌಹೀದ್ ಮನುಷ್ಯನ ಪ್ರಕೃತಿಯಲ್ಲೇ ಒಳಗೊಂಡಿದೆ ಮತ್ತು ಶಿರ್ಕ್ ಒಂದು ಕೃತಕ ಹಾಗೂ ಅಕ್ರಮ ಪ್ರವೇಶ ಮಾಡಿದಂತಹ ವಿಷಯವಾಗಿದೆ. ಆದ್ದರಿಂದ ಮನುಷ್ಯನನ್ನು ಅವನಷ್ಟಕ್ಕೆ ಬಿಟ್ಟು ಬಿಟ್ಟರೆ ಅವನು ಖಂಡಿತವಾಗಿಯೂ ತನ್ನ ಫಿತ್ರತ್‌ನೆಡೆಗೆ ಮರಳುವನು ಅಲ್ಲಾಹು ಹೇಳುತ್ತಾನೆ.

ಓ ಮುಹಮ್ಮದ್(ﷺ)

﴿ فَأَقِمْ وَجْهَكَ لِلدِّينِ حَنِيفًا فِطْرَتَ ٱللَّهِ ٱلَّتِى فَطَرَ ٱلنَّاسَ عَلَيْهَا لَا تَبْدِيلَ لِخَلْقِ ٱللَّهِ ﴾

**“ಆದ್ದರಿಂದ ನೀವು ನಿಮ್ಮ ಮುಖವನ್ನು ನೇರ ಮಾರ್ಗಸ್ಥರಾಗಿ ದೀನ್ (ಏಕೈಕ**

**165** ಕುರ್‌ಆನ್ 51:56–58

**ಅಲ್ಲಾಹನ ಶುಧ್ಧ ಆರಾಧನೆ)ಗೆ ತಿರುಗಿಸಿ ಮುನ್ನಡೆಯಿರಿ (ಮತ್ತು) ಅಲ್ಲಾಹನ ಫಿತ್ರತ್ (ಇಸ್ಲಾಮೀ ಏಕದೇವಾರಾಧನೆ) ಅದರಲ್ಲಿ ಅವನು ಮನುಷ್ಯನನ್ನು ಸೃಷ್ಟಿಸಿರುವನು (ಅದನ್ನು ಸ್ವೀಕರಿಸಿಕೊಳ್ಳಿ) ಖಲ್ಕುಲ್ಲಾಹ್ (ಅಲ್ಲಾಹನ ಧರ್ಮ– ಇಸ್ಲಾಮೀ ಏಕದೇವರಾಧನೆ)ನಲ್ಲಿ ಯಾವುದೇ ಬದಲಾವಣೆ ಆಗಲಾರದು."** (166)

ಪ್ರವಾದಿ ಮುಹಮ್ಮದ್(ﷺ) ಹೇಳಿರುವರು:

«كُلُّ مَوْلُودٍ يُولَدُ عَلَى الْفِطْرَةِ فَأَبَوَاهُ يُهَوِّدَانِهِ وَيُنَصِّرَانِهِ وَيُمَجِّسَانِهِ»

**"ಪ್ರತಿಯೊಂದು ಹುಟ್ಟುವ ಮಗುವೂ ಅದರ ಫಿತ್ರತ್ ನಲ್ಲಿ ಹುಟ್ಟುತ್ತದೆ. ನಂತರ ಅದರ ತಂದೆ ತಾಯಂದಿರು ಅದನ್ನು ಯಹೂದಿ ಅಥವಾ ಕ್ರೈಸ್ತ ಅಥವಾ ಮಜೂಸಿಯನ್ನಾಗಿ ಮಾಡುತ್ತಾರೆ."** (167)

ಅದ್ದರಿಂದ, ಆದಮ್‌ರ ಸಂತತಿಯ ಸ್ವರೂಪವು ತೌಹೀದ್ ಆಗಿದೆ ಮತ್ತು ಆದಮ್ (عليه السلام)ರ ನಂತರ ಬಹಳ ವರ್ಷಗಳವರೆಗೆ ಇಸ್ಲಾಮ್ ಮಾತ್ರ ಅವರ ದೀನ್ ಆಗಿತ್ತು.

ಸರ್ವೋನ್ನತನಾದ ಪ್ರಭುವಿನ ವಚನವು ಹೀಗಿದೆ.

﴿ كَانَ ٱلنَّاسُ أُمَّةً وَٰحِدَةً فَبَعَثَ ٱللَّهُ ٱلنَّبِيِّـۧنَ مُبَشِّرِينَ وَمُنذِرِينَ ﴾

**"(ಮೊದಲು ಎಲ್ಲಾ) ಜನರ ಧರ್ಮವು ಇದೇ ಆಗಿತ್ತು. (ಆದರೆ ಅವರು ಪರಸ್ಪರ ಭಿನ್ನಾಭಿಪ್ರಾಯ ಮಾಡತೊಡಗಿದರು) ಅದ್ದರಿಂದ ಅಲ್ಲಾಹನು (ಅವರ ಕಡೆಗೆ) ಸುವಾರ್ತೆ ನೀಡುವಂತಹ ಹಾಗೂ ಎಚ್ಚರಿಕೆ ನೀಡುವಂತಹ ಪ್ರವಾದಿಗಳನ್ನು ಕಳುಹಿಸಿದನು."** (168)

ಸರಿಯಾದ ವಿಶ್ವಾಸದ ಮಧ್ಯೆ ಶಿರ್ಕ್ ಹಾಗೂ ವ್ಯತಿಚಲನೆಯು ಮೊದಲ ಬಾರಿಗೆ ನೂಹ್(عليه السلام)ರ ಸಮುದಾಯದಲ್ಲಿ ಕಾಣಿಸಿಕೊಂಡಿತು. ಆದ್ದರಿಂದ ನೂಹ್ (عليه السلام) ಮೊದಲ ಸಂದೇಶವಾಹಕರು ಎಂದು ಕರೆಯಲ್ಪಟ್ಟರು.

﴿ ۞ إِنَّآ أَوۡحَيۡنَآ إِلَيۡكَ كَمَآ أَوۡحَيۡنَآ إِلَىٰ نُوحٖ وَٱلنَّبِيِّـۧنَ مِنۢ بَعۡدِهِۦۚ ﴾

**"(ಓ ಮುಹಮ್ಮದ್) ನಿಜವಾಗಿಯೂ ನಾವು ನೂಹ್ ಹಾಗೂ ಅವರ ನಂತರದ ಪ್ರವಾದಿಗಳಿಗೆ ಕಳಿಸಿದಂತೆಯೇ ನಿಮ್ಮ ಬಳಿಗೂ ದಿವ್ಯ ಸಂದೇಶವನ್ನು ಕಳುಹಿಸಿದ್ದೇವೆ."** (169)

ಇಬ್ನ್ ಅಬ್ಬಾಸ್(رضي الله عنه) ಹೇಳುತ್ತಾರೆ: ನೂಹ್(عليه السلام) ಹಾಗೂ ಆದಮ್(عليه السلام)ರ

---

**166** ಕುರ್‌ಆನ್ 30:30

**167** ಎರಡು ಸ್ವಹೀಹ್ ಗ್ರಂಥಗಳಾದ ಬುಖಾರಿ ಮತ್ತು ಮುಸ್ಲಿಮ್‌ನಲ್ಲಿರುವ ವರದಿ. ಉಲ್ಲೇಖ: ಅಬೂ ಹುರೈರಾ–ರ

**168** ಕುರ್‌ಆನ್ 2:213

**169** ಕುರ್‌ಆನ್ 4:163

ಮಧ್ಯೆ ಹತ್ತು ತಲೆಮಾರುಗಳು ಕಳೆದಿದ್ದವು. ಅವರೆಲ್ಲರೂ ಇಸ್ಲಾಮ್‌ನಲ್ಲಿದ್ದರು. ಇಬ್ನುಲ್ ಖಯ್ಯಿಮ್ ಹೇಳುತ್ತಾರೆ: ಈ ಮಾತು ಸರಿಯಾಗಿದೆ. [170] ಸೂರಃ ಬಕರದ ಸೂಕ್ತಿಯು ಉಬಯ್ಯ್ ಇಬ್ನು ಕಅಬ್‌ರ ಓದಿನಲ್ಲಿ ಹೀಗೆ ಬಂದಿದೆ. ಸೂರ ಯೂನುಸ್‌ನ ಸೂಕ್ತಿಯು ಇದನ್ನು ಸಾಬೀತುಪಡಿಸುತ್ತದೆ.

﴿ وَمَا كَانَ ٱلنَّاسُ إِلَّآ أُمَّةً وَٰحِدَةً فَٱخْتَلَفُوا۟ ﴾

**“ಮತ್ತು (ಎಲ್ಲಾ) ಜನರು (ಮೊದಲು ಒಂದೇ ಸಮುದಾಯದಲ್ಲಿ (ಅಂದರೆ ಒಂದೇ ಧರ್ಮದಲ್ಲಿ ಏಕದೇವಾರಾಧನೆಯಲ್ಲಿ) ಇದ್ದರು. ನಂತರ ಅವರು ಬೇರೆ ಬೇರೆಯಾದರು.”** [171] ಅವರು ಇದರಿಂದ ಸಾಬೀತುಪಡಿಸುವುದೇನೆಂದರೆ, ಪ್ರವಾದಿಗಳನ್ನು ಕಳುಹಿಸಿರುವ ಕಾರಣವು ಸರಿಯಾದ ಧರ್ಮದ ವಿಚಾರದಲ್ಲಿದ್ದಂತಹ ಜನರ ಭಿನ್ನಾಭಿಪ್ರಾಯವಾಗಿತ್ತು. ಹೇಗೆಂದರೆ ಅರಬ್ ದೇಶದ ಜನರು ಇಬ್ರಾಹೀಮ್(عليه السلام) ಧರ್ಮದಲ್ಲಿ ನೆಲೆನಿಂತಿದ್ದರು. ಎಲ್ಲಿಯವರೆಗೆಂದರೆ ಅಮ್ರ್ ಬಿನ್ ಲಹೀ ಅಲ್‌ಖುಝಾಈ ಎಂಬ ಹೆಸರಿನ ವ್ಯಕ್ತಿಯೋರ್ವ ಬಂದು ಇಬ್ರಾಹೀಮ್(عليه السلام)ರ ಧರ್ಮವನ್ನು ಬದಲಿಸಿದನು, ಇಡೀ ಅರಬ್ ದೇಶದಲ್ಲಿ ಪ್ರತ್ಯೇಕವಾಗಿ ಹಿಜಾಝ್‌ನಲ್ಲಿ ಮೂರ್ತಿಗಳನ್ನು ತಂದು ತುಂಬಿಸಿದನು. ಜನರು ಅಲ್ಲಾಹನನ್ನು ಬಿಟ್ಟು ಆ ಮೂರ್ತಿಗಳನ್ನು ಪೂಜಿಸುವುದರಲ್ಲಿ ನಿರತರಾದರು. ಆ ಪವಿತ್ರ ನಗರ ಹಾಗೂ ಅದರ ಸುತ್ತಲೆಲ್ಲ ಶಿರ್ಕ್ ಹಬ್ಬಿತು. ಎಲ್ಲಿಯವರೆಗೆಂದರೆ ಸರ್ವೋನ್ನತನಾದ ಅಲ್ಲಾಹು ತನ್ನ ಕೊನೆಯ ಪ್ರವಾದಿ ಮುಹಮ್ಮದ್(ﷺ) ರನ್ನು ಕಳುಹಿಸಿದನು. ಅವರು(ﷺ) ಜನರನ್ನು ತೌಹೀದ್‌ನೆಡೆಗೆ ಕರೆದರು. ಇಬ್ರಾಹೀಮ್‌ರ ಧರ್ಮವನ್ನು ಅನುಸರಿಸುವಂತೆ ಆಹ್ವಾನಿಸಿದರು. ಅಲ್ಲಾಹನ ಮಾರ್ಗದಲ್ಲಿ ಜಿಹಾದ್ ಮಾಡಿದರು. ಎಷ್ಟರವರೆಗೆಂದರೆ ತೌಹೀದ್‌ನ ಅಖೀದವು ಜನರ ಜೀವನದಲ್ಲಿ ಮರಳಿ ಬಂತು. ಇಬ್ರಾಹೀಮರ ಧರ್ಮವು ಪುನರುಜ್ಜೀವನ ಪಡೆಯಿತು. ವಿಗ್ರಹಗಳು ಒಡೆಯಲ್ಪಟ್ಟವು. ಅಲ್ಲಾಹು ಈ ಅನಕ್ಷರರಾದ ಪ್ರವಾದಿಯ ಮೂಲಕ ತನ್ನ ಧರ್ಮವನ್ನು ಸಂಪೂರ್ಣಗೊಳಿಸಿದನು ಮತ್ತು ಜಗತ್ತಿನ ಎಲ್ಲಾ ಕಡೆಗಳಲ್ಲೂ ತನ್ನ ಅನುಗ್ರಹವನ್ನು ಪೂರ್ತಿಗೊಳಿಸಿದನು ಮತ್ತು ಇದೇ ತೌಹೀದ್‌ನ ಮಾರ್ಗದಲ್ಲಿ ಮತ್ತು ಸಂದೇಶದಲ್ಲಿ ಮೊದಲ ಆ ಸಮುದಾಯ ಹಾಗೂ ಅವರ ನಂತರದ ಸಮುದಾಯ ನೆಲೆಸಿದವು. ನಂತರ ಕೊನೆಯ ಯುಗಗಳಲ್ಲಿ ಪುನಃ ಜಾಹಿಲಿಯ್ಯ ವ್ಯಾಪಿಸತೊಡಗಿತು. ವಿವಿಧ ಸಿದ್ಧಾಂತಗಳ ಹಿಂಬಾಲಕರು ಇದರಲ್ಲಿ ಸೇರಿಕೊಂಡರು. ನಂತದರ ದುರ್ಮಾರ್ಗದೆಡೆಗೆ ಕರೆಯುವವರ ಕೆಡುಕುಗಳು ಮತ್ತು ಔಲಿಯಾ ಮತ್ತು ಸಜ್ಜನರ ಗೋರಿಗಳ ಕಾರಣದಿಂದ ಶಿರ್ಕ್ ಮತ್ತು ಬಿದ್‌ಅತ್‌ಗಳು ಸಮುದಾಯದ ಬಹಳ ಜನರಲ್ಲಿ ಸರ್ವೆಸಾಮಾನ್ಯವಾದವು. ಅಲ್ಲಾಹನ ಬದಲಾಗಿ ಪ್ರತಿಮೆಗಳು ಆರಾಧನೆಗೆ ಆರಿಸಲ್ಪಟ್ಟವು. ಅವರ ಸನ್ನಿಧಿಯಲ್ಲಿ ಹರಕೆ, ಪ್ರಾರ್ಥನೆ, ಸಹಾಯ ಯಾಚನೆ, ಕಾಣಿಕೆ,

**170** ಇಗಾಸತು ಲ್ಲಹ್ಫಾನ್ 2/102

**171** ಕುರ್‌ಆನ್ 10:19

ಇವುಗಳು ಪ್ರಾರಂಭವಾದವು. ನಂತರ ಇಂತಹ ಶಿರ್ಕ್ ಮಾಡುವವರು ತಮ್ಮ ಶಿರ್ಕ್ ಅನ್ನು ಈ ರೀತಿ ಸಮರ್ಥಿಸಿಕೊಳ್ಳತೊಡಗಿದರು. ಏನೆಂದರೆ 'ನಾವು ಆ ಮಹಾನ್ ವ್ಯಕ್ತಿಗಳ ಆರಾಧನೆ ಮಾಡುವುದಿಲ್ಲ ಬದಲಾಗಿ ಇದು ಅವರ ತವಸ್ಸುಲ್ ಮತ್ತು ಅವರ ಮೇಲಿನ ಪ್ರೀತಿಯ ಪ್ರಕಟಣೆಯಾಗಿದೆ'. ಹೀಗೆ ದುರ್ವ್ಯಾಖ್ಯಾನ ಮಾಡುವಾಗ ಅವರು ಒಂದು ವಿಷಯವನ್ನು ಮರೆತು ಬಿಟ್ಟರು. ಅದೇನೆಂದರೆ ಮುಶ್ರಿಕರೂ ಕೂಡಾ ತಮ್ಮ ಶಿರ್ಕ್ ಅನ್ನು ಸಮರ್ಥಿಸಲು ಹೀಗೆ ಆಧಾರ ನೀಡುತ್ತಿದ್ದರು. ಅವರು ಹೀಗೆನ್ನುತ್ತಿದ್ದರು:

﴿ مَا نَعْبُدُهُمْ إِلَّا لِيُقَرِّبُونَآ إِلَى ٱللَّهِ زُلْفَىٰٓ ﴾

**"(ಅವರು ಹೇಳುತ್ತಾರೆ) ನಾವು ಅವರನ್ನು ಆರಾಧಿಸುವುದು ಕೇವಲ ಅವರು ನಮ್ಮನ್ನು ಅಲ್ಲಾಹನ ಸಮೀಪಸ್ಥರನ್ನಾಗಿ ಮಾಡಲೆಂದಾಗಿದೆ."** (172)

ಇಂತಹ ಶಿರ್ಕ್‌ನ ಆಚಾರಗಳ ಹೊರತಾಗಿಯೂ ಕೂಡ, ಪ್ರತಿಯೊಂದು ಕಾಲದಲ್ಲಿ ಇದ್ದ ಇಂತಹ ಜನರು ಸಾಮಾನ್ಯವಾಗಿ ಬಹುತೇಕ ಮುಶ್ರಿಕರ ತೌಹೀದ್ ರುಬೂಬಿಯ್ಯದಲ್ಲಿ ವಿಶ್ವಾಸವಿಟ್ಟಿದ್ದರು. ಅವರ ಶಿರ್ಕ್ ಇಬಾದತ್‌ನ ವಿಷಯದಲ್ಲಿ ಮಾತ್ರವಾಗಿತ್ತು.

﴿ وَمَا يُؤْمِنُ أَكْثَرُهُم بِٱللَّهِ إِلَّا وَهُم مُّشْرِكُونَ ۝١٠٦ ﴾

**"ಮತ್ತು ಅಧಿಕಾಂಶ ಜನರು ಅಲ್ಲಾಹನಲ್ಲಿ (ಬೇರೆಯವರನ್ನು ಅವನೊಂದಿಗೆ ಭಾಗೀದಾರರಾಗಿಸದೇ ವಿಶ್ವಾಸವಿರಿಸುವುದಿಲ್ಲ."** (173)

ಮನುಷ್ಯರಲ್ಲಿ ರಬ್ಬ್ (ಸೃಷ್ಟಿಕರ್ತ ಪರಿಪಾಲಕ)ನ ಅಸ್ತಿತ್ವವನ್ನು ನಿರಾಕರಿಸಿದವರು ಬಹಳ ಕಡಿಮೆ. ಫಿರ್‌ಔನ್, ಧರ್ಮಭ್ರಷ್ಟರು, ಭೌತಿಕವಾದಿಗಳು ಮತ್ತು ಈಗಿನ ಕಾಲದ ಕಮ್ಯೂನಿಸ್ಟ್‌ಗಳು ಆದರೂ ಕೂಡಾ ಅವರ ನಿರಾಕರಣೆಗೆ ಕಾರಣವು ಅವರ ಹಠಮಾರಿತನವಾಗಿದೆ. ನಿಜವಾಗಿ, ಅವರ ಅಂತರಂಗದಲ್ಲಿ ಅವರು ಸರ್ವಲೋಕ ಪರಿಪಾಲಕನ ಅಸ್ತಿತ್ವವನ್ನು ಒಪ್ಪಿಕೊಂಡಿರುತ್ತಾರೆ. ಇಂತಹ ಜನರ ಕುರಿತು ಸರ್ವೋನ್ನತನಾದ ಅಲ್ಲಾಹು ಹೀಗೆನ್ನುತ್ತಾನೆ.

﴿ وَجَحَدُوا۟ بِهَا وَٱسْتَيْقَنَتْهَآ أَنفُسُهُمْ ظُلْمًا وَعُلُوًّا ﴾

**"ಮತ್ತು ಅವರು ಅನ್ಯಾಯ ಹಾಗೂ ಅಹಂಭಾವದಲ್ಲಿ ಬಂದು ಈ ವಚನಗಳನ್ನು ನಿರಾಕರಿಸಿದರು. ನಿಜವಾಗಿ ಅವರ ಮನಸ್ಸುಗಳೂ ಅವುಗಳನ್ನು ಒಪ್ಪಿಕೊಂಡಿದ್ದವು."** (174)

ಈ ಸೃಷ್ಟಿಗಳಿಗೆ ಯಾರಾದರೊಬ್ಬ ಸೃಷ್ಟಿಕರ್ತನಿದ್ದೇ ಇದ್ದಾನೆ ಮತ್ತು ಪ್ರತಿಯೊಂದು ಅಸ್ತಿತ್ವವಿರುವವುಗಳಿಗೆ ಮೂಜಿದ್ (ಅಸ್ತಿತ್ವ ನೀಡುವವನೂ) ಇದ್ದಾನೆ ಮತ್ತು ಈ

**172** ಕುರ್‌ಆನ್ 39:3

**173** ಕುರ್‌ಆನ್ 12:106

**174** ಕುರ್‌ಆನ್ 27:14

ಎಲ್ಲಾ ಸೃಷ್ಟಿಗಳ ಕ್ರಮಬದ್ಧವಾದ ನಡೆಯನ್ನು ಓರ್ವ ಯುಕ್ತಿವಂತ ಹಾಗೂ ಮಹಾ ಸಾಮರ್ಥ್ಯವುಳ್ಳವನು ಮತ್ತು ಸಕಲ ವಸ್ತುಗಳ ಜ್ಞಾನಿಯೋರ್ವ ನಡೆಸುತ್ತಿದ್ದಾನೆ ಎಂಬುದಾಗಿ ಈ ಮೇಲೆ ಹೇಳಿದಂತಹ ಜನರ ಮನಸ್ಸು ಸಾಕ್ಷ್ಯವಹಿಸುತ್ತದೆ. ಕೇವಲ ಬುದ್ಧಿಗೆ ಮಂಕು ಕವಿದ ಅಥವಾ ಹಠಮಾರಿತನದಿಂದಾಗಿ ತನ್ನ ಬುದ್ಧಿಗೆ ತಕ್ಕಂತೆ ಕೆಲಸ ಮಾಡುವುದನ್ನು ಬಿಟ್ಟು ಬಿಟ್ಟವನು, ಯಾವುದೇ ವಿಷಯದಲ್ಲೂ ತನಗೂ ಏನೇನೂ ಸಂಬಂಧವಿಲ್ಲದಂತೇ ತನ್ನ ಮನಸ್ಸನ್ನು ಬುದ್ಧಿಯಿಲ್ಲದಂತೆ ಮಾಡಿದವನು ಮಾತ್ರ ಇದನ್ನು ನಿರಾಕರಿಸಲು ಸಾಧ್ಯ.

## ಅಧ್ಯಾಯ–2

## ಶಿರ್ಕ್: ಅದರ ಪರಿಚಯ ಮತ್ತು ಅದರ ವಿಧಗಳು

ಶಿರ್ಕ್‌ನ ಪರಿಚಯ: ಶಿರ್ಕ್ ಎಂದರೆ ಅಲ್ಲಾಹ್‌ನ ರುಬೂಬಿಯ್ಯತ್ ಉಲೂಹಿಯ್ಯತ್‌ನಲ್ಲಿ ಇತರರನ್ನು ಪಾಲುದಾರರಾಗಿಸುವುದಾಗಿದೆ. ಬಹುತೇಕ ಶಿರ್ಕ್ ಅಲ್ಲಾಹನ ಉಲೂಹಿಯ್ಯತ್ ನಲ್ಲಾಗಿದೆ. ಶಿರ್ಕ್ ನಲ್ಲಿ ಅವನ ದಾಸನು ಅಲ್ಲಾಹನೊಂದಿಗೆ ಬೇರೆಯವರನ್ನು ಸೇರಿಸಿ ಯಾಚಿಸುವುದು, ಬಲಿಯರ್ಪಿಸುವುದು, ಹರಕೆ ಸಂದಾಯಯ ಭಯ, ನಿರೀಕ್ಷೆ ಅತೀ ಪ್ರೀತಿ ಮತ್ತು ಅತೀ ಗೌರವ ಮುಂತಾದ ವಿವಿಧ ಆರಾಧನೆಗಳನ್ನು ಅವರಿಗೆ ಅರ್ಪಿಸುವುದು ಅದರಲ್ಲಿ ಸೇರುತ್ತವೆ.

ಈ ಕೆಳಗಿನವುಗಳ ಪ್ರಕಾರ ಶಿರ್ಕ್ ಅತ್ಯಂತ ದೊಡ್ಡ ಪಾಪವಾಗಿದೆ.

1)ದೈವಿಕ ಗುಣ ಮತ್ತು ವಿಶೇಷತೆಗಳಲ್ಲಿ ಸೃಷ್ಟಿಗಳನ್ನು ಮತ್ತು ಸೃಷ್ಟಿಕರ್ತನನ್ನು ಸಮಾನರನ್ನಾಗಿ ಮಾಡುವುದು. ಏಕೆಂದರೆ ಸೃಷ್ಟಿಗಳನ್ನು ಮತ್ತು ಸೃಷಿಕರ್ತನನ್ನು ಒಂದೇ ರೀತಿ ಮಾಡುವುದಾಗಿದೆ. ಇದು ಬಹಳ ದೊಡ್ಡ ಪಾಪವಾಗಿದೆ. ಅಲ್ಲಾಹನ ವಚನವು ಹೀಗಿದೆ.

﴿إِنَّ ٱلشِّرْكَ لَظُلْمٌ عَظِيمٌ ١٣﴾

**“ನಿಜವಾಗಿಯೂ ಶಿರ್ಕ್ ಅತೀ ದೊಡ್ಡ ಅಕ್ರಮವಾಗಿದೆ.”** (175)

ಅಕ್ರಮವೆಂದರೆ ಒಂದು ವಸ್ತುವನ್ನು ಅದರ ನೈಜ ಸ್ಥಾನದಿಂದ ತೆಗೆದು ಬೇರೆ ಜಾಗದಲ್ಲಿಡುವುದು. ಆದ್ದರಿಂದ ಅಲ್ಲಾಹನ ಹೊರತು ಇತರರನ್ನು ಆರಾಧಿಸುವವನು ನಿಸ್ಸಂಶಯವಾಗಿಯೂ ತನ್ನ ಇಬಾದತ್ ಅನ್ನು ಅದರ ನಿಜವಾದ ಸ್ಥಾನದಿಂದ ತೆಗೆದು ಬೇರೆ ಜಾಗದಲ್ಲಿ ಉಪಯೋಗಿಸಿದನು ಮತ್ತು ಅದಕ್ಕೆ ಅರ್ಹರಲ್ಲದವರ ಕಡೆಗೆ ಅದನ್ನು

**175** ಕುರ್‌ಆನ್ 31:13

ತಿರುಗಿಸಿದನು. ಇದು ಅತೀ ದೊಡ್ಡ ಅಕ್ರಮವಾಗಿದೆ.

2) ಸರ್ವೋನ್ನತನಾದ ಅಲ್ಲಾಹು ಸ್ಪಷ್ಟವಾಗಿ ಹೇಳಿದ್ದೇನೆಂದರೆ, ಶಿರ್ಕ್‌ನ ಬಳಿಕ ಯಾರು ಪಶ್ಚಾತ್ತಾಪ ಪಡುವುದಿಲ್ಲವೋ ಅವನಿಗೆ ಕ್ಷಮೆಯಿಲ್ಲ. ಅಲ್ಲಾಹನ ವಚನವು ಇಂತಿದೆ.

﴿ إِنَّ ٱللَّهَ لَا يَغۡفِرُ أَن يُشۡرَكَ بِهِۦ وَيَغۡفِرُ مَا دُونَ ذَٰلِكَ لِمَن يَشَآءُۚ ﴾

**“ನಿಶ್ಚಯವಾಗಿಯೂ ಅಲ್ಲಾಹು ತನ್ನೊಂದಿಗೆ ಭಾಗೀದಾರರನ್ನಾಗಿ ಮಾಡಿದವನನ್ನು ಕ್ಷಮಿ ಸುವುದಿಲ್ಲ. ಅದರ ಹೊರತು ಇತರ ಪಾಪಗಳನ್ನು ತಾನಿಚ್ಛಿಸಿದವರಿಗೆ ಕ್ಷಮಿಸುವನು.”** (176)

3) ಮುಶ್ರಿಕರಿಗೆ ಸ್ವರ್ಗವು ನಿಷಿದ್ಧ ಮಾಡಿದ್ದೇನೆಂದೂ ಅಲ್ಲಾಹು ತಿಳಿಸಿದ್ದಾನೆ ಮತ್ತು ಆ ಮುಶ್ರಿಕ್ ಶಾಶ್ವತನಾಗಿ ನರಕದಲ್ಲೇ ಬಿದ್ದುಕೊಂಡಿರುವನು. ಅಲ್ಲಾಹು ಹೇಳುತ್ತಾನೆ.

﴿ إِنَّهُۥ مَن يُشۡرِكۡ بِٱللَّهِ فَقَدۡ حَرَّمَ ٱللَّهُ عَلَيۡهِ ٱلۡجَنَّةَ وَمَأۡوَىٰهُ ٱلنَّارُۖ وَمَا لِلظَّٰلِمِينَ مِنۡ أَنصَارٖ ٧٢ ﴾

**“(ತಿಳಿದುಕೊಳ್ಳಿ) ಯಾರು ಅಲ್ಲಾಹನ ಜೊತೆಗೆ ಭಾಗೀದಾರರನ್ನಾಗಿ ಮಾಡುತ್ತಾನೋ ಅಲ್ಲಾಹು ಅವನಿಗೆ ಸ್ವರ್ಗವನ್ನು ನಿಷಿದ್ಧಗೊಳಿಸಿರುವನು ಮತ್ತು ಅವನ ನೆಲೆಯು ನರಕವಾಗಿದೆ ಮತ್ತು ಅಕ್ರಮಿಗಳಿಗೆ ಯಾವುದೇ ಸಹಾಯಕರಿಲ್ಲ.”** (177)

4) ಶಿರ್ಕ್ ಮನುಷ್ಯನ ಹಿಂದಿನ ಎಲ್ಲಾ ಸತ್ಕರ್ಮಗಳನ್ನು ನಾಶ ಪಡಿಸುತ್ತದೆ. ಅಲ್ಲಾಹು ಹೇಳುತ್ತಾನೆ.

﴿ وَلَوۡ أَشۡرَكُواْ لَحَبِطَ عَنۡهُم مَّا كَانُواْ يَعۡمَلُونَ ٨٨ ﴾

**“ಮತ್ತು ಒಂದು ವೇಳೆ ಅವರು ಶಿರ್ಕ್ ಮಾಡುತ್ತಿದ್ದರೆ ಅವರ ಎಲ್ಲಾ ಕರ್ಮಗಳು ವ್ಯರ್ಥವಾಗಿ ಹೋಗುತ್ತಿತ್ತು.”** (178)

ಮತ್ತೊಂದು ಕಡೆಯಲ್ಲಿ ಹೀಗೆಂದಿರುವನು:

﴿ وَلَقَدۡ أُوحِيَ إِلَيۡكَ وَإِلَى ٱلَّذِينَ مِن قَبۡلِكَ لَئِنۡ أَشۡرَكۡتَ لَيَحۡبَطَنَّ عَمَلُكَ وَلَتَكُونَنَّ مِنَ ٱلۡخَٰسِرِينَ ٦٥ ﴾

176 ಕುರ್‌ಆನ್ 4:48
177 ಕುರ್‌ಆನ್ 5:72
178 ಕುರ್‌ಆನ್ 6:88

**"ಮತ್ತು (ಓ ಮುಹಮ್ಮದ್) ನಿಮ್ಮ ಬಳಿಗೆ ಮತ್ತು ನಿಮಗಿಂತ ಹಿಂದೆ ಗತಿಸಿದ ಅವರ (ಪ್ರವಾದಿಗಳ) ಬಳಿಕ ಇದೇ ಸಂದೇಶವು ಕಳುಹಿಸಲಾಗಿದೆ ಒಂದು ವೇಳೆ ನೀವು ಶಿರ್ಕ್ ಮಾಡಿದರೆ ನಿಮ್ಮ ಕರ್ಮಗಳು ವ್ಯರ್ಥವಾಗುವುದು ಮತ್ತು ನೀವು ನಷ್ಟಕ್ಕೊಳಗಾದವರಲ್ಲಾಗುವಿರಿ."** (179)

5) ಮುಶ್ರಿಕನ ರಕ್ತ, ಸೊತ್ತು ಹಲಾಲ್ ಆಗಿದೆ. ಅಲ್ಲಾಹು ಹೇಳಿದ್ದಾನೆ:

﴿ فَٱقْتُلُوا۟ ٱلْمُشْرِكِينَ حَيْثُ وَجَدتُّمُوهُمْ وَخُذُوهُمْ وَٱحْصُرُوهُمْ وَٱقْعُدُوا۟ لَهُمْ كُلَّ مَرْصَدٍ ۚ ﴾

**"ಮುಶ್ರಿಕರನ್ನು ಸಿಕ್ಕಲ್ಲಿ ವಧಿಸಿರಿ ಮತ್ತು ಹಿಡಿಯಿರಿ ಮತ್ತು ಸುತ್ತುವರಿಯಿರಿ ಮತ್ತು ಹೊಂಚು ಹಾಕುವ ಸ್ಥಳಗಳಲ್ಲಿ ಅವರನ್ನು ಕಾಯುತ್ತಾ ಕುಳಿತುಕೊಳ್ಳಿರಿ."** (180)

ಮತ್ತು ಪ್ರವಾದಿ(ﷺ)ರು ಹೀಗೆಂದಿರುವರು:

«أُمِرْتُ أَنْ أُقَاتِلَ حَتَّى يَقُولُوا لَا إِلَهَ إِلَّا اللَّهُ فَإِذَا قَالُوهَا عَصَمُوا مِنِّي دِمَاءَهُمْ وَأَمْوَالَهُمْ إِلَّا بِحَقِّهَا»

**"ಜನರು ಲಾ ಇಲಾಹ ಇಲ್ಲಲ್ಲಾಹ್ ಅನ್ನು ಹೇಳದವರೆಗೆ ಅವರ ವಿರುದ್ಧ ಹೋರಾಡಲು ನನಗೆ ಆದೇಶಿಸಲಾಗಿದೆ. ಒಂದು ವೇಳೆ ಅವರು ಹೇಳಿದರೆ, ಅವರು ನನ್ನಿಂದ ತಮ್ಮ ರಕ್ತ, ಸೊತ್ತಿನ ರಕ್ಷಣೆ ಪಡೆಯುವರು. ಆದರೆ ಅವುಗಳ ಹಕ್ಕುಗಳನ್ನು ಹೊರತುಪಡಿಸಿ."** (181)

6) ಶಿರ್ಕ್ ಅತೀ ದೊಡ್ಡ ಪಾಪವಾಗಿದೆ. ಪ್ರವಾದಿ(ﷺ) ಹೇಳಿದ್ದಾರೆ:

«أَلَا أُنَبِّئُكُمْ بِأَكْبَرِ الْكَبَائِرِ» قُلْنَا بَلَى يَا رَسُولَ اللَّهِ قَالَ : «الْإِشْرَاكُ بِاللَّهِ وَعُقُوقُ الْوَالِدَيْنِ ....»

**"ನಾನು ನಿಮಗೆ ಬಹಳ ದೊಡ್ಡ ಪಾಪಗಳ ಬಗ್ಗೆ ತಿಳಿಸಲೇ? ನಾವು ಹೇಳಿದೆವು: ಓಅಲ್ಲಾಹನ ಸಂದೇಶವಾಹಕರೇ, ಖಂಡಿತ ತಿಳಿಸಿರಿ. ಅವರು(ﷺ)ಹೇಳಿದರು: ಅಲ್ಲಾಹನ ಜೊತೆ ಭಾಗೀದಾರಿಕೆ ಮಾಡುವುದು ಮತ್ತು ತಂದೆ ತಾಯಂದಿರೊಂದಿಗೆ ಅವಿಧೇಯತೆ ತೋರುವುದು....."** (182)

ಅಲ್ಲಾಮ ಇಬ್ನುಲ್ ಖಯ್ಯಿಮ್(ರಹ್) ಬರೆಯುತ್ತಾರೆ: ಅಲ್ಲಾಹನು ಸ್ಪಷ್ಟಪಡಿಸಿದ್ದಾನೆಂದರೆ,

**179** ಕುರ್‌ಆನ್ 39:65

**180** ಕುರ್‌ಆನ್ 9:5

**181** ಇದನ್ನು ಬುಖಾರಿ, ಮುಸ್ಲಿಮ್ ವರದಿ ಮಾಡಿದ್ದಾರೆ.

**182** ಇದನ್ನು ಬುಖಾರಿ, ಮುಸ್ಲಿಮ್ ವರದಿ ಮಾಡಿದ್ದಾರೆ.

ಸೃಷ್ಟಿಗಳ ಸೃಷ್ಟಿ ಹಾಗೂ ಅವುಗಳ ಸಂಯೋಜನೆಯ ಉದ್ದೇಶವು ಅಲ್ಲಾಹನನ್ನು ಅವನ ನಾಮ ಹಾಗೂ ಗುಣಗಳಿಂದ ಗುರುತಿಸಬೇಕು. ಅವನನ್ನು ಮಾತ್ರ ಆರಾಧನೆ ಮಾಡಬೇಕು. ಅವನ ಜೊತೆಗೆ ಬೇರೆ ಯಾರನ್ನೂ ಭಾಗೀಧಾರರನ್ನಾಗಿ ಮಾಡಬಾರದು. ಜನರು ಪರಸ್ಪರ ನ್ಯಾಯ ಮತ್ತು ನೀತಿಯಿಂದ ವರ್ತಿಸಬೇಕು ಎಂದಾಗಿದೆ. ನ್ಯಾಯಪಾಲನೆಯೊಂದಿಗೆ ಜನರು ನೆಲೆನಿಲ್ಲಬೇಕು. ಆ ನ್ಯಾಯ ಪಾಲನೆಯ ಮೂಲಕವೇ ಆಕಾಶ ಹಾಗೂ ಭೂಮಿಯು ಅಸ್ತಿತ್ವಕ್ಕೆ ಬಂತು. ಅಲ್ಲಾಹು ಹೀಗೆ ಹೇಳುತ್ತಾನೆ:

﴿لَقَدْ أَرْسَلْنَا رُسُلَنَا بِٱلْبَيِّنَٰتِ وَأَنزَلْنَا مَعَهُمُ ٱلْكِتَٰبَ وَٱلْمِيزَانَ لِيَقُومَ ٱلنَّاسُ بِٱلْقِسْطِ ﴾

**“ನಾವು ನಮ್ಮ ಸಂದೇಶವಾಹಕರನ್ನು ಸ್ಪಷ್ಟ ದೃಷ್ಟಾಂತಗಳೊಂದಿಗೆ ಕಳುಹಿಸಿದೆವು ಮತ್ತು ಅವರ ಮೇಲೆ ಗ್ರಂಥಗಳನ್ನು ಮತ್ತು ತಕ್ಕಡಿಯನ್ನು (ಅಂದರೆ ನ್ಯಾಯಪಾಲನೆಯ ನಿಯಮಗಳನ್ನು) ಜನರು ನ್ಯಾಯದಲ್ಲಿ ನಿಲ್ಲಲೆಂದು ಇಳಿಸಿದೆವು.”** [183]

ಅಲ್ಲಾಹನು ಈ ಸತ್ಯದ ಕುರಿತು ಹೀಗೆ ಹೇಳಿರುವನು: ಅವನು ತನ್ನ ಪ್ರವಾದಿಗಳನ್ನು ಕಳುಹಿಸಿದನು. ತನ್ನ ಗ್ರಂಥಗಳನ್ನು ಇಳಿಸಿರುವನು. ಏಕೆಂದರೆ ಜನರು ನ್ಯಾಯ ನೀತಿಯೊಂದಿಗೆ ವರ್ತಿಸಲೆಂದು ಮತ್ತು ಅತ್ಯಂತ ದೊಡ್ಡ ನ್ಯಾಯನೀತಿಯು ತೌಹೀದ್ ಆಗಿದೆ. ತೌಹೀದ್ ನ್ಯಾಯಪಾಲನೆಯ ಶಿರ ಮತ್ತು ಬುನಾದಿಯಾಗಿದೆ ಮತ್ತು ಶಿರ್ಕ್ ಬಹಳ ದೊಡ್ಡ ಅಕ್ರಮವಾಗಿದೆ ಅಲ್ಲಾಹು ಕುರ್‌ಆನ್‌ನಲ್ಲಿ ಹೇಳುತ್ತಾನೆ.

﴿إِنَّ ٱلشِّرْكَ لَظُلْمٌ عَظِيمٌ ١٣﴾

**“ನಿಶ್ಚಯವಾಗಿಯೂ ಶಿರ್ಕ್ ಬಹಳ ದೊಡ್ಡ ಅಕ್ರಮವಾಗಿದೆ.”** [184]

ಶಿರ್ಕ್ ಎಲ್ಲಕ್ಕಿಂತ ದೊಡ್ಡ ಅಕ್ರಮವಾಗಿದೆ ಮತ್ತು ತೌಹೀದ್ ಎಲ್ಲಕ್ಕಿಂತ ದೊಡ್ಡ ನ್ಯಾಯ ಪಾಲನೆಯಾಗಿದೆ. ಶಿರ್ಕ್ ಸೃಷ್ಟಿಗಳ ನೈಜ ಉದ್ದೇಶದ ನೇರ ವಿರೋಧಿಯಾದ್ದರಿಂದ ಅದು ಅತ್ಯಂತ ದೊಡ್ಡ ಪಾಪವಾಗಿದೆ. ಇದರ ಬಗ್ಗೆ ಇಬ್ನುಲ್ ಖಯ್ಯಿಮ್(ﷺ) ಹೇಳುತ್ತಾರೆ:

**“ಶಿರ್ಕ್ ಈ ಸರ್ವ ಸೃಷ್ಟಿಗಳ ಸೃಷ್ಟಿಯ ಉದ್ದೇಶಕ್ಕೆ ನೇರ ವಿರುದ್ಧವಾಗಿದೆ ಮತ್ತು ಎಲ್ಲಕ್ಕಿಂತ ದೊಡ್ಡ ಪಾಪವಾಗಿದೆ. ಆದ್ದರಿಂದ ಅಲ್ಲಾಹು ಪ್ರತಿಯೊಂದು ಮುಶ್ರಿಕನಿಗೂ ಸ್ವರ್ಗವನ್ನು ನಿಷಿದ್ಧಗೊಳಿಸಿದ್ದಾನೆ. ಅವರ ಜೀವ, ಸೊತ್ತು, ಕುಟುಂಬ ಮತ್ತು ಮಕ್ಕಳು ಎಲ್ಲ ತೌಹೀದ್ ನವರಿಗೆ ಹಲಾಲ್(ಧರ್ಮ ಸಮ್ಮತ)ಗೊಳಿಸಲಾಗಿದೆ, ಇವರು ಅಲ್ಲಾಹನ ಉಲೂಹಿಯ್ಯ(ಆರಾಧನೆಯ ಏಕತ್ವ)ದಿಂದ ಬಹಳ ದೂರವಿರುವುದರಿಂದ ಇವರನ್ನು**

183 ಕುರ್‌ಆನ್ 57:25

184 ಕುರ್‌ಆನ್ 31:13

**ನಮ್ಮ ಸೇವಕರನ್ನಾಗಿ ಮಾಡಿಡಬೇಕು. ಅಲ್ಲಾಹು ಮುಶ್ರಿಕನ ಯಾವುದೇ ಸತ್ಕರ್ಮವನ್ನೂ ಸ್ವೀಕರಿಸುವುದನ್ನು ನಿರಾಕರಿಸಿದ್ದಾನೆ. ಅವನ ಕುರಿತು ಯಾರ ಶಿಫಾರಸ್ಸು ಸ್ವೀಕಾರವಾಗದು. ಆತನ ನಿರೀಕ್ಷೆಯೂ ನಿಷ್ಫಲವಾಗುವುದು.**

**ಒಬ್ಬ ಮುಶ್ರಿಕ್ ಅಲ್ಲಾಹನ ಬಗ್ಗೆ ಮೂಢರಲ್ಲಿ ಮೂಢನಾಗಿರುತ್ತಾನೆ, ಆದ್ದರಿಂದ ಅವನು ಅಲ್ಲಾಹನ ಹೊರತು ಇತರರನ್ನು ಅವನಿಗೆ ಪ್ರತಿಸ್ಪರ್ಧಿಗಳಾಗಿ ಮಾಡುತ್ತಾನೆ. ಇದು ಮೂಢತನ (ಜಾಹಿಲಿಯ್ಯ)ದ ಪರಮಾವಧಿಯಾಗಿದೆ ಹಾಗೂ ಅತ್ಯಂತ ದೊಡ್ಡ ಅಕ್ರಮವಾಗಿದೆ. ಒಬ್ಬ ಮುಶ್ರಿಕ್ ಅಲ್ಲಾಹ್‌ನೊಂದಿಗೆ ಯಾವುದೇ ಅಕ್ರಮವೆಸಗುವುದಿಲ್ಲ ಬದಲಾಗಿ ಅವನು ತನ್ನ ಮೇಲೆ ಸ್ವಯಂ ಅತೀ ದೊಡ್ಡ ಅಕ್ರಮವೆಸಗುತ್ತಾನೆ.”** [185]

7) ಶಿರ್ಕ್ ಒಂದು ನ್ಯೂನತೆಯಾಗಿದೆ. ತನ್ನ ದಾತ್ ವಸಿಫಾತ್ (ಪಕೃತಿ–ವಿಶೇಷಣ) ಗಳನ್ನು ಅಲ್ಲಾಹು ಅದರಿಂದ ಪರಿಶುದ್ಧಗೊಳಿಸಿರುವನು. ಯಾರಾದರೂ ಅಲ್ಲಾಹನೊಂದಿಗೆ ಬೇರೆಯವರನ್ನು ಪಾಲುದಾರರನ್ನಾಗಿ ಮಾಡಿದರೆ, ಯಾವುದರಿಂದ ಅಲ್ಲಾಹು ತನ್ನನ್ನು ತಾನು ಪರಿಶುದ್ಧನೆಂದು ಸ್ಪಷ್ಟಪಡಿಸಿರುವನೋ ಅದನ್ನು ಅವನಿಗೆ ಕಲ್ಪಿಸುವುದಾಗಿದೆ. ಇದು ಅಲ್ಲಾಹನೊಂದಿಗೆ ಮಾಡುವ ಕೃತಘ್ನತೆಯಾಗಿದೆ. ಆತನೊಂದಿಗಿನ ಅನ್ಯಾಯವಾಗಿದೆ. ಅವನ ವಿರುದ್ಧ ಯುದ್ಧ ಘೋಷಣೆ ಮಾಡುವುದಾಗಿದೆ.

ಶಿರ್ಕ್‌ನ ವಿಧಗಳು

ಶಿರ್ಕ್‌ಗೆ ಎರಡು ವಿಧಗಳಿವೆ:

ಮೊದಲನೆಯದು ದೊಡ್ಡ ಶಿರ್ಕ್:

ಇದು ದಾಸನನ್ನು ಧರ್ಮದಿಂದ ಹೊರಹಾಕುತ್ತದೆ ಮತ್ತು ಅವನಿಗೆ ನರಕಾಗ್ನಿಯಲ್ಲಿ ಶಾಶ್ವತವಾಗಿ ಇರುವಂತೆ ಮಾಡುತ್ತದೆ. ಇದು ಅವನು ಪಶ್ಚಾತ್ತಾಪ ಪಡದೇ ಮೃತಪಟ್ಟರೆ ಮಾತ್ರವಾಗಿರುತ್ತದೆ. ದೊಡ್ಡ ಶಿರ್ಕ್‌ನ ಅರ್ಥವು ಯಾವುದೇ ಆರಾಧನೆಯನ್ನು ಅಲ್ಲಾಹನ ಹೊರತು ಇತರರಿಗೆ ಅರ್ಪಿಸುವುದು ಅಂದರೆ ಅಲ್ಲಾಹನ ಹೊರತು ಇತರರೊಂದಿಗೆ ಪ್ರಾರ್ಥಿಸುವುದು, ಅಲ್ಲಾಹೇತರರ ಸಾಮೀಪ್ಯಗಳಿಸಲಿಕ್ಕಾಗಿ ಅವರ ಸನ್ನಿಧಿಯಲ್ಲಿ ಬಲಿ, ಹರಕೆಗಳನ್ನು ನೀಡುವುದು ಆಗಿರುತ್ತದೆ. ಅಲ್ಲಾಹನ ಹೊರತು ಇತರರೆಂದರೆ ಅದರಲ್ಲಿ ಗೋರಿಗಳು, ಜಿನ್ನ್‌ಗಳು, ಶೈತಾನ್‌ಗಳೂ ಇವೆಲ್ಲವೂ ಬರುತ್ತವೆ. ಅದೇ ರೀತಿ ಮೃತರು, ಜಿನ್ನ್ ಹಾಗೂ ಶೈತಾನ್ ಗಳು ತಮಗೆ ಕಷ್ಟಗಳನ್ನು ತರದಿರಲಿ, ತಮಗೆ ರೋಗಗಳನ್ನು ತರದಿರಲಿ ಎಂದು ಹೆದರುವುದು . ಇದೇ ರೀತಿ, ಅಲ್ಲಾಹು ಮಾತ್ರ ಸಾಮರ್ಥ್ಯ ಹೊಂದಿರುವ ಸಂಗತಿಗಳ ಬಗ್ಗೆ ಅಲ್ಲಾಹೇತರರ ಮೇಲೆ ನಿರೀಕ್ಷೆ ಇಡುವುದು. ಉದಾಹರಣೆಗೆ ಇಷ್ಟಸಿದ್ದಿಗಾಗಿ, ಸಂಕಷ್ಟಗಳನ್ನು ದೂರ ಮಾಡಲಿಕ್ಕಾಗಿ, ಇತರರ ಮೇಲೆ ಅಪಾರ ನಂಬಿಕೆಯಿರಿಸುವುದು. ಇಂತಹ ಶಿರ್ಕ್ ಈಗ ಔಲಿಯಾಗಳೂ ಹಾಗೂ ಹಿರಿಯರ

**185** **ಅಲ್** ಜವಾಬುಲ್ ಕಾಫೀ ಪುಟ 109

ಗೋರಿಯ ಬಳಿ ಧಾರಾಳವಾಗಿ ನಡೆಯುತ್ತದೆ. ಈ ವಿಷಯದ ಕುರಿತು ಸರ್ವೋನ್ನತನಾದ ಅಲ್ಲಾಹು ಹೇಳುತ್ತಾನೆ:

﴿ وَيَعْبُدُونَ مِن دُونِ ٱللَّهِ مَا لَا يَضُرُّهُمْ وَلَا يَنفَعُهُمْ وَيَقُولُونَ هَٰٓؤُلَآءِ شُفَعَٰٓؤُنَا عِندَ ٱللَّهِ ۚ قُلْ أَتُنَبِّـُٔونَ ٱللَّهَ بِمَا لَا يَعْلَمُ فِى ٱلسَّمَٰوَٰتِ وَلَا فِى ٱلْأَرْضِ ۚ سُبْحَٰنَهُۥ وَتَعَٰلَىٰ عَمَّا يُشْرِكُونَ ﴿١٨﴾ ﴾

**“ಮತ್ತು ಈ ಜನರು ಅಲ್ಲಾಹನ ಹೊರತು ಇವರಿಗೆ ಹಾನಿಯನ್ನಾಗಲೀ, ಲಾಭವನ್ನಾಗಲೀ ಮಾಡಲಾಗದಂತಹವುಗಳನ್ನು ಇವರು ಆರಾಧಿಸುತ್ತಾರೆ ಮತ್ತು ಅವರು ಹೇಳುತ್ತಾರೆ. ಇವರು ಅಲ್ಲಾಹನ ಬಳಿ ನಮ್ಮ ಶಿಫಾರಸ್ಸು ಮಾಡುವವರು.”** [186]

**ಎರಡನೆಯದು ಚಿಕ್ಕ ಶಿರ್ಕ್**

ಇದರಿಂದ ದಾಸನು ಧರ್ಮದಿಂದ ಹೊರಗೆ ಹೋಗುವುದಿಲ್ಲ. ಆದರೆ ಆತನ ತೌಹೀದ್‌ನಲ್ಲಿ ಲೋಪವುಂಟಾಗುತ್ತದೆ. ಇದು ದೊಡ್ಡ ಶಿರ್ಕ್‌ಗೆ ಒಂದು ದಾರಿಯಾಗಿದೆ. ಇದರಲ್ಲೂ ಎರಡು ವರ್ಗಗಳಿವೆ.

ಮೊದಲ ವರ್ಗ :

ಈ ಶಿರ್ಕ್ ಮಾತುಗಳು ಮತ್ತು ಕಾರ್ಯಗಳ ರೂಪದಲ್ಲಿರುತ್ತದೆ. ಮಾತಿನ ಶಿರ್ಕ್ ಅಂದರೆ ಅಲ್ಲಾಹನ ಹೊರತು ಇತರರ ಮೇಲೆ ಆಣೆ ಹಾಕುವುದು ಇತ್ಯಾದಿ ಪ್ರವಾದಿ (ﷺ) ಹೇಳಿದ್ದಾರೆ.

«مَنْ حَلَفَ بِغَيْرِ اللَّهِ فَقَدْ كَفَرَ أَوْ أَشْرَكَ»

**“ಯಾರಾದರೂ ಅಲ್ಲಾಹನ ಹೊರತು ಇತರರ ಮೇಲೆ ಆಣೆ ಹಾಕಿದರೆ ಅವನು ಕುಫ್ರ್ ಅಥವಾ ಶಿರ್ಕ್ ಮಾಡಿದನು.”** [187] ಇನ್ನೊಂದು ಹದೀಸ್.

ಒಬ್ಬ ವ್ಯಕ್ತಿಯು ಪ್ರವಾದಿ(ﷺ)ರೊಡನೆ ಅಲ್ಲಾಹು ಮತ್ತು ನೀವಿಚ್ಚಿಸದರೆ ಎಂದು ಹೇಳಿದಾಗ, ಪ್ರವಾದಿ(ﷺ)ಹೇಳಿದರು:

«أَجَعَلْتَنِي لِلَّهِ نِدًّا ؟ قُلْ مَا شَاءَ اللَّهُ وَحدَهُ»

**“ನೀನು ನನ್ನನ್ನು ಅಲ್ಲಾಹನಿಗೆ ಪ್ರತಿಸ್ಪರ್ಧಿ ಮಾಡಿದ್ದಿ(ಯಾ) ಅಲ್ಲಾಹ್ ಒಬ್ಬನೇ ಇಚ್ಚಿಸಿದರೆ ಎಂದು ಹೇಳು.”** [188]

---

**186** ಕುರ್‌ಆನ್ 10:18

**187** ತಿರ್ಮಿದಿ

**188** ನಸಾಈ

ಯಾರಾದರೂ 'ಅಲ್ಲಾಹ್ ಹಾಗೂ ಇಂತಿಂತಹವನು ಇಲ್ಲದಿದ್ದರೆ' ಎಂದು ಹೇಳುವುದು ಇದೇ ರೀತಿಯಾಗಿರುತ್ತದೆ. ಸರಿಯಾದ ರೀತಿಯೇನೆಂದರೆ 'ಅಲ್ಲಾಹನು ಇಚ್ಛಿಸಿದರೆ ಆ ಬಳಿಕ ಇಂತಿಂತಹವನು ಇಚ್ಛಿಸಿದರೆ' ಎನ್ನುವುದಾಗಿದೆ. ಏಕೆಂದರೆ "ಮತ್ತೆ" ಶಬ್ದವು ಕ್ರಮಕ್ಕಾಗಿ ಬರುತ್ತದೆ. ಇದರಿಂದ ದಾಸನ ಇಚ್ಛೆಯು ಅಲ್ಲಾಹನ ಇಚ್ಛೆಯನ್ನು ಹಿಂಬಾಲಿಸಿ ಬರುತ್ತದೆ. ಅಲ್ಲಾಹನ ವಚನವು ಹೀಗಿದೆ.

﴿ وَمَا تَشَآءُونَ إِلَّآ أَن يَشَآءَ ٱللَّهُ رَبُّ ٱلْعَٰلَمِينَ ﴿٢٩﴾ ﴾

**"ಮತ್ತು ನೀವು ಏನನ್ನೂ ಇಚ್ಛಿಸಲಾರಿರಿ ಸರ್ವಲೋಕ ಪರಿಪಾಲಕ ಪ್ರಭು ಇಚ್ಛಿಸಿದರೆ ಹೊರತು."** (189)

ಆದರೆ ಅರಬಿ ಭಾಷೆಯ ವಾವ್ ಅಕ್ಷರವು ಎರಡು ಪದಗಳನ್ನು ಅಥವಾ ವಾಕ್ಯಗಳನ್ನು ಸೇರಿಸುವುದಕ್ಕೆ ಬರುತ್ತದೆ. ಇದರಿಂದ ಅನುಕ್ರಮತೆ ಬರುವುದಿಲ್ಲ. 'ನನಗಂತೂ ಅಲ್ಲಾಹ್ ಮತ್ತು ನೀನು ಇದ್ದೀ" ಮತ್ತು ಇದು "ಅಲ್ಲಾಹು ಮತ್ತು ನಿಮ್ಮ ಬರ್ಕತ್‌ನ ದೆಸೆಯಿಂದ " ಎನ್ನುವ ರೀತಿಯಲ್ಲಾಗಿರುತ್ತದೆ.

ತಗಡು ಕಟ್ಟುವುದು , ಸಂಕಷ್ಟಗಳ ನಿವಾರಣೆಗಾಗಿ ನೂಲು ಕಟ್ಟುವುದು, ಕೆಟ್ಟ ದೃಷ್ಟಿಯಿಂದ ರಕ್ಷಣೆ ಹೊಂದಲು ತಾಯಿತ ಕಟ್ಟುವುದು ಇತ್ಯಾದಿ. ಇಂತಹ ಕೃತ್ಯಗಳನ್ನು ಮಾಡುವಾಗ ಇವುಗಳಿಂದ ಸಂಕಷ್ಟಗಳು ದೂರವಾಗುತ್ತವೆ ಎಂಬ ಅಖೀದ(ವಿಶ್ವಾಸ)ವಿದ್ದರೆ ಅದು ಚಿಕ್ಕ ಶಿರ್ಕ್ ಆಗುತ್ತದೆ.

ಏಕೆಂದರೆ ಅಲ್ಲಾಹು ಇಂತಹ ವಸ್ತುಗಳನ್ನು ಇಷ್ಟ ಸಿದ್ಧಿಸುವ ಕಾರಣಗಳನ್ನಾಗಿ ಮಾಡಿಲ್ಲ. ಆದರೆ ಒಬ್ಬನ ವಿಶ್ವಾಸವು, ಈ ವಸ್ತುಗಳು, ಖುದ್ದಾಗಿ ಸಂಕಷ್ಟಗಳನ್ನು ದೂರಮಾಡುತ್ತದೆ. ಎಂದಿದ್ದರೆ ಅದು ದೊಡ್ಡ ಶಿರ್ಕ್ ಆಗಿದೆ. ಏಕೆಂದರೆ ಇದು ಅಲ್ಲಾಹನಿಗೆ ಮಾತ್ರ ಮೀಸಲಾಗಿರುವುದನ್ನು ಅವನ ಸೃಷ್ಟಿಗೆ ನೀಡುವುದಾಗಿದೆ.

**ಎರಡನೇ ವರ್ಗ: ರಹಸ್ಯವಾದ ಶಿರ್ಕ್ :**

ಇದು ಇರಾದೆ ಮತ್ತು ಸಂಕಲ್ಪದ ಶಿರ್ಕ್ ಆಗಿದೆ. ರಿಯಾ(ತೋರಿಕೆ) ಮತ್ತು ಪ್ರತಿಷ್ಠೆಯ ಉದ್ದೇಶವಿಟ್ಟು ಅಂದರೆ ಅಲ್ಲಾಹನಿಗೆ ಹತ್ತಿರವಾಗುವಂತಹ ಸತ್ಕರ್ಮಗಳನ್ನು ಜನರು ಹೊಗಳಿಕೊಳ್ಳಲಿ ಎಂದು ಮಾಡುವುದು. ಉದಾಹರಣೆಗೆ ಒಬ್ಬ ವ್ಯಕ್ತಿಯು ನಮಾಝ್‌ಅನ್ನು ಸುಂದರವಾಗಿಸುವುದು, ದಾನಧರ್ಮ ನೀಡುವುದು ಜನರು ತಮ್ಮನ್ನು ಹೊಗಳಿಕೊಳ್ಳಲಿ ಎಂದು ಒಳ್ಳೆಯ ರೀತಿ ಮಾಡುವುದು, ಝಿಕ್ರ್‌ಗಳನ್ನು ಕುರ್‌ಆನ್ ಪಾರಾಯಣವನ್ನು ಜನರು ಕೇಳಲಿ ಮತ್ತು ಹೊಗಳಿಕೊಳ್ಳಲಿ ಎಂಬ ಉದ್ದೇಶದಿಂದ ಸುಂದರ ಕಂಠದಿಂದ ಓದುವುದು, ಮಾಡುವುದು ಇತ್ಯಾದಿ, ಯಾವುದೇ ಸತ್ಕರ್ಮದಲ್ಲಿ ತೋರಿಕೆ (ರಿಯಾ) ಬಂದರೆ ಆ ಕರ್ಮವು ಬಾತಿಲ್ (ವ್ಯರ್ಥ) ಆಗುವುದು, ಅಲ್ಲಾಹು ಹೇಳಿದ್ದಾನೆ.

**189** ಕುರ್‌ಆನ್ 81:29

﴿ فَمَن كَانَ يَرْجُواْ لِقَآءَ رَبِّهِۦ فَلْيَعْمَلْ عَمَلًا صَٰلِحًا وَلَا يُشْرِكْ بِعِبَادَةِ رَبِّهِۦٓ أَحَدًۢا ﴿١١٠﴾ ﴾

**“ಮತ್ತು ಯಾರು ತನ್ನ ಪಾಲಕ ಪ್ರಭುವಿನ ಭೇಟಿಯನ್ನು ನಿರೀಕ್ಷಿಸುತ್ತಾನೋ ಅವನು ಸತ್ಕರ್ಮಗಳನ್ನು ಮಾಡಲಿ ಮತ್ತು ತನ್ನ ಪ್ರಭುವಿನ ಆರಾಧನೆಯಲ್ಲಿ ಯಾರನ್ನೂ ಸಹಭಾಗಿಯನ್ನಾಗಿ ಮಾಡದಿರಲಿ.”** (190)

ಪ್ರವಾದಿ (ﷺ) ಹೀಗೆಂದಿರುವರು.

«أَخْوَفُ مَا أَخَافُ عَلَيْكُمْ الشِّرْكُ الْأَصْغَرُ» قَالُوا يَا رَسُولَ اللَّهِ وَمَا الشِّرْكُ الْأَصْغَرُ ؟ قَالَ «الرِّيَاءُ»

ನಿಮ್ಮ ಮೇಲೆ ನನಗೆ ಚಿಕ್ಕ ಶಿರ್ಕ್‌ನ ಕುರಿತು ಭಯವಿದೆ. ಜನರು ಕೇಳಿದರು: ಅಲ್ಲಾಹನ ಸಂದೇಶವಾಹಕರೇ, ಚಿಕ್ಕ ಶಿರ್ಕ್ ಏನು? ಅವರು(ﷺ) ಹೇಳಿದರು: ಅದು ರಿಯಾ(ತೋರಿಕೆ) ಆಗಿದೆ. (191)

ಇದೇ ರೀತಿ ಇಹಲೋಕದ ಲಾಲಸೆಯಿಂದ ಹಜ್ಜ್ ನಿರ್ವಹಿಸುವುದು, ಅಝಾನ್ ಕೊಡುವುದು, ಜನರಿಗೆ ಇಮಾಮ್ ನಿಲ್ಲುವುದು, ಶರೀಅದ ಜ್ಞಾನ ಸಂಪಾದಿಸುವುದು, ಅಲ್ಲಾಹನ ಮಾರ್ಗದಲ್ಲಿ ಜಿಹಾದ್ ಮಾಡುವುದು ಇತ್ಯಾದಿ. ಇಂತಹ ಜನರ ಬಗ್ಗೆಯೇ ಪ್ರವಾದಿ (ﷺ) ಹೇಳಿದ್ದಾರೆ.

«تَعِسَ عَبْدُ الدِّينَارِ وَتَعِسَ عَبْدُ الدِّرْهَمِ تَعِسَ عَبْدُ الْخَمِيصَةِ وَتَعِسَ عَبْدُ الْخَمِيلَةِ إِنْ أُعْطِيَ رَضِيَ وَإِنْ لَمْ يُعْطَ سَخِطَ»

**“ದೀನಾರ್‌ನ ದಾಸನು ನಾಶವಾದನು. ದಿರ್ಹಮ್‌ನ ಭಕ್ತನು ನಾಶವಾದನು. ಕಪ್ಪು ಚಾದರದ ದಾಸನು ನಾಶವಾದನು, ಮಕ್‌ಮಲ್ ಚಾದರದ ದಾಸನು ನಾಶವಾದನು. ಅವನಿಗೆ ಕೊಟ್ಟರೆ ಸಂತೋಷಪಡುವನು, ಅವನಿಗೆ ಕೊಡದಿದ್ದರೆ ಕೋಪಗೊಳ್ಳುವನು.”** (192)

ಇಮಾಮ್ ಇಬ್ನುಲ್ ಖಯ್ಯಿಮ್(رحمه الله) ಹೇಳುತ್ತಾರೆ: ಈ ಇರಾದೆ ಎಂಬ ಸಂಕಲ್ಪಗಳಲ್ಲಿರುವ ಶಿರ್ಕ್ ಎನ್ನುವುದು ದಡವೇ ಇಲ್ಲದಂತಹ ಒಂದು ಸಮುದ್ರವಾಗಿದೆ ಮತ್ತು ಇದರಿಂದ ಪಾರಾಗುವವರು ಬಹಳ ಕಡಿಮೆ. ಆದ್ದರಿಂದ ಒಬ್ಬ ವ್ಯಕ್ತಿಯು ತನ್ನ ಕಾರ್ಯದಲ್ಲಿ ಅಲ್ಲಾಹನ ಸಂತೃಪ್ತಿಯ ಹೊರತು ಬೇರೆ ವಸ್ತುಗಳನ್ನು ಇಚ್ಛಿಸಿದರೆ ಮತ್ತು ಅಲ್ಲಾಹನ ಹೊರತು ಇತರರಿಂದ ಆ ಕಾರ್ಯದ ಪ್ರತಿಫಲ ಕೇಳಿದರೆ ಅದು ಸಂಕಲ್ಪ ಮತ್ತು ಇರಾದೆಯ ಶಿರ್ಕ್ ಆಗುವುದು.

**190** ಕುರ್‌ಆನ್ 18:110

**191** ಅಹ್ಮದ್, ತಬ್‌ರಾನೀ, ಶರಹಸ್ಸುನ್ನಃದಲ್ಲಿ ಬಗವೀ

**192** ಬುಖಾರಿ

**ಇಖ್‌ಲಾಸ್(ಏಕನಿಷ್ಠತೆ)** ಇಖ್‌ಲಾಸ್ ಎಂದರೆ ತನ್ನ ಎಲ್ಲಾ ಸತ್ಕರ್ಮಗಳನ್ನು, ಸಂಕಲ್ಪ, ಇರಾದೆಗಳನ್ನು ಅಲ್ಲಾಹ್‌ನಿಗೆ ಏಕನಿಷ್ಠವಾಗಿ ಮೀಸಲಿಡುವುದು. ಇದುವೇ ಹನೀಫೀಯ್ಯತ್ ಅಂದರೆ ಇಬ್ರಾಹೀಮ್ ಅಲೈಹಿಸ್ಸಲಾಮ್‌ರ ನೇರ ಮಾರ್ಗ. ಅದನ್ನು ಅನುಸರಿಸಲು ಅಲ್ಲಾಹು ತನ್ನ ದಾಸರೆಲ್ಲರಿಗೆ ಆದೇಶಿಸಿರುವನು. ಆದ್ದರಿಂದ ಅದರ ಹೊರತು ಇತರ ವಸ್ತುಗಳು ಅಲ್ಲಾಹನ ಬಳಿ ಸ್ವೀಕಾರಾರ್ಹವಲ್ಲ, ಇದುವೇ ಹನೀಫಿಯ್ಯ. ಇಸ್ಲಾಮ್‌ನ ಸತ್ಯವಾಗಿದೆ. ಅಲ್ಲಾಹನ ವಚನವು ಹೀಗಿದೆ:

﴿ وَمَن يَبْتَغِ غَيْرَ ٱلْإِسْلَٰمِ دِينًا فَلَن يُقْبَلَ مِنْهُ وَهُوَ فِى ٱلْءَاخِرَةِ مِنَ ٱلْخَٰسِرِينَ ﴿٨٥﴾ ﴾

**“ಮತ್ತು ಯಾರಾದರೂ ಇಸ್ಲಾಮ್‌ನ ಹೊರತು ಇತರ ಬೇರೆ ಧರ್ಮವನ್ನು ಬಯಸಿದರೆ ಅದು ಅವನಿಂದ ಎಂದಿಗೂ ಸ್ವೀಕರವಾಗಲಾರದು ಮತ್ತು ಪರಲೋಕದಲ್ಲಿ ಅವನು ನಷ್ಟಕ್ಕೊಳಗಾದವರಲ್ಲಿರುವನು.”** [193]

ಮೇಲೆ ಹೇಳಿದವುಗಳಿಂದ ಸ್ಪಷ್ಟವಾಗುವುದೇನೆಂದರೆ ದೊಡ್ಡ ಶಿರ್ಕ್ ಹಾಗೂ ಚಿಕ್ಕ ಶಿರ್ಕ್‌ನಲ್ಲಿ ಬಹಳ ವ್ಯತ್ಯಾಸವಿದೆ.

1. ದೊಡ್ಡ್ ಶಿರ್ಕ್ ನಿಂದ ಒಬ್ಬನು ಧರ್ಮದಿಂದ ಹೊರಗೆ ಹೋಗುತ್ತಾನೆ. ಚಿಕ್ಕ ಶಿರ್ಕ್‌ನಿಂದ ಅವನು ಧರ್ಮದಿಂದ ಹೊರಗೆ ಹೋಗುವುದಿಲ್ಲ. ಆದರೆ ಅವನ ತೌಹೀದ್‌ನಲ್ಲಿ ಕೊರತೆ ಉಂಟಾಗುತ್ತದೆ.

2. ದೊಡ್ಡ್ ಶಿರ್ಕ್ ಒಬ್ಬ ಮುಶ್ರಿಕ್‌ನನ್ನೂ ಶಾಶ್ವತವಾಗಿ ನರಕದಲ್ಲಿರಿಸುವುದು. ಆದರೆ ಚಿಕ್ಕ ಶಿರ್ಕ್‌ನಿಂದ ಒಬ್ಬನು ನರಕ ಪ್ರವೇಶಿಸಿದರೂ ಹೆಚ್ಚು ಸಮಯವಿರುವುದಿಲ್ಲ.

3. ದೊಡ್ಡ ಶಿರ್ಕ್ ಎಲ್ಲಾ ಕರ್ಮಗಳನ್ನು ನಿಷ್ಫಲಗೊಳಿಸುವುದು, ಚಿಕ್ಕ ಶಿರ್ಕ್ ಎಲ್ಲಾ ಕರ್ಮಗಳನ್ನು ನಿಷ್ಫಲಗೊಳಿಸುವುದಿಲ್ಲ. ಆದರೆ ತೋರಿಕೆ, ಅದೇ ರೀತಿ ಲೋಕದ ಲಾಲಸೆ ಅಥವಾ ಲೌಕಿಕ ವಿಷಯಗಳನ್ನು ಧರ್ಮದ ವಿಷಯಗಳೊಂದಿಗೆ ಕಲಬೆರಕೆ ಮಾಡುವಂತಹ ಕಾರ್ಯಗಳು ಎಲ್ಲಾ ಕರ್ಮಗಳನ್ನು ನಿಷ್ಫಲಗೊಳಿಸುವುದು.

4. ದೊಡ್ಡ ಶಿರ್ಕ್ ಒಬ್ಬ ಮುಶ್ರಿಕನ ಜೀವ ಮತ್ತು ಸಂಪತ್ತನ್ನು ಸಮ್ಮತಗೊಳಿಸುತ್ತದೆ. ಆದರೆ ಚಿಕ್ಕ ಶಿರ್ಕ್ ನಿಂದ ಹೀಗೆ ಆಗುವುದಿಲ್ಲ. ಸಮ್ಮತಗೊಳಿಸುವುದಿಲ್ಲ.

**193** ಕುರ್‌ಆನ್ 3:85

## ಅಧ್ಯಾಯ-3

# ಕುಫ್ರ್ ಅದರ ಪರಿಚಯ ಹಾಗೂ ಅದರ ವಿಧಗಳು

ಭಾಷಾರ್ಥದಲ್ಲಿ ಕುಫ್ರ್‌ನ ಅರ್ಥವು ಅಡಗಿಸಿಡುವುದು ಎಂದಾಗಿದೆ. ಶರಈಯಾಗಿ ಈಮಾನ್‌ನ ವಿರೋಧವನ್ನು ಕುಫ್ರ್ ಎನ್ನಲಾಗುತ್ತದೆ. ಅಂದರೆ ಅಲ್ಲಾಹ್ ಹಾಗೂ ಅವನ ಪ್ರವಾದಿಗಳ ಮೇಲೆ ಈಮಾನ್ ತರದಿರುವುದನ್ನು ಕುಫ್ರ್ ಎನ್ನಲಾಗುತ್ತದೆ. ಅದರಲ್ಲಿ ಸುಳ್ಳಾಗಿಸುವುದು ಕಂಡು ಬಂದರೂ, ಇಲ್ಲದಿದ್ದರೂ ಅಂದರೆ ಸಂಶಯ, ಸಂದೇಹ ವಿಮುಖತೆ ಅಥವಾ ಅಸೂಯೆ, ಅಥವಾ ಅಹಂಕಾರ ಅಥವಾ ಸ್ವೇಚ್ಛೆಯ ಅನುಸರಣೆ ಇವುಗಳಿಗೂ ಕೂಡಾ ಈ ಆದೇಶವು ಅನ್ವಯವಾಗುತ್ತದೆ. ಆದರೆ ಸುಳ್ಳಾಗಿಸುವವನು ಬಹಳ ದೊಡ್ಡ ಕಾಫಿರ್ ಆಗಿದ್ದಾನೆ. ದೇವ ಸಂದೇಶದಲ್ಲಿ ವಿಶ್ವಾಸವಿದ್ದೂ ಕೂಡಾ ಅಸೂಯೆಯಿಂದಾಗಿ ಕುಫ್ರ್‌ಅನ್ನು ಬರಸೆಳೆದವನು ಇದರಲ್ಲಿ ಬರುತ್ತಾನೆ. (194)

ಕುಫ್ರ್‌ನ ವಿಧಗಳು

ಕುಫ್ರ್‌ನಲ್ಲಿ ಎರಡು ವಿಧಗಳಿವೆ.

ಮೊದಲನೆಯದು- ದೊಡ್ಡ ಕುಫ್ರ್-ಎರಡನೆಯದು ಚಿಕ್ಕ ಕುಫ್ರ್

ಮೊದಲನೆಯ ವಿಧ-ದೊಡ್ಡ ಕುಫ್ರ್ : ಇದು ಒಬ್ಬ ಮುಸ್ಲಿಮನನ್ನು ಧರ್ಮದಿಂದ ಹೊರ ಹಾಕುತ್ತದೆ. ಇದರ ಐದು ವಿಧಗಳಿವೆ.

ಒಂದನೆಯದು. ಕುಫ್ರ್ ಅತ್ತಕ್‌ಝೀಬ್: ಸುಳ್ಳಾಗಿಸುವಿಕೆಯ ಮೂಲಕ ಕುಫ್ರ್. ಇದಕ್ಕೆ ಆಧಾರವು ಅಲ್ಲಾಹ್‌ನ ಈ ವಚನವಾಗಿದೆ.

﴿ وَمَنْ أَظْلَمُ مِمَّنِ ٱفْتَرَىٰ عَلَى ٱللَّهِ كَذِبًا أَوْ كَذَّبَ بِٱلْحَقِّ لَمَّا جَآءَهُۥٓ ۚ أَلَيْسَ فِى جَهَنَّمَ مَثْوًى لِّلْكَـٰفِرِينَ ﴿٦٨﴾ ﴾

**"ಮತ್ತು ಇದಕ್ಕಿಂತ ದೊಡ್ಡ ಅಕ್ರಮಿಯಾರಿದ್ದಾನೆ ಅವನು ಅಲ್ಲಾಹನ ಮೇಲೆ ಸುಳ್ಳನ್ನು ಹೊರಿಸುವವನು ಮತ್ತು ಸತ್ಯವು ಅವನ ಬಳಿ ಬಂದಾಗ ಅದನ್ನು ಅವನು ಸುಳ್ಳಾಗಿಸುವನು. ಕಾಫಿರರ ವಾಸಸ್ಥಾನವು ಜಹನ್ನಮ್ ಅಲ್ಲವೇ?"** (195)

ಎರಡನೆಯದು. ಕುಫ್ರುಲ್ ಇಬಾಅ ವಲ್‌ಇಸ್ತಿಕ್‌ಬಾರ್ ಮಅತ್ತಸ್ದೀಕ್ (ಸತ್ಯ ತಿಳಿದೂ ನಿರಾಕರಣೆ ಹಾಗೂ ಅಹಂಕಾರದ ಕುಫ್ರ್): ಇದಕ್ಕೆ ಆಧಾರವು ಅಲ್ಲಾಹನ ವಚನವಾಗಿದೆ:

﴿ وَإِذْ قُلْنَا لِلْمَلَـٰٓئِكَةِ ٱسْجُدُوا۟ لِـَٔادَمَ فَسَجَدُوٓا۟ إِلَّآ إِبْلِيسَ أَبَىٰ وَٱسْتَكْبَرَ وَكَانَ مِنَ

194 ಶೈಖುಲ್ ಇಸ್ಲಾಂ ಇಬ್ನು ತಯ್ಮಿಯ್ಯರ ಮಜ್ಮೂಉಲ್ ಫತಾವ 12/335

195 ಕುರ್‌ಆನ್ 29:68

﴿ ٱلْكَٰفِرِينَ ﴿٣٤﴾ ﴾

**“ನಾವು ಮಲಕ್‌ಗಳೊಡನೆ ಆದಮ್‌ಗೆ ಸುಜೂದ್ ಮಾಡಲು ಹೇಳಿದಾಗ ಅವರೆಲ್ಲರೂ ಸಾಷ್ಟಾಂಗ ಎರಗಿದರು. ಆದರೆ ಶೈತಾನನು ನಿರಾಕರಿಸಿದನು ಮತ್ತು ಅಹಂಭಾವತೋರಿದನು. ಅವನು ಕಾಫಿರ್‌ಗಳಲ್ಲಾದನು.”** (196)

ಮೂರನೆಯದು ಕುಫ್ರ್ ಅಶ್ಶಕ್ಕ್(ಸಂಶಯದ ಕುಫ್ರ್) ಇದನ್ನು ಗುಮಾನಿಯ ಕುಫ್ರ್ ಎಂದೂ ಹೇಳಲಾಗುತ್ತದೆ. ಇದರ ಆಧಾರವು ಈ ವಚನವಾಗಿದೆ:

﴿ وَدَخَلَ جَنَّتَهُۥ وَهُوَ ظَالِمٌ لِّنَفْسِهِۦ قَالَ مَآ أَظُنُّ أَن تَبِيدَ هَٰذِهِۦٓ أَبَدًا ﴿٣٥﴾ وَمَآ أَظُنُّ ٱلسَّاعَةَ قَآئِمَةً وَلَئِن رُّدِدتُّ إِلَىٰ رَبِّى لَأَجِدَنَّ خَيْرًا مِّنْهَا مُنقَلَبًا ﴿٣٦﴾ قَالَ لَهُۥ صَاحِبُهُۥ وَهُوَ يُحَاوِرُهُۥٓ أَكَفَرْتَ بِٱلَّذِى خَلَقَكَ مِن تُرَابٍ ثُمَّ مِن نُّطْفَةٍ ثُمَّ سَوَّىٰكَ رَجُلًا ﴿٣٧﴾ لَّٰكِنَّا۠ هُوَ ٱللَّهُ رَبِّى وَلَآ أُشْرِكُ بِرَبِّىٓ أَحَدًا ﴿٣٨﴾ ﴾

**“ಮತ್ತು ಅವನು ತನ್ನ ಸ್ವಂತದ ಮೇಲೆ ಅಕ್ರಮವೆಸಗುವವನಾಗಿ ತನ್ನ ತೋಟದೊಳಗೆ ಪ್ರವೇಶಿಸಿದನು. ಮತ್ತು ಹೇಳತೊಡಗಿದನು ಈ ತೋಟವು ಎಂದಾದರೂ ನಾಶವಾಗಲಿದೆಯೆಂದು ನಾನು ಭಾವಿಸುವುದಿಲ್ಲ ಮತ್ತು ಅಂತ್ಯದಿನವು ಬರುವುದೆಂದೂ ಭಾವಿಸುವುದಿಲ್ಲ ಮತ್ತು ಒಂದು ವೇಳೆ ನಾನು ನನ್ನ ಪ್ರಭುವಿನ ಬಳಿ ಮರಳಿಸ್ಪಟ್ಟರೂ ಖಂಡಿತ ಇದಕ್ಕಿಂತ ಉತ್ತಮ ಸ್ಥಳವನ್ನು ನಾನು ಪಡೆಯುವೆನು. ಆಗ ಅವನ ಜೊತೆ ಮಾತನಾಡುತ್ತಿದ್ದವನು ಹೇಳಿದನು: ನೀನು ನಿನ್ನನ್ನು ಮಣ್ಣಿನಿಂದ, ನಂತರ ವೀರ್ಯಬಿಂದುವಿನಿಂದ ಸೃಷ್ಟಿಸಿದ ಮತ್ತು ನಿನ್ನನ್ನು ಸಂಪೂರ್ಣ ಮನುಷ್ಯನನ್ನಾಗಿ ಮಾಡಿದ ಅವನನ್ನು ನಿಷೇಧಿಸುವಿಯಾ? ಆದರೆ ಅವನು ಅಲ್ಲಾಹನೇ ನನ್ನ ಪರಿಪಾಲಕನು ಮತ್ತು ಅವನೊಂದಿಗೆ ಬೇರೆ ಯಾರನ್ನು ನಾನು ಸಹಭಾಗಿಯನ್ನಾಗಿ ನಿಶ್ಚಯಿಸುವುದಿಲ್ಲ.”** (197)

ನಾಲ್ಕನೆಯದು ಕುಫ್ರುಲ್ ಇಅ್‌ರಾದ್ವ್ (ವಿಮುಖತೆಯ ಕುಫ್ರ್): ಇದರ ಆಧಾರವು ಸರ್ವೋನ್ನತನಾದ ಅಲ್ಲಾಹುವಿನ ವಚನವಾಗಿದೆ:

﴿ وَٱلَّذِينَ كَفَرُوا۟ عَمَّآ أُنذِرُوا۟ مُعْرِضُونَ ﴿٣﴾ ﴾

**“ಮತ್ತು ಕಾಫಿರರಿಗೆ, ಅವರಿಗೆ ಯಾವ ವಿಷಯದ ಬೋಧನೆ ನೀಡಲಾಗಿತ್ತೋ ಅದರಿಂದ ಅವರು ವಿಮುಖರಾಗುತ್ತಾರೆ.”** (198)

---

**196** ಕುರ್‌ಆನ್ 2:34

**197** ಕುರ್‌ಆನ್ 18:35–38

**198** ಕುರ್‌ಆನ್ 42:3

ಐದನೆಯದು ಕುಫ್ರ್ ಅನ್ನಿಫಾಕ್ (ಕಾಪಟ್ಯದ ಕುಫ್ರ್): ಅಲ್ಲಾಹ್‌ನ ಈ ವಚನವು ಇದಕ್ಕೆ ಆಧಾರ:

﴿ ذَٰلِكَ بِأَنَّهُمْ ءَامَنُواْ ثُمَّ كَفَرُواْ فَطُبِعَ عَلَىٰ قُلُوبِهِمْ فَهُمْ لَا يَفْقَهُونَ ۝٣ ﴾

**"ಇದು ಅವರು ವಿಶ್ವಾಸ ತಂದ ಬಳಿಕ ಕಾಫಿರ್ ಆದರು. ಆಗ ಅವರ ಹೃದಯಗಳ ಮೇಲೆ ಮೊಹರು ಹಾಕಲಾಯಿತು. ಆದ್ದರಿಂದ ಅವರು ತಿಳಿದುಕೊಳ್ಳುವುದಿಲ್ಲ."** (199)

ಎರಡನೆಯ ವಿಧ

ಚಿಕ್ಕ ಕುಫ್ರ್ : ಚಿಕ್ಕ ಕುಫ್ರ್ ಒಬ್ಬ ಮುಸ್ಲಿಮನನ್ನು ಧರ್ಮದಿಂದ ಹೊರಗೆ ಹಾಕುವುದಿಲ್ಲ. ಇದನ್ನು ಕೃತಿಯ ಕುಫ್ರ್ ಎಂದೂ ಹೇಳಲಾಗುತ್ತದೆ. ಈ ಕುಫ್ರ್‌ನಲ್ಲಿ ಕುರ್‌ಆನ್ ಮತ್ತು ಸುನ್ನತ್‌ನಲ್ಲಿ ಹೆಸರಿಸಲಾದ ಕೆಲವು ಪಾಪಗಳು ಸೇರುತ್ತವೆ. ಇವುಗಳು ದೊಡ್ಡ ಕುಫ್ರ್‌ನ ಹಂತಕ್ಕೆ ತಲುಪುವುದಿಲ್ಲ. ಪ್ರಸ್ತುತ ಅನುಗ್ರಹಗಳಿಗೆ ತೋರಿಸುವ ಕುಫ್ರ್ ಇದಕ್ಕೆ ಒಂದು ಉದಾಹರಣೆ. ಇದೇ ಪ್ರಕಾರ ಅಲ್ಲಾಹ್ ಹೇಳುತ್ತಾನೆ:

﴿ وَضَرَبَ ٱللَّهُ مَثَلًا قَرْيَةً كَانَتْ ءَامِنَةً مُّطْمَئِنَّةً يَأْتِيهَا رِزْقُهَا رَغَدًا مِّن كُلِّ مَكَانٍ فَكَفَرَتْ بِأَنْعُمِ ٱللَّهِ ﴾

**"ಮತ್ತು ಅಲ್ಲಾಹು ಒಂದು ಪ್ರದೇಶದ ಉದಾಹರಣೆ ನೀಡುತ್ತಾನೆ. ಅದು ಸುರಕ್ಷಿತವೂ, ಶಾಂತಿಯಿಂದಲೂ ಇತ್ತು. ಎಲ್ಲಾ ಕಡೆಯಿಂದಲೂ ಅದಕ್ಕೆ ಸಂಪತ್ತು ಬರುತ್ತದೆ. ಆದರೆ ಆ ಜನರು ಅಲ್ಲಾಹನ ಅನುಗ್ರಹಕ್ಕೆ ಕೃತಘ್ನರಾದರು."** (200)

ಮುಸ್ಲಿಮ್ ಮುಸ್ಲಿಮರೊಂದಿಗೆ ಯುದ್ಧ ಮಾಡುವುದೂ ಕೂಡಾ ಇದರಲ್ಲಿ ಸೇರಿದೆ. ಪ್ರವಾದಿ ವಚನವು ಹೀಗಿದೆ:

«سِبَابُ الْمُسْلِمِ فُسُوقٌ وَقِتَالُهُ كُفْرٌ»

**"ಮುಸ್ಲಿಮನಿಗೆ ಬೈಗುಳವಾಡುವುದು ದುರಾಚಾರವಾಗಿದೆ ಮತ್ತು ಅವನೊಂದಿಗೆ ಹೊಡೆದಾಡುವುದು ಕುಫ್ರ್ ಆಗಿದೆ."** (201)

ಇನ್ನೊಂದು ವಚನವು ಹೀಗಿದೆ.

«لَا تَرْجِعُوا بَعْدِي كُفَّارًا يَضْرِبُ بَعْضُكُمْ رِقَابَ بَعْضٍ»

**199** ಕುರ್‌ಆನ್ 63:3

**200** ಕುರ್‌ಆನ್ 16:112

**201** ಬುಖಾರಿ, ಮುಸ್ಲಿಮ್

**"ನನ್ನ ಬಳಿಕ ನೀವು ಪರಸ್ಪರ ಕೊರಳು ಕತ್ತರಿಸುವುದರ ಮೂಲಕ ಕಾಫಿರ್ ಆಗದಿರಿ."**(202)

ಇದರಲ್ಲಿ ಅಲ್ಲಾಹೇತರರ ಮೇಲೆ ಆಣೆ ಹಾಕುವುದೂ ಬರುತ್ತದೆ. ಪ್ರವಾದಿ(ﷺ) ಹೇಳುತ್ತಾರೆ.

«مَنْ حَلَفَ بِغَيْرِ اللَّهِ فَقَدَ كَفَرَ أَوْ أَشْرَكَ»

**"ಯಾರಾದರೂ ಅಲ್ಲಾಹೇತರರ ಮೇಲೆ ಆಣೆ ಹಾಕಿದರೆ ಅವನು ಕುಫ್ರ್ ಮಾಡಿದನು ಅಥವಾ ಶಿರ್ಕ್ ಮಾಡಿದನು."** (203)

ಒಂದು ಕಡೆಯಲ್ಲಿ ಮಹಾ ಪಾಪದ ಕರ್ತೃನನ್ನೂ ಸತ್ಯ ವಿಶ್ವಾಸಿ ಎನ್ನಲಾಗಿದೆ. ಅಲ್ಲಾಹುವಿನ ವಚನವು ಹೀಗಿದೆ.

﴿ يَٰٓأَيُّهَا ٱلَّذِينَ ءَامَنُواْ كُتِبَ عَلَيۡكُمُ ٱلۡقِصَاصُ فِي ٱلۡقَتۡلَىۖ ﴾

**"ಓ ಸತ್ಯ ವಿಶ್ವಾಸಿಗಳೇ, ನಿಮಗೆ ವಧಿಸಲ್ಪಟ್ಟವರ ಬಗ್ಗೆ ಕಿಸಾಸ್ (ರಕ್ತದ ಬದಲಿಗೆ ರಕ್ತದ ಪ್ರತೀಕಾರ) ಮಾಡುವುದನ್ನು ಕಡ್ಡಾಯಗೊಳಿಸಲಾಗಿದೆ."** (204)

ಇಲ್ಲಿ ಹತ್ಯೆ ಮಾಡಿದವನನ್ನು ಸತ್ಯ ವಿಶ್ವಾಸಿಗಳ ಯಾದಿಯಿಂದ ಬೇರೆ ಮಾಡಲ್ಪಟ್ಟಿಲ್ಲ. ಆದರೆ ಅವನನ್ನು ಪ್ರತೀಕಾರದ ವಲೀಯ ಸಹೋದರನೆಂದು ಹೇಳಲಾಗಿದೆ.

ಅಲ್ಲಾಹನ ವಚನವು ಹೀಗಿದೆ.

﴿ فَمَنۡ عُفِيَ لَهُۥ مِنۡ أَخِيهِ شَيۡءٞ فَٱتِّبَاعُۢ بِٱلۡمَعۡرُوفِ وَأَدَآءٌ إِلَيۡهِ بِإِحۡسَٰنٖۗ ﴾

**"ಮತ್ತು ಒಂದು ವೇಳೆ ಕೊಲೆಗಾರನಿಗೆ ಅವನ (ಹತ್ಯೆಗೀಡಾದವನ) ಸಹೋದರನಿಂದ ಕ್ಷಮೆ ಲಭಿಸಿದರೆ (ಅವನ ವಾರೀಸುದಾರರಿಗೆ) ಇಷ್ಟವಾಗುವ ರೀತಿಯಲ್ಲಿ ಒಪ್ಪಂದವನ್ನು ಪಾಲಿಸಬೇಕಾಗಿದೆ. ರಕ್ತದ ಪರಿಹಾರ ನ್ಯಾಯೋಚಿತವಾಗಿ ನೀಡಬೇಕಾಗಿದೆ."** (205)

ಸಹೋದರ ಎಂದರೆ ಇಲ್ಲಿ ಧರ್ಮದಲ್ಲಿ ಸಹೋದರ ಆಗಿದ್ದಾನೆ. ಇನ್ನೊಂದು ಕಡೆಯಲ್ಲಿ ಹೀಗೆನ್ನಲಾಗಿದೆ.

﴿ وَإِن طَآئِفَتَانِ مِنَ ٱلۡمُؤۡمِنِينَ ٱقۡتَتَلُواْ فَأَصۡلِحُواْ بَيۡنَهُمَاۖ ﴾

**"ಮತ್ತು ಸತ್ಯವಿಶ್ವಾಸಿಗಳ ಪೈಕಿ ಯಾರಾದರೂ ಪರಸ್ಪರ ಜಗಳವಾಡಿದರೆ ಅವರ ಮಧ್ಯೆ ಸಂಧಾನ ಮಾಡಿಸಿರಿ."** (206)

**202** ಬುಖಾರಿ, ಮುಸ್ಲಿಮ್
**203** ತಿರ್ಮುದಿ
**204** ಕುರ್‌ಆನ್ 2:178
**205** ಕುರ್‌ಆನ್ 2:178
**206** ಕುರ್‌ಆನ್ 49:9

ಅಲ್ಲಾಹು ಹೇಳುತ್ತಾನೆ.

﴿ إِنَّمَا ٱلۡمُؤۡمِنُونَ إِخۡوَةٞ فَأَصۡلِحُواْ بَيۡنَ أَخَوَيۡكُمۡۚ ﴾

**“ವಿಶ್ವಾಸಿಗಳು ಪರಸ್ಪರ ಸಹೋದರರು, ಆದ್ದರಿಂದ ಅವರ ನಡುವೆ ಸಂಧಾನ ಮಾಡಿಸಿರಿ.”** (207)

ದೊಡ್ಡ ಕುಫ್ರ್ ಹಾಗೂ ಚಿಕ್ಕ ಕುಫ್ರ್‌ಗಳಿಗಿರುವ ವ್ಯತ್ಯಾಸ ಸಂಕ್ಷಿಪ್ತವಾಗಿ:

1. ದೊಡ್ಡ್ ಕುಫ್ರ್, ಒಬ್ಬನನ್ನು ಇಸ್ಲಾಮ್‌ನಿಂದ ಹೊರಹಾಕುತ್ತದೆ. ಆತನ ಕರ್ಮಗಳನ್ನು ನಿಷ್ಫಲಗೊಳಿಸುತ್ತದೆ. ಆದರೆ ಚಿಕ್ಕ ಕುಫ್ರ್ ಒಬ್ಬ ಮುಸ್ಲಿಮನನ್ನು ಧರ್ಮದಿಂದ ಹೊರಹಾಕುವುದಿಲ್ಲ. ಅಥವಾ ಆತನ ಕರ್ಮಗಳನ್ನು ನಿಷ್ಫಲಗೊಳಿಸುವುದಿಲ್ಲ. ಆದರೆ ಖಂಡಿತವಾಗಿಯೂ ಅವನಲ್ಲಿ ಕೊರತೆಯುಂಟು ಮಾಡುತ್ತದೆ ಹಾಗೂ ಶಿಕ್ಷೆಗೆ ಅರ್ಹನನ್ನಾಗಿಸುತ್ತದೆ.

2. ದೊಡ್ಡ್ ಕುಫ್ರ್ ಅದನ್ನು ಮಾಡಿದವನನ್ನು ಶಾಶ್ವತವಾಗಿ ಜಹನ್ನಮ್‌ಗೆ ಕೊಂಡೊಯ್ಯುತ್ತದೆ. ಆದರೆ ಚಿಕ್ಕ ಕುಫ್ರ್ ಅದರ ಕರ್ತೃನನ್ನು ಶಾಶ್ವತ ಜಹ್ನನಮ್‌ಗೆ ಕೊಂಡೊಯ್ಯುವುದಿಲ್ಲ. ಅಲ್ಲಾಹು ಆತನ ಪಶ್ಚಾತ್ತಾಪವನ್ನು ಸ್ವೀಕರಿಸಬಲ್ಲನು ಮತ್ತು ಅವನನ್ನು ಸಂಪೂರ್ಣವಾಗಿ ರಕ್ಷಿಸಬಲ್ಲನು.

3. ದೊಡ್ಡ್ ಕುಫ್ರ್ ಒಬ್ಬನ ಜೀವ, ಸೊತ್ತುಗಳನ್ನು ಹಲಾಲ್ ಮಾಡುತ್ತದೆ. ಆದರೆ ಚಿಕ್ಕ ಕುಫ್ರ್ ಆತನ ಜೀವ ಸೊತ್ತುಗಳನ್ನು ಹಲಾಲ್‌ಗೊಳಿಸುವುದಿಲ್ಲ.

4. ದೊಡ್ಡ ಕುಫ್ರ್‌ನಿಂದಾಗಿ ಕುಫ್ರ್‌ನ ವ್ಯಕ್ತಿ ಹಾಗೂ ಸತ್ಯವಿಶ್ವಾಸಿಗಳ ನಡುವೆ ಶತ್ರುತ್ವ ಕಡ್ಡಾಯವಾಗಿದೆ. ಸತ್ಯ ವಿಶ್ವಾಸಿಗಳಿಗೆ ದೊಡ್ಡ ಕುಫ್ರ್ ಮಾಡುವವನೊಂದಿಗೆ ಅವನು ಎಷ್ಟೇ ಹತ್ತಿರದವನೇ ಆಗಲಿ ಪ್ರೀತಿ, ಗೆಳೆತನ ಸಮ್ಮತವಲ್ಲ. ಆದರೆ ಚಿಕ್ಕ ಕುಫ್ರ್ ಮಾಡಿದವನೊಂದಿಗೆ ಗೆಳೆತನ ಮಾಡಬಹುದು. ಆದರೆ ಅವನಲ್ಲಿರುವ ವಿಶ್ವಾಸದ ಪ್ರಮಾಣದಷ್ಟು ಪ್ರೀತಿ ಮತ್ತು ಗೆಳೆತನವನ್ನು ಮಾಡಬಹುದಾಗಿದೆ. ಮತ್ತು ಒಬ್ಬನ ನಿಷೇಧ ಹಾಗೂ ಅವಿಧೇಯತೆಗೆ ಅನುಸಾರವಾಗಿ ಅವನೊಂದಿಗೆ ದ್ವೇಷ ಶತ್ರುತ್ವ ಇರಿಸಿಕೊಳ್ಳಬಹುದಾಗಿದೆ.

---

**207** ಕುರ್‌ಆನ್ 49:10

ಅಧ್ಯಾಯ–4

# ನಿಫಾಕ್ (ಕಪಟ ವಿಶ್ವಾಸ): ಅದರ ಪರಿಚಯ ಮತ್ತು ವಿಧಗಳು

ನಿಫಾಕ್‌ನ ವ್ಯಾಖ್ಯೆ

ಭಾಷಾರ್ಥದಲ್ಲಿ ನಿಫಾಕ್: ಇದು ನಾಫಕ ಎಂಬ ಕ್ರಿಯೆಯ ಮೂಲಪದವಾಗಿದೆ, ನಾಫಕ ಯುನಾಫಿಕು, ನಿಫಾಕನ್ ಮತ್ತು ಮುನಾಫಿಕತನ್ ಎಂದು ಹೇಳಲಾಗುತ್ತದೆ. ಈ ಪದವು ಅನ್ನಾಫಿಕಾಅದಿಂದ ಸಂಬಂಧಿತವಾಗಿದೆ. ಅದು ಮುಂಗುಸಿಯ ಬಿಲಗಳಲ್ಲಿ ಒಂದಾಗಿದೆ. ಅದನ್ನು ಒಂದು ದ್ವಾರದಲ್ಲಿ ಹುಡುಕಿದರೆ ಇನ್ನೊಂದು ದ್ವಾರಕ್ಕೆ ಓಡಿಹೋಗುತ್ತದೆ ಮತ್ತು ಅಲ್ಲಿಂದ ಹೊರಬೀಳುತ್ತದೆ. ಪ್ರಸ್ತುತ ಪದವು ನಫಕ್ ಎಂಬುವುದರಿಂದ ಉತ್ಪತ್ತಿಯಾಗಿದೆಯೆಂದೂ ಹೇಳಲಾಗಿದೆ. ಅದರರ್ಥವು ಅಡಗಿಕೊಳ್ಳುವ ಬಿಲವಾಗಿದೆ.

ಶರಈ ಪ್ರಕಾರ ನಿಫಾಕ್‌ನ ಅರ್ಥವು ಇಸ್ಲಾಮ್ ಮತ್ತು ಒಳಿತನ್ನು ಪ್ರಕಟಗೊಳಿಸುವುದು, ಕುಫ್ರ್ ಮತ್ತು ದುಷ್ಟತೆಯನ್ನು ತನ್ನೊಳಗೆ ಅಡಗಿಸಿಡುವುದು. ಇದಕ್ಕೆ ನಿಫಾಕ್ ಎಂದು ಕರೆಯಲಾಗುತ್ತದೆ. ಮುನಾಫಿಕ್ ಎಂದು ಅವನನ್ನು ಕರೆಯಲು ಕಾರಣವೇನೆಂದರೆ ಅವನು ಒಂದು ದ್ವಾರದಿಂದ ಶರೀಅತ್‌ನಲ್ಲಿ ಪ್ರವೇಶಿಸುತ್ತಾನೆ ಮತ್ತು ಇನ್ನೊಂದು ದ್ವಾರದಿಂದ ಹೊರಗೆ ಹೋಗುತ್ತಾನೆ. ಈ ವಿಚಾರವನ್ನು ಅಲ್ಲಾಹನ ಕಡೆಯಿಂದ ಹೀಗೆ ತಿಳಿಸಲಾಗಿದೆ. ಅಲ್ಲಾಹು ಹೇಳುತ್ತಾನೆ:

﴿إِنَّ ٱلْمُنَٰفِقِينَ هُمُ ٱلْفَٰسِقُونَ ۝٦٧﴾

**“ನಿಶ್ಚಯವಾಗಿಯೂ ಮುನಾಫಿಕ್‌ಗಳು ಧರ್ಮಭ್ರಷ್ಟರಾಗಿದ್ದಾರೆ.”** (208)

ಫಾಸಿಕರೆಂದರೆ ಶರೀಅತ್‌ನಿಂದ ಹೊರಹೋಗಿರುವ ಜನರು ಇದೇ ರೀತಿ ಅಲ್ಲಾಹು ಮುನಾಫಿಕರನ್ನು ಕಾಫಿರರಿಗಿಂತಲೂ ಕೆಟ್ಟವರೆಂದು ಹೇಳಿದ್ದಾನೆ. ಅಲ್ಲಾಹುವಿನ ವಚನವು ಹೀಗಿದೆ.

﴿إِنَّ ٱلْمُنَٰفِقِينَ فِى ٱلدَّرْكِ ٱلْأَسْفَلِ مِنَ ٱلنَّارِ﴾

**“ನಿಶ್ಚಯವಾಗಿಯೂ ಮುನಾಫಿಕರು ನರಕದ ಅತ್ಯಂತ ತಳಮಟ್ಟದಲ್ಲಿರುವರು.”** (209)

﴿إِنَّ ٱلْمُنَٰفِقِينَ يُخَٰدِعُونَ ٱللَّهَ وَهُوَ خَٰدِعُهُمْ﴾

**“ನಿಶ್ಚಯವಾಗಿಯೂ ಮುನಾಫಿಕರು ತಮ್ಮ ಕೃತ್ಯಗಳಿಂದ ಅಲ್ಲಾಹನಿಗೆ ವಂಚನೆ ಮಾಡುತ್ತಾರೆ. (ಅವನಿಗೆ ಅವರೇನು ವಂಚನೆ ಮಾಡಲಾರರು). ಅವನು ಅವರನ್ನೇ**

**208** ಕುರ್‌ಆನ್ 9:68

**209** ಕುರ್‌ಆನ್ 4:145

ವಂಚನೆಯಲ್ಲಿ ಹಾಕುತ್ತಾನೆ.” (210)

﴿ يُخَٰدِعُونَ ٱللَّهَ وَٱلَّذِينَ ءَامَنُواْ وَمَا يَخْدَعُونَ إِلَّآ أَنفُسَهُمْ وَمَا يَشْعُرُونَ ۝٩ فِى قُلُوبِهِم مَّرَضٌ فَزَادَهُمُ ٱللَّهُ مَرَضًا ۖ وَلَهُمْ عَذَابٌ أَلِيمٌۢ بِمَا كَانُواْ يَكْذِبُونَ ۝١٠ ﴾

**“ಅವರು ಅಲ್ಲಾಹನನ್ನು ಮತ್ತು ಸತ್ಯ ವಿಶ್ವಾಸಿಗಳನ್ನು ವಂಚಿಸುತ್ತಾರೆ. ಆದರೆ(ವಾಸ್ತವದಲ್ಲಿ) ಅವರು ತಮ್ಮನ್ನೇ ವಂಚಿಸುತ್ತಿದ್ದಾರೆ. ಅದು ಅವರಿಗೆ ತಿಳಿದಿಲ್ಲ. ಇವರ ಹೃದಯದಲ್ಲಿ (ಕುಫ್ರ್) ರೋಗವಿತ್ತು. ಅಲ್ಲಾಹು ಇವರ ರೋಗವನ್ನು ಮತ್ತೂ ಹೆಚ್ಚಿಸಿದನು ಮತ್ತು ಇವರು ಸುಳ್ಳು ಹೇಳಿದುದಕ್ಕಾಗಿ ಇವರಿಗೆ ವೇದನಾಜನಕ ಶಿಕ್ಷೆಯಿದೆ.”** (211)

ನಿಫಾಕ್‌ನ ವಿಧಗಳು

ನಿಫಾಕ್‌ನ ಎರಡು ವಿಧಗಳಿವೆ.

ಒಂದು ವಿಶ್ವಾಸದಲ್ಲಿರುವ ಕಾಪಟ್ಯ :

ಇದರಲ್ಲಿ ಒಬ್ಬ ಮುನಾಫಿಕ್ ಬಾಹ್ಯವಾಗಿ ಇಸ್ಲಾಮ್ ಅನ್ನು ಸ್ವೀಕರಿಸುತ್ತಾನೆ. ಆದರೆ ತನ್ನ ಒಳಗೆ ಕುಫ್ರ್‌ಅನ್ನು ಅಡಗಿಸಿಡುತ್ತಾನೆ. ಇಂತಹ ನಿಫಾಕ್‌ನಿಂದ ಅವನು ಧರ್ಮದಿಂದ ಹೊರಹೋಗುವವನು. ಮಾತ್ರವಲ್ಲ ಅವನು ನರಕದ ಅತ್ಯಂತ ತಳಭಾಗವನ್ನು ತಲುಪುವವನು. ಅಲ್ಲಾಹನು ಹಲವು ಕೆಟ್ಟ ಪದಗಳಿಂದ ಅವರನ್ನು ಸಂಬೋಧಿಸಿರುವನು. ಅವರನ್ನು ಕಾಫಿರ್ ಎಂದಿರುವನು. ವಿಶ್ವಾಸವಿಲ್ಲದವರು ಎಂದಿರುವನು, ಧರ್ಮ ಹಾಗೂ ಧರ್ಮವನ್ನು ಅನುಸರಿಸುವವರನ್ನು ಗೇಲಿ ಮಾಡುವವರು ಎಂದಿರುವನು. ಇಸ್ಲಾಮಿನೊಂದಿಗೆ ಹಗೆತನದಲ್ಲಿ ಪಾಲುಗೊಳ್ಳಲಿಕ್ಕಾಗಿ ಇಸ್ಲಾಮಿನ ಶತ್ರುಗಳ ಕಡೆಗೆ ಸಂಪೂರ್ಣವಾಗಿ ವಾಲಿದವರು ಎಂದಿರುವನು. ಇಂತಹ ಮುನಾಫಿಕ್‌ಗಳು ಎಲ್ಲಾ ಕಾಲದಲ್ಲೂ ಕಾಣಸಿಗುತ್ತಾರೆ. ವಿಶೇಷತಃ ಇಸ್ಲಾಮ್‌ನ ಶಕ್ತಿಯು ಹೆಚ್ಚಾದಾಗ ಮುನಾಫಿಕರು ನೇರವಾಗಿ ಇಸ್ಲಾಮನ್ನು ಎದುರಿಸಲಾರರು. ಬದಲಾಗಿ ಇವರು ನಾವೂ ಕೂಡಾ ನಿಮ್ಮೊಂದಿಗಿದ್ದೇವೆ ಎಂದು ಹೇಳುತ್ತಾರೆ. ಏಕೆಂದರೆ ಒಳಗಿಂದೊಳಗೆ ಇಸ್ಲಾಮ್ ಹಾಗೂ ಮುಸ್ಲಿಮರ ವಿರುದ್ಧ ಸಂಚು ಹೂಡಬಹುದೆಂಬ ಉದ್ದೇಶದಿಂದಾಗಿದೆ. ಮುಸ್ಲಿಮರ ಮಧ್ಯೆ ಇದ್ದುಕೊಂಡು ತಮ್ಮ ಜೀವ ಹಾಗೂ ಸಂಪತ್ತಿಗೆ ರಕ್ಷಣೆ ಸಿಗಲಿ ಎಂದೂ ಭಾವಿಸಿರುತ್ತಾರೆ. ಒಬ್ಬ ಮುನಾಫಿಕ್ ಬಾಹ್ಯವಾಗಿ ಅಲ್ಲಾಹು, ಆತನ ಮಲಕ್‌ಗಳು, ಆತನ ಗ್ರಂಥಗಳು ಮತ್ತು ಪ್ರವಾದಿಗಳು ಮತ್ತು ಅಂತ್ಯದಿನದ ಮೇಲೆ ವಿಶ್ವಾಸದ ಘೋಷಣೆ ಮಾಡುತ್ತಾನೆ. ಆದರೆ ಆಂತರಿಕವಾಗಿ ಈ ವಿಷಯಗಳಿಂದ ಬೇಸತ್ತುಕೊಳ್ಳುತ್ತಾನೆ ಮತ್ತು ಇದರ ವಾಸ್ತವತೆಯನ್ನು ಸುಳ್ಳಾಗಿಸುತ್ತಾನೆ. ಅಲ್ಲಾಹನ ಮೇಲೆ ವಿಶ್ವಾಸ ತರುತ್ತಾನೆ. ಆದರೆ ಅಲ್ಲಾಹು ತನ್ನ ಒಬ್ಬ

---

**210** ಕುರ್‌ಆನ್ 4:145

**211** ಕುರ್‌ಆನ್ 2:9–10

ದಾಸನ ಮೇಲೆ ತನ್ನ ವಚನವನ್ನು ಅವತೀರ್ಣಗೊಳಿಸಿರುವನು ಮತ್ತು ಆ ವ್ಯಕ್ತಿಯನ್ನು ಸಂದೇಶವಾಹಕರನ್ನಾಗಿ ಮಾಡಿರುವನು. ತನ್ನ ಅನುಮತಿಯಂತೆ ಅವರು ಜನರಿಗೆ ಮಾರ್ಗದರ್ಶನ ಮಾಡಲೆಂದು, ತನ್ನ ಶಿಕ್ಷೆಯನ್ನು ತಿಳಿಸಲೆಂದು ಅದರ ಕುರಿತು ಜನರನ್ನು ಹೆದರಿಸಲೆಂದು ಎಂಬುದನ್ನು ಇವರು ನಂಬುವುದಿಲ್ಲ. ಅಲ್ಲಾಹು ಈ ಮುನಾಫಿಕ್‌ಗಳ ಮುಖವಾಡವನ್ನು ಕಳಚಿ ಹಾಕಿರುವನು ಖುರ್‌ಆನ್‌ನಲ್ಲಿ ಇವರ ಬಂಡವಾಳವನ್ನು ಬಯಲು ಮಾಡಿರುವನು. ಈ ಮೂಲಕ ಸಜ್ಜನದಾತರೂ ಕೂಡಾ ಕಪಟ ವಿಶ್ವಾಸ ಹಾಗೂ ಕಪಟ ವಿಶ್ವಾಸಿಗಳಿಂದ ಎಚ್ಚೆತ್ತುಕೊಳ್ಳಬೇಕೆಂದು ಅವರ ಚಟುಚವಟಿಕೆಗಳನ್ನು ಸ್ಪಷ್ಟಪಡಿಸಿರುವನು.

ಅಲ್ಲಾಹು ಸೂರಃ “ಅಲ್ ಬಕರದ ಪ್ರಾರಂಭದಲ್ಲಿ ಜನರ ಮೂರು ವಿಧವನ್ನು ತಿಳಿಸಿರುವನು. ಸತ್ಯ ವಿಶ್ವಾಸಿ, ಸತ್ಯ ನಿಷೇಧಿ ಮತ್ತು ಕಪಟ ವಿಶ್ವಾಸಿ ಮುಸ್ಲಿಮರ ಕುರಿತು ನಾಲ್ಕು ಆಯತ್‌ಗಳನ್ನು, ಕಾಫಿರರ ಕುರಿತು ಎರಡು ವಚನಗಳನ್ನು ಆದರೆ ಮುನಾಫಿಕರ ಕುರಿತು ಹದಿಮೂರು ಆಯತ್ ಗಳನ್ನು ಇಳಿಸಿರುವನು. ಇದು ಕೇವಲ ಮುನಾಫಿಕರ ಹೆಚ್ಚಳ, ಜನರಲ್ಲಿ ಕಪಟ ವಿಶ್ವಾಸವು ಹರಡುವ ಹಾಗೂ ಇಸ್ಲಾಮೀ ರಾಜ್ಯದಲ್ಲಿ ದೊಡ್ಡ ಫಿತ್ನಗಳನ್ನುಂಟು ಮಾಡುವ ಸಾಧ್ಯತೆ(ಯ ಕಾರಣದಿಂದಾಗಿದೆ) ಹೀಗೆ ಮುನಾಫಿಕರ ಕುತಂತ್ರಗಳಿಂದಾಗಿ ಇಸ್ಲಾಮ್ ತೀವ್ರ ಪರೀಕ್ಷೆಗೊಳಗಾಯಿತು. ಏಕೆಂದರೆ ಇವರು ಇಸ್ಲಾಮ್‌ನ ಸ್ಪಷ್ಟ ಶತ್ರುಗಳಾಗಿದ್ದರೂ ಕೂಡಾ ಇಸ್ಲಾಮ್‌ನ ಹಣೆಪಟ್ಟಿ ಹಾಕಿಕೊಂಡಿರುತ್ತಾರೆ. ಜನರು ಇವರನ್ನು ಇಸ್ಲಾಮ್‌ನ ಸಹಾಯಕರೆಂದು ತಿಳಿದುಕೊಳ್ಳುತ್ತಾರೆ. ಇವರು ತಮ್ಮ ಶತ್ರುತ್ವದ ಅನೇಕ ಸಂಚುಗಳನ್ನು ಹೊರ ಹಾಕುತ್ತಿರುತ್ತಾರೆ. ಇದರಿಂದ ಮೂಢರು ಇದು ಧರ್ಮದಲ್ಲಿ ಜ್ಞಾನ ಹಾಗೂ ಸುಧಾರಣೆಯ ಕಾರ್ಯವಾಗಿದೆಯೆಂದು ತಿಳಿದುಕೊಳ್ಳುತ್ತಾರೆ. ಅದರೆ ವಾಸ್ತವದಲ್ಲಿ ಅವರು ಸುಧಾರಣೆ ಮಾಡುವುದಲ್ಲ. ಬದಲಾಗಿ ಮೂಢತನ ಹಾಗೂ ದೊಂಬಿಯ ಪರಮಾವಧಿಯಾಗಿದೆ.

ಈ ನಿಫಾಕ್‌ಗೆ ಆರು ವಿಧಗಳಿವೆ

1) ಅಲ್ಲಾಹನ ಸಂದೇಶವಾಹಕರನ್ನು(ﷺ) ಸುಳ್ಳಾಗಿಸುವುದು.

2) ಅಲ್ಲಾಹನ ಸಂದೇಶವಾಹಕರಿಂದ(ﷺ) ತರಲ್ಪಟ್ಟ ಶರೀಅತ್‌ನ ಕೆಲವು ಭಾಗವನ್ನು ಸುಳ್ಳಾಗಿಸುವುದು.

3) ಪ್ರವಾದಿ(ﷺ)ರನ್ನು ದ್ವೇಷಿಸುವುದು.

4) ಅಲ್ಲಾಹನ ಸಂದೇಶವಾಹಕರ(ﷺ)ರವರು ತಂದ ಶರೀಅತ್‌ನ ಮೇಲೆ ದ್ವೇಷವಿಡುವುದು.

5) ಅಲ್ಲಾಹನ ಸಂದೇಶವಾಹಕ(ﷺ)ರ ಧರ್ಮದ ಹಿನ್ನಡೆಯಿಂದ ಸಂತೋಷಗೊಳ್ಳುವುದು.

6) ಅಲ್ಲಾಹನ ಸಂದೇಶವಾಹಕರು(ﷺ)ರವರ ಧರ್ಮವು ವಿಜಯಯಾಗುವುದರಿಂದ ದುಃಖ ಪಡುವುದು.

ಎರಡು ಕೃತಿಯಲ್ಲಿರುವ ಕಾಪಟ್ಯ : ಹೃದಯದಲ್ಲಿ ಈಮಾನ್ ಇದ್ದರೂ ಮುನಾಫಿಕರ ಕೆಲವು ಕೃತಿಗಳನ್ನು ಹೊಂದಿಕೊಂಡಿರುವುದು. ಈ ಕಾಪಟ್ಯದಿಂದಾಗಿ ಒಬ್ಬನು ಧರ್ಮದಿಂದ ಹೊರಗೆ ಹೋಗುವುದಿಲ್ಲ. ಆದರೆ ಇದು ಹೊರಗೆ ಹೋಗಲಿಕ್ಕಿರುವ ದಾರಿಯಾಗಿರುತ್ತದೆ. ಇಂತಹ ವ್ಯಕ್ತಿಯ ಒಳಗೆ ವಿಶ್ವಾಸ, ಕಾಪಟ್ಯ ಎರಡೂ ಇರುವುದು. ಈ ಕಾಪಟ್ಯದ ಚೀಲವು ಭಾರವಾದಾಗ ಅವನು ಸ್ಪಷ್ಟ ಕಪಟ ವಿಶ್ವಾಸಿಯಾಗುವನು. ಪ್ರವಾದಿ(ﷺ)ರ ಈ ವಚನವು ಇದಕ್ಕೆ ಆಧಾರವಾಗಿದೆ.

«أَرْبَعٌ مَنْ كُنَّ فِيهِ كَانَ مُنَافِقًا خَالِصًا وَمَنْ كَانَتْ فِيهِ خَصْلَةٌ مِنْهُنَّ كَانَتْ فِيهِ خَصْلَةٌ مِنَ النِّفَاقِ حَتَّى يَدَعَهَا إِذا اؤْتُمِنَ خَانَ وَإِذَا حَدَّثَ كَذَبَ وَإِذَا عَاهَدَ غَدَرَ وَإِذَا خَاصَمَ فَجَرَ»

**“ನಾಲ್ಕು ವಿಷಯಗಳು ಒಬ್ಬನಲ್ಲಿದ್ದರೆ ಅವನು ಸ್ಪಷ್ಟ ಮುನಾಫಿಕ್ ಆಗಿರುವನು. ಮತ್ತು ಇದರಲ್ಲಿ ಯಾವುದಾದರೂ ಒಂದು ಇದ್ದರೆ ಅದನ್ನು ತೊರೆಯುವವರೆಗೂ ಅವನಲ್ಲಿ ಕಾಪಟ್ಯದ ಒಂದಂಶವಿರುವುದು. ಅವನಲ್ಲಿ ನಂಬಿಕೆಯಿಟ್ಟರೆ ಅವನು ಮೋಸಮಾಡುತ್ತಾನೆ. ಮಾತನಾಡಿದರೆ ಸುಳ್ಳು ಹೇಳುತ್ತಾನೆ. ವಚನ ನೀಡಿದರೆ ಅದನ್ನು ಉಲ್ಲಂಘಿಸುವನು, ಜಗಳವಾಡಿದರೆ ಬಯ್ಗುಳಗಳನ್ನು ಹೇಳುತ್ತಾನೆ.”** [212]

ಆದ್ದರಿಂದ ಒಬ್ಬನ ಒಳಗೆ ಈ ನಾಲ್ಕು ಅಂಶಗಳೂ ಇದ್ದರೆ ಅವನ ಒಳಗೆ ಎಲ್ಲಾ ಲಕ್ಷಣಗಳು ಸೇರಿರುವುದು. ಮತ್ತು ಒಬ್ಬನ ಒಳಗೆ ಅದರ ಒಂದು ಅಂಶವಿದ್ದರೆ ಅವನ ಒಳಗೆ ಕಪಟ ವಿಶ್ವಾಸದ ಒಂದು ಅಭ್ಯಾಸವಿರುವುದು. ಒಬ್ಬ ದಾಸನ ಒಳಗೆ ಒಳ್ಳೆಯ ಲಕ್ಷಣಗಳೂ ಇರುತ್ತವೆ. ಮತ್ತು ಕೆಟ್ಟ ಲಕ್ಷಣಗಳು ಇರುತ್ತವೆ. ಕೆಲವು ಈಮಾನ್‌ನ ಲಕ್ಷಣಗಳು ಇರುತ್ತದೆ ಮತ್ತು ಕೆಲವು ಕುಫ್ರ್ ನ, ಕಾಪಟ್ಯದ ಲಕ್ಷಣಗಳು ಇರುತ್ತವೆ. ಮತ್ತು ತನ್ನ ಒಳ್ಳೆ, ಕೆಟ್ಟ ಕರ್ಮಗಳ ಆಧಾರದಲ್ಲಿ ಸಮಾನ, ಸತ್ಫಲ, ಶಿಕ್ಷೆಗಳ ಹಕ್ಕುದಾರನಾಗುವನು. ಕೃತಿಯ ಕಾಪಟ್ಯದಲ್ಲಿ ಸಾಮೂಹಿಕ ನಮಾಝ್‌ಗೆ ಹೋಗುವುದಕ್ಕೆ ಸುಸ್ತು–ಆಲಸ್ಯ ಕೂಡಾ ಸೇರಿದೆ. ಆದ್ದರಿಂದ ಇದು ಮುನಾಫಿಕರ ಲಕ್ಷಣಗಳಲ್ಲೊಂದು, ಕಾಪಟ್ಯವು ಅತ್ಯಂತ ಕೆಟ್ಟ ಹಾಗೂ ಅಪಾಯಕಾರಿ ವಿಷಯ. ಈ ಕಾರಣದಿಂದಲೇ ಸಹಾಬಿಗಳು(ﷺ) ನಿಫಾಕ್ ಯಾನೆ ಕಾಪಟ್ಯಕ್ಕೆ ಬಹಳ ಹೆದರುತ್ತಿದ್ದರು. ಇಬ್ನ್ ಅಲೀ ಮುಲೈಕಾ ಹೇಳುತ್ತಾರೆ: ನಾನು ಮೂವತ್ತು ಸಹಾಬಿಗಳನ್ನು ನೋಡಿದ್ದೇನೆ ಮತ್ತು ಅವರೆಲ್ಲರೂ ತಮ್ಮೊಳಗೆ ಕಾಪಟ್ಯದ ಬಗ್ಗೆ ಹೆದರುವುದು ಕಂಡಿದ್ದೇನೆ.

---

**212** ಬುಖಾರಿ, ಮುಸ್ಲಿಮ್

ದೊಡ್ಡ ಕಾಪಟ್ಯ ಹಾಗೂ ಚಿಕ್ಕ ಕಾಪಟ್ಯದ ನಡುವಿನ ವ್ಯತ್ಯಾಸಗಳು

1. ದೊಡ್ಡ ಕಾಪಟ್ಯ ಒಬ್ಬ ಮುಸ್ಲಿಮನನ್ನು ಧರ್ಮದಿಂದ ಹೊರಗೆಸೆಯುತ್ತದೆ. ಆದರೆ ಚಿಕ್ಕ ಕಾಪಟ್ಯದಿಂದ ಒಬ್ಬ ಮುಸ್ಲಿಮನು ಧರ್ಮದಿಂದ ಹೊರಗೆ ಹೋಗುವುದಿಲ್ಲ.

2. ದೊಡ್ಡ ಕಾಪಟ್ಯದಲ್ಲಿ ವಿಶ್ವಾಸದೊಳಗೆ ಬಾಹ್ಯ ಮತ್ತು ಆಂತರಿಕವಾಗಿ ವ್ಯತ್ಯಾಸವಿರುತ್ತದೆ ಮತ್ತು ಚಿಕ್ಕ ಕಾಪಟ್ಯದಲ್ಲಿ ವಿಶ್ವಾಸದ ಬದಲು ಕರ್ಮದ ಒಳಗೆ ಬಾಹ್ಯ ಮತ್ತು ಆಂತರಿಕದಲ್ಲಿ ವ್ಯತ್ಯಾಸವಿರುವುದು.

3. ದೊಡ್ಡ ಕಾಪಟ್ಯವು ಓರ್ವ ಸತ್ಯ ವಿಶ್ವಾಸಿಯಲ್ಲಿ ಉಂಟಾಗಲಾರದು. ಆದರೆ ಚಿಕ್ಕ ಕಾಪಟ್ಯವು ಸತ್ಯ ವಿಶ್ವಾಸಿಯಲ್ಲಿ ಉಂಟಾಗಬಹುದು.

4. ದೊಡ್ಡ ಕಾಪಟ್ಯವನ್ನು ಹೊಂದಿರುವವನು ಹೆಚ್ಚಾಗಿ ತೌಬಾ ಮಾಡಲಾರನು, ಒಂದು ವೇಳೆ ತೌಬಾ ಮಾಡಿದರೂ ಅಲ್ಲಾಹನ ಬಳಿ ಅದರ ಸ್ವೀಕಾರದ ವಿಷಯದಲ್ಲಿ ಭಿನ್ನಭಿಪ್ರಾಯವಿದೆ. ಆದರೆ ಚಿಕ್ಕ ಕಾಪಟ್ಯವಿರುವವನಿಗೆ ತೌಬಾದ ಸೌಭಾಗ್ಯವು ಸಿಗುವುದು ಮತ್ತು ಅಲ್ಲಾಹು ಆತನ ತೌಬಾವನ್ನು ಸ್ವೀಕರಿಸುವನು.

ಶೇಖುಲ್ ಇಸ್ಲಾಮ್ ಇಬ್ನ್ ತೈಮಿಯ್ಯ(ﷺ) ಹೇಳುತ್ತಾರೆ: ಹೆಚ್ಚಾಗಿ ಏನಾಗುತ್ತದೆ ಎಂದರೆ ಒಬ್ಬ ಸತ್ಯ ವಿಶ್ವಾಸಿ ದಾಸನು ಕಾಪಟ್ಯದ ಯಾವುದಾದರೊಂದು ವಿಷಯದಲ್ಲಿ ಸಿಕ್ಕಿ ಹಾಕಿಕೊಳ್ಳುತ್ತಾನೆ. ಬಳಿಕ ಅಲ್ಲಾಹು ಆತನ ಪಶ್ಚಾತ್ತಾಪವನ್ನು ಸ್ವೀಕರಿಸುತ್ತಾನೆ. ಕೆಲವೊಮ್ಮೆ ಅವನ ಮನಸ್ಸಿನಲ್ಲಿ ಇಂತಹ ವಸ್ತು ಬರುತ್ತದೆ. ಅದರಿಂದ ಕಾಪಟ್ಯವು ಖಂಡಿತ ಬರುವುದು. ಆದರೆ ಅಲ್ಲಾಹು ಅದನ್ನು ಅವನ ಹೃದಯದಿಂದ ದೂರಗೊಳಿಸುತ್ತಾನೆ.

ಒಬ್ಬ ಸತ್ಯ ವಿಶ್ವಾಸಿ ದಾಸನಿಗೆ ಕೆಲವೊಮ್ಮೆ ಶೈತಾನನ ದುಷ್ಪ್ರೇರಣೆಗಳು ಮತ್ತು ಕುಫ್ರ್‌ನ ದುಷ್ಪ್ರೇರಣೆಗಳು ಎಡತಾಗುವುವು. ಇದರಿಂದಾಗಿ ಆತನ ಹೃದಯದಲ್ಲಿ ಉಸಿರುಗಟ್ಟುವಿಕೆ ಉಂಟಾಗುವುದು. ಹೇಗೆಂದರೆ ಸಹಾಬಿಗಳು(ﷺ) ಹೀಗೆ ಹೇಳಿದ್ದರು. ಅಲ್ಲಾಹನ ಸಂದೇಶವಾಹಕರೇ, ನಮ್ಮಲ್ಲಿ ಕೆಲವು ಮಂದಿ ತಮ್ಮ ಹೃದಯದಲ್ಲಿ ಇಂತಹ ವಸ್ತುವನ್ನು ಅನುಭವಿಸುತ್ತಾರೆ, ಅದನ್ನು ಹೇಳುವುದಕ್ಕಿಂತ ಅವರು ಆಕಾಶದಿಂದ ಭೂಮಿಗೆ ಬಿದ್ದು ಸಾಯುವುದೇ ಮೇಲೆಂದು ತಿಳಿಯುತ್ತಾರೆ. ಅವರು(ﷺ) ಹೇಳಿದರು:

«ذَلِكَ صَرِيحُ الْإِيمَانِ»

**“ಇದು ಈಮಾನ್‌ನ ಬಹಿರಂಗ ಚಿಹ್ನೆಯಾಗಿದೆ.”** [213]

ಇನ್ನೊಂದು ವರದಿಯಲ್ಲಿ ಹೀಗಿದೆ.

ಅವರು ತಮ್ಮ ಹೃದಯದ ಮಾತನ್ನು ಬಾಯಲ್ಲಿ ಹೇಳುವುದನ್ನು ಬಹಳ ದೊಡ್ಡ ಹಾಗೂ ಅಪಾಯಕಾರಿಯಾಗಿ ಭಾವಿಸುವರು. (ಇದನ್ನು ಹೇಳಿ) ಪ್ರವಾದಿ(ﷺ) ಹೇಳಿದರು.

**213** ಮುಸ್ಲಿಮ್, ಅಹ್ಮದ್

"ಅಲ್ಲಾಹನಿಗೆ ಸ್ತುತಿಗಳು ಅವನು ಶೈತಾನನ ಕುತಂತ್ರವನ್ನು ದುಷ್ಪ್ರೇರಣೆಗೆ ಬದಲಿಸಿದನು." ಅಂದರೆ ಈ ಕರಾಹಿಯ್ಯತ್(ಅಪ್ರಿಯತೆ)ನ ಬಳಿಕವೂ ಇಂತಹ ಸಂಶಯಉಂಟಾಗುವುದು ಮತ್ತು ಅದನ್ನು ತನ್ನ ಹೃದಯದಿಂದ ತೆಗೆದು ಹಾಕುವುದು ಸ್ಪಷ್ಟ ಈಮಾನ್‌ನ ನಿಶಾನೆಯಾಗಿದೆ. (214)

ಇನ್ನು ದೊಡ್ಡ ಕಾಪಟ್ಯದ ಬಗ್ಗೆ ಹೇಳುವುದಾದರೆ ಅದರಲ್ಲಿ ಮುಳುಗಿರುವವರ ಬಗ್ಗೆ ಸರ್ವಶ್ರೇಷ್ಠನಾದ ಅಲ್ಲಾಹು ಹೀಗೆಂದಿರುವನು.

﴿ صُمٌّۢ بُكۡمٌ عُمۡيٞ فَهُمۡ لَا يَرۡجِعُونَ ١٨ ﴾

**"ಇವರು ಕಿವುಡರು, ಮೂಕರು, ಅಂಧರೂ ಆಗಿರುವವರು ಇವರು (ಯಾವುದೇ ರೀತಿಯಲ್ಲೂ ನೇರದಾರಿಗೆ) ಮರಳಲಾರರು."** (215)

ಅಂದರೆ ಅವರು ಆಂತರಿಕವಾಗಿ ಇಸ್ಲಾಮ್‌ನೆಡೆಗೆ ಮರಳಲಾರರು. ಇಂತಹ ಜನರ ಬಗ್ಗೆ ಅಲ್ಲಾಹನು ಹೀಗೆಂದಿರುವನು.

﴿ أَوَلَا يَرَوۡنَ أَنَّهُمۡ يُفۡتَنُونَ فِي كُلِّ عَامٖ مَّرَّةً أَوۡ مَرَّتَيۡنِ ثُمَّ لَا يَتُوبُونَ وَلَا هُمۡ يَذَّكَّرُونَ ١٢٦ ﴾

**"ಇವರು ನೋಡುವುದಿಲ್ಲವೇ, ಪ್ರತಿವರ್ಷವು ಒಂದು ಅಥವಾ ಎರಡು ಬಾರಿ ಸಂಕಷ್ಟದಲ್ಲಿ ಸಿಲುಕಿಸಲ್ಪಡುತ್ತಾರೆ. ಆದರೂ ಇವರು ಪಶ್ಚಾತ್ತಾಪ ಪಡುವುದಿಲ್ಲ. ಮತ್ತು ಉಪದೇಶವನ್ನು ಹಿಡಿಯುವುದಿಲ್ಲ."** (216)

ಶೈಖುಲ್ ಇಸ್ಲಾಮ್ ಇಬ್ನ್ ತೈಮಿಯ್ಯ ಹೇಳುತ್ತಾರೆ: **"ಇವರ ಪಶ್ಚಾತ್ತಾಪವು ಸ್ವೀಕಾರವಾಗುವ ಕುರಿತು ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದೆ. ಏಕೆಂದರೆ ಇವರ ಅಂತರಂಗದ ಸ್ಥಿತಿಯನ್ನು ಅರಿತುಕೊಳ್ಳುವುದು ಕಷ್ಟಕರವಾಗಿದೆ. ಏಕೆಂದರೆ ಅವರು ಯಾವಾಗಲೂ ಇಸ್ಲಾಮನ್ನೇ ಪ್ರಕಟಿಸುತ್ತಿರುತ್ತಾರೆ."** (217)

---

**214** ನೋಡಿರಿ ಕಿತಾಬುಲ್ ಈಮಾನ್ ಪುಟ 238

**215** ಕುರ್‌ಆನ್ 2:18

**216** ಕುರ್‌ಆನ್ 9:126

**217** ಮಜ್‌ಮೂಅಲ್ ಫತಾವಾ 28/434–435

## ಅಧ್ಯಾಯ–5

# ಜಾಹಿಲಿಯ್ಯತ್(ಮೌಢ್ಯ), ಫಿಸ್ಕ್ (ಕರ್ಮಭ್ರಷ್ಟತೆ), ದ್ವಲಾಲ್ (ಮಾರ್ಗಭ್ರಷ್ಟತೆ), (ರಿದ್ದಃ) ಧರ್ಮತ್ಯಾಗ ಮುಂತಾದವುಗಳ ವಾಸ್ತವಿಕತೆ

ಇವುಗಳ ವಿಧಗಳು ಮತ್ತು ನಿಯಮಗಳು

1. ಜಾಹಿಲಿಯ್ಯ(ಮೌಢ್ಯ)

ಅಲ್ಲಾಹು ಅವನ ಪ್ರವಾದಿ, ಧರ್ಮ ಮತ್ತು ಶರೀಅತ್‌ಗಳ ತಿಳುವಳಿಕೆಯಿಲ್ಲದಿರುವುದು ಕುಲವಂಶದ ಬಗ್ಗೆ ದುರಭಿಮಾನ, ಅಹಂಕಾರ ಹಾಗೂ ಗರ್ವ, ಇದು ಇಸ್ಲಾಮ್‌ಗಿಂತ ಮೊದಲಿನ ಅರಬರ ಸ್ಥಿತಿಯಾಗಿತ್ತು. ಇದನ್ನು ಜಾಹಿಲಿಯ್ಯಃ ಎನ್ನಲಾಗುತ್ತದೆ. (218)

ಜಾಹಿಲಿಯ್ಯತ್ ಜಹಲ್‌ನಿಂದ ಬಂದುದಾಗಿದೆ. ಅದು ಇಲ್ಮ್‌ನ ಅಭಾವವಾಗಿದೆ. ಇಲ್ಲವೇ ಇಲ್ಮನ್ನು ಅನುಸರಿಸುವುದರ ಕೊರತೆಯಾಗಿದೆ. ಇಬ್ನುತೈಮಿಯ್ಯ(ﷺ) ಹೇಳುತ್ತಾರೆ. ಒಬ್ಬನಿಗೆ ಸತ್ಯದ ಜ್ಞಾನವಿಲ್ಲದಿದ್ದರೆ ಅದು ಸ್ಪಷ್ಟ ಮೌಢ್ಯ ಆಗಿರುತ್ತದೆ. ಆದರೆ ಅವನ ವಿಶ್ವಾಸವು ಸತ್ಯದ ವಿರುದ್ಧವಾಗಿದ್ದರೆ ಅದು ಜಹಲ್ ಮುರಕ್ಕಬ್ ಆಗಿರುತ್ತದೆ. ಮತ್ತು ಒಬ್ಬನಿಗೆ ಸತ್ಯದ ಜ್ಞಾನವಿದ್ದೂ ಸತ್ಯದ ವಿರುದ್ಧ ಮಾತನಾಡಿದರೆ ಅಥವಾ ಸತ್ಯದ ಜ್ಞಾನವಿಲ್ಲದೇ ಸತ್ಯದ ವಿರುದ್ಧ ಮಾತನಾಡುತ್ತಾನೆಂದರೆ ಅವನು ಜಾಹಿಲ್ (ಮೂಢ) ಆಗಿರುವನು. ಇದರಿಂದ ತಿಳಿಯುವುದೇನೆಂದರೆ ಪ್ರವಾದಿವರ್ಯರ(ﷺ)ರ ಆಗಮನಕ್ಕೆ ಮೊದಲು ಜನರು ಇದೇ ರೀತಿಯ ಜಹಲ್‌ನಲ್ಲಿ ಸೇರಿಕೊಂಡ ಮೂಢತನದಲ್ಲಿದ್ದರು. ಈ ಎಲ್ಲಾ ಮಾತುಗಳು ಹಾಗೂ ಕೃತಿಗಳು ಒಬ್ಬ ಮೂಢನು ಹುಟ್ಟು ಹಾಕಿದಂತಹದಾಗಿತ್ತು. ಮತ್ತು ಇದನ್ನು ಮೂಢ ಜನರು ಮಾಡುತ್ತಿದ್ದರು.

ಇದೇ ರೀತಿ ಪ್ರವಾದಿಗಳು(ﷺ) ತಂದಿರುವಂತಹ ಶರೀಅತ್‌ಗಳ ವಿರುದ್ಧವಿರುವಂತಹ ಯಹೂದಿಯತೆಯಾಗಿರಲಿ, ಕ್ರಿಸ್ತೀಯತೆಯಾಗಿರಲಿ, ಇನ್ನಾವುದೇ ತತ್ವಸಿಧ್ಧಾಂತವಾಗಿರಲಿ ಸಕಲವುಗಳು ಜಾಹಿಲಿಯ್ಯತ್ ಆಗಿರುತ್ತವೆ. ಇದನ್ನು 'ಜಾಹಿಲಿಯ್ಯತ್ ಆಮ್ಮ್' (ಸಾರ್ವತ್ರಿಕ ಮೂಢತೆ) ಎನ್ನಲಾಗುತ್ತದೆ. ಆದರೆ ಪ್ರವಾದಿ(ﷺ)ರ ಆಗಮನದ ಬಳಿಕ ಜಾಹಿಲಿಯ್ಯತ್ ಕೆಲವು ನಾಡುಗಳಲ್ಲಿರಬಹುದು. ಕೆಲವು ಕಡೆ ಇರದೇ ಇರಬಹುದು. ಹೇಗೆಂದರೆ ಕುಫ್ರ್‌ನ ನಾಡುಗಳಲ್ಲಿರುವಂತೆ ಯಾವುದೇ ವ್ಯಕ್ತಿಯ ಇಸ್ಲಾಮೀ ಪೂರ್ವದ ಜೀವನವನ್ನು ನಾವು ಜಾಹಿಲಿಯ್ಯತ್‌ನೊಂದಿಗೆ ವ್ಯಾಖ್ಯಾನಿಸಬಹುದು. ಅವನು ಇಸ್ಲಾಮ್‌ನ ದೇಶದಲ್ಲಿದ್ದರೂ ಕೂಡಾ, ಆದರೆ ಅಲ್ಲಾಹನ ಸಂದೇಶವಾಹಕರು(ﷺ)ರ ಆಗಮನದ ಬಳಿಕ 'ಜಾಹಿಲಿಯ್ಯತ್ ಆಮ್ಮ್' ಇರುವುದಿಲ್ಲ. ಏಕೆಂದರೆ ಪುನರುತ್ಥಾನ ದಿವಸದವರೆಗೆ ಪ್ರತಿಯೊಂದು ಕಾಲಘಟ್ಟದಲ್ಲೂ ಮುಹಮ್ಮದ್(ﷺ)ರ ಉಮ್ಮತ್‌ನ ಒಂದು ಸಮೂಹವು

---

**218** ಅನ್ನಿಹಾಯ–ಇಬ್ನುಲ್ ಅಸೀರ್ 1/323

ಸತ್ಯದಲ್ಲಿ ಸ್ಥಿರವಾಗಿರುವುದು. ಆದರೆ ಸೀಮಿತ ಜಾಹಿಲಿಯ್ಯತ್ ಈಗಲೂ ಕೆಲವು ಮುಸ್ಲಿಮ್ ರಾಷ್ಟ್ರಗಳಲ್ಲಿ ಹಾಗೂ ಬಹಳ ಮುಸ್ಲಿಮರಲ್ಲಿ ಕಾಣಬಹುದು. ಪ್ರವಾದಿ(ﷺ) ರ ವಚನವು ಹೀಗಿದೆ.

«أَرْبَعٌ فِي أُمَّتِي مِنْ أَمْرِ الْجَاهِلِيَّةِ .....»

**"ನನ್ನ ಸಮುದಾಯದಲ್ಲಿ ನಾಲ್ಕು ವಸ್ತುಗಳು ಜಾಹಿಲಿಯ್ಯತ್‌ನ ಸೂಚನೆಗಳಾಗಿವೆ....."**(219)

ಒಮ್ಮೆ ಪ್ರವಾದಿ(ﷺ) ಅಬೂದರ್‌ರೊಂದಿಗೆ ಹೇಳಿದರು:

«إِنَّكَ امْرِؤٌ فِيكَ جَاهِلِيَّةٌ»

**"ನೀನು ಎಂತಹ ವ್ಯಕ್ತಿಯೆಂದರೆ ಈಗಲೂ ನಿನ್ನಲ್ಲಿ ಜಾಹಿಲಿಯ್ಯತ್ ಇದೆ."** (220)

ಜಾಹಿಲಿಯ್ಯತ್ ಜಹಲ್‌ನ ಕಡೆಗೆ ಜೋಡಿಕೊಂಡಿದೆ. ಜಹಲ್ ಎಂಬುದು ಜ್ಞಾನವಿಲ್ಲದಿರುವುದರ ಎರಡನೇ ಹೆಸರಾಗಿದೆ. ಇದರ ಎರಡು ವಿಧಗಳಿವೆ.

ಅ) ಜಾಹಿಲಿಯ್ಯ ಆಮ್ಮಃ (ಸಾರ್ವತ್ರಿಕ ಅಜ್ಞಾನ): ಇದು ಪ್ರವಾದಿ(ﷺ)ರಿಗಿಂತ ಮುಂಚಿನ ಸಮಯ ಹಾಗೂ ಸ್ಥಿತಿಯಾಗಿದೆ ಮತ್ತು ಇದು ಪ್ರವಾದಿ(ﷺ)ರವರ ಆಗಮನದಿಂದ ಕೊನೆಗೊಂಡಿದೆ.

ಆ) ಜಾಹಿಲಿಯ್ಯತ್ ಖಾಸ್ಸಃ(ಪ್ರತ್ಯೇಕ ಅಜ್ಞಾನ): ಈ ಮೂಢತೆಯು ಎಂದಿನಂತೆ ಇಂದೂ ಕೂಡಾ ಕೆಲವು ದೇಶಗಳಲ್ಲಿ, ಕೆಲವು ನಗರಗಳಲ್ಲಿ ಮತ್ತು ಕೆಲವರ ಒಳಗೆ ಇದೆ. ಈ ಶತಮಾನ ಅಥವಾ ಇಪ್ಪತ್ತನೇ ಶತಮಾನದ ಅಜ್ಞಾನ ಎಂದು ಹೇಳುವ ಮೂಲಕ ಇವರು ಅಜ್ಞಾನವು ಸಾರ್ವತ್ರಿಕವೆಂದು ಬಿಂಬಿಸಬಯಸುತ್ತಾರೆ. ವಾಸ್ತವದಲ್ಲಿ ಈ ವಾದಿಗಳಿಗೆ ಪ್ರಮಾದವುಂಟಾಗಿದೆಯೆಂಬುದು ಸ್ಪಷ್ಟ. ಈ ಶತಮಾನದ ಕೆಲವರಲ್ಲಿ ಅಜ್ಞಾನವಿದೆ ಅಥವಾ ಬಹುತೇಕ ಜನರಲ್ಲಿದೆ ಎಂದು ಹೇಳುವುದೇ ಸರಿಯಾದ ಪ್ರಯೋಗವಾಗಿದೆ. ಅಜ್ಞಾನ ಅಥವಾ ಸಾರ್ವತ್ರಿಕ ಅಜ್ಞಾನ ಎಂದು ಹೇಳುವುದಾದರೆ ಇದು ಸರಿಯಲ್ಲ ಮತ್ತು ಇದಕ್ಕೆ ಅನುಮತಿಯೂ ಇಲ್ಲ. ಏಕೆಂದರೆ ಪ್ರವಾದಿ(ﷺ)ರವರ ಆಗಮನದ ಬಳಿಕ ಸಾರ್ವತ್ರಿಕ ಜಾಹಿಲಿಯ್ಯ ಅಂತ್ಯಗೊಂಡಿದೆ.

2. ಫಿಸ್ಕ್ (ಕರ್ಮಭ್ರಷ್ಟತೆ):

ಭಾಷೆಯಲ್ಲಿ ಫಿಸ್ಕ್ ಅರ್ಥವು ಹೊರ ಹೋಗುವುದು ಎಂದಾಗಿದೆ.

ಮತ್ತು ಶರಈ ಪ್ರಕಾರ ಫಿಸ್ಕ್ ಎಂದರೆ ಅಲ್ಲಾಹನ ಅನುಸರಣೆಯಿಂದ ಹೊರಗೆ ಹೋಗುವುದು. ಇದರಲ್ಲಿ ಸಂಪೂರ್ಣ ಹೊರಗೆ ಹೋಗುವುದೂ ಸೇರಿದೆ. ಆದ್ದರಿಂದ

---

**219** ವರದಿ ಮುಸ್ಲಿಮ್

**220** ಸಹೀ ಗ್ರಂಥಗಳಾದ ಬುಖಾರಿ ಮತ್ತು ಮುಸ್ಲಿಮ್‌ನ ವರದಿ

ಕಾಫಿರ್‌ಗೂ ಫಾಸಿಕ್ ಎನ್ನಲಾಗುತ್ತದೆ. ಹಾಗೆಯೇ ಆಂಶಿಕವಾಗಿ ಹೊರ ಬರುವುದೂ ಇದರಲ್ಲಿ ಬರುತ್ತದೆ. ಆದ್ದರಿಂದ ಒಬ್ಬ ಸತ್ಯವಿಶ್ವಾಸಿಯಿಂದ ದೊಡ್ಡ ಪಾಪವು ಸಂಭವಿಸಿದರೆ ಅವನನ್ನು ಫಾಸಿಕ್ ಎನ್ನಲಾಗುತ್ತದೆ.

ಫಿಸ್ಕ್‌ನಲ್ಲಿ ಎರಡು ವಿಧಗಳಿವೆ

ಮೊದಲ ವಿಧ:

ಫಿಸ್ಕ್‌ನ ಈ ವಿಧದಿಂದ ಮನುಷ್ಯನು ಧರ್ಮದಿಂದ ಹೊರಗೆ ಹೋಗುವನು, ಇದಕ್ಕೆ ಕುಫ್ರ್ (ಧರ್ಮ ನಿಷೇಧ) ಎಂದೂ ಕರೆಯುತ್ತಾರೆ. ಆದ್ದರಿಂದ ಕಾಫಿರ್‌ನಿಗೂ ಫಾಸಿಕ್ ಎನ್ನಲಾಗುತ್ತದೆ. ಸರ್ವೋನ್ನತನಾದ ಅಲ್ಲಾಹು ಇಬ್ಲೀಸ್‌ನ ಕುರಿತು ಹೇಳುತ್ತಾನೆ.

﴿ فَفَسَقَ عَنْ أَمْرِ رَبِّهِۦٓ ﴾

**"ಆದ್ದರಿಂದ ಅವನು ತನ್ನ ಪರಿಪಾಲಕನ ಆದೇಶದಿಂದ ಹೊರಗೆ ಹೋದನು." (221)**

ಈ ಫಿಸ್ಕ್‌ನ ಮೂಲಕ ಇಬ್ಲೀಸ್‌ನು ಕುಫ್ರ್ (ಸತ್ಯ ನಿಷೇಧ) ಮಾಡಿದ್ದನು. ಅಲ್ಲಾಹು ಹೀಗೆಂದಿದ್ದಾನೆ.

﴿ وَأَمَّا ٱلَّذِينَ فَسَقُوا۟ فَمَأْوَىٰهُمُ ٱلنَّارُ ﴾

**"ಮತ್ತು ಯಾರು ಕೃತಘ್ನತೆ ತೋರಿದರೋ ಅವರ ವಾಸಸ್ಥಾನವು ನರಕವಾಗಿದೆ." (222)**

ಇವರು ಕಾಫಿರರಾಗಿದ್ದಾರೆ. ಇದಕ್ಕೆ ಆಧಾರವಾಗಿ ಅಲ್ಲಾಹನ ಈ ಸೂಕ್ತಿಯು ಮುಂದುವರಿಯುತ್ತದೆ.

﴿ كُلَّمَآ أَرَادُوٓا۟ أَن يَخْرُجُوا۟ مِنْهَآ أُعِيدُوا۟ فِيهَا وَقِيلَ لَهُمْ ذُوقُوا۟ عَذَابَ ٱلنَّارِ ٱلَّذِى كُنتُم بِهِۦ تُكَذِّبُونَ ﴿٢٠﴾ ﴾

**"ಅದರಿಂದ ಹೊರಗೆ ಹೋಗಲು ಬಯಸಿದರೆ ಅದಕ್ಕೇ ಮರಳಿಸಲ್ಪಡುವರು ಮತ್ತು ಅವರೊಂದಿಗೆ ಹೇಳಲಾಗುವುದು ಯಾವ ನರಕದ ಶಿಕ್ಷೆಯನ್ನು ನೀವು ಸುಳ್ಳೆಂದು ಭಾವಿಸಿದ್ದೀರೋ ಅದರ ರುಚಿಯನ್ನು ಸವಿಯಿರಿ."**

ಎರಡನೇ ವಿಧ

ದುಷ್ಕರ್ಮವೆಸಗಿದ ಮುಸ್ಲಿಮನನ್ನೂ, ಫಾಸಿಕ್ ಎನ್ನಲಾಗುತ್ತದೆ. ಆದರೆ ಆ ಫಿಸ್ಕ್ ಅವನನ್ನು ಇಸ್ಲಾಮ್‌ನಿಂದ ಹೊರತಳ್ಳುವುದಿಲ್ಲ. ಸರ್ವಶ್ರೇಷ್ಠನಾದ ಅಲ್ಲಾಹು ಹೀಗೆಂದಿರುವನು:

**221** ಕುರ್‌ಆನ್ 18:50

**222** ಕುರ್‌ಆನ್ 32:20

﴿ وَٱلَّذِينَ يَرْمُونَ ٱلْمُحْصَنَٰتِ ثُمَّ لَمْ يَأْتُوا۟ بِأَرْبَعَةِ شُهَدَآءَ فَٱجْلِدُوهُمْ ثَمَٰنِينَ جَلْدَةً وَلَا تَقْبَلُوا۟ لَهُمْ شَهَٰدَةً أَبَدًا ۚ وَأُو۟لَٰٓئِكَ هُمُ ٱلْفَٰسِقُونَ ﴿٤﴾ ﴾

**"ಮತ್ತು ಸುಶೀಲೆಯರಾದ ಸ್ತ್ರೀಯರ ಮೇಲೆ ಅಪವಾದವನ್ನು ಹೊರಿಸುವವರು ಮತ್ತು ಅದರ ಮೇಲೆ ನಾಲ್ಕು ಸಾಕ್ಷಿಗಳನ್ನು ತರದಿದ್ದರೆ ಅವರಿಗೆ ಎಂಬತ್ತು ಏಟು ನೀಡಿರಿ ಮತ್ತು ಎಂದಿಗೂ ಅವರ ಸಾಕ್ಷ್ಯವನ್ನು ಸ್ವೀಕರಿಸದಿರಿ. ಮತ್ತು ಇವರೇ ದುಷ್ಕರ್ಮಿಗಳು."** (223)

ಸರ್ವೋನ್ನತನು ಹೇಳುತ್ತಾನೆ:

﴿ فَمَن فَرَضَ فِيهِنَّ ٱلْحَجَّ فَلَا رَفَثَ وَلَا فُسُوقَ وَلَا جِدَالَ فِى ٱلْحَجِّ ۗ ﴾

**"ಯಾರಾದರೂ ಈ ತಿಂಗಳಲ್ಲಿ ಹಜ್ಜ್‌ನ ಸಂಕಲ್ಪ ಮಾಡಿದರೆ ಹಜ್ಜ್(ನ ದಿವಸದಲ್ಲಿ) ಸ್ತ್ರೀ ಸಂಪರ್ಕವಿರಿಸದಿರಲಿ, ಕುಕೃತ್ಯವೆಸಗದಿರಲಿ ಮತ್ತು ಯಾರೊಂದಿಗೂ ಜಗಳವಾಡದಿರಲಿ."** (224)

ವಿದ್ವಾಂಸರುಗಳು ಫಿಸ್ಕ್‌ನ ವ್ಯಾಖ್ಯಾನದಲ್ಲಿ ಇದರ ಅರ್ಥವು ದುಷ್ಕರ್ಮ ಎಂದು ಹೇಳಿದ್ದಾರೆ.(225)

3. ದ್ವಲಾಲ್ (ಮಾರ್ಗ ಭ್ರಷ್ಟತೆ):

1. ದ್ವಲಾಲ್ ಎಂದರೆ ಸಿರಾತೆ ಮುಸ್ತಕೀಮ್ (ನೇರವಾದ ಹಾದಿ) ನಿಂದ ವ್ಯತಿಚಲಿಸುವುದು ಇದು ಸನ್ಮಾರ್ಗದ ವಿರುದ್ಧ ಪದವಾಗಿದೆ.

ಅಲ್ಲಾಹನ ವಚನವು ಹೀಗಿದೆ.

﴿ مَّنِ ٱهْتَدَىٰ فَإِنَّمَا يَهْتَدِى لِنَفْسِهِۦ ۖ وَمَن ضَلَّ فَإِنَّمَا يَضِلُّ عَلَيْهَا ۚ ﴾

**"ಯಾರಾದರೂ ಸನ್ಮಾರ್ಗವನ್ನು ಕೈಗೊಂಡರೆ ಅವನು ಅದನ್ನು ತನಗಾಗಿ ಕೈಗೊಳ್ಳುತ್ತಾನೆ ಮತ್ತು ವ್ಯತಿಚಲಿಸಿದರೆ, ಅವನು ತನ್ನ ವಿರುದ್ಧವೇ ವ್ಯತಿಚಲಿಸುತ್ತಾನೆ."** (226)

ಈ ಪದವನ್ನು ಹಲವು ಅರ್ಥಗಳಲ್ಲಿ ಪ್ರಯೋಗಿಸಲಾಗಿದೆ. ಕೆಲವೊಮ್ಮೆ ಇದರ ಉಪಯೋಗವು ಕುಫ್ರ್‌ನಲ್ಲೂ ಆಗುವುದು.

ಸರ್ವಶ್ರೇಷ್ಠನಾದ ಅಲ್ಲಾಹುವಿನ ಸೂಕ್ತಿಯು ಹೀಗಿದೆ.

﴿ وَمَن يَكْفُرْ بِٱللَّهِ وَمَلَٰٓئِكَتِهِۦ وَكُتُبِهِۦ وَرُسُلِهِۦ وَٱلْيَوْمِ ٱلْءَاخِرِ فَقَدْ ضَلَّ ضَلَٰلًۢا بَعِيدًا ﴿١٣٦﴾ ﴾

**223** ಕುರ್‌ಆನ್ 24:4

**224** ಕುರ್‌ಆನ್ 2:197–198

**225** ಕಿತಾಬುಲ್ ಈಮಾನ್. ಇಮಾಮ್ ಇಬ್ನ್ ತೈಮಿಯ್ಯ 278

**226** ಕುರ್‌ಆನ್ 17:15

**"ಮತ್ತು ಯಾರಾದರೂ ಅಲ್ಲಾಹು ಮತ್ತು ಅವನ ಮಲಕ್‌ಗಳು ಮತ್ತು ಅವನ ಗ್ರಂಥಗಳು ಮತ್ತು ಅವನ ಸಂದೇಶವಾಹಕರು ಮತ್ತು ಅಂತ್ಯದಿನ ಇವುಗಳನ್ನು ನಿರಾಕರಿಸಿದರೆ ಅವನು ನೇರ ದಾರಿಯಿಂದ ತಪ್ಪಿ ದೂರ ಹೋದನು."** (227)

2. ಕೆಲವೊಮ್ಮೆ ಇದರ ಪ್ರಯೋಗವು ಶಿರ್ಕ್‌ನ ಮೇಲೂ ಆಗುವುದು. ಸರ್ವೋನ್ನತನಾದ ಅಲ್ಲಾಹು ಹೇಳುತ್ತಾನೆ

﴿ وَمَن يُشْرِكْ بِٱللَّهِ فَقَدْ ضَلَّ ضَلَٰلًۢا بَعِيدًا ﴿١١٦﴾ ﴾

**"ಯಾರಾದರೂ ಅಲ್ಲಾಹನ ಜೊತೆ ಶಿರ್ಕ್ (ಭಾಗೀದಾರಿಕೆ) ಮಾಡಿದರೆ ಅವನು ನೇರದಾರಿಯಿಂದ ಸರಿದು ಬಹುದೂರ ಹೋದನು."** (228)

3. ಕೆಲವೊಮ್ಮೆ ಇದನ್ನು ಕುಫ್ರ್ (ಸತ್ಯ ನಿಷೇಧಕ್ಕಿಂತ) ಕೆಳಗಿನ ವಿಷಯಗಳಿಗೆ ಬಳಸಲಾಗುತ್ತದೆ ಉದಾಹರಣೆಗೆ ಮಾರ್ಗಭ್ರಷ್ಟ ಬಣವೆಂದರೆ ವಿರೋಧಿ ಗುಂಪು ಎಂದರ್ಥ.

4. ಪ್ರಮಾದಕ್ಕೂ ಇದರ ಪ್ರಯೋಗ ಮಾಡಲಾಗುತ್ತದೆ. ಮೂಸಾ(عليه السلام)ರ ಮಾತು ಕುರ್‌ಆನ್‌ನಲ್ಲಿ ಹೀಗಿದೆ.

﴿ قَالَ فَعَلْتُهَآ إِذًا وَأَنَا۠ مِنَ ٱلضَّآلِّينَ ﴿٢٠﴾ ﴾

**"(ಮೂಸಾ)(عليه السلام) ಹೇಳಿದರು: ಈ ಕೃತ್ಯವು ನಾನು ಪ್ರಮಾದ ಮಾಡುವವನಿದ್ದಾಗ ನನ್ನಿಂದುಟಾಗಿತ್ತು."** (229)

5. ಕೆಲವೊಮ್ಮೆ ಮರೆವಿಗೂ ಇದರ ಪ್ರಯೋಗವಾಗುತ್ತದೆ ಸರ್ವೋನ್ನತನ ವಚನವು ಹೀಗಿದೆ:

﴿ أَن تَضِلَّ إِحْدَىٰهُمَا فَتُذَكِّرَ إِحْدَىٰهُمَا ٱلْأُخْرَىٰ ﴾

**"ಒಬ್ಬಳು ಮರೆತುಹೋದರೆ ಇನ್ನೊಬ್ಬಳು ಅವಳಿಗೆ ನೆನಪಿಸಿಕೊಡುವಳು."**(230)

6. ಭ್ರಷ್ಟತೆ ಎಂಬ ಈ (ಅರಬಿಕ್) ಪ್ರಯೋಗವು ಕಾಣೆಯಾಗುವುದಕ್ಕೂ ಮಾಡಲಾಗುತ್ತದೆ. ಅರಬ್ಬೀಗಳು ಹೇಳುತ್ತಾರೆ : ದಾರಿತಪ್ಪಿದ ಒಂಟೆ. (231)

4. ಅರ್‌ರಿದ್ದಃ(ಧರ್ಮ ಭ್ರಷ್ಟತೆ)

---

**227** ಕುರ್‌ಆನ್ 4:136
**228** ಕುರ್‌ಆನ್ 4:116
**229** ಕುರ್‌ಆನ್ 26:20
**230** ಕುರ್‌ಆನ್ 2:282
**231** ಅಲ್ ಮುಫ್ರದಾತ್ ಲಿರ್‍ರಾಗಿಬ್–297–298

ಅದರ ವಿಧಗಳು ಮತ್ತು ನಿಯಮಗಳು

ಅರ್‍ರಿದ್ದತ್ ಭಾಷಾರ್ಥದಲ್ಲಿ ತಿರುಗುವುದಕ್ಕೆ ಹೇಳುತ್ತಾರೆ. ಅಲ್ಲಾಹನ ವಚನವು ಹೀಗಿದೆ.

﴿ وَلَا تَرْتَدُّوا۟ عَلَىٰٓ أَدْبَارِكُمْ ﴾

**"ಮತ್ತು ಹೋರಾಟದ ಸಮಯದಲ್ಲಿ ಬೆನ್ನು ತೋರಿಸಬೇಡಿರಿ."** [232]

ಕರ್ಮಶಾಸ್ತ್ರದಲ್ಲಿ ಇಸ್ಲಾಮ್ ಸ್ವೀಕರಿಸಿದ ಬಳಿಕ ಕುಫ್ರ್ ಕೈಗೊಳ್ಳುವುದಕ್ಕೆ ಅರ್‍ರಿದ್ದ ಎನ್ನುತ್ತಾರೆ. ಸರ್ವೋನ್ನತನಾದ ಅಲ್ಲಾಹು ಹೇಳುತ್ತಾನೆ.

﴿ وَمَن يَرْتَدِدْ مِنكُمْ عَن دِينِهِۦ فَيَمُتْ وَهُوَ كَافِرٌ فَأُو۟لَـٰٓئِكَ حَبِطَتْ أَعْمَـٰلُهُمْ فِى ٱلدُّنْيَا وَٱلْـَٔاخِرَةِ ۖ وَأُو۟لَـٰٓئِكَ أَصْحَـٰبُ ٱلنَّارِ ۖ هُمْ فِيهَا خَـٰلِدُونَ ﴿٢١٧﴾ ﴾

**"ನಿಮ್ಮಲ್ಲಿ ಯಾರಾದರೂ ತನ್ನ ಧರ್ಮದಿಂದ ತಿರುಗಿದನೋ(ಕಾಫಿರ್ ಆದನೋ) ಮತ್ತು ಕಾಫಿರನಾಗಿ ಸತ್ತನೋ ಅಂತಹವರ ಕರ್ಮಗಳು ಇಹಪರಗಳೆರಡರಲ್ಲೂ ನಿಷ್ಫಲಗೊಳ್ಳುವುದು ಮತ್ತು ಈ ಜನರೇ ನರಕದವರಾಗಿರುವರು. ಅವರು ಅದರಲ್ಲಿ ಶಾಶ್ವತವಾಗಿರುವರು."** [233]

ಧರ್ಮ ಭ್ರಷ್ಟತೆಯ ವಿಧಗಳು

ಒಬ್ಬನ ಇಸ್ಲಾಮನ್ನು ಅಸಿಂಧುಗೊಳಿಸುವ ಸಂಗತಿಗಳಲ್ಲಿ ಯಾವುದಾದರೂ ಒಂದನ್ನು ಎಸಗಿದರೂ ಧರ್ಮಭ್ರಷ್ಟತೆಯು ಸಂಭವಿಸುತ್ತದೆ. ಇದರ ನಷ್ಟಗೊಳಿಸುವವುಗಳಲ್ಲಿ ಐದು ವಿಧಗಳು.

1. ಮಾತಿನ ಧರ್ಮಭ್ರಷ್ಟತೆ : ಅಲ್ಲಾಹು ಆತನ ಸಂದೇಶವಾಹಕರು ಅಥವಾ ಅವನ ಮಲಕ್‌ಗಳು ಅಥವಾ ಗತ ಪ್ರವಾದಿಗಳಲ್ಲಿ ಯಾವುದೇ ಪ್ರವಾದಿಯನ್ನು ನಿಂದಿಸುವುದು, ಅವಹೇಳಿಸುವುದು, ತನಗೆ ಪರೋಕ್ಷ ಜ್ಞಾನವಿದೆಯೆಂದು ಘೋಷಿಸುವುದು ಅಥವಾ ತಾನು ಪ್ರವಾದಿಯೆಂದು ಯಾರಾದರೂ ವಾದಿಸಿದರೆ ಅವನನ್ನು ಸಮರ್ಥಿಸುವುದು ಅಥವಾ ಅಲ್ಲಾಹೇತರರಲ್ಲಿ ಪ್ರಾರ್ಥಿಸುವುದು. ಅಲ್ಲಾಹನ ಹೊರತು ಇತರರಿಗೆ ಸಾಮರ್ಥ್ಯವಿಲ್ಲದ ವಿಷಯದಲ್ಲಿ ಅವರೊಂದಿಗೆ ಸಹಾಯ ಯಾಚನೆ ಮಾಡುವುದು ಅಥವಾ ಬೇರೆ ಯಾವುದೇ ವಿಷಯದಲ್ಲಿ ಅಲ್ಲಾಹೇತರರಲ್ಲಿ ಪ್ರಾರ್ಥಿಸುವುದು, ಅಲ್ಲಾಹನ ಹೊರತು ಇತರರಿಗೆ ಸಾಮರ್ಥ್ಯವಿಲ್ಲದ ವಿಷಯದಲ್ಲಿ ಅವರೊಂದಿಗೆ ಸಹಾಯ ಯಾಚನೆ ಮಾಡುವುದು ಅಥವಾ ಬೇರೆ ಯಾವುದೇ ವಿಷಯದಲ್ಲಿ ಅಲ್ಲಾಹೇತರರೊಂದಿಗೆ ಅಭಯವನ್ನು ಸೂಚಿಸುವುದು ಇತ್ಯಾದಿ.

2. ಕರ್ಮದಲ್ಲಿ ಧರ್ಮ ಭ್ರಷ್ಟತೆ : ಉದಾಹರಣೆಗೆ, ವಿಗ್ರಹ, ಕಲ್ಲು, ಮರ, ಗೋರಿಗಳಿಗೆ

**232** ಕುರ್‌ಆನ್ 5:21

**233** ಕುರ್‌ಆನ್ 2:217

ಸಾಷ್ಟಾಂಗವೆರಗುವುದು, ಅವುಗಳಿಗೆ ಬಲಿದಾನ ಮಾಡುವುದು. ಕೊಳಕು ಸ್ಥಳಗಳಲ್ಲಿ ಪವಿತ್ರ ಕುರ್‌ಆನ್ ಅನ್ನಿಡುವುದು, ಸಿಹ್ರ್ ಮಾಡುವುದು, ಅದನ್ನು ಕಲಿಯುವುದು, ಕಲಿಸುವುದು, ಸರ್ವೋನ್ನತನಾದ ಅಲ್ಲಾಹು ಇಳಿಸಿರುವ ಶರೀಅತ್‌ನ ಹೊರತು ಬೇರೆ ಕಾನೂನುಗಳ ಪ್ರಕಾರ ತೀರ್ಪು ನೀಡುವುದು ಮತ್ತು ಶರೀಅತ್‌ನ ಹೊರತು ಜನರ ಕಾನೂನನ್ನೇ ಸಮಸ್ಯೆಯ ಪರಿಹಾರವೆಂದು ತಿಳಿಯುವುದು ಇತ್ಯಾದಿ.

3. ವಿಶ್ವಾಸಪರ ಧರ್ಮಭ್ರಷ್ಟತೆ : ಅಲ್ಲಾಹನ ಹೊರತು ಇತರರ ಭಾಗೀದಾರಿಕೆಯ ವಿಶ್ವಾಸ ಅಥವಾ ವ್ಯಭಿಚಾರ, ಮದ್ಯ, ಬಡ್ಡಿ ಇವುಗಳು ಹಲಾಲ್ ಎಂಬ ಅಥವಾ ರೊಟ್ಟಿಯು ಹರಾಮ್ ಎಂಬ ವಿಶ್ವಾಸ ಅಥವಾ ನಮಾಝ್ ಕಡ್ಡಾಯ ಅಲ್ಲ. ಇದೇ ರೀತಿ ಯಾವ ವಸ್ತುಗಳು ಹಲಾಲ್, ಹರಾಮ್ ಅಥವಾ ಕಡ್ಡಾಯ ಎಂಬುವುದರ ಮೇಲೆ ಸಮುದಾಯದ ಒಮ್ಮತಾಭಿಪ್ರಾಯವಿದೆ ಮತ್ತು ಅದರ ಬಗ್ಗೆ ಯಾವುದೇ ವ್ಯಕ್ತಿಯು ಭಿನ್ನಾಭಿಪ್ರಾಯ ಹೊಂದಿಲ್ಲವೋ ಅವುಗಳಿಗೆ ವಿರುದ್ಧ ನಿಲುವು ತಾಳುವುದು.

4. ಸಂಶಯದ ಧರ್ಮ ಭ್ರಷ್ಟತೆ: ಹಿಂದೆ ಹೇಳಿದಂತಹ ಯಾವುದೇ ವಸ್ತುವನ್ನು ಸಂಶಯುದಿಂದಾಗಿ ನಿರಾಕರಿಸುವುದು. ಅಂದರೆ ಶಿರ್ಕ್‌ನ ನಿಷೇಧತ್ವದಲ್ಲಿ ಸಂಶಯಮಾಡುವುದು, ವ್ಯಭಿಚಾರ, ಮದ್ಯದ ನಿಷೇಧದಲ್ಲಿ ಸಂಶಯ ಮಾಡುವುದು ಅಥವಾ ರೊಟ್ಟಿಯು ಹಲಾಲ್ ಎಂಬುವುದರ ಬಗ್ಗೆ ಸಂಶಯ ಮಾಡುವುದು ಅಥವಾ ಪ್ರವಾದಿ(ﷺ)ರವರ ಸಂದೇಶವಾಹಕತ್ವದಲ್ಲಿ ಅಥವಾ ಇತರ ಪ್ರವಾದಿಗಳಲ್ಲಿ ಯಾರಾದರೊಬ್ಬರ ಸಂದೇಶವಾಹಕತ್ವದಲ್ಲಿ ಸಂಶಯ ಮಾಡುವುದು ಇವುಗಳ ಸತ್ಯತೆಯಲ್ಲಿ ಸಂಶಯಮಾಡುವುದು

ಅಥವಾ ಇಸ್ಲಾಮ್ ಧರ್ಮದಲ್ಲಿ ಸಂಶಯಮಾಡುವುದು ಅಥವಾ ಪ್ರಸಕ್ತ ಕಾಲದಲ್ಲಿ ಇಸ್ಲಾಮ್ ಜಾರಿಗೆ ಯೊಗ್ಯವೆಂಬ ವಿಷಯದಲ್ಲಿ ಸಂಶಯ ಮಾಡುವುದು.

5. ತ್ಯಜಿಸುವ ಧರ್ಮಭ್ರಷ್ಟತೆ: ಒಬ್ಬನು ಉದ್ದೇಶ ಪೂರ್ವಕವಾಗಿ ನಮಾಝ್ ತೊರೆಯುವುದು ಇದಕ್ಕೊಂದು ಉದಾಹರಣೆಯಾಗಿದೆ. ಪ್ರವಾದಿ(ﷺ) ಹೇಳಿದರು.

«بَيْنَ الْعَبْدِ وَالْكُفْرِ وَالشِّرْكِ تَرْكُ الصَّلَاةِ»

**“ಒಬ್ಬ ದಾಸನ ಹಾಗೂ ಕುಫ್ರ್, ಶಿರ್ಕ್‌ಗಳ ನಡುವಿನ ವ್ಯತ್ಯಾಸವು ನಮಾಝ್ ತೊರೆಯುವುದಾಗಿದೆ.”** [234] ಇಂತಹ ಪುರಾವೆಗಳು ನಮಾಝ್ ಬಿಡುವವನ ಕುಫ್ರ್‌ಗೆ ಸೂಚನೆಗಳಾಗಿವೆ.

ಧರ್ಮಭ್ರಷ್ಟತೆ ಸಾಬೀತಾದ ಬಳಿಕ ಜಾರಿಯಾಗುವಂತಹ ನಿಯಮಗಳು

1. ಧರ್ಮಭ್ರಷ್ಟ ಯಾ ಮುರ್ತದ್ದ್‌ಗೆ ಪಶ್ಚಾತ್ತಾಪ ಪಡಲು ಮೂರು ದಿನಗಳ ಅವಕಾಶ

**234** ಮುಸ್ಲಿಂ

ನೀಡಲಾಗುವುದು ಅವನು ಮೂರು ದಿನಗಳ ಒಳಗೆ ಪಶ್ಚಾತ್ತಾಪ ಪಟ್ಟು ಇಸ್ಲಾಮ್ ಸ್ವೀಕರಿಸಿದಲ್ಲಿ ಅವರ ಪಶ್ಚತ್ತಾಪವನ್ನು ಸ್ವೀಕಾರಾರ್ಹವೆಂದು ಪರಿಗಣಿಸಲಾಗುವುದು ಮತ್ತು ಅವನನ್ನು ಬಿಟ್ಟು ಬಿಡಲಾಗುವುದು.

2. ಒಂದು ವೇಳೆ ಅವನು ಪಶ್ಚಾತ್ತಾಪ ಪಡಲು ನಿರಾಕರಿಸಿದಲ್ಲಿ, ಅವನ ಹತ್ಯೆಯು ಕಡ್ಡಾಯವಾಗಿದೆ. ಪ್ರವಾದಿ(ﷺ) ಹೇಳಿರುವರು:

«مَنْ بَدَّلَ دِينَهُ فَاقْتُلُوهُ»

**"ಯಾರಾದರೂ ತನ್ನ ಧರ್ಮದಿಂದ ತಿರುಗಿದನೋ ಅವನ್ನನ್ನು ವಧಿಸಿರಿ."** (235)

3. ತೌಬಾದ ಕಡೆಗೆ ಆಹ್ವಾನಿಸುವಾಗ ಅವನಿಗೆ ಅವನ ಸೊತ್ತುಗಳನ್ನು ಅನುಭವಿಸಲು ಅವಕಾಶ ನೀಡಲಾಗುವುದಿಲ್ಲ. ಆದರೆ ಅವನು ಪುನಃ ಇಸ್ಲಾಮ್‌ಅನ್ನು ಸ್ವೀಕರಿಸಿದರೆ ಆ ಸೊತ್ತು ಅವನದಾಗಿರುವುದು ಮತ್ತು ಇಲ್ಲವಾದರೆ ಆ ಸೊತ್ತು ಮುಸ್ಲಿಮರ ಬೈತುಲ್ ಮಾಲ್‌ಗೆ ಸೇರಿಸಲಾಗುವುದು ಮತ್ತು ಈ ಧರ್ಮಭ್ರಷ್ಟತೆಯಲ್ಲಿ ಅವನ ಮೃತ್ಯು ಯಾ ಹತ್ಯೆ ಉಂಟಾದರೆ ಆ ಸೊತ್ತು ಇದೇ ರೀತಿಯಲ್ಲಿ ಸಂಗ್ರಹಿಸಲ್ಪಡುವುದು. ಒಬ್ಬನು ಮುರ್ತದ್ದ್ ಆದ ಕೂಡಲೇ ಅವನ ಸೊತ್ತು ಸಂಪತ್ತುಗಳನ್ನು ಮುಸ್ಲಿಮರ ಸುಧಾರಣೆ ಕಾರ್ಯಕ್ರಮಗಳಿಗೆ ವಿನಿಯೋಗಿಸಲ್ಪಡಲಾಗುವುದು ಎಂದೂ ಸಹ ಹೇಳಲಾಗಿದೆ.

4. ಮುರ್ತದ್ ಯಾ ಧರ್ಮ ಭ್ರಷ್ಟನಿಗೆ ವಾರೀಸುದಾರರು ಇಲ್ಲವಾಗುವರು. ಅಂದರೆ ಅವನಿಗೆ ಯಾರೂ ವಾರೀಸುದಾರರಿರುವುದಿಲ್ಲ. ಮತ್ತು ಅವನು ಯಾರ ವಾರೀಸುದಾರನೂ ಆಗಿರುವುದಿಲ್ಲ.

5. ಧರ್ಮಭ್ರಷ್ಟತೆಯ ಸ್ಥಿತಿಯಲ್ಲಿ ಮರಣಹೊಂದಿದರೆ ಅವನಿಗೆ ಮಯ್ಯಿತ್ ಸ್ನಾನ ಮಾಡಿಸಲಾಗುವುದಿಲ್ಲ. ಮುಸ್ಲಿಮರ ಖಬರ್ ಸ್ಥಾನದಲ್ಲಿ ದಫನ ಕೂಡಾ ಮಾಡಲಾಗುವುದಿಲ್ಲ. ಬದಲಾಗಿ ಕಾಫಿರರಂತೆ ಅವನ ಅಂತ್ಯ ಸಂಸ್ಕಾರ ಮಾಡಲಾಗುವುದು. ಬಳಿಕ ಮುಸ್ಲಿಮರ ಖಬರ್ ಸ್ಥಾನದಲ್ಲಿ ದಫನ್ ಮಾಡಲಾಗದೇ ಬೇರೆ ಯಾವುದಾದರೂ ಕಡೆ ಮಣ್ಣಿನಲ್ಲಿ ಹೂಳಲಾಗುವುದು.

---

**235** ಬುಖಾರಿ, ಅಬೂದಾವೂದ್

## ಭಾಗ–4

## ತೌಹೀದ್‌ನ್ನು ಭಂಗಗೊಳಿಸುವ ಮಾತು ಮತ್ತು ಕೃತಿಗಳು ಅಥವಾ ಅದಕ್ಕೆ ಲೋಪವುಂಟು ಮಾಡುವ ಸಂಗತಿಗಳು

ಈ ಭಾಗದಲ್ಲಿ ಈ ಕೆಳಗಿನ ಅಧ್ಯಾಯಗಳಿರುವುದು

ಅಧ್ಯಾಯ–1

ಹಸ್ತ ರೇಖೆ ಕೈ ಲಕ್ಷಣ ಅಥವಾ ಪಾತ್ರೆ ಇತ್ಯಾದಿಗಳನ್ನು ನೋಡಿ ಮತ್ತು ನಕ್ಷತ್ರಗಳನ್ನು ನೋಡಿ ಅದೃಶ್ಯ ಜ್ಞಾನವನ್ನು ಹೇಳುವುದಾಗಿ ವಾದಿಸುವುದು.

ಅಧ್ಯಾಯ–2

ಮಾಟ ಮಂತ್ರ, ಜೋತಿಷ್ಯ ಹೇಳುವುದು ಮತ್ತು ನಕ್ಷತ್ರ ನೋಡುವ ಕೆಲಸ.

ಅಧ್ಯಾಯ–3

ಗೋರಿಗಳಿಗೆ ಬಲಿ, ಕಾಣಿಕೆಗಳನ್ನು ಮತ್ತು ಹದಿಯ ನೀಡುವುದು ಮತ್ತು ಅವುಗಳನ್ನು ಆದರಿಸುವುದು.

ಅಧ್ಯಾಯ–4

ವಿಗ್ರಹಗಳು ಮತ್ತು ಸ್ಮಾರಕಗಳಿಗೆ ಮಹತ್ವ ನೀಡುವುದು

ಅಧ್ಯಾಯ–5

ಧರ್ಮವನ್ನು ತಮಾಷೆ ಮಾಡುವುದು ಮತ್ತು ಅದರ ಪವಿತ್ರತೆಯನ್ನು ಅವಹೇಳನ ಮಾಡುವುದು.

ಅಧ್ಯಾಯ–6

ಅಲ್ಲಾಹನ ಕಾನೂನಿನ ಹೊರತು ಇತರ ಕಾನೂನುಗಳ ಪ್ರಕಾರ ತೀರ್ಪು ನೀಡುವುದು.

ಅಧ್ಯಾಯ–7

ಶರೀಅತ್ ಕಾನೂನು ಮತ್ತು ಹಲಾಲ್ – ಹರಾಮ್‌ಅನ್ನು ಸ್ಥಾಪಿಸುವ ಹಕ್ಕಿದೆಯೆಂದು ವಾದಿಸುವುದು

ಅಧ್ಯಾಯ–8

ನೂತನವಾದಿ ಸಿದ್ಧಾಂತಗಳು ಮತ್ತು ಮೌಢ್ಯದ ಜಮಾಅತ್‌ಗಳೊಂದಿಗಿನ ಸಂಬಂಧದ ನಿಯಮಗಳು

ಅಧ್ಯಾಯ–9

ಜೀವನದ ಬಗ್ಗೆ ಭೌತಿಕ ದೃಷ್ಟಿಕೋನ

## ಅಧ್ಯಾಯ–10

## ಮಂತ್ರಿಸಿ ಊದುವುದು, ನೂಲುಗಳು, ತಾಯಿತಗಳು

## ಅಧ್ಯಾಯ–11

## ಅಲ್ಲಾಹೇತರರ ಮೇಲೆ ಆಣೆ ಹಾಕುವುದು, ಸೃಷ್ಟಿಗಳನ್ನು ಮಧ್ಯವರ್ತಿ ಮಾಡುವುದು ಮತ್ತು ಅವುಗಳೊಂದಿಗೆ ಸಹಾಯ ಯಾಚನೆ.

## ಅಧ್ಯಾಯ–1

# ಹಸ್ತ ರೇಖೆ, ಕೈ ಲಕ್ಷಣ ಇತ್ಯಾದಿಗಳನ್ನು ಓದಿ ಮತ್ತು ನಕ್ಷತ್ರಗಳನ್ನು ನೋಡಿ ಅದೃಶ್ಯ ಜ್ಞಾನವನ್ನು ಹೇಳುವ ವಾದ

ಗೈಬ್(ಅದೃಶ್ಯ) ವಿವರಣೆ :

ಜನರಿಗೆ ಕಣ್ಣಿಗೆ ಕಾಣದಿರುವ ಯಾ ಅದೃಶ್ಯವಾದಂತಹ ಭೂತ ಹಾಗೂ ಭವಿಷ್ಯದ ವಸ್ತುಗಳನ್ನು ಗೈಬ್ ಯಾ ಅದೃಶ್ಯ ವಿಷಯಗಳೆನ್ನುವರು. ಅದರ ಜ್ಞಾನವಿರುವುದು ಅಲ್ಲಾಹನಿಗೆ ಮಾತ್ರ ಸರ್ವೋನ್ನತನಾದ ಅಲ್ಲಾಹು ಹೀಗೆನ್ನುತ್ತಾನೆ.

﴿ قُل لَّا يَعْلَمُ مَن فِي ٱلسَّمَٰوَٰتِ وَٱلْأَرْضِ ٱلْغَيْبَ إِلَّا ٱللَّهُ ﴾

**“ಹೇಳು, ಆಕಾಶದಲ್ಲಿ ಹಾಗೂ ಭೂಮಿಯಲ್ಲಿರುವವರು ಅಲ್ಲಾಹ್‌ನ ಹೊರತು ಗೈಬ್(ಅದೃಶ್ಯ) ಅನ್ನು ಅರಿಯಲಾರರು.”** (236)

ಅದೃಶ್ಯ ಜ್ಞಾನವು ಕೇವಲ ಪರಮಪಾವನನಾದ ಅಲ್ಲಾಹನಿಗೆ ಮಾತ್ರ. ಹಾಗೆ ಅವನು ತನ್ನ ಅದೃಶ್ಯ ಜ್ಞಾನದಿಂದ ತನ್ನ ಪ್ರವಾದಿಗಳಲ್ಲಿ ತನಗಿಷ್ಟ ಬಂದವರಿಗೆ ಯುಕ್ತಿ ಹಾಗೂ ವಿವೇಕಕ್ಕೆ ತಕ್ಕಂತೆ ನೀಡುವನು. ಅಲ್ಲಾಹನ ವಚನವು ಹೀಗಿದೆ.

﴿ عَٰلِمُ ٱلْغَيْبِ فَلَا يُظْهِرُ عَلَىٰ غَيْبِهِۦٓ أَحَدًا ﴿٢٦﴾ إِلَّا مَنِ ٱرْتَضَىٰ مِن رَّسُولٍ ﴾

**“ಅದೃಶ್ಯ ಜ್ಞಾನವುಳ್ಳವನು ಮತ್ತು(ಅವನು) ಯಾರಿಗೂ ತನ್ನ ಅದೃಶ್ಯವನ್ನು ಬಹಿರಂಗ ಗೊಳಿಸುವುದಿಲ್ಲ. ತನ್ನ ಸಂದೇಶವಾಹಕರಲ್ಲಿ ತಾನು ಇಷ್ಟಪಟ್ಟವರಿಗೆ ಹೊರತು.”** (237)

ಅಂದರೆ ಅದೃಶ್ಯ ಜ್ಞಾನದಲ್ಲಿ ಕೆಲವುದರ ಜ್ಞಾನವು ಕೇವಲ ಅಲ್ಲಾಹು ತನ್ನ ಸಂದೇಶವಾಹಕತ್ವಕ್ಕೆ ಯಾರನ್ನು ಆರಿಸಿರುವನೋ ಅವರಿಗೆ ಮಾತ್ರ ನೀಡಲ್ಪಡುತ್ತದೆ. ಹಾಗೇ ತಾನು ಆರಿಸಿದ ದಾಸನಿಗೆ ತನಗಿಷ್ಟ ಬಂದಷ್ಟು ಅದೃಶ್ಯ ಜ್ಞಾನವನ್ನು ನೀಡುತ್ತಾನೆ. ಏಕೆಂದರೆ ಆ ಪ್ರವಾದಿಯ ಪ್ರವಾದಿತ್ವಕ್ಕೆ ಆಧಾರವಾಗಿ ಅದ್ಭುತ ಕಾರ್ಯಗಳನ್ನು ಅವನು ಮುಂದಿಡುತ್ತಾನೆ. ಈ ಮುಅಜಿಝುತ್‌ಗಳ ಪೈಕಿ, ಅಲ್ಲಾಹು ಅವರಿಗೆ ನೀಡುವ ಅದೃಶ್ಯ ಜ್ಞಾನವು ಸಹ ಸೇರಿರುತ್ತದೆ. ಈ ವಿಷಯದಲ್ಲಿ ಅಲ್ಲಾಹನಿಂದ ಕಳಿಸಲ್ಪಟ್ಟ ಓರ್ವ ಮಲಕ್ ಹಾಗೂ ಮನುಷ್ಯ ಇಬ್ಬರೂ ಸಮಭಾಗಿಗಳಾಗಿರುತ್ತಾರೆ. ಕುರ್‌ಆನ್ ಹಾಗೂ ಹದೀಸ್‌ನ ಪ್ರಮಾಣಗಳಿಂದ ಹೇಳಬಹುದೇನೆಂದರೆ ಯಾವುದೇ ಮೂರನೆಯ ಸೃಷ್ಟಿಯು ಇದರಲ್ಲಿ ಭಾಗವಹಿಸುವುದಿಲ್ಲ. ಆದ್ದರಿಂದ ಪ್ರವಾದಿಗಳನ್ನು ಹೊರತುಪಡಿಸಿ ಯಾರು ತನಗೆ ಯಾವುದಾದರೂ ಕಾರ್ಯ ಕಾರಣದ ಆಧಾರದಲ್ಲಿ ಅದೃಶ್ಯ ಜ್ಞಾನವಿದೆಯೆಂದು

---

**236** ಕುರ್‌ಆನ್ 27:65

**237** ಕುರ್‌ಆನ್ 72:26–27

ವಾದಿಸುವನೋ ಅವನು ಸುಳ್ಳುಗಾರ ಕಾಫಿರ್ ಆಗಿರುವನು.ಅದು ಕೈ ಲಕ್ಷಣ ನೋಡುವುದರ ಮೂಲಕವಾಗಲಿ ಅಥವಾ ಪಾತ್ರೆ ನೋಡಿ ಹೇಳುವುದರ ಮೂಲಕ, ಅಥವಾ ಜ್ಯೋತಿಷ್ಯ, ಜಾದೂ ಅಥವಾ ನಕ್ಷತ್ರ ಜ್ಞಾನ ಇತ್ಯಾದಿಯ ಮೂಲಕ ತನಗೆ ತಿಳಿಯುತ್ತದೆಯೆಂದು ವಾದಿಸುವುದೇ ಆಗಿರಲಿ, ಇಂದಿನ ಕಾಲದಲ್ಲಿ ಅನೇಕ ಮಾಟಗಾರರು ಕುತಂತ್ರಿಗಳು ಹಾಗೂ ವಂಚಕರ ಮೂಲಕ ಇಂತಹ ವಸ್ತುಗಳು ಮುಂದೆ ಬರುತ್ತವೆ. ಇವರೆಲ್ಲರೂ ಸಾಮಾನ್ಯವಾಗಿ ಕಾಣೆಯಾದ ವಸ್ತುಗಳ ಕುರಿತು ಹೇಳುವ ಪ್ರಯತ್ನ ಮಾಡುತ್ತಾರೆ. ರೋಗದ ಕುರಿತು ತಪ್ಪು ತಪ್ಪು ಕಾರಣಗಳನ್ನು ಹೇಳುತ್ತಾರೆ. ಸಾಮಾನ್ಯವಾಗಿ ಇವುಗಳೆಲ್ಲ ಜಿನ್ನ್‌ಗಳ ಹೇಳಿಕೆಗಳಾಗಿವೆ. ಇಂತಿಂಥಹವನು ನಿನಗೆ ಹೀಗೆ ಮಾಡಿದ್ದಾನೆ. ಅದರಿಂದಾಗಿ ನೀನು ರೋಗ ಪೀಡಿತನಾಗಿರುವಿ. ಇದೆಲ್ಲಾ ಜಿನ್ನ್ ಶೈತಾನ್‌ಗಳ ಸೇವೆ ಪಡೆದುಕೊಳ್ಳುವ ಮೂಲಕವಾಗುವುದು. ಆದರೆ ಜನರ ಎದುರು ಇವರು ತಾನು ಇಂತಿಂತಹ ಕೆಲಸ ಮಾಡಿದುದರಿಂದ ಇವೆಲ್ಲ ನನಗೆ ಹೇಳಲಾಗುತ್ತಿದೆ ಎಂದು ಹೇಳುತ್ತಾರೆ. ಇಂತಹ ಎಲ್ಲಾ ವಸ್ತುಗಳು ಸುಳ್ಳು ಹಾಗೂ ವಂಚನೆಗಳಾಗಿವೆ.

ಈ ಕುರಿತು ಶೇಖುಲ್ ಇಸ್ಲಾಮ್ ಇಬ್ನ್ ತೈಮಿಯ್ಯ ಹೇಳುತ್ತಾರೆ. **“ಎಲ್ಲಾ ಜ್ಯೋತಿಷಿಯರ ಬಳಿ ಶೈತಾನ್ ಕಡೆಯ ಓರ್ವ ದುಷ್ಟ ಸಂಗಾತಿಯು ಇರುತ್ತಾನೆ. ಅವನು ಆಕಾಶದಿಂದ ಕದ್ದು ಕೇಳಿಸಿಕೊಂಡ ಅದೃಶ್ಯ ವಸ್ತುಗಳನ್ನು ಅವನಿಗೆ ತಿಳಿಸಿಕೊಡುತ್ತಾನೆ. ಈ ಜ್ಯೋತಿಷಿಗಳು ಸತ್ಯದೊಂದಿಗೆ ಸುಳ್ಳನ್ನು ಸೇರಿಸಿ ಹೇಳುತ್ತಾರೆ. ಈ ಸಂಗಾತಿ ಶೈತಾನ್‌ಗಳ ಪೈಕಿ ಕೆಲವರು ಆ ಊರಲ್ಲಿ ಸಿಗದಂತಹ ಹಣ್ಣುಗಳು ಬೆಣ್ಣೆ ತಿನಿಸು ಇತ್ಯಾದಿಗಳನ್ನು ತರುತ್ತವೆ. ಇವರಲ್ಲಿ ಕೆಲವರು ತಮ್ಮ ಸಂಗಾತಿಯ ಸಹಾಯದಿಂದ ಮಕ್ಕಾ, ಮದೀನಾ ಮತ್ತು ಬೈತುಲ್ ಮುಕದ್ದಿಸ್ ಮುಂತಾದ ಪವಿತ್ರ ಸ್ಥಳಗಳವರೆಗೆ ಹಾರಿಕೊಂಡು ಹೋಗುತ್ತಾರೆ.”** [238]

ಅದೃಶ್ಯವೆಂದರೆ ನಕ್ಷತ್ರಗಳಿಂದ ಜ್ಞಾನವೂ ಒಳಗೊಳ್ಳುತ್ತದೆ. ಇವುಗಳಲ್ಲಿ ಆಕಾಶದ ನಕ್ಷತ್ರಗಳನ್ನು ನೋಡಿ ಭೂಮಿಯ ವಿಷಯಗಳನ್ನು ಲೆಕ್ಕ ಹಾಕುವುದು . ಅಂದರೆ ಗಾಳಿಚಲಿಸುವ ಸಮಯಗಳು, ಮಳೆಯ ಸಮಯ, ಬೆಲೆಯಲ್ಲಿ ಏರಿಕೆ ಮತ್ತು ಇಳಿಕೆ ಇತ್ಯಾದಿ ಇವುಗಳೆಲ್ಲದರ ಬಗ್ಗೆ ನಕ್ಷತ್ರ ನೋಡುವವರು ಜ್ಞಾನವನ್ನು ವಾದಿಸುತ್ತಾರೆ. ಅವರ ಪ್ರಕಾರ ಇವುಗಳನ್ನು ನಕ್ಷತ್ರದ ಸ್ಥಿತಿ, ಅವುಗಳ ಚಲನೆ, ವೇಗ ಅವುಗಳ ಸೇರುವಿಕೆ ಮತ್ತು ಚದುರುವಿಕೆಗಳಿಂದ ತಿಳಿಯಬಹುದು. ಅವರು ಹೇಳುತ್ತಾರೆ, ಯಾರಾದರೂ ಇಂತಹ ನಕ್ಷತ್ರಗಳಿಗೆ ಸಂಬಂಧಿಸಿ ಅದೃಷ್ಟಗಳ ಬಗ್ಗೆ ಬಹಳಷ್ಟು ಅಸಂಬದ್ಧ ಮಾತುಗಳು ಮುದ್ರಣಗೊಳ್ಳುತ್ತಿವೆ.

ಕೆಲವು ಅವಿವೇಕಿಗಳು ಈಮಾನ್‌ನ ಕೊರತೆಯಿರುವವರು ಇಂತಹ ನಕ್ಷತ್ರವನ್ನು ಹೇಳುವವರ ಬಳಿ ಹೋಗುತ್ತಾರೆ. ಅವರ ಬಳಿ ತಮ್ಮ ಭವಿಷ್ಯವನ್ನು ಕೇಳುತ್ತಾರೆ. ವಿವಾಹ ಸಂಬಂಧಿತ ಭವಿಷ್ಯದ ವಿಷಯವನ್ನು ಕೇಳಲು ಪ್ರಯತ್ನಿಸುತ್ತಾರೆ. ಈ ವಿಷಯದಲ್ಲಿ

**238** ಮಜ್‌ಮೂಅತುತ್ತೌಹೀದ್ : 797–801

ಶರೀಅತ್‌ನ ಪ್ರಕಾರ, ಯಾರಾದರೂ ಅದೃಶ್ಯ ಜ್ಞಾನವಿದೆಯೆಂದು ವಾದಿಸುತ್ತಾನೋ ಅಥವಾ ವಾದಿಸುವವನನ್ನು ಸತ್ಯವೆನ್ನುತ್ತಾನೋ ಅವನು ಮುಶ್ರಿಕ್ ಮತ್ತು ಕಾಫಿರ್ ಆಗುವನು, ಏಕೆಂದರೆ ಅವನು ಅಲ್ಲಾಹನ ಸಿಫಾತ್‌ನಲ್ಲಿ ಭಾಗೀದಾರಿಕೆಯನ್ನು ವಾದಿಸುತ್ತಾನೆ. ನಕ್ಷತ್ರಗಳು ಅಲ್ಲಾಹನ ನಿಷ್ಠೆಯ ಸೃಷ್ಟಿಗಳಾಗಿವೆ. ಅವುಗಳ ನಿಯಂತ್ರಣದಲ್ಲಿ ಏನೂ ಇಲ್ಲ. ಅವುಗಳು ಒಳ್ಳೆಯ ಕೆಟ್ಟ ಅಥವಾ ಜನನ, ಮರಣ ಇವುಗಳ ಯಾವುದರ ಪ್ರಮಾಣವನ್ನೂ ಮಾಡುವುದಿಲ್ಲ. ಇವುಗಳೆಲ್ಲ ಆಕಾಶದಿಂದ ಸುದ್ದಿಗಳನ್ನು ಕದ್ದು ತರುವ ಶೈತಾನ್‌ಗಳ ಕೃತ್ಯವಾಗಿವೆ.

### ಅಧ್ಯಾಯ–2

## ಮಾಟ, ಜ್ಯೋತಿಷ್ಯ ಹಾಗೂ ರಾಶಿ ಚಕ್ರ ತಿಳಿಸುವುದು

ಈ ಎಲ್ಲಾ ಕಾರ್ಯಗಳು ಹರಾಮ್ ಮತ್ತು ಶೈತಾನನ ಕೃತ್ಯಗಳಾಗಿವೆ. ಇವುಗಳು ನೈಜ ವಿಶ್ವಾಸವನ್ನು ಇನ್ನಿಲ್ಲವಾಗಿಸುತ್ತವೆ ಅಥವಾ ಅದಕ್ಕೆ ವಿರುದ್ಧವಾಗುತ್ತವೆ. ಕಾರಣವೇನೆಂದರೆ ಇವುಗಳು ಬಹುದೇವಾರಾಧಕ ಕೃತ್ಯಗಳ ಹೊರತು ಮಾಡಲು ಸಾಧ್ಯವಿಲ್ಲ.

ಸಿಹ್ರ್(ಮಾಟ) ಒಂದು ಮಾಂತ್ರಿಕ ಕಾರ್ಯವಾಗಿದೆ. ಅದರ ಮಾರ್ಗಗಳು ಅತಿ ರಹಸ್ಯ ಹಾಗೂ ಸೂಕ್ಷ್ಮವಾಗಿರುತ್ತವೆ. ಇದಕ್ಕೆ ಸಿಹ್ರ್ ಎಂದು ಏಕೆ ಕರೆಯಲಾಗುತ್ತದೆ ಎಂದರೆ ಇದು ಅದೃಶ್ಯ ಕೃತ್ಯಗಳ ಯಾದಿಯಲ್ಲಿ ಬರುತ್ತವೆ ಇದನ್ನು ನಮ್ಮ ಕಣ್ಣು ಕಾಣಲಾರದು. ಸಿಹ್ರ್‌ನಲ್ಲಿ ಮಂತ್ರ, ಊದುವುದು, ಕೆಲ ಶಬ್ದಗಳು, ಬೇರುಸುಗಂಧ ಹೊತ್ತಿಸುವುದು ಇತ್ಯಾದಿಗಳು ಇರುವುದು. ಸಿಹ್ರ್ ಇರುವುದರ ಬಗ್ಗೆ ಯಾವುದೇ ಸಂಶಯವಿಲ್ಲ. ಕೆಲವು ಮಾಟ ಹೃದಯದ ಮೇಲೆ ತನ್ನ ಪರಿಣಾಮ ತೋರಿಸಿದರೆ ಕೆಲವು ದೇಹದ ಮೇಲೆ ಪರಿಣಾಮ ತೋರಿಸುತ್ತದೆ. ಇದರಿಂದ ಮನುಷ್ಯ ರೋಗ ಪೀಡಿತನಾಗುತ್ತಾನೆ ಮತ್ತು ಕೆಲವರಿಗೆ ಸಾವು ಸಂಭವಿಸುತ್ತದೆ.ಇದರ ಮೂಲಕ ಪತಿ ಪತ್ನಿಯರನ್ನೂ ಬೇರ್ಪಡಿಸಲಾಗುತ್ತದೆ. ಸಿಹ್ರ್‌ನ ಪರಿಣಾಮವು ಅಲ್ಲಾಹ್‌ನ ವಿಧಿಗೆ ಅನುಸಾರವಾಗಿ ಇರುತ್ತದೆ ಇದು ಸಂಪೂರ್ಣವಾಗಿ ಶೈತಾನೀ ಕೃತ್ಯವಾಗಿದೆ.

ಬಹುತೇಕ ಜನರಂತೂ ಸಿಹ್ರ್ ಕಲಿಯಲು ಶಿರ್ಕ್‌ನ ಮೂಲಕ ಹಾಗೂ ಕೆಟ್ಟ ಆತ್ಮಗಳ ಸೇವೆಗಳ ಮೂಲಕವೇ ಹೊರತು ಹೋಗುವುದಿಲ್ಲ. ಆದ್ದರಿಂದಲೇ ಶರೀಅತ್‌ನಲ್ಲಿ ಶಿರ್ಕ್‌ನೊಂದಿಗೆ ಇದನ್ನು ಹೇಳಲಾಗಿದೆ, ಅಲ್ಲಾಹನ ಸಂದೇಶವಾಹಕರು(ﷺ) ಹೇಳಿದ್ದಾರೆ:

«اجْتَنِبُوا السَّبْعَ الْمُوبِقَاتِ» قَالَوا : وَمَا هِيَ ؟ قالَ: «الإِشْرَاكُ بِاللَّهِ وَالسِّحْرُ ..»

**“ಏಳು ವಿನಾಶಕಾರಿ ವಸ್ತುಗಳಿಂದ ರಕ್ಷಣೆ ಹೊಂದಿರಿ. ಜನರು ಕೇಳಿದರು, ಅವು**

**ಯಾವುವು? ಅವರು ಹೇಳಿದರು: ಅಲ್ಲಾಹನೊಂದಿಗೆ ಇತರರನ್ನು ಭಾಗೀದಾರರಾಗಿಸುವುದು ಮತ್ತು ಸಿಹ್ರ್ ..."** [239]

ಸಿಹ್ರ್ (ಮಾಟ) ಎರಡು ಕಾರಣಗಳಿಂದ ಶಿರ್ಕ್‌ನಲ್ಲಿ ಒಳಗೊಳ್ಳುತ್ತದೆ.

1.ಇದರಲ್ಲಿ ಶೈತಾನನ ಸೇವೆಯನ್ನು ಪಡೆಯಲಾಗುತ್ತದೆ. ಶೈತಾನನೊಡನೆ ಖಾಯಂ ಒಡನಾಟ ಮಾಡಲಾಗುತ್ತದೆ. ಶೈತಾನನ ಸೇವೆಗಾಗಿ ಅವನಿಗಿಷ್ಟವಾದ ವಸ್ತುಗಳನ್ನು ನೀಡಲಾಗುತ್ತದೆ. ಏಕೆಂದರೆ ಅವನು ಮಾಟಗಾರನ ಸೇವೆಯಲ್ಲಿ ನಿರತರಾಗಬೇಕೆಂಬುದು ಉದ್ದೇಶ ಮಾಟವು ಶೈತಾನನ ಶಿಕ್ಷಣಗಳಲ್ಲೊಂದಾಗಿದೆ. ಅಲ್ಲಾಹು ಹೇಳುತ್ತಾನೆ.

﴿ وَلَٰكِنَّ ٱلشَّيَٰطِينَ كَفَرُواْ يُعَلِّمُونَ ٱلنَّاسَ ٱلسِّحْرَ ﴾

**"ಆದರೆ ಶೈತಾನರೇ ಸತ್ಯ ನಿಷೇಧ (ಕುಫ್ರ್) ಮಾಡುತ್ತಿದ್ದರು ಅವರು ಜನರಿಗೆ ಮಾಟವನ್ನು ಕಲಿಸುತ್ತಿದ್ದರು."** [240]

2. ಎರಡನೆಯ ಕಾರಣವೇನೆಂದರೆ ಇದರಲ್ಲಿ ಅದೃಶ್ಯ ಜ್ಞಾನವಿದೆಯೆಂದು ಪ್ರತಿಪಾದಿಸಲಾಗುತ್ತದೆ ಮತ್ತು ಇದರಲ್ಲಿ ಅಲ್ಲಾಹನೊಂದಿಗೆ ಭಾಗೀದಾರರಾಗುವ ಬಗ್ಗೆಯೂ ವಾದವಿರುತ್ತದೆ. ಅದು ಸಂಪೂರ್ಣ ಕುಫ್ರ್ ಮತ್ತು ಪಥ ಭ್ರಷ್ಠತೆಯಾಗಿದೆ.

ಸರ್ವಶ್ರೇಷ್ಠನಾದ ಅಲ್ಲಾಹು ಹೇಳುತ್ತಾನೆ

﴿ وَلَقَدْ عَلِمُواْ لَمَنِ ٱشْتَرَىٰهُ مَا لَهُۥ فِى ٱلْءَاخِرَةِ مِنْ خَلَٰقٍ ﴾

**"ಮತ್ತು ಅವರು ತಿಳಿದಿದ್ದರು. ಯಾರು ಇಂತಹ ವಸ್ತುಗಳನ್ನು( ಮಾಟ ಮಂತ್ರಗಳನ್ನು) ಖರೀದಿಸುತ್ತಾನೋ ಅವನಿಗೆ ಪರಲೋಕದಲ್ಲಿ ಯಾವುದೇ ಪಾಲಿಲ್ಲ."** [241]

ವಿಷಯವು ಹೀಗಿರುವಾಗ, ಇದು ಸ್ಪಷ್ಟ ಶಿರ್ಕ್ ಮತ್ತು ಕುಫ್ರ್ ಆಗಿದೆ ಮತ್ತು ಅಖೀದಕ್ಕೆ ವಿರುದ್ಧವಾಗಿದೆ ಎಂಬುದರಲ್ಲಿ ಸಂಶಯವಿಲ್ಲ. ಇಂತಹ ಕೆಲಸ ಮಾಡುವವರನ್ನು (ಇಸ್ಲಾಮೀ ಆಡಳಿತದಲ್ಲಿ) ಕೊಲ್ಲುವುದು ಕಡ್ಡಾಯವಾಗಿದೆ. ಹಿರಿಯ ಸಹಾಬಿಗಳ ಸಮೂಹವು ಮಾಟಗಾರನೊಬ್ಬನನ್ನು ಕೊಂದಿತ್ತು. ಇಂದಿನ ಕಾಲದಲ್ಲಿ ಜನರು ಮಾಟ ಮಂತ್ರ ಮತ್ತು ಮಾಂತ್ರಿಕರ ವಿಷಯದಲ್ಲಿ ಆಲಸ್ಯ ತೋರಿಸುತ್ತಿದ್ದಾರೆ. ಅಲ್ಲದೆ ಅದರ ಮೇಲೆ ಹೆಮ್ಮೆ ಪಡುತ್ತಿದ್ದಾರೆ. ಮಾತ್ರವಲ್ಲ ಈಗ ಅದನ್ನು ಒಂದು ಕಲೆಯೆಂದು ಪರಿಗಣಿಸಲಾಗುತ್ತಿದೆ. ಜನರು ಅದರ ಬಗ್ಗೆ ಹೆಮ್ಮೆ ಪಡುತ್ತಾರೆ. ಮಾಟ ಮಂತ್ರಕ್ಕಾಗಿ ಮಾಂತ್ರಿಕನಿಗೆ ಪ್ರೋತ್ಸಾಹ ಹಾಗೂ ದೊಡ್ಡ ದೊಡ್ಡ ಬಹುಮಾನಗಳನ್ನು ನೀಡಲಾಗುತ್ತದೆ ಮತ್ತು ಮಾಂತ್ರಿಕನ ಸಮ್ಮುಖದಲ್ಲಿ ಜನ ಸಮೂಹವೇ ಸೇರುತ್ತದೆ. ಸಾವಿರಾರು

**239** ಬುಖಾರಿ,ಮುಸ್ಲಿಮ್

**240** ಕುರ್‌ಆನ್ 2:102

**241** ಕುರ್‌ಆನ್ 2:102

ಮಂದಿಯನ್ನು ಕರೆದು ಜಾದೂಗಾರಿಕೆಯನ್ನು ತೋರಿಸಲಾಗುತ್ತದೆ. ಜಾದೂಗಾರರ ಮಧ್ಯೆ ಸ್ಪರ್ಧೆಯೇರ್ಪಡಿಸಲಾಗುತ್ತದೆ. ಇವುಗಳೆಲ್ಲ ಧರ್ಮದಲ್ಲಿ ಅಜ್ಞತೆ ಮತ್ತು ವಿಶ್ವಾಸದ ವಿಷಯದಲ್ಲಿ ನಿರ್ಲಕ್ಷ್ಯದ ಪರಿಣಾಮಗಳಾಗಿವೆ. ಹೀಗೆ ಇದರಿಂದ ಕೆಲವರಿಗೆ ಧರ್ಮದ ವಿಷಯದಲ್ಲಿ ಆಟವಾಡಲು ಅವಕಾಶ ನೀಡಿದಂತಾಗುತ್ತದೆ.

ಜೋತಿಷ್ಯ ಮತ್ತು ರಾಶಿ ಚಕ್ರ : ಇವೆರಡರಲ್ಲೂ ಅದೃಶ್ಯ ಜ್ಞಾನವನ್ನು ಹೇಳುವುದಾಗಿ ವಾದವಿದೆ. ಭೂಮಿಯಲ್ಲಿ ಮುಂದೇನಾಗಲಿದೆ, ಅದರ ಪರಿಣಾಮವೇನಾಗಲಿದೆ, ಕಾಣೆಯಾದ ವಸ್ತುಗಳು ಎಲ್ಲಿವೆ? ಯಾವುವು ಇತ್ಯಾದಿ ತಿಳಿಸುವುದೆಂಬ ವಾದ, ಇವೆಲ್ಲದರಲ್ಲೂ ಶೈತಾನನ ಸೇವೆಯನ್ನು ಪಡೆಯಲಾಗುತ್ತದೆ. ವಿಶೇಷವಾಗಿ ಆಕಾಶದಿಂದ ಸುದ್ದಿಗಳನ್ನು ಕದಿಯುವಂತಹ ಶೈತಾನರ ಸಹಕಾರ ಪಡೆಯಲಾಗುತ್ತದೆ. ಅಲ್ಲಾಹು ಹೇಳುತ್ತಾನೆ:

﴿ هَلْ أُنَبِّئُكُمْ عَلَىٰ مَن تَنَزَّلُ ٱلشَّيَـٰطِينُ ﴿٢٢١﴾ تَنَزَّلُ عَلَىٰ كُلِّ أَفَّاكٍ أَثِيمٍ ﴿٢٢٢﴾ يُلْقُونَ ٱلسَّمْعَ وَأَكْثَرُهُمْ كَـٰذِبُونَ ﴿٢٢٣﴾ ﴾

**"ಶೈತಾನರು ಯಾರ ಮೇಲೆ ಇಳಿಯುತ್ತಾರೆ ಎಂಬುದನ್ನು ನಿಮಗೆ ಹೇಳಲೇ, ಪ್ರತಿಯೊಂದು ಸುಳ್ಳುಗಾರ, ದುಷ್ಕರ್ಮಿಯ ಮೇಲೆ ಇಳಿಯುತ್ತಾರೆ. ಅವು ಕೇಳಿಸಿಕೊಂಡ ವಿಷಯಗಳನ್ನು( ಇವನ ಕಿವಿಗೆ) ತಂದು ಹಾಕುತ್ತವೆ ಮತ್ತು ಹೆಚ್ಚಿನವರು ಸುಳ್ಳುಗಾರರು."** (242)

ಇವುಗಳೆಲ್ಲ ಹೇಗಾಗುತ್ತದೆಂದರೆ ಶೈತಾನ್ ಮಲಕ್‌ಗಳ ಮಾತುಗಳಿಂದ ಕೆಲವನ್ನು ಕದ್ದು ಕೇಳುತ್ತಾನೆ. ಮತ್ತು ಜ್ಯೋತಿಷಿಯ ಕಿವಿಯಲ್ಲಿ ಹಾಕಿ ಬಿಡುತ್ತಾನೆ. ನಂತರ ಜ್ಯೋತಿಷಿಯು ಅದಕ್ಕೆ ನೂರು ಸುಳ್ಳುಗಳನ್ನು ಪೋಣಿಸಿ ಹೇಳುತ್ತಾನೆ. ಜನರು ಆ ಒಂದು ಸತ್ಯದ ಮಾತಿನಿಂದಾಗಿ ಆ ನೂರು ಸುಳ್ಳುಗಳನ್ನು ಸತ್ಯವೆಂದು ನಂಬುತ್ತಾರೆ. ಅದೃಶ್ಯ ಜ್ಞಾನವು ಸರ್ವಶ್ರೇಷ್ಠನಾದ ಅಲ್ಲಾಹುವಿಗೆ ಮಾತ್ರವಿರುವುದು, ಆದ್ದರಿಂದ ಯಾರಾದರೂ ಜ್ಯೋತಿಷಿಯೂ ಅಂತಹ ವಸ್ತುಗಳಿಂದ ಆ ಜ್ಞಾನದಲ್ಲಿ ಅಲ್ಲಾಹನೊಂದಿಗೆ ಪಾಲುದಾರನೆಂದು ವಾದಿಸಿದರೆ ಅಥವಾ ಹಾಗೆ ಹೇಳುವುದನ್ನು ಸತ್ಯವೆಂದು ನಂಬಿದರೆ ಅವನು ಅಲ್ಲಾಹನೊಂದಿಗೆ ಶಿರ್ಕ್(ಭಾಗೀದಾರಿಕೆ) ಮಾಡಿದನು. ಸ್ವತಃ ಜ್ಯೋತಿಷ್ಯವು ಸಹ ಶಿರ್ಕ್‌ನಿಂದ ಹೊರತಲ್ಲ. ಏಕೆಂದರೆ ಅದರಲ್ಲಿ ಶೈತಾನ್‌ಗಳಿಗೆ ಇಷ್ಟವಾದ ವಸ್ತುಗಳನ್ನು ಅರ್ಪಿಸಲಾಗುತ್ತದೆ. ಇದು ಅಲ್ಲಾಹುವಿನ ರುಬೂಬೀಯ್ಯತ್‌ನಲ್ಲಿ ಶಿರ್ಕ್ ಆಗಿದೆ. ಏಕೆಂದರೆ ಇದರಲ್ಲಿ ಅಲ್ಲಾಹ್‌ನ ಜ್ಞಾನದಲ್ಲಿ ಪಾಲುದಾರಿಕೆಯನ್ನು ವಾದಿಸಲಾಗುತ್ತದೆ. ಇದು ಅಲ್ಲಾಹ್‌ನ ಉಲೂಹಿಯ್ಯತ್ ನಲ್ಲೂ ಶಿರ್ಕ್ ಆಗಿದೆ. ಏಕೆಂದರೆ ಇದರಲ್ಲಿ ಇಬಾದತ್‌ನ ಮೂಲಕ ಅಲ್ಲಾಹೇತರರ ಸಾಮೀಪ್ಯವನ್ನು ಪಡೆಯಲಾಗುತ್ತದೆ.

ಅಬೂಹುರೈರಾ(ﷺ)ರಿಂದ ವರದಿ: ಪ್ರವಾದಿ(ﷺ) ಹೇಳಿರುವರು:

---

**242** ಕುರ್‌ಆನ್ 26:221–223

«مَنْ أَتَى كَاهِنًا فَصَدَّقَهُ بِمَا يَقُولُ فَقَدْ كَفَرَ بِمَا أُنْزِلَ عَلَى مُحَمَّدٍ ﷺ»

**“ಯಾರಾದರೂ ಜ್ಯೋತಿಷಿಯ ಬಳಿಗೆ ಬರುತ್ತಾನೋ ಮತ್ತು ಅವನನ್ನು ಸತ್ಯವೆಂದು ನಂಬುತ್ತಾನೋ ಅವನು ಮುಹಮ್ಮದ್(ﷺ)ರವರ ಮೇಲೆ ಅವತೀರ್ಣಗೊಂಡದ್ದನ್ನು ನಿಷೇಧಿಸಿದನು.”** [243]

ಇಂದು ಜನರನ್ನು ಎಚ್ಚರಿಸಬೇಕಾದ ವಿಷಯವೇನೆಂದರೆ, ಮಾಟಗಾರ, ಜ್ಯೋತಿಷಿ ಮತ್ತು ನಕ್ಷತ್ರ ನೋಡುವವನು ಇವರೆಲ್ಲರೂ ಇಂದು ನಮ್ಮ ವಿಶ್ವಾಸದೊಂದಿಗೆ ಆಟವಾಡುತ್ತಿದ್ದಾರೆ. ಇವರು ಜನರ ಹಿಂದೆ ತಮ್ಮನ್ನು ವೈದ್ಯರಂತೆ ತೋರಿಸುತ್ತಾರೆ ಮತ್ತು ರೋಗಿಗಳಿಗೆ ಅಲ್ಲಾಹನ ಹೊರತು ಇತರರಿಗೆ ಹರಕೆ ಕಾಣಿಕೆಗಳನ್ನು ಮತ್ತು ಬಲಿದಾನದ ಆದೇಶ ನೀಡುತ್ತಾರೆ.ಉದಾಹರಣೆಗೆ ಇಂತಿಂತಹ ಗುಣಗಳಿರುವ ಆಡು ಅಥವಾ ಕೋಳಿಯನ್ನು ಕೊಯ್ಯಿರಿ ಎಂದು ಹೇಳುತ್ತಾರೆ ಅಥವಾ ರೋಗಿಗಳಿಗೆ ಶಿರ್ಕ್‌ನ ಮಂತ್ರ, ಯಂತ್ರಗಳನ್ನು ಮತ್ತು ಪೈಶಾಚಿಕ ಅಭಯ ಮಂತ್ರಗಳನ್ನು ಬರೆದು ಕೊಡುತ್ತಾರೆ. ನಂತರ ಅದನ್ನು ತಗಡುಗಳ ಒಳಗಿಟ್ಟು ರೋಗಿಗಳ ಕೊರಳಲ್ಲಿ ನೇತು ಹಾಕುತ್ತಾರೆ ಅಥವಾ ಮನೆಯ ಪೆಟ್ಟಿಗೆಯಲ್ಲಿ ಇಡಿಸುತ್ತಾರೆ. ಇದೇ ರೀತಿ ಕೆಲವರು ಅದೃಶ್ಯ ಜ್ಞಾನವಿರುವುದಾಗಿ ಮತ್ತು ಕಾಣೆಯಾದ ವಸ್ತುಗಳನ್ನು ಹುಡುಕಿ ಕೊಡುವುದಾಗಿ ಜನರೆದುರು ಹೇಳುತ್ತಾರೆ. ಅಜ್ಞಾನಿಗಳಾದ ಜನರು ಅವರ ಬಳಿ ಹೋಗಿ, ಕಾಣೆಯಾದ ವಸ್ತುಗಳನ್ನು ಹುಡುಕಿಕೊಡಲು ಅವರಲ್ಲಿ ಕೇಳಿಕೊಳ್ಳುತ್ತಾರೆ. ಆಗ ಇವರು ಅವರಿಗೆ ಅದರ ಬಗ್ಗೆ ತಿಳಿಸುತ್ತಾರೆ. ಅಥವಾ ತನ್ನ ಶೈತಾನೀ ಸಹಚರರ ಮೂಲಕ ಅದನ್ನು ಹಾಜರುಪಡಿಸುತ್ತಾರೆ. ಇಂತಹ ಕೆಲವರು ಕರಾಮತಿರುವವರಾಗಿ, ವಲೀಗಳಾಗಿ ಹೆಸರು ಪಡೆಯುತ್ತಾರೆ. ಉದಾಹರಣೆಗೆ ಇವರು ಬೆಂಕಿಯೊಳಗೆ ನುಸುಳಿದರೂ ಅದು ಅವರಿಗೆ ತಾಗುವುದಿಲ್ಲ ಅಥವಾ ಆಯುಧಗಳಿಂದ ದೇಹಕ್ಕೆ ಗಾಯಗೊಳಿಸಿದರೂ ಕೆಲವೊಮ್ಮೆ ಇವರು ವಾಹನಗಳ ಚಕ್ರದ ಅಡಿಯಲ್ಲಿ ಮಲಗಿಕೊಡರೂ ಇವರಿಗೆ ಏನಾಗುವುದಿಲ್ಲ. ಇನ್ನೂ ಅನೇಕ ವೈಚಿತ್ರ್ಯಗಳನ್ನು ಇವರು ತೋರಿಸುತ್ತಾರೆ. ನಿಜವಾಗಿ ಇವುಗಳು ಜಾದೂ ಮತ್ತು ಶೈತಾನೀ ಕೃತ್ಯಗಳಾಗಿವೆ. ಜನರ ನಡುವೆ ಫಿತ್ನ ಫಸಾದ್‌ಗಳುಂಟಾಗಲೆಂದು ಈ ವ್ಯಕ್ತಿಗಳ ಮೂಲಕ ಇವು ನಡೆಯುತ್ತವೆ ಅಥವಾ ಇವುಗಳೆಲ್ಲ ಭ್ರಮೆಯಂತಹ ಕೃತಕ ಕೃತ್ಯಗಳಾಗಿರುತ್ತವೆ. ಅವುಗಳಲ್ಲಿ ಯಾವುದೇ ಹುರುಳಿರುವುದಿಲ್ಲ. ಫಿರ್‌ಔನ್‌ನ ಜನರು ಲಾಠಿ ಹಾಗೂ ಹಗ್ಗದೊಂದಿಗೆ ಜಾದೂ ತೋರಿಸಿದ ಹಾಗೆ ಇದು ಜನರ ಮುಂದೆ ಪ್ರದರ್ಶಿಸಲಾಗುವ ಭ್ರಮೆಯುಂಟು ಮಾಡುವವುಗಳಾಗಿರುತ್ತವೆ. ಶೇಖುಲ್ ಇಸ್ಲಾಮ್ ಇಬ್ನ್ ತೈಮಿಯ್ಯ(ರಹ್) ಕೆಲವು ಬತಾಈ ಅಹ್ಮದೀ(ರಿಫಾಈ) ಜಾದೂಗಾರರೊಂದಿಗೆ ವಾದ ಪ್ರತಿವಾದಕ್ಕಾಗಿ ಸೇರಿದ್ದರು. ಶೇಖ್ ಬತ್‌ಹಾಯೀ ರಿಫಾಈ ದೊಡ್ಡ ಸ್ವರದೊಂದಿಗೆ ಹೇಳಿದನು. ನಮ್ಮಲ್ಲಿ ಇಂತಿಂತಹ ಸ್ಥಿತಿಗಳಿವೆ ನಂತರ ಕೆಲವು ವಿಚಿತ್ರ ವಿಷಯಗಳನ್ನು

243 ಅಬೂದಾವೂದ್

ಅಂದರೆ ಬೆಂಕಿಯ ಸ್ಪರ್ಶ ಮುಂತಾದ ಅಸಾಮಾನ್ಯ ಕಾರ್ಯಗಳ ಬಗ್ಗೆ ಪ್ರಸ್ತಾಪಿಸಿ ಇದು ತಮಗೆ ಪ್ರತ್ಯೇಕವಾದಂತಹುದು ಎನ್ನುತ್ತಾ ಈ ಸ್ಥಿತಿಗತಿಗಳನ್ನು ಸಮ್ಮತಿಸಬೇಕು ಎಂದು ವಾದಿಸಿದರು. ಇದಕ್ಕೆ ಶೇಖುಲ್ ಇಸ್ಲಾಮ್ ಇಬ್ನ್ ತೈಮಿಯ್ಯ(ﷺ) ದೊಡ್ಡ ಸ್ವರದಲ್ಲಿ ಕೋಪದಿಂದ ಶೇಕ್ ರಿಫಾಈಯೊಂದಿಗೆ ಹೇಳಿದರು. ನಾನು ಜಗತ್ತಿನ ಪೂರ್ವ ಪಶ್ಚಿಮದ ಪ್ರತಿಯೊಂದು ಅಹ್ಮದೀಯೊಂದಿಗೆ ಹೇಳುವುದೇನೆಂದರೆ ಅವರು ಬೆಂಕಿಯೊಂದಿಗೆ ಏನೆಲ್ಲ ಮಾಡಿದರೋ ಅದನ್ನು ನಾನೂ ಮಾಡಬಲ್ಲೆ ಮತ್ತು ಅದರಲ್ಲಿ ಯಾರು ಸುಟ್ಟು ಹೋಗುತ್ತಾನೋ ಅವನು ಸೋಲುತ್ತಾನೆ. ಮಾತ್ರವಲ್ಲ ನಾನು ಹೀಗೂ ಹೇಳುತ್ತೇನೆ. ಅವನ ಮೇಲೆ ಅಲ್ಲಾಹನ ಶಾಪವಿರಲಿ. ಆದರೆ ಇದು ನಮ್ಮ ದೇಹವನ್ನು ಸಿರ್ಕ ಮತ್ತು ಬಿಸಿನೀರಿನಲ್ಲಿ ತೊಳೆದುಕೊಂಡರೆ ಮಾತ್ರ ನಡೆಯಬೇಕಿದೆ. ಇದನ್ನು ಕೇಳಿ ರಾಜ್ಯಾಧಿಕಾರಿಗಳು ಹಾಗೂ ಜನರು ಏನು ವಿಷಯ ಎಂದು ಕೇಳಿದಾಗ ನಾನು ಹೇಳಿದೆ ಇದರಲ್ಲಿ ಬೆಂಕಿಯೊಳಗೆ ನುಸುಳುವ ಕೆಲವು ತಂತ್ರಗಳಿವೆ. ಉದಾಹರಣೆಗೆ ಕಪ್ಪೆಯ ಎಣ್ಣೆ, ಲಿಂಬೆ ಹಣ್ಣಿನ ಸಿಪ್ಪೆ ಮತ್ತು (ತಲ್ಕ್)ನ ಕಲ್ಲು ಇತ್ಯಾದಿಗಳಿಂದ ತಯಾರಿಸಿದ ಒಂದು ಜಿಗುಟನ್ನು ದೇಹಕ್ಕೆ ಒರೆಸಿಕೊಳ್ಳುತ್ತಾರೆ. ಇದನ್ನು ಕೇಳಿ ಜನರು ಬೊಬ್ಬೆ ಹಾಕತೊಡಗಿದರು. ಇದನ್ನು ಕೇಳಿ ಆ ಮನುಷ್ಯನು ಬೆಂಕಿಯೊಳಗೆ ನುಸುಳುವ ತನ್ನ ಸಾಮರ್ಥ್ಯವನ್ನು ತೋರಿಸಿದನು ಮತ್ತು ಹೇಳಿದನು ನಾನು ಮತ್ತು, ನೀವು ಪಂಜರದೊಳಗೆ ಸರಿಸಲ್ಪಡುವಂತಾಗಲಿ ಮತ್ತು ನಮ್ಮ ದೇಹವನ್ನು ಕಿಬ್‌ರೀತ್ ತೈಲದಿಂದ ಸವರೋಣ. ನಾನು ಹೇಳಿದೆ ಸರಿ, ನಂತರ ನಾನು ಅದಕ್ಕಾಗಿ ಪ್ರೇರೇಪಿಸುತ್ತಲೇ ಇದ್ದೆ. ಅವನು ಬಟ್ಟೆ ತೆಗೆಯಬೇಕೆಂದು ಕೈ ಚಾಚಿದ. ನಾನು ಹೇಳಿದೆ. ಈಗಲ್ಲ ನಾವು ಮೊದಲು ಬಿಸಿ ನೀರು ಮತ್ತು ಸಿರ್ಕದಿಂದ ಸ್ನಾನ ಮಾಡೋಣ. ನಂತರ ಅವನು ತನ್ನ ಅಭ್ಯಾಸದಂತೆ ಭ್ರಮೆ ಉಂಟು ಮಾಡತೊಡಗಿದನು ಮತ್ತು ಹೇಳಿದನು. ಯಾರು ಅಮೀರ್‌ರನ್ನು ಇಷ್ಟಪಡುತ್ತಾನೋ ಅವನು ಕಟ್ಟಿಗೆಯನ್ನು ತರಲಿ ಅಥವಾ ಕಟ್ಟಿಗೆಯ ರಾಶಿಯನ್ನು ತರಲಿ. ಆಗ ನಾನು ಹೇಳಿದೆನು. ಕಟ್ಟಿಗೆ ತರುವಾಗ ಹೋತ್ತಾಗಬಹುದು ಜನರು ಬೇಸತ್ತು ಹೋಗಬಹುದು. ಅದಕ್ಕಿಂತ ಒಳ್ಳೆಯದು ಒಂದು ಕಂದೀಲನ್ನು ಹೊತ್ತಿಸೋಣ, ನಂತರ ನಾವಿಬ್ಬರು ತಮ್ಮ ತಮ್ಮ ಬೆರಳನ್ನು ಹಾಕೋಣ ಮತ್ತು ಇದು ಬೆರಳನ್ನು ಚೆನ್ನಾಗಿ ತೊಳೆದ ಮೇಲೆಯೇ ಮಾಡಬೇಕು. ಇದರಲ್ಲಿ ಯಾರ ಬೆರಳು ಸುಡುವುದೋ ಅವನ ಮೇಲೆ ಅಲ್ಲಾಹನ ಶಾಪವಿರುವುದು ಅಥವಾ ಅವನು ಸೋತವನಾಗಿರುವನು. ನಾನು ಇದನ್ನು ಹೇಳಿದಾಗ ಅವನು ಬದಲಾದನು ಮತ್ತು ಅಪಮಾನಿತನಾದನು.” (ಮಜ್‌ಮೂಉಲ್ ಫತಾವಾ). ಈ ಘಟನೆಯನ್ನು ಇಲ್ಲಿ ಹೇಳಿರುವುದೇಕೆಂದರೆ ಇದೇ ರೀತಿಯಲ್ಲಿ ವಂಚಕರು ತಮ್ಮ ವಂಚನೆಯಿಂದ ಜನ ಸಾಮಾನ್ಯರನ್ನು ಹೇಗೆ ವಂಚಿಸುತ್ತಾರೆಂಬುದನ್ನು ಕಾಣಬಹುದು.

## ಅಧ್ಯಾಯ–3

# ಗೋರಿಗಳಿಗೆ ದರ್ಗಾಗಳಿಗೆ ಹರಕೆ ಕಾಣಿಕೆ ಮತ್ತು ಹದಿಯ ಕೊಡುವುದು ಮತ್ತು ಅವುಗಳನ್ನು ಆದರಿಸುವುದು

'ಪ್ರವಾದಿ(ﷺ)ರವರು ಶಿರ್ಕ್‌ನ ಎಲ್ಲಾ ದಾರಿಗಳನ್ನು ಮುಚ್ಚಿರುವರು. ಅಲ್ಲದೇ ಶಿರ್ಕ್ ಹಾಗೂ ಅದರ ಕೃತ್ಯಗಳ ಕುರಿತು ಮುಸ್ಲಿಮರಿಗೆ ಕಟ್ಟುನಿಟ್ಟಾಗಿ ಎಚ್ಚರಿಕೆ ನೀಡಿರುವರು. ಈ ಪೈಕಿ ಗೋರಿಯ ಬಳಿ ಬೇಡಿಕೊಳ್ಳುವುದೂ ಒಂದು. ಆದ್ದರಿಂದ ಗೋರಿಯ ಬಳಿ ಹೋಗುವುದು ಮತ್ತು ಪ್ರವಾದಿ(ﷺ) ಅವುಗಳ ಆರಾಧನೆಯಿಂದ ಜನರನ್ನು ಸುರಕ್ಷಿತರನ್ನಾಗಿಸಲು, ಅದರ ವಕ್ತಾರರ ತೀವ್ರತೆಯನ್ನು ತಿಳಿಸಲು ಕಟ್ಟು ನಿಟ್ಟಿನ ನಿಯಮಗಳನ್ನೂ ಹಾಕಿರುತ್ತಾರೆ. ಅವುಗಳ ಪೈಕಿ

1) ಔಲಿಯಾಗಳು ಹಾಗೂ ಸಜ್ಜನರ ಮೇಲಿನ ಪ್ರೀತಿಯಲ್ಲಿ ಅತಿಶಯದ ಕುರಿತು ಸಮುದಾಯವನ್ನು ಎಚ್ಚರಿಸಿರುವರು. ಯಾಕೆಂದರೆ ಅವರ ವಿಶ್ವಾಸದಲ್ಲಿ ಅತಿರೇಕವು ಆಗುತ್ತಾ ಆಗುತ್ತಾ ಕೊನೆಗೆ ಅವರ ಆರಾಧನೆಯಾಗಲು ತೊಡಗುತ್ತದೆ. ಪ್ರವಾದಿ(ﷺ) ಹೇಳಿದ್ದಾರೆ.

«إِيَّاكُمْ وَالْغُلُوَّ فَإِنَّمَا أَهْلَكَ مَنْ كَانَ قَبْلَكُمْ الْغُلُوُّ»

**"ಅತಿರೇಕದಿಂದ ನಿಮ್ಮನ್ನು ರಕ್ಷಿಸಿಕೊಳ್ಳಿ. ಏಕೆಂದರೆ ನಿಮಗಿಂತ ಹಿಂದೆ ನಾಶವಾದವರು ಧರ್ಮದಲ್ಲಿ ಅತಿರೇಕ ಮಾಡಿದವರಾಗಿದ್ದಾರೆ."** (244)

ಇನ್ನೊಂದು ಕಡೆಯಲ್ಲಿ ಹೀಗೆನ್ನಲಾಗಿದೆ.

«لَا تَطْرُونِي كَمَا أَطْرَتِ النَّصَارَى ابْنَ مَرْيَمَ إِنَّمَا أَنَا عَبْدٌ فَقُولُوا عَبْدُ اللَّهِ وَرَسُولُهُ»

**"ಕ್ರೈಸ್ತರು ಮರ್ಯಮರ ಮಗ ಈಸಾ(عليه السلام)ರನ್ನು ಗುಣಗಾನ ಮಾಡಿದಂತೆ ನೀವು ನನ್ನ ಹೊಗಳಿಕೆಯಲ್ಲಿ ಅತಿರೇಕವೆಸಗದಿರಿ. ಏಕೆಂದರೆ ನಾನು ಅಲ್ಲಾಹನ ದಾಸನು. ಆದ್ದರಿಂದ ನನ್ನನ್ನು ಅಲ್ಲಾಹನ ದಾಸ ಮತ್ತು ಅವನ ಪ್ರವಾದಿ ಎನ್ನಿರಿ."** (245)

2. ಪ್ರವಾದಿ(ﷺ) ಗೋರಿಗಳ ಮೇಲೆ ಕಟ್ಟಡ ನಿರ್ಮಿಸುವುದನ್ನು ನಿಷೇಧಿಸಿರುವರು. ಅಬುಲ್ ಹಯ್ಯಾಜುಲ್ ಅಸದೀಯವರಿಂದ ವರದಿ :ಅವರು ಹೇಳುತ್ತಾರೆ.

---

**244** ಅಹ್ಮದ್,ತಿರ್ಮುದೀ,ಇಬ್ನ್ ಮಾಜ

**245** ಅಲ್ ಬುಖಾರಿ

قَالَ لِي عَلِيٌّ (ﷺ) أَلَا أَبْعَثُكَ عَلَى مَا بَعَثَنِي عَلَيْهِ رَسُولُ اللَّهِ (ﷺ)؟ أَنْ لَا تَدَعَ تِمْثَالًا إِلَّا طَمَسْتَهُ وَلَا قَبْرًا مُشْرِفًا إِلَّا سَوَّيْتَهُ

**"ಅಲೀ (ﷺ)ರವರು ನನ್ನೊಡನೆ ಹೀಗೆ ಕೇಳಿದರು, ಅಲ್ಲಾಹನ ಸಂದೇಶವಾಹಕರು (ﷺ) ನನ್ನನ್ನು ಕಳಿಸಿದ್ದ ಒಂದು ಕೆಲಸಕ್ಕೆ ನಾನು ನಿಮ್ಮನ್ನು ಕಳುಹಿಸಲೇ? ಅದೇನೆಂದರೆ ಎಲ್ಲಿಯಾದರೂ ವಿಗ್ರಹ ಕಂಡು ಬಂದರೆ ಅದನ್ನು ಒಡೆದು ಹಾಕಿರಿ ಮತ್ತು ಎಲ್ಲಿಯಾದರೂ ಎತ್ತರದ ಗೋರಿಯನ್ನು ಕಂಡರೆ ಅದನ್ನು ನೆಲಸಮ ಮಾಡಿರಿ."** [246]

3) ಇದೇ ರೀತಿ ಅಲ್ಲಾಹನ ಸಂದೇಶವಾಹಕರು(ﷺ) ಗೋರಿಗಳ ಮೇಲೆ ಗಾರೆ ಹಾಕುವುದರಿಂದಲೂ ಮತ್ತು ಅದರ ಮೇಲೆ ಕಟ್ಟಡ ನಿರ್ಮಿಸುವುದರಿಂದಲೂ ಕಟುವಾಗಿ ವಿರೋಧಿಸಿದ್ದಾರೆ.

4) ಗೋರಿಯ ಬಳಿ ನಮಾಝ್ ಮಾಡುವುದನ್ನೂ ಪ್ರವಾದಿ(ﷺ) ನಿಷೇಧಿಸಿರುವರು. ಆಯಿಶಾ (ﷺ) ಹೇಳುತ್ತಾರೆ: ಪ್ರವಾದಿ(ﷺ) ಮರಣಾಸನ್ನರಾಗಿದ್ದಾಗ ತಮ್ಮ ಚದ್ದರವನ್ನು ಮುಖಕ್ಕೆ ಎಳೆದುಕೊಳ್ಳುತ್ತಿದ್ದರು. ಅವರಿಗೆ ಕಷ್ಟವಾದಾಗ ಅದನ್ನು ಸರಿಸುತ್ತಿದ್ದರು. ಈ ಸ್ಥಿತಿಯಲ್ಲಿ ಪ್ರವಾದಿ (ﷺ) ಹೇಳಿದರು.

«لَعْنَةُ اللَّهِ عَلَى الْيَهُودِ وَالنَّصَارَى اتَّخَذُوا قُبُورَ أَنْبِيَائِهِمْ مَسَاجِدَ»

**"ಯಹೂದ್ಯರು ಹಾಗೂ ಕ್ರೈಸ್ತರ ಮೇಲೆ ಅಲ್ಲಾಹನ ಶಾಪವಿರಲಿ. ಅವರು ತಮ್ಮ ಪ್ರವಾದಿಗಳ ಗೋರಿಗಳನ್ನು ಆರಾಧನಾ ಸ್ಥಳವನ್ನಾಗಿ ಮಾಡುತ್ತಿದ್ದರು."** ಪ್ರವಾದಿ(ﷺ) ತನ್ನ ಸಮುದಾಯವನ್ನು ಅವರು ಮಾಡುತ್ತಿದ್ದಂತಹವುಗಳಿಂದ ಎಚ್ಚರಿಸುತ್ತಿದ್ದರು. ಹಾಗಲ್ಲದಿರುತ್ತಿದ್ದರೆ ಪ್ರವಾದಿ(ﷺ) ತಮ್ಮ ಗೋರಿಯನ್ನು ಸಾರ್ವಜನಿಕವಾಗಿಸುತ್ತಿದ್ದರು. ಆದರೆ ಜನರು ಅದನ್ನು ಮಸೀದಿಯಾಗಿ ಮಾಡಬಹುದೆಂದು ಅವರಿಗೆ ಭಯವಿತ್ತು. [247]

ಪ್ರವಾದಿ(ﷺ) ಹೇಳಿರುವರು.

«أَلَا وَإِنَّ مَنْ كَانَ قَبْلَكُمْ كَانُوا يَتَّخِذُونَ قُبُورَ أَنْبِيَائِهِمْ مَسَاجِدَ أَلَا فَلَا تَتَّخِذُوا الْقُبُورَ مَسَاجِدَ فَإِنِّي أَنْهَاكُمْ عَنْ ذَلِكَ»

**"ಗಮನಿಸಿರಿ, ನಿಜವಾಗಿಯೂ ನಿಮಗಿಂತ ಮುಂಚೆ ಇದ್ದವರು ತಮ್ಮ ಪ್ರವಾದಿಗಳ ಗೋರಿಗಳನ್ನು ಮಸೀದಿಗಳನ್ನಾಗಿ ಮಾಡುತ್ತಿದ್ದರು. ಗಮನಿಸಿರಿ, ನೀವು ಗೋರಿಗಳನ್ನು ಮಸೀದಿಗಳನ್ನಾಗಿ ಮಾಡದಿರಿ. ಏಕೆಂದರೆ ಇದೋ ನಾನು ಅದರಿಂದ ನಿಮ್ಮನ್ನು**

**246** ಮುಸ್ಲಿಮ್

**247** ಬುಖಾರಿ ಮುಸ್ಲಿಮ್

**ತಡೆಯುತ್ತಿದ್ದೇನೆ”** [248]

ಗೋರಿಗಳನ್ನು ಮಸೀದಿಯನ್ನಾಗಿ ಮಾಡುವುದರ ಸ್ಪಷ್ಟ ಅರ್ಥವೇನೆಂದರೆ ಗೋರಿಯ ಮೇಲೆ ನಮಾಝ್ ಮಾಡುವುದು, ಅದರಲ್ಲಿ ಮಸೀದಿ ಇಲ್ಲದಿದ್ದರೂ ಕೂಡಾ, ಆದ್ದರಿಂದ ನಮಾಝ್‌ಗಾಗಿ ಉದ್ದೇಶಿಸಲಾದ ಯಾವುದೇ ಸ್ಥಳವೂ ಮಸೀದಿಯಾಗುವುದು. ರಸೂಲುಲ್ಲಾಹಿ(ﷺ) ಹೇಳಿದ್ದಾರೆ.

«جُعِلَتْ لِي الْأَرْضُ مَسْجِدًا وَطُهُورًا»

**“ಇಡೀ ಭೂಮಿಯನ್ನು ನನಗಾಗಿ ಸಾಷ್ಟಾಂಗವೆರಗುವ ಸ್ಥಳ ಹಾಗೂ ಶುದ್ಧವಾಗಿ ಮಾಡಲಾಗಿದೆ.”** [249]

ಇನ್ನು ಇವುಗಳ ಮೇಲೆ ಮಸೀದಿಯಾದರೆ ವಿಷಯವು ಇನ್ನು ಕೆಡುವುದು.

ಬಹಳ ಜನರು ಈ ಆದೇಶಗಳನ್ನು ಉಲ್ಲಂಘಿಸಿರುವರು ಮತ್ತು ಪ್ರವಾದಿ(ﷺ)ರು ಯಾವ ವಸ್ತುವಿನಿಂದ ಜನರನ್ನು ತಡೆದಿರುವರೋ ಜನರು ಅದನ್ನೇ ಮಾಡುತ್ತಿರುವರು. ಹೀಗೆ ಅವರು ದೊಡ್ಡ ಶಿರ್ಕ್ ಮತ್ತು ಶಿರ್ಕ್‌ನ ಕೃತ್ಯಗಳಲ್ಲಿ ಶಾಮೀಲಾಗಿರುವರು. ಗೋರಿಗಳ ಮೇಲೆ ಮಸೀದಿ, ದರ್ಗಾಗಳನ್ನು ಮಕಾಮ್‌ಗಳನ್ನು ನಿರ್ಮಿಸಿರುವರು. ಅವುಗಳಲ್ಲಿ ದೊಡ್ಡ ಶಿರ್ಕ್‌ನ ಕೃತ್ಯಗಳು ನಡೆಯುತ್ತಿರುತ್ತವೆ. ಅಲ್ಲಿ ಹರಕೆ ಕಾಣಿಕೆಗಳನ್ನು ಅರ್ಪಿಸಲಾಗುತ್ತದೆ. ಗೋರಿಯೊಳಗಿರುವವರಲ್ಲಿ ಕೋರಿಕೆ ಬೇಡಿಕೆಗಳನ್ನಿಡುವುದು. ಪ್ರಾರ್ಥಿಸುವುದು, ಸಹಾಯಯಾಚನೆ ನಡೆಸುವುದು ಇವುಗಳೆಲ್ಲ ನಡೆಯುತ್ತಿವೆ.

ಇಬ್ನುಲ್ ಖಯ್ಯಿಮ್(ರಹ್) ಹೇಳುತ್ತಾರೆ: ಯಾರಾದರೂ ಗೋರಿಗಳ ಬಗ್ಗೆ ಪ್ರವಾದಿ (ﷺ)ರವರ ಚರ್ಯೆ, ಅವರ ವಿಧಿ–ನಿಷೇಧಗಳು ಹಾಗೂ ಸಹಾಬಾಗಳು ಪಾಲಿಸಿದ ರೀತಿಯನ್ನೂ, ಜನರಲ್ಲಿರುವ ಕರ್ಮಗಳನ್ನೂ ಒಟ್ಟಿಗೆ ಸೇರಿಸಲು ಪ್ರಯತ್ನಿಸಿದಲ್ಲಿ ಎರಡು ವೈರುಧ್ಯಗಳು ಒಟ್ಟು ಸೇರಿದ ಅನುಭವವಾಗುವುದು ಎಂದಿಗೂ ಒಟ್ಟು ಸೇರದಂತಹ ವಸ್ತುಗಳನ್ನು ಅವನ ಒಟ್ಟು ಸೇರಿಸುವ ಪ್ರಯತ್ನವಾಗಿದೆ. ನಿಸ್ಸಂದೇಹವಾಗಿ, ಪ್ರವಾದಿ (ﷺ) ಗೋರಿಯ ಬಳಿ ಪ್ರಾರ್ಥಿಸುವುದನ್ನು ನಿಷೇಧಿಸಿರುವರು. ಆದರೆ ಜನರು ಅಲ್ಲಿ ನಮಾಝ್ ಮಾಡುತ್ತಾರೆ. ಗೋರಿಯನ್ನು ಮಸೀದಿ ಮಾಡುವುದನ್ನು ವಿರೋಧಿಸಿರುವರು. ಆದರೆ ಖಂಡಿತ ಇವರು ಅವುಗಳ ಮೇಲೆ ಮಸೀದಿ ಮಾಡುತ್ತಾರೆ ಮತ್ತು ಅದಕ್ಕೆ ಸ್ಮಾರಕದ ಹೆಸರಿಡುತ್ತಾರೆ. ಅವುಗಳು ಅಲ್ಲಾಹನ ಭವನಗಳೊಂದಿಗೆ ಪ್ರತಿಸ್ಪರ್ಧಿಯಾಗಿ ಬಿಡಬಹುದೆಂಬ ಆಶಂಕೆಯಿಂದ) ಪ್ರವಾದಿ(ﷺ) ಗೋರಿಗಳಲ್ಲಿ ದೀಪ ಹಚ್ಚುವುದನ್ನು ವಿರೋಧಿಸಿರುವರು. ಆದರೆ ಇವರು ಖಬರಸ್ಥಾನದಲ್ಲಿ ದೀಪ ಹಚ್ಚುತ್ತಾರೆ. ಎಷ್ಟೆಂದರೆ ದೀಪವಿಡುವ ಸ್ಥಳ ಮಾಡಲು ಸಂಪತ್ತನ್ನು ವಕ್ಫ್ ಮಾಡುತ್ತಾರೆ. ಕಬರ್‌ಸ್ಥಾನದಲ್ಲಿ ಅಥವಾ

---

**248** ಮುಸ್ಲಿಮ್ ಸಹೀಹ್

**249** ಬುಖಾರಿ

ಕಬರ್‌ಗೆ ಅನ್ವಯವಾಗಿ ಉತ್ಸವ ಅಥವಾ ಹಬ್ಬ ಹರಿದಿನ ಆಚರಿಸುವುದನ್ನು ಕಟುವಾಗಿ ವಿರೋಧಿಸಿರುವರು, ಆದರೆ ಈ ಜನರು ಪೆರ್ನಾಳ್ ಅಥವಾ ಬಕ್ರೀದ್ ಹಬ್ಬಗಳಂತೆ ಅಥವಾ ಅದಕ್ಕಿಂತಲೂ ಹೆಚ್ಚಿನ ಪ್ರಾಶಸ್ತ್ಯದಿಂದ ಗೋರಿ ದರ್ಗಾಗಳ ಉರೂಸ್‌ಗಾಗಿ ಒಟ್ಟು ಸೇರುತ್ತಾರೆ. ಅವರು ಖಬರನ್ನು ನೆಲಕ್ಕೆ ಸಮವಾಗಿ ಮಾಡಲು ಆದೇಶಿಸಿದ್ದಾರೆ. ಅಬುಲ್ ಹಯಾಜುಲ್ ಅಸದೀರವರಿಂದ ವರದಿ: ಅವರು ಹೇಳುತ್ತಾರೆ. ಅವರು ಅಲೀಬಿನ್ ಅಬೀತಾಲಿಬ್(﵁) ನನ್ನೊಂದಿಗೆ ಹೇಳಿರುವರು:

قَالَ لِي عَلِيٌّ (﵁) أَلَا أَبْعَثُكَ عَلَى مَا بَعَثَنِي عَلَيْهِ رَسُولُ اللَّهِ (ﷺ)؟ أَنْ لَا تَدَعَ تِمْثَالًا إِلَّا طَمَسْتَهُ وَلَا قَبْرًا مُشْرِفًا إِلَّا سَوَّيْتَهُ

**“ನನ್ನನ್ನು ಪ್ರವಾದಿ(ﷺ) ರವರು ಕಳುಹಿಸಿದ ಒಂದು ಕಾರ್ಯಕ್ಕೆ ನಿಮ್ಮನ್ನು ಕಳುಹಿಸಲೇ? ಅದು ಹೇಗೆಂದರೆ ಅಲ್ಲಿ ಯಾವುದೇ ಚಿತ್ರ ಕಂಡರೂ ಅಳಿಸಲು ಮತ್ತು ಯಾವುದೇ ಎತ್ತರದ ಗೋರಿ ಕಂಡರೆ ನೆಲಸಮಗೊಳಿಸಲು ಆದೇಶಿಸಿದ್ದರು.”** [250]

ಸಹೀಹ್ ಮುಸ್ಲಿಮ್‌ನಲ್ಲಿ ಇನ್ನೊಂದು ವರದಿಯು ಸುಮಾಮ ಬಿನ್ ಶುಫೀರವರಿಂದ ಇದೆ. ಅವರು ಹೇಳುತ್ತಾರೆ. ನಾವು ಫಝಾಲ ಬಿನ್ ಉಬೈದ್(﵁)ರವರೊಂದಿಗೆ ರೋಮ್ ಸಾಮ್ರಾಜ್ಯದ ಬರೂದಸ್ ಎಂಬ ಪ್ರದೇಶದಲ್ಲಿದ್ದೆವು. ಆಗ ನಮ್ಮಲ್ಲೊಬ್ಬರು ಮರಣ ಹೊಂದಿದರು. ಅವರನ್ನು ದಫನ ಮಾಡುವ ಸಮಯದಲ್ಲಿ ಫಝಾಲ (﵁)ರವರು ಅವರ ಖಬರ್‌ಅನ್ನು ಸಮತಟ್ಟು ಮಾಡಲು ಆದೇಶಿಸಿದರು” ಮತ್ತು ಹೇಳಿದರು ನಾನು ಅಲ್ಲಾಹನ ಸಂದೇಶವಾಹಕರು(ﷺ)ರಿಂದ ಕೇಳಿದ್ದೇನೆ. ಪ್ರವಾದಿ (ﷺ)ರು ಖಬರ್‌ಅನ್ನು ಸಮತಟ್ಟು ಮಾಡಲು ಆದೇಶಿಸಿರುವರು. ಆದರೆ ಗೋರಿಯ ವಕ್ತಾರರು ಈ ಎರಡೂ ಹದೀಸ್‌ಗಳನ್ನು ಸಂಪೂರ್ಣ ತಿರಸ್ಕರಿಸಿದ್ದಾರೆ. ಮನೆಯಂತೆ ಗೋರಿಗಳನ್ನು ಎತ್ತರಿಸುವುದರಲ್ಲಿ, ಅವುಗಳ ಮೇಲೆ ಕುಬ್ಬ ನಿರ್ಮಿಸುವಲ್ಲಿ ನಿರತರಾಗಿದ್ದಾರೆ. ಹೀಗೆ ಇಬ್ನುಲ್ ಕಯ್ಯಿಮ್(﵀) ಮುಂದುವರಿಸುತ್ತಾ ಹೇಳುತ್ತಾರೆ. ಅಲ್ಲಾಹನ ಸಂದೇಶವಾಹಕರು(ﷺ)ರವರ ಶರೀಅತ್ ಹಾಗೂ ಗೋರಿಗಳ ಕುರಿತು ಪ್ರವಾದಿ(ﷺ)ರವರ ಆದೇಶಗಳನ್ನು ಮತ್ತು ಇಂದಿನ ಗೋರಿಗಳ ಮನಸೋಇಚ್ಛೆಯ ಶರೀಅತ್‌ಅನ್ನು ಗಮನಿಸಿದರೆ ಎಷ್ಟೊಂದು ವ್ಯತ್ಯಾಸ ಕಂಡು ಬರುವುದು. ಇವರು ಮುಫಾಸಿದ್‌ಗಳು ಅಂದರೆ ಪಿತೂರಿಗಾರರಾಗಿದ್ದಾರೆ. ಇವರ ಲೆಕ್ಕ ಸಿಗುವುದು ಕಷ್ಟವಾಗಿದೆ. ಆ ನಂತರ ಇಬ್ನುಲ್ ಕಯ್ಯಿಮ್(﵀)ರವರು ಈ ಮುಫಾಸಿದ್‌ಗಳನ್ನು ವಿಂಗಡಿಸಿ ಹೇಳಿದ್ದಾರೆ. ಕೊನೆಗೆ ಹೇಳಿರುವರು: ಅಲ್ಲಾಹನ ಸಂದೇಶವಾಹಕರು(ﷺ) ಖಬರ್ ಝಿಯಾರತ್‌ಗೆ ಅನುಮತಿಸಿರುವರು. ಅದರ ತಾತ್ಪರ್ಯವೆಂದರೆ ಪರಲೋಕವನ್ನು ನೆನಪಿಸಲು ಮತ್ತು ಪ್ರಾರ್ಥಿಸುವ ಮೂಲಕ ಗೋರಿಯೊಳಗಿರುವವರಿಗೆ ಮಹದುಪಕಾರ

250 ಮುಸ್ಲಿಮ್

ಮಾಡಲೆಂದಾಗಿರುತ್ತದೆ. ಅಲ್ಲಾಹನ ರಹ್‌ಮತ್‌ಗಾಗಿ, ಕ್ಷಮೆಗಾಗಿ ಪ್ರಾರ್ಥಿಸಬಹುದು. ಈ ಎಲ್ಲಾ ಕಾರ್ಯಗಳಿಂದ ಝಿಯಾರತ್ ಮಾಡುವವ ತನಗಾಗಿ ಒಳಿತನ್ನು ಮಾಡುತ್ತಾನೆ ಮತ್ತು ಮಯ್ಯಿತ್‌ಗಾಗಿಯೂ ಒಳಿತನ್ನು ಮಾಡುತ್ತಾನೆ. ಆದರೆ ಗೋರಿಯಾರಾಧಕ ಮುಶ್ರಿಕರು ವಿಷಯವನ್ನು ತಲೆಕೆಳಗೆ ಮಾಡಿದರು. ಧರ್ಮವನ್ನು ತಿರುಗಿಸಿದರು. ಝಿಯಾರತ್‌ನ ಉದ್ದೇಶವನ್ನು ಶಿರ್ಕ್ ಮಾಡಿದರು. ಇವರು ಮಯ್ಯಿತ್‌ನೊಂದಿಗೆ ಮತ್ತು ಮಯ್ಯಿತ್‌ನ ಮೂಲಕವಾಗಿ ಪ್ರಾರ್ಥಿಸುತ್ತಾರೆ. ಅವರ ತವಸ್ಸುಲ್‌ನಿಂದ ತಮ್ಮ ಇಷ್ಟಸಿದ್ಧಿಗಳನ್ನು ಕೇಳುತ್ತಾರೆ. ಅವರ ಮೂಲಕ ಬರ್ಕತ್ ಅನ್ನು ಕೇಳುತ್ತಾರೆ. ಶತ್ರುಗಳಿಂದ ರಕ್ಷಣೆಗೆ ಸಹಾಯ ಕೇಳುತ್ತಾರೆ ಇತ್ಯಾದಿ ಈ ಕೃತ್ಯಗಳಿಂದಾಗಿ ಈ ಜನರು ತಮಗೆ ಹಾಗೂ ಮಯ್ಯಿತ್‌ಗೆ ಉಪಕಾರ ಮಾಡುವ ಬದಲಾಗಿ ನಷ್ಟವನ್ನೇ ಮಾಡುತ್ತಾರೆ. ಒಂದು ವೇಳೆ ಇದರಲ್ಲಿ ಏನೂ ಇಲ್ಲದಿದ್ದರೂ ಕೂಡಾ ಇಸ್ಲಾಮೀ ಶರೀಅತ್‌ನ ಬರ್ಕತ್‌ನಿಂದ ವಂಚಿತರಾಗಲೇಬೇಕಾಗುತ್ತದೆ. [251]

ಇವುಗಳಿಂದ ಒಂದು ವಿಷಯ ವ್ಯಕ್ತವಾಗುತ್ತದೇನೆಂದರೆ ಗೋರಿಗಳಿಗೆ, ದರ್ಗಾಗಳಿಗೆ ಹರಕೆ, ಕಾಣಿಕೆ ಅರ್ಪಿಸುವುದು, ಬಲಿದಾನ ಮಾಡುವುದು ದೊಡ್ಡ ಶಿರ್ಕ್ ಆಗಿದೆ. ಇದು ಗೋರಿಯ ಬಗ್ಗೆ ಪಾಲಿಸಬೇಕಾದ ಪ್ರವಾದಿ(ﷺ)ರ ಆದೇಶದ ತಿರಸ್ಕಾರವಾಗಿದೆ. ಪ್ರವಾದಿ(ﷺ)ರು ಗೋರಿಗಳ ಮೇಲೆ ಕಟ್ಟಡ ನಿರ್ಮಿಸುವುದನ್ನು ವಿರೋಧಿಸಿರುವರು. ಇದರ ಮೇಲೆ ಮಸೀದಿ ನಿರ್ಮಾಣವಾದರೆ ಇದರ ನಾಲ್ಕು ಕಡೆಯಲ್ಲಿ ಸಜ್ದಾ ಪ್ರಾರಂಭವಾಗಬಹುದು ಅಥವಾ ಜನರು ನಮಾಝ್ ಮಾಡತೊಡಗಬಹುದು. ಹೀಗೆ ಮೂಢ ಜನರು ಗೋರಿಯೊಳಗಿರುವವರು ಲಾಭ ನಷ್ಟವನ್ನು ಮಾಡಬಲ್ಲರೆಂದು ಭಾವಿಸುವುದು ಮಾತ್ರವಲ್ಲ ಯಾರು ಇವರೊಂದಿಗೆ ಸಹಾಯ ಕೇಳುತ್ತಾರೋ ಅವರಿಗೆ ಆ ಗೋರಿಯೊಳಗಿರುವವರು ಸಹಾಯ ಮಾಡುವರು ಎಂದು ಭಾವಿಸತೊಡಗುವರು. ಯಾರು ಗೋರಿಯ ಬಳಿ ಹೋಗುತ್ತಾರೋ, ಗೋರಿಯೊಳಗಿರುವವರು ಆ ಜನರ ಅಗತ್ಯವನ್ನು ಪೂರೈಸುತ್ತಾರೆ ಎಂದು ತಿಳಿದುಕೊಳ್ಳುತ್ತಾರೆ. ಹೀಗೆಲ್ಲ ತಿಳಿದುಕೊಂಡು ಈ ಮೂಢ ಜನರು ಧಾರಾಳ ಹರಕೆ ಕಾಣಿಕೆಗಳನ್ನು ಸಲ್ಲಿಸುತ್ತಾರೆ. ಈ ಕಾರಣಗಳಿಂದಾಗಿ ಈಗ ಗೋರಿಗಳು ವಿಗ್ರಹದ ರೂಪವನ್ನು ತಾಳಿವೆ. ಮಾತ್ರವಲ್ಲ ಅಲ್ಲಾಹನನ್ನು ಬಿಟ್ಟು ಆ ಗೋರಿಗಳ ಆರಾಧನೆ ನಡೆಯುತ್ತದೆ. ಅಲ್ಲಾಹನ ಪ್ರವಾದಿ(ﷺ) ಹೇಳಿದ್ದಾರೆ:

«اللَّهُمَّ لَا تَجْعَلْ قَبْرِي وَثَنًا يُعْبَدُ»

**“ಅಲ್ಲಾಹುವೇ ನನ್ನ ಗೋರಿಯನ್ನು ಆರಾಧನೆಯ ವಿಗ್ರಹ ಮಾಡದಿರು.”** [252]

ರಸೂಲುಲ್ಲಾಹಿ (ﷺ) ಹೀಗೆ ಹೇಳಿರುವ ಕಾರಣ ಬಹಳ ಗೋರಿಗಳಿಗೆ ಇಂತಹ

---

**251** ಇಗಾಸತುಲ್ಲಹ್‌ಫಾನ್1/214,215,217

**252** ಮಾಲಿಕ್, ಅಹ್ಮದ್

ಅವಸ್ಥೆಯು ಬರುವುದಿತ್ತು. ಮುಸ್ಲಿಮ್ ಸಮಾಜದ ಇಂದಿನ ಸ್ಥಿತಿಯು ಎಲ್ಲರ ಕಣ್ಣೆದುರೇ ಇದೆ. ಆದರೆ ರಸೂಲುಲ್ಲಾಹ್(ﷺ)ರವರು ಪ್ರಾರ್ಥಿಸಿದ ಪ್ರಾರ್ಥನೆಯ ಬರ್ಕತ್‌ನಿಂದ ರಸೂಲುಲ್ಲಾಹಿ(ﷺ)ರವರ ರೌಳಾವನ್ನು ಅಲ್ಲಾಹು ಶಿರ್ಕ್‌ನ ಕೆಡುಕಿನಿಂದ ಕಾಪಾಡಿರುವನು. ಇಂದಿನ ಎಷ್ಟೋ ಜಾಹಿಲ್, ಕುರಾಫಿಗಳು ಅಲ್ಲಾಹನ ರಸೂಲ್(ﷺ) ರವರ ಮಾರ್ಗದರ್ಶನದ ವಿರುದ್ಧ ನಡೆಯುತ್ತಿದ್ದಾರೆ. ಆದರೆ ಅವರಿಗೆ ರೌಳಾದವರೆಗೆ ತಲುಪಲು ಸಾಧ್ಯವಾಗುತ್ತಿಲ್ಲ. ಕಾರಣ ಅಲ್ಲಾಹನ ಸಂದೇಶವಾಹಕರ(ﷺ) ಗೋರಿಯು ಮಸೀದಿಯಲ್ಲಿರದೇ ಅವರ ಮನೆಯೊಳಗಿದೆ. ಇದರ ನಾಲ್ಕು ಕಡೆಯಲ್ಲಿ ಗೋಡೆಯನ್ನು ನಿರ್ಮಿಸಲಾಗಿದೆ. ಹೇಗೆಂದರೆ ಅಲ್ಲಾಮ ಇಬ್ನುಲ್ ಕಯ್ಯಿಮ್(رحمه الله) ತನ್ನ ಕವಿತೆಯಲ್ಲಿ ಹೇಳುತ್ತಾರೆ.

**ಸರ್ವಲೋಕ ಪರಿಪಾಲಕ ಅವರ ಪ್ರಾರ್ಥನೆಯನ್ನು ಸ್ವೀಕರಿಸಿದ,**
**ಮತ್ತದನ್ನು ಮೂರು ಗೋಡೆಗಳಿಂದ ಆವೃತಗೊಳಿಸಿದ.**

## ಅಧ್ಯಾಯ-4

# ಪ್ರತಿಮೆಗಳು ಮತ್ತು ಸ್ಮಾರಕಗಳ ಕುರಿತಿರುವ ವಿಧಿ.

'ತಮಾಸೀಲ್' ಎಂಬುದು 'ತಿಮ್‌ಸಾಲ್'ನ ಬಹುವಚನವಾಗಿದೆ. ಇದರ ಅರ್ಥವು ಪ್ರತಿಮೆಯಾಗಿದೆ. ಇದರರ್ಥ ಮನುಷ್ಯ ಅಥವಾ ಮೃಗ ಅಥವಾ ಯಾವುದಾದರೂ ಸಜೀವಿ ವಸ್ತುಗಳ ಪ್ರತಿಮೆಯಾಗಿದೆ ಮತ್ತು ನಸಬ್ ಎಂಬುದು ಲಾಂಛನ ಚಿಹ್ನೆ ಧ್ವಜ, ಅಥವಾ ಕಲ್ಲುಗಳಿಗಿರುವಂತಹದ್ದು. ಅರಬ್ ಮುಶ್ರಿಕರು ಈ ಚಿಹ್ನೆಯ ಬಳಿ ಬಲಿದಾನ ನಡೆಸುತ್ತಿದ್ದರು. ಇನ್ನು ಸ್ಮಾರಕಗಳೆಂದರೆ ಅವು ಮನುಷ್ಯರ ಪ್ರತಿಮೆಗಳಾಗಿವೆ. ಅನೇಕ ಮೈದಾನಗಳಲ್ಲಿ ಮತ್ತು ರಸ್ತೆಯ ಬದಿಗಳಲ್ಲಿ ದೊಡ್ಡ ದೊಡ್ಡ ನಾಯಕರ ಸ್ಮರಣೆಗಾಗಿ ಕೆತ್ತಿಡಲಾಗುತ್ತದೆ.

ರಸೂಲುಲ್ಲಾಹಿ(ﷺ) ಜೀವಂತವಿರುವ ವಸ್ತುಗಳ ಚಿತ್ರ ಮಾಡುವುದನ್ನು ವಿರೋಧಿಸಿರುವರು. ವಿಶೇಷತಃ ದೊಡ್ಡ ದೊಡ್ಡ ವ್ಯಕ್ತಿಗಳು ಉದಾಹರಣೆಗೆ ಉಲೆಮಾಗಳು, ರಾಜರುಗಳು, ದೇವಭಕ್ತರು ಇತ್ಯಾದಿ. ಇವರುಗಳ ಚಿತ್ರಗಳನ್ನು ಯಾವುದೇ ಫಲಕದ ಮೇಲೆ, ಕಾಗದದ ಮೇಲೆ, ಗೋಡೆಯಲ್ಲಿ ಅಥವಾ ಬಟ್ಟೆಯ ಮೇಲೆ ಕೈಯಿಂದ ಮಾಡುವುದು ಅಥವಾ ಇಂದಿನ ಕ್ಯಾಮರಾಗಳ ಮೂಲಕ ಅಥವಾ ಇನ್ನಿತರ ಮಾಧ್ಯಮಗಳ ಮೂಲಕ ಬಿಡಿಸುವುದಾಗಲೀ ಅಥವಾ ಪ್ರತಿಮೆಯ ರೂಪವನ್ನು ಮಾಡುವುದಾಗಲೀ ಆಗಿರಲಿ ಯಾವ ರೀತಿಯಲ್ಲೂ ಹರಾಮ್ ಆಗಿದೆ. ಇದೇ ರೀತಿ ಪ್ರವಾದಿ(ﷺ)ರವರು ಗೋಡೆ ಇತ್ಯಾದಿಗಳಲ್ಲಿ ಚಿತ್ರವನ್ನು ತೂಗು ಹಾಕುವುದು ಯಾವುದಾದರೂ ಸ್ಥಳಗಳಲ್ಲಿ

ಪ್ರತಿಮೆ ಸ್ಥಾಪಿಸುವುದು ಅಥವಾ ಸ್ಮಾರಕಗಳನ್ನು ಇಡುವುದನ್ನು ನಿಷೇಧಿಸಿರುವರು. ಏಕೆಂದರೆ ಇದು ಶಿರ್ಕ್‌ಗೆ ಕಾರಣವಾಗುತ್ತದೆ. ಈ ಭೂಮಿಯಲ್ಲಿ ಪ್ರಾರಂಭವಾದ ಮೊದಲ ಶಿರ್ಕ್ ಚಿತ್ರಗಳನ್ನು ಮತ್ತು ಪ್ರತಿಮೆಗಳನ್ನು ರಚಿಸುವುದರ ಮೂಲಕ ಹೇಗೆಂದರೆ ನೂಹ್(ﷷ)ರ ಸಮಯದಲ್ಲಿ ಕೆಲವು ಸಜ್ಜನರಿದ್ದರು. ಅವರು ಮರಣ ಹೊಂದಿದಾಗ ಜನರು ಬಹಳ ದುಃಖಿತರಾದರು. ಆಗ ಶೈತಾನನು ಆ ಸಜ್ಜನರ ಹೆಸರು ಬರೆಯುವಂತೆ ಆ ಜನರಿಗೆ ಆದೇಶಿಸಿದನು. ಆ ಜನರು ಹಾಗೆಯೇ ಮಾಡಿದರು. ಆದರೂ ಆಗ ಆ ಪ್ರತಿಮೆಗಳು ಪೂಜಿಸಲ್ಪಟ್ಟಿರಲಿಲ್ಲ. ಆ ತಲೆಮಾರು ಹೋಯಿತು. ನಂತರದ ತಲೆಮಾರು ಬಂದಾಗ ಅವರು ಆ ಪ್ರತಿಮೆಗಳನ್ನು ಸ್ಥಾಪಿಸಿದ ನೈಜ ಉದ್ದೇಶವನ್ನು ಮರೆತು ಬಿಟ್ಟರು. ಹೀಗೆ ಅವುಗಳ ಆರಾಧನೆಯು ಪ್ರಾರಂಭವಾಯಿತು. ನಂತರ ಸರ್ವಶ್ರೇಷ್ಠನಾದ ಅಲ್ಲಾಹು ನೂಹ್(ﷷ)ರವರನ್ನು ಕಳುಹಿಸಿದನು. ಅವರು ಈ ಪ್ರತಿಮೆಗಳಿಂದ ಆಗುವ ಶಿರ್ಕ್‌ನ ಬಗ್ಗೆ ಜನರನ್ನು ತಡೆದಾಗ ಜನರು ಅವರ ಆಹ್ವಾನವನ್ನು ತಿರಸ್ಕರಿಸಿದರು ಹಾಗೂ ಚಿತ್ರ ಪ್ರತಿಮೆಗಳ ಆರಾಧನೆಯಲ್ಲಿ ತಲ್ಲೀನರಾದರು. ನಂತರ ಈ ಪ್ರತಿಮೆಗಳು ವಿಗ್ರಹಗಳಾದವು. ಕುರ್‌ಆನ್‌ನ ವಚನವು ಹೀಗಿದೆ.

﴿ وَقَالُوا۟ لَا تَذَرُنَّ ءَالِهَتَكُمْ وَلَا تَذَرُنَّ وَدًّا وَلَا سُوَاعًا وَلَا يَغُوثَ وَيَعُوقَ وَنَسْرًا ﴿٢٣﴾ ﴾

**“ಮತ್ತು ಅವರು ಹೇಳತೊಡಗಿದರು : ನೀವು ನಿಮ್ಮ ಆರಾಧಕರನ್ನು ಎಂದಿಗೂ ಕೈ ಬಿಡಬೇಡಿರಿ. ಮತ್ತು ವದ್ದ್, ಸುವಾಅ, ಯಗೂಸ್, ಯಊಕ್ ಮತ್ತು ನಸ್ರ್‌ಗಳನ್ನು ಎಂದಿಗೂ ತೊರೆಯದಿರಿ.”** (253)

ಇವುಗಳು ಪ್ರತಿಮೆ ರಚಿಸಲ್ಪಟ್ಟ ಸಜ್ಜನರ ಹೆಸರುಗಳಾಗಿವೆ. ಇವರ ನೆನಪು ಉಳಿಯಲಿ ಮತ್ತು ಜನರ ಮನಸ್ಸಿನಲ್ಲಿ ಇವರ ಶ್ರೇಷ್ಠತೆಯು ಉಳಿಯಲಿ ಎಂಬುದು ಈ ಪ್ರತಿಮೆ ರಚನೆಯ ಉದ್ದೇಶವಾಗಿತ್ತು. ಈ ಪ್ರತಿಮೆಗಳನ್ನು ಸ್ಥಾಪಿಸಿದ ಪರಿಣಾಮವೇನಾಯಿತೆಂಬುದು ಚಿಂತಿಸಬೇಕಾದ ವಿಷಯ. ಜನರು ಶಿರ್ಕ್‌ನಲ್ಲಿ ಮುಳುಗಿ ಹೋದರು. ಅಲ್ಲಾಹನ ಪ್ರವಾದಿ ಸಂದೇಶವಾಹಕರುಗಳ ಆಜ್ಞೆಯನ್ನು ತಿರಸ್ಕರಿಸಿದರು. ಇದರ ಪರಿಣಾಮವಾಗಿ ಅವರು ಚಂಡಮಾರುತದಿಂದ ನಾಶವಾಗಿ ಹೋದರು. ಅಲ್ಲಾಹುವಿನ ಕೋಪಕ್ಕೆ ಪಾತ್ರರಾದರು. ಇವುಗಳಿಂದೆಲ್ಲ ನಮಗೆ ಚಿತ್ರ ಬಿಡಿಸುವುದರ ಮತ್ತು ಪ್ರತಿಮೆ ಸ್ಥಾಪಿಸುವುದರ ಅಪಾಯವು ಮನದಟ್ಟಾಗುತ್ತದೆ. ಪ್ರವಾದಿ(ﷺ)ಯವರು ಚಿತ್ರ ಬಿಡಿಸುವವರ ಮೇಲೆ ಶಾಪ ಹಾಕಿದ್ದಾರೆ. ಅಂತ್ಯದಿನದಂದು ಈ ಜನರು ಎಲ್ಲರಿಗಿಂತಲೂ ಕಠಿಣ ಶಿಕ್ಷೆಯನ್ನು ಹೊಂದುವರೆಂದು ಪ್ರವಾದಿ(ﷺ) ಎಚ್ಚರಿಸಿದ್ದಾರೆ. ಅವರು(ﷺ) ಚಿತ್ರಗಳನ್ನು ಅಳಿಸಲು ಆದೇಶಿಸಿದರು. ಮತ್ತು ಚಿತ್ರವಿರುವ ಮನೆಯಲ್ಲಿ ಮಲಕ್‌ಗಳು ಪ್ರವೇಶಿಸಲಾರರು ಎಂದು ಹೇಳಿರುವರು. ಇವುಗಳೆಲ್ಲವೂ ಚಿತ್ರಗಳ ಅಪಾಯಗಳು ಮತ್ತು ಅವುಗಳ ಫಿತ್ನ-ಫಸಾದ್‌ಗಳಾಗಿದ್ದು,

**253** ಕುರ್‌ಆನ್ 71:23

ಮುಸ್ಲಿಮ್ ಸಮೂಹದ ಅಕೀದಃದ ಮೇಲೆ ದುಷ್ಪರಿಣಾಮಗಳನ್ನು ಬೀರುತ್ತಿವೆ. ವಾಸ್ತವದಲ್ಲಿ ಭೂಮುಖದ ಮೇಲೆ ಮೊಟ್ಟ ಮೊದಲಿಗೆ ಉದ್ಭವಿಸಿದ ಬಹುದೇವಾರಾಧನೆಯು ಚಿತ್ರದ ದುಷ್ಪರಿಣಾಮದಿಂದಲೇ ಆಗಿತ್ತು. ಇಂತಹ ಪ್ರತಿಮೆಗಳು ಪಾರ್ಕಿನಲ್ಲಿ ಅಥವಾ ರಸ್ತೆಯಲ್ಲಿ ಅಥವಾ ಸಾರ್ವಜನಿಕ ಮೈದಾನದಲ್ಲಿ ಇನ್ನು ಯಾವ ಸ್ಥಿತಿಯಲ್ಲೇ ನಿರ್ಮಿಸಲ್ಪಡಲಿ ಶರೀಅತ್ ಪ್ರಕಾರ ಹರಾಮ್ ಆಗಿದೆ. ಏಕೆಂದರೆ ಇದು ಶಿರ್ಕ್ ಮತ್ತು ವಿಶ್ವಾಸದ ಮೇಲೆ ವಿಪತ್ತಿನ ಅಡಿಪಾಯವಾಗಿದೆ.

ಸತ್ಯನಿಷೇಧಿಗಳು ಇಂದು ಇಂತಹ ಕಾರ್ಯಗಳನ್ನು ಮಾಡುತ್ತಿದ್ದಾರೆ. ಏಕೆಂದರೆ ಅವರಿಗೆ ಕಾಪಾಡಿಕೊಳ್ಳಬೇಕಾದಂತಹ ವಿಶ್ವಾಸ ಯಾ ಅಕೀದಃ ಇಲ್ಲ. ಆದರೆ ನಾವು ಅಂತಹ ಸತ್ಯ ನಿಷೇಧಿಗಳ ಕೃತ್ಯಗಳನ್ನು ಅನುಸರಿಸಬಾರದು. ಏಕೆಂದರೆ ನಮ್ಮಲ್ಲಿ ಈಮಾನ್–ಅಕೀದಃ ಇದೆ. ಅದುವೇ ನಮ್ಮ ಶಕ್ತಿಯ ಮೂಲವಾಗಿದೆ. ಆದರೆ ಜನರು ತೌಹೀದ್, ಶಿರ್ಕ್‌ನ್ನು ಅರಿತುಕೊಂಡಿದ್ದಾರೆ. ಅವರು ಪ್ರಬುದ್ಧರಾಗಿದ್ದಾರೆಂದು ಇವುಗಳಿಗೆ ಅನುಮತಿ ನೀಡಲಾಗದು. ಏಕೆಂದರೆ ಶೈತಾನನು ಮುಂದಿನ ತಲೆಮಾರಿನಲ್ಲಿ ಅಜ್ಞಾನ ಪ್ರತ್ಯಕ್ಷವಾಗುವುದನ್ನು ಕಾಯುತ್ತಾನೆ. ಪ್ರವಾದಿ ನೂಹ್(عليه السلام)ರ ಸಮುದಾಯದಲ್ಲಿ ವಿದ್ವಾಂಸರೆಲ್ಲ ಮರಣ ಹೊಂದಿದ ಬಳಿಕ ಅವನು ಇದೇ ರೀತಿ ಶಿರ್ಕ್ ಮಾಡಿಸಿದ್ದಾನೆ. ಒಬ್ಬ ಜೀವಂತ ವ್ಯಕ್ತಿ ಯಾವತ್ತೂ ಇಂತಹ ಪಿತೂರಿಗಳಿಂದ ಸುರಕ್ಷಿತನಲ್ಲ. ಸ್ವತಃ ಪ್ರವಾದಿ ಇಬ್ರಾಹೀಮ(عليه السلام)ರೇ ಈ ರೀತಿ ಪ್ರಾರ್ಥಿಸಿದ್ದಾರೆ.

﴿ وَٱجْنُبْنِى وَبَنِىَّ أَن نَّعْبُدَ ٱلْأَصْنَامَ ﴿٣٥﴾ ﴾

**“ಓ ಅಲ್ಲಾಹ್ ನೀನು ನನ್ನನ್ನೂ ನನ್ನ ಮಕ್ಕಳನ್ನೂ ವಿಗ್ರಹ ಪೂಜೆಯಿಂದ ರಕ್ಷಿಸು.”** (254)

ಇಂತಹ ಮಹಾನುಭಾವರೇ ತಮ್ಮ ಮೇಲೆ ಪಿತೂರಿಯ ಭಯ ಹೊಂದಿದ್ದರು. ಪೂರ್ವಿಕ ವಿದ್ವಾಂಸರು ಹೇಳಿದ್ದಾರೆ: ಇಬ್ರಾಹೀಮ್(عليه السلام)ರ ಬಳಿಕ ಇಂತಹ ಪರೀಕ್ಷೆಗಳಿಂದ ಸುರಕ್ಷಿತರಾಗಿರುವವರು ಯಾರು?

**254** ಕುರ್‌ಆನ್ 14:35

## ಅಧ್ಯಾಯ–5

# ದೀನ್‌ಅನ್ನು ಪರಿಹಾಸ್ಯ ಮಾಡುವುದು ಮತ್ತು ಅದರ ಪಾವಿತ್ರ್ಯತೆಯನ್ನು ಅಗೌರವಗೊಳಿಸುವುದು

ದೀನ್‌ಅನ್ನು ಅಪಹಾಸ್ಯ ಮಾಡುವವನು ಇಸ್ಲಾಮಿನಿಂದ ಭ್ರಷ್ಟನಾಗುತ್ತಾನೆ ಮತ್ತು ಇಸ್ಲಾಮ್ ಧರ್ಮದಿಂದ ಸಂಪೂರ್ಣವಾಗಿ ಹೊರಗೆ ಹೋಗುತ್ತಾನೆ. ಅಲ್ಲಾಹನ ವಚನವು ಇಂತಿದೆ:

﴿ قُلْ أَبِٱللَّهِ وَءَايَٰتِهِۦ وَرَسُولِهِۦ كُنتُمْ تَسْتَهْزِءُونَ ﴿٦٥﴾ لَا تَعْتَذِرُوا۟ قَدْ كَفَرْتُم بَعْدَ إِيمَٰنِكُمْ ﴾

**“ಹೇಳು, ನೀವು ಅಲ್ಲಾಹು ಮತ್ತು ಅವನ ಸೂಕ್ತಗಳು ಮತ್ತು ಅವನ ಸಂದೇಶವಾಹಕರೊಂದಿಗೆ ತಮಾಷೆ ಮಾಡುತ್ತಿರುವಿರಾ? ನೆಪವೊಡ್ಡಬೇಡಿರಿ. ನೀವು ವಿಶ್ವಾಸವಿರಿಸಿದ ಬಳಿಕ ಸತ್ಯ ನಿಷೇಧವೆಸಗಿರುವಿರಿ.”** (255)

ಅಲ್ಲಾಹುವಿನ ಕುರಿತು ತಮಾಷೆ ಕುಫ್ರ್ ಆಗಿದೆ. ಅವನ ಸಂದೇಶವಾಹಕರು(ﷺ)ರೊಂದಿಗೆ ತಮಾಷೆ ಕುಫ್ರ್ ಆಗಿದೆ. ಅವನ ಸೂಕ್ತಿಗಳೊಂದಿಗೆ ತಮಾಷೆಯು ಕುಫ್ರ್ ಆಗಿದೆ. ಯಾರಾದರೂ ಇವುಗಳಲ್ಲಿ ಒಂದನ್ನು ಅಪಹಾಸ್ಯ ಮಾಡಿದರೆ ಅವನು ಸರ್ವ ಆದೇಶಗಳನ್ನು ಗೇಲಿಮಾಡಿದವನಾಗುವನು. ಮುನಾಫಿಕರು ಹೀಗೆಯೇ, ಅಲ್ಲಾಹನ ಸಂದೇಶ ವಾಹಕರು(ﷺ) ಮತ್ತು ಅವರ ಸಹಾಬಿಗಳನ್ನು ತಮಾಷೆ ಮಾಡುತ್ತಿದ್ದರು. ಇವರ ಕಾರಣದಿಂದ ಈ ಸೂಕ್ತಿಯು ಅವತೀರ್ಣವಾಯಿತು. ಇವುಗಳಲ್ಲಿ ಯಾವುದೇ ಒಂದರ ಬಗ್ಗೆ ತಳೆಯುವ ಪರಿಹಾಸ್ಯ ಧೋರಣೆಯು ಇತರೆಲ್ಲವುಗಳಲ್ಲಿ ಸಂಬಂಧ ಹೊಂದುತ್ತದೆ. ಆದ್ದರಿಂದ ಅಲ್ಲಾಹುವಿನ ತೌಹೀದ್‌ಅನ್ನು ಅಪಹಾಸ್ಯ ಮಾಡುವವರ ಹಾಗೂ ಅಲ್ಲಾಹ್‌ನ ಹೊರತು ಮೃತರನ್ನು ಕರೆದು ಪ್ರಾರ್ಥಿಸುವವರ ಬಳಿ ತೌಹೀದ್‌ನ ವಿಷಯವನ್ನು ತಿಳಿಸಿ ಅವರೊಂದಿಗೆ ಶಿರ್ಕ್‌ನಿಂದ ದೂರವಿರಬೇಕೆಂದು ಹೇಳಿದರೆ ಅವರನ್ನು ಅಪಹಾಸ್ಯ ಮಾಡುವರು. ಸರ್ವೋನ್ನತನಾದ ಅಲ್ಲಾಹು ಹೇಳುತ್ತಾನೆ:

﴿ وَإِذَا رَأَوْكَ إِن يَتَّخِذُونَكَ إِلَّا هُزُوًا أَهَٰذَا ٱلَّذِى بَعَثَ ٱللَّهُ رَسُولًا ﴿٤١﴾ إِن كَادَ لَيُضِلُّنَا عَنْ ءَالِهَتِنَا لَوْلَآ أَن صَبَرْنَا عَلَيْهَا ﴾

**“ಮತ್ತು ಈ ಜನರು ನಿಮ್ಮನ್ನು ನೋಡಿದಾಗಲೆಲ್ಲ ನಿಮ್ಮನ್ನು ಅಪಹಾಸ್ಯ ಮಾಡುವರು. (ಅವರು ಹೇಳುವರು) ಅಲ್ಲಾಹು ಪ್ರವಾದಿಯಾಗಿ ಕಳುಹಿಸಿದ ವ್ಯಕ್ತಿ ಇವನೇ ಏನು? ನಾವು ನಮ್ಮ ಆರಾಧ್ಯರಲ್ಲಿ ದೃಢಚಿತ್ತರಾಗಿರದಿದ್ದರೆ ಖಂಡಿತವಾಗಿಯೂ ಇವನು ನಮ್ಮನ್ನು ಅವರಿಂದ**

---

**255** ಕುರ್‌ಆನ್ 9:65–66

**ದಾರಿ ತಪ್ಪಿಸುತ್ತಿದ್ದನು.”** (256)

ಏಕೆಂದರೆ ಅವರ ಹೃದಯದಲ್ಲಿ ಶಿರ್ಕ್‌ನ ಅಹಂಕಾರ ಮನೆ ಮಾಡಿದೆ. ಆದ್ದರಿಂದ ಪ್ರವಾದಿ(ﷺ)ಯವರು ಆ ಜನರನ್ನು ಶಿರ್ಕ್‌ನಿಂದ ತಡೆದಾಗಲೆಲ್ಲ ಅವರು ಅಲ್ಲಾಹನ ಸದೇಶವಾಹಕ(ﷺ) ರನ್ನು ಪರಿಹಾಸ್ಯ ಮಾಡತೊಡಗಿದರು. ಆ ಕಾಲದಿಂದ ಹಿಡಿದು ಇಂದಿನವರೆಗೂ ಮುಶ್ರಿಕರು ಪ್ರವಾದಿಗಳನ್ನು ತಮಾಷೆ ಮಾಡುತ್ತಲೇ ಇದ್ದಾರೆ. ಅವರನ್ನು ಬುದ್ದಿಗೇಡಿ, ದಾರಿ ತಪ್ಪಿದವ, ಮತಿವಿಕಲ ಮುಂತಾದ ಬಿರುದುಗಳನ್ನು ನೀಡುತ್ತಿರುತ್ತಾರೆ. ಇದೆಲ್ಲವು ಅವರನ್ನು ಏಕದೇವಾರಾಧನೆಗೆ ಕರೆಯುತ್ತಿದ್ದ ಕಾರಣಕ್ಕಾಗಿ, ಇದೇ ರೀತಿ ಮುಶ್ರಿಕರಿಗೆ ಸಮೀಪವಿರುವವರಲ್ಲೂ ಈ ಲಕ್ಷಣಗಳನ್ನು ಕಾಣಬಹುದು. ಅವರಿಗೆ ತೌಹೀದ್‌ನ ವಿಷಯವು ಹೇಳಲಾದಾಗ ಅವರು ಅದರೊಂದಿಗೆ ಅಪಹಾಸ್ಯ ಮಾಡುವರು. ಇದೇಕೆಂದರೆ ಅವರ ಹೃದಯದಲ್ಲಿ ಶಿರ್ಕ್ ಮನೆ ಮಾಡಿದೆ ಅಲ್ಲಾಹುವಿನ ವಚನವು ಹೀಗಿದೆ.

﴿ وَمِنَ ٱلنَّاسِ مَن يَتَّخِذُ مِن دُونِ ٱللَّهِ أَندَادًا يُحِبُّونَهُمْ كَحُبِّ ٱللَّهِ ﴾

**“ಜನರಲ್ಲಿ ಕೆಲವರು ಅಲ್ಲಾಹನ ಹೊರತು ಇತರರನ್ನು (ಅಲ್ಲಾಹನಿಗೆ) ಪಾಲುದಾರರನ್ನಾಗಿ ಮಾಡುತ್ತಾರೆ ಮತ್ತು ಅಲ್ಲಾಹನನ್ನು ಪ್ರೀತಿಸಿದಂತೆಯೇ ಅವರನ್ನೂ ಪ್ರೀತಿಸುತ್ತಾರೆ.”** (257)

ಆದ್ದರಿಂದ ಒಬ್ಬನು ಅಲ್ಲಾಹನನ್ನು ಪ್ರೀತಿಸಿದ ಹಾಗೇ ಇತರರನ್ನು ಪ್ರೀತಿಸಿದರೆ ಅವನು ಮುಶ್ರಿಕ್ ಆಗಿದ್ದಾನೆ. ಅಲ್ಲಾಹ್‌ನಿಗಾಗಿ ಪ್ರೀತಿ ಮತ್ತು ಅಲ್ಲಾಹನೊಂದಿಗೆ ಇತರರ ಪ್ರೀತಿಯಲ್ಲಿ ನಾವು ವ್ಯತ್ಯಾಸ ಮಾಡಬೇಕು. ಆದುದರಿಂದ ಗೋರಿಗಳನ್ನು, ದರ್ಗಾಗಳನ್ನು ತಮ್ಮ ವಿಗ್ರಹಗಳನ್ನಾಗಿ ಮಾಡಿಕೊಂಡವರು ಅಲ್ಲಾಹುವಿನ ತೌಹೀದ್ ಮತ್ತು ಅವನ ಆರಾಧನೆಯೊಂದಿಗೆ ಅಪಹಾಸ್ಯ ಮಾಡುತ್ತಾರೆ ಮತ್ತು ತಮ್ಮ  ಶಿಫಾರಸ್ಸುದಾರರನ್ನಾಗಿ ಮಾಡಿಕೊಂಡಿರುವ ಅಲ್ಲಾಹೇತರರನ್ನು ಬಹಳ ಶ್ರೇಷ್ಠಗೊಳಿಸುತ್ತಾರೆ. ಇವರಲ್ಲಿ ಪ್ರತಿಯೊಬ್ಬನು ಅಲ್ಲಾಹುವಿನ ಹೆಸರಿನಲ್ಲಿ ಸುಳ್ಳು ಆಣೆ ಹಾಕಬಲ್ಲನು. ಆದರೆ ತನ್ನ ಶೇಖ್‌ನ ಹೆಸರಿನಲ್ಲಿ ಸುಳ್ಳು ಆಣೆ ಹಾಕುವ ಧೈರ್ಯ ಅವನಲ್ಲಿರುವುದಿಲ್ಲ. ಇವರಲ್ಲಿ ಬಹಳಷ್ಟು ಜನರ ವಿಶ್ವಾಸವೇನೆಂದರೆ, ಈ ಮಹಾತ್ಮರಿಂದ ಸಹಾಯವನ್ನು ಕೇಳುವುದು ಮಸೀದಿಯಲ್ಲಿ ಫಜ್ರ್ ನಮಾಝ್‌ನ ಬಳಿಕ ಅಲ್ಲಾಹುವಿನ ಸನ್ನಿಧಿಯಲ್ಲಿ ಪ್ರಾರ್ಥಿಸುವುದಕ್ಕಿಂತ ಪ್ರಯೋಜನಕಾರಿಯೆಂದಾಗಿದೆ. ಇದರಿಂದಾಗಿಯೇ ತೌಹೀದ್‌ನೆಡೆಗೆ ಹೋಗುವವರನ್ನು ಇವರು ಅಪಹಾಸ್ಯ ಮಾಡುತ್ತಾರೆ. ಇವರಲ್ಲಿ ಬಹಳ ಜನರು ಮಸೀದಿಯನ್ನು ಕೆಡವಿ ದರ್ಗಾಗಳನ್ನು ನಿರ್ಮಿಸುತ್ತಾರೆ. ಅವುಗಳನ್ನು ಬೆಳೆಸುತ್ತಾರೆ. ಇವೆಲ್ಲವೂ ಅಲ್ಲಾಹನನ್ನೂ, ಅವನ ದೃಷ್ಟಾಂತಗಳನ್ನೂ ಮತ್ತು ಅವನ ಪ್ರವಾದಿಯನ್ನೂ ಅಪಮಾನಿಸಲೆಂದು ಮತ್ತು

**256** ಕುರ್‌ಆನ್ 25:41–42

**257** ಕುರ್‌ಆನ್ 2:160

ಶಿರ್ಕ್‌ಅನ್ನು ಶ್ರೇಷ್ಠಗೊಳಿಸಲೆಂದೇ ಆಗಿದೆ.” [258]

ಇಂದು ಗೋರಿ ಪೂಜಕರಲ್ಲಿ ಇದು ಅತಿ ಹೆಚ್ಚಾಗಿ ಕಾಣಬಹುದಾಗಿದೆ.

ಅಪಹಾಸ್ಯದಲ್ಲಿ ಎರಡು ವಿಧಗಳಿವೆ :

1. ಬಹಿರಂಗ ಅಪಹಾಸ್ಯ : ಇಂತಹ ಅಪಹಾಸ್ಯ ಮಾಡುವವರ ಕುರಿತೇ ಕುರ್‌ಆನ್ ವಚನಗಳು ಅವತೀರ್ಣವಾಗಿದೆ. ಉದಾಹರಣೆಗೆ ಅವರು ಹೀಗೆ ಹೇಳುತ್ತಾರೆ. ನಾವು ಉಲೆಮಾಗಳಷ್ಟು ಭೋಗಾಸಕ್ತ, ಸುಳ್ಳುಗಾರ ಮತ್ತು ರಣಹೇಡಿಗಳನ್ನು ಎಲ್ಲೂ ನೋಡಿಲ್ಲ. ಹೀಗೆಯೇ ಅಥವಾ ಅಪಹಾಸ್ಯಕಾರರು ಬಾರಿ ಬಾರಿ ಹೇಳುವಂತಹ ಇಂತಹ ವಾಕ್ಯಗಳು “ನಿಮ್ಮದು, ಐದನೆಯ ಮದ್‌ಹಬ್” ಅಥವಾ ನಿಮ್ಮದು ಸುಳ್ಳು ಧರ್ಮ ಮುಂತಾಗಿ ಹೇಳುವುದಾಗಿದೆ.

ಇದೇ ರೀತಿ ಒಳಿತನ್ನು ಆದೇಶಿಸುವ ಮತ್ತು ಕೆಟ್ಟದನ್ನು ವಿರೋಧಿಸುವ ಜನರು ಇವರ ಬಳಿ ಬಂದಾಗ ಇವರು ಅಪಹಾಸ್ಯ ಮಾಡುತ್ತಾರೆ. ಅಗೋ ನಿಮ್ಮ ಧಾರ್ಮಿಕ ಸಹೋದರ ಬರುತ್ತಿದ್ದಾನೆ. ಇಂತಹ ಹಲವಾರು ರೀತಿಯಲ್ಲಿ ಅವರು ಧರ್ಮವನ್ನು ಅಪಹಾಸ್ಯ ಮಾಡುತ್ತಾರೆ. ಇನ್ನು ಅಪಹಾಸ್ಯ ಮಾಡುವುದರ ಬಗ್ಗೆ ಯಾರ ಮೇಲೆ ಸೂಕ್ತವೆರಗಿದೆಯೋ ಅವರಿಗಿಂತ ಒಂದು ಹೆಜ್ಜೆ ಮುಂದೆ ಇವರಿರುತ್ತಾರೆ.

2. ಬಹಿರಂಗವಲ್ಲದ ಹಾಸ್ಯ : ಇದೊಂದು ತೀರವಲ್ಲದ ಕಡಲಿನಂತೆ ಕಣ್ಣಿನ ಸನ್ನೆ, ನಾಲಗೆ ಹೊರಚಾಚುವುದು, ತುಟಿ ತಿರುಗಿಸುವುದು, ಕುರ್‌ಆನ್ ಅಥವಾ ಹದೀಸ್ ಓದುವಾಗ ಅಥವಾ ಒಳಿತನ್ನು ಆದೇಶಿಸುವಾಗ ಅಥವಾ ಕೆಡುಕನ್ನು ವಿರೋಧಿಸುವಾಗ ಕೈ ಒತ್ತುವುದು ಇತ್ಯಾದಿ ಅಪಹಾಸ್ಯಗಳು ಅವುಗಳಲ್ಲಿ ಇಂತಹ ಮಾತುಗಳೂ ಇರುತ್ತವೆ “ಇಸ್ಲಾಮ್ 21 ನೇ ಶತಮಾನಕ್ಕೆ ಸೂಕ್ತವಾದುದಲ್ಲ. ಇದು ಹಿಂದಿನ ಸಮಯಕ್ಕೆ ಸೂಕ್ತವಾಗಿತ್ತು. “ಇಸ್ಲಾಮ್ ಹಿಂದುಳಿಯುವಿಕೆ ಹಾಗೂ ಪಲಾಯನವಾದದ ನಿಶಾನೆಯಾಗಿದೆ” ಶಿಕ್ಷೆಯ ವಿಷಯದಲ್ಲಿ ಅದರೊಳಗೆ ಬಹಳ ಕಟುತನ, ಒರಟುತನ ಮತ್ತು ಬರ್ಬರತೆಯಿದೆ. “ಇಸ್ಲಾಮ್ ಮಹಿಳೆಯರ ಮೇಲೆ ಅನ್ಯಾಯ ಮಾಡಿದೆ, ಅವರ ಹಕ್ಕುಗಳನ್ನು ನೀಡಿಲ್ಲ, ಇದಕ್ಕಾಗಿಯೇ ಅದು ತಲಾಕ್‌ಅನ್ನು ಅನುಮತಿಸಿದೆ. ಬಹುಪತ್ನಿತ್ವವನ್ನು ಅನುಮತಿಸಿದೆ ಅಥವಾ ಇಂತಹ ಹೇಳಿಕೆಗಳು ಇಂದಿನ ಮನುಷ್ಯ ನಿರ್ಮಿತ ಕಾನೂನುಗಳು ಇಸ್ಲಾಮ್‌ನ ಕಾನೂನುಗಳಿಗಿಂತ ಉತ್ತಮವಾದುದು. ಅಂತೆಯೇ ತೌಹೀದ್‌ನೆಡೆಗೆ ಕರೆಯುವ ಮತ್ತು ಗೋರಿಯಾರಾಧನೆಯನ್ನು ವ್ಯಕ್ತಿ ಪೂಜೆಯನ್ನು ತಡೆಯುವ ಜನರನ್ನು ಕಂಡಾಗ ಹೀಗೆ ಹೇಳುವುದು ಸಾಮಾನ್ಯ. [259]

ಇವರು ತೀವ್ರವಾದಿಗಳು ‘ಅಥವಾ’ ಇವರು ಮುಸ್ಲಿಮ್ ಸಮಾಜದ ನಡುವೆ ಬಿಕ್ಕಟ್ಟು, ಉಂಟುಮಾಡುವವರು, ಅಥವಾ ಇವರು ವಹಾಬಿಗಳು ಅಥವಾ ಇವರು ಐದನೆಯ

**258** ಮಜ್‌ಮೂಉಲ್ ಫತಾವಾ 15,48,49.

**259** ಮಜ್ ಮೂಅತುತ್ತೌಹೀದ್ ನ್ನಜ್‌ದಿಯ್ಯ ಪುಟ: 409

ಮದ್‌ಹಬ್ ಅನುಸರಿಸುವವರು  ಮುಂತಾದುವು ಧರ್ಮದೊಂದಿಗೆ ಮತ್ತು ಧರ್ಮದ ಜನರೊಂದಿಗೆ ಮತ್ತು ನೈಜ ಅಕೀದದ ಜನರೊಂದಿಗೆ ತಮಾಷೆ ಮಾಡುವಂತಹ ಇಂತಹ ಸಾವಿರಾರು ಮಾತುಗಳಿವೆ.

ಇದೇ ರೀತಿ ಸುನ್ನತ್‌ಅನ್ನು ಭದ್ರವಾಗಿ ಹಿಡಿಯುವವರನ್ನು ತಮಾಷೆಗೆ ಗುರಿಪಡಿಸಲಾಗುತ್ತದೆ. ‘ಕೂದಲಲ್ಲಿ ದೀನ್ ಇಲ್ಲ’ ಎಂದು ಅವರ ಗಡ್ಡವನ್ನು ತಮಾಷೆ ಮಾಡುತ್ತಾ ಹೇಳುತ್ತಾರೆ.

## ಅಧ್ಯಾಯ–6

# ಅಲ್ಲಾಹ್‌ನ ಶರೀಅತ್‌ನ ಹೊರತು ಇತರ ಕಾನೂನುಗಳಿಗನುಸಾರವಾಗಿ ತೀರ್ಪು ನೀಡುವುದು

ಅಲ್ಲಾಹನ ಆದೇಶಗಳ ಮುಂದೆ ತಲೆಬಾಗುವುದು ಅವನು ಇಳಿಸಿದ ಶರೀಅತ್‌ನಿಂದ ಸಂತೃಪ್ತನಾಗಿರುವುದು. ಭಿನ್ನಾಭಿಪ್ರಾಯಗಳಲ್ಲಿ ಕುರ್‌ಆನ್ ಮತ್ತು ಪ್ರವಾದಿಯವರ ಸುನ್ನತ್‌ನ ಕಡೆಗೆ ತಿರುಗಿಸುವುದು. ಅಂದರೆ ವಿಶ್ವಾಸ ಕಾರ್ಯಗಳಲ್ಲೂ, ವಾದವಿವಾದಗಳಲ್ಲೂ ಜೀವ ಸೊತ್ತು ಹಾಗೂ ಇನ್ನಿತರ ಹಕ್ಕುಗಳಲ್ಲೂ ಆ ಎರಡು ಮೂಲಗಳನ್ನು ಅವಲಂಬಿಸುವುದು ಸತ್ಯ ವಿಶ್ವಾಸ ಹಾಗೂ ಅಲ್ಲಾಹನ ಆರಾಧನೆಯ ಬೇಡಿಕೆಯಾಗಿದೆ ಮತ್ತು ಮೇಲಿನ ಎಲ್ಲಾ ವಿಷಯಗಳಲ್ಲಿ ಭಿನ್ನಾಭಿಪ್ರಾಯದ ಸಮಯದಲ್ಲಿ ನಾವು ಕೇವಲ ಅಲ್ಲಾಹನ ಗ್ರಂಥ ಮತ್ತು ಪ್ರವಾದಿ(ﷺ)ರವರೆಡೆಗೇ ಮರಳಬೇಕು. ಅಲ್ಲಾಹುವೇ ಅತ್ಯಂತ ದೊಡ್ಡ ಆಜ್ಞಾಧಿಕಾರಿಯಾಗಿರುವನು. ಮತ್ತು ತೀರ್ಪಿನ ಸಮಯದಲ್ಲಿ ಆತನೆಡೆಗೇ ಮರಳಬೇಕಾಗಿದೆ. ಆದ್ದರಿಂದ ರಾಜ್ಯದ ಆಡಳಿತಗಾರರೂ ಕೂಡಾ ಅಲ್ಲಾಹು ತನ್ನ ಗ್ರಂಥದಲ್ಲಿ ಆದೇಶಿಸಿರುವ ಮತ್ತು ಅಲ್ಲಾಹನ ಸಂದೇಶವಾಹಕರು(ﷺ) ತನ್ನ ಸುನ್ನತ್‌ನಲ್ಲಿ ಹೇಳಿರುವ ಪ್ರಕಾರವೇ ತೀರ್ಪು ನೀಡಬೇಕಾಗಿದೆ. ಆಡಳಿತಗಾರರಿಗೆ ಅಲ್ಲಾಹನ ಆದೇಶವು ಇಂತಿದೆ.

﴿ ۞ إِنَّ ٱللَّهَ يَأۡمُرُكُمۡ أَن تُؤَدُّواْ ٱلۡأَمَٰنَٰتِ إِلَىٰٓ أَهۡلِهَا وَإِذَا حَكَمۡتُم بَيۡنَ ٱلنَّاسِ أَن تَحۡكُمُواْ بِٱلۡعَدۡلِۚ ﴾

**“ಅಲ್ಲಾಹು ನಿಮಗೆ ಆದೇಶ ನೀಡುತ್ತಾನೆ. ಅಮಾನತು ಸೊತ್ತನ್ನು ಅವರಿಗೇ ಮರಳಿಸಿರಿ. ಮತ್ತು ಜನರ ಮಧ್ಯೆ ತೀರ್ಪು ನೀಡುವಾಗ ನ್ಯಾಯಯುತವಾಗಿ ತೀರ್ಪು ನೀಡಿರಿ.”** (260)

ಅವನು ಹೇಳಿರುವನು

**260** ಕುರ್‌ಆನ್ 4:58

﴿ يَٰٓأَيُّهَا ٱلَّذِينَ ءَامَنُوٓاْ أَطِيعُواْ ٱللَّهَ وَأَطِيعُواْ ٱلرَّسُولَ وَأُوْلِي ٱلۡأَمۡرِ مِنكُمۡۖ فَإِن تَنَٰزَعۡتُمۡ فِي شَيۡءٖ فَرُدُّوهُ إِلَى ٱللَّهِ وَٱلرَّسُولِ إِن كُنتُمۡ تُؤۡمِنُونَ بِٱللَّهِ وَٱلۡيَوۡمِ ٱلۡأٓخِرِۚ ذَٰلِكَ خَيۡرٞ وَأَحۡسَنُ تَأۡوِيلًا ٥٩ ﴾

**"ಓ ಸತ್ಯ ವಿಶ್ವಾಸಿಗಳೇ ಅಲ್ಲಾಹು ಮತ್ತು ಅವರ ಸಂದೇಶವಾಹಕರನ್ನು ಅನುಸರಿಸಿರಿ ಮತ್ತು ನಿಮ್ಮೊಳಗಿನ ಆಜ್ಞಾಧಿಕಾರಿಗಳನ್ನು ಅನುಸರಿಸಿರಿ ಮತ್ತು ಯಾವುದಾದರೂ ವಿಷಯದಲ್ಲಿ ನಿಮ್ಮಲ್ಲಿ ಭಿನ್ನಾಭಿಪ್ರಾಯವುಂಟಾದರೆ ನೀವು ಅಲ್ಲಾಹನಲ್ಲಿ ಹಾಗೂ ಆತನ ಸಂದೇಶವಾಹಕರೆಡೆಗೆ ಮರಳಿಸಿರಿ ಇದು ಉತ್ತಮವಾದುದು ಮತ್ತು ಅತೀ ಉತ್ತಮ ವ್ಯಾಖ್ಯಾನವಾಗಿದೆ."** (261)

ಈಮಾನ್ ಹಾಗೂ ಶರೀಅತ್‌ನ ಪ್ರಕಾರ ತೀರ್ಪು ಮತ್ತು ಅದನ್ನು ಬಿಟ್ಟು ಇತರ ಕಾನೂನುಗಳ ಪ್ರಕಾರ ತೀರ್ಪು ನೀಡುವುದು ಒಂದೇ ಕಡೆಯಲ್ಲಿ ಸೇರಲಾರದು. ಸರ್ವಶ್ರೇಷ್ಠನಾದ ಅಲ್ಲಾಹುವಿನ ವಚನವು ಹೀಗಿದೆ.

﴿ أَلَمۡ تَرَ إِلَى ٱلَّذِينَ يَزۡعُمُونَ أَنَّهُمۡ ءَامَنُواْ بِمَآ أُنزِلَ إِلَيۡكَ وَمَآ أُنزِلَ مِن قَبۡلِكَ يُرِيدُونَ أَن يَتَحَاكَمُوٓاْ إِلَى ٱلطَّٰغُوتِ وَقَدۡ أُمِرُوٓاْ أَن يَكۡفُرُواْ بِهِۦۖ وَيُرِيدُ ٱلشَّيۡطَٰنُ أَن يُضِلَّهُمۡ ضَلَٰلَۢا بَعِيدٗا ٦٠ ﴾

**"ನೀವು ಇಂತಹವರನ್ನು ನೋಡಲಿಲ್ಲವೇ, ಅವರು ಹೇಳಿಕೊಳ್ಳುತ್ತಾರೆ: ನಾವು ನಿಮ್ಮ ಮೇಲೆ ಅವತೀರ್ಣವಾದುದರಲ್ಲೂ , ನಿಮಗಿಂತ ಮುಂಚೆ ಅವತೀರ್ಣವಾದುದರಲ್ಲೂ ವಿಶ್ವಾಸ ತಂದಿದ್ದೇವೆ. ವಸ್ತುತಃ ಅವರು ತಾಗೂತ್‌ನ ಬಳಿ ಕೊಂಡು ಹೋಗಿ ತೀರ್ಪು ಪಡೆಯಲು ಬಯಸುತ್ತಾರೆ." ಆದರೆ ಅವುಗಳನ್ನು ನಿಷೇಧಿಸಲು ಅವರಿಗೆ ಆಜ್ಞಾಪಿಸಲಾಗಿತ್ತು ಮತ್ತು ಶೈತಾನನು ಇವರನ್ನು ದಾರಿ ತಪ್ಪಿಸಿ ಬಹುದೂರ ಕೊಂಡೊಯ್ಯಲು ಬಯಸುತ್ತಾನೆ."** (262)

ಮುಂದೆ ಹೇಳಿರುವನು :

﴿ فَلَا وَرَبِّكَ لَا يُؤۡمِنُونَ حَتَّىٰ يُحَكِّمُوكَ فِيمَا شَجَرَ بَيۡنَهُمۡ ثُمَّ لَا يَجِدُواْ فِيٓ أَنفُسِهِمۡ حَرَجٗا مِّمَّا قَضَيۡتَ وَيُسَلِّمُواْ تَسۡلِيمٗا ٦٥ ﴾

"ಮತ್ತು ನಿಮ್ಮ ಲೋಕಪರಿಪಾಲಕನಾಣೆ, ತಮ್ಮ ವಿವಾದಗಳಲ್ಲಿ ನಿಮ್ಮನ್ನು ತೀರ್ಪುಗಾರರನ್ನಾಗಿ ಮಾಡುವವರೆಗೆ ಮತ್ತು ನೀವು ನೀಡಿದ ತೀರ್ಪಿನ ಬಗ್ಗೆ ಮನದಲ್ಲಿ ಮುಜುಗರ ಪಡದೆ ಸಂತೋಷದಿಂದ ತಮ್ಮ ತೀರ್ಪನ್ನು ಒಪ್ಪಿಕೊಳ್ಳುವವರೆಗೆ ಅವರು ಸತ್ಯ ವಿಶ್ವಾಸಿಗಳಾಗಲಾರರು." (263)

**261** ಕುರ್‌ಆನ್ 4:59
**262** ಕುರ್‌ಆನ್ 4:60
**263** ಕುರ್‌ಆನ್ 4:65

ಅಲ್ಲಾಹನ ಶರೀಅತ್‌ನ ಹೊರತು ಇತರರ ಕಾನೂನುಗಳೊಂದಿಗೆ ಸಂತೃಪ್ತರಾದವರು ಮತ್ತು ಇದನ್ನು ಮನಸಾರೆ ಒಪ್ಪಿಕೊಂಡವರ ಈಮಾನನ್ನು ಇಲ್ಲಿ ಅಲ್ಲಾಹು ಬಲವಾಗಿ ನಿರಾಕರಿಸಿರುವನು. ಇದೇ ರೀತಿ ಇಂತಹ ತೀರ್ಪು ನೀಡುವ ಅಧಿಕಾರಿಗಳನ್ನು ಸತ್ಯನಿಷೇಧಿ(ಕಾಫಿರ್), ಅಕ್ರಮಿ(ಝಾಲಿಂ) ಮತ್ತು ಕರ್ಮಭ್ರಷ್ಟ(ಫಾಸಿಕ್)ರೆಂದು ಸಂಬೋಧಿಸಿರುವನು.

ಇವರು ಶರೀಅತ್‌ನ ಹೊರತು ಇತರ ಕಾನೂನಿನ ಪ್ರಕಾರ ಆಡಳಿತ ನಡೆಸುತ್ತಿರುತ್ತಾರೆ.

﴿ وَمَن لَّمْ يَحْكُم بِمَآ أَنزَلَ ٱللَّهُ فَأُو۟لَـٰٓئِكَ هُمُ ٱلْكَـٰفِرُونَ ﴿٤٤﴾ ﴾

**"ಮತ್ತು ಅಲ್ಲಾಹ್ ಅವತೀರ್ಣಗೊಳಿಸಿದ ಆದೇಶಗಳ ಪ್ರಕಾರ ತೀರ್ಪು ನೀಡದವರು ಸತ್ಯ ನಿಷೇಧಿಗಳಾಗಿದ್ದಾರೆ."** (264)

﴿ وَمَن لَّمْ يَحْكُم بِمَآ أَنزَلَ ٱللَّهُ فَأُو۟لَـٰٓئِكَ هُمُ ٱلْفَـٰسِقُونَ ﴿٤٧﴾ ﴾

**"ಮತ್ತು ಅಲ್ಲಾಹು ಅವತೀರ್ಣಗೊಳಿಸಿದ ಆದೇಶಗಳ ಪ್ರಕಾರ ತೀರ್ಪು ನೀಡದವರು ಕರ್ಮಭ್ರಷ್ಟರಾಗಿರುವರು."** (265)

ಅಲ್ಲಾಹು ಅವತೀರ್ಣಗೊಳಿಸಿದ ಶರೀಅತ್‌ಗೆ ಅನುಗುಣವಾಗಿ ತೀರ್ಪು ನೀಡುವುದು ಮತ್ತು ಎಲ್ಲಾ ಭಿನ್ನಾಭಿಪ್ರಾಯಗಳಲ್ಲೂ ಇದನ್ನೇ ನಿಯಮವಾಗಿ ತೆಗೆದುಕೊಳ್ಳುವುದು ಕಡ್ಡಾಯವಾಗಿದೆ ಮತ್ತು ಅತ್ಯಗತ್ಯವಾಗಿದೆ.

ಉಲೆಮಾಗಳ ನಡುವೆ ಇಜ್ತಿಹಾದೀ ಭಿನ್ನಾಭಿಪ್ರಾಯದಲ್ಲೂ ಇದರ ಕಡೆಗೆ ತಿರುಗುವುದು ಕಡ್ಡಾಯವಾಗಿದೆ. ಇಜ್ತಿಹಾದೀ ವಿಷಯಗಳಲ್ಲಿ ಕುರ್‌ಆನ್ ಮತ್ತು ಸುನ್ನತ್‌ಗೆ ಯಾವುದು ಸರಿ ಹೊಂದುವುದೋ ಅದುವೇ ಸ್ವೀಕರಿಸಲರ್ಹವಾದುದಾಗಿದೆ. ಈ ವಿಷಯದಲ್ಲಿ ಯಾವುದೇ ರೀತಿಯ ಪಕ್ಷಪಾತ ಅಥವಾ ಯಾವುದೇ ಇಮಾಮ್ ಅಥವಾ ಮದ್‌ಹಬ್‌ನ ಪಕ್ಷ ವಹಿಸುವುದು ಸ್ವೀಕಾರಾರ್ಹವಲ್ಲ. ಹೀಗೆ ಪರ್ಸನಲ್ ಲಾದಲ್ಲಿ ಮಾತ್ರವಲ್ಲ ಎಲ್ಲಾ ಅಧಿಕಾರದ ಸ್ಥಳಗಳಲ್ಲೂ ಹಕ್ಕು ಸವಾಲು, ಸಂಕಷ್ಟ ಮತ್ತು ಅರ್ಜಿಗಳಿಗೆ ಕುರ್‌ಆನ್ ಹಾಗೂ ಸುನ್ನತ್‌ನ ಪ್ರಕಾರವೇ ತೀರ್ಪು ನೀಡಬೇಕಾಗಿದೆ. ಏಕೆಂದರೆ ಇಸ್ಲಾಮ್ ಸಮಗ್ರವಾಗಿದೆ. ಆಂಶಿಕವಾಗಿಲ್ಲ. ಅಲ್ಲಾಹುವಿನ ವಚನವು ಹೀಗಿದೆ.

﴿ يَـٰٓأَيُّهَا ٱلَّذِينَ ءَامَنُوا۟ ٱدْخُلُوا۟ فِى ٱلسِّلْمِ كَآفَّةً ﴾

**"ಹೇ, ಸತ್ಯ ವಿಶ್ವಾಸಿಗಳೇ ಇಸ್ಲಾಮ್‌ನೊಳಗೆ ಸಂಪೂರ್ಣವಾಗಿ ಪ್ರವೇಶಿಸಿರಿ"** (266)

**264** ಕುರ್‌ಆನ್ 5:45
**265** ಕುರ್‌ಆನ್ 5:47
**266** ಕುರ್‌ಆನ್ 2:208

ಮತ್ತೊಂದು ಕಡೆಯಲ್ಲಿ ವಚನವು ಹೀಗಿದೆ.

﴿ أَفَتُؤْمِنُونَ بِبَعْضِ ٱلْكِتَٰبِ وَتَكْفُرُونَ بِبَعْضٍ ﴾

**“ನೀವು(ಅಲ್ಲಾಹನ) ಗ್ರಂಥದ ಕೆಲವುಗಳ ಮೇಲೆ ವಿಶ್ವಾಸವಿರಿಸಿ ಕೆಲವನ್ನು ನಿಷೇಧಿಸುವಿರೇ.”** (267)

ಹೀಗೆ ಎಲ್ಲಾ ಮದ್‌ಹಬ್‌ನ ಅನುಯಾಯಿಗಳೂ ತಮ್ಮ ಇಮಾಮರುಗಳ ಅಭಿಪ್ರಾಯಗಳಿಗೆ ಕುರ್‌ಆನ್ ಮತ್ತು ಸುನ್ನತ್‌ನ ಅಡಿಪಾಯದಲ್ಲಿ ನಿರ್ಣಯಿಸಬೇಕು. ಯಾವುದು ಕುರ್‌ಆನ್ ಹಾಗೂ ಸುನ್ನತ್‌ಗೆ ಸರಿ ಹೊಂದುತ್ತದೆಯೋ ಅದನ್ನು ತೆಗೆದುಕೊಳ್ಳಬೇಕು ಮತ್ತು ಯಾವುದು ಕುರ್‌ಆನ್ ಹಾಗೂ ಸುನ್ನತ್‌ಗೆ ವಿರುದ್ಧವಾಗಿದೆಯೋ ಅದನ್ನು ಯಾವುದೇ ಪಕ್ಷಪಾತ ಹಾಗೂ ಅಳುಕಿಲ್ಲದೆಯೇ ರದ್ದುಗೊಳಿಸಬೇಕು. ವಿಶೇಷತಃ ವಿಶ್ವಾಸ ಕಾರ್ಯಗಳಲ್ಲಿ, ಯಾಕೆಂದರೆ ಹೀಗೆ ಮಾಡಲು ಮದ್‌ಹಬ್‌ನ ಇಮಾಮ್‌ಗಳೇ ವಸಿಯ್ಯತ್ ಮಾಡಿದ್ದಾರೆ ಮತ್ತು ಎಲ್ಲಾ ಮದ್‌ಹಬ್‌ನ ಇಮಾಮರು ಹೀಗೆ ಕರೆ ನೀಡಿದ್ದಾರೆ. ಆದ್ದರಿಂದ ಯಾರು ಇವರಿಗೆ ವಿರುದ್ಧವಾಗಿರುವರೋ ಅವರು ಇವರ ಅನುಯಾಯಿಗಳಲ್ಲ. ಇವರುಗಳು ಅವರ ಕಡೆಗೆ ತಮ್ಮನ್ನು ಸೇರಿಸಿ ಹೇಳಿದರೂ ಸರಿ ಅಷ್ಟೇ. ಇಂತಹ ಜನರ ಬಗ್ಗೆ ಅಲ್ಲಾಹು ಕುರ್‌ಆನ್‌ನಲ್ಲಿ ಹೇಳಿರುವನು.

﴿ ٱتَّخَذُوٓاْ أَحْبَارَهُمْ وَرُهْبَٰنَهُمْ أَرْبَابًا مِّن دُونِ ٱللَّهِ وَٱلْمَسِيحَ ٱبْنَ مَرْيَمَ ﴾

**“ಅವರು ತಮ್ಮ ವಿದ್ವಾಂಸರುಗಳನ್ನು ಮತ್ತು ತಮ್ಮ ಪುರೋಹಿತರುಗಳನ್ನು ಮತ್ತು ಮರ್ಯಮ್‌ರ ಮಗ ಮಸೀಹರನ್ನು ಅಲ್ಲಾಹನ ಹೊರತು ತಮ್ಮ ಪ್ರಭುಗಳನ್ನಾಗಿ ಮಾಡಿಕೊಂಡರು.”** (268)

ಇದು ಕೇವಲ ಕ್ರೈಸ್ತರಿಗೆ ಮಾತ್ರ ಮೀಸಲಿರುವಂತಹದಲ್ಲ, ಬದಲಾಗಿ ಇದು ಕ್ರೈಸ್ತರನ್ನು ಹೀಗೆ ಅನುಕರಿಸುವ ಪ್ರತಿಯೊಬ್ಬನಿಗೂ ಅನ್ವಯವಾಗುವಂತಹದ್ದಾಗಿದೆ. ಆದ್ದರಿಂದ ಅಲ್ಲಾಹು ಮತ್ತು ಅವನ ಅಂತ್ಯ ಪ್ರವಾದಿ(ﷺ)ರವರ ಆದೇಶವನ್ನು ಮೀರುತ್ತಾ ಅಲ್ಲಾಹುವಿನ ಶರೀಅತ್‌ನ ಕಾನೂನನ್ನು ಬಿಟ್ಟು ಕೃತಕವಾಗಿ ನಿರ್ಮಿಸಲ್ಪಟ್ಟ ಲೌಕಿಕ ಕಾನೂನುಗಳನ್ನು ಅನುಸರಿಸುತ್ತಾನೋ ಮತ್ತು ಶರೀಅತ್‌ಅನ್ನು ದೇಹೇಚ್ಛೆಯ ಪ್ರಕಾರ ಪ್ರವರ್ತಿಸುತ್ತಾನೋ ಅವನು ಇಸ್ಲಾಮ್ ಮತ್ತು ಈಮಾನ್‌ಅನ್ನು ತನ್ನೊಳಗಿನಿಂದ ಹೊರ ಗೆಸೆಯುವಂತಹನಾಗಿರುವನು. ಅವನು ತನ್ನನ್ನು ಸತ್ಯ ವಿಶ್ವಾಸಿ ಎಂದು ಕರೆದುಕೊಂಡರೂ ಸರಿ. ಏಕೆಂದರೆ ಅಲ್ಲಾಹು ಇಂತಹ ಕೃತ್ಯಗಳನ್ನು ಸಂಪೂರ್ಣವಾಗಿ ನಿಷೇಧಿಸಿರುವನು.

**267** ಕುರ್‌ಆನ್ 2:85

**268** ಕುರ್‌ಆನ್ 9:31

ಮತ್ತು ಇಂತಹ ಜನರ ಈಮಾನ್‌ಅನ್ನು ಬಾತಿಲ್ (ಅಸ್ವೀಕಾರಾರ್ಹ)ವಾಗಿ ಮಾಡಿರುವನು.

﴿ أَلَمْ تَرَ إِلَى الَّذِينَ يَزْعُمُونَ أَنَّهُمْ آمَنُوا بِمَا أُنزِلَ إِلَيْكَ وَمَا أُنزِلَ مِن قَبْلِكَ يُرِيدُونَ أَن يَتَحَاكَمُوا إِلَى الطَّاغُوتِ وَقَدْ أُمِرُوا أَن يَكْفُرُوا بِهِ وَيُرِيدُ الشَّيْطَانُ أَن يُضِلَّهُمْ ضَلَالًا بَعِيدًا ﴿٦٠﴾ ﴾

**"ಓ ಪ್ರವಾದಿ ನಿನ್ನೆಡೆಗೆ ಅವತೀರ್ಣಗೊಳಿಸಿರುವುದರಲ್ಲೂ, ನಿನಗೆ ಮುಂಚೆ ಅವತೀರ್ಣ ಗೊಳಿಸಿರುವುದರಲ್ಲೂ ವಿಶ್ವಾಸವಿರಿಸಿದ್ದೇವೆ ಎಂದು ವಾದಿಸುವವರ ಕಡೆಗೆ ನೀನು ನೋಡಿಲ್ಲವೇ? ಅವರು ತಾಗೂತ್‌ನ ಬಳಿ ವಿಧಿಯನ್ನರಸಲು ಇಚ್ಛಿಸುತ್ತಾರೆ. ವಸ್ತುತಃ ಅವರು ಅದನ್ನು ನಿಷೇಧಿಸಲು ಆದೇಶಿಸಲ್ಪಟ್ಟಿದ್ದರು. ಶೈತಾನನು ಅವರನ್ನು ವಿದೂರ, ಮಾರ್ಗಭ್ರಷ್ಟತೆಯಲ್ಲಿ ತಳ್ಳಿ ಹಾಕಲು ಬಯಸುತ್ತಾನೆ."** [269]

ಪ್ರಸ್ತುತ ಆಯತ್‌ನಲ್ಲಿ **'ವಾದಿಸುತ್ತಾರೆ'** ಎಂಬ ಪದವು ಪ್ರಯೋಗಿಸಲ್ಪಟ್ಟಿದೆ, ಇದರಿಂದ ತಿಳಿಯುತ್ತದೇನೆಂದರೆ ಇವರ ಈಮಾನನ್ನು ಅಲ್ಲಗಳೆಯಲಾಗಿದೆ. ಏಕೆಂದರೆ ಇದು ಮಿಥ್ಯವಾದಕ್ಕಾಗಿ ಬಳಸಲಾಗುತ್ತದೆ. ಇದರ ನೈಜತೆಯು ನಮಗೆ ಇನ್ನೊಂದು ವಚನದಲ್ಲಿ ಮನದಟ್ಟಾಗುತ್ತದೆ.

﴿ وَقَدْ أُمِرُوا أَن يَكْفُرُوا بِهِ ﴾

**"ನಿಜವಾಗಿ ಅವರಿಗೆ ಅದನ್ನು ನಿಷೇಧಿಸಲು ಆದೇಶ ನೀಡಲಾಗಿತ್ತು."** [270]

ಏಕೆಂದರೆ ತಾಗೂತ್‌ಅನ್ನು ಸುಳ್ಳಾಗಿಸುವುದು, ಮತ್ತದನ್ನು ನಿಷೇಧಿಸುವುದು ತೌಹೀದ್‌ನ ಒಂದು ಸ್ತಂಭವಾಗಿದೆ.

﴿ فَمَن يَكْفُرْ بِالطَّاغُوتِ وَيُؤْمِن بِاللَّهِ فَقَدِ اسْتَمْسَكَ بِالْعُرْوَةِ الْوُثْقَىٰ ﴾

**"ಮತ್ತು ಯಾರು ವಿಗ್ರಹಗಳನ್ನು ನಿಷೇಧಿಸಿದನೋ ಮತ್ತು ಅಲ್ಲಾಹುವಿನಲ್ಲಿ ವಿಶ್ವಾಸವಿರಿಸಿದನೋ ಅವನು ಬಲವಾದ ಆಧಾರವನ್ನು ಭದ್ರವಾಗಿ ಹಿಡಿದುಕೊಂಡನು."** [271]

ಒಬ್ಬ ಸತ್ಯ ವಿಶ್ವಾಸಿಯ ಬಳಿ ತೌಹೀದ್‌ನ ಈ ಕಡ್ಡಾಯ ರುಕ್ನ್ ಇಲ್ಲದಿದ್ದರೆ ಅವನು ಮುವಹ್ಹಿದ್ ಅಲ್ಲ. ತೌಹೀದ್ ಈಮಾನ್‌ನ ಬುನಾದಿಯಾಗಿದೆ. ಇದರ ಅಸ್ತಿತ್ವದಿಂದ ಸರ್ವ ಕರ್ಮಗಳು ದುರಸ್ತಿಯಾಗುವುವು ಮತ್ತು ಅದರ ಇಲ್ಲದಿರುವಿಕೆಯಿಂದ ಸರ್ವಕರ್ಮಗಳು ನಿಷ್ಫಲವಾಗುವುವು. ಅಲ್ಲಾಹು ತನ್ನ ವಚನದಲ್ಲಿ ಹೀಗೆನ್ನುತ್ತಾನೆ.

**269** ಕುರ್‌ಆನ್ 4:60
**270** ಕುರ್‌ಆನ್ 4:60
**271** ಕುರ್‌ಆನ್ 2:256

﴿ فَمَن يَكْفُرْ بِٱلطَّٰغُوتِ وَيُؤْمِنۢ بِٱللَّهِ فَقَدِ ٱسْتَمْسَكَ بِٱلْعُرْوَةِ ٱلْوُثْقَىٰ ﴾

**"ಮತ್ತು ಯಾರು ವಿಗ್ರಹಗಳನ್ನು ನಿಷೇಧಿಸಿದನೋ ಮತ್ತು ಅಲ್ಲಾಹುವಿನಲ್ಲಿ ವಿಶ್ವಾಸ ವಿರಿಸಿದನೋ ಅವನು ಬಲವಾದ ಆಧಾರವನ್ನು ಭದ್ರವಾಗಿ ಹಿಡಿದುಕೊಂಡನು."** (272)

ಇದು ಏಕೆಂದರೆ ತಾಗೂತ್‌ನೆಡೆಗೆ ಮೊಕದ್ದಮೆಯನ್ನು ಕೊಂಡು ಹೋಗುವುದು ಅಥವಾ ಅದರ ತೀರ್ಪನ್ನು ಒಪ್ಪುವುದು ಯಥಾರ್ಥದಲ್ಲಿ ಅದರ ಮೇಲೆ ವಿಶ್ವಾಸ ತರುವುದಾಗಿದೆ. ಅಲ್ಲಾಹನ ಶರೀಅತ್‌ನ ಹೊರತು ಯಾವುದೇ ಕಾನೂನಿನ ಪ್ರಕಾರ ತೀರ್ಪು ಮಾಡಿಸುವುದರಿಂದ ಈಮಾನ್ ಇಲ್ಲವಾಗುವುದು ಸ್ಪಷ್ಟ. ಇದರಿಂದ ನಾವು ತಿಳಿಯಬೇಕಾದುದು ಏನೆಂದರೆ ಅಲ್ಲಾಹನ ಶರೀಅತ್‌ಅನ್ನು ನಿಯಮವಾಗಿ ಮಾಡುವುದು ಅವನ ತೀರ್ಪನ್ನು ಒಪ್ಪಿಕೊಳ್ಳುವುದು, ಈಮಾನ್, ಅಕೀದಃ ಮತ್ತು ಅಲ್ಲಾಹುವಿನ ಆರಾಧನೆಯಾಗಿದೆ. ಇದನ್ನು ಪಾಲಿಸುವುದು ಸರ್ವ ಮುಸ್ಲಿಮರಿಗೂ ಅತ್ಯಗತ್ಯವಾಗಿದೆ. ಇದರಿಂದ ಇಲ್ಲಿ ತಿಳಿದುಕೊಳ್ಳಬೇಕೇನೆಂದರೆ ಶರೀಅತ್‌ನ ಆದೇಶವನ್ನು, ಕೇವಲ ಜನರ ಲಾಭದ ದೃಷ್ಟಿಯಿಂದ ಪಾಲಿಸುವುದು ಅಥವಾ ಇದರಲ್ಲಿ ಯಾವುದೇ ಸುಧಾರಣೆ ಅಥವಾ ಅಭಯ ಮತ್ತು ಶಾಂತಿ ಇವುಗಳ ಖಾತರಿ ಇರುವುದಕ್ಕಾಗಿ ಮಾತ್ರ ಅದನ್ನು ಒಪ್ಪಿಕೊಳ್ಳುವುದು ಸಂಪೂರ್ಣ ತಪ್ಪಾಗಿದೆ. ಈಗ ಕೆಲವು ಜನರು ಶರೀಅತ್‌ನ ಮಾತನ್ನು ಯಾಕೆ ಆಡುತ್ತಾರೆಂದರೆ ಅವರು ಬೇರೆ ಆಡಳಿತಗಳ ಕಾರ್ಯವೈಖರಿಯಿಂದ ಬೇಸತ್ತು ಹೋಗಿರುತ್ತಾರೆ. ಆದರೆ ನಿಜವಾಗಿ ಶರೀಅತ್‌ನ ಜಾರಿಯ ಉದ್ದೇಶವು ನೈಜ ಇಬಾದತ್ ಆಗಿದೆ ಮತ್ತು ಈ ಜನರು ಅದರ ಈ ಅಂಶವನ್ನು ಮರೆತು ಬಿಡುತ್ತಾರೆ. ತಮ್ಮ ಪ್ರಯೋಜನಕ್ಕಾಗಿ ಶರೀಅತ್‌ನ ಆಶ್ರಯ ಪಡೆಯುವುದು ಮತ್ತು ಅದರ ಆರಾಧನೆಯ ಮತ್ತು ಸಾಮೀಪ್ಯದ ಭಾಗವನ್ನು ಗಮನಿಸದವರನ್ನು ಸ್ವತಃ ಅಲ್ಲಾಹನೇ ನಿರಾಕರಿಸಿರುವನು.

ಅಲ್ಲಾಹನ ವಚನವು ಹೀಗಿದೆ:

﴿ وَإِذَا دُعُوٓا۟ إِلَى ٱللَّهِ وَرَسُولِهِۦ لِيَحْكُمَ بَيْنَهُمْ إِذَا فَرِيقٌ مِّنْهُم مُّعْرِضُونَ ﴿٤٨﴾ وَإِن يَكُن لَّهُمُ ٱلْحَقُّ يَأْتُوٓا۟ إِلَيْهِ مُذْعِنِينَ ﴿٤٩﴾ ﴾

**"ಮತ್ತು ಇವರ ವ್ಯಾಜ್ಯಗಳನ್ನು ಇತ್ಯರ್ಥಪಡಿಸಲು ಇವರನ್ನು ಅಲ್ಲಾಹು ಮತ್ತು ಅವನ ಸಂದೇಶವಾಹಕರೆಡೆಗೆ ಕರೆಯಲಾದಾಗ ಇವರಲ್ಲಿ ಒಂದು ಗುಂಪು ಹಿಂಜರಿಯುತ್ತದೆ ಮತ್ತು ಒಂದು ವೇಳೆ ಸತ್ಯವು ಇವರ ಕಡೆಗೆ ಆದಾಗ ಇವರು ಅದರೆಡೆಗೆ ವಿಧೇಯರಾಗಿ ಬರುತ್ತಾರೆ."** (273)

ಇಂತಹ ಜನರು ತಾವು ಇಷ್ಟಪಡುವುದನ್ನೇ ವ್ಯವಸ್ಥೆಪಡಿಸುತ್ತಾರೆ. ದೇಹೇಚ್ಛೆಯನ್ನು

**272** ಕುರ್‌ಆನ್ 2:256

**273** ಕುರ್‌ಆನ್ 24:48–49

ಅನುಸರಿಸುವುದೇ ಇವರ ಮದ್‌ಹಬ್ ಆಗಿದೆ. ಮತ್ತು ಯಾರು ಅವರ ದೇಹೇಚ್ಛೆಗಳ ವಿರುದ್ಧ ಬರುತ್ತಾರೋ ಅವರಿಂದ ಇವರು ವಿಮುಖರಾಗುತ್ತಾರೆ. ಏಕೆಂದರೆ ಇವರು ಅಲ್ಲಾಹುವಿನ ಆರಾಧನೆ ಮಾಡುವುದಿಲ್ಲ. ಮತ್ತು ಪ್ರವಾದಿ(ﷺ)ರ ಬಳಿ ತಮ್ಮ ತೀರ್ಪನ್ನು ತೆಗೆದುಕೊಂಡು ಹೋಗುವುದೂ ಇಲ್ಲ.

ನಿರ್ಮಿತ ಕಾನೂನಿನ ಪ್ರಕಾರ ತೀರ್ಪು ನೀಡುವುದರ ವಿಧಿ:

ಪರಮ ದಯಾಮಯನಾದ ಅಲ್ಲಾಹು ಹೇಳುತ್ತಾನೆ:

﴿ وَمَن لَّمْ يَحْكُم بِمَآ أَنزَلَ ٱللَّهُ فَأُو۟لَٰٓئِكَ هُمُ ٱلْكَٰفِرُونَ ﴿٤٤﴾ ﴾

**“ಮತ್ತು ಯಾರು ಅಲ್ಲಾಹು ಅವತೀರ್ಣಗೊಳಿಸಿದ ನಿಯಮಗಳ ಪ್ರಕಾರ ತೀರ್ಪು ನೀಡುವುದಿಲ್ಲವೋ ಅವರು ಸತ್ಯ ನಿಷೇಧಿಗಳಾಗಿರುತ್ತಾರೆ.”** [274]

ಈ ಆಯತ್‌ನಲ್ಲಿ ಸ್ಪಷ್ಟಪಡಿಸಲಾಗಿದೆಯೇನೆಂದರೆ ಅಲ್ಲಾಹು ಅವತೀರ್ಣಗೊಳಿಸಿದ ಶರೀಅತ್‌ನ ಹೊರತು ಬೇರೆ ಯಾವುದೇ ಅಧಿಕಾರ ಅಥವಾ ಕಾನೂನಿನ ಆದೇಶವನ್ನು ಒಪ್ಪಿಕೊಳ್ಳುವುದು ಕುಫ್ರ್ (ಸಂಪೂರ್ಣ ನಿಷೇಧ) ಆಗಿದೆ ಮತ್ತು ಈ ಕುಫ್ರ್ ಕೆಲವೊಮ್ಮೆ ದೊಡ್ಡ ಕುಫ್ರ್ ಆಗುತ್ತದೆ ಹಾಗೂ ಆದ್ದರಿಂದ ಮನುಷ್ಯನು ತನ್ನ ಧರ್ಮದ ವೃತ್ತದಿಂದ ಹೊರ ಹೋಗುತ್ತಾನೆ. ಕೆಲವೊಮ್ಮೆ ಚಿಕ್ಕ ಕುಫ್ರ್ ಆಗುತ್ತದೆ. ಇದರಿಂದ ಅವನು ಧರ್ಮ ವೃತ್ತದಿಂದ ಹೊರಗೆ ಹೋಗುವುದಿಲ್ಲ. ಈಗ ತೀರ್ಮಾನವಾಗಬೇಕಾದುದೇನೆಂದರೆ ಅವನು ಮಾಡಿದ ಕುಫ್ರ್ ದೊಡ್ಡದೋ ಅಥವಾ ಚಿಕ್ಕದೋ? ಇದು ಅದರ ಸ್ಥಿತಿಯನ್ನು ನೋಡಿ ಹೇಳಲಾಗುವುದು. ಒಂದು ವೇಳೆ ಒಬ್ಬನ ವಿಶ್ವಾಸವು ಶರೀಅತ್‌ನ ಆದೇಶವನ್ನು ಒಪ್ಪಿಕೊಳ್ಳುವುದು ಕಡ್ಡಾಯವಿಲ್ಲ, ಯಾವುದೇ ತೀರ್ಪನ್ನು ಸ್ವೀಕರಿಸಬಹುದು ಎಂದಿದ್ದರೆ ಅವನು ಅಲ್ಲಾಹನ ನಿಯಮವನ್ನು ಅಥವಾ ಶರೀಅತ್ ಅನ್ನು ಅವಹೇಳನ ಮಾಡುತ್ತಾನೆ ಎಂದಾದರೆ ಅಥವಾ ಇತರ ಕಾನೂನುಗಳು ಮತ್ತು ಆಡಳಿತ ಜೀವನವು ಇಸ್ಲಾಮೀ ಶರೀಅತ್‌ಗಿಂತ ಉತ್ತಮವಾದುದು ಅಥವಾ ಇಸ್ಲಾಮೀ ಶರೀಅತ್ ಈ ಕಾಲದಲ್ಲಿ ಅನುಸರಣಾ ಯೋಗ್ಯವಲ್ಲ ಎಂಬ ವಿಶ್ವಾಸವಿದ್ದರೆ ಅಥವಾ ಕಾಫಿರ್, ಮುನಾಫಿಕ್‌ಗಳ ಸಂತೃಪ್ತಿ ಮತ್ತು ಸಂತೋಷಕ್ಕಾಗಿ ಲೌಕಿಕ ಕಾನೂನುಗಳು ಮತ್ತು ಲೌಕಿಕ ಅಧಿಕಾರಗಳ ತಪ್ಪಲಲ್ಲಿ ರಕ್ಷಣೆ ಪಡೆದುಕೊಳ್ಳುತ್ತಾನೆ ಎಂದಾದರೆ ಇದು ದೊಡ್ಡ ಕುಫ್ರ್ ಆಗಿದೆ. ಆದರೆ ಒಂದು ವೇಳೆ ಒಬ್ಬನ ವಿಶ್ವಾಸವು ಅಲ್ಲಾಹುವಿನ ಶರೀಅತ್ ಅನ್ನು ಜಾರಿ ಮಾಡುವುದು ಕಡ್ಡಾಯವಾಗಿದೆ. ಎಂದಿದ್ದರೆ, ಅಲ್ಲದೇ ಇದರ ಬಗ್ಗೆ ಅವನಿಗೆ ಸಂಪೂರ್ಣ ಅರಿವಿದೆ, ಇದಾದ ಮೇಲೂ ಅವನು ಜಾರಿಗೊಳಿಸುವುದಿಲ್ಲ. ಆದರೆ ಇದರ ಪರಿಣಾಮದಲ್ಲಿ ತಾನು ಶಿಕ್ಷೆಗೆ ಅರ್ಹನು ಎಂದು ತಿಳಿದುಕೊಂಡರೆ ಅವನು ತಪ್ಪಿತಸ್ಥ ಮತ್ತು ಕಾಫಿರ್ ಆಗುತ್ತಾನೆ. ಆದರೆ ಅವನ ಕುಫ್ರ್ ಸಣ್ಣ ಕುಫ್ರ್ ಆಗಿರುತ್ತದೆ.

---

**274** ಕುರ್‌ಆನ್ 5:44

ಆದರೆ ಒಬ್ಬ ಶರೀಅತ್‌ನ ಬಗ್ಗೆ ಅರಿವಿಲ್ಲದವನಾಗಿರುತ್ತಾನೆ. ಮತ್ತು ಅದನ್ನು ಅರಿತುಕೊಳ್ಳಲು ತಾನು ಪ್ರಯತ್ನ ಮಾಡುತ್ತಾನೆ. ಮತ್ತು ಅವನು ತಪ್ಪು ತೀರ್ಪು ನೀಡಿದರೆ ಅವನನ್ನು ತಪ್ಪಿತಸ್ಥ ಎಂದು ಹೇಳಲಾಗುವುದು. ಅವನ ಪ್ರಯತ್ನ ಮತ್ತು ಇಜ್ತಿಹಾದ್‌ನ ಒಳ್ಳೆಯ ಸಂಕಲ್ಪಕ್ಕಾಗಿ ಅವನಿಗೆ ಒಂದು ಪ್ರತಿಫಲ ದೊರಕುವುದು ಮತ್ತು ಆತನ ಪಾಪವು ಕ್ಷಮಿಸಲ್ಪಡುವುದು. ಇದು ಕೆಲವು ವಿಶೇಷ ಧರ್ಮವಿಧಿಗಳ ಪ್ರಕರಣಗಳಲ್ಲಿ ಮಾತ್ರವಾಗಿರುವುದು. ಆದರೆ ಸಾಮಾನ್ಯ ಪ್ರಕರಣಗಳಲ್ಲಿ ಇದು ಅನ್ವಯಿಸುವುದಿಲ್ಲ. ಶೇಖುಲ್ ಇಸ್ಲಾಮ್ ಇಬ್ನುತೈಮಿಯ್ಯ(ﷺ) ತಮ್ಮ ಮಜ್‌ಮೂಉಲ್ ಫತಾವಾದಲ್ಲಿ ಹೇಳುತ್ತಾರೆ.

“ಒಂದು ವೇಳೆ ತೀರ್ಪುಗಾರನು ಧರ್ಮನಿಷ್ಠನಾಗಿದ್ದು, ಧರ್ಮದ ಜ್ಞಾನವಿಲ್ಲದೇ ತೀರ್ಪು ನೀಡುತ್ತಾನೆ ಎಂದಾದರೆ ಅವನು ನರಕದವನಾಗಿರುವನು ಮತ್ತು ಒಂದು ವೇಳೆ ಅವನಿಗೆ ಜ್ಞಾನವಿದೆ; ಆದರೆ ಅರಿವಿದ್ದೂ ಅವನು ತನ್ನರಿವಿನ ವಿರುದ್ಧ ತೀರ್ಪು ನೀಡುತ್ತಾನೆ ಎಂದರೆ ಅವನೂ ನರಕದವನಾಗಿರುವನು. ಒಂದು ವೇಳೆ ಅವನು ಅರಿವು, ನ್ಯಾಯವಿಲ್ಲದೆ ತೀರ್ಪು ನೀಡುತ್ತಾನೆಂದರೆ ಅವನು ನರಕಕ್ಕೆ ಅತ್ಯಂತ ಹೆಚ್ಚು ಹಕ್ಕುದಾರನಾಗಿರುವನು. ಯಾವುದೇ ವ್ಯಕ್ತಿಯು ವಿಶಿಷ್ಠ ವಿಷಯದಲ್ಲಿ ತೀರ್ಪು ನೀಡುವಾಗ, ಹೀಗಾಗುವುದು ಸಹಜ. ಆದರೆ ಒಬ್ಬ ಮುಸ್ಲಿಮನು ಧರ್ಮ ಸಮೂಹದ ಯಾವುದೇ ಸಾಮಾನ್ಯ ಪ್ರಕರಣದಲ್ಲಿ ಈ ರೀತಿಯ ಯಾವುದೇ ತೀರ್ಪನ್ನು ನೀಡಿದರೆ, ಸತ್ಯವನ್ನು ಸುಳ್ಳು ಹಾಗೂ ಸುಳ್ಳನ್ನು ಸತ್ಯ ಮಾಡಿದರೆ, ಸುನ್ನತ್‌ಅನ್ನು ಬಿದ್‌ಅತ್ ಹಾಗೂ ಬಿದ್‌ಅತ್ತನ್ನು ಸುನ್ನತ್ ಎಂದು ಘೋಷಿಸಿದರೆ ಒಳಿತನ್ನು ಕೆಡುಕು ಎಂದೂ ಕೆಡುಕನ್ನು ಒಳಿತು ಎಂದೂ ಹೇಳಿದರೆ ಅಲ್ಲಾಹು ಮತ್ತು ಆತನ ಪ್ರವಾದಿ(ﷺ) ಯಾವುದನ್ನು ಆದೇಶಿಸಿರುವರೋ ಅದರಿಂದ ಅವನು ಜನರನ್ನು ತಡೆಯುತ್ತಾನೆ ಮತ್ತು ಅಲ್ಲಾಹು ಮತ್ತು ಆತನ ಪ್ರವಾದಿ ಯಾವುದರಿಂದ ತಡೆದಿರುವರೋ ಅದರ ಆದೇಶ ನೀಡುತ್ತಾನೆ ಎಂದಾದರೆ ಇದು ಬೇರೆಯೇ ವಿಧವಾಗಿದೆ. ಇದರ ಬಗ್ಗೆ ಸರ್ವಲೋಕ ಪರಿಪಾಲಕನೇ ಉತ್ತಮ ತೀರ್ಮಾನ ಮಾಡುವನು. ಅವನು ಸಂದೇಶವಾಹಕರುಗಳ ಆರಾಧ್ಯನು, ನಿರ್ಣಾಯಕ ದಿನದ ರಾಜನಾಗಿರುವನು ಇಹಪರದ ಎಲ್ಲಾ ಸ್ತುತಿಗಳು ಅವನಿಗೇ ಮೀಸಲು, ಸರ್ವೋನ್ನತನಾದ ಅಲ್ಲಾಹು ಹೇಳುತ್ತಾನೆ:

﴿ لَهُ ٱلۡحُكۡمُ وَإِلَيۡهِ تُرۡجَعُونَ ٨٨ ﴾

**“ಆಜ್ಞಾಧಿಕಾರವು ಅವನದಾಗಿದೆ ಮತ್ತು ನೀವು ಅವನೆಡೆಗೇ ಮರಳಲಿದ್ದೀರಿ”** (275)

﴿ هُوَ ٱلَّذِيٓ أَرۡسَلَ رَسُولَهُۥ بِٱلۡهُدَىٰ وَدِينِ ٱلۡحَقِّ لِيُظۡهِرَهُۥ عَلَى ٱلدِّينِ كُلِّهِۦۚ وَكَفَىٰ

275 ಕುರ್‌ಆನ್ 28:88

﴿ بِٱللَّهِ شَهِيدًا ﴾ ٢٨

**“ಅವನೇ ತನ್ನ ಸಂದೇಶವಾಹಕರನ್ನು ಸನ್ಮಾರ್ಗ ಹಾಗೂ ಸತ್ಯಧರ್ಮದೊಂದಿಗೆ ಕಳುಹಿಸಿದನು. ಅದನ್ನು ಸಕಲ ಧರ್ಮಗಳ ಮೇಲೆ ಮೇಲುಗೈ ಸಾಧಿಸಲೆಂದು ಮತ್ತು ಸತ್ಯಕ್ಕೆ ಸಾಕ್ಷಿಯಾಗಿ ಅಲ್ಲಾಹುವೇ ಸಾಕು.”** (276)

ಮುಂದುವರಿಯುತ್ತಾ ಶೇಖ್ ಇಬ್ನ್ ತೈಮಿಯ್ಯ ಹೇಳುತ್ತಾರೆ.

“ನಿಸ್ಸಂಶಯವಾಗಿ, ಒಬ್ಬನ ವಿಶ್ವಾಸವು ಶರೀಅತ್‌ನ ಪ್ರಕಾರ ತೀರ್ಪು ಹಾಗೂ ಅದನ್ನು ಅನುಸರಿಸುವುದು ಕಡ್ಡಾಯವಿಲ್ಲವೆಂದಿದ್ದರೆ ಅವನು ಕಾಫಿರ್ ಆಗುತ್ತಾನೆ. ಆದ್ದರಿಂದ ಒಬ್ಬ ವ್ಯಕ್ತಿಯು ಜನರ ನಡುವೆ ವಿಧಿತೀರ್ಪು ನೀಡುವುದರಲ್ಲಿ ಶರೀಅತ್‌ನಿಂದ ದೂರವಾಗಿ ಇಂತಹ ಒಂದು ಕಾನೂನಿನ ಪ್ರಕಾರ ತೀರ್ಪು ನೀಡುತ್ತಾನೆ ಮತ್ತು ಆ ಕಾನೂನನ್ನು ನ್ಯಾಯಯುತ ಕಾನೂನೆಂದು ತಿಳಿದುಕೊಳ್ಳುತ್ತಾನೆಂದಾದರೆ ಅವನೂ ಧರ್ಮನಿಂದಕ, ಸತ್ಯ ನಿಷೇಧಿ ಆಗುತ್ತಾನೆ. ಎಲ್ಲಾ ಧರ್ಮ ಯಾ ಸಿದ್ದಾಂತಗಳು ಸಾಮಾನ್ಯವಾಗಿ ನ್ಯಾಯಯುತ ತೀರ್ಪನ್ನು ನೀಡಲು ಆದೇಶಿಸುತ್ತದೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಕೆಲವೊಮ್ಮೆ ಈ ನ್ಯಾಯಪೂರ್ವತೆಯು ಬೇರೆ ಧರ್ಮದಲ್ಲಿ ಇರುತ್ತದೆ ಮತ್ತು ಆ ಧರ್ಮದ ಪುರೋಹಿತರು ಅದನ್ನೇ ಆದೇಶಿಸುತ್ತಾರೆ ಮತ್ತು ಕೆಲವೊಮ್ಮೆ ಹೀಗೂ ಆಗುತ್ತದೆ. ಇಸ್ಲಾಮ್‌ನೆಡೆಗೆ ನಂಟು ಇರುವ ಮುಸ್ಲಿಮರು ತಮ್ಮ ರೂಢಿಯಂತೆ ತೀರ್ಪು ನೀಡುತ್ತಾರೆ. ಅಂದರೆ ತಮ್ಮ ತಾತ– ಮುತ್ತಾತಂದಿರು ಹೇಗೆ ತೀರ್ಪು ನೀಡಿದ್ದಾರೋ ಅಂತೆಯೇ ತೀರ್ಪು ನೀಡುತ್ತಾರೆ. ಇಂತಹ ಆಡಳಿತಾಧಿಕಾರಿಗಳ ಸಾಮಾನ್ಯ ವಿಶ್ವಾಸವು ಹೇಗಿರುತ್ತದೆಂದರೆ ಜನರ ಆವೇಶ ಗಮನದಲ್ಲಿರಿಸಿಕೊಂಡೇ ತೀರ್ಪು ನೀಡಬೇಕು. ಏಕೆಂದರೆ ಜನರು ಇದರಿಂದಾಗಿ ದ್ವೇಷ ಹೊಂದಬಾರದು. ಇದು ಕೂಡಾ ಸಂಪೂರ್ಣ ಕುಫ್ರ್ ಆಗಿದೆ. ಬಹಳ ಜನರು ಇಸ್ಲಾಮ್‌ನೆಡೆಗೆ ತಮ್ಮ ನಂಟನ್ನು ತೋರಿಸುತ್ತಾರೆ. ಆದರೆ ಕುರ್‌ಆನ್ ಮತ್ತು ಸುನ್ನತ್‌ನ ಪ್ರಕಾರ ತೀರ್ಪು ನೀಡುವುದಿಲ್ಲ. ಬದಲಾಗಿ ತೀರ್ಪಿನ ಸಮಯದಲ್ಲಿ ತಮ್ಮ – ತಂದೆ ತಾತಂದಿರ ರೀತಿ ನೀತಿಗಳನ್ನು ನೋಡುತ್ತಾರೆ. ಶರೀಅತ್‌ನ ಪ್ರಕಾರ ತೀರ್ಪು ನೀಡುವುದು ಕಡ್ಡಾಯವೆಂದು ಅವರಿಗೆ ಚೆನ್ನಾಗಿ ಗೊತ್ತಿರುತ್ತದೆ. ಆದರೂ ಕೂಡಾ ಅವರು ಶರೀಅತ್‌ಗೆ ವಿರುದ್ಧವಾದ ತೀರ್ಪನ್ನೇ ತಮಗೆ ಧರ್ಮಸಮ್ಮತವೆಂದು ತಿಳಿಯುತ್ತಾರೆ. ಇಂತಹ ಜನರೂ ಕಾಫಿರರಾಗಿದ್ದಾರೆ.” (ಮಿನ್‌ಹಾಜುಸ್ಸುನ್ನತುನ್ನಬವಿಯ್ಯಃ)

ಶೈಖ್ ಮುಹಮ್ಮದ್ ಬಿನ್ ಇಬ್ರಾಹೀಮ್(ﷺ) ಹೇಳುತ್ತಾರೆ: ಇನ್ನು ಯಾರ ವಿಚಾರವಾಗಿ ಚಿಕ್ಕ ಕುಫ್ರ್ ಇದೆಯೆಂದು ಹೇಳಲಾಗಿದೆಯೋ ಅವನು ಅಲ್ಲಾಹೇತರ ಕಾನೂನನ್ನು ಜಾರಿಗೆ ತಂದು ತಾನು ತಪ್ಪಿತಸ್ಥನೆಂದು ತಿಳಿದೂ ಸಹ, ಅಲ್ಲಾಹನ ಶಾಸನವೇ

---

**276** ಕುರ್‌ಆನ್ 48:28

ಸತ್ಯವೆಂದು ತಿಳಿದಿದ್ದರೂ ಒಬ್ಬನಲ್ಲಿ ಇಂತಹುದು ಉಂಟಾದರೆ ಅದು ಕುಫ್ರ್ ಆಗಿರುತ್ತದೆ. ಇದು ಅವನನ್ನು ಇಸ್ಲಾಮೀ ವೃತ್ತದಿಂದ ಹೊರಗೆ ಹಾಕುತ್ತದೆ.

## ಅಧ್ಯಾಯ–7

# ಕಾನೂನು ರಚನೆ ಮತ್ತು ಹಲಾಲ್ – ಹರಾಮ್ ಅನ್ನು ಸ್ಥಾಪಿಸುವುದಕ್ಕೆ ತಮಗೆ ಹಕ್ಕಿದೆಯೆಂದು ವಾದಿಸುವುದು

ನಿಯಮಗಳು ಮತ್ತು ಕಾನೂನುಗಳು ರಚಿಸುವ ಅಧಿಕಾರವು ಕೇವಲ ಅಲ್ಲಾಹನದಾಗಿದೆ. ಈ ನಿಯಮಗಳಲ್ಲಿ ದಾಸರ ಒಳಿತು ಹಾಗೂ ಯಶಸ್ಸು ಅಡಗಿರುವುದು ಮತ್ತು ಅವರ ಆರಾಧನೆಗಳು ಮತ್ತು ಕಾರ್ಯ, ವ್ಯವಹಾರಗಳು ಮತ್ತು ಅವರು ನಡೆಯುವಂತಹ ಜೀವನದ ಎಲ್ಲಾ ಶಾಖೆಗಳು ಮತ್ತು ಯಾವುದರ ಮೂಲಕ ದಾಸರ ನಡುವಿನ ಜಗಳ ತರ್ಕ ತಕರಾರುಗಳ ತೀರ್ಪು ನೀಡಲಾಗುತ್ತದೋ ಅವುಗಳು ಜನರ ಪ್ರಭುವಾದ ಅಲ್ಲಾಹನಿಗೆ ಮೀಸಲಾದ ಹಕ್ಕಾಗಿರುತ್ತವೆ. ಅಲ್ಲಾಹುವಿನ ವಚನವು ಹೀಗಿದೆ.

﴿ أَلَا لَهُ ٱلْخَلْقُ وَٱلْأَمْرُ ۗ تَبَارَكَ ٱللَّهُ رَبُّ ٱلْعَٰلَمِينَ ﴿٥٤﴾ ﴾

**“ನೋಡಿರಿ, ಸರ್ವ ಸೃಷ್ಟಿಗಳೂ ಆತನದೇ ಮತ್ತು ಸರ್ವ ನಿಯಮಗಳು ಆತನದೇ ಸರ್ವಲೋಕ ಪರಿಪಾಲಕನಾದ ಅಲ್ಲಾಹು ಅತ್ಯಂತ ಸಮೃದ್ಧಿಯುಳ್ಳವನಾಗಿರುವನು.”** [277]

ಏಕೆಂದರೆ ತನ್ನ ದಾಸನಿಗೆ ಯಾವ ವಸ್ತು ಪ್ರಯೋಜನಕಾರಿಯಾಗಿದೆ ಎಂಬುದನ್ನು ಆತನೇ ಚೆನ್ನಾಗಿ ಬಲ್ಲನು. ಆದ್ದರಿಂದ ಅದರ ಪ್ರಕಾರವೇ ಅವನು ಅವರಿಗಾಗಿ ನಿಯಮಗಳನ್ನು ರಚಿಸುತ್ತಾನೆ. ಅವನು ಅವರೆಲ್ಲರ ಪರಿಪಾಲಕ ಪ್ರಭುವಾಗಿರುವನು. ಅವರೆಲ್ಲರ ಪರಿಪಾಲಕನಾಗಿರುವುದರಿಂದ ಶಾಸನ ರಚನೆಯ ಅಧಿಕಾರವೂ ಅವನದ್ದಾಗಿದೆ. ಮತ್ತು ಸಕಲರೂ ಅವನ ದಾಸರು ಮತ್ತು ಗುಲಾಮರಾಗಿರುವುದರಿಂದ ಅವರಿಗೆ ಅಲ್ಲಾಹುವಿನ ಆದೇಶಗಳು ಜಾರಿಯಾಗುವುದು ಅಗತ್ಯವಾಗಿದೆ. ಅವನ ಆದೇಶಗಳ ಪಾಲನೆಯ ಸಂಪೂರ್ಣ ಪ್ರಯೋಜನವು ಅವರ ಕಡೆಗೇ ಮರಳುವುದು.

ಅಲ್ಲಾಹುವಿನ ವಚನವು ಹೀಗಿದೆ.

﴿ فَإِن تَنَٰزَعْتُمْ فِى شَىْءٍ فَرُدُّوهُ إِلَى ٱللَّهِ وَٱلرَّسُولِ إِن كُنتُمْ تُؤْمِنُونَ بِٱللَّهِ وَٱلْيَوْمِ ٱلْءَاخِرِ ۚ ذَٰلِكَ خَيْرٌ وَأَحْسَنُ تَأْوِيلًا ﴿٥٩﴾ ﴾

277 ಕುರ್‌ಆನ್ 7:54

**“ಮತ್ತು ಯಾವುದೇ ವಿಷಯದಲ್ಲಿ ನಿಮ್ಮಲ್ಲಿ ಭಿನ್ನಾಭಿಪ್ರಾಯವುಂಟಾದರೆ, ಅಲ್ಲಾಹು ಮತ್ತು ಅಂತ್ಯ ದಿನದ ಮೇಲೆ ವಿಶ್ವಾಸವಿರಿಸುತ್ತೀರಾದರೆ ಅದನ್ನು ಅಲ್ಲಾಹು ಮತ್ತು ಅವನ ಸಂದೇಶವಾಹಕರೆಡೆಗೆ ಮರಳಿಸಿರಿ. ಇದು ಬಹಳ ಉತ್ತಮವಾದುದು ಮತ್ತು ಅತ್ಯುತ್ತಮ ಕಾರ್ಯ ವಿಧಾನವಾಗಿದೆ.”** (278)

ಮತ್ತೊಂದು ಕಡೆಯಲ್ಲಿ ಹೀಗಿದೆ.

﴿ وَمَا ٱخۡتَلَفۡتُمۡ فِيهِ مِن شَيۡءٖ فَحُكۡمُهُۥٓ إِلَى ٱللَّهِۚ ذَٰلِكُمُ ٱللَّهُ رَبِّي ﴾

**“ನೀವು ಯಾವುದರ ಬಗ್ಗೆ ಭಿನ್ನಾಭಿಪ್ರಾಯ ಮಾಡುತ್ತೀರೋ ಅದರ ತೀರ್ಪು ಅಲ್ಲಾಹನೆಡೆಗೆ ಆಗಿದೆ. ಅವನೇ ಅಲ್ಲಾಹು ನನ್ನ ಪರಿಪಾಲಕ ಪ್ರಭುವಾಗಿದ್ದಾನೆ.”** (279)

ತನ್ನ ದಾಸನು ಅಲ್ಲಾಹನ ಹೊರತು ಇತರರನ್ನು ಶಾಸನಕರ್ತರನ್ನಾಗಿ ಭಾವಿಸುವುದನ್ನು ಅಲ್ಲಾಹು ಕಠಿಣವಾಗಿ ವಿರೋಧಿಸಿರುವನು. ಸರ್ವೋನ್ನತನ ವಚನವು ಹೀಗಿದೆ.

﴿ أَمۡ لَهُمۡ شُرَكَٰٓؤُاْ شَرَعُواْ لَهُم مِّنَ ٱلدِّينِ مَا لَمۡ يَأۡذَنۢ بِهِ ٱللَّهُۚ ﴾

**“ಇವರ ಬಳಿ ಇವರಿಗಾಗಿ ಅಲ್ಲಾಹು ಅನುಮತಿಸಿಲ್ಲದ ಧಾರ್ಮಿಕ ಕಟ್ಟಳೆ ವಿಧಿಸುವವರಾದ ದೇವ ಸಹಭಾಗಿಗಳು ಇದ್ದಾರೆಯೇ?”** (280)

ಆದ್ದರಿಂದ ಒಬ್ಬನು ಅಲ್ಲಾಹುವಿನ ಶರೀಅತ್‌ನ ಹೊರತು ಬೇರೆ ಶರೀಅತ್ ಅನ್ನು ಸ್ವೀಕರಿಸಿದರೆ ಅವನು ಶಿರ್ಕ್ ಮಾಡಿದನು. ಅಲ್ಲಾಹು ಮತ್ತು ಅವನ ಸಂದೇಶವಾಹಕರು (ﷺ)ರವರಿಂದ ತಿಳಿಸಲ್ಪಡದ ಆರಾಧನೆಗಳು ಬಿದ್‌ಅತ್(ಧರ್ಮದಲ್ಲಿ ನವೀನತೆ) ಆಗಿದೆ ಮತ್ತು ಎಲ್ಲಾ ಬಿದ್‌ಅತ್‌ಗಳೂ ಮಾರ್ಗಭ್ರಷ್ಟತೆಯಾಗಿದೆ. ಅಲ್ಲಾಹನ ಸಂದೇಶವಾಹಕ (ﷺ)ರು ಹೇಳಿರುವರು.

«مَنْ أَحْدَثَ فِي أَمْرِنَا هَذَا مَا لَيْسَ مِنْهُ فَهُوَ رَدٌّ»

**“ಯಾರಾದರೂ ನಮ್ಮ ಈ ವಿಷಯ (ದೀನ್)ದಲ್ಲಿ ಅದರಲ್ಲಿಲ್ಲದಂತಹ ಹೊಸ ವಿಷಯವನ್ನು ಹುಟ್ಟು ಹಾಕಿದರೆ ಅದು ತಿರಸ್ಕೃತವಾಗಿದೆ.”** (281)

ಇನ್ನೊಂದು ಹದೀಸ್ ಹೀಗಿದೆ.

«مَنْ عَمِلَ عَمَلًا لَيْسَ عَلَيْهِ أَمْرُنَا فَهُوَ رَدٌّ»

**278** ಕುರ್‌ಆನ್ 4:59
**279** ಕುರ್‌ಆನ್ 42:10
**280** ಕುರ್‌ಆನ್ 42:21
**281** ಬುಖಾರಿ, ಮುಸ್ಲಿಮ್

**"ಯಾರಾದರೂ ನಮ್ಮ ಆದೇಶದಲ್ಲಿಲ್ಲದಂತಹ ಕಾರ್ಯ ಎಸಗಿದರೆ ಅದು ತಿರಸ್ಕೃತವಾದುದಾಗಿದೆ."** (282)

ಮತ್ತು ರಾಜಕೀಯ ಅಥವಾ ವ್ಯವಸ್ಥೆಯ ವಿಷಯಗಳಲ್ಲಿ ಅಲ್ಲಾಹುವಿನ ಶರೀಅತ್‌ನಿಂದ ಹೊರಬಂದು ಕಾರ್ಯವೆಸಗಿದರೆ ಅದು ತಾಗೂತೀ ಮತ್ತು ಜಾಹಿಲೀ ಆಡಳಿತವಾಗುವುದು. ಅಲ್ಲಾಹು ಹೇಳುತ್ತಾನೆ:

﴿ أَفَحُكْمَ ٱلْجَٰهِلِيَّةِ يَبْغُونَ ۚ وَمَنْ أَحْسَنُ مِنَ ٱللَّهِ حُكْمًا لِّقَوْمٍ يُوقِنُونَ ﴿٥٠﴾ ﴾

**"ಏನು ಈ ಜನರು ಜಾಹಿಲಿಯ್ಯತ್‌ನ ಆದೇಶಗಳ ಆಕಾಂಕ್ಷಿಗಳಾಗಿದ್ದಾರೆಯೇ? ಮತ್ತು ದೃಢ ವಿಶ್ವಾಸವಿರುವ ಸಮೂಹಕ್ಕೆ ಅಲ್ಲಾಹನಲ್ಲದೇ ಶ್ರೇಷ್ಠ ತೀರ್ಮಾನ ಮಾಡುವವನು ಯಾರು?"** (283)

ಇದೇ ರೀತಿ ಹಲಾಲ್ ಮತ್ತು ಹರಾಮ್‌ಅನ್ನು ತೀರ್ಮಾನಿಸುವ ಅಧಿಕಾರವೂ ಕೇವಲ ಅಲ್ಲಾಹನದ್ದಾಗಿದೆ. ಈ ವಿಷಯದಲ್ಲಿ ಅವನೊಂದಿಗೆ ಪಾಲುದಾರರಾಗಲು ಯಾರಿಗೂ ಅನುಮತಿಯಿಲ್ಲ. ಅಲ್ಲಾಹು ಹೇಳುತ್ತಾನೆ.

﴿ وَلَا تَأْكُلُوا۟ مِمَّا لَمْ يُذْكَرِ ٱسْمُ ٱللَّهِ عَلَيْهِ وَإِنَّهُۥ لَفِسْقٌ ۗ وَإِنَّ ٱلشَّيَٰطِينَ لَيُوحُونَ
إِلَىٰٓ أَوْلِيَآئِهِمْ لِيُجَٰدِلُوكُمْ ۖ وَإِنْ أَطَعْتُمُوهُمْ إِنَّكُمْ لَمُشْرِكُونَ ﴿١٢١﴾ ﴾

**"ಅಲ್ಲಾಹುವಿನ ಹೆಸರು ಸ್ಮರಿಸದಂತಹ ವಸ್ತುಗಳನ್ನು ತಿನ್ನಬೇಡಿರಿ. ಮತ್ತು ಅದನ್ನು ತಿನ್ನುವುದು ಪಾಪವಾಗಿದೆ ಮತ್ತು ಶೈತಾನರು ನಿಮ್ಮೊಂದಿಗೆ ಜಗಳವಾಡಲೆಂದು ತಮ್ಮ ಸಂಗಡಿಗರ ಮನದಲ್ಲಿ ದುರ್ಬೋಧನೆಗಳನ್ನು ಹಾಕುತ್ತಾರೆ. ಒಂದು ವೇಳೆ ನೀವು ಅವರನ್ನು ಅನುಸರಿಸಿದರೆ ನಿಸ್ಸಂದೇಹವಾಗಿಯೂ ನೀವು ಬಹುದೇವ ವಿಶ್ವಾಸಿಗಳು ಆಗುವಿರಿ."** (284)

ಈ ವಚನದಲ್ಲಿ ಸರ್ವೋನ್ನತನಾದ ಅಲ್ಲಾಹ್‌ನು ಶೈತಾನರು ಮತ್ತು ಅವರ ಗೆಳೆಯರ ಅನುಸರಣೆಯನ್ನು ಹಲಾಲ್ ಮತ್ತು ಹರಾಮ್‌ನ ವಿಷಯದಲ್ಲಿ ಅಲ್ಲಾಹುವಿನೊಂದಿಗೆ ಬಹಿರಂಗ ಶಿರ್ಕ್ ಎಂದು ಹೇಳಿದ್ದಾನೆ. ಇದೇ ರೀತಿ ಹಲಾಲ್ ಮತ್ತು ಹರಾಮ್‌ನ ವಿಷಯದಲ್ಲಿ ಉಲೆಮಾ ಮತ್ತು ಉಮರಾಗಳ ಅಂಧಾನುಕರಣೆಯು ಎಂದರೆ ಅಲ್ಲಾಹು ಹಲಾಲ್‌ಗೊಳಿಸಿರುವುದನ್ನು ಹರಾಮ್‌ಗೊಳಿಸುವುದು ಅಥವಾ ಅಲ್ಲಾಹು ಹರಾಮ್‌ಗೊಳಿಸಿದ್ದನ್ನು ಹಲಾಲ್‌ಗೊಳಿಸುವುದು ಮಾಡಿದರೆ ಅಲ್ಲಾಹನ ಹೊರತು ಇತರರನ್ನು ರಬ್ಬುಗಳನ್ನಾಗಿ ಮಾಡಿದಂತಾಗುವುದು. ಅಲ್ಲಾಹು ಹೇಳುತ್ತಾನೆ.

---

**282** ಮುಸ್ಲಿಮ್

**283** ಕುರ್‌ಆನ್ 5:50

**284** ಕುರ್‌ಆನ್ 6:121

﴿ ٱتَّخَذُوٓا۟ أَحْبَارَهُمْ وَرُهْبَـٰنَهُمْ أَرْبَابًا مِّن دُونِ ٱللَّهِ وَٱلْمَسِيحَ ٱبْنَ مَرْيَمَ وَمَآ أُمِرُوٓا۟ إِلَّا لِيَعْبُدُوٓا۟ إِلَـٰهًا وَٰحِدًا ۖ لَّآ إِلَـٰهَ إِلَّا هُوَ ۚ سُبْحَـٰنَهُۥ عَمَّا يُشْرِكُونَ ﴿٣١﴾ ﴾

**"ಮತ್ತು ಅವರು ತಮ್ಮ ವಿದ್ವಾಂಸರು ಮತ್ತು ಪುರೋಹಿತರನ್ನೂ, ಮರ್ಯಮ್‌ರ ಮಗ ಮಸೀಹ್‌ರನ್ನೂ ಅಲ್ಲಾಹನ ಹೊರತು ರಬ್ಬ್‌ಗಳಾಗಿ ಮಾಡಿಕೊಂಡರು. ನಿಜವಾಗಿ ಅವರಿಗೆ ಅಲ್ಲಾಹನೋರ್ವನ ಹೊರತು ಬೇರೆ ಯಾರನ್ನು ಆರಾಧಿಸಬಾರದು ಎಂದು ಆದೇಶಿಸಲಾಗಿತ್ತು . ಅವನ ಹೊರತು ಅನ್ಯ ಆರಾಧ್ಯರಾರೂ ಇಲ್ಲ. ಇವರು ಮಾಡುವ ಭಾಗೀದಾರಿಕೆಯಿಂದ ಅವನು ಮುಕ್ತನಾಗಿರುತ್ತಾನೆ."** [285]

ಪ್ರವಾದಿ(ﷺ) ಈ ಸೂಕ್ತವನ್ನು ಅದೀ ಬಿನ್ ಹಾತಿಮ್ ಅತ್ತಾಈ(رضي الله عنه)ರವರ ಮುಂದೆ ಓದಿದಾಗ ಅವರು ಹೇಳಿದರು. ಯಾ ರಸೂಲಲ್ಲಾಹ್ ನಾವು ಅವರ ಆರಾಧನೆ ಮಾಡುತ್ತಿರಲಿಲ್ಲ ಆಗ ಅವರು(ﷺ)ಹೇಳಿದರು.

"ಅಲ್ಲಾಹು ಹರಾಮ್ ಮಾಡಿರುವ ವಸ್ತುವನ್ನು ಅವರು ಹಲಾಲ್ ಮಾಡಿದರೆ ನೀವು ಹಲಾಲ್ ಮಾಡುತ್ತಿರಲಿಲ್ಲವೇ? ಅಲ್ಲಾಹು ಹಲಾಲ್ ಮಾಡಿರುವ ವಸ್ತುವನ್ನು ಅವರು ಹರಾಮ್ ಮಾಡಿದರೆ ನೀವು ಅದನ್ನು ಹರಾಮ್ ಮಾಡುತ್ತಿರಲಿಲ್ಲವೇ? "ಹೌದು" ಎಂದು ಅದೀ ಬಿನ್ ಹಾತಿಮ್(رضي الله عنه) ಹೇಳಿದಾಗ ಪ್ರವಾದಿ(ﷺ) ಹೇಳಿದರು. ಅದುವೇ ಅವರಿಗೆ ಮಾಡುವ ಆರಾಧನೆಯಾಗಿದೆ. [286]

ಇದರಿಂದ ಸ್ಪಷ್ಟವಾಗುವುದೇನೆಂದರೆ ಅಲ್ಲಾಹುನನ್ನು (ಅವನ ನಿಯಮಗಳನ್ನು) ಬಿಟ್ಟು ಹಲಾಲ್ ಹರಾಮ್‌ನ ವಿಷಯದಲ್ಲಿ ಅವರನ್ನು ಅನುಸರಿಸುವುದು ಅವರ ಆರಾಧನೆಯಾಗಿದೆ ಹಾಗೂ ಇದು ಅಲ್ಲಾಹನೊಂದಿಗೆ ಮಾಡುವ ದೊಡ್ಡ ಶಿರ್ಕ್ ಆಗಿದೆ ಹಾಗೂ ತೌಹೀದ್‌ಗೆ ಸಂಪೂರ್ಣ ವಿರುದ್ಧವಾದುದಾಗಿದೆ. ಏಕೆಂದರೆ ತೌಹೀದ್‌ನ ಅರ್ಥವು ಲಾ ಇಲಾಹ ಇಲ್ಲಲ್ಲಾಹ್ ಅನ್ನು ಒಪ್ಪಿಕೊಳ್ಳುವುದು, ಮತ್ತು ಅದನ್ನು ಒಪ್ಪಿಕೊಳ್ಳುವುದರ ತಾತ್ಪರ್ಯವೇನೆಂದರೆ ವಸ್ತುಗಳನ್ನು ಹಲಾಲ್ –ಹರಾಮ್ ಎಂದು ನಿರ್ಣಯಿಸುವ ಹಕ್ಕು ಅಲ್ಲಾಹುವಿಗೆ ಮಾತ್ರವೆಂದು ತಿಳಿಯುವುದು. ಹೀಗಿರುವಾಗ ಒಬ್ಬ ವ್ಯಕ್ತಿಯು ಹಲಾಲ್ ಹರಾಮ್‌ನ ವಿಷಯದಲ್ಲಿ ಅಲ್ಲಾಹುವಿನ ಶರೀಅತ್‌ಅನ್ನು ಮೀರುತ್ತಾನೆ. ಉಲೆಮಾಗಳು ಜ್ಞಾನಕ್ಕೂ, ಧರ್ಮಕ್ಕೂ ಹೆಚ್ಚು ಸಮೀಪವಿರುವವರಾಗಿರುವರು ಮತ್ತು ಇಜ್ತಿಹಾದ್‌ನಲ್ಲಿ ಅವರಿಗೆ ತಪ್ಪು ಸಂಭವಿಸಿದರೂ ಅವರಿಗೆ ಒಂದು ಪುಣ್ಯವಿರುವುದು. ಇವೆಲ್ಲದರ ಹೊರತು ಇವರ ಅಂಧಾನುಕರಣೆಯು ಸಮ್ಮತವಲ್ಲವೆಂದ ಮೇಲೆ ಇಂತಹ ಸ್ವರಚಿತ ಕಾನೂನುಗಳ ಅನುಸರಣೆ ಹೇಗೆ ಸಾಧ್ಯವಾಗುವುದು? ಸತ್ಯ ನಿಷೇಧಿಗಳಿಂದ ರಚಿಸಲ್ಪಟ್ಟ, ಹೊರಗಿನಿಂದ

**285** ಕುರ್‌ಆನ್ 9:31

**286** ತಿರ್ಮುದಿ, ಇಬ್ನು ಜರೀರ್ ಮತ್ತಿತರರು

ತರಿಸಲ್ಪಟ್ಟ ಮತ್ತು ಮುಸ್ಲಿಮ್ ಲೋಕದ ಮೇಲೆ ಬಲವಂತವಾಗಿ ಹೇರಲ್ಪಟ್ಟವುಗಳ ಅನುಸರಣೆ ಹೇಗೆ ಸಾಧ್ಯ? ಹೀಗೆ ಸತ್ಯನಿಷೇಧಿಗಳು ಅಲ್ಲಾಹನ ಹೊರತು ಇತರರನ್ನು ರಬ್ಬುಗಳನ್ನಾಗಿ ಮಾಡುತ್ತಾರೆ. ಇವರು ತಮಗಾಗಿ ನಿಯಮಗಳನ್ನು ಕಾನೂನುಗಳನ್ನು ರಚಿಸುತ್ತಾರೆ. ಹರಾಮ್ ವಸ್ತುಗಳನ್ನು ಹಲಾಲ್ ಗೊಳಿಸುತ್ತಾರೆ ಮತ್ತು ದಾಸರ ಮೇಲೆ ಅಧಿಕಾರ ನಡೆಸುತ್ತಾರೆ.

## ಅಧ್ಯಾಯ –8

## ನೂತನವಾದಿ ಸಿದ್ಧಾಂತಗಳು ಮತ್ತು ಮೌಢ್ಯದ ಜಮಾಅತ್‌ಗಳೊಂದಿಗಿನ ಸಂಬಂಧದ ನಿಯಮಗಳು

ನಿರೀಶ್ವರ ಸಿದ್ಧಾಂತಗಳಾದ ಕಮ್ಯೂನಿಸಂ, ಸೆಕ್ಯುಲರಿಸಂ ಮುಂತಾದ ಎಲ್ಲಾ ಕುಫ್ರ್‌ನ ದಾರಿಗಳೊಂದಿಗೆ ನಂಟು ಹೊಂದಿರುವುದು ಇಸ್ಲಾಮ್ ಧರ್ಮವನ್ನು ತ್ಯಜಿಸುವುದಾಗಿದೆ. ಈ ಸಿದ್ಧಾಂತಗಳೊದಿಗೆ ಸಂಬಂಧ ಹೊಂದಿರುವ ವ್ಯಕ್ತಿಯು ಒಂದು ವೇಳೆ ತಾನು ಇಸ್ಲಾಮ್ ನಲ್ಲಿರುವೆನೆಂದು ವಾದಿಸಿದರೆ ಅದು ದೊಡ್ಡ ಕಾಪಟ್ಯ(ನಿಫಾಕ್ ಅಕ್ಬರ್) ಆಗಿರುತ್ತದೆ. ಏಕೆಂದರೆ ನಿಶ್ಚಯವಾಗಿಯೂ ಕಪಟ ವಿಶ್ವಾಸಿಗಳೂ ಕೂಡಾ ಹೊರಗಿನಿಂದ ತಾವು ಇಸ್ಲಾಮಿಗೆ ನಂಟು ಹೊಂದಿರುವವರೆಂದು ತೋರಿಸಿಕೊಳ್ಳುತ್ತಾರೆ. ಆದರೆ ಒಳಗೆ ಕಾಫಿರರೊಂದಿಗಿರುತ್ತಾರೆ. ಇವರ ಕುರಿತು ಅಲ್ಲಾಹು ಹೀಗೆಂದಿರುವನು.

﴿ وَإِذَا لَقُوا۟ ٱلَّذِينَ ءَامَنُوا۟ قَالُوٓا۟ ءَامَنَّا وَإِذَا خَلَوْا۟ إِلَىٰ شَيَـٰطِينِهِمْ قَالُوٓا۟ إِنَّا مَعَكُمْ إِنَّمَا نَحْنُ مُسْتَهْزِءُونَ ﴿١٤﴾ ﴾

**“ಮತ್ತು ಈ ಜನರು ಸತ್ಯ ವಿಶ್ವಾಸಿಗಳನ್ನು ಭೇಟಿಯಾದಾಗ ತಾವು ವಿಶ್ವಾಸವಿರಿಸಿದೆವೆಂದು ಹೇಳುತ್ತಾರೆ ಮತ್ತು ತಮ್ಮ ಶೈತಾನರ ಬಳಿ ಹೋದಾಗ (ಅವರೊಂದಿಗೆ) ಹೇಳುತ್ತಾರೆ: ನಾವು ನಿಮ್ಮೊಂದಿಗೇ ಇದ್ದೇವೆ. ನಾವು(ಮುಹಮ್ಮದ್ ﷺ)ರ ಅನುಯಾಯಿಗಳನ್ನು ಪರಿಹಾಸ್ಯ ಮಾಡುವವರಾಗಿದ್ದೇವೆ.”** [287]

ಇನ್ನೊಂದು ಕಡೆಯಲ್ಲಿ ಆತನ ವಚನವು ಹೀಗಿದೆ.

﴿ ٱلَّذِينَ يَتَرَبَّصُونَ بِكُمْ فَإِن كَانَ لَكُمْ فَتْحٌ مِّنَ ٱللَّهِ قَالُوٓا۟ أَلَمْ نَكُن مَّعَكُمْ وَإِن كَانَ لِلْكَـٰفِرِينَ نَصِيبٌ قَالُوٓا۟ أَلَمْ نَسْتَحْوِذْ عَلَيْكُمْ وَنَمْنَعْكُم مِّنَ ٱلْمُؤْمِنِينَ ۚ ﴾

---

**287** ಕುರ್‌ಆನ್ 2:14

**“ಅವರು ನಿಮ್ಮನ್ನು ಕಾದು ನೋಡುತ್ತಿರುತ್ತಾರೆ. ಒಂದು ವೇಳೆ ಅಲ್ಲಾಹುವಿನ ಕಡೆಯಿಂದ ನಿಮಗೆ ವಿಜಯ ಪ್ರಾಪ್ತಿಯಾದರೆ ಅವರು ಹೇಳುತ್ತಾರೆ. ನಾವು ನಿಮ್ಮೊಂದಿಗಿರಲಿಲ್ಲವೇ? ಮತ್ತು ಒಂದು ವೇಳೆ ಸತ್ಯ ನಿಷೇಧಿಗಳಿಗೆ ಗೆಲುವು ದೊರೆತರೆ ಅವರೊಂದಿಗೆ ಹೇಳುತ್ತಾರೆ. ನಾವು ನಿಮ್ಮೊಂದಿಗಿರಲಿಲ್ಲವೇ ಮತ್ತು ನಾವು ನಿಮ್ಮನ್ನು ಮುಸ್ಲಿಮರಿಂದ ರಕ್ಷಿಸಲಿಲ್ಲವೇ?”** (288)

ಇಂತಹ ವಂಚಕ, ಕಪಟ ವಿಶ್ವಾಸಿಗಳಿಗೆ ಯಾವಾಗಲೂ ಎರಡು ಮುಖಗಳಿರುತ್ತವೆ. ಮೊದಲ ಮುಖದಿಂದ ಅವರು ಸತ್ಯ ವಿಶ್ವಾಸಿಗಳನ್ನು ಭೇಟಿಯಾಗುತ್ತಾರೆ. ಮತ್ತು ಇನ್ನೊಂದು ಮುಖದೊಂದಿಗೆ ತಮ್ಮ ಕಾಫಿರ್ ಗೆಳೆಯರೆಡೆಗೆ ತಿರುಗುತ್ತಾರೆ. ಇವರಿಗೆ ಎರಡು ನಾಲಗೆಗಳಿರುತ್ತವೆ. ಒಂದರ ಮೂಲಕ ಅವರು ಮುಸ್ಲಿಮರೊಂದಿಗೆ ಪರಿಚಯ ಬೆಳೆಸುತ್ತಾರೆ ಮತ್ತು ಇನ್ನೊಂದರ ಮೂಲಕ ಅವರು ರಹಸ್ಯಗಳನ್ನು ಪಡೆಯುತ್ತಾರೆ.

ಅಲ್ಲಾಹುವಿನ ವಚನವು ಹೀಗಿದೆ.

﴿ وَإِذَا لَقُوا۟ ٱلَّذِينَ ءَامَنُوا۟ قَالُوٓا۟ ءَامَنَّا وَإِذَا خَلَوْا۟ إِلَىٰ شَيَـٰطِينِهِمْ قَالُوٓا۟ إِنَّا مَعَكُمْ إِنَّمَا نَحْنُ مُسْتَهْزِءُونَ ﴿١٤﴾ ﴾

**“ಮತ್ತು ಈ ಜನರು ಸತ್ಯ ವಿಶ್ವಾಸಿಗಳನ್ನು ಭೇಟಿಯಾದಾಗ ತಾವು ವಿಶ್ವಾಸವಿರಿಸಿದೆವೆಂದು ಹೇಳುತ್ತಾರೆ. ಮತ್ತು ಶೈತಾನರ ಜೊತೆಯಲ್ಲಿ ಏಕಾಂತವಾದರೆ ಹೇಳುತ್ತಾರೆ: ನಾವು ನಿಮ್ಮೊಂದಿಗೆ ಇದ್ದೇವೆ, ನಾವು (ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರ ಅನುಯಾಯಿಗಳನ್ನು) ಪರಿಹಾಸ್ಯ ಮಾಡುವವರಾಗಿದ್ದೇವೆ.”** (289)

ಇವರು ಕುರ್‌ಆನ್ ಮತ್ತು ಸುನ್ನತ್‌ನಿಂದ ಯಾವಾಗಲೂ ದೂರ ಓಡುತ್ತಾರೆ. ಕುರ್‌ಆನ್ ಮತ್ತು ಸುನ್ನತ್‌ನವರ ಅಪಹಾಸ್ಯ ಮಾಡುತ್ತಾರೆ. ಅವರನ್ನು ಕೀಳಾಗಿ ಕಾಣುತ್ತಾರೆ. ಕುರ್‌ಆನ್, ಸುನ್ನತ್‌ನ ಆದೇಶಗಳ ಪಾಲನೆಯಲ್ಲಿ ಅವರು ಅಹಂಕಾರ ತೋರಿಸುತ್ತಾರೆ. ಶರೀಅತ್‌ನೊಂದಿಗೆ ಅವರಿಗೆ ದ್ವೇಷವಿರುತ್ತದೆ. ಇವರು ತಮ್ಮ ಲೌಕಿಕ ವಂಚನೆಯ ಮತ್ತು ಪ್ರತಿಷ್ಠೆಯ ಜೀವನದಿಂದ ಬಹಳ ಸಂತುಷ್ಟರಾಗಿರುತ್ತಾರೆ. ವಸ್ತುತಃ ಮಾನವ ನಿರ್ಮಿತ ಕಾನೂನುಗಳಿಂದ ಇದುವರೆಗೆ ಯಾವುದೇ ಉಪಯೋಗವಾಗಲಿಲ್ಲ. ಆ ಕೊಳಕು ನೀರಿನಲ್ಲಿ ಒಬ್ಬನು ಎಷ್ಟು ಇಳಿದನೋ ಅಷ್ಟೇ ಅವನು ದೊಡ್ಡಸ್ತಿಕೆ ಮತ್ತು ಗರ್ವಕ್ಕೆ ಒಳಗಾಗುವನು.

ಆದ್ದರಿಂದ ಅವರನ್ನು ನಾವು ಯಾವಾಗಲೂ ಕುರ್‌ಆನ್ ಮತ್ತು ಸುನ್ನತ್‌ನ ತಮಾಷೆ ಮಾಡುವವರಾಗಿ ಕಾಣಬಹುದು.

ಅಲ್ಲಾಹು ಹೇಳುತ್ತಾನೆ.

---

**288** ಕುರ್‌ಆನ್ 4:141

**289** ಕುರ್‌ಆನ್ 2:14

﴿ ٱللَّهُ يَسۡتَهۡزِئُ بِهِمۡ وَيَمُدُّهُمۡ فِي طُغۡيَٰنِهِمۡ يَعۡمَهُونَ ١٥ ﴾

**"ಅಲ್ಲಾಹು ಇವರನ್ನು ಅಪಹಾಸ್ಯ ಮಾಡುತ್ತಾನೆ. ಮತ್ತು ಅವರಿಗೆ ತಮ್ಮ ಧಿಕ್ಕಾರದಲ್ಲಿ ಅಂಧವಾಗಿ ಅಲೆದಾಡಲು ಕಾಲಾವಕಾಶ ನೀಡುತ್ತಾನೆ."** [290]

ಅಲ್ಲಾಹು ಹೇಳುತ್ತಾನೆ ಸತ್ಯ ವಿಶ್ವಾಸಿಗಳೊಂದಿಗಿರಬೇಕೆಂದು ಅಲ್ಲಾಹು ಆದೇಶಿಸಿದ್ದಾನೆ.

﴿ يَٰٓأَيُّهَا ٱلَّذِينَ ءَامَنُواْ ٱتَّقُواْ ٱللَّهَ وَكُونُواْ مَعَ ٱلصَّٰدِقِينَ ١١٩ ﴾

**"ಹೇ ಸತ್ಯ ವಿಶ್ವಾಸಿಗಳೇ ಅಲ್ಲಾಹನನ್ನು ಭಯಪಡಿರಿ ಮತ್ತು ಸತ್ಯವಂತರೊಂದಿಗಿರಿ."** [291]

ಈ ಹೊಸ ಸಿದ್ಧಾಂತಗಳು ಪರಸ್ಪರ ಜಗಳವಾಡುತ್ತವೆ. ಏಕೆಂದರೆ ಇವುಗಳ ಅಡಿಪಾಯವು ಬಾತಿಲ್(ಮಿಥ್ಯ)ವಾಗಿದೆ. ಕಮ್ಯೂನಿಸಂ ಸರ್ವಲೋಕಗಳ ಪ್ರಭುವಾದ ಅಲ್ಲಾಹನ ಅಸ್ತಿತ್ವವನ್ನು ನಿರಾಕರಿಸುತ್ತದೆ ಮತ್ತು ಎಲ್ಲಾ ಧರ್ಮಗಳನ್ನು ಭೂಮಿಯಿಂದ ಕಿತ್ತೆಸೆಯಲು ಬಯಸುತ್ತದೆ. ಒಬ್ಬ ವ್ಯಕ್ತಿಯು ತನ್ನ ಬುದ್ಧಿಗೆ ಹೊಳೆಯುವ ವಿಶ್ವಾಸದಲ್ಲಿ ಜೀವಿಸಬಹುದಾಗಿದೆ ಮತ್ತು ಎಲ್ಲಾ ಸ್ಪಷ್ಟವಾಗಿ ಕಾಣುವಂತಹ ಮತ್ತು ಬುದ್ಧಿಯ ನಿಖರತೆಯನ್ನು ನಿರಾಕರಿಸುತ್ತಾನೆಂದಾದರೆ ಅವನು ಇಷ್ಟಪಡುವುದಿಲ್ಲ. ಇದೇ ರೀತಿ ಸೆಕ್ಯುಲರಿಸಂ ಕೂಡಾ ಎಲ್ಲಾ ಧರ್ಮಗಳನ್ನು ನಿಷೇಧಿಸುತ್ತದೆ ಮತ್ತು ಭೌತಿಕವಾದದಲ್ಲಿ ತನ್ನ ಅಡಿಪಾಯವಿಡುತ್ತದೆ. ಇಂತಹ ಒಂದು ಸಿದ್ಧಾಂತವಾಗಿದೆ. ಇದರಲ್ಲಿ ಪ್ರಾಣಿಗಳಂತಹ ಜೀವನದ ಹೊರತು ಬೇರೇನನ್ನು ನಿರೀಕ್ಷಿಸಲು ಸಾಧ್ಯವಿಲ್ಲ ಮತ್ತು ಬಂಡವಾಳಶಾಹಿ ಆಡಳಿತದ ಎಲ್ಲಾ ಉದ್ದೇಶಗಳು ಕೇವಲ ಸಂಪತ್ತು ಸಂಗ್ರಹಿಸುವುದಾಗಿದೆ. ಅದು ಯಾವ ರೀತಿಯಿಂದಲೇ ಆಗಲಿ ಇದರಲ್ಲಿ ಹಲಾಲ್ ಹರಾಮ್‌ನ ಕುರಿತು ಯಾವುದೇ ಪ್ರಜ್ಞೆ ಇರುವುದಿಲ್ಲ. ಬಡವಬಲ್ಲಿದರು ಮತ್ತು ದುರ್ಬಲರ ಮೇಲೆ ಇಲ್ಲಿ ಯಾವುದೇ ಕರುಣೆ, ದಯೆ ಇಲ್ಲ ಮತ್ತು ಇದರ ಎಲ್ಲಾ ಸಂಪಾದನೆ, ವ್ಯವಹಾರಗಳು ಬಡ್ಡಿಯ ಶಾಪದೊಂದಿಗೆ ಇದೆ. ಬಡ್ಡಿ ವ್ಯವಹಾರ ಎಂಬುದು ಅಲ್ಲಾಹು ಮತ್ತು ಅಲ್ಲಾಹುವಿನ ಸಂದೇಶವಾಹಕರೊಂದಿಗೆ ಯುದ್ಧ ಮಾಡುವುದಾಗಿದೆ. ಇದರಿಂದ ಜನರು , ಸಮೂಹ, ಆಡಳಿತ, ನಾಯಕತ್ವ ಸರ್ವವೂ ನಾಶವಾಗಿ ಬೇರೆ ಬೇರೆಯಾಗುವುದು. ಇದು ಬಡವರ, ದುರ್ಬಲರ ರಕ್ತ ಹೀರುವ ಒಳ್ಳೆಯ ಉಪಾಯವಾಗಿದೆ.

ಹೀಗೆಲ್ಲಾ ಇದ್ದ ಮೇಲೆ ವಿಶ್ವಾಸದ ಒಂದು ಅಂಶ ಹಾಗೂ ಬುದ್ಧಿಯಿರುವ ಯಾರು ಇಂತಹ ವಿನಾಶಕಾರೀ ಅಧಿಕಾರ ಮತ್ತು ಕೆಟ್ಟ ಸಿದ್ಧಾಂತಗಳ ಕಡೆಗೆ ತನ್ನ ನಂಟು ತೋರಿಸಲು ಇಷ್ಟಪಡುವನು? ಯಾರು ತಾನೆ ತನ್ನ ಬುದ್ದಿಯನ್ನು ವಿಕ್ರಯಿಸಿ ಜೀವನವನ್ನು ಬೇಕಾಬಿಟ್ಟಿ ಎಂದು ತಿಳಿದು ಅಂತಹ ಸಿದ್ಧಾಂತಕ್ಕೆ ಸಹಕಾರ ನೀಡುವನು? ಅದಕ್ಕಾಗಿ

---

**290** ಕುರ್‌ಆನ್ 2:15 (ಸಿಫಾತುಲ್ ಮುನಾಫಿಕೀನ್ ಪುಟ 19)

**291** ಕುರ್‌ಆನ್ 9:119

ಹೋರಾಡುವವನು? ಇಂದು ನಮ್ಮ ಮುಸ್ಲಿಮ್ ಸಮುದಾಯವು ನಿಂದ್ಯತೆಯನ್ನು ಎದುರಿಸುತ್ತಿದೆ ಮತ್ತು ಪತನದ ಹಾದಿಯಲ್ಲಿ ಚಲಿಸುತ್ತಿದೆ ಮತ್ತು ಈ ಸಿದ್ಧಾಂತಗಳನ್ನು ಕೆಲವು ಸಮೂಹಗಳು ಅವುಗಳ ಬಾಲದಂತೆ ಹಿಂಬಾಲಿಸುತ್ತಿವೆ.

2. ಜಾಹಿಲ್ ಸಮೂಹ, ನೂತನ ಪಂಗಡಗಳು ಮತ್ತು ಜಮಾಅತ್‌ಗಳೊಂದಿಗೆ ನಂಟು ತೋರಿಸಿಕೊಳ್ಳುವುದು ಕುಫ್ರ್ ಮತ್ತು ಧರ್ಮ ಭ್ರಷ್ಟತೆ ಆಗಿದೆ ಮತ್ತು ಇಸ್ಲಾಮ್ ಧರ್ಮವು ಎಲ್ಲಾ ಪಕ್ಷಪಾತಗಳನ್ನೂ, ಜಾಹಿಲೀ ಸಮೂಹಗಳ ಅನಾಚಾರಗಳನ್ನೂ ಸಾರಾಸಗಟಾಗಿ ನಿಷೇಧಿಸಿದೆ ಅಲ್ಲಾಹು ಹೇಳುತ್ತಾನೆ:

﴿ يَٰٓأَيُّهَا ٱلنَّاسُ إِنَّا خَلَقۡنَٰكُم مِّن ذَكَرٖ وَأُنثَىٰ وَجَعَلۡنَٰكُمۡ شُعُوبٗا وَقَبَآئِلَ لِتَعَارَفُوٓاْۚ إِنَّ أَكۡرَمَكُمۡ عِندَ ٱللَّهِ أَتۡقَىٰكُمۡۚ ﴾

**"ಹೇ ಜನರೇ, ನಾವು ನಿಮ್ಮನ್ನು ಒಂದು ಗಂಡು ಹಾಗೂ ಒಂದು ಹೆಣ್ಣಿನಿಂದ ಸೃಷ್ಟಿಸಿದೆವು ಮತ್ತು ನೀವು ಪರಸ್ಪರ ಗುರುತಿಸಿಕೊಳ್ಳಲೆಂದು ನಿಮ್ಮನ್ನು ಸಮೂಹಗಳು ಮತ್ತು ಗೋತ್ರಗಳನ್ನಾಗಿ ಮಾಡಿದೆವು. ಮತ್ತು ನಿಮ್ಮಲ್ಲಿ (ಭಯಭಕ್ತಿ) ತಕ್ವಾ ಉಳ್ಳವನು ಅಲ್ಲಾಹನ ಬಳಿ ಅತ್ಯಂತ ಗೌರವಾನ್ವಿತನು ಆಗಿದ್ದಾನೆ."** (292) ಪ್ರವಾದಿ(ﷺ) ಹೇಳಿರುವರು

«لَيْسَ مِنَّا مَنْ دَعَا إِلَى عَصَبِيَّةٍ وَلَيْسَ مِنَّا مَنْ قَاتَلَ عَلَى عَصَبِيَّةٍ وَلَيْسَ مِنَّا مَنْ غَضِبَ لِعَصَبِيَّةٍ»

**"ಕೋಮುವಾದಕ್ಕಾಗಿ ಕರೆಯುವವನು ನಮ್ಮವನಲ್ಲ, ಕೋಮುವಾದಕ್ಕಾಗಿ ಹೋರಾಡುವವನು ನಮ್ಮವನಲ್ಲ. ಕೋಮುವಾದಕ್ಕಾಗಿ ಕೋಪಗೊಳ್ಳುವವನು ನಮ್ಮವನಲ್ಲ."** (293)

ಪ್ರವಾದಿ(ﷺ) ಹೇಳಿರುವರು:

«إِنَّ اللَّهَ قَدْ أَذْهَبَ عَنْكُمْ عُبِّيَّةَ الْجَاهِلِيَّةِ وَفَخْرِهَا بِالْآبَاءِ إِنَّمَا هُوَ مُؤْمِنٌ تَقِيٌّ أَوْ فَاجِرٌ شَقِيٌّ النَّاسُ بَنُو آدَمَ وَآدَمَ خُلِقَ مِنْ تُرَابٍ وَلَا فَضْلَ لِعَرَبِيٍّ عَلَى عَجَمِيٍّ إِلَّا بِالتَّقْوَى»

**"ನಿಶ್ಚಯವಾಗಿಯೂ ಅಲ್ಲಾಹು ಜಾಹಿಲಿಯ್ಯತ್‌ನ ಕಾಲದ ಕೋಮುವಾದವನ್ನು ಕೊನೆಗಾಣಿಸಿರುವನು ಮತ್ತು ತಮ್ಮ ತಮ್ಮ ವಂಶದ ಮೇಲಿನ ಪ್ರತಿಷ್ಠೆಯನ್ನು ನಿರ್ಮೂಲನ**

**292** ಕುರ್‌ಆನ್ 49:13

**293** ತಿರ್ಮಿದಿ ಮತ್ತಿತರರು

**ಗೊಳಿಸಿರುವನು. ಇನ್ನು ಒಬ್ಬನು ಒಂದೋ ಭಯಭಕ್ತಿಯುಳ್ಳ ಸತ್ಯ ವಿಶ್ವಾಸಿಯಾಗಿರುವನು ಅಥವಾ ಕೆಟ್ಟ ದುಷ್ಕರ್ಮಿಯಾಗಿರುವನು ಎಲ್ಲ ಮನಷ್ಯರೂ ಆದಮನ ಮಕ್ಕಳು ಮತ್ತು ಆದಮರು ಮಣ್ಣಿನಿಂದ ಸೃಷ್ಟಿಸಲ್ಪಟ್ಟಿರುವರು. ಯಾವುದೇ ಅರಬನಿಗೆ ಅರಬಿಯೇತರನ ಮೇಲೆ ಶ್ರೇಷ್ಠತೆ ಇಲ್ಲ. ದೊಡ್ಡತನವು ತಕ್ವಾದಲ್ಲಿ ಆಧಾರಿತವಾಗಿದೆ.”** [294]

ನಿಜವಾಗಿ ಈ ಜಮಾಅತ್‌ಗಳು ಮತ್ತು ಪಕ್ಷಗಳು ಮುಸ್ಲಿಮರನ್ನು ಛಿದ್ರಗೊಳಿಸುತ್ತವೆ. ಆದರೆ ಅಲ್ಲಾಹು ನಮಗೆ ಒಂದಾಗಿ ಒಳಿತು ಮತ್ತು ತಕ್ವಾದಲ್ಲಿ ಪರಸ್ಪರ ಸಹಾಯ ಮಾಡಲು ಮತ್ತು ಕೆಡುಕು ಮತ್ತು ಒಡಕಿನಲ್ಲಿ ಸಹಾಯ ಮಾಡದಿರಲು ಆದೇಶಿಸಿರುವನು. ಅಲ್ಲಾಹು ಹೇಳುತ್ತಾನೆ.

﴿ وَٱعْتَصِمُوا۟ بِحَبْلِ ٱللَّهِ جَمِيعًا وَلَا تَفَرَّقُوا۟ ۚ وَٱذْكُرُوا۟ نِعْمَتَ ٱللَّهِ عَلَيْكُمْ إِذْ كُنتُمْ أَعْدَآءً فَأَلَّفَ بَيْنَ قُلُوبِكُمْ فَأَصْبَحْتُم بِنِعْمَتِهِۦٓ إِخْوَٰنًا ﴾

**“ನೀವೆಲ್ಲರೂ ಸೇರಿ ಅಲ್ಲಾಹುವಿನ(ಸನ್ಮಾರ್ಗದ) ಹಗ್ಗವನ್ನು ಭದ್ರವಾಗಿ ಹಿಡಿದಿಟ್ಟುಕೊಳ್ಳಿರಿ ಭಿನ್ನ ಭಿನ್ನರಾಗದಿರಿ ಮತ್ತು ನಿಮ್ಮ ಮೇಲಿರುವ ಅಲ್ಲಾಹುವಿನ ಅನುಗ್ರಹವನ್ನು ಸ್ಮರಿಸಿರಿ. ನೀವು ಆಗ ಪರಸ್ಪರ ಶತ್ರುಗಳಾಗಿದ್ದಿರಿ ಆಗ ಅವನು ನಿಮ್ಮ ಹೃದಯಗಳನ್ನು ಜೋಡಿಸಿದನು ಮತ್ತು ನೀವು ಅವನ ಅನುಗ್ರಹದಿಂದ ಸಹೋದರರಾದಿರಿ.”** [295]

ನಾವೆಲ್ಲರೂ ಒಂದೇ ಗುಂಪಾಗಿರಲು ಅಲ್ಲಾಹು ನಮ್ಮಿಂದ ಬಯಸುತ್ತಾನೆ. ಆ ಸಮೂಹವು ಅಲ್ಲಾಹುವಿನ ವಿಜಯಶಾಲಿ ಗುಂಪಾಗಿರಬೇಕು. ಆದರೆ ಮುಸ್ಲಿಮ್ ಲೋಕವು ಯೂರೋಪ್‌ನ ರಾಜಕೀಯ ಮತ್ತು ಸಾಂಸ್ಕೃತಿಕ ಆಕ್ರಮಣದ ಬಳಿಕ ವಿಭಿನ್ನ ವರ್ಣ, ವರ್ಗ, ರಾಷ್ಟ್ರ ಭೇದಗಳಂತಹ ಅನಾಚಾರಕ್ಕೆ ತುತ್ತಾಯಿತು ಮತ್ತು ಇಂತಹ ಶಾಪಗಳನ್ನು ಒಂದು ಜ್ಞಾನದ ವಿಷಯ ಮತ್ತು ನಿರ್ಣಯಿಸಲ್ಪಟ್ಟ ಸತ್ಯ ಬಿಡುಗಡೆ ಇಲ್ಲದ ಸ್ಥಿತಿ ಅನಿವಾರ್ಯ ಪರಿಸ್ಥಿತಿ ಎಂದು ಭಾವಿಸಿ ಸ್ವೀಕರಿಸಿದೆ. ಎಷ್ಟರವರೆಗೆಂದರೆ ಮುಸ್ಲಿಮ್ ರಾಷ್ಟ್ರಗಳು ಪಾಶ್ಚಾತ್ಯ ಸಮಸ್ಯೆಗಳ ಪ್ರಭಾವಕ್ಕೆ ಸಿಲುಕಿ ಇಸ್ಲಾಂ ನಿರ್ಮೂಲನ ಮಾಡಿದಂತಹ ಪಕ್ಷಪಾತಗಳಿಗೆ ಬಲಿಯಾಗಿ ಆ ಜಾಹಿಲೀ ಕೋಮುಗಳೆಡೆಗೆ ವೇಗವಾಗಿ ಓಡತೊಡಗಿವೆ. ಇವುಗಳ ಹೆಸರೆತ್ತುವವರ ಇವುಗಳನ್ನು ಜೀವಂತಗೊಳಿಸುವವರ ಮತ್ತು ಇದರ ಪರ ಪ್ರತಿಷ್ಠೆ ತೋರಿಸುವವರ ಮೇಲೆ ಇಸ್ಲಾಂ ಶಾಪ ಹಾಕಿದೆ ಮತ್ತು ಕಠಿಣ ಶಬ್ದಗಳಿಂದ ಅದನ್ನು ಖಂಡಿಸಿದೆ.

ಇಸ್ಲಾಮ್‌ಗಿಂತ ಮುಂಚಿನ ಕಾಲವನ್ನು ಇಸ್ಲಾಮ್ ಜಾಹಿಲೀ ಕಾಲವೆಂದಿದೆ ಮತ್ತು ಈಗಲೂ ಕೂಡಾ ಆ ಕಾಲವನ್ನು ಅದೇ ಹೆಸರಿನಲ್ಲಿ ಸ್ಮರಿಸಲಾಗುತ್ತದೆ. ಅಂತಹ ಒಂದು ಕಾಲದಿಂದ ಮುಸ್ಲಿಮರನ್ನು ಹೊರಗೆ ತರುವ ಮೂಲಕ ಅಲ್ಲಾಹ್ ಅವರ ಮೇಲೆ

**294** ಮುಸ್ಲಿಮ್

**295** ಕುರ್‌ಆನ್ 3:103

ಉಪಕಾರವೆಸಗಿರುವನು ಹಾಗೂ ಅವರು ಇಂತಹ ದೊಡ್ಡ ಉಪಕಾರ ಯಾ ಅನುಗ್ರಹಕ್ಕೆ ಕೃತಜ್ಞರಾಗಿರಲು ಬಯಸುತ್ತಾನೆ.

ಇಂದು ಮುಸ್ಲಿಮರ ಕರ್ತವ್ಯವೇನೆಂದರೆ ಅವರು ತಮ್ಮ ಜಾಹಿಲಿಯ್ಯ ಕಾಲದ ಘಟನೆಗಳನ್ನು ಸ್ಮರಿಸುವಾಗ ಅಪ್ರಿಯ ಹಾಗೂ ಇಷ್ಟವಿಲ್ಲದ ರೀತಿಯಲ್ಲಿ ಸ್ಮರಿಸಬೇಕು. ಒಬ್ಬ ಜೈಲಿನಲ್ಲಿ ಕಠಿಣ ಸಜೆಯನ್ನು ಅನುಭವಿಸಿ ಹೊರ ಬಂದ ಬಳಿಕ ಜೈಲಿನ ಸುದ್ದಿಯೆತ್ತಿದರೆ ಅಸಹ್ಯ ಪಡುವುದಿಲ್ಲವೇ? ಕಠಿಣ ರೋಗದಿಂದ ಗುಣಮುಖನಾದವನೊಬ್ಬ ಆ ರೋಗದ ಸುದ್ದಿಯೆತ್ತಿದರೆ ಮುಖ ಕಿವುಚಿಕೊಳ್ಳುವುದಿಲ್ಲವೇ? ಆದ್ದರಿಂದ ಪ್ರತಿಯೊಬ್ಬ (ರಿದ್ದ ವಲಾ ಅಬಾಬಕರ ಲಹಾ–ಅಬುಲ್ ಹಸನ್ ನದ್ವಿ) ಮುಸ್ಲಿಮನು ಅಗತ್ಯವಾಗಿ ತಿಳಿಯಬೇಕೇನೆಂದರೆ ಕೋಮುವಾದವು ಶಿಕ್ಷೆಯಾಗಿದೆ.

ಅಲ್ಲಾಹನು ತನ್ನ ಶರೀಅತ್‌ನಿಂದ ವಿಮುಖವಾಗುವವರಿಗೆ ಮತ್ತು ತನ್ನ ಧರ್ಮವನ್ನು ತಿರಸ್ಕರಿಸುವವರಿಗೆ ಅದನ್ನು ನಿಶ್ಚಯಿಸಿದನು. ಅವನು ಹೇಳಿರುವನು:

﴿ قُلْ هُوَ ٱلْقَادِرُ عَلَىٰٓ أَن يَبْعَثَ عَلَيْكُمْ عَذَابًا مِّن فَوْقِكُمْ أَوْ مِن تَحْتِ أَرْجُلِكُمْ أَوْ يَلْبِسَكُمْ شِيَعًا وَيُذِيقَ بَعْضَكُم بَأْسَ بَعْضٍ ﴾

**"ಹೇಳಿರಿ,ಅವನು ನಿಮ್ಮ ಮೇಲಿಂದ ಅಥವಾ ನಿಮ್ಮ ಕಾಲಡಿಯಿಂದ ಶಿಕ್ಷೆಯನ್ನು ಕಳಿಸುವ ಅಥವಾ ನಿಮ್ಮನ್ನು ಪಂಗಡಗಳನ್ನಾಗಿ ವಿಭಾಗಿಸುವ ಮತ್ತು ನಿಮ್ಮಲ್ಲಿ ಕೆಲವರ ಹೊಡೆತವನ್ನು ಇನ್ನು ಕೆಲವರು ರುಚಿ ಸವಿಯುವ ಹಾಗೇ ಮಾಡುವ ಸಾಮರ್ಥ್ಯವುಳ್ಳವನು."** (296)

ಈ ಬಗ್ಗೆ ಅಲ್ಲಾಹನ ಸಂದೇಶವಾಹಕರು (ﷺ) ಹೇಳುತ್ತಾರೆ.

«وَمَا لَمْ تَحْكُمْ أَئِمَّتُهُمْ بِكِتَابِ اللَّهِ إِلَّا جَعَلَ اللَّهُ بَأْسَهُمْ بَيْنَهُمْ»

**"ಮತ್ತು ಅವರ ಇಮಾಮರುಗಳು ಅಲ್ಲಾಹುವಿನ ಗ್ರಂಥದಿಂದ ತೀರ್ಪು ನೀಡದಿದ್ದರೆ ಅಲ್ಲಾಹು ಅವರನ್ನು ಪರಸ್ಪರ ಹೊಡೆದಾಡಿಸುವನು."** (297)

ಸಮೂಹಗಳ ಮತ್ತು ಪಕ್ಷಗಳ ಹುಟ್ಟುವಿಕೆಯಿಂದ ಸತ್ಯವು ಅದುಮಿ ಹಾಕಲ್ಪಡುತ್ತದೆ. ಮತ್ತು ರಸೂಲುಲ್ಲಾಹ್(ﷺ) ರವರು ತಂದ ಶರೀಅತ್ ದೂರ ತಳ್ಳಲ್ಪಡುತ್ತದೆ. ಯಹೂದ್ಯರಲ್ಲಿ ಹೀಗೇ ಆಗಿತ್ತು. ಆ ಯಹೂದ್ಯರ ಕುರಿತು ಅಲ್ಲಾಹು ಹೇಳುತ್ತಾನೆ:

﴿ وَإِذَا قِيلَ لَهُمْ ءَامِنُوا۟ بِمَآ أَنزَلَ ٱللَّهُ قَالُوا۟ نُؤْمِنُ بِمَآ أُنزِلَ عَلَيْنَا وَيَكْفُرُونَ بِمَا وَرَآءَهُۥ وَهُوَ ٱلْحَقُّ مُصَدِّقًا لِّمَا مَعَهُمْ ﴾

296 ಕುರ್‌ಆನ್ 6:65
297 ಇಬ್ನು ಮಾಜ

**“ಮತ್ತು ಅವರೊಂದಿಗೆ ಅಲ್ಲಾಹು (ಈಗ) ಅವತೀರ್ಣಗೊಳಿಸಿರುವುದನ್ನು(ಗ್ರಂಥವನ್ನು) ವಿಶ್ವಾಸವಿರಿಸಿ ಎಂದು ಹೇಳಲಾದಾಗ ಅವರೆನ್ನುತ್ತಾರೆ. ನಮ್ಮ ಮೇಲೆ(ಇಸ್ರಾಯೀಲ್ ಕುಲಕ್ಕೆ) ಯಾವ ಗ್ರಂಥವು ಅವತೀರ್ಣಗೊಂಡಿದೆಯೋ ಅದರಲ್ಲಿ ಮಾತ್ರ ನಾವು ವಿಶ್ವಾಸವಿರಿಸುತ್ತೇವೆ. ಅದಕ್ಕೆ ಹೊರತಾಗಿರುವುದನ್ನು ಅವರು ನಿಷೇಧಿಸುತ್ತಾರೆ. ನಿಜವಾಗಿಯೂ ಅದು (ಸಂಪೂರ್ಣ) ಸತ್ಯಪೂರ್ಣವಾಗಿದೆ ಮತ್ತು ಮೊದಲು(ಅವತೀರ್ಣವಾದ) ಗ್ರಂಥವನ್ನು ಸತ್ಯಗೊಳಿಸುತ್ತದೆ.”** (298)

ಜಾಹಿಲಿಯ್ಯತ್‌ನ ಜನರ ಪರಿಸ್ಥಿತಿಯು ಹೀಗಿತ್ತು. ಸಂದೇಶವಾಹಕರು ತಂದ ಸತ್ಯವನ್ನು ಬಿಟ್ಟು ತಮ್ಮ ಹಿರಿಯರ ಅನುಕರಣೆ ಮಾಡುತ್ತಿದ್ದರು. ಅವರ ಹೆಜ್ಜೆ ಗುರುತನ್ನು ಬಿಟ್ಟು ಸರಿಯಲು ಅವರು ತಯಾರಿರಲಿಲ್ಲ. ಇವರ ಕುರಿತು ಅಲ್ಲಾಹು ಹೀಗೆಂದಿರುವನು.

﴿ وَإِذَا قِيلَ لَهُمُ اتَّبِعُوا مَا أَنزَلَ اللَّهُ قَالُوا بَلْ نَتَّبِعُ مَا أَلْفَيْنَا عَلَيْهِ آبَاءَنَا ﴾

**“ಮತ್ತು ಅವರೊಂದಿಗೆ ಅಲ್ಲಾಹು ಅವತೀರ್ಣಗೊಳಿಸಿರುವುದನ್ನು (ಗ್ರಂಥವನ್ನು) ಅನುಸರಿಸಿ ಎಂದಾಗ ಅವರು ಹೇಳುತ್ತಾರೆ: ಇಲ್ಲ ನಾವು ನಮ್ಮ ಹಿರಿಯರು ಯಾವ ಕ್ರಮವನ್ನು ಅನುಸರಿಸುತ್ತಿದ್ದುದನ್ನು ಕಂಡಿದ್ದೇವೋ ಅದನ್ನೇ ಅನುಸರಿಸುವೆವು.”** (299)

ಈ ಪಂಗಡಗಳ ಜನರು ತಮ್ಮ ತಮ್ಮ ಜಮಾಅತ್ ಯಾ ಪಕ್ಷಗಳನ್ನು ಎಲ್ಲಾ ಮನುಷ್ಯರ ಮೇಲೆ ಅಲ್ಲಾಹುವಿನ ಅನುಗ್ರಹವಾದ ಇಸ್ಲಾಮ್‌ನ ಬದಲಿಗೆ ತಂದು ನಿಲ್ಲಿಸಬೇಕೆಂದು ಬಯಸುತ್ತವೆ.

### ಅಧ್ಯಾಯ–9

## ಜೀವನದ ವಿಷಯದಲ್ಲಿ ಐಹಿಕ ದೃಷ್ಟಿಕೋನ ಮತ್ತು ಈ ದೃಷ್ಟಿಕೋನದ ದುಷ್ಪರಿಣಾಮಗಳು

ಇಂದು ಜೀವನದ ಕುರಿತು ಎರಡು ರೀತಿಯ ದೃಷ್ಟಿಕೋನವಿದೆ ಒಂದು ಭೌತಿಕ ದೃಷ್ಟಿಕೋನ ಮತ್ತೊಂದು ಸರಿಯಾದ ದೃಷ್ಟಿಕೋನ ಇವೆರಡೂ ದೃಷ್ಟಿಕೋನಗಳ ಪರಿಣಾಮಗಳನ್ನು ನಾವಿಂದು ಜನ ಜೀವನದಲ್ಲಿ ಕಾಣಬಹುದು.

1) ಐಹಿಕ ದೃಷ್ಟಿಕೋನ ಮತ್ತು ಅದರ ತಾತ್ಪರ್ಯ:

ಐಹಿಕ ದೃಷ್ಟಿಕೋನದ ಸತ್ಯತೆಯೇನೆಂದರೆ ಮನುಷ್ಯನು ಕೇವಲ ಸುಖಗಳ ಹಿಂದೆ ಬಿದ್ದು ಬಿಡುತ್ತಾನೆ ಮತ್ತು ಸಂಪೂರ್ಣ ಜೀವನವು ಅದಕ್ಕೆ ಸೀಮಿತವಾಗಿ ಬಿಡುತ್ತದೆ.

**298** ಕುರ್‌ಆನ್ 2:91

**299** ಕುರ್‌ಆನ್ 2:170

ಅದಕ್ಕಿಂತ ಮುಂಚೆ, ಐಹಿಕ ಸುಖ ಭೋಗಗಳ ಹಿಂದೆ ಓಡುವುದರ ಪರಿಣಾಮವೇನಾಗುತ್ತದೆಯೆಂದು ಅವನು ಯೋಚಿಸುವುದಿಲ್ಲ. ಅಲ್ಲಾಹ್ ಈ ಲೋಕವನ್ನು ಆಖಿರತ್‌ನ ಕೃಷಿ ಭೂಮಿ ಮತ್ತು ಕರ್ಮವೆಸಗುವ ಸ್ಥಳವನ್ನಾಗಿ ಮಾಡಿರುತ್ತಾನೆ. ಅಂತ್ಯ ದಿನವನ್ನು ಶಿಕ್ಷೆ ಅಥವಾ ಪ್ರತಿಫಲದ ಸ್ಥಳವನ್ನಾಗಿ ಮಾಡಿದ್ದಾನೆ ಎಂಬುದನ್ನು ಕೂಡಾ ತಿಳಿಯುವುದಿಲ್ಲ. ಆದ್ದರಿಂದ ಒಬ್ಬನು ಐಹಿಕ ಜೀವನವನ್ನು ಪರೀಕ್ಷೆಯೆಂದು ತಿಳಿದುಕೊಂಡು ಇಲ್ಲಿ ಒಳ್ಳೆಯ ಕರ್ಮಗಳನ್ನು ಮಾಡಿದರೆ ಅವನು ಇಹ ಪರಲೋಕಗಳ ಉಪಯೋಗವನ್ನು ಪಡೆದುಕೊಳ್ಳುತ್ತಾನೆ ಮತ್ತು ಯಾರು ತನ್ನ ಐಹಿಕ ಜೀವನವನ್ನು ನಿರರ್ಥಕವಾಗಿಸುತ್ತಾನೋ ಅವನು ತನ್ನ ಪರಲೋಕವನ್ನೂ ಕಳೆದುಕೊಳ್ಳುತ್ತಾನೆ. ಅಲ್ಲಾಹುವಿನ ಸೂಕ್ತಿಯು ಹೀಗಿದೆ:

﴿ خَسِرَ ٱلدُّنْيَا وَٱلْـَٔاخِرَةَ ۚ ذَٰلِكَ هُوَ ٱلْخُسْرَانُ ٱلْمُبِينُ ﴿١١﴾ ﴾

**“ಅವನು ಇಹಲೋಕದಲ್ಲಿ ನಷ್ಟಹೊಂದಿದನು ಮತ್ತು ಪರಲೋಕದಲ್ಲೂ ನಷ್ಟ ಹೊಂದಿದನು. ಇದುವೇ ಸ್ಪಷ್ಟವಾದ ನಷ್ಟವಾಗಿದೆ.”** (300)

ಅಲ್ಲಾಹು ಸುಬ್‌ಹಾನಹುವತಾಲಾ ಈ ಲೋಕವನ್ನು ವೃಥಾ ಸೃಷ್ಟಿಸಲಿಲ್ಲ. ಬದಲಾಗಿ ಒಂದು ದೊಡ್ಡ ಯುಕ್ತಿಗಾಗಿ ಸೃಷ್ಟಿಸಿದನು. ಅಲ್ಲಾಹುವಿನ ಸೂಕ್ತಿಯು ಹೀಗಿದೆ:

﴿ ٱلَّذِى خَلَقَ ٱلْمَوْتَ وَٱلْحَيَوٰةَ لِيَبْلُوَكُمْ أَيُّكُمْ أَحْسَنُ عَمَلًا ۚ ﴾

**“ಅವನು ಮರಣ ಹಾಗೂ ಜೀವನವನ್ನು ಸೃಷ್ಟಿಸಿದನು. ನಿಮ್ಮಲ್ಲಿ ಯಾರು ಸತ್ಕರ್ಮವನ್ನೆಸಗುತ್ತಾರೆ ಎಂದು ನಿಮ್ಮನ್ನು ಪರೀಕ್ಷಿಸಲಿಕ್ಕಾಗಿ.”** (301)

ಮತ್ತು ಇನ್ನೊಂದು ಕಡೆಯಲ್ಲಿ ಅಲ್ಲಾಹು ಹೀಗೆಂದಿದ್ದಾನೆ.

﴿ إِنَّا جَعَلْنَا مَا عَلَى ٱلْأَرْضِ زِينَةً لَّهَا لِنَبْلُوَهُمْ أَيُّهُمْ أَحْسَنُ عَمَلًا ﴿٧﴾ ﴾

**“ಭೂಮಿಯಲ್ಲಿರುವ ವಸ್ತುಗಳನ್ನು ಭೂಮಿಗೆ ಅಲಂಕಾರವನ್ನಾಗಿ ಮಾಡಿದ್ದೇವೆ. ನಿಮ್ಮಲ್ಲಿ ಯಾರು ಉತ್ತಮ ಕರ್ಮವೆಸಗುವವರು ಎಂಬುದನ್ನು ಪರೀಕ್ಷಿಸಲು.”** (302)

ಅಲ್ಲಾಹು ಈ ಜೀವನದಲ್ಲಿ ಸೊತ್ತು, ಸಂತಾನ, ಪ್ರತಿಷ್ಠೆ, ಬಲ ಮುಂತಾದ ಮನಮೋಹಕ ವಿಷಯಗಳನ್ನು ಮತ್ತು ಅನೇಕ ಸೌಂದರ್ಯಯುತ ಬಾಹ್ಯ ವಸ್ತುಗಳನ್ನೆಲ್ಲ ಸೃಷ್ಟಿಸಿರುವನು. ಅದರ ಜ್ಞಾನವು ಕೇವಲ ಅಲ್ಲಾಹನಿಗೆ ಮಾತ್ರವಿರುವುದು. ಆದ್ದರಿಂದ ಜನರ ಗಮನವು ಕೇವಲ ಅಂತಹ ಸಂಪತ್ತು ಸೌಂದರ್ಯಗಳ ಮೇಲೆಯೇ ಇರುತ್ತದೆ

---

**300** ಕುರ್‌ಆನ್ 22:11

**301** ಕುರ್‌ಆನ್ 67:2

**302** ಕುರ್‌ಆನ್ 18:7

ಮತ್ತು ಹೆಚ್ಚು ಹೆಚ್ಚಾಗಿ ಅದನ್ನು ಸವಿಯುವುದರಲ್ಲೇ ಮಗ್ನರಾಗಿರುತ್ತಾರೆ ಮತ್ತು ಅದರ ಹಿಂದಿರುವ ಗುಪ್ತ ಉದ್ದೇಶ ಮತ್ತು ಶಿಕ್ಷೆಯ ಬಗ್ಗೆ ನಿರ್ಲಕ್ಷ್ಯರಾಗಿರುತ್ತಾರೆ ಮಾತ್ರವಲ್ಲ. ಒಂದು ಹೆಜ್ಜೆ ಮುಂದೆ ಹೋಗಿ ಪರಲೋಕವನ್ನೇ ನಿರಾಕರಿಸಿಬಿಡುತ್ತಾರೆ. ಅಲ್ಲಾಹು ಹೇಳುತ್ತಾನೆ:

﴿ وَقَالُوٓاْ إِنۡ هِيَ إِلَّا حَيَاتُنَا ٱلدُّنۡيَا وَمَا نَحۡنُ بِمَبۡعُوثِينَ ﴿٢٩﴾ ﴾

**“ಮತ್ತು ಅವರು ಹೇಳುತ್ತಾರೆ. ಜೀವನವೇನಿದ್ದರೂ ಕೇವಲ ನಮ್ಮ ಈ ಇಹಲೋಕದ ಜೀವನ ಮಾತ್ರ ನಾವು(ಮರಣಗೊಂಡ ಬಳಿಕ) ಪುನಃ ಜೀವಂತಗೊಳಿಸಲ್ಪಡಲಾರೆವು.”** (303)

ಇಂತಹ ಜನರ ಕುರಿತು ಅಲ್ಲಾಹು ಕಠಿಣ ಶಿಕ್ಷೆಯ ಬಗ್ಗೆ ಎಚ್ಚರಿಸುತ್ತಾನೆ. ಅಲ್ಲಾಹು ಹೇಳುತ್ತಾನೆ:

﴿ إِنَّ ٱلَّذِينَ لَا يَرۡجُونَ لِقَآءَنَا وَرَضُواْ بِٱلۡحَيَوٰةِ ٱلدُّنۡيَا وَٱطۡمَأَنُّواْ بِهَا وَٱلَّذِينَ هُمۡ عَنۡ ءَايَٰتِنَا غَٰفِلُونَ ﴿٧﴾ أُوْلَٰٓئِكَ مَأۡوَىٰهُمُ ٱلنَّارُ بِمَا كَانُواْ يَكۡسِبُونَ ﴿٨﴾ ﴾

**“ನಿಶ್ಚಯವಾಗಿಯೂ ನಮ್ಮನ್ನು ಭೇಟಿಯಾಗುವ ನಿರೀಕ್ಷೆಯಿಡದವರು ಮತ್ತು ಐಹಿಕಲೋಕದ ಜೀವನದಲ್ಲೇ ಸಂತೃಪ್ತರಾಗಿರುವವರು ಮತ್ತು ಅದರಲ್ಲೇ ಸಂತೃಪ್ತರಾದವರು ಮತ್ತು ನಮ್ಮ ದೃಷ್ಟಾಂತಗಳಿಂದ ನಿರ್ಲಕ್ಷ್ಯರಾಗುವವರು ಯಾರೋ, ಅವರು ತಾವು ಮಾಡಿರುವುದರ ಪ್ರತಿಫಲವಾಗಿ ತಮ್ಮ ವಾಸಸ್ಥಾನವನ್ನು ನರಕದಲ್ಲಿ ಪಡೆಯಲಿದ್ದಾರೆ.”** (304)

ಮತ್ತೊಂದು ಕಡೆಯಲ್ಲಿ ಅಲ್ಲಾಹನ ಸೂಕ್ತಿಯು ಹೀಗಿದೆ:

﴿ مَن كَانَ يُرِيدُ ٱلۡحَيَوٰةَ ٱلدُّنۡيَا وَزِينَتَهَا نُوَفِّ إِلَيۡهِمۡ أَعۡمَٰلَهُمۡ فِيهَا وَهُمۡ فِيهَا لَا يُبۡخَسُونَ ﴿١٥﴾ أُوْلَٰٓئِكَ ٱلَّذِينَ لَيۡسَ لَهُمۡ فِي ٱلۡأٓخِرَةِ إِلَّا ٱلنَّارُۖ وَحَبِطَ مَا صَنَعُواْ فِيهَا وَبَٰطِلٞ مَّا كَانُواْ يَعۡمَلُونَ ﴿١٦﴾ ﴾

**“ಮತ್ತು ಯಾರು ಇಹಲೋಕದ ಜೀವನ ಮತ್ತು ಅದರ ಥಳುಕನ್ನು ಬಯಸುತ್ತಾನೋ ನಾವು ಅವರ ಕರ್ಮಗಳ ಪ್ರತಿಫಲವನ್ನು ಭೂಮಿಯಲ್ಲೇ ಕೊಟ್ಟು ಬಿಡುವೆವು ಮತ್ತು ಅವರ ಪಾಲಲ್ಲೇನೂ ಕಡಿಮೆ ಮಾಡುವುದಿಲ್ಲ. ಈ ಜನರಿಗೆ ಪರಲೋಕದಲ್ಲಿ ನರಕಾಗ್ನಿಯ ಹೊರತು ಇನ್ನೇನೂ ಇಲ್ಲ ಮತ್ತು ಅವರು ಇಹಲೋಕದಲ್ಲಿ ಮಾಡಿದ ಸತ್ಕರ್ಮಗಳು ಅಳಿದು ಹೋಯಿತು ಮತ್ತು ಅವರು ಮಾಡಿರುವುದೆಲ್ಲ ನಿಷ್ಫಲವಾದವು.”** (305)

---

**303** ಕುರ್‌ಆನ್ 6:29

**304** ಕುರ್‌ಆನ್ 10:7–8

**305** ಕುರ್‌ಆನ್ 11:15–16

ಈ ಆದೇಶದಲ್ಲಿ ಇಂತಹ ದೃಷ್ಟಿಕೋನವಿರುವವರು ಶಾಮೀಲಾಗಿದ್ದಾರೆ: ಢಂಬಾಚಾರಿ ಮುನಾಫಿಕ್‌ಗಳು, ಢಂಬಾಚಾರಿಗಳಂತೆ ಕೇವಲ ಐಹಿಕ ಪ್ರಯೋಜನಕ್ಕಾಗಿ ಪರಲೌಕಿಕ ಕರ್ಮಗಳನ್ನು ಮಾಡುವವರು ಅಥವಾ ಅಂತ್ಯದಿನದ ವಿಚಾರಣೆಯ ಬಗ್ಗೆ ವಿಶ್ವಾಸವಿಲ್ಲದ ಸತ್ಯನಿಷೇಧಿ (ಕಾಫಿರ್)ಗಳಂತೆ ಮಾಡುವವರು. ಜಾಹಿಲಿಯ್ಯತ್ ಕಾಲದಲ್ಲಿನ ಜನರ ಹಾಗೆ ವಂಚನೆಯ ಅಥವಾ ಕೆಡುಕಿನ, ಭೋಗಾಸಕ್ತಿಯ ಕಮ್ಯೂನಿಸಂ, ಸೆಕ್ಯೂಲರಿಸಂ, ನಿರೀಶ್ವರವಾದಿ ಜನರು ಜೀವನದ ಪ್ರಾಧಾನ್ಯತೆಯನ್ನು ತಿಳಿಯುವುದಿಲ್ಲ. ಜೀವನದ ವಿಷಯದಲ್ಲಿ ಇವರ ದೃಷ್ಟಿಕೋನವು ಭೌತಿಕವಾದಕ್ಕಿಂತ ಹೊರಗೆ ಹೋಗುವುದಿಲ್ಲ. ಇವರು ಪ್ರತೀ ವಸ್ತುವನ್ನು ಮೃಗೀಯ ದೃಷ್ಟಿಕೋನದಿಂದ ನೋಡುತ್ತಾರೆ ಮಾತ್ರವಲ್ಲ ಇವರು ಪ್ರಾಣಿಗಳಿಗಿಂತಲೂ ಹೆಚ್ಚು ದಾರಿ ತಪ್ಪಿದವರಾಗಿರುವರು. ಏಕೆಂದರೆ ಇವರು ತಮ್ಮ ಬುದ್ಧಿಯಿಂದ ಕೆಲಸ ಮಾಡುವುದನ್ನು ಬಿಟ್ಟು ಬಿಟ್ಟಿರುವರು ಮತ್ತು ತಮ್ಮೆಲ್ಲ ಸಾಮರ್ಥ್ಯವನ್ನು ಲೌಕಿಕತೆಗಾಗಿಯೇ ಮೀಸಲಿಟ್ಟಿರುವರು. ತಮ್ಮೆಲ್ಲಾ ಸಮಯವನ್ನು ಅವರು ದೃಢತೆಯಿಲ್ಲದ ದುರ್ಬಲ ವಸ್ತುಗಳನ್ನು ಗಳಿಸುವುದರಲ್ಲಿ ಕಳೆಯುತ್ತಾರೆ ಮತ್ತು ತಮ್ಮನ್ನು ಕಾಯುತ್ತಿರುವ ತಮ್ಮ ಪರಿಣಾಮದ ಕುರಿತು ನಿರ್ಲಕ್ಷ್ಯರಾಗಿದ್ದಾರೆ. ಆ ಅಂತ್ಯವು ಆವರಿಸಿದರೆ ಅದರಿಂದ ಪಾರಾಗುವ ದಾರಿ ಕಾಣಲಾರರು. ಇದು ಮೃಗಗಳಿಗಿಂತಲೂ ಕಡೆ ಏಕೆಂದರೆ ಮೃಗಗಳು ಯಾವುದೇ ಪ್ರತಿಫಲಕ್ಕಾಗಿ ಅಥವಾ ಪರಿಣಾಮಕ್ಕಾಗಿ ಕಾಯುವುದಿಲ್ಲ. ಮಾತ್ರವಲ್ಲ ಅವುಗಳಿಗೆ ಮನುಷ್ಯನಿಗಿರುವಂತೆ ಚಿಂತಿಸುವ ಬುದ್ಧಿಯೂ ಇಲ್ಲ. ಅಲ್ಲಾಹು ಹೇಳುತ್ತಾನೆ:

﴿أَمْ تَحْسَبُ أَنَّ أَكْثَرَهُمْ يَسْمَعُونَ أَوْ يَعْقِلُونَ ۚ إِنْ هُمْ إِلَّا كَالْأَنْعَامِ ۖ بَلْ هُمْ أَضَلُّ سَبِيلًا ﴿٤٤﴾﴾

**“ಅದರಲ್ಲಿ ಬಹಳಷ್ಟು ಜನರು ಆಲಿಸುತ್ತಾರೆ ಮತ್ತು ಗ್ರಹಿಸುತ್ತಾರೆ ಎಂದು ನೀವು ಭಾವಿಸಿರುವಿರೇ. ಇವರು ನಾಲ್ಕು ಕಾಲಿನ ಪ್ರಾಣಿಗಳಂತೆ ಮಾತ್ರವಲ್ಲ ಅದಕ್ಕಿಂತಲು ದಾರಿ ತಪ್ಪಿದವರಾಗಿರುವರು.”** (306)

ಈ ದೃಷ್ಟಿಕೋನದ ಜನರನ್ನು ಅಲ್ಲಾಹು ಜಾಹಿಲ್ ಮತ್ತು ಅವಿದ್ಯಾವಂತರೆಂದು ಕರೆದಿದ್ದಾನೆ. ಅಲ್ಲಾಹು ಹೇಳುತ್ತಾನೆ.

﴿وَعْدَ اللَّهِ ۖ لَا يُخْلِفُ اللَّهُ وَعْدَهُ وَلَٰكِنَّ أَكْثَرَ النَّاسِ لَا يَعْلَمُونَ ﴿٦﴾ يَعْلَمُونَ ظَاهِرًا مِّنَ الْحَيَاةِ الدُّنْيَا وَهُمْ عَنِ الْآخِرَةِ هُمْ غَافِلُونَ ﴿٧﴾﴾

**“ಇದು ಅಲ್ಲಾಹನು ಮಾಡಿದ ವಾಗ್ದಾನ. ಅಲ್ಲಾಹ್ ಎಂದೂ ತನ್ನ ವಾಗ್ದಾನವನ್ನು**

**306** ಕುರ್‌ಆನ್ 25:44

**ಉಲ್ಲಂಘಿಸುವುದಿಲ್ಲ. ಆದರೆ ಬಹಳ ಜನರು ಅರಿತಿರುವುದಿಲ್ಲ. ಇವರು ಲೋಕದ ಬಾಹ್ಯ ಜೀವನವನ್ನು ಅರಿಯುತ್ತಾರೆ ಮತ್ತು ಪರಲೋಕದ ಕಡೆಗೆ ನಿರ್ಲಕ್ಷ್ಯರಾಗಿರುವರು."** (307)

ಇಂತಹ ದೃಷ್ಟಿಕೋನವಿರುವವರಲ್ಲಿ ಬಹಳ ಜನರು ಲೌಕಿಕ ವಿದ್ಯೆಗಳಲ್ಲಿ ಪಾರಂಗತರಾಗಿರುತ್ತಾರೆ. ಕಲಾ ಕೌಶಲ್ಯ ಶೋಧನೆಯಲ್ಲಿ ಎಷ್ಟು ಮುಂದುವರಿದರೂ ಆಂತರಿಕವಾಗಿ ಮತ್ತು ವಾಸ್ತವವಾಗಿ ಇವರು ಜಾಹಿಲ್‌ಗಳು ಮತ್ತು ಗಮಾರರಾಗಿರುತ್ತಾರೆ. ಉಲೆಮಾಗಳ ಪಂಕ್ತಿಯಲ್ಲಿ ಸೇರಲು ಇವರು ಅರ್ಹರಲ್ಲ. ಏಕೆಂದರೆ ಇವರ ವಿದ್ಯೆಯು ಐಹಿಕ ಜೀವನದ ಬಾಹ್ಯ ಥಳಕುಗಳ ಮುಂದೆ ಶರಣಾಗಿಬಿಡುವುದು. ಇದು ಅಪರಿಪೂರ್ಣ ಜ್ಞಾನವಾಗಿದೆ.

ನಿಜವಾಗಿ ವಿದ್ವಾಂಸರೆಂದು ಕರೆದುಕೊಳ್ಳಲು ಅರ್ಹರಾದವರು; ಯಾರೆಂದರೆ ಅವರು ಅಲ್ಲಾಹನಿಂದ ಗುರುತಿಸಲ್ಪಟ್ಟಿರುವವರು. ಅವನ ಭಯ ಭಕ್ತಿಯು ಅವರಲ್ಲಿರುತ್ತದೆ. ಅಲ್ಲಾಹನು ಹೇಳುತ್ತಾನೆ:

﴿ إِنَّمَا يَخْشَى ٱللَّهَ مِنْ عِبَادِهِ ٱلْعُلَمَٰٓؤُاْ ﴾

**"ನಿಶ್ಚಯವಾಗಿಯೂ ಜ್ಞಾನಿಗಳು ಮಾತ್ರವೇ ಅಲ್ಲಾಹನನ್ನು ಭಯಪಡುತ್ತಾರೆ."** (308)

ಕಾರೂನ್ ಮತ್ತು ಅವನ ಖಜಾನೆಯ ಘಟನೆಯನ್ನು ಹೇಳುತ್ತಾ ಕಾರೂನನ ಲೌಕಿಕ ಲಾಲಸೆಯನ್ನು ಹೀಗೆ ಹೇಳಿರುವನು

﴿ فَخَرَجَ عَلَىٰ قَوْمِهِۦ فِى زِينَتِهِۦ ۖ قَالَ ٱلَّذِينَ يُرِيدُونَ ٱلْحَيَوٰةَ ٱلدُّنْيَا يَٰلَيْتَ لَنَا مِثْلَ مَآ أُوتِىَ قَٰرُونُ إِنَّهُۥ لَذُو حَظٍّ عَظِيمٍ ٧٩ ﴾

**"ಹಾಗೆ (ಒಂದು ದಿನ) ಕಾರೂನ್ (ದೊಡ್ಡ) ಆಡಂಬರದೊಂದಿಗೆ ತನ್ನ ಸಮೂಹದ ಎದುರು ಹೊರಟನು. ಐಹಿಕ ಜೀವನದ ಆಕಾಂಕ್ಷಿಗಳಾದವರು ಹೇಳತೊಡಗಿದರು. ಆಹಾ ಕಾರೂನನಿಗೆ ಸಿಕ್ಕಿದಂತೆ (ಸಂಪತ್ತು) ನಮಗೂ ಸಿಕ್ಕಿದ್ದಿದ್ದರೆ! ಅವನು ಬಹಳ ಅದೃಷ್ಟವಂತನಾಗಿರುವನು."** (309)

ಐಹಿಕ ಜೀವನದ ಲಾಲಸೆಯಿರುವವರು ಹೇಗೆ ಕಾರೂನ್‌ನ ಹಾಗೇ ಆಗಬೇಕೆಂದು ಆಕಾಂಕ್ಷಿಸಿದರು ಎಂಬುದು ಈ ವಚನದಲ್ಲಿ ತಿಳಿಯುತ್ತದೆ. ಅವರು ಅವನ ಬಗ್ಗೆ ಅಸೂಯೆ ಪಟ್ಟರು ಮತ್ತು ಅವನನ್ನು ದೊಡ್ಡ ಅದೃಷ್ಟವಂತನೆಂದು ನಂಬಿದ್ದರು. ಇಂದು ಸತ್ಯ ನಿಷೇಧಿ ಮುಖಂಡರ ಅವಸ್ಥೆಯೂ ಇದೇ. ಕಾಫಿರ್ ಶ್ರೀಮಂತರ ಬಳಿ ಏನೆಲ್ಲಾ ಸಂಪತ್ತುಗಳು, ಐಶ್ವರ್ಯಗಳೂ ಇವೆಯೇ ಅದನ್ನು ನೋಡಿ ನಮ್ಮ ಕೆಲವು ದುರ್ಬಲ

**307** ಕುರ್‌ಆನ್ 30:6–7

**308** ಕುರ್‌ಆನ್ 35:28

**309** ಕುರ್‌ಆನ್ 28:79

ವಿಶ್ವಾಸವಿರುವ ಮುಸ್ಲಿಮ್ ಸಹೋದರರು ಅದನ್ನು ಆಸೆಗಣ್ಣಿನಿಂದ ನೋಡುತ್ತಾರೆ ಮತ್ತು ಇವರ ಕುಫ್ರ್, ಶಿರ್ಕ್ ಮತ್ತು ಕೆಟ್ಟ ಪರಿಣಾಮಗಳೆಡೆಗೆ ತಮ್ಮ ದೃಷ್ಟಿ ಹಾಯಿಸುವುದಿಲ್ಲ. ಇದರ ಪರಿಣಾಮವಾಗಿ ಜನರು ಕಾಫಿರ್ ಮತ್ತು ನಾಸ್ತಿಕರನ್ನು ಗೌರವಿಸಲು, ಮೇಲು ಸ್ಥಾನದಲ್ಲಿ ಇಡಲು ತೊಡಗುತ್ತಾರೆ ಮತ್ತು ಅವರ ಕೆಟ್ಟ ಅಭ್ಯಾಸ ಮತ್ತು ಕೆಟ್ಟ ನಡತೆ–ಯ ನಕಲು ಮಾಡತೊಡಗುತ್ತಾರೆ. ಇವರ ಫ್ಯಾಶನ್ ಅನ್ನು ತಾವು ಅನುಸರಿಸುತ್ತಾರೆ. ಆದರೆ ಅವರ ಪ್ರಯತ್ನ, ಅವರ ದುಡಿಮೆ ಶ್ರಮ, ಹೊಸ ವಿಷಯಗಳು, ಅವರ ಶಕ್ತಿ ಸಾಮರ್ಥ್ಯದ ತಯಾರಿಯಂತಹ ಪ್ರಯೋಜನಕಾರೀ ವಿಷಯಗಳಲ್ಲಿ ಅವರ ಅವರ ತಕ್‌ಲೀದ್ ಮಾಡುವುದಿಲ್ಲ.

2) ಜೀವನದ ಕುರಿತು ಸರಿಯಾದ ದೃಷ್ಟಿಕೋನ:

ಜೀವನದ ಕುರಿತು ಎರಡನೆಯ ದೃಷ್ಟಿಕೋನವು ಹೇಗೆಂದರೆ ಸಂಪತ್ತುಗಳು, ಸಂತಾನಗಳು ಲೌಕಿಕ ಶಕ್ತಿ ಸಾಮರ್ಥ್ಯಗಳು ಮತ್ತು ಎಲ್ಲಾ ಲೌಕಿಕ ವಸ್ತುಗಳನ್ನು ಪರಲೋಕದ ಕರ್ಮಗಳ ಮಾಧ್ಯಮವಾಗಿ ತಿಳಿದುಕೊಳ್ಳುವುದು ಅದಕ್ಕಾಗಿ ಇವುಗಳ ಉಪಯೋಗ ಪಡೆಯುವುದು. ವಾಸ್ತವದಲ್ಲಿ ಲೋಕವು ಕೆಟ್ಟ ವಸ್ತುವಲ್ಲ. ಅದರ ಒಳಿತು ಮತ್ತು ಕೆಡುಕು, ನಿಂದ್ಯತೆ ಮತ್ತು ಕೀರ್ತಿಗಳು ದಾಸನ ಕೃತಿಯ ಮೂಲಕ ತಿಳಿಯುತ್ತವೆ. ಅದು ಈ ಜೀವನದಲ್ಲಿ ದಾಸನು ಕೈಗೊಳ್ಳುವ ಕರ್ಮವೇ ಅದು ಅವನ ಪಾಲಿಗೆ ಭಾಗ್ಯವೋ, ನಿರ್ಭಾಗ್ಯವೋ ಎಂಬುದನ್ನು ಖಚಿತಪಡಿಸುತ್ತದೆ. ಅದು ಅವನು ಯಾವ ದೃಷ್ಟಿಯಿಂದ ನೋಡುತ್ತಾನೆಂಬುದರ ಮೇಲೆ ಅವಲಂಬಿತವಾಗಿದೆ. ನಿಜವಾಗಿ ಇಹಲೋಕವು ಪರಲೋಕದ ಒಂದು ಕ್ಷಣವಾಗಿದೆ. ಇಹಲೋಕದಿಂದಲೇ ಪರಲೋಕ ಜೀವನದ ನಿರ್ಣಯವಾಗುವುದು. ಭೂಲೋಕದಲ್ಲಿ ಉತ್ತಮ ಕರ್ಮಗಳನ್ನು ಕೈಗೊಂಡಲ್ಲಿ ಸ್ವರ್ಗವು ಲಭಿಸುವುದು.

ಭೂಲೋಕವು ಜಿಹಾದ್, ನಮಾಝ್, ಕಿಯಾಮ್, ವ್ರತ, ಸತ್ಕಾರ್ಯ ಮತ್ತು ಅಲ್ಲಾಹುವಿನ ಮಾರ್ಗದಲ್ಲಿನ ದಾನದ ಮನೆಯಾಗಿದೆ.

ಸ್ವರ್ಗವಾಸಿಗಳಿಗೆ ಅಲ್ಲಾಹು ಹೇಳುತ್ತಾನೆ:

﴿ كُلُوا۟ وَٱشْرَبُوا۟ هَنِيٓـًٔۢا بِمَآ أَسْلَفْتُمْ فِى ٱلْأَيَّامِ ٱلْخَالِيَةِ ﴿٢٤﴾ ﴾

**“ಕಳೆದು ಹೋದ ದಿನಗಳಲ್ಲಿ ಮಾಡಿರುವ ಸತ್ಕರ್ಮಗಳ ಫಲವಾಗಿ ಸಂತೋಷದಿಂದ ತಿನ್ನಿರಿ ಮತ್ತು ಕುಡಿಯಿರಿ.”** [310]

**310** ಕುರ್‌ಆನ್ 69:24

## ಅಧ್ಯಾಯ–10

# ಮಂತ್ರ ಊದುವುದು ಮತ್ತು ಮಂತ್ರಗಳು, ತಾಯಿತಗಳು

ಮಂತ್ರಿಸಿ ಊದುವುದು : ಇದರಲ್ಲಿ ಮಂತ್ರ ಇತ್ಯಾದಿಗಳನ್ನು ಊದಿ, ರೋಗಿಗಳಿಗೆ ಜ್ವರ, ಅಪಸ್ಮಾರ, ಜಿನ್ನ್ ಬಾಧೆ ಮುಂತಾದ ಸಂಕಷ್ಟಕ್ಕೊಳಗಾದವರ ಮೇಲೆ ಊದುವುದು ಇದಕ್ಕೆ ಮಂತ್ರವೆಂದೂ ಹೇಳುತ್ತಾರೆ. ಇದರಲ್ಲಿ ಎರಡು ರೀತಿಗಳಿವೆ.

1. ಶಿರ್ಕ್‌ನಿಂದ ಮುಕ್ತವಾದದು : ಇದು ಹೇಗೆಂದರೆ ರೋಗಿಯ ಮೇಲೆ ಕುರ್‌ಆನ್‌ನ ಕೆಲವು ಸೂಕ್ತಗಳನು ಓದಿ ಊದುವುದು ಅಥವಾ ಅಲ್ಲಾಹುವಿನ ನಾಮ ಹಾಗೂ ಗುಣಗಳನ್ನು ಹೇಳಿ ರೋಗಿಗಾಗಿ ರಕ್ಷಣೆ ಕೋರುವುದು. ಇದು ಧರ್ಮ ಸಮ್ಮತವಾಗಿದೆ. ಏಕೆಂದರೆ ಸ್ವತಃ ಪ್ರವಾದಿ(ﷺ) ಓದಿ ಊದಿದ್ದರು ಮತ್ತು ಪ್ರವಾದಿ(ﷺ) ಅದನ್ನು ಅನುಮತಿಸಿದ್ದರು. ಮಾತ್ರವಲ್ಲ ಅದಕ್ಕೆ ಆದೇಶವನ್ನೂ ನೀಡಿದ್ದರು.

ಔಫ್ ಬಿನ್ ಮಾಲಿಕ್(ರ)ರಿಂದ ನಿವೇದನೆ: ಅವರು ಹೇಳುತ್ತಾರೆ: ನಾವು ಜಾಹಿಲಿಯ್ಯತ್ ಕಾಲದಲ್ಲಿ ಮಂತ್ರಿಸಿ ಊದುತ್ತಿದ್ದೆವು. ಹಾಗೇ ನಾವು ಅಲ್ಲಾಹುವಿನ ಸಂದೇಶವಾಹಕರು (ﷺ) ರೊಂದಿಗೆ ಹೇಳಿದೆವು: ಯಾ ರಸೂಲಲ್ಲಾಹ್, ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು? ಆಗ ಪ್ರವಾದಿ(ﷺ) ಹೇಳಿದರು:

«اعْرِضُوا عَلَيَّ رُقَاكُمْ لَا بَأْسَ بِالرُّقَا مَا لَمْ تَكُنْ شِرْكًا»

**“ನಿಮ್ಮ ಮಂತ್ರ ಓದುವಿಕೆಯನ್ನು ನನಗೂ ತೋರಿಸಿರಿ ಅದರಲ್ಲಿ ಶಿರ್ಕ್ ಇಲ್ಲದೇ ಇರುವ ವರೆಗೂ ಯಾವುದೇ ತೊಂದರೆಯಿಲ್ಲ.”** [311]

ಇಮಾಮ್ ಸುಯೂತೀ(ರ) ಹೇಳುತ್ತಾರೆ. ಮಂತ್ರಿಸಿ ಊದುವುದರ ಧರ್ಮ ಸಮ್ಮತದ ಕುರಿತು ಉಲೆಮಾಗಳಲ್ಲಿ ಇಜ್‌ಮಾಅ(ಒಮ್ಮತಾಭಿಪ್ರಾಯ)ವಿದೆ. ಆದರೆ ಅದಕ್ಕೆ ಮೂರು ಶರ್ತಗಳಿವೆ.

ಮೊದಲನೆಯದು, ಇದರಲ್ಲಿ ಅಲ್ಲಾಹುವಿನ ವಚನ ಅಥವಾ ಅಲ್ಲಾಹುವಿನ ಗುಣನಾಮಗಳನ್ನು ಬಳಸಿರಬೇಕು.

ಎರಡನೆಯದಾಗಿ ಇದು ಅರಬ್ಬೀ ಭಾಷೆಯಲ್ಲಿರಬೇಕು. ಅರ್ಥವಾಗುವಂತಹದ್ದಾಗಿರಬೇಕು ಮತ್ತು ಅದರ ಅರ್ಥ ಸ್ಪಷ್ಟವಾಗಿರಬೇಕು.

ಮೂರನೆಯ ಶರ್ತ ಏನೆಂದರೆ ಮಂತ್ರಿಸಿ ಊದುವವನ ಮತ್ತು ಊದಿಸಲ್ಪಡುವವನ ಇಬ್ಬರ ವಿಶ್ವಾಸವೂ ಹೀಗಿರಬೇಕು. ಏನೆಂದರೆ, ಈ ರುಖಿಯವು (ಮಂತ್ರ ಊದುವಿಕೆಯು) ಸ್ವಯಂ ಪರಿಣಾಮ ಮಾಡುವುದಲ್ಲ. ಬದಲಾಗಿ ಇದು ಅಲ್ಲಾಹುವಿನ ವಿಧಿಯ(ತಕ್

311 ಮುಸ್ಲಿಮ್

ದೀರ್)ಪ್ರಕಾರವಾಗಿರುತ್ತದೆ. ಇದರ ವಿಧಾನವು ಊದುವ ಮೊದಲು ಓದಿ ನಂತರ ಅದನ್ನು ರೋಗಿಯ ಮೇಲೆ ಊದಬೇಕು ಅಥವಾ ನೀರಿಗೆ ಊದಿ ನೀರನ್ನು ರೋಗಿಗೆ ಕುಡಿಸಬಹುದು. ಹ. ಸಾಬಿತ್ ಬಿನ್ ಕೈಸ್ (ﷺ) ರವರ ಹದೀಸ್‌ನಲ್ಲಿ ಬಂದಿದೆಯೇನೆಂದರೆ: ಪ್ರವಾದಿ (ﷺ) ರು ಬತ್‌ಹಾನ್‌ನಿಂದ ಮಣ್ಣನ್ನು ತೆಗೆದುಕೊಂಡರು. ಅದನ್ನು ಒಂದು ಪಾತ್ರೆಯಲ್ಲಿಟ್ಟರು. ನೀರಿನ ಮೂಲಕ ಅದರ ಮೇಲೆ ಊದಿದರು ಮತ್ತು ನೀರನ್ನು ಅದರ ಮೇಲೆ ಸುರಿದರು."

2. ಶಿರ್ಕ್‌ನಿಂದ ಮುಕ್ತವಾಗದ ಊದುವಿಕೆ : ಇಂತಹ ಮಂತ್ರ ಊದುವಿಕೆಯಲ್ಲಿ ಅಲ್ಲಾಹೇತರರ ಸಹಾಯುಯಾಚಿಸಲಾಗುತ್ತದೆ. ಅಲ್ಲಾಹೇತರರರೊಂದಿಗೆ ಪ್ರಾರ್ಥಿಸಲಾಗುತ್ತದೆ. ಅಲ್ಲಾಹೇತರರೊಂದಿಗೆ ಫರ್ಯಾದು ಮಾಡಲಾಗುತ್ತದೆ. ಅಲ್ಲಾಹೇತರನ್ನು ಕರೆಯಲಾಗುತ್ತದೆ. ಅವರಿಂದ ಅಭಯ ಯಾಚಿಸಲಾಗುತ್ತದೆ. ಉದಾಹರಣೆಗೆ ಜಿನ್ನ್, ಮಲಕ್‌ಗಳ, ಪ್ರವಾದಿಗಳ ಅಥವಾ ಸಜ್ಜನರ ಹೆಸರುಗಳನ್ನು ಓದಿ ಊದುವುದು.

ಇದು ಮಹಾ ಶಿರ್ಕ್ ಆಗಿದೆ, ಅಥವಾ ಇದು ಕೆಲವೊಮ್ಮೆ ಅರಬೇತರ ಭಾಷೆಗಳಲ್ಲಾಗಿರುತ್ತದೆ. ಅವುಗಳ ಅರ್ಥವು ಸ್ಪಷ್ಟವಾಗಿರುವುದಿಲ್ಲ. ಇಂತಹ ಸಂದರ್ಭದಲ್ಲಿ ಅದರಲ್ಲಿ ಶಿರ್ಕ್ ಅಥವಾ ಕುಫ್ರ್‌ನ ವಚನಗಳಿವೆಯೇ ಎಂಬ ಭಯವಿರುತ್ತದೆ ಮತ್ತು ಓದುವವನಿಗೆ ಅದರ ಅರ್ಥವು ತಿಳಿಯದಿರಬಹುದು. ಇದು ನಿಷೇಧಿಸಲ್ಪಟ್ಟ ಊದುವಿಕೆಯಾಗಿದೆ.

!!. ತಾಯಿತ ಮತ್ತು ನೂಲು : ಇವುಗಳು ಕೆಟ್ಟ ದೃಷ್ಟಿಯಿಂದ ಪಾರಾಗಲು ಮಕ್ಕಳ ಕೊರಳಿಗೆ ನೇತು ಹಾಕಲ್ಪಡುತ್ತವೆ ಮತ್ತು ಕೆಲವೊಮ್ಮೆ ವೃದ್ಧ ಸ್ತ್ರೀ ಪುರುಷರ ಕೊರಳಿನಲ್ಲಿ ನೇತು ಹಾಕಲ್ಪಡುತ್ತವೆ.

ಇವುಗಳಲ್ಲಿ ಎರಡು ವಿಧಗಳಿವೆ.

1. ಕುರ್‌ಆನ್‌ನಿಂದ ರಚಿಸಲ್ಪಟ್ಟ ಅಥವಾ ಕುರ್‌ಆನ್‌ನ ಸೂಕ್ತಗಳು ಬರೆದಿಡಲ್ಪಟ್ಟಂತಹ ಅಥವಾ ಅಲ್ಲಾಹುವಿನ ಅಸ್ಮಾ ವ ಸಿಫಾತ್‌ಗಳು ಬರೆದಿಡಲ್ಪಟ್ಟಂತಹ ತಾಯಿತಗಳು, ಗುಣವಾಗಲಿಕ್ಕಾಗಿ ರೋಗಿಯ ದೇಹದ ಭಾಗಕ್ಕೆ ಕಟ್ಟಲಾಗುತ್ತದೆ ಅಥವಾ ಅವನ ಕೊರಳಿಗೆ ನೇತು ಹಾಕಲಾಗುತ್ತದೆ. ಇಂತಹ ತಾಯಿತಗಳನ್ನು ತೂಗು ಹಾಕುವ ವಿಷಯದಲ್ಲಿ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದೆ. ಮತ್ತು ಇದರ ಕುರಿತು ಅವರ ಎರಡು ರೀತಿಯ ಹೇಳಿಕೆಗಳು ಮುಂದೆ ಬರುತ್ತವೆ.

ಮೊದಲನೆಯ ಹೇಳಿಕೆ : ಅನುಮತಿಸಲ್ಪಡುವುದು. ಇದು ಅಬ್ದುಲ್ಲಾ ಬಿನ್ ಅಮ್ರ್ ಬಿನ್ ಆಸ್‌ರ ಹೇಳಿಕೆಯಾಗಿದೆ. ಆಯಿಶಾ (ﷺ)ರಿಂದ ವರದಿ ಮಾಡಲ್ಪಟ್ಟ ಹದೀಸ್‌ನ ಬಾಹ್ಯ ಅರ್ಥವು ಇದಕ್ಕೆ ಆಧಾರ ನಿಡುತ್ತದೆ. ಅಬೂಜಅಫರುಲ್ ಬಾಖಿರ್, ಅಹ್ಮದ್ ಬಿನ್

ಹಂಬಲ್(ﷺ)ರವರೂ ಕೂಡಾ ಇದನ್ನು ಸಮರ್ಥಿಸಿದ್ದಾರೆ ಮತ್ತು ಅದರ ವಿರುದ್ಧವಾದ ಹದೀಸ್‌ಅನ್ನು ಅದು ಶಿರ್ಕ್‌ನ ಕಾರ್ಯದ ಕುರಿತು ಎಂದಿದ್ದಾರೆ.

ಎರಡನೇ ಹೇಳಿಕೆ : ಅನುಮತಿಯಿಲ್ಲ, ಇದು ಇಬ್ನ್ ಮಸ್‌ಊದ್ (ﷺ) ಇಬ್ನ್ ಅಬ್ಬಾಸ್(ﷺ) ಹುರೈಫಾ, ಉಕ್‌ಬಾ ಬಿನ್ ಆಮಿರ್, ಇಬ್ನ್ ಅಕೀಮ್ ಮುಂತಾದವರ ಮಾತುಗಳಿಂದ ತಿಳಿಯುವುದು. ಅನೇಕ ತಾಬಿಈನ್‌ಗಳು ಇದನ್ನೇ ಹೇಳುತ್ತಾರೆ. ಇವರಲ್ಲಿ ಇಬ್ನ್ ಮಸ್‌ಊದ್ (ﷺ) ರವರ ಜನರು ಮತ್ತು ಒಂದು ವರದಿಯ ಪ್ರಕಾರ ಅಹ್ಮದ್ ಕೂಡಾ ಇದರಲ್ಲಿದ್ದಾರೆ. ನಂತರದವರು ಬಹಳ ತೀವ್ರವಾಗಿ ಅದು ಸಮ್ಮತವಲ್ಲವೆಂದು ಫತ್ವಾ ನೀಡಿದ್ದಾರೆ ಮತ್ತು ಹ. ಇಬ್ನ್ ಮಸ್‌ಊದ್(ﷺ)ರವರ ಹದೀಸ್‌ಅನ್ನು ಆಧಾರವಾಗಿ ಮಾಡಿರುವರು. ಹದೀಸ್ ಹೀಗಿದೆ:

«إِنَّ الرُّقَا وَالتَّمَائِمَ وَالتِّوْلَةَ شِرْكٌ»

**“ನಾನು ಅಲ್ಲಾಹನ ಸಂದೇಶವಾಹಕರು(ﷺ) ಹೇಳುವುದನ್ನು ಕೇಳಿರುವೆನು. ಅದೆಂದರೆ, ಮಂತ್ರ ಊದುವುದು, ಯಂತ್ರ, ತಾಯಿತ, ತಿವ್‌ಲತ್ ಶಿರ್ಕ್ ಆಗಿದೆ”** (312)

ತಿವ್‌ಲತ್: ಇದೊಂದು ವಿಶೇಷ ಜಾದೂ ರೀತಿಯಾಗಿದೆ ಗಂಡನ ಮೇಲೆ ಹೆಂಡತಿಗೆ ಮತ್ತು ಹೆಂಡತಿಯ ಮೇಲೆ ಗಂಡನಿಗೆ ಪ್ರೀತಿಯುಂಟು ಮಾಡುತ್ತದೆ ಎಂಬ ವಿಶ್ವಾಸದೊಂದಿಗೆ ಮಾಡುತ್ತಾರೆ.

ಮೂರು ಕಾರಣಗಳಿಂದ ಎರಡನೆಯ ಅಭಿಪ್ರಾಯವು ಸರಿಯಾದುದು

ಮೊದಲನೆಯದು -ಎಲ್ಲಾ ತರಹದ ತಾವೀಝ್‌ಗಳನ್ನು ನಿಷೇಧಿಸಲಾಗಿದೆ. ಈ ಆದೇಶದಲ್ಲಿ ಯಾವೊಂದನ್ನೂ ಪ್ರತ್ಯೇಕಗೊಳಿಸಲಾಗಿಲ್ಲ.

ಎರಡನೆಯದು :ಇದರ ಮೂಲಕ ಫಿತ್ನ ಫಸಾದ್‌ನ ಮಾರ್ಗಗಳೆಲ್ಲವೂ ಮುಚ್ಚಲ್ಪಡುವುದು. ಏಕೆಂದರೆ ಇದರ ಸಮ್ಮತಿಯ ಬಳಿಕ ಜನರು ಅನುಮತಿಯಿಲ್ಲದವುಗಳನ್ನು ಮಾಡತೊಡಗುವರು.

ಮೂರನೆಯದು : ಕುರ್‌ಆನ್‌ನ ಸೂಕ್ತಗಳಿರುವ ತಾಯಿತಗಳನ್ನು ತೂಗು ಹಾಕಿದವನಿಂದ ಕುರ್‌ಆನ್‌ಗೆ ಅವಮಾನವಾಗುತ್ತದೆ. ಏಕೆಂದರೆ, ಶೌಚಾಲಯಕ್ಕೆ ಪ್ರವೇಶಿಸುವಾಗ ಅದನ್ನು ತೆಗೆಯಲು ಆಗುವುದಿಲ್ಲ. (ಫತ್‌ಹುಲ್ ಮಜೀದ್:136)

2. ಇದರಲ್ಲಿ ಕುರ್‌ಆನ್‌ನ ಬದಲು ಇತರ ವಸ್ತಗಳು ಬರುವುದು. ಉದಾಹರಣೆಗೆ ಮಡಕೆಯ ತುಂಡು, ಮೂಳೆಗಳು, ಚಿಪ್ಪು, ನೂಲುಗಳು, ಚಪ್ಪಲಿಗಳು ಶೈತಾನ್ ಹಾಗೂ ಜಿನ್ನ್‌ಗಳ ಹೆಸರುಗಳು ಮತ್ತು ಇಂದ್ರಜಾಲ ಇತ್ಯಾದಿ. ಇಂತಹ ಎಲ್ಲಾ ತಾಯಿತಗಳು ಖಂಡಿತವಾಗಿಯೂ ಸಂಪೂರ್ಣ ಹರಾಮ್ ಆಗಿದೆ ಹಾಗೂ ಇದು ಶಿರ್ಕಿಗೆ

---

**312** ಅಹ್ಮದ್ ಅಬೂದಾವೂದ್

ಒಳಪಟ್ಟದ್ದಾಗಿದೆ. ಏಕೆಂದರೆ ಇಂತಹ ವಸ್ತುಗಳಲ್ಲಿ ಅಲ್ಲಾಹು ಮತ್ತು ಅವನ ಅಸ್ಮಾ ವ ಸಿಫಾತ್ ಮತ್ತು ಕುರ್‌ಆನ್‌ನ ಸೂಕ್ತಗಳ ಬದಲಾಗಿ ಬೇರೆ ವಸ್ತುಗಳ ಹೆಸರಿನಲ್ಲಿ ತೂಗು ಹಾಕಲಾಗುತ್ತದೆ. ಮತ್ತೊಂದು ಹದೀಸ್‌ನಲ್ಲಿ ಹೀಗಿದೆ.

«مَنْ تَعَلَّقَ شَيْئًا وُكِّلَ إِلَيْهِ»

**"ಒಬ್ಬ ವ್ಯಕ್ತಿಯು ಯಾವುದೇ ವಸ್ತುವನ್ನು ತೂಗು ಹಾಕಿದರೆ ಅವನು ಅದರ ಸುಪರ್ದಿಗೇ ಬಿಡಲ್ಪಡುವನು."** (313)

ಅಂದರೆ ಅಲ್ಲಾಹು ಅವನನ್ನು ಅವನು ಕಟ್ಟಿಕೊಂಡ ವಸ್ತುವಿಗೇ ಬಿಟ್ಟು ಬಿಡುತ್ತಾನೆ. ಇನ್ನು ಯಾರಾದರೂ ಅಲ್ಲಾಹನೊಂದಿಗೆ ಸಂಬಂಧವಿರಿಸುತ್ತಾನೋ ಅವನಲ್ಲೇ ಅಭಯವನ್ನು ಯಾಚಿಸುತ್ತಾನೋ ಮತ್ತು ತನ್ನ ವಿಷಯಗಳನ್ನೆಲ್ಲಾ ಆತನ ಸುಪರ್ದಿಗೇ ಬಿಡುತ್ತಾನೋ ಅಂತಹ ವ್ಯಕ್ತಿಗೆ ಅಲ್ಲಾಹನೇ ಸಾಕಾಗುವನು. ಆತನ ಪ್ರತೀ ದೂರವನ್ನು ಸಮೀಪ ಮಾಡುವನು. ಆತನ ಪ್ರತಿಯೊಂದು ಕಷ್ಟವನ್ನು ಸುಲಭಗೊಳಿಸುವನು ಮತ್ತು ಯಾರಾದರೂ ಅಲ್ಲಾಹುವಿನ ಹೊರತು ಇತರ ಸೃಷ್ಟಿಗಳು, ತಾಯಿತಗಳು, ಗೋರಿಗಳು, ದರ್ಗಾಗಳು ಮುಂತಾದವುಗಳ ಆಸರೆ ಪಡೆದುಕೊಂಡರೆ ಅಲ್ಲಾಹು ಅವನನ್ನು ಆ ವಸ್ತುಗಳೆಡೆಗೇ ಬಿಟ್ಟು ಬಿಡುತ್ತಾನೆ. ಅವುಗಳೂ ಅವನಿಗೆ ಯಾವುದೇ ಉಪಕಾರವನ್ನಾಗಲೀ, ಉಪದ್ರವನ್ನಾಗಲೀ ಮಾಡಲಾರವು. ಇದರಿಂದ ಆತನ ವಿಶ್ವಾಸವೂ ಇಲ್ಲವಾಗುವುದು ಮತ್ತು ಅಲ್ಲಾಹುವಿನೊಂದಿಗೆ ಆತನ ಸಂಬಂಧವೂ ಕೊನೆಗೊಳ್ಳುವುದು. ಅಲ್ಲಾಹು ಕೂಡಾ ಆತನ ಕೈ ಬಿಡುವನು.

ಆದ್ದರಿಂದ ಒಬ್ಬ ಮುಸ್ಲಿಮ್ ಮೊತ್ತ ಮೊದಲು ತನ್ನ ಅಖೀದವನ್ನು ಸರಿಪಡಿಸಬೇಕು ಮತ್ತು ಅಖೀದಕ್ಕೆ ಪೆಟ್ಟಾಗುವಂತಹ ಅಥವಾ ಕಳೆದುಕೊಳ್ಳುವಂತಹ ಯಾವುದೇ ಕಾರ್ಯವನ್ನು ಮಾಡಬಾರದು. ಆದ್ದರಿಂದ ಧರ್ಮ ಸಮ್ಮತವಲ್ಲದ ಚಿಕಿತ್ಸೆಗಳನ್ನು ಉಪಯೋಗಿಸಬಾರದು. ರೋಗ ಚಿಕಿತ್ಸೆಗಾಗಿ ನಕ್ಷತ್ರ ನೋಡುವವರ ಬಳಿ, ಜೋತಿಷ್ಯರ ಬಳಿ ಮತ್ತು ಮಂತ್ರವಾದಿಗಳ ಬಳಿ ಎಂದೆಂದಿಗೂ ಹೋಗಲೇಬಾರದು. ಏಕೆಂದರೆ ಇವರುಗಳು ಜನರ ರೋಗವನ್ನು ಗುಣಪಡಿಸುವ ಬದಲು ಅವರ ಹೃದಯನ್ನು ಇನ್ನೂ ರೋಗಗ್ರಸ್ತಗೊಳಿಸುತ್ತಾರೆ. ಅವರ ಅಕೀದಃವನ್ನು ಕೆಡಿಸುತ್ತಾರೆ. ಆದರೆ ಅಲ್ಲಾಹುವಿನ ಬಳಿ ಯಾರು ಭರವಸೆಯಿಡುತ್ತಾನೋ ಅವನಿಗೆ ಅವನೇ ಸಾಕು.

ಇಂತಹ ತಾಯಿತಗಳನ್ನು ಕೆಲವು ಜನರು ಸ್ವತಃ ತಮ್ಮ ಮೇಲೆ ಹಾಕುತ್ತಾರೆ. ಅವರಿಗೆ ದೈಹಿಕ ರೋಗವಿರುವುದಿಲ್ಲ. ಅವರದು ಕೇವಲ ಭ್ರಮೆಯ ರೋಗ. ಅದು ಕೆಟ್ಟ ದೃಷ್ಟಿ, ಅಸೂಯೆಯ ಭಯ ಅಥವಾ ಕೆಲವು ಜನರಂತೂ ತಮ್ಮ ವಾಹನ, ಮೃಗಗಳು, ಮನೆ, ಬಾಗಿಲು, ಅಂಗಡಿಗಳಲ್ಲಿ ತಾವೀಝ್‌ಗಳನ್ನು ತೂಗು ಹಾಕುತ್ತಾರೆ. ಇವೆಲ್ಲವೂ

313 ಅಹ್ಮದ್ ಅಬೂದಾವೂದ್

ಅಕೀದಃದ ದೌರ್ಬಲ್ಯವಾಗಿದೆ. ಅಲ್ಲಾಹ್‌ನ ಮೇಲಿಟ್ಟಿರುವ ದುರ್ಬಲ ಭರವಸೆಯಾಗಿದೆ. ನಿಶ್ಚಯವಾಗಿಯೂ ವಿಶ್ವಾಸದ ದೌರ್ಬಲ್ಯವೆಂಬುದು ನಿಜವಾದ ರೋಗ. ಇದರ ಚಿಕಿತ್ಸೆಯನ್ನು ತೌಹೀದ್‌ನ ಅರಿವು ಮತ್ತು ಸರಿಯಾದ ಅಕೀದಃದ ಜ್ಞಾನದೊಂದಿಗೆ ಮಾಡುವುದು ಕಡ್ಡಾಯವಾಗಿದೆ.

## ಅಧ್ಯಾಯ–11

# ಅಲ್ಲಾಹೇತರರ ಮೇಲೆ ಆಣೆ, ಸೃಷ್ಟಿಗಳ ವಸೀಲ ಮತ್ತು ಸೃಷ್ಟಿಗಳೊಂದಿಗೆ ಸಹಾಯ ಯಾಚನೆ ಮತ್ತು ಸೃಷ್ಟಿಗಳೊಂದಿಗೆ ಫರ್ಯಾದು ಮಾಡುವುದು

1. ಅಲ್ಲಾಹೇತರರ ಮೇಲೆ ಆಣೆ: ಆಣೆಗೆ ಅರಬೀಯಲ್ಲಿ ಹಲಫ್ ಎನ್ನುತ್ತಾರೆ. ಇದರ ಅರ್ಥವು ಯಾವುದೇ ಆದೇಶ ಅಥವಾ ತೀರ್ಪನ್ನು ದೃಢಗೊಳಿಸುವುದಕ್ಕಾಗಿ ವಿಶೇಷ ರೀತಿಯಲ್ಲಿ ಯಾವುದೇ ದೊಡ್ಡ ಅಥವಾ ಹೆಸರಾಂತ ವ್ಯಕ್ತಿಗಳ ವಸ್ತುಗಳ ಹೆಸರುಚ್ಚರಿಸುವುದು. ಇಂತಹ ಔನ್ನತ್ಯವು ಅಲ್ಲಾಹುವಿಗೆ ಮಾತ್ರ ಅರ್ಹವಾದದ್ದು. ಆದ್ದರಿಂದ ಅವನ ಹೊರತು ಇತರರ ಆಣೆ ಹಾಕುವುದು ಧರ್ಮದಲ್ಲಿ ಅನುಮತಿಯಿಲ್ಲ.

ವಿದ್ವಾಂಸರಲ್ಲಿ ಒಮ್ಮತಾಭಿಪ್ರಾಯವಿದೆಯೇನೆಂದರೆ ಕೇವಲ ಅಲ್ಲಾಹು ಮತ್ತವನ ಗುಣವಿಶೇಷಗಳ ಆಣೆ ಹಾಕಬಹುದು. ಅಲ್ಲದೇ ಅಲ್ಲಾಹುವಿನ ಹೊರತು ಇತರರ ಮೇಲೆ ಆಣೆಯು ಯಾವುದೇ ಸಮಯದಲ್ಲೂ ನಿಷೇಧಿಸಲ್ಪಟ್ಟಿದೆ ಏಕೆಂದರೆ ಇದು ಸ್ಪಷ್ಟ ಶಿರ್ಕ್ ಆಗಿದೆ. ಈ ವಿಷಯದಲ್ಲೂ ಉಲೆಮಾಗಳಲ್ಲಿ ಒಮ್ಮತಾಭಿಪ್ರಾಯವಿದೆ. ಈ ವಿಷಯದಲ್ಲಿ ಇಬ್ನ್ ಉಮರ್(﵄)ರವರ ವರದಿಯು ಬಹಳ ಸ್ಪಷ್ಟವಾಗಿದೆ. ರಸೂಲುಲ್ಲಾಹಿ(ﷺ) ಹೇಳಿರುವರು.

«مَنْ حَلَفَ بِغَيْرِ اللَّهِ فَقَدْ كَفَرَ أَوْ أَشْرَكَ»

**“ಯಾರು ಅಲ್ಲಾಹೇತರರ ಆಣೆ ಹಾಕಿದನೋ ಅವನು ಕುಫ್ರ್ ಅಥವಾ ಶಿರ್ಕ್ ಮಾಡಿದನು”** (314)

ಇದು ಚಿಕ್ಕ ಶಿರ್ಕ್ ಆಗಿದೆ. ಆದರೆ ಯಾರ ಮೇಲೆ ಆಣೆ ಹಾಕಲಾಗಿದೆಯೋ ಆ ವ್ಯಕ್ತಿಯು ಆಣೆ ಹಾಕುವವನಿಗೆ ಬಹಳ ಪ್ರಭಾವಶಾಲಿಯಾಗಿದ್ದರೆ ಮತ್ತು ಅವನ ಬಳಿ ಆ ವ್ಯಕ್ತಿಯ ಆರಾಧನೆಯು ಇದ್ದರೆ ಆ ವ್ಯಕ್ತಿಯ ಆಣೆ ಹಾಕುವುದು ದೊಡ್ಡ ಶಿರ್ಕ್ ಆಗಿದೆ. ಇಂದಿನ ಗೋರಿಯಾರಾಧಕರ ಸ್ಥಿತಿಯೂ ಇದೇ ಆಗಿದೆ. ಈ ಜನರು

---

**314** ತಿರ್ಮುದೀ, ಅಲ್ ಹಾಕಿಮ್

ಗೋರಿಯೊಳಗಿರುವವರಿಗೆ ಹೆದರುವಷ್ಟು ಅಲ್ಲಾಹನಿಗೆ ಹೆದರುವುದಿಲ್ಲ ಮತ್ತು ಅವರನ್ನು ಶ್ರೇಷ್ಠಗೊಳಿಸುವಷ್ಟು ಅಲ್ಲಾಹನನ್ನು ಶ್ರೇಷ್ಠಗೊಳಿಸುವುದಿಲ್ಲ. ಆದ್ದರಿಂದ ಅವರಲ್ಲಿ ಯಾರಿಗಾದರೂ ಯಾವುದೇ ವಲೀಯ ಮೇಲೆ ಆಣೆ ಹಾಕಲು ಹೇಳಿದರೆ ಅವನು ಸುಳ್ಳು ಹೇಳುವುದಾದರೆ ಆಣೆ ಹಾಕುವುದಿಲ್ಲ. ಆದರೆ ಅವನಿಗೆ ಅಲ್ಲಾಹುವಿನ ಆಣೆ ಹಾಕಲು ಹೇಳಿದರೆ, ಅವನು ಸುಳ್ಳು ಹೇಳುತ್ತಿದ್ದರೂ ಆಣೆ ಹಾಕಲು ಹಿಂಜರಿಯುವುದಿಲ್ಲ. ವಾಸ್ತವದಲ್ಲಿ ಯಾರ ಮೇಲೆ ಆಣೆ ಹಾಕಲಾಗುತ್ತದೆಯೋ ಅವರಿಗೆ ಅತ್ಯಂತ ಶ್ರೇಷ್ಠತೆ ಮತ್ತು ಗೌರವವು ಇರುತ್ತದೆ. ಇಂತಹ ಶ್ರೇಷ್ಠತೆ ಮತ್ತು ಗೌರವಕ್ಕೆ ಅರ್ಹನು ಅಲ್ಲಾಹು ಮಾತ್ರ. ಅಲ್ಲಾಹನ ಆಣೆ ಹಾಕುವಾಗಲೂ ಬಹಳ ನಿಯಂತ್ರಣ ಹಾಕಬೇಕು. ಬೇಕಾಬಿಟ್ಟಿ ಆಣೆ ಹಾಕಬಾರದು ಅಲ್ಲಾಹುವಿನ ವಚನವು ಹೀಗಿದೆ:

﴿ وَلَا تُطِعْ كُلَّ حَلَّافٍ مَّهِينٍ ﴿١٠﴾ ﴾

**"ಬಹಳ ಆಣೆಹಾಕುವ ನೀಚನಾಗಿರುವವನ ಮಾತನ್ನು ಅನುಸರಿಸದಿರಿ."** [315]

ಇನ್ನೊಂದು ಕಡೆಯಲ್ಲಿ ಹೀಗಿದೆ:

﴿ وَٱحْفَظُوٓا۟ أَيْمَـٰنَكُمْ ﴾

**"(ಮತ್ತು ನೀವು)ನಿಮ್ಮ ಆಣೆಗಳನ್ನು ಸಂರಕ್ಷಿಸಿರಿ"** [316]

ಅಂದರೆ ಅಗತ್ಯವಿರುವಾಗ ಮಾತ್ರ ಅಂದರೆ ಸತ್ಯ ಹಾಗೂ ಪುಣ್ಯದ ಸಂದರ್ಭಗಳಲ್ಲಿ ಆಣೆ ಹಾಕಿರಿ. ಏಕೆಂದರೆ ಬಹಳ ಹೆಚ್ಚು ಆಣೆ ಹಾಕುವುದು ಮತ್ತು ಸುಳ್ಳು ಆಣೆ ಹಾಕುವುದು ಅಲ್ಲಾಹ್ ನೊಂದಿಗೆ ತಮಾಷೆ ಮಾಡುವುದಾಗಿದೆ. ಇದು ತೌಹೀದ್‌ನ ಪರಿಪೂರ್ಣತೆಗೆ ವಿರುದ್ಧವಾಗಿದೆ. ಒಂದು ಹದೀಸ್‌ನಲ್ಲಿ ಪ್ರವಾದಿ ಮುಹಮ್ಮದ್ (ﷺ) ಹೇಳಿರುವರು:

«ثَلَاثَةٌ لَا يُكَلِّمُهُمُ اللَّهُ وَلَا يُزَكِّيهِمْ وَلَهُمْ عَذَابٌ أَلِيمٌ»

**"ಮೂರು ಜನರಲ್ಲಿ ಅಲ್ಲಾಹು ಮಾತನಾಡಲಾರನು ಮತ್ತು ಅವರನ್ನು ಪರಿಶುದ್ಧಗೊಳಿಸಲಾರನು. ಇವರಿಗೆ ವೇದನಾಯುಕ್ತ ಶಿಕ್ಷೆಯಿರುವುದು."**

ಈ ಹದೀಸ್‌ನಲ್ಲಿ ಮುಂದೆ ಹೀಗೆಂದಿರುವರು

«وَرَجُلٌ جَعَلَ اللَّهَ بِضَاعَتَهُ لَا يَشْتَرِي إِلَّا بِيَمِينِهِ وَلَا يَبِيعُ إِلَّا بِيَمِينِهِ»

**"ಮತ್ತು ಅಲ್ಲಾಹುವನ್ನು ತನ್ನ ಸರಕನ್ನಾಗಿ ಮಾಡಿದವನು. ಅವನು ಆಣೆ ಹಾಕದೆ**

**315** ಕುರ್‌ಆನ್ 68:10

**316** ಕುರ್‌ಆನ್ 5:89

**ಮಾರುವುದಿಲ್ಲ, ಅವನ ಆಣೆ ಹಾಕದೇ ಖರೀದಿಸುವುದಿಲ್ಲ.”** (317)

ಹೆಚ್ಚು ಆಣೆ ಹಾಕುವುದರ ಶಿಕ್ಷೆಯ ಕುರಿತು ಇರುವ ಮುನ್ನೆಚ್ಚರಿಕೆಯಿಂದ ಸ್ಪಷ್ಟವಾಗುತ್ತದೇನೆಂದರೆ, ಹೆಚ್ಚು ಆಣೆ ಹಾಕುವುದು ಹರಾಮ್ ಆಗಿದೆ. ಏಕೆಂದರೆ ಅಲ್ಲಾಹುವಿನ ದಾತ್ ವ ಸಿಫಾತ್‌ನ ಶ್ರೇಷ್ಠತೆಯನ್ನು ಕುಂದು ಮಾಡುವುದು ಸಲ್ಲದು.

ಇದೇ ರೀತಿ ಅಲ್ಲಾಹುವಿನ ಮೇಲೆ ಕೆಟ್ಟ ಆಣೆ ಹಾಕುವುದು ಹರಾಮ್ ಆಗಿದೆ. ಇದಕ್ಕೆ ಅಲ್ ಯಮೀನುಲ್ ಗಮೂಸ್ ಎಂದೂ ಹೇಳುತ್ತಾರೆ. ಅಲ್ಲಾಹು ಮುನಾಫಿಕರ ಬಗ್ಗೆ ಹೇಳುವುದೇನೆಂದರೆ ಈ ಮನುಷ್ಯರು ಸಂದರ್ಭದ ಅರಿವಿದ್ದೂ ಕೂಡಾ ಸುಳ್ಳು ಆಣೆ ಹಾಕುತ್ತಾರೆ ಎಂದಾಗಿದೆ.

ಪ್ರಸ್ತುತ ಚರ್ಚೆಯ ಮುಖ್ಯಾಂಶಗಳು

1. ಅಲ್ಲಾಹೇತರ ವಸ್ತುಗಳಾದ ಅಮಾನತ್, ಪವಿತ್ರ ಕಅಬಾ, ಅಥವಾ ಪ್ರವಾದಿವರ್ಯರ ಆಣೆ ಹಾಕುವುದು ಹರಾಮ್ ಮತ್ತು ಶಿರ್ಕ್ ಆಗಿದೆ.

2. ಉದ್ದೇಶಪೂರ್ವಕವಾಗಿ ಅಲ್ಲಾಹುವಿನ ಮೇಲೆ ಸುಳ್ಳು ಆಣೆ ಹಾಕುವುದು ಹರಾಮ್ ಆಗಿದೆ. ಇದನ್ನು(ಗುಮೂಸ್) ಎನ್ನುತ್ತಾರೆ.

3. ಅಲ್ಲಾಹನ ಮೇಲೆ ಅಧಿಕವಾಗಿ ಆಣೆ ಹಾಕುವುದು ಹರಾಮ್ ಆಗಿದೆ. ಅವನು ತನ್ನ ಆಣೆಯಲ್ಲಿ ಸತ್ಯವಂತನಾಗಿದ್ದರೂ ಸರಿ. ಏಕೆಂದರೆ ಅನಗತ್ಯವಾಗಿ ಅಲ್ಲಾಹುವಿನ ಮೇಲೆ ಆಣೆ ಹಾಕುವುದು ಅಲ್ಲಾಹುವನ್ನು ಅಪಹಾಸ್ಯ ಮಾಡುವುದಾಗಿದೆ.

4. ಅಗತ್ಯವಿರುವ ಸಮಯದಲ್ಲೂ ಒಬ್ಬನು ಸತ್ಯ ಸಂಧನಾಗಿರುವಾಗಲೂ ಅಲ್ಲಾಹುವಿನ ಆಣೆ ಹಾಕುವುದು ಅನುಮತಿಸಲ್ಪಟ್ಟಿದೆ.

2. ಅಲ್ಲಾಹುವಿನ ಸಾಮೀಪ್ಯಕ್ಕಾಗಿ ಸೃಷ್ಟಿಗಳ ತವಸ್ಸುಲ್

ತವಸ್ಸುಲ್‌ನ ಅರ್ಥವು ಯಾವುದೇ ವಸ್ತುವಿಗೆ ಹತ್ತಿರವಾಗುವುದು ಮತ್ತು ತಲುಪುವುದು ಆಗಿದೆ. ವಸೀಲ ಸಾಮೀಪ್ಯಕ್ಕೆ ಹೇಳುತ್ತಾರೆ. ಸರ್ವಶ್ರೇಷ್ಠನಾದ ಅಲ್ಲಾಹು ಹೇಳುತ್ತಾನೆ:

﴿ وَٱبْتَغُوٓا۟ إِلَيْهِ ٱلْوَسِيلَةَ ﴾

**“ಮತ್ತು ಅವನ ಸಾಮೀಪ್ಯ ಹೊಂದುವ ಮಾಧ್ಯಮಗಳನ್ನು ಹುಡುಕುತ್ತಾ ಇರಿ.”** (318)

ಅಂದರೆ ಅಲ್ಲಾಹುವಿನ ಸಂತುಷ್ಟಿಯನ್ನು ಪಡೆದು ಅವನನ್ನು ಅನುಸರಿಸಿ ಹತ್ತಿರವಾಗುವುದಾಗಿದೆ.

ವಸೀಲದ ಎರಡು ವಿಧಗಳಿವೆ : ಒಂದು, ಶರೀಅತ್ ಅನುಮತಿಸುವಂತಹದು.

**317** ಅತ್ತಬ್‌ರಾನೀ

**318** ಖುರ್‌ಆನ್ 5:35

1. ಗುಣ ನಾಮಗಳ ಮೂಲಕ ಅಲ್ಲಾಹುವಿನ ಸಾಮೀಪ್ಯಗಳಿಸುವುದು. ಹೀಗೆ ಮಾಡಲು ಅಲ್ಲಾಹು ನಮಗೆ ಆದೇಶಿಸಿರುವನು. ಅಲ್ಲಾಹನ ಸೂಕ್ತಿಯು ಹೀಗಿದೆ:

﴿ وَلِلَّهِ ٱلۡأَسۡمَآءُ ٱلۡحُسۡنَىٰ فَٱدۡعُوهُ بِهَاۖ وَذَرُواْ ٱلَّذِينَ يُلۡحِدُونَ فِيٓ أَسۡمَٰٓئِهِۦۚ سَيُجۡزَوۡنَ مَا كَانُواْ يَعۡمَلُونَ ١٨٠ ﴾

**"ಅಲ್ಲಾಹನಿಗೆ ಅತ್ಯುತ್ತಮ ನಾಮಗಳಿವೆ. ಆದ್ದರಿಂದ ಅವನನ್ನು ಆ ನಾಮಗಳಿಂದ ಕರೆಯಿರಿ. ಅವನ ನಾಮಗಳಲ್ಲಿ ಅತಿರೇಕವೆಸಗುವವರನ್ನು ಬಿಟ್ಟು ಬಿಡಿರಿ. ಅವರು ಮಾಡುವುದರ ಪ್ರತಿಫಲವನ್ನು ಅವರು ಪಡೆಯುವರು."** (319)

2. ಈಮಾನ್ ಹಾಗೂ ಸತ್ಕರ್ಮಗಳ ಮೂಲಕ ಅಲ್ಲಾಹುವಿನ ಸಾಮೀಪ್ಯವನ್ನು ಪಡೆಯುವುದು. ಸತ್ಯ ವಿಶ್ವಾಸಿಗಳ ಕುರಿತು ಅಲ್ಲಾಹು ನಮಗೆ ಹೀಗೆ ತಿಳಿಸಿರುವನು:

﴿ رَّبَّنَآ إِنَّنَا سَمِعۡنَا مُنَادِيٗا يُنَادِي لِلۡإِيمَٰنِ أَنۡ ءَامِنُواْ بِرَبِّكُمۡ فَـَٔامَنَّاۚ رَبَّنَا فَٱغۡفِرۡ لَنَا ذُنُوبَنَا وَكَفِّرۡ عَنَّا سَيِّـَٔاتِنَا وَتَوَفَّنَا مَعَ ٱلۡأَبۡرَارِ ١٩٣ ﴾

**"ಓ ನಮ್ಮ ಪರಿಪಾಲಕ ಪ್ರಭುವೇ, ನಾವು ಈಮಾನ್‌ನೆಡೆಗೆ ಕರೆಯುತ್ತಿರುವವನ "ನಿಮ್ಮ ಪರಿಪಾಲಕ ಪ್ರಭುವಿನ ಮೇಲೆ ವಿಶ್ವಾಸವಿಡಿರಿ" ಎಂಬ ಕರೆಯನ್ನು ಕೇಳಿಸಿಕೊಂಡೆವು. ಆಗ ನಾವು ವಿಶ್ವಾಸ ತಂದೆವು. ಓ ಪರಿಪಾಲಕ ಪ್ರಭುವೇ, ನಮ್ಮ ತಪ್ಪುಗಳನ್ನು ಕ್ಷಮಿಸು ಮತ್ತು ನಮ್ಮ ಕೆಡುಕುಗಳನ್ನು ಅಳಿಸಿ ಹಾಕು ಮತ್ತು ನಮ್ಮನ್ನು 'ಅಲ್-ಅಬ್ರಾರ್'(ಪುಣ್ಯವಂತ ಭಕ್ತರು) ಗಳೊಂದಿಗೆ ಎಬ್ಬಿಸು"** (320)

ಮತ್ತು ಮೂರು ವ್ಯಕ್ತಿಗಳ ಕುರಿತು ಹದೀಸ್‌ನಲ್ಲಿ ವರದಿಯಾಗಿದೆ. ಆ ಮೂವರು ವ್ಯಕ್ತಿಗಳು ಗುಹೆಯೊಳಗಿರುವಾಗ ಬಂಡೆಕಲ್ಲೊಂದು ಅವರ ಗುಹೆಯ ದ್ವಾರವನ್ನು ಮುಚ್ಚಿತ್ತು. ಅವರು ಹೊರಹೋಗಲಾರದ ಸ್ಥಿತಿಯಲ್ಲಿದ್ದರು. ಹಾಗೆ ಅವರು ತಮ್ಮ ಸತ್ಕರ್ಮಗಳ ತವಸ್ಸುಲ್ ಮಾಡಿದರು. ಆಗ ಅಲ್ಲಾಹು ಅವರಿಂದ ಬಂಡೆಕಲ್ಲನ್ನು ಸರಿಸಿದನು ಮತ್ತು ಅವರು ಹೊರ ಬಂದರು.

3. ಯೂನುಸ್ ಅಲೈಹಿಸ್ಸಲಾಮ್ ಮಾಡಿದಂತೆ ತೌಹೀದ್‌ನ ಮೂಲಕ ಅಲ್ಲಾಹುವಿನ ತವಸ್ಸುಲ್ ಮಾಡುವುದು. ಅಲ್ಲಾಹು ಹೇಳುತ್ತಾನೆ:

﴿ فَنَادَىٰ فِي ٱلظُّلُمَٰتِ أَن لَّآ إِلَٰهَ إِلَّآ أَنتَ سُبۡحَٰنَكَ ﴾

**"ಕೊನೆಗೆ ಅಂಧಕಾರದಲ್ಲಿ(ಅಲ್ಲಾಹನನ್ನು) ಕರೆಯತೊಡಗಿದರು. ನೀನಲ್ಲದೇ ಬೇರೆ**

---

**319** ಕುರ್‌ಆನ್ 7:180

**320** ಕುರ್‌ಆನ್ 3:193

**ಆರಾಧ್ಯರಿಲ್ಲ, ನೀನು ಪರಿಶುದ್ಧನಾಗಿರುವಿ.”** [321]

4. ಅಯ್ಯೂಬ್ (عليه السلام) ರವರು ಮಾಡಿದಂತೆ ತನ್ನ ದೌರ್ಬಲ್ಯ ಅಸಹಾಯಕತೆ, ಅವಶ್ಯಕತೆಯನ್ನು ಪ್ರಕಟಿಸುವುದರ ಮೂಲಕ ಅಲ್ಲಾಹುವಿನ ತವಸ್ಸುಲ್ ಮಾಡುವುದು ಅಲ್ಲಾಹುವಿನ ಸೂಕ್ತಿಯು ಹೀಗಿದೆ:

﴿ أَنِّي مَسَّنِيَ ٱلضُّرُّ وَأَنتَ أَرۡحَمُ ٱلرَّٰحِمِينَ ٨٣ ﴾

**“ನನಗೆ ಸಂಕಷ್ಟ ಬಾಧಿಸಿದೆ ಮತ್ತು ನೀನು ಅತ್ಯಂತ ದೊಡ್ಡ ಕರುಣಾಮಯಿಯಾಗಿರುವೆ.”** [322]

5. ಜೀವಂತವಿರುವ ಹಿರಿಯರ ಮತ್ತು ಸಜ್ಜನರ ಪ್ರಾರ್ಥನೆಯ ಮೂಲಕ ಅಲ್ಲಾಹುವಿನ ತವಸ್ಸುಲ್: ಬರಗಾಲವು ಬಾಧಿಸಿದಾಗ ಸಹಾಬಿಗಳು ರಸೂಲುಲ್ಲಾಹಿ(ﷺ) ರ ಬಳಿ ಹೋಗುತ್ತಿದ್ದರು. ಪ್ರವಾದಿಯವರ ಮರಣದ ಬಳಿಕ ಅವರ ಚಿಕ್ಕಪ್ಪ ಅಬ್ಬಾಸ್ (رضي الله عنه)ರ ಬಳಿ ಹೋಗುತ್ತಿದ್ದರು. ಅವರು ಇವರಿಗಾಗಿ ಪ್ರಾರ್ಥಿಸುತ್ತಿದ್ದರು. (ಬುಖಾರಿ)

6. ತನ್ನ ತಪ್ಪುಗಳನ್ನು ಒಪ್ಪಿಕೊಳ್ಳುವುದರ ಮೂಲಕ ಅಲ್ಲಾಹುವಿನ ತವಸ್ಸುಲ್: ಅಲ್ಲಾಹು ಹೇಳುತ್ತಾನೆ:

﴿ قَالَ رَبِّ إِنِّي ظَلَمۡتُ نَفۡسِي فَٱغۡفِرۡ لِي ﴾

**“ಪ್ರವಾದಿ ಮೂಸಾ (عليه السلام) ಹೇಳಿದರು: ಓ ನನ್ನ ಪರಿಪಾಲಕನೇ ನಾನು ಸ್ವಯಂ ನನ್ನ ಮೇಲೆ ಅಕ್ರಮವೆಸಗಿರುವೆನು, ಆದ್ದರಿಂದ ನನ್ನನ್ನು ಕ್ಷಮಿಸು.”** [323]

ಎರಡು, ಶರೀಅತ್‌ಗೆ ವಿರುದ್ಧವಾದವುಗಳು;  ಮೇಲೆ ಹೇಳಿರುವ ಎಲ್ಲಾ ವಸೀಲಗಳ ಹೊರತು ಬೇರೆ ಯಾವುದೇ ರೀತಿಯ ತವಸ್ಸುಲ್‌ಗಳೂ ನಿಷೇಧಿಸಲ್ಪಟ್ಟಿವೆ. ಮೃತರೊಂದಿಗೆ ಯಾಚಿಸುವುದು, ಶಿಫಾರಸ್ಸಿನ ತವಸ್ಸುಲ್ ನಬೀ(ﷺ)ರವರ ಹಿರಿಮೆ ಗೌರವಗಳ ಮೂಲಕ ತವಸ್ಸುಲ್ ಇತ್ಯಾದಿಗಳು ನಿಷಿದ್ಧ. ತವಸ್ಸುಲ್‌ನಲ್ಲಿ ಅನೇಕ ವಿಧಗಳಿವೆ. ಅವುಗಳನ್ನು ಮುಂದೆ ಕೊಡಲಾಗಿದೆ.

ಅ) ಮೃತರೊಂದಿಗೆ ಪ್ರಾರ್ಥಿಸುವುದು ನಿಷಿದ್ಧವಾಗಿದೆ.

ಏಕೆಂದರೆ ಮೃತರು ತಾವು ಜೀವಂತವಿರುವಾಗ ಇದ್ದಂತೆ ಪ್ರಾರ್ಥನೆಯಲ್ಲಿ ಯಾವುದೇ ಸಾಮರ್ಥ್ಯ ಹೊಂದಿರುವುದಿಲ್ಲ. ಆದ್ದರಿಂದ ಮೃತರಿಂದ ಶಿಫಾರಸ್ಸನ್ನು ಯಾಚಿಸುವುದೂ ನಿಷೇಧಿಸಲ್ಪಟ್ಟಿದೆ. ಉಮರ್ ಬಿನ್ ಖತ್ತಾಬ್(رضي الله عنه) ಮುಆವಿಯ ಬಿನ್ ಅಬೀ ಸುಫ್ಯಾನ್ (رضي الله عنه)ರಂತಹ ಅನೇಕ ಸಹಾಬಿಗಳು ಮತ್ತು ತಾಬಿಈನ್‌ಗಳು ಬರಗಾಲದ ಸಮಯದಲ್ಲಿ

**321** ಕುರ್‌ಆನ್ 21:87

**322** ಕುರ್‌ಆನ್ 21:83

**323** ಕುರ್‌ಆನ್ 28:16

ಮಳೆಗಾಗಿ ತವಸ್ಸುಲ್ ಮತ್ತು ಶಿಫಾರಸ್ಸಿಗಾಗಿ ಅಬ್ಬಾಸ್(ﷺ) ಯಝೀದ್ ಬಿನ್ ಇಬ್ನುಲ್ ಅಸ್ವದ್(ﷺ) ಮುಂತಾದ ಆ ಸಮಯದಲ್ಲಿ ಜೀವಂತವಿದ್ದ ವ್ಯಕ್ತಿಗಳ ಬಳಿಗೆ ಹೋಗುತ್ತಿದ್ದರು. ಅವರು (ಸಹಾಬಿಗಳು) ರಸೂಲುಲ್ಲಾಹಿ(ﷺ)ರವರ ಮರಣ ನಂತರ ಅವರ ಗೋರಿಯ ಹತ್ತಿರವಾಗಲೀ ಅಥವಾ ಅದರ ಹೊರಗೆ ಆಗಲೀ, ಮಳೆಗಾಗಿ ಶಿಫಾರಸ್ಸು(ತವಸ್ಸುಲ್)ಗಾಗಿ ಪ್ರಾರ್ಥಿಸುತ್ತಿರಲಿಲ್ಲ. ಬದಲಾಗಿ ಆಗ ಜೀವಂತವಿದ್ದವರಾದ ಅಬ್ಬಾಸ್(ﷺ), ಹಾಗೂ ಯಝೀದ್(ﷺ) ಮುಂತಾದವರ ಬಳಿ ಹೋಗುತ್ತಿದ್ದರು. ಇಂತಹದೇ ಒಂದು ಸಂದರ್ಭದಲ್ಲಿ ಉಮರ್(ﷺ) ಹೀಗೆ ಪ್ರಾರ್ಥಿಸಿದ್ದರು.

"ಯಾ ಅಲ್ಲಾಹ್ ನಾವು ಮೊದಲು ನಮ್ಮ ಪ್ರವಾದಿಯ ಮೂಲಕ ನಿನ್ನ ಸಾಮೀಪ್ಯ ಬಯಸುತ್ತಿದ್ದೆವು. ಆಗ ನೀನು ನಮಗೆ ಮಳೆ ಬರಿಸುತ್ತಿದ್ದೆ. ಈಗ ನಾವು ಪ್ರವಾದಿಯವರ ಚಿಕ್ಕಪ್ಪರ ತವಸ್ಸುಲ್‌ನಿಂದ ಅದನ್ನು ಕೇಳುತ್ತಿದ್ದೇವೆ. ಆದ್ದರಿಂದ ನಮಗೆ ಮಳೆಯನ್ನು ನೀಡು" ಇಲ್ಲಿ ಹ. ಉಮರ್(ﷺ)ರವರು ರಸೂಲುಲ್ಲಾಹ್(ﷺ)ರ ಬದಲಿಗೆ ಅಬ್ಬಾಸ್(ﷺ) ರವರ ತವಸ್ಸುಲ್‌ಅನ್ನು ಬಯಸಿದರು. ಏಕೆಂದರೆ ಪ್ರವಾದಿ(ﷺ)ರವರ ಮರಣಾನಂತರ ಅವರ ತವಸ್ಸುಲ್ ಅನುಮತಿಸಲ್ಪಟ್ಟಿರಲಿಲ್ಲ.

ಸಹಾಬಿಗಳಿಗೆ ಪ್ರವಾದಿ(ﷺ)ರ ಪವಿತ್ರ ರೌಳಾದ ಬಳಿ ಬಂದು ಪ್ರವಾದಿ(ﷺ) ರ ತವಸ್ಸುಲ್‌ನಿಂದ ಅಲ್ಲಾಹುವಿನಲ್ಲಿ ಏನು ಬೇಕೋ ಅದನ್ನು ಯಾಚಿಸಬಹುದಿತ್ತು." (ಮಜ್‌ಮೂಲ್‌ಫತಾವಾ 1/318) ಆದರೆ ಅದು (ಮೃತರೊಂದಿಗೆ ತವಸ್ಸುಲ್) ಅನುಮತಿಸಲ್ಪಟ್ಟಿರಲಿಲ್ಲವಾದ್ದರಿಂದ ಅವರು ಅದನ್ನು ಮಾಡಲಿಲ್ಲ.

ಆದ್ದರಿಂದ ಸಹಾಬಿರವರು ಹೀಗೆ ಮಾಡಿರಲಿಲ್ಲವಾದ್ದರಿಂದ ಸ್ಪಷ್ಟವಾಗುವುದೇನೆಂದರೆ ಮೃತರ ತವಸ್ಸುಲ್ ಮಾಡಿಕೊಳ್ಳುವುದು ಧರ್ಮ ಸಮ್ಮತವಲ್ಲ. ಪ್ರಾರ್ಥನೆಯ ಮೂಲಕವಾಗಲೀ ಮತ್ತು ಅವರ ಶೀಫಾರಸ್ಸಿನ ಮೂಲಕವಾಗಲೀ ಕೂಡದು. ಒಂದು ವೇಳೆ ತವಸ್ಸುಲ್, ಶಿಫಾರಸ್ಸು ಮತ್ತು ಯಾಚನೆಯ ವಿಷಯದಲ್ಲಿ ಮೃತರು ಹಾಗೂ ಜೀವಂತರು ಸಮಾನವಾಗಿದ್ದಿದ್ದರೆ ಸಹಾಬಿಗಳು ರಸೂಲುಲ್ಲಾಹಿ(ﷺ)ರನ್ನು ಬಿಟ್ಟು ಇತರ) ಅವರ ಚಿಕ್ಕಪ್ಪರಾದ ಅಬ್ಬಾಸ್ (ರಲಿಯಲ್ಲಾಹು ಅನ್‌ಹು) ರನ್ನು ಹಿಡಿಯುತ್ತಿರಲಿಲ್ಲ. ಪ್ರವಾದಿ(ﷺ) ಅವರಿಗಿಂತ ಶ್ರೇಷ್ಟವಾಗಿದ್ದರಷ್ಟೇ. ರಸೂಲುಲ್ಲಾಹಿ(ﷺ) ಅಥವಾ ಇತರರ ಜಾಹ್ (ಗೌರವ, ಹಿರಿಮೆ ಉನ್ನತ ಸ್ಥಾನ)ದ ಮೂಲಕ ತವಸ್ಸುಲ್ ಧರ್ಮಸಮ್ಮತವಲ್ಲ.

ಇದರ ಕುರಿತು ಹೀಗೆ ಒಂದು ಹದೀಸ್ ಹೇಳಲಾಗುತ್ತದೆ.

ಮತ್ತು ನೀವು ಅಲ್ಲಾಹನೊಂದಿಗೆ ಕೇಳುವಾಗ ನನ್ನ ಜಾಹ್‌ನ್ನು ವಸೀಲ ಮಾಡಿ ಕೇಳಿರಿ. ಏಕೆಂದರೆ ನನ್ನ ಜಾಹ್ ಅಲ್ಲಾಹವಿನ ಬಳಿ ಬಹಳ ಶ್ರೇಷ್ಠವಾಗಿದೆ.

ಈ ಹದೀಸ್ ಅತೀ ದುರ್ಬಲ ಮತ್ತು ಸುಳ್ಳು ಹದೀಸ್ ಆಗಿದೆ. ಇದು ಪ್ರಾಮಾಣಿಕ ಹದೀಸ್ ಗಳಲ್ಲಿ ಸೇರುವುದಿಲ್ಲ ಅಥವಾ ಯಾವುದೇ ಮುಹದ್ದಿಸ್ ಅಥವಾ ಧರ್ಮ

ವಿದ್ವಾಂಸರು ಇದನ್ನು ಹದೀಸ್ ಎಂದು ಹೇಳಿಲ್ಲ. (ಮಜ್ ಮೂಉಲ್ ಫತಾವಾ 10/319) ಆದ್ದರಿಂದ ಇದರ ಆಧಾರದಲ್ಲಿ ಕರ್ಮ ಮಾಡಬಾರದು. ಏಕೆಂದರೆ ಆರಾಧನೆಯ ವಿಷಯದಲ್ಲಿ ಕುರ್‌ಆನ್ ಮತ್ತು ಹದೀಸ್‌ನ ಸ್ಪಷ್ಟ ಪುರಾವೆಯ ಅಗತ್ಯವಿದೆ.

ಆ) ಯಾವುದೇ ಸೃಷಿಯ ಝಾತ್ (ಅಸ್ತಿತ್ವ) ನ ತವಸ್ಸುಲ್ ಧರ್ಮಸಮ್ಮತವಲ್ಲ.

ಏಕೆಂದರೆ ಇದು ಸ್ಪಷ್ಟ ಶಿರ್ಕ್ ಆಗಿದೆ. ಸರ್ವವನ್ನು ಅರಿಯುವವನು ಆದ ಅಲ್ಲಾಹುವಿನವರೆಗೆ ತಲುಪಲು ಯಾವುದೇ ದಾಸನ ವಸೀಲ ಹಿಡಿಯುವುದು ಸರಿಯಲ್ಲ.

ಇದೇ ರೀತಿ ಅಲ್ಲಾಹು ಸೃಷ್ಟಿಯಿಂದ ಕೇಳುವುದನ್ನು ಪ್ರಾರ್ಥನೆಯ ಸ್ವೀಕಾರಕ್ಕೆ ನಿಮಿತ್ತವಾಗಿ ಮಾಡಿಲ್ಲ. ಮಾತ್ರವಲ್ಲ ತನ್ನ ದಾಸರಿಗೆ ಅದನ್ನು ಅನುಮತಿಸಿಯೂ ಇಲ್ಲ.

ಸೃಷ್ಟಿಗಳ(ಹಕ್ಕ್‌ನ) ಮೂಲಕ ತವಸ್ಸುಲ್ ಎರಡು ಕಾರಣಗಳಿಂದ ಧರ್ಮ ಸಮ್ಮತವಲ್ಲ.

1. ಅಲ್ಲಾಹನ ಮೇಲೆ ಯಾರದೇ ಯಾವುದೇ ಹಕ್ಕಿಲ್ಲ. ಬದಲಾಗಿ ಅಲ್ಲಾಹನು ತನ್ನ ಸೃಷ್ಟಿಗಳ ಮೇಲಿರುವ ಬಹಳ ಅನುಗ್ರಹಗಳ ಮೂಲಕ ಶ್ರೇಷ್ಠನಾಗಿದ್ದಾನೆ. ಅಲ್ಲಾಹುವಿನ ವಚನವು ಹೀಗಿದೆ.

﴿ وَكَانَ حَقًّا عَلَيۡنَا نَصۡرُ ٱلۡمُؤۡمِنِينَ ٤٧ ﴾

**“ಮತ್ತು ಸತ್ಯ ವಿಶ್ವಾಸಿಗಳಿಗೆ ಸಹಾಯವು ನಮ್ಮ ಹೊಣೆ ಆಗಿರುತ್ತದೆ.”** [324]

ವಿಧೇಯ ದಾಸನಿಗೆ ಸಿಗುವ ಪ್ರತಿಫಲವು ಅಲ್ಲಾಹುವಿನ ಅನುಗ್ರಹ ಮತ್ತು ಕರುಣೆಯಿಂದ ದೊರಕುವುದು. ಇದು ಸೃಷ್ಟಿಗಳ ನಡುವೆ ಇರುವಂತೆ ವ್ಯವಹಾರ ವಿನಿಮಯದ ವಿಷಯವಲ್ಲ.

2. ಅಲ್ಲಾಹನಿಂದ ಅವನ ಸೃಷ್ಟಿಗೆ ತಲುಪುವ ಹಕ್ಕು ವಿಶೇಷ ಹಕ್ಕಾಗಿದೆ. ಬೇರೆಯವರಿಗೆ ಇದರಲ್ಲಿ ಸಂಬಂಧವಿಲ್ಲ. ಆದ್ದರಿಂದ ಓರ್ವ ಹಕ್ಕುದಾರನಲ್ಲದ ವ್ಯಕ್ತಿ ಬೇರೆಯವರ ಹಕ್ಕಿನಿಂದ ತವಸ್ಸುಲ್ ಮಾಡಹೊರಟರೆ ಅದೊಂದು ಅನರ್ಥವಾದ ರೀತಿಯ ತವಸ್ಸುಲ್ ಮಾಡಲು ಹೊರಟಂತಹವನಾಗುವನು ಮತ್ತು ಇದರಿಂದ ಅವನಿಗೆ ಯಾವುದೇ ಲಾಭವಾಗದು. ಇದರ ಕುರಿತು ಹೀಗೆ ಒಂದು ಹದೀಸ್ ಕೊಡಲಾಗುತ್ತದೆ.

“ನಾನು ಕೇಳುವವರ ಹಕ್ಕಿನ ಮೂಲಕ ಬೇಡುತ್ತೇನೆ.” ಇದು ಅಧಿಕೃತವಲ್ಲ ಏಕೆಂದರೆ ಇದರ ಪರಂಪರೆಯಲ್ಲಿ ಅತಿಯ್ಯತುಲ್ ಔಫಿ ಇದ್ದಾನೆ. ಅವನು ದುರ್ಬಲನೆಂಬ ವಿಚಾರದಲ್ಲಿ ಎಲ್ಲ ವಿದ್ವಾಂಸರ ಒಮ್ಮತಾಭಿಪ್ರಾಯವಿದೆ. ಕೆಲವು ಮುಹದ್ದಿಸ್‌ಗಳು ಹೀಗೆಂದಿರುವರು : ಒಂದು ಹದೀಸ್‌ನ ಗುಣಮಟ್ಟವು ಇದಾಗಿದ್ದರೆ ಅದನ್ನು ಅಕೀದಃದಂತಹ ಗಂಭೀರ ವಿಷಯಗಳಲ್ಲಿ ಆಧಾರ ಮಾಡುವುದು ಸರಿಯಲ್ಲ. ಮಾತ್ರವಲ್ಲ ಅದರಲ್ಲಿ ಯಾವುದೇ ಪ್ರತ್ಯೇಕ ವ್ಯಕ್ತಿಯ ಹಕ್ಕಿನ ಪ್ರಸ್ತಾಪವಿಲ್ಲ. ಬದಲಾಗಿ ಸಾರ್ವತ್ರಿಕವಾಗಿ ಕೇಳುಗರ ಹಕ್ಕಿನ

---

**324** ಕುರ್‌ಆನ್ 30:47

ಸಾಮೀಪ್ಯ ನೀಡಲಾಗಿದೆ ಮತ್ತು ಕೇಳುಗರ ಹಕ್ಕೇನೆಂದರೆ ಅವರ ಆಕಾಂಕ್ಷೆಗಳು ಪೂರ್ತಿ ಮಾಡುತ್ತೇನೆಂದು ಅಲ್ಲಾಹು ಅವರಿಗೆ ವಾಗ್ದಾನವಿತ್ತಂತೆ ಆಗಿರುತ್ತದೆ.

ಮತ್ತು ಇಂತಹ ಹಕ್ಕಾಗಿದೆಯೆಂದರೆ, ಅಲ್ಲಾಹು ಅದನ್ನು ಸ್ವಯಂ ತನ್ನ ಮೇಲೆ ಕಡ್ಡಾಯಗೊಳಿಸಿರುವನೇ ಹೊರತು ಬೇರೆಯವರು ಅವನ ಮೇಲೆ ಕಡ್ಡಾಯಗೊಳಿಸಿಲ್ಲ. ಆದ್ದರಿಂದ ಅದರ ತವಸ್ಸುಲ್ ಪ್ರಾಪ್ತಿ ಮಾಡುವುದು ಸ್ವಯಂ ಅಲ್ಲಾಹುವಿನ ಸತ್ಯಪೂರ್ಣ ವಾಗ್ದಾನಗಳ ಮೂಲಕ ತವಸ್ಸುಲ್ ಪಡೆಯುವುದಾಗಿದೆಯೇ ಹೊರತು ಯಾವುದೇ ಸೃಷ್ಟಿಯ ಹಕ್ಕಿನ ಮೂಲಕವಲ್ಲ.

ಇ)ಸೃಷ್ಟಿಗಳೊಂದಿಗೆ ಇಸ್ತಿಆನ(ಕರೆದು ಪ್ರಾರ್ಥಿಸುವುದು) ಮತ್ತು ಇಸ್ತಿಗಾಸ(ಸಹಾಯ ಯಾಚನೆ)ಗಳ ಕುರಿತು ಇರುವ ವಿಧಿ:

“ಇಸ್ತಿಆನ” ಎಂದರೆ ಸಹಾಯ ಬೇಡುವಿಕೆ ಮತ್ತು ವಿಷಯದಲ್ಲಿ ಶಕ್ತಿಯನ್ನು ಪಡೆಯುವುದು .ಇಸ್ತಿಗಾಸ ಎಂದರೆ ಯಾವುದೇ ಸಂಕಷ್ಟವನ್ನು ನೀಗಿಸುವಂತೆ ಕೇಳಿಕೊಳ್ಳುವುದು ಹೀಗೆ ಸೃಷ್ಟಿಗಳೊಂದಿಗೆ ಇಸ್ತಿಆನ ಮತ್ತು ಇಸ್ತಿಗಾಸದ ಎರಡು ವಿಧಗಳಿವೆ.

1. ಸೃಷ್ಟಿಯ ಸಾಮರ್ಥ್ಯದಲ್ಲಿರುವಷ್ಟನ್ನೇ ಕೇಳುವುದನ್ನು ಅನುಮತಿಸಲಾಗಿದೆ. ಅಲ್ಲಾಹುವಿನ ವಚನವು ಹೀಗಿದೆ.

﴿ وَتَعَاوَنُوا۟ عَلَى ٱلْبِرِّ وَٱلتَّقْوَىٰ ﴾

**“ಮತ್ತು ಒಳಿತು ಮತ್ತು ಭಯಭಕ್ತಿಯ ಕಾರ್ಯಗಳಲ್ಲಿ ಪರಸ್ಪರ ಸಹಾಯ ಮಾಡಿರಿ.”** (325)

ಅಲ್ಲಾಹು ಮೂಸಾ(ﷺ)ರವರ ಘಟನೆಯಲ್ಲಿ ಹೀಗೆಂದಿರುವನು.

﴿ فَٱسْتَغَٰثَهُ ٱلَّذِى مِن شِيعَتِهِۦ عَلَى ٱلَّذِى مِنْ عَدُوِّهِۦ ﴾

**“ಮತ್ತು ಮೂಸಾನ ಗುಂಪಿನಲ್ಲಿದ್ದವ, ತನ್ನ ಶತ್ರುವಿನ ಗುಂಪಿನಲ್ಲಿದ್ದವನ ವಿರುದ್ಧ ಅವನೊಂದಿಗೆ ಸಹಾಯವನ್ನು ಯಾಚಿಸಿದನು.”** (326)

ಯುದ್ಧ ಮುಂತಾದ ಸಂದರ್ಭದಲ್ಲಿ ಒಬ್ಬ ವ್ಯಕ್ತಿಯು ತನ್ನ ಸಂಗಡಿಗರನ್ನು ಸಹಾಯಕ್ಕಾಗಿ ಕರೆಯುತ್ತಾನೆ.

2. ಸೃಷ್ಟಿಗಳ ಸಾಮರ್ಥ್ಯಕ್ಕೆ ನಿಲುಕದ್ದು ಮತ್ತು ಕೇವಲ ಅಲ್ಲಾಹುವಿಗೆ ಮಾತ್ರ ಅದರ ಸಾಮರ್ಥ್ಯವಿರುವಂತಹದ್ದನ್ನು ಸೃಷ್ಟಿಗಳೊಂದಿಗೆ ಕೇಳುವುದು. ಅಂದರೆ

---

**325** ಕುರ್‌ಆನ್ 5:2

**326** ಕುರ್‌ಆನ್ 28:15

ಮೃತರೊಂದಿಗೆ ಇಸ್ತಿಗಾಸ ಮಾಡುವುದು ಅಥವಾ ಸಹಾಯಯಾಚಿಸುವುದು ಅಥವಾ ಜೀವಂತವಿರುವವರೊಂದಿಗೆ ಅಲ್ಲಾಹುವಿಗೆ ಮಾತ್ರ ಸಾಮರ್ಥ್ಯವಿರುವಂತಹದನ್ನು ಬೇಡುವುದು. ಉದಾಹರಣೆಗೆ, ರೋಗಿ ಗುಣಮುಖವಾಗಲು ಬೇಡುವುದು, ವಿಪತ್ತುಗಳನ್ನು ದೂರಮಾಡಲು ಬೇಡುವುದು ಅಥವಾ ಕಷ್ಟಗಳನ್ನು ದೂರಮಾಡಲು ಬೇಡಿಕೊಳ್ಳುವುದು. ಇದು ಧರ್ಮ ಸಮ್ಮತವಲ್ಲ. ಇಂತಹದನ್ನು ಸೃಷ್ಟಿಗಳೊಂದಿಗೆ ಕೇಳಿಕೊಳ್ಳುವುದು ಸರಿಯಲ್ಲ. ಇದು ದೊಡ್ಡ ಶಿರ್ಕ್ ಆಗಿದೆ. ರಸೂಲುಲ್ಲಾಹಿ(ﷺ)ರ ಕಾಲದಲ್ಲಿ ಕಪಟ ವಿಶ್ವಾಸಿಯೊಬ್ಬನು ಮುಸ್ಲಿಮರಿಗೆ ಬಹಳ ತೊಂದರೆ ಕೊಡುತ್ತಿದ್ದನು. ಅವನ ಉಪಟಳವನ್ನು ನೋಡಿ ಒಬ್ಬ ಮುಸ್ಲಿಮ್ ಹೇಳಿದರು: ಇವನ ಬಗ್ಗೆ ನಾವು ಹೋಗಿ ರಸೂಲುಲ್ಲಾಹಿ(ﷺ)ರ ಬಳಿ ಇಸ್ತಿಗಾಸ ಮಾಡೋಣ. ಇದನ್ನು ಕೇಳಿ ಪ್ರವಾದಿ(ﷺ) ಹೇಳಿದರು: "ನನ್ನಿಂದ ಸಹಾಯ ಕೇಳಲಾಗುವುದಿಲ್ಲ. ಬದಲಾಗಿ ಸಹಾಯ ಯಾಚಿಸಲಾಗುವುದು ಅಲ್ಲಾಹನಿಂದ ಮಾತ್ರವಾಗಿದೆ."(ತ್ವಬ್‌ರಾನಿ)

ತಮಗೆ ಅದು ಸಾಧ್ಯವಿದ್ದರೂ ರಸೂಲುಲ್ಲಾಹಿ(ﷺ) ತಮ್ಮ ಮೇಲೆ ಇಂತಹ ಪ್ರಯೋಗಗಳನ್ನು ಬಳಸುವುದನ್ನು ಇಷ್ಟ ಪಡುತ್ತಿರಲಿಲ್ಲ. ಆದರೆ ಸಂಪೂರ್ಣ ತೌಹೀದ್‌ನ ರಕ್ಷಣೆ ಮತ್ತು ಶಿರ್ಕ್‌ನ ದಾರಿಗಳನ್ನು ಮುಚ್ಚಲು ಮತ್ತು ತನ್ನ ಪ್ರಭುವಿನ ಮುಂದೆ ಶಿಷ್ಟತೆ ಮತ್ತು ವಿನಮ್ರತೆ ಪಾಲಿಸಲಿಕ್ಕಾಗಿ ಮತ್ತು ತನ್ನ ಉಮ್ಮತ್‌ಅನ್ನು ಮಾತು ಹಾಗೂ ಕೃತಿಗಳ ಶಿರ್ಕ್‌ನಿಂದ ರಕ್ಷಿಸಲು ಹೀಗೆ ಹೇಳಿದರು.

ತನ್ನ ಜೀವಿತಾವಧಿಯಲ್ಲಿ ತನಗೆ ಸಾಧ್ಯವಿದ್ದೂ ಕೂಡಾ ಪ್ರವಾದಿ(ﷺ) ಹೀಗೆ ಹೇಳಿದ್ದರೆ ಇನ್ನು ಪ್ರವಾದಿ (ﷺ) ರವರ ಮರಣಾ ನಂತರ ಅದನ್ನು (ಇಸ್ತಿಗಾಸ) ಹೇಗೆ ಮಾಡಲು ಸಾಧ್ಯ? (ಫತ್‌ಹುಲ್ ಮಜೀದ್ 196) ಅಲ್ಲಾಹನಿಗೆ ಮಾತ್ರ ಸಾಮರ್ಥ್ಯವಿರುವ ಪ್ರವಾದಿ (ﷺ)ರಿಗೆ ಸಾಮರ್ಥ್ಯವಿಲ್ಲದ್ದನ್ನು ಅವರಿಂದ(ﷺ) ಹೇಗೆ ಕೇಳಲು ಸಾಧ್ಯ? ಇವುಗಳನ್ನು ಸೃಷ್ಟಿ ಶ್ರೇಷ್ಠರಾದ ಪ್ರವಾದಿ(ﷺ)ರವರೊಂದಿಗೇ ಅನುಮತಿಸಿಲ್ಲವಾದರೆ ಯಾವುದೇ ವಲೀ ಅಥವಾ ಸಜ್ಜನ ಅಥವಾ ಇತರರೊಂದಿಗೆ ಹೇಗೆ ಸಾಧ್ಯ?

ಭಾಗ –5

# ರಸೂಲುಲ್ಲಾಹಿ ಸಲ್ಲಲ್ಲಾಹು ಅಲೈಹಿವ ಸಲ್ಲಮ್, ಅಹ್ಲ್ ಬೈತ್ ಮತ್ತು ಸಹಾಬಿಗಳ ಕುರಿತ ವಿಶ್ವಾಸದ ಅನಿವಾರ್ಯತೆ.

ಈ ಭಾಗದಲ್ಲಿ ಈ ಎಲ್ಲಾ ಅಧ್ಯಾಯಗಳಿರುವುದು

ಅಧ್ಯಾಯ –1 :

ಅಲ್ಲಾಹನ ಸಂದೇಶವಾಹಕರು (ﷺ)ರ ಪ್ರೀತಿ ಮತ್ತು ಶ್ರೇಷ್ಠಗೊಳಿಸುವುಕೆಯ ಅನಿವಾರ್ಯತೆ ಮತ್ತು ಅದರ ಅತಿಯಾದ ಹೊಗಳುವಿಕೆಯ ನಿಷೇಧ ಮತ್ತು ಅವರ (ﷺ) ಸ್ಥಾನ, ಸಾಮರ್ಥ್ಯ,ಶ್ರೇಷ್ಠತೆಗಳಿಗೆ ವಿವರಣೆ

ಅಧ್ಯಾಯ –2 :

ಅಲ್ಲಾಹನ ಸಂದೇಶವಾಹಕ (ﷺ) ರವರ ಅನುಸರಣೆಯ ಅನಿವಾರ್ಯತೆಯ ವಿವರಣೆ.

ಅಧ್ಯಾಯ –3 : ಅಲ್ಲಾಹನ ಸಂದೇಶವಾಹಕರು (ﷺ) ರವರ ಮೇಲೆ ದರೂದ್ ಮತ್ತು ಸಲಾಮ್ ಕಳುಹಿಸುವ ರೀತಿಯ ವಿವರಣೆ.

ಅಧ್ಯಾಯ –4 :

ಪ್ರವಾದಿ ಪರಿವಾರದ ಶ್ರೇಷ್ಠತೆ : ಯಾವುದೇ ಕೊರತೆ ಮಾಡದೆ, ಅತಿಶಯ ಮಾಡದೆ ಅವರಿಗೆ ಅರ್ಹವಾದ ಸ್ಥಾನ ನೀಡುವುದರ ವಿವರಣೆ.

ಅಧ್ಯಾಯ –5 :

ಸಹಾಬಿಗಳ ಶ್ರೇಷ್ಠತೆ, ಅದರ ಬಗ್ಗೆ ಅಗತ್ಯವಾದ ವಿಶ್ವಾಸ ಮತ್ತು ಅವರ ನಡುವೆ ನಡೆದಿರುವುದರ ಬಗ್ಗೆ ಅಹ್ಲುಸುನ್ನತ್ ವಲ್ ಜಮಾಅತ್ ನ ನಿಲುವು

ಅಧ್ಯಾಯ –6 :

ಸಹಾಬಿಗಳನ್ನು ಮತ್ತು ಸನ್ಮಾರ್ಗದ ಹಿರಿಯ ಇಮಾಮರನ್ನು ತೆಗಳುವುದರ ನಿಷೇಧ.

## ಅಧ್ಯಾಯ –1

## ಸಂದೇಶವಾಹಕರು(ﷺ)ರ ಮೇಲಿನ ಪ್ರೀತಿ ಮತ್ತು ಶ್ರೇಷ್ಟಗೊಳಿಸುವುದರ ಅನಿವಾರ್ಯತೆ. ಪ್ರವಾದಿಯವರ ಅತಿಯಾದ ಹೊಗಳುವಿಕೆಯ ತಡೆ ಮತ್ತು ಅವರ ಸಾಮರ್ಥ್ಯ, ಶ್ರೇಷ್ಟತೆಯ ವಿವರಣೆ.

1. ಅಲ್ಲಾಹನ ಸಂದೇಶವಾಹಕರು(ﷺ)ರವರ ಮೇಲೆ ಪ್ರೀತಿ ಮತ್ತು ಅವರನ್ನು ಶ್ರೇಷ್ಟಗೊಳಿಸುವುದರ ಅನಿವಾರ್ಯತೆ.

ಒಬ್ಬ ದಾಸನಿಗೆ ಮೊತ್ತ ಮೊದಲನೆಯದಾಗಿ ಅಲ್ಲಾಹುವಿನ ಮೇಲೆ ಪ್ರೀತಿಯು ಕಡ್ಡಾಯವಾಗಿದೆ. ಇದು ಆರಾಧನೆಯ ಅತ್ಯಂತ ದೊಡ್ಡ ವಿಧವಾಗಿದೆ. ಅಲ್ಲಾಹು ಹೇಳುತ್ತಾನೆ.

﴿ وَٱلَّذِينَ ءَامَنُوٓاْ أَشَدُّ حُبًّا لِّلَّهِ ﴾

**“ಆದರೆ ವಿಶ್ವಾಸವಿರಿಸಿದವರು ಅಲ್ಲಾಹನನ್ನೇ ಅತೀ ಹೆಚ್ಚು ಪ್ರೀತಿಸುವವರಾಗಿರುವರು.” (327)**

ಏಕೆಂದರೆ ಸರ್ವೋನ್ನತನಾದ ಅಲ್ಲಾಹು ತನ್ನ ದಾಸರ ಪ್ರೀತಿಗೆ ಅತ್ಯಂತ ಹೆಚ್ಚು ಅರ್ಹನಾಗಿರುವನು. ಅವನು ತನ್ನ ದಾಸನನ್ನು ಎಲ್ಲಾ ಬಾಹ್ಯ ಮತ್ತು ಆಂತರಿಕ ಅನುಗ್ರಹಗಳಿಂದ ಸುಂದರಗೊಳಿಸಿದನು, ಇನ್ನು ಅಲ್ಲಾಹುವಿನ ಪ್ರೀತಿಯ ನಂತರ ಅವನ ಸಂದೇಶವಾಹಕರಾದ ಮುಹಮ್ಮದ್(ﷺ)ರವರೊಂದಿಗೆ ಪ್ರೀತಿಯು ಕಡ್ಡಾಯವಾಗಿದೆ. ಏಕೆಂದರೆ ಪ್ರವಾದಿ(ﷺ)ರು ದಾಸರನ್ನು ಅಲ್ಲಾಹುವಿನೆಡೆಗೆ ಕರೆದರು. ಅವನ ಬಗ್ಗೆ ತಿಳಿಸಿದರು. ಅವನ ಶರೀಅತ್‌ಅನ್ನು ತಲುಪಿಸಿದರು. ಅವನ ಆದೇಶಗಳನ್ನು ವಿವರಿಸಿದರು. ಮುಸ್ಲಿಮರಿಗೆ ಇಂದು ಇಹ ಪರಗಳ ಒಳಿತು ಸಿಕ್ಕಿದೆಯಾದರೆ ಅದು ಇದೇ ಸಂದೇಶವಾಹಕರ ಕೈಯಿಂದ ಸಿಕ್ಕಿದುದಾಗಿದೆ ಯಾವುದೇ ವ್ಯಕ್ತಿ ಅವರ(ﷺ) ರವರ ಅನುಸರಣೆ ಮತ್ತು ವಿಧೇಯತೆಯ ಹೊರತು ಸ್ವರ್ಗ ಪ್ರವೇಶಿಸಲಾರನು. ಒಂದು ಹದೀಸ್‌ನಲ್ಲಿ ಹೀಗಿದೆ.

«ثَلَاثٌ مَنْ كُنَّ فِيهِ وَجَدَ حَلَاوَةَ الْإِيمَانِ أَنْ يَكُونَ اللَّهُ وَرَسُولُهُ أَحَبَّ إِلَيْهِ مِمَّا سِوَاهُمَا وَأَنْ يُحِبَّ الْمَرْءَ لَا يُحِبُّهُ إِلَّا لِلَّهِ وَأَنْ يَكْرَهَ أَنْ يَعُودَ فِي الْكُفْرِ بَعْدَ أَنْ أَنْقَذَهُ اللَّهُ مِنْهُ كَمَا يَكْرَهُ أَنْ يُقْذَفَ فِي النَّارِ»

---

**327** ಕುರ್‌ಆನ್ 2:165

**“ಯಾರಲ್ಲಿ ಈ ಮೂರು ವಸ್ತುಗಳಿವೆಯೋ, ಅವನು ಈಮಾನ್‌ನ ರುಚಿಯನ್ನು ಸವಿಯುತ್ತಾನೆ. ಅವುಗಳೆಂದರೆ, ಅಲ್ಲಾಹು ಮತ್ತವನ ಸಂದೇಶವಾಹಕರು ಅವನಿಗೆ ಎಲ್ಲರಿಗಿಂತ ಪ್ರೀತಿಯುಳ್ಳವರಾಗಿರುವರು ಮತ್ತು ಯಾರನ್ನಾದರೂ ಪ್ರೀತಿಸುವುದಾದರೆ ಅಲ್ಲಾಹುವಿಗಾಗಿ ಪ್ರೀತಿಸುತ್ತಾನೆ. ಮತ್ತು ಅಲ್ಲಾಹು ಅವನನ್ನು ಸತ್ಯ ನಿಷೇಧದಿಂದ ಹೊರತೆಗೆದ ಬಳಿಕ, ಸತ್ಯ ನಿಷೇಧದೆಡೆಗೆ ಮರಳುವುದು ಅವನಿಗೆ ತನ್ನನ್ನು ಬೆಂಕಿಯಲ್ಲಿ ಹಾಕಿದಂತೆ, ಎಂಬಷ್ಟು ಅಸಹ್ಯ ಪಡುತ್ತಾನೆ.”** (328)

ಈ ಹದೀಸ್‌ನಿಂದ ತಿಳಿಯುವುದೇನೆಂದರೆ, ಅಲ್ಲಾಹು ಸಂದೇಶವಾಹಕರ(ﷺ)ರ ಮೇಲೆ ಪ್ರೀತಿಯು ಅಲ್ಲಾಹನ ಮೇಲೆ ಪ್ರೀತಿಯನ್ನು ಅನುಸರಿಸಿಕೊಂಡು ಬರುತ್ತದೆ ಮತ್ತು ಅದರೊಂದಿಗೆ ಕಡ್ಡಾಯವಾಗಿದೆ ಮತ್ತು ಶ್ರೇಷ್ಠತೆಯ ವಿಷಯದಲ್ಲಿ ಎರಡನೆಯ ಸ್ಥಾನದಲ್ಲಿದೆ.

ಪ್ರವಾದಿ(ﷺ)ರೊಂದಿಗೆ ಪ್ರೀತಿ ಮತ್ತು ಅಲ್ಲಾಹನ ಹೊರತು ಇತರ ಎಲ್ಲಾ ಪ್ರೀತಿಯ ವಸ್ತುಗಳಿಗಿಂತ ಪ್ರವಾದಿ(ﷺ)ರನ್ನು ಹೆಚ್ಚು ಪ್ರೀತಿಸುವ ಬಗ್ಗೆ ಹದೀಸ್ ಹೀಗಿದೆ.

«لَا يُؤْمِنُ أَحَدُكُمْ حَتَّى أَكُونَ أَحَبَّ إِلَيْهِ مِنْ وَلَدِهِ وَوَالِدِهِ وَالنَّاسِ أَجْمَعِينَ»

**“ನಿಮ್ಮಲ್ಲೊಬ್ಬನು ಅವನಿಗೆ ತನ್ನ ಮಕ್ಕಳು, ತನ್ನ ಮಾತಾಪಿತರು ಮತ್ತು ಸರ್ವ ಮನುಷ್ಯರಿಗಿಂತಲೂ ನಾನು ಪ್ರಿಯವಾಗುವ ತನಕ ಅವನು ಸತ್ಯ ವಿಶ್ವಾಸಿಯಾಗಲಾರನು.”** (329)

ಮತ್ತೊಂದು ಹದೀಸ್‌ನಲ್ಲಿ ‘ತನ್ನ ಜೀವಕ್ಕಿಂತಲೂ ಹೆಚ್ಚು ಪ್ರೀತಿಸಬೇಕೆಂದು ಬಂದಿದೆ ಅದು ಹೀಗಿದೆ. ‘ಹ. ಉಮರ್ ಬಿನ್ ಖತ್ತಾಬ್(ﷺ) ಒಮ್ಮೆ ಹೇಳಿದರು. ಯಾ ರಸೂಲಲ್ಲಾಹ್ ನೀವು(ﷺ) ನನ್ನ ಬಳಿ ನನ್ನ ಜೀವವನ್ನು ಬಿಟ್ಟು ಉಳಿದೆಲ್ಲ ವಸ್ತುವಿಗಿಂತ ಹೆಚ್ಚು ಪ್ರೀತಿಪಾತ್ರರು. ಆಗ ಪ್ರವಾದಿ(ﷺ) ಹೇಳಿದರು : ನನ್ನ ಆತ್ಮವು ಯಾರ ಕೈಯಲ್ಲಿದೆಯೋ ಅವನ ಆಣೆ; ಎಷ್ಟರ ತನಕ ನಾನು ನಿಮಗೆ ನಿಮ್ಮ ಜೀವಕ್ಕಿಂತ ಹೆಚ್ಚು ಪ್ರಿಯನಾಗುವುದಿಲ್ಲವೋ ಅಷ್ಟರ ತನಕ ಸತ್ಯ ವಿಶ್ವಾಸಿ ಆಗುವುದಿಲ್ಲ. ಇದನ್ನು ಕೇಳಿ ಉಮರ್(ﷺ) ಹೇಳಿದರು, ಈಗ ನೀವು ನನ್ನ ಜೀವಕ್ಕಿಂತಲೂ ಹೆಚ್ಚು ಪ್ರೀಯರು. ಆಗ ಪ್ರವಾದಿ(ﷺ) ಹೇಳಿದರು. ಈಗ, ಓ ಉಮರ್! (330)

ಇದರಿಂದ ಸ್ಪಷ್ಟವಾಗುವುದೇನೆಂದರೆ ರಸೂಲುಲ್ಲಾಹಿ(ﷺ)ರ ಮೇಲೆ ಪ್ರೀತಿಯು ಕಡ್ಡಾಯವಾಗಿದೆ ಮತ್ತು ಅಲ್ಲಾಹುವಿನ ಮೇಲೆ ಬಿಟ್ಟು ಉಳಿದೆಲ್ಲಾ ವಸ್ತುಗಳಿಗಿಂತ ಅವರ ಮೇಲೆ ಪ್ರೀತಿಯು ಮುಂಚೂಣಿಯಲ್ಲಿದೆ. ಏಕೆಂದರೆ ರಸೂಲುಲ್ಲಾಹಿ(ﷺ)ರವರ ಮೇಲೆ ಪ್ರೀತಿಯು ಅಲ್ಲಾಹುವಿನ ಮೇಲೆ ಪ್ರೀತಿಯನ್ನು ಹಿಂಬಾಲಿಸುತ್ತದೆ ಮತ್ತದು

**328** ಬುಖಾರಿ ಮುಸ್ಲಿಮ್
**329** ಬುಖಾರಿ ಮುಸ್ಲಿಮ್
**330** ಬುಖಾರಿ

ಕಡ್ಡಾಯವಾಗಿದೆ. ಅಲ್ಲದೆ, ಈ ಪ್ರೀತಿಯು ಅಲ್ಲಾಹನ ಮಾರ್ಗದಲ್ಲಿ ಮತ್ತು ಅವನಿಗಾಗಿ ಆಗಿದೆ ಮತ್ತು ಒಬ್ಬ ಸತ್ಯ ವಿಶ್ವಾಸಿಯ ಹೃದಯದಲ್ಲಿ ಅಲ್ಲಾಹುವಿನ ಮೇಲೆ ಪ್ರೀತಿಯು ಎಷ್ಟು ಹೆಚ್ಚುವುದೋ ಅಷ್ಟೇ ರಸೂಲುಲ್ಲಾಹಿ(ﷺ)ರವರ ಮೇಲೆ ಪ್ರೀತಿಯು ಹೆಚ್ಚಾಗುವುದು ಮತ್ತು ಅಲ್ಲಾಹುವಿನ ಮೇಲೆ ಪ್ರೀತಿಯು ಕಡಿಮೆಯಾದರೆ ಆತನ ಸಂದೇಶವಾಹಕರ (ﷺ)ರ ಮೇಲಿನ ಪ್ರೀತಿಯೂ ಕಡಿಮೆಯಾಗುವುದು. ಒಬ್ಬನಿಗೆ ಅಲ್ಲಾಹುವಿನ ಮೇಲೆ ಪ್ರೀತಿಯಿದ್ದರೆ ಅವನು ಅಲ್ಲಾಹನಿಗಾಗಿಯೇ ಅವನ ಸಂದೇಶವಾಹಕರ(ﷺ)ರ ಮೇಲೆಯೂ ಪ್ರೀತಿಯನ್ನಿರಿಸುವನು.

ಇನ್ನು ರಸೂಲುಲ್ಲಾಹಿ(ﷺ)ರವರ ಮೇಲಿನ ಪ್ರೀತಿಯ ಕ್ರಮವೆಂದರೆ, ನಾವು ಅವರನ್ನು ಶ್ರೇಷ್ಠಗೊಳಿಸಬೇಕು. ಆದರೆ ಗೌರವಿಸುವುದರಲ್ಲಿ ಮಿತಿ ಮೀರಬಾರದು ಮತ್ತು ಅವರನ್ನು ಅನುಸರಿಸಬೇಕು. ಅವರ ಮಾತನ್ನು ಸೃಷ್ಟಿಗಳೆಲ್ಲರ ಮಾತಿಗಿಂತ ಮುಂದೆ ಇರಿಸಬೇಕು ಮತ್ತು ಅವರ ಸುನ್ನತ್‌ಅನ್ನು ಅತ್ಯಂತ ಗೌರವಿಸಬೇಕು.

ಮಹಾ ವಿದ್ವಾಂಸರಾದ ಇಬ್ನುಲ್ ಖಯ್ಯಿಮ್(﵀) ಹೇಳುತ್ತಾರೆ. ಮನುಷ್ಯರೊಂದಿಗೆ ಪ್ರೀತಿ ಮತ್ತು ಗೌರವವು ಅಲ್ಲಾಹನೊಂದಿಗಿನ ಪ್ರೀತಿಯನ್ನು ಹಿಂಬಾಲಿಸಿಕೊಂಡು ಬಂದರೆ ಅದು ಅನುಮತಿಸಲ್ಪಡುವುದಾಗಿದೆ. ಪ್ರವಾದಿ(ﷺ)ರೊಂದಿಗಿರುವ ಗೌರವ ಮತ್ತು ಪ್ರೀತಿಯ ಹಾಗೆ, ಪ್ರವಾದಿ ಮುಹಮ್ಮದ್(ﷺ)ರವರಲ್ಲಿಯ ಪ್ರೀತಿಯು ಅವರನ್ನು ಸಂದೇಶವಾಹಕರನ್ನಾಗಿ ಕಳುಹಿಸಿದವನ ಮೇಲಿರುವ ಪರಿಪೂರ್ಣ ಪ್ರೀತಿಯಾಗಿದೆ ಮತ್ತು ಆತನಿಗೆ ನೀಡುವ ಗೌರವದ ಪರಿಪೂರ್ಣತೆಯಾಗಿದೆ. ಪ್ರವಾದಿ(ﷺ)ರ ಸಮುದಾಯವು ಆತನ ಸಂದೇಶವಾಹಕರನ್ನು ಪ್ರೀತಿಸುತ್ತದೆ. ಏಕೆಂದರೆ ಅವರು ಅಲ್ಲಾಹುವನ್ನು ಪ್ರೀತಿಸುತ್ತಾರೆ. ಪ್ರವಾದಿ(ﷺ)ರನ್ನು ಶ್ರೇಷ್ಠಗೊಳಿಸುತ್ತಾರೆ ಮತ್ತು ಗೌರವಿಸುತ್ತಾರೆ. ಪ್ರವಾದಿ (ﷺ)ರವರ ಮೇಲಿನ ಪ್ರೀತಿಯು ಅಲ್ಲಾಹುವಿನ ಪ್ರೀತಿಯ ಒಂದು ಭಾಗವಾಗಿದೆ ಅಥವಾ ಅಲ್ಲಾಹನ ಮೇಲಿನ ಪ್ರೀತಿಯ ಫಲಿತಾಂಶವಾಗಿದೆ. ನನ್ನ ಹೇಳಿಕೆಯ ಉದ್ದೇಶವೇನೆಂದರೆ, ಅಲ್ಲಾಹು ತನ್ನ ಸಂದೇಶವಾಹಕ(ﷺ)ರ ವ್ಯಕ್ತಿತ್ವದಲ್ಲಿ ಇಷ್ಟೊಂದು ಪ್ರೀತಿ, ಗೌರವ, ಗಾಂಭೀರ್ಯ ಆದರಗಳನ್ನಿಟ್ಟನೆಂದರೆ ಜನರು ತನ್ನಿಂತಾನಾಗಿಯೇ ಅವರನ್ನು ಪ್ರೀತಿಸುತ್ತಿದ್ದರು ಮತ್ತು ಭಯಪಡುತ್ತಿದ್ದರು. ಆದ್ದರಿಂದಲೇ ರಸೂಲುಲ್ಲಾಹಿ(ﷺ)ರವರು ತಮ್ಮ ಸಹಾಬಿಗಳ ಬಳಿ ಪ್ರೀತಿ ಮತು ಆದರ ಹೊಂದಿರುವಷ್ಟು ಯಾವುದೇ ಮನುಷ್ಯ ಇನ್ನೊಬ್ಬ ಮನುಷ್ಯನಿಂದ ಪ್ರೀತ್ಯಾದರ ಹೊಂದಿರಲಾರನು. ಅಮ್ರ್‌ಬಿನ್ ಆಸ್(﵁) ಇಸ್ಲಾಮ್ ಸ್ವೀಕರಿಸಿದ ಬಳಿಕ ಹೀಗೆ ಹೇಳಿದ್ದರು." ಇಸ್ಲಾಮ್ ಸ್ವೀಕರಿಸುವುದಕ್ಕಿಂತ ಮುಂಚೆ ರಸೂಲುಲ್ಲಾಹಿ(ﷺ)ರೊಂದಿಗಿದ್ದಷ್ಟು ದ್ವೇಷ ಬೇರಾರ ಮೇಲೂ ಇರಲಿಲ್ಲ. ಆದರೆ ಇಸ್ಲಾಮ್ ಸ್ವೀಕರಿಸಿದ ಬಳಿಕ ಅಲ್ಲಾಹುವಿನ ಸಂದೇಶವಾಹಕ(ﷺ)ರಷ್ಟು ಪ್ರೀತಿ ಗೌರವ ಪೂರ್ವಕ ವ್ಯಕ್ತಿ ನನಗೆ ಬೇರಾರೂ ಇರಲಿಲ್ಲ. ಒಂದು ವೇಳೆ ನನ್ನಲ್ಲಿ ಪ್ರವಾದಿ (ﷺ)ರವರನ್ನು ಪ್ರಶಂಸಿಸಲು ಹೇಳಿದರೆ ನಾನು ಏನೂ ಹೇಳಲಾರೆ ಏಕೆಂದರೆ ಪ್ರವಾದಿ

(ﷺ)ರೊಂದಿಗೆ ಅತಿಯಾದ ಗೌರವದಿಂದಾಗಿ ನನಗೆ ಅವರ ಮುಖವನ್ನು ಎಂದಿಗೂ ಪೂರ್ಣವಾಗಿ ಕಣ್ತೆರೆದು ನೋಡಲಾಗಲಿಲ್ಲ.

ಉರ್ವಬಿನ್ ಮಸ್ ಊದ್(ﷺ) ಕುರೈಶರೊಂದಿಗೆ ಹೇಳಿದ್ದರು. ಹೇ ಜನರೇ! ಅಲ್ಲಾಹನಾಣೆ ನಾನು ಕಿಸ್ರಾ ಕೈಸರ್ ಮತ್ತು ಇತರ ರಾಜರ ಆಸ್ಥಾನಗಳಿಗೆ ಹೋಗಿರುವೆ. ಆದರೆ ಮುಹಮ್ಮದ್(ﷺ)ರ ಸಂಗಾತಿಗಳು ಅವರನ್ನು ಗೌರವಿಸುವಷ್ಟು ಯಾವುದೇ ರಾಜನನ್ನೂ ಅವನ ಪ್ರಜೆಗಳು ಗೌರವಿಸಿದ್ದನ್ನು ನಾನು ಕಂಡಿಲ್ಲ. ಅಲ್ಲಾಹುವಿನಾಣೆ ಅವರ ಮೇಲಿನ ಗೌರವ ಆದರ ಮತ್ತು ಅತಿಯಾದ ಗೌರವದಿಂದಾಗಿ ಪ್ರವಾದಿ(ﷺ)ರೊಂದಿಗೆ ಅವರ ಜನರು ದೃಷ್ಟಿ ಸೇರಿಸುತ್ತಿರಲಿಲ್ಲ. ಅವರು ಉಗುಳುವಾಗ ಯಾರದಾದರೂ ಸಹಾಬಿವರ್ಯರ ಕೈಯಲ್ಲಿ ಬೀಳುತ್ತಿತ್ತು. ಅವರದನ್ನು ತಮ್ಮ ಮುಖ ಎದೆಗೆ ಒರೆಸುತ್ತಿದ್ದರು ಮತ್ತು ಪ್ರವಾದಿ(ﷺ) ವುಝೂ ಮಾಡುವಾಗ, ಆ ಜನರು ವುಝೂವಿನ ನೀರಿಗಾಗಿ ಪರಸ್ಪರ ಜಗಳವಾಡುತ್ತಿದ್ದರು." [331]

2. ಪ್ರವಾದಿ ಮುಹಮ್ಮದ್ (ﷺ) ರವರ ಪ್ರಶಂಸೆಯಲ್ಲಿ ಮಿತಿಮೀರುವಿಕೆಯ ನಿಷೇಧ.

ಅರಬಿ ಭಾಷೆಯಲ್ಲಿ 'ಗುಲು' ಎಂದರೆ ಮಿತಿಮೀರುವಿಕೆ ಎಂದಾಗಿದೆ. ಒಬ್ಬ ವ್ಯಕ್ತಿಯು ಇರುವ ಮಿತಿಯನ್ನು ಅತಿಕ್ರಮಿಸಿದರೆ ಅದಕ್ಕೆ 'ಗುಲು' ಎನ್ನಲಾಗುತ್ತದೆ. ಗುಲೂ ಮಾಡಿದನು(ಮಿತಿ ಮೀರಿದನು) ಎಂದು ಹೇಳಲಾಗುತ್ತದೆ.

ಪದವನ್ನು ಪ್ರಯೋಗಿಸಲಾಗುತ್ತದೆ. ಅಲ್ಲಾಹು ಹೇಳುತ್ತಾನೆ.

﴿لَا تَغْلُوا۟ فِى دِينِكُمْ﴾

**"ನಿಮ್ಮ ಧರ್ಮದ (ವಿಷಯದಲ್ಲಿ) ಮಿತಿಮೀರದಿರಿ."** [332]

ಮತ್ತು 'ಇತ್ವ್ರಾಅ' ಎಂದರೆ ಯಾರಾದರೂ ಹೊಗಳುವಿಕೆಯಲ್ಲಿ ಹದ್ದು ಮೀರುವುದು ಮತ್ತು ಅದರಲ್ಲಿ ಸುಳ್ಳು ಸೇರಿಸುವುದು. ಇನ್ನು ಅಲ್ಲಾಹುವಿನ ಸಂದೇಶವಾಹಕರ ವಿಷಯದಲ್ಲಿ 'ಗುಲೂ' ಎಂಬುದರ ಉದ್ದೇಶ(ತಾತ್ಪರ್ಯ) ಹದ್ದು ಮೀರುವುದು ಅಂದರೆ ಅವರನ್ನು ಅಲ್ಲಾಹುವಿನ ದಾಸ್ಯತ್ವ ಮತ್ತು ಸಂದೇಶವಾಹಕತ್ವದ ಸ್ಥಾನಕ್ಕಿಂತ ಉನ್ನತಗೊಳಿಸುವುದು ಮತ್ತು ಕೆಲವು ದೈವಿಕ ವಿಶೇಷತೆಗಳನ್ನು, ಸಿಫಾತ್‌ಗಳನ್ನು ಅವರಿಗೆ ಸಲ್ಲಿಸುವುದು ಉದಾಹರಣೆಗೆ ಅಲ್ಲಾಹನ ಹೊರತು ಅವರೊಂದಿಗೆ ಪ್ರಾರ್ಥಿಸುವುದು ಅವರ(ﷺ) ಸಹಾಯಯಾಚನೆ ಮಾಡುವುದು, ಅವರಿಂದ ಇಸ್ತಿಗಾಸ ಮಾಡುವುದು ಮತ್ತು ಅಲ್ಲಾಹನ ಹೊರತು ಅವರ(ﷺ) ಆಣೆ ಹಾಕುವುದು.

ಇದೇ ರೀತಿ ಪ್ರವಾದಿ(ﷺ)ರ ಹಕ್ಕ್‌ನಲ್ಲಿ ಮಿತಿಮೀರುವಿಕೆ ಎಂಬುದರ ತಾತ್ಪರ್ಯವೇನೆಂದರೆ ಅವರನ್ನು ಅತಿಯಾಗಿ ಪ್ರಶಂಸಿಸುವುದು. ಇದನ್ನು ಸ್ವತಃ ಪ್ರವಾದಿ

**331** ಜಲಾಉಲ್ ಅಫ್‌ಹಾಮ್ 120–121

**332** ಕುರ್‌ಆನ್ 4:171

(ﷺ)ರೇ ತಡೆದಿದ್ದರು. ಪ್ರವಾದಿ(ﷺ) ಹೀಗೆಂದಿರುವರು:

«لَا تُطْرُونِي كَمَا أَطْرَتِ النَّصَارَى ابْنَ مَرْيَمَ إِنَّمَا أَنَا عَبْدٌ فَقُولُوا عَبْدُ اللَّهِ وَرَسُولُهُ»

**“ಕ್ರೈಸ್ತರು ಮರ್ಯಮರ ಪುತ್ರನನ್ನು ಮಿತಿಮೀರಿ ಹೊಗಳಿದಂತೆ ನನ್ನನ್ನು ನೀವು ಮಿತಿಮೀರಿ ಹೊಗಳದಿರಿ. ನಿಶ್ಚಯವಾಗಿಯೂ ನಾನೊಬ್ಬ ದಾಸ ಮಾತ್ರ. ಆದ್ದರಿಂದ ನನ್ನನ್ನು ಅಲ್ಲಾಹುವಿನ ದಾಸ ಮತ್ತವನ ಪ್ರವಾದಿ ಎನ್ನಿರಿ.”** (333)

ಅಂದರೆ ನನ್ನ ಸುಳ್ಳು ಪ್ರಶಂಸೆ ಮಾಡಬೇಡಿರಿ ಮತ್ತು ನನ್ನನ್ನು ಹೊಗಳುವುದರಲ್ಲಿ ಅತಿಶಯ ಮಾಡಬೇಡಿರಿ. ಕ್ರೈಸ್ತರು ಈಸಾ (عليه السلام)ರನ್ನು ಮಾಡಿದಂತೆ, ಅವರು ಅವರನ್ನು ಉಲೂಹಿಯ್ಯತ್‌ನ ದರ್ಜೆಗೆ ಕೊಂಡುಹೋದರು. ನೋಡಿರಿ, ನನ್ನ ರಬ್ಬ್ ನನ್ನನ್ನು ಹೇಗೆ ಪ್ರಶಂಸಿಸಿರುವನೋ ಹಾಗೇ ಪ್ರಶಂಸಿಸಿರಿ. ಆದ್ದರಿಂದ ನನ್ನನ್ನು ಅಲ್ಲಾಹುವಿನ ದಾಸ ಮತ್ತು ಸಂದೇಶವಾಹಕ ಎನ್ನಿರಿ. ಒಮ್ಮೆ ಕೆಲವು ಸಹಾಬಿಗಳು ಪ್ರವಾದಿ(ﷺ)ರೊಂದಿಗೆ ಹೇಳಿದರು: ನೀವು ನಮ್ಮ ಸೈಯ್ಯಿದ್ ಆಗಿದ್ದೀರಿ. ಅದಕ್ಕೆ ಪ್ರವಾದಿ(ﷺ)ಯವರು ಹೇಳಿದರು: “ಸೈಯ್ಯಿದ್ ಅಲ್ಲಾಹು ಆಗಿದ್ದಾನೆ” ಆಗ ಅವರು ಹೇಳಿದರು. “ನಮ್ಮಲ್ಲಿ ಶ್ರೇಷ್ಠನನ್ನೂ, ಅತ್ಯಂತ ಹೆಚ್ಚು ಶಕ್ತಿವಂತರನ್ನು ಸಯ್ಯಿದ್ ಎನ್ನುತ್ತೇವೆ “ಆಗ ಪ್ರವಾದಿ(ﷺ) ಹೇಳಿದರು “ಇಂತಹ ಪ್ರಶಂಸೆಯಲ್ಲಿ ತೊಂದರೆಯಿಲ್ಲ, ನಿಮಗಿಷ್ಟ ಬಂದುದನ್ನು ಹೇಳಿರಿ, ಆದರೆ ನೋಡಿ ಈ ವಿಷಯದಲ್ಲಿ ಶೈತಾನರು ನಿಮ್ಮನ್ನು ಹದ್ದು ಮೀರಿಸದಿರಲಿ.” (334)

ಇದೇ ರೀತಿ ಕೆಲವು ಜನರು ಪ್ರವಾದಿ(ﷺ)ರೊಂದಿಗೆ ಹೀಗೆಂದರು, “ಓ ಅಲ್ಲಾಹನ ಸಂದೇಶವಾಹಕರೇ ! ಓ ನಮ್ಮೆಲ್ಲರಿಗಿಂತ ಶ್ರೇಷ್ಠರೇ, ಓ ನಮ್ಮೆಲ್ಲರಿಗಿಂತ ಉತ್ತಮರೇ, ಉತ್ತಮರ ಮಗನೇ, ಓ ನಮ್ಮ ಸರ್ದಾರರೇ ಮತ್ತು ಸರ್ದಾರರ ಮಗನೇ, ಇದನ್ನು ಕೇಳಿ ಪ್ರವಾದಿ(ﷺ) ಹೀಗೆಂದರು: “ಓ ಜನರೇ! ನನ್ನ ಕುರಿತು ನೀವು ಇಂತಹ ಮಾತುಗಳನ್ನು ಹೇಳಬಹುದು. ಆದರೆ ಶೈತಾನನು ನಿಮ್ಮನ್ನು ವಂಚಿಸದಿರಲಿ. ನಾನು ಮುಹಮ್ಮದ್ ಅಲ್ಲಾಹನ ದಾಸನಾಗಿರುವೆನು ಮತ್ತವನ ಸಂದೇಶವಾಕನಾಗಿರುವೆನು. ಅಲ್ಲಾಹು ನನ್ನನ್ನು ಇರಿಸಿದ ದರ್ಜೆಗಿಂತ ಮೇಲೆ ನೀವು ನನ್ನನ್ನು ಏರಿಸುವುದನ್ನು ನಾನು ಇಷ್ಟಪಡುವುದಿಲ್ಲ.” (335)

ರಸೂಲುಲ್ಲಾಹಿ(ﷺ)ರು ತನ್ನನ್ನು ನಮ್ಮ ಸರದಾರ ನಮ್ಮೆಲ್ಲರಲ್ಲಿ ಅತ್ಯಂತ ಒಳ್ಳೆಯವರು ನಮ್ಮೆಲ್ಲರಿಗಿಂತ ಶ್ರೇಷ್ಠ ಮತ್ತು ಮಹಾನ್ ಮುಂತಾದ ಶಬ್ದಗಳಿಂದ ಪ್ರಶಂಸಿಸುವುದನ್ನು ಇಷ್ಟಪಡಲಿಲ್ಲ. ತಾವು ನಿಜವಾಗಿಯೂ ಎಲ್ಲಾ ಸೃಷ್ಟಿಗಳಿಗಿಂತ ಅತ್ಯುತ್ತಮವಾಗಿದ್ದರೂ

333 ಬುಖಾರಿ ಮುಸ್ಲಿಮ್

334 ಅಬೂದಾವೂದ್

335 ಅಹ್ಮದ್, ನಸಾಈ

ಕೂಡಾ. ಆದರೆ ಅವರು(ﷺ) ಜನರನ್ನು ತಡೆದುದೇಕೆಂದರೆ ಜನರು ತಮ್ಮ ಬಗ್ಗೆ ಅತಿಶಯದಲ್ಲಿ ಬೀಳಬಾರದೆಂದಾಗಿತ್ತು ಮತ್ತು ತೌಹೀದ್‌ನ ರಕ್ಷಣೆಯಾಗಬೇಕು ಎಂದಾಗಿತ್ತು. ತಮ್ಮನ್ನು ಎರಡು ವಿಶೇಷಣಗಳಿಂದ ಕರೆಯಬೇಕೆಂಬುದು ಇಲ್ಲಿ ಪ್ರವಾದಿ(ﷺ) ಸೂಚಿಸಿದ್ದರು. ಇದು ಒಬ್ಬ ದಾಸನಿಗೆ ದಾಸ್ಯದ ದೊಡ್ಡ ಗೌರವವಾಗಿದೆ ಮತ್ತು ಅವುಗಳಲ್ಲಿ ಯಾವುದೇ ಹದ್ದು ಮೀರುವಿಕೆ ಇಲ್ಲ. ವಿಶ್ವಾಸಕ್ಕೆ ಯಾವುದೇ ತೊಂದರೆಯಾಗುವುದಿಲ್ಲ.

ಅದೇಂದರೆ ಅಲ್ಲಾಹುವಿನ ದಾಸ ಮತ್ತು 'ಅಲ್ಲಾಹುವಿನ ಸಂದೇಶವಾಹಕರು' ಎಂಬುವುದು ತನ್ನ ಪ್ರಭುವು ತಮ್ಮನ್ನು ಯಾವ ದರ್ಜೆಯಲ್ಲಿರಿಸಿರುವನೋ ಅದಕ್ಕಿಂತ ಮೇಲೇರಿಸಲು ಅವರು ಇಷ್ಟಪಡಲಿಲ್ಲ. ಇಂದು ಬಹಳಷ್ಟು ಜನರು ಅವರ ಮಾತಿಗೆ ವಿರುದ್ಧ ಹೋಗುತ್ತಿದ್ದಾರೆ. ಪ್ರವಾದಿ(ﷺ)ರನ್ನು ಪ್ರಾರ್ಥಿಸುತ್ತಾರೆ. ಅವರೊಂದಿಗೆ ಇಸ್ತಿಗಾಸ ಮಾಡುತ್ತಾರೆ. ಅವರ(ﷺ) ಆಣೆ ಹಾಕುತ್ತಾರೆ ಮತ್ತು ಅಲ್ಲಾಹನೊಂದಿಗೆ ಮಾತ್ರ ಕೇಳಬೇಕಾದುದನ್ನು ಪ್ರವಾದಿ(ﷺ)ರೊಂದಿಗೆ ಬೇಡುತ್ತಾರೆ. ಇಂತಹ ವೈರುಧ್ಯಗಳು ಮೀಲಾದ್, ಮಾಲೆಗಳಲ್ಲಿ, ಕವನಗಳಲ್ಲಿ, ನಅತ್(ಪದ್ಯ)ಗಳಲ್ಲಿ, ಹೇರಳವಾಗಿ ಕಂಡುಬರುತ್ತವೆ. ಇಂತಹ ಜನರಿಗೆ ಅಲ್ಲಾಹುವಿನ ಹಕ್ಕು ಮತ್ತು ರಸೂಲುಲ್ಲಾಹಿ(ﷺ)ರ ಹಕ್ಕಿನಲ್ಲಿ ಯಾವುದೇ ವ್ಯತ್ಯಾಸ ಕಾಣುವುದಿಲ್ಲ.

ವಿದ್ವಾಂಸರಾದ ಇಬ್ನ್ ಅಲ್ ಖಯ್ಯಿಮ್ ಈ ವಾಸ್ತವವನ್ನು ತನ್ನ (ನೂನಿಯ್ಯ)ದಲ್ಲಿ ಹೀಗೆಂದಿದ್ದಾರೆ.

**"ಅಲ್ಲಾಹನ ಒಂದು ಹಕ್ಕುಇದೆ. ಅದು ಬೇರೆಯವರದಾಗಲು ಸಾಧ್ಯವಿಲ್ಲ ಮತ್ತು ಅವನ ದಾಸನ ಒಂದು ಹಕ್ಕು ಇದೆ. ವಿಭಿನ್ನ ಎರಡು ಹಕ್ಕುಗಳಾದವು . ಈ ಎರಡೂ ಹಕ್ಕುಗಳನ್ನು ವ್ಯತ್ಯಾಸ ಮಾಡದೆ, ವಿವೇಚನೆಯಿಲ್ಲದೆ ಒಂದೇ ಹಕ್ಕಾಗಿ ಮಾಡಬೇಡಿರಿ."**

3. ರಸೂಲುಲ್ಲಾಹಿ(ﷺ)ರ ಸ್ಥಾನದ ವಿವರಣೆ:

ಅಲ್ಲಾಹು ಪ್ರವಾದಿ(ﷺ)ರನ್ನು ಹೇಗೆ ಪ್ರಶಂಸಿಸಿದ್ದಾನೋ ಮತ್ತು ಅವರಿಗೆ ಯಾವ ದರ್ಜೆ ನೀಡಿರುವನೋ ಅಷ್ಟೇ ಹೊಗಳಿ ಹೇಳುವುದರಲ್ಲಿ ಯಾವುದೇ ಆಕ್ಷೇಪವಿಲ್ಲ. ಸರ್ವಶ್ರೇಷ್ಠನಾದ ಅಲ್ಲಾಹು ಅವರಿಗೆ(ﷺ) ಬಹಳ ಉನ್ನತ ಸ್ಥಾನವನ್ನು ನೀಡಿರುವನು. ಅವರು (ﷺ) ಅಲ್ಲಾಹುವಿನ ದಾಸ ಹಾಗೂ ಸಂದೇಶವಾಹಕರಾಗಿರುವರು. ಅವರು ಎಲ್ಲಾ ಸೃಷ್ಟಿಗಳಿಗಿಂತ ಉತ್ತಮರೂ, ಶ್ರೇಷ್ಠರೂ ಆಗಿರುವರು. ಅವರು(ﷺ) ಎಲ್ಲಾ ಮನುಷ್ಯರಿಗೂ ಸಂದೇಶವಾಹಕರಾಗಿರುವರು. ಜಿನ್ನ್ ಹಾಗೂ ಮನುಷ್ಯ ವರ್ಗದ ಪ್ರತಿಯೊಬ್ಬರಿಗೂ ಅವರು ಪ್ರವಾದಿ ಹಾಗೂ ಸಂದೇಶವಾಹಕರಾಗಿ ಕಳುಹಿಸಲ್ಪಟ್ಟಿದ್ದಾರೆ. ಪ್ರವಾದಿ ಮುಹಮ್ಮದ್(ﷺ) ಎಲ್ಲಾ ಪ್ರವಾದಿಗಳಿಗಿಂತ ಶ್ರೇಷ್ಠರೂ ಹಾಗೂ ಕೊನೆಯವರೂ ಆಗಿರುವರು. ಅವರ(ﷺ) ಬಳಿಕ ಯಾವುದೇ ಪ್ರವಾದಿಯಿಲ್ಲ. ಪ್ರವಾದಿ(ﷺ)ವರ್ಯರ

ಎದೆಯನ್ನು ಅಲ್ಲಾಹು ತೆರೆದಿದ್ದನು. ಪ್ರವಾದಿ(ﷺ)ರ ಝಿಕ್ರ್‌ಅನ್ನು ಅಲ್ಲಾಹು ಹೆಚ್ಚಿಸಿರುವನು ಮತ್ತು ಅವರ ಆದೇಶಗಳನ್ನು ಪಾಲಿಸದವರಿಗೆ ಕಳಂಕಗಳನ್ನು ನೀಡಿರುವನು. ಪ್ರವಾದಿ (ﷺ) ಉನ್ನತ ದರ್ಜೆಯ ಅಥವಾ ಮಕಾಮು ಮಹ್ಮೂದ್‌ನ ಮಾಲೀಕರಾಗಿರುವರು. ಅಲ್ಲಾಹು ಹೇಳುತ್ತಾನೆ:

﴿ عَسَىٰٓ أَن يَبۡعَثَكَ رَبُّكَ مَقَامٗا مَّحۡمُودٗا ٧٩ ﴾

**“ಅಲ್ಲಾಹ್ ನಿಮಗೆ ಮಕಾಮೆ ಮಹ್ಮೂದ್ ನೀಡುವ ಸಾಧ್ಯತೆ ಅಧಿಕವಿದೆ.”** (336)

ಮಕಾಮುಲ್ ಮಹ್ಮೂದ್ ಎಂದರೆ ಅಲ್ಲಾಹು ಅಂತ್ಯದಿನದಂದು ಪ್ರವಾದಿ(ﷺ)ರನ್ನು ಜನರ ಶಫಾಅತ್‌ಗಾಗಿ ನಿಲ್ಲಿಸುವಂತಹ ಸ್ಥಾನ. ಜನರಿಗೆ ಅವರ ಪ್ರಭು ಈ ಸಮಯದಲ್ಲಿ ಕಷ್ಟ ಹಾಗೂ ಕಠಿಣತೆಯಿಂದ ಆರಾಮ ಒದಗಿಸಲೆಂದು ಆಗಿದೆ. ಇದು ಬಹಳ ವಿಶೇಷವಾದ ಸ್ಥಳವಾಗಿದೆ. ಇದು ಇತರ ಪ್ರವಾದಿಗಳಿಗಿಲ್ಲದ ಕೇವಲ ಪ್ರವಾದಿ (ﷺ)ರಿಗೆ ಮಾತ್ರ ದೊರಕುವುದಾಗಿದೆ. ಏಕೆಂದರೆ ಪ್ರವಾದಿ(ﷺ) ಅಲ್ಲಾಹುವನ್ನು ಅತ್ಯಂತ ಹೆಚ್ಚು ಭಯಪಡುವವರು ಧರ್ಮನಿಷ್ಠತೆ ಇರುವವರಾಗಿದ್ದಾರೆ. ಸ್ವತಃ ಅಲ್ಲಾಹುವೇ ಜನರು ಪ್ರವಾದಿ(ﷺ)ರ ಮುಂದೆ ಗಟ್ಟಿಸ್ವರದಲ್ಲಿ ಮಾತನಾಡುವುದನ್ನು ತಡೆದಿರುವನು ಮತ್ತು ಅವರ(ﷺ) ಮುಂದೆ ಸ್ವರವನ್ನು ಮೃದುಗೊಳಿಸುವವರನ್ನು ಅಲ್ಲಾಹು ಪ್ರಶಂಸಿಸಿರುವನು.

﴿ يَٰٓأَيُّهَا ٱلَّذِينَ ءَامَنُواْ لَا تَرۡفَعُوٓاْ أَصۡوَٰتَكُمۡ فَوۡقَ صَوۡتِ ٱلنَّبِيِّ وَلَا تَجۡهَرُواْ لَهُۥ بِٱلۡقَوۡلِ كَجَهۡرِ بَعۡضِكُمۡ لِبَعۡضٍ أَن تَحۡبَطَ أَعۡمَٰلُكُمۡ وَأَنتُمۡ لَا تَشۡعُرُونَ ٢ إِنَّ ٱلَّذِينَ يَغُضُّونَ أَصۡوَٰتَهُمۡ عِندَ رَسُولِ ٱللَّهِ أُوْلَٰٓئِكَ ٱلَّذِينَ ٱمۡتَحَنَ ٱللَّهُ قُلُوبَهُمۡ لِلتَّقۡوَىٰۚ لَهُم مَّغۡفِرَةٞ وَأَجۡرٌ عَظِيمٌ ٣ إِنَّ ٱلَّذِينَ يُنَادُونَكَ مِن وَرَآءِ ٱلۡحُجُرَٰتِ أَكۡثَرُهُمۡ لَا يَعۡقِلُونَ ٤ وَلَوۡ أَنَّهُمۡ صَبَرُواْ حَتَّىٰ تَخۡرُجَ إِلَيۡهِمۡ لَكَانَ خَيۡرٗا لَّهُمۡۚ وَٱللَّهُ غَفُورٞ رَّحِيمٞ ٥ ﴾

**“ಓ ಸತ್ಯ ವಿಶ್ವಾಸಿಗಳೇ ನಿಮ್ಮ ಧ್ವನಿಗಳನ್ನು ಪ್ರವಾದಿ(ﷺ)ರವರ ಸ್ವರಕ್ಕಿಂತ ಎತ್ತರಿಸಬೇಡಿರಿ. ನೀವು ಪರಸ್ಪರ ಮಾತನಾಡುವಂತೆ ಅವರೊಂದಿಗೆ ಉಚ್ಚಸ್ವರದೊಂದಿಗೆ ಮಾತನಾಡದಿರಿ. ಅನ್ಯಥಾ ನಿಮಗೆ ತಿಳಿಯದಂತೆ ನಿಮ್ಮ ಕರ್ಮಗಳು ನಿಷ್ಫಲಗೊಳ್ಳಬಹುದು. ಅಲ್ಲಾಹನ ಸಂದೇಶವಾಹಕರ ಸನ್ನಿಧಿಯಲ್ಲಿ ಸ್ವರವನ್ನು ತಗ್ಗಿಸುವವರ ಹೃದಯಗಳನ್ನು ಅಲ್ಲಾಹು ತಕ್ವಾಕ್ಕಾಗಿ (ಧರ್ಮನಿಷ್ಠೆ) ಪರೀಕ್ಷಿಸಿರುವನು. ಅವರಿಗಾಗಿ ಕ್ಷಮೆಯೂ, ಅಗಾಧವಾದ ಪ್ರತಿಫಲವೂ ಇದೆ. ಸಂದೇಶವಾಹಕರೇ ನಿಮ್ಮನ್ನು ನಿವಾಸಗಳ ಹೊರಗೆ ನಿಂತು ಕರೆಯುವವರು. ಅವರಲ್ಲಿ ಹೆಚ್ಚಿನವರು ತಿಳಿಗೇಡಿಗಳಾಗಿದ್ದಾರೆ. ಒಂದು ವೇಳೆ ಅವರು ಪ್ರವಾದಿ(ﷺ)ಸ್ವಯಂ ಹೊರಗೆ**

**336** ಕುರ್‌ಆನ್ 17:79

**ಬರುವವರೆಗೆ ತಾಳ್ಮೆ ವಹಿಸುತ್ತಿದ್ದರೆ ಅದು ಅವರಿಗೆ ಉತ್ತಮವಾಗಿತ್ತು. ಮತ್ತು ಅಲ್ಲಾಹು ಕ್ಷಮಿಸುವವನೂ, ಕರುಣಾಮಯಿಯೂ ಆಗಿರುವನು."** (337)

ಇಮಾಂ ಇಬ್ನ್ ಕಸೀರ್(ﷺ) ಹೇಳುತ್ತಾರೆ. ಈ ಆಯತ್‌ನ ಮೂಲಕ ಅಲ್ಲಾಹು ತನ್ನ ಸತ್ಯ ವಿಶ್ವಾಸಿ ದಾಸರಿಗೆ ಅಲ್ಲಾಹನ ರಸೂಲ್(ﷺ)ರವರ ಪ್ರಶಂಸೆ, ಉಜ್ವಲತೆ ಮತ್ತು ಗೌರವವನ್ನು ಹೇಳುವುದರ ಶಿಷ್ಟಾಚಾರವನ್ನು ಕಲಿಸಿರುವನು. ಅವರು ತಮ್ಮ ಪ್ರವಾದಿ(ﷺ)ರ ಮುಂದೆ ಅವರಿಗಿಂತ ಸಂದೇಶವಾಹಕರ ಧ್ವನಿಯನ್ನು ಎತ್ತರಿಸಬಾರದು. ಅವರುಗಳು ಪರಸ್ಪರ  ಹೆಸರು ಹಿಡಿದು ಕರೆಯಬಾರದು ಎಂದು ತಡೆದಿರುವನು. ಆದ್ದರಿಂದ  'ಓ ಮುಹಮ್ಮದ್' ಎಂದು ಕರೆಯಬಾರದು. ಬದಲಾಗಿ ಅವರ ಪ್ರವಾದಿತ್ವ ಮತ್ತು ಸಂದೇಶವಾಹಕತ್ವದ ಹೆಸರೆತ್ತುವ ಮೂಲಕ ಅಂದರೆ 'ಯಾ ರಸೂಲುಲ್ಲಾಹ್', 'ಯಾ ನಬೀಯಲ್ಲಾಹ್' ಎಂದು ಅವರನ್ನು(ﷺ) ಕರೆಯಲಾಗುತ್ತದೆ. ಅಲ್ಲಾಹುವಿನ ವಚನವು ಹೀಗಿದೆ:

﴿ لَّا تَجْعَلُوا۟ دُعَآءَ ٱلرَّسُولِ بَيْنَكُمْ كَدُعَآءِ بَعْضِكُم بَعْضًا ﴾

**"ಸತ್ಯ ವಿಶ್ವಾಸಿಗಳೇ ನೀವು ಒಬ್ಬರನ್ನೊಬ್ಬರು ಕರೆಯುವಂತೆ ಸಂದೇಶವಾಹಕರನ್ನು ಕರೆಯುವುದನ್ನು ಮಾಡಬೇಡಿರಿ."** (338)

ಸ್ವತಃ ದಯಾಮಯನಾದ ಅಲ್ಲಾಹನೇ ಪ್ರವಾದಿ(ﷺ)ರನ್ನು ಓ ಪ್ರವಾದಿಯೇ! ಓ ಸಂದೇಶವಾಕರೇ! ಎಂಬ ಪದಗಳಿಂದ ಸಂಬೋಧಿಸಿರುವನು. ಅಲ್ಲಾಹು ಮತ್ತು ಮಲಕ್‌ಗಳು ಪ್ರವಾದಿ(ﷺ)ರವರ ಮೇಲೆ ಸ್ವಲಾತ್ ಕಳುಹಿಸಿದ್ದಾರೆ ಮತ್ತು ಸರ್ವೋನ್ನತನಾದ ಅಲ್ಲಾಹು ಪ್ರವಾದಿ(ﷺ)ರ ಮೇಲೆ ಸ್ವಲಾತ್ –ಸಲಾಮ್ ಕಳುಹಿಸಲು ತನ್ನ ದಾಸರಿಗೆ ಆದೇಶೀಸಿರುವನು, ಅಲ್ಲಾಹು ಹೇಳುತ್ತಾನೆ.

﴿ إِنَّ ٱللَّهَ وَمَلَٰٓئِكَتَهُۥ يُصَلُّونَ عَلَى ٱلنَّبِىِّ ۚ يَٰٓأَيُّهَا ٱلَّذِينَ ءَامَنُوا۟ صَلُّوا۟ عَلَيْهِ وَسَلِّمُوا۟ تَسْلِيمًا ٥٦ ﴾

**"ನಿಶ್ಚಯವಾಗಿಯೂ ಅಲ್ಲಾಹನು ಪ್ರವಾದಿಯ ಮೇಲೆ ಅನುಗ್ರಹಗಳನ್ನು ಕಳುಹಿಸುತ್ತಾನೆ ಮತ್ತು ಅವನ ಮಲಕ್‌ದೂತರೂ ಅವರ ಮೇಲೆ ಸ್ವಲಾತ್ ಹೇಳುತ್ತಾರೆ. ಸತ್ಯ ವಿಶ್ವಾಸಿಗಳೇ! ನೀವೂ ಕೂಡಾ ಅವರ ಮೇಲೆ ಸ್ವಲಾತ್ ಮತ್ತು ಸಲಾಮ್ ಸಲ್ಲಿಸುತ್ತಲಿರಿ."** (339)

ಆದರೆ ಪ್ರವಾದಿ(ﷺ)ರ ಪ್ರಶಂಸೆಗಾಗಿ ಯಾವುದೇ ಸಮಯ  ಅಥವಾ ಯಾವುದೇ ವಿಧಾನವು ಕುರ್‌ಆನ್ ಹಾಗೂ ಸಹೀಹ್ ಹದೀಸ್‌ನಿಂದ ನಿಶ್ಚಯಿಸಲ್ಪಟ್ಟಿಲ್ಲ. ಆದರೆ ಇಂದು

**337** ಕುರ್‌ಆನ್ 49:2–5
**338** ಕುರ್‌ಆನ್ 24:63
**339** ಕುರ್‌ಆನ್ 33:56

ಜನರು ಮಿಲಾದುನ್ನಬೀ ಸಡಗರ ಉತ್ಸವಗಳನ್ನು ಮಾಡುತ್ತಾರೆ ಮತ್ತು ಆ ದಿನವನ್ನು ಪ್ರವಾದಿ(ﷺ)ರ ಜನ್ಮ ದಿನವೆಂದು ಭಾವಿಸುತ್ತಾರೆ. ಇದೊಂದು ಕೆಟ್ಟ ಬಿದ್‌ಅತ್ ಆಗಿದೆ.

ಪ್ರವಾದಿ(ﷺ)ರವರ ಪ್ರಶಂಸೆ ಮತ್ತು ಗೌರವದ ಉದ್ದೇಶವು ಅವರ ಸುನ್ನತ್‌ಅನ್ನು ಶ್ರೇಷ್ಠಗೊಳಿಸುವುದು ಮತ್ತು ಗೌರವಿಸುವುದಾಗಿದೆ. ಅದರ ಅನುಸರಣೆಯು ಅನಿವಾರ್ಯತೆಯ ಮೇಲೆ ವಿಶ್ವಾಸವಿಡುವುದಾಗಿದೆ ಮತ್ತು ಪ್ರವಾದಿಚರ್ಯೆಯು ಪವಿತ್ರ ಕುರ್‌ಆನ್‌ನ ಬಳಿಕ ಶ್ರೇಷ್ಠತೆ, ಗೌರವದಲ್ಲಿ ಎರಡನೆಯ ಸ್ಥಾನದಲ್ಲಿದೆ ಮತ್ತು ಅನುಸರಣಾಯೋಗ್ಯವಾದುದಾಗಿದೆ. ಏಕೆಂದರೆ ಸುನ್ನತ್ ಕೂಡಾ ಅಲ್ಲಾಹುವಿನ 'ವಹೀ' (ದಿವ್ಯವಾಣಿ) ಆಗಿದೆ. ಸರ್ವೋನ್ನತನಾದ ಅಲ್ಲಾಹು ಹೇಳುತ್ತಾನೆ:

﴿ وَمَا يَنطِقُ عَنِ ٱلْهَوَىٰٓ ﴿٣﴾ إِنْ هُوَ إِلَّا وَحْىٌ يُوحَىٰ ﴿٤﴾ ﴾

**"ಅವರು ದೇಹೇಚ್ಛೆಯ ಬಾಯಿಯಿಂದ ಮಾತನಾಡುವುದಿಲ್ಲ. ಇದು(ಕುರ್‌ಆನ್) ಅಂತರ್ಜ್ಞಾನ ನೀಡಲಾಗುತ್ತಿರುವ ದಿವ್ಯವಾಣಿಯಾಗಿದೆ."** (340)

ಆದ್ದರಿಂದ ಸುನ್ನತ್‌ನಲ್ಲಿ ಸಂಶಯ ಹುಟ್ಟಿಸುವುದು, ಅದರ ಗೌರವವನ್ನು ಕಡಿಮೆ ಮಾಡಲು ಪ್ರಯತ್ನಿಸುವುದು ಹರಾಮ್ ಆಗಿದೆ.

ವಿಶೇಷವಾಗಿ ಇಂದಿನ ಯುವಕರು ರಸೂಲುಲ್ಲಾಹಿ(ﷺ)ರ ಸುನ್ನತ್ ಕುರಿತು ತಮ್ಮ ನಾಲಗೆ ತೂರಿಸುತ್ತಾರೆ. ಹದೀಸ್‌ಗಳನ್ನು ದುರಸ್ತಿ ಮಾಡಲು ತೊಡಗಿರುವರು ಮತ್ತು ಕೇವಲ ಹದೀಸ್ ಓದುವಿಕೆಯ ಬಲದಿಂದ ಹೇಳುತ್ತಾರೆ. ಆದರೆ ವರದಿಗಾರರನ್ನು ಆಕ್ಷೇಪಿಸತೊಡಗುತ್ತಾರೆ. ಇದು ಸ್ವತಃ ಅವರಿಗೆ ಮತ್ತು ಸಮುದಾಯಕ್ಕೆ ದೊಡ್ಡ ಅಪಾಯವಾಗಿದೆ. ಅವರು ಅಲ್ಲಾಹನನ್ನು ಭಯಪಡುವುದು ಮತ್ತು ತಮ್ಮ ಮಿತಿಯನ್ನು ಮೀರದಿರುವುದು ಕಡ್ಡಾಯವಾಗಿದೆ.

## ಅಧ್ಯಾಯ –2

# ಪ್ರವಾದಿ(ﷺ)ರವರ ಅನುಸರಣೆಯ ಅನಿವಾರ್ಯ ವ್ಯಾಖ್ಯಾನ

ಪ್ರವಾದಿ(ﷺ)ರ ಅನುಸರಣೆಯು ಎಲ್ಲಾ ಪರಿಸ್ಥಿತಿಯಲ್ಲೂ ಕಡ್ಡಾಯವಾಗಿದೆ. ಆದ್ದರಿಂದ ಅವರ ಆದೇಶಗಳನ್ನು ಪಾಲಿಸುವುದು ಮತ್ತು ಪ್ರವಾದಿ(ﷺ)ರು ನಿಷೇಧಿಸಿರುವುದರಿಂದ ದೂರವಿರುವುದು ಕಡ್ಡಾಯವಾಗಿದೆ. ಅವರನ್ನು ಅಲ್ಲಾಹನ ಸಂದೇಶವಾಹಕರು ಎಂದು ಒಪ್ಪಿಕೊಳ್ಳುವುದರ ಬೇಡಿಕೆಯು ಇದೇ ಆಗಿದೆ. ಸರ್ವೋನ್ನತನಾದ ಅಲ್ಲಾಹು ಅನೇಕ ಸೂಕ್ತಿಗಳಲ್ಲಿ ಪ್ರವಾದಿ(ﷺ)ರ ಅನುಸರಣೆಯ ಆದೇಶ ನೀಡಿದ್ದಾನೆ. ಕೆಲವೊಮ್ಮೆ ಅಲ್ಲಾಹುವಿನ ಅನುಸರಣೆಯ ಜೊತೆಗೂ ಬಂದಿದೆ.

---

**340** ಕುರ್‌ಆನ್ 53:3–4

﴿ يَٰٓأَيُّهَا ٱلَّذِينَ ءَامَنُوٓاْ أَطِيعُواْ ٱللَّهَ وَأَطِيعُواْ ٱلرَّسُولَ ﴾

**"ಓ ಸತ್ಯ ವಿಶ್ವಾಸಿಗಳೇ! ಅಲ್ಲಾಹನನ್ನು ಅನುಸರಿಸಿರಿ, ಅವನ ಸಂದೇಶವಾಹಕರನ್ನು ಅನುಸರಿಸಿರಿ"** (341)

ಮತ್ತು ಕೆಲವೊಮ್ಮೆ ಪ್ರತ್ಯೇಕವಾಗಿಯೂ ಪ್ರವಾದಿ(ﷺ)ರವರನ್ನು ಅನುಸರಿಸಲು ಆದೇಶ ನೀಡಿದ್ದಾನೆ.

ಅಲ್ಲಾಹುವಿನ ವಚನವು ಹೀಗಿದೆ:

﴿ مَّن يُطِعِ ٱلرَّسُولَ فَقَدۡ أَطَاعَ ٱللَّهَ ﴾

**"ಯಾರು ಸಂದೇಶವಾಹಕರನ್ನು ಅನುಸರಿಸಿರಿಸಿದನೋ ಅವನು ಅಲ್ಲಾಹನನ್ನು ಅನುಸರಿಸಿದನು"** (342)

ಇನ್ನೊಂದು ಕಡೆಯಲ್ಲಿ ಹೀಗಿದೆ.

﴿ وَأَطِيعُواْ ٱلرَّسُولَ لَعَلَّكُمۡ تُرۡحَمُونَ ٥٦ ﴾

**"ಮತ್ತು ಸಂದೇಶವಾಹಕರನ್ನು ಅನುಸರಿಸಿರಿ, ನೀವು ಕರುಣೆ ತೋರಲ್ಪಡಬಹುದು."** (343)

ಮತ್ತು ಅಲ್ಲಾಹನ ಸಂದೇಶವಾಹಕರನ್ನು ಅನುಸರಿಸದಿರುವವರಿಗೆ ಶಿಕ್ಷೆಯ ಎಚ್ಚರಿಕೆ ನೀಡಲಾಗಿದೆ ಅಲ್ಲಾಹು ಹೇಳುತ್ತಾನೆ.

﴿ فَلۡيَحۡذَرِ ٱلَّذِينَ يُخَالِفُونَ عَنۡ أَمۡرِهِۦٓ أَن تُصِيبَهُمۡ فِتۡنَةٌ أَوۡ يُصِيبَهُمۡ عَذَابٌ أَلِيمٌ ٦٣ ﴾

**"ಮತ್ತು ಯಾರು ಅವರ ಆದೇಶವನ್ನು ತಿರಸ್ಕರಿಸುತ್ತಾರೋ ಅವರು ತನ್ನ ಮೇಲೆ ಯಾವುದೇ ವಿಪತ್ತು ಬೀಳಬಹುದು ಅಥವಾ ಸಂಕಷ್ಟಭರಿತ ಶಿಕ್ಷೆಯು ಇಳಿಯಬಹುದು ಎಂದು ಭಯಪಡಲಿ."** (344)

ಅಂದರೆ ಅವರ ಹೃದಯಗಳಲ್ಲಿ ಕುಫ್ರ್, ಕಪಟವಿಶ್ವಾಸ ಮತ್ತು ಬಿದ್‌ಅತ್, ಫಿತ್ನಗಳು ಹುಟ್ಟುವುವು ಅಥವಾ ಇಹಲೋಕದಲ್ಲೇ ಯಾವುದಾದರೂ ವೇದನಾಯುಕ್ತ ಶಿಕ್ಷೆಯು ಎರಗುವುದು. ಒಂದೋ ಹತ್ಯೆ ಅಥವಾ ಹದ್ ಅಥವಾ ಬಂಧನ ಅಥವಾ ಬೇರೆ ತಕ್ಷಣ ಬರುವ ಶಿಕ್ಷೆಗಳು. ಅತ್ಯುನ್ನತನಾದ ಅಲ್ಲಾಹು ಪ್ರವಾದಿ(ﷺ)ರ ಅನುಸರಣೆ ಹಾಗೂ ಇತ್ತಿಬಾಅನ್ನು ದಾಸನೊಂದಿಗೆ ತನ್ನ ಪ್ರೀತಿ ಮತ್ತು ಅವನ ಪಾಪಗಳಿಗೆ 'ಕ್ಷಮೆ'ಯ

**341** ಕುರ್‌ಆನ್ 4:59
**342** ಕುರ್‌ಆನ್ 4:80
**343** ಕುರ್‌ಆನ್ 24:56
**344** ಕುರ್‌ಆನ್ 24:63

ಕಾರಣವನ್ನಾಗಿ ಮಾಡಿರುವನು.

ಅಲ್ಲಾಹು ಹೇಳುತ್ತಾನೆ:

﴿ قُلْ إِن كُنتُمْ تُحِبُّونَ ٱللَّهَ فَٱتَّبِعُونِى يُحْبِبْكُمُ ٱللَّهُ وَيَغْفِرْ لَكُمْ ذُنُوبَكُمْ ﴾

**"(ಓ ಪ್ರವಾದಿಯೇ) ಹೇಳಿರಿ! ನೀವು ಅಲ್ಲಾಹನನ್ನು ಪ್ರೀತಿಸುವುದಾದರೆ ನನ್ನನ್ನು ಅನುಸರಿಸಿರಿ, ಅಲ್ಲಾಹು ಕೂಡಾ ನಿಮ್ಮನ್ನು ಪ್ರೀತಿಸುವನು ಮತ್ತು ನಿಮ್ಮ ತಪ್ಪುಗಳನ್ನು ಕ್ಷಮಿಸುವನು."** (345)

ಅಲ್ಲಾಹನು ಪ್ರವಾದಿ(ﷺ)ರ ಅನುಸರಣೆಯನ್ನು ಸನ್ಮಾರ್ಗವೆಂದೂ ಅವರ ಅನುಸರಣೆ ಮಾಡದಿರುವುದನ್ನು ಪಥಭ್ರಷ್ಠತೆ ಎಂದೂ ವಿಧಿಸಿರುತ್ತಾನೆ. ಅಲ್ಲಾಹುವಿನ ವಚನವು ಹೀಗಿದೆ.

﴿ وَإِن تُطِيعُوهُ تَهْتَدُوا۟ ﴾

**"ಒಂದು ವೇಳೆ ನೀವು ಅವರನ್ನು ಅನುಸರಿಸಿದರೆ ನೇರ ಮಾರ್ಗ ಪಡೆಯುವಿರಿ."** (346)

﴿ فَإِن لَّمْ يَسْتَجِيبُوا۟ لَكَ فَٱعْلَمْ أَنَّمَا يَتَّبِعُونَ أَهْوَآءَهُمْ ۚ وَمَنْ أَضَلُّ مِمَّنِ ٱتَّبَعَ هَوَىٰهُ بِغَيْرِ هُدًى مِّنَ ٱللَّهِ ۚ إِنَّ ٱللَّهَ لَا يَهْدِى ٱلْقَوْمَ ٱلظَّٰلِمِينَ ﴿٥٠﴾ ﴾

**"ಒಂದು ವೇಳೆ ಇವರು ನಿಮ್ಮ ಮಾತನ್ನು ಸ್ವೀಕರಿಸದಿದ್ದರೆ ತಿಳಿದುಕೊಳ್ಳಿರಿ, ಇವರು ತಮ್ಮ ದೇಹೇಚ್ಛೆಗಳನ್ನು ಅನುಸರಿಸುತ್ತಾರೆ ಮತ್ತು ಅಲ್ಲಾಹುವಿನ ಸನ್ಮಾರ್ಗವನ್ನು ಬಿಟ್ಟು ತಮ್ಮ ದೇಹೇಚ್ಛೆಗಳನ್ನು ಹಿಂದೆ ಹೋಗುವವನಿಗಿಂತ ಹೆಚ್ಚು ದಾರಿ ತಪ್ಪಿದವನು ಯಾರಿರಬಹುದು? ನಿಶ್ವಯವಾಗಿಯೂ ಅಲಾಹು ಅಕ್ರಮಿಗಳಿಗೆ ಸನ್ಮಾರ್ಗ ತೋರಿಸುವುದಿಲ್ಲ."** (347)

ಪ್ರವಾದಿ (ﷺ) ರಲ್ಲಿ ಸಮುದಾಯಕ್ಕಾಗಿ ಒಂದು ಅತ್ಯುತ್ತಮ ಮಾದರಿಯಿದೆ ಎಂದು ಅಲ್ಲಾಹ್ ತಿಳಿಸಿದ್ದಾನೆ.

﴿ لَّقَدْ كَانَ لَكُمْ فِى رَسُولِ ٱللَّهِ أُسْوَةٌ حَسَنَةٌ لِّمَن كَانَ يَرْجُوا۟ ٱللَّهَ وَٱلْيَوْمَ ٱلْءَاخِرَ وَذَكَرَ ٱللَّهَ كَثِيرًا ﴿٢١﴾ ﴾

**"ನಿಮಗೆ ಅಲ್ಲಾಹುವಿನ ಸಂದೇಶವಾಹಕರಲ್ಲಿ ಅತ್ಯುತ್ತಮ ಮಾದರಿಯಿದೆ. ಅಲ್ಲಾಹುವಿನ (ಭೇಟಿಯಾಗುವ) ಮತ್ತು ಅಂತ್ಯದಿನದ ಆಕಾಂಕ್ಷೆಯುಳ್ಳವನಿಗೆ ಮತ್ತು ಅಲ್ಲಾಹುವನ್ನು ಅತ್ಯಧಿಕ**

---

**345** ಖುರ್‌ಆನ್ 3:31

**346** ಖುರ್‌ಆನ್ 24:54

**347** ಖುರ್‌ಆನ್ 28:50

**ಸ್ಮರಿಸುವವನಿಗೆ.”** (348)

ವಿದ್ವಾಂಸರಾದ ಇಬ್ನ್ ಕಸೀರ್ ಹೇಳುತ್ತಾರೆ. “ಈ ಸೂಕ್ತಿಯು ಅವರ(ﷺ) ಎಲ್ಲಾ ಮಾತುಗಳು, ಕೃತಿಗಳನ್ನು ಮತ್ತು ಸ್ಥಿತಿಗಳನ್ನು ಮಾದರಿಯಾಗಿ ಮಾಡುವುದಕ್ಕೆ ಅತ್ಯಂತ ದೊಡ್ಡ ಆಧಾರವಾಗಿದೆ. ಆದ್ದರಿಂದಲೇ ಅಲ್ಲಾಹು ಅಹ್‌ಝಾಬ್‌ನ ದಿನದಂದು ಜನರಿಗೆ ಆದೇಶೀಸಿರುವುದೇನೆಂದರೆ ಸಹನೆ ಮತ್ತು ದೃಢತೆ ಸಂಘರ್ಷ ಮತ್ತು ಪರಿಶ್ರಮ ಮತ್ತು ಸರ್ವಲೋಕ ಪರಿಪಾಲಕನ ಕಡೆಯಿಂದ ಸುಲಭತೆ ಮತ್ತು ವೈಶಾಲತೆಯ ನಿರೀಕ್ಷೆಯಲ್ಲಿ ಅವರನ್ನು(ﷺ) ತಮ್ಮ ಅತ್ಯುತ್ತಮ ಮಾದರಿಯನ್ನಾಗಿ ಮಾಡಬೇಕು ಮತ್ತು ಖಿಯಾಮತ್ ದಿನದವರೆಗೆ ಪ್ರವಾದಿ(ﷺ)ರ ಜೀವನವನ್ನು ಮಾದರಿಯಾಗಿ ಮಾಡಬೇಕೆಂದಾಗಿದೆ. ಅಲ್ಲಾಹನ ಸಂದೇಶವಾಹಕ(ﷺ)ರನ್ನು ಅನುಸರಿಸಬೇಕೆಂದು ಅಲ್ಲಾಹು ಕುರ್‌ಆನ್‌ನಲ್ಲಿ ನಲ್ವತ್ತು ಕಡೆಗಳಲ್ಲಿ ಹೇಳಿರುವನು. ಜನರಿಗೆ ಪ್ರವಾದಿ(ﷺ)ರವರು ತಂದಂತಹ ಸುನ್ನತ್–ಶರೀಅತ್‌ನ ಅರಿವು ಮತ್ತು ಅದರ ಅನುಸರಣೆಯು ಆಹಾರ ಪಾನೀಯಕ್ಕಿಂತಲೂ ಹೆಚ್ಚು ಅಗತ್ಯವುಳ್ಳದ್ದಾಗಿದೆ. ಏಕೆಂದರೆ ಆಹಾರವಿಲ್ಲದೆ ಮನುಷ್ಯ ಸಾಯುತ್ತಾನೆ. ಆದರೆ ಪ್ರವಾದಿ(ﷺ) ಅನುಸರಣೆಯು ಇಲ್ಲದಿದ್ದರೆ ಅವನು ಯಾತನಾಯಮಯವಾದ ಶಿಕ್ಷೆಗೆ ಮತ್ತು ಸದಾಕಾಲದ ದೌರ್ಭಾಗ್ಯಕ್ಕೆ ಗುರಿಯಾಗುವನು. ಈ ಕಾರಣದಿಂದಲೇ ಅಲ್ಲಾಹನ ಸಂದೇಶವಾಹಕರು(ﷺ) ಎಲ್ಲಾ ಆರಾಧನೆಗಳಲ್ಲಿ ತಮ್ಮನ್ನು ಅನುಸರಿಸಲು ಮತ್ತು ಅದೇ ರೀತಿಯಲ್ಲೇ ಆರಾಧನೆಯನ್ನು ಮಾಡಲು ಆದೇಶೀಸಿದ್ದಾರೆ.

ಪ್ರವಾದಿಯವರ ವಚನವು ಹೀಗಿದೆ.

«صَلُّوا كَمَا رَأَيْتُمُونِي أُصَلِّي»

**“ನಾನು ನಮಾಝ್ ಮಾಡಿರುವುದನ್ನು ನೀವು ಹೇಗೆ ಕಂಡಿರುವಿರೋ ಹಾಗೆಯೇ ನಮಾಝ್ ಮಾಡಿರಿ.”** (349)

ಮತ್ತೊಂದು ಕಡೆಯಲ್ಲಿ ಹೇಳಿರುವರು:

«خُذُوا عَنِّي مَنَاسِكَكُمْ»

**“ನನ್ನಿಂದ ನಿಮ್ಮ ಹಜ್ಜ್‌ನ ನಿರ್ದೇಶನ ತೆಗೆದುಕೊಳ್ಳಿ.”** (350)

ಇನ್ನೊಂದು ಕಡೆಯಲ್ಲಿ ಹೇಳಿರುವರು,

«مَنْ أَحْدَثَ فِي أَمْرِنَا هَذَا مَا لَيْسَ مِنْهُ فَهُوَ رَدٌّ»

348 ಕುರ್‌ಆನ್ 33:21

349 ಬುಖಾರಿ

350 ಮುಸ್ಲಿಮ್

**"ಒಬ್ಬ ವ್ಯಕ್ತಿಯು ಒಂದು ಕಾರ್ಯವನ್ನು ಮಾಡಿದರೆ ಮತ್ತು ಅದರಲ್ಲಿ ನಮ್ಮ ಆದೇಶವಿಲ್ಲದಿದ್ದರೆ ಅದು ತಿರಸ್ಕೃತವಾದುದು."** (351)

«مَنْ رَغِبَ عَنْ سُنَّتِي فَلَيْسَ مِنِّي»

**"ಯಾರಾದರೂ ನನ್ನ ಸುನ್ನತ್‌ನಿಂದ ಮುಖ ತಿರುಗಿಸುತ್ತಾನೋ ಅವನು ನನ್ನವನಲ್ಲ."** (352)

ಇದು ಮಾತ್ರವಲ್ಲ, ಪ್ರವಾದಿ (ﷺ) ರನ್ನು ಅನುಸರಿಸಲು, ಅವರ (ﷺ) ರ ಅವಿಧೇಯತೆಯಿಂದ ದೂರವಿರಲು ಅನೇಕ ಆಧಾರಗಳಿವೆ.

## ಅಧ್ಯಾಯ –3

## ರಸೂಲುಲ್ಲಾ(ﷺ)ರ ಮೇಲೆ ಸ್ವಲಾತ್ ಸಲಾಮ್ ಕಳುಹಿಸುವ ಕ್ರಮದ ವಿವರಣೆ

ರಸೂಲುಲ್ಲಾಹಿ(ﷺ)ರವರ ಮೇಲೆ ಸ್ವಲಾತ್ ಸಲಾಮ್ ಕಳುಹಿಸುವುದು ಅವರ(ﷺ) ಸಮುದಾಯದ ಹಕ್ಕಾಗಿದೆ.

ಅಲ್ಲಾಹು ಹೇಳುತ್ತಾನೆ:

﴿ إِنَّ ٱللَّهَ وَمَلَٰٓئِكَتَهُۥ يُصَلُّونَ عَلَى ٱلنَّبِيِّۚ يَٰٓأَيُّهَا ٱلَّذِينَ ءَامَنُواْ صَلُّواْ عَلَيْهِ وَسَلِّمُواْ تَسْلِيمًا ٥٦ ﴾

**"ನಿಶ್ಚಯವಾಗಿಯೂ ಅಲ್ಲಾಹನು ಪ್ರವಾದಿಯ ಮೇಲೆ ಅನುಗ್ರಹಗಳನ್ನು ಕಳುಹಿಸುತ್ತಾನೆ ಮತ್ತು ಅವನ ಮಲಕ್‌ದೂತರೂ ಅವರ ಮೇಲೆ ಸ್ವಲಾತ್ ಹೇಳುತ್ತಾರೆ. ಸತ್ಯ ವಿಶ್ವಾಸಿಗಳೇ! ನೀವೂ ಕೂಡಾ ಅವರ ಮೇಲೆ ಸ್ವಲಾತ್ ಮತ್ತು ಸಲಾಮ್ ಸಲ್ಲಿಸುತ್ತಲಿರಿ."** (353)

ಅಲ್ಲಾಹುವಿನ ಸ್ವಲಾತ್ ಅಂದರೆ ತನ್ನ ಪ್ರವಾದಿಯನ್ನು ಮಲಕ್‌ದೂತರ ಸಮ್ಮುಖದಲ್ಲಿ ಪ್ರಶಂಸಿಸುವುದಾಗಿದೆ. ಮಲಕ್‌ಗಳ ಸ್ವಲಾತ್ ಎಂದರೆ ದುಆ ಮತ್ತು ಜನರ ಸ್ವಲಾತ್‌ನ ಅರ್ಥವು ಇಸ್ತಿಗ್‌ಫಾರ್(ಕ್ಷಮೆ) ಆಗಿದೆಯೆಂದು ವರದಿಯಾಗಿದೆ. ಈ ಪವಿತ್ರ ಆಯತ್‌ನಲ್ಲಿ ಅಲ್ಲಾಹು ಅವನ ನಬೀ, ರಸೂಲ್‌ರ ಬಗ್ಗೆ ತನ್ನ ಹತ್ತಿರದ ಮಲಕ್‌ದೂತರಲ್ಲಿ ಯಾವ ಸ್ಥಾನವಿದೆ. ಎಂಬುದನ್ನು ತಿಳಿಸುತ್ತಾನೆ ಮತ್ತು ಅಲ್ಲಾಹು ಅವರ ಮುಂದೆ ಪ್ರವಾದಿ(ﷺ)

**351** ಬುಖಾರಿ ಮುಸ್ಲಿಮ್

**352** ಬುಖಾರಿ ಮುಸ್ಲಿಮ್

**353** ಕುರ್‌ಆನ್ 33:56

ರನ್ನು ಪ್ರಶಂಸಿಸುತ್ತಾನೆ ಮತ್ತು ಮಲಕ್ ಗಳು ಅವರ(ﷺ) ಮೇಲೆ ಸ್ವಲಾತ್ ಅನ್ನು ಕಳುಹಿಸುತ್ತಾರೆ. ಇನ್ನು ಸರ್ವಶ್ರೇಷ್ಠನಾದ ಅಲ್ಲಾಹು ಲೋಕದ ಜನರಿಗೆ ಪ್ರವಾದಿ(ﷺ)ರ ಮೇಲೆ ಸ್ವಲಾತ್ ಮತ್ತು ಸಲಾಮ್ ಅನ್ನು ಕಳುಹಿಸಲು ಆದೇಶಿಸಿದ್ದಾನೆ. ಏಕೆಂದರೆ ಆಕಾಶದಲ್ಲಿರುವ ಮತ್ತು ಭೂಮಿಯಲ್ಲಿರುವವರ ಪ್ರಶಂಸೆಗಳು ಒಟ್ಟು ಸೇರಲೆಂದಾಗಿದೆ. ಅಂದರೆ ಪ್ರವಾದಿ(ﷺ)ರ ಮೇಲೆ ಇಸ್ಲಾಮೀ ಸಲಾಮ್‌ಅನ್ನು ಕಳುಹಿಸಿರಿ. ಆದ್ದರಿಂದ ಯಾರಾದರೂ ಅವರಿಗೆ ಸಲಾಮ್ ಕಳುಹಿಸುವಾಗ ಸ್ವಲಾತ್ ಸಲಾಮ್ ಎರಡನ್ನೂ ಕಳುಹಿಸಲಿ. ಒಂದನ್ನು ಮಾತ್ರ ಮಾಡದಿರಲಿ. ಅಂದರೆ ಕೇವಲ 'ಸಲ್ಲಲ್ಲಾಹು ಅಲೈಹಿ' ಎಂದು ಮಾತ್ರ ಹೇಳದಿರಲಿ ಅಥವಾ ಕೇವಲ 'ಅಲೈಹಿಸ್ಸಲಾಮ್' ಎಂದು ಮಾತ್ರ ಹೇಳದಿರಲಿ. ಏಕೆಂದರೆ ಅಲ್ಲಾಹು ಇವೆರಡನ್ನೂ ಜೊತೆಜೊತೆಗೇ ಕಳುಹಿಸಲು ಹೇಳಿರುವನು.

ಪ್ರವಾದಿ(ﷺ)ರ ಮೇಲೆ ಸ್ವಲಾತ್ ಸಲಾಮ್ ಕಳುಹಿಸುವ ಆದೇಶವು ಇಂತಹ ಸ್ಥಳಗಳಲ್ಲಿ ಬಂದಿದೆಯೆಂದರೆ ಇದರಿಂದ ಪ್ರವಾದಿ(ﷺ)ರವರ ಮೇಲೆ ಸ್ವಲಾತ್ ಮತ್ತು ಸಲಾಮ್ ಕಳಿಸುವುದು ಕಡ್ಡಾಯವಾಗಿದೆ ಅಥವಾ ಸುನ್ನತೆ ಮುಅಕ್ಕದ: ಅಥವಾ ಅತೀ ಪ್ರಬಲ ಸುನ್ನತ್' ಆಗಿದೆಯೆಂದು ತಿಳಿಯಬಹುದು.

ಅಲ್ಲಾಮ ಇಬ್ನುಲ್ ಖಯ್ಯಿಮ್ ತನ್ನ 'ಜಲಾಉಲ್ ಅಫ್‌ಹಾಮ್' ಎಂಬ ಗ್ರಂಥದಲ್ಲಿ ಪ್ರವಾದಿ(ﷺ)ರವರ ಮೇಲೆ ಸ್ವಲಾತ್ ಹೇಳುವುದು ಅನಿವಾರ್ಯ ಎಂಬಂತಹ ನಲ್ವತ್ತೊಂದು ಸ್ಥಳಗಳನ್ನು ಹೇಳಿದ್ದಾರೆ. ಅತಿ ಮಹತ್ವದ ಹಾಗೂ ಅತ್ಯಗತ್ಯವಾದ ಮೊದಲನೆಯ ಸ್ಥಳವನ್ನು ಅವರು ಸೂಚಿಸಿರುವುದು ನಮಾಝಿನಲ್ಲಿ ತಶಹ್ಹುದ್ (ಅತ್ತಹಿಯ್ಯಾತ್) ನ ಕೊನೆಯ ಸಮಯದಲ್ಲಿ ಹೇಳುವುದಾಗಿದೆ. ಸ್ವಲಾತ್ ಮತ್ತು ಸಲಾಮ್‌ನ ವಿಷಯದಲ್ಲಿ ಎಲ್ಲಾ ಮುಸ್ಲಿಮರ ಇಜ್‌ಮಾಅ ಇದೆ. ಆದರೆ ಈ ಸ್ಥಳದಲ್ಲಿ ಅದರ ಕಡ್ಡಾಯದ ವಿಚಾರವಾಗಿ ಭಿನ್ನಾಭಿಪ್ರಾಯವಿದೆ. ಈ ಜಾಗಗಳಲ್ಲಿ ಕುನೂತ್‌ನ ಕೊನೆಯಲ್ಲಿ ಮತ್ತು ಜುಮ್‌ಆ ಖುತ್ಬಾಗಳಂತಹ ಪ್ರಭಾಷಣಗಳಲ್ಲಿ, ಎರಡು ಹಬ್ಬಗಳ ಖುತ್ಬಾ, ಮಳೆಗಾಗಿ ಪ್ರಾರ್ಥನೆಯ ಖುತ್ಬಾ ಮತ್ತು ಅಝಾನ್‌ಗೆ ಉತ್ತರ ನೀಡಿದ ಬಳಿಕ, ದುಆದಲ್ಲಿ, ಮಸೀದಿಗೆ ಪ್ರವೇಶಿಸುವಾಗ ಮತ್ತು ಹೊರಗೆ ಬರುವಾಗ ಪ್ರವಾದಿ(ﷺ)ರ ಪ್ರಸ್ತಾಪ ಬರುವಾಗ ಹೀಗೆಲ್ಲಾ ಇಬ್ನುಲ್ ಖಯ್ಯಿಮ್ ರವರು ಪ್ರವಾದಿ(ﷺ)ರ ಪ್ರಸ್ತಾಪ ಬಂದಾಗ ಸ್ವಲಾತ್ ಸಲಾಮ್ ಹೇಳುವುದರ ಪ್ರಯೋಜನವನ್ನು ತಿಳಿಸಿರುವರು. ಮತ್ತದರ ನಲ್ವತ್ತು ಪ್ರಯೋಜನಗಳನ್ನು ತಿಳಿಸಿರುವರು. ಆ ಪ್ರಯೋಜನಗಳಲ್ಲಿ ಕೆಲವು ಹೀಗಿವೆ.

ಅಲ್ಲಾಹುವಿನ ಆದೇಶದ ಪಾಲನೆ, ಒಂದು ಸ್ವಲಾತ್ ಕಳುಹಿಸುವವನಿಗೆ ಅಲ್ಲಾಹನ ಬಳಿ ಹತ್ತು ಅನುಗ್ರಹ, ದುಆಕ್ಕಿಂತ ಮುಂಚೆ ಸ್ವಲಾತ್ ಸಲಾಮ್ ಕಳುಹಿಸುವುದರಿಂದ ದುಆ ಸ್ವೀಕಾರದ ನಿರೀಕ್ಷೆ ಮತ್ತು ಸ್ವಲಾತ್‌ನೊಂದಿಗೆ ಅವರಿಗಾಗಿ ವಸೀಲ ಬೇಡಿದರೆ ಅದು ಪ್ರವಾದಿ(ﷺ)ರ ಶಿಫಾರಸ್ಸಿನ ಕಾರಣವಾಗುವುದು. ಇದು ಪಾಪಗಳ ಕ್ಷಮೆಯ

ಕಾರಣವೂ ಆಗಿದೆ ಮತ್ತು ಅಲ್ಲಾಹನ ಸಂದೇಶವಾಹಕರ(ﷺ) ಕಡೆಯಿಂದ ಸಲಾತ್ ಸಲಾಂ ಹೇಳುವವನ ಸಲಾತ್‌ಗೆ ಉತ್ತರ ನೀಡಲ್ಪಡುವ ಕಾರಣವೂ ಇದಾಗಿದೆ.

## ಅಧ್ಯಾಯ –4

# ಅಹ್ಲ್‌ಬೈತ್‌ನ ಶ್ರೇಷ್ಠತೆ ಮತ್ತು ಅತಿಶಯ ಹಾಗೂ ಮಿತಿಮೀರುವಿಕೆಯಿಲ್ಲದೆ ಅವರೊಂದಿಗಿನ ವರ್ತನೆಯ ವಿವರಣೆ

ಅಹ್ಲ್‌ಬೈತ್ ಎಂದರೆ ದಾನವು (ಸದಕಾ) ನಿಷೇಧಿಸಲ್ಪಟ್ಟಿರುವ ರಸೂಲುಲ್ಲಾಹಿ(ﷺ)ರ ಕುಟುಂಬಸ್ಥರು ಮತ್ತು ಮಕ್ಕಳಾಗಿದ್ದಾರೆ. ಇವರಲ್ಲಿ ಅಲೀ(رضي الله عنه)ರ ಮಕ್ಕಳು, ಉಕೈಲ್(رضي الله عنه)ರ ಮಕ್ಕಳು, ಅಬ್ಬಾಸ್(رضي الله عنه)ರ ಮಕ್ಕಳು, ಬನೂಹಾರಿಸ್ ಬಿನ್ ಅಬ್ದುಲ್ ಮುತ್ತಲಿಬ್ ಮತ್ತು ಪುತ್ರಿಯರು ಒಳಗೊಂಡಿದ್ದಾರೆ. ಸರ್ವೋನ್ನತನಾದ ಅಲ್ಲಾಹು ಹೇಳುತ್ತಾನೆ.

﴿ إِنَّمَا يُرِيدُ ٱللَّهُ لِيُذْهِبَ عَنكُمُ ٱلرِّجْسَ أَهْلَ ٱلْبَيْتِ وَيُطَهِّرَكُمْ تَطْهِيرًا ﴿٣٣﴾ ﴾

**"ಓ ಪ್ರವಾದಿಯವರ ಕುಟುಂಬಸ್ಥರೇ, ಅಲ್ಲಾಹು ನಿಮ್ಮಿಂದ ಮಾಲಿನ್ಯ(ಕೊಳಕನ್ನು) ವನ್ನು ದೂರಮಾಡಲು ಮತ್ತು ನಿಮ್ಮನ್ನು ಸಂಪೂರ್ಣ ಶುದ್ಧರಾಗಿಡಲು ಬಯಸುತ್ತಾನೆ."** (354)

ಇದರ ಬಗ್ಗೆ ವಿದ್ವಾಂಸರಾದ ಇಬ್ನ್ ಕಸೀರ್ ಬರೆಯುತ್ತಾರೇನೆಂದರೆ ಕುರ್‌ಆನ್‌ಅನ್ನು ಪರಿಶೋಧಿಸುವುದಾದರೆ ಅವನಿಗೆ ಅದರಲ್ಲಿ ಪ್ರವಾದಿ(ﷺ)ರವರ ಪತ್ನಿಯರೂ ಒಳಗೊಂಡಿದ್ದಾರೆಂಬುದರಲ್ಲಿ ಯಾವುದೇ ಸಂಶಯವಿರಬಾರದು. ಅವನು ಹೀಗೆಂದಿರುವನು.

﴿ وَٱذْكُرْنَ مَا يُتْلَىٰ فِى بُيُوتِكُنَّ مِنْ ءَايَٰتِ ٱللَّهِ وَٱلْحِكْمَةِ ﴾

**"ಮತ್ತು ನಿಮ್ಮ ಮನೆಗಳಲ್ಲಿ ಅಲ್ಲಾಹುವಿನ ಸೂಕ್ತಿಗಳು ಓದಲ್ಪಡುವುದನ್ನು ಮತ್ತು ಹಿಕ್‌ಮತ್‌ಗಳನ್ನು ನೆನಪಿಡಿರಿ."** (355)

ಪ್ರಸ್ತುತ ಸೂಕ್ತಿಯು ಅರ್ಥವೇನೆಂದರೆ ನಿಮ್ಮ ಮನೆಗಳಲ್ಲಿ ಅಲ್ಲಾಹು ತನ್ನ ಸಂದೇಶವಾಹಕರ ಮೇಲೆ ಅವತೀರ್ಣಗೊಳಿಸುವ ಕುರ್‌ಆನ್ ಮತ್ತು ಸುನ್ನತ್‌ಅನ್ನು ಪಾಲಿಸಿರಿ. ಹ. ಖತಾದ(رحمه الله) ಹೇಳಿರುವರೆಂದರೆ, "ನೀವು ಈ ಅನುಗ್ರಹವನ್ನು ನೆನಪಿಡಿ, ಇದು ಇತರರನ್ನು ಬಿಟ್ಟು ನಿಮಗಾಗಿ ವಿಶೇಷಗೊಳಿಸಲಾಗಿದೆ. ಅಂದರೆ 'ವಹೀ' ನಿಮ್ಮ ಮನೆಗಳಲ್ಲಿ ಅವತೀರ್ಣಗೊಳ್ಳುತ್ತದೆ. ಹ.ಆಯಿಶಾ(رضي الله عنها) ಈ ಸೌಭಾಗ್ಯಕ್ಕೆ ಪಾತ್ರರಾದ

354 ಕುರ್‌ಆನ್ 33:33
355 ಕುರ್‌ಆನ್ 33:34

ಮೊದಲಿಗರಾಗಿದ್ದರು ಮತ್ತು ಈ ಸಾರ್ವತ್ರಿಕ ಅನುಗ್ರಹದಲ್ಲಿ ಆಯಿಶಾ(رضي الله عنها)ರಿಗೆ ಪ್ರತ್ಯೇಕ ಸ್ಥಾನ ಲಭಿಸಿತು. ಏಕೆಂದರೆ ಆಯಿಶಾ(رضي الله عنها) ರನ್ನೂ ಹೊರತು ಪಡಿಸಿ ಬೇರೆ ಯಾರ ಹಾಸಿಗೆಯಲ್ಲೂ 'ವಹೀ' ಅವತೀರ್ಣವಾಗಿರಲಿಲ್ಲ. ಇದನ್ನು ಸ್ವತಃ ರಸೂಲುಲ್ಲಾಹಿ (ﷺ) ಹೇಳಿದ್ದರು. ಉಲೆಮಾಗಳು ಹೇಳುತ್ತಾರೆ: ಈ ವಿಶೇಷವು ಏಕೆಂದರೆ ಪವಾದಿ (ﷺ) ಅವರ ಹೊರತು ಬೇರೆ ಯಾವ ಕನ್ಯೆಯೊಂದಿಗೂ ವಿವಾಹವಾಗಿರಲಿಲ್ಲ ಮತ್ತು ಅವರೊಂದಿಗೆ(رضي الله عنها) ಪ್ರವಾದಿ(ﷺ)ರ ಹೊರತು ಬೇರೆ ಯಾವ ಪುರುಷನೊಂದಿಗೂ ಸಹಶಯನರಾಗಿರಲಿಲ್ಲ. (ಅಂದರೆ ಅವರು ಬೇರೆಯವರೊಂದಿಗೆ ವಿವಾಹವಾಗಿರಲಿಲ್ಲ.)

ಆದ್ದರಿಂದ ಈ ವಿಶೇಷತೆ ಮತ್ತು ಗೌರವವನ್ನು ಆಯಿಶಾ (ರದಿಯಲ್ಲಾಹು ಅನ್‌ಹಾ) ಪಡೆಯುವುದು ಸಾಧ್ಯವಿತ್ತು. ಮತ್ತು ಪ್ರವಾದಿ(ﷺ)ರ ಪರಿಶುದ್ಧ ಪತ್ನಿಯರು ಅಹ್ಲುಬೈತ್‌ನಲ್ಲಿ ಒಳಗೊಂಡಿರುವುದಾದರೆ ಪ್ರವಾದಿ(ﷺ)ರ ಆಪ್ತ ಕುಟುಂಬಿಕರು ಇನ್ನಷ್ಟು ಅರ್ಹರಾಗಿರುತ್ತಾರೆ. (ಇಬ್ನ್ ಕಸೀರ್)

ಆದುದರಿಂದ ಅಹ್ಲ್‌ಸುನ್ನತ್ ವಲ್‌ಜಮಾಅತ್‌ನವರು ರಸೂಲುಲ್ಲಾಹಿ(ﷺ) ಅಹ್ಲ್‌ಬೈತನ್ನು ಪ್ರೀತಿಸುತ್ತಾರೆ ಮತ್ತು ಪ್ರವಾದಿಯವರ ಉಪದೇಶವನ್ನು ಪಾಲಿಸುತ್ತಾರೆ. ಈ ವಿಚಾರವಾಗಿ ಪ್ರವಾದಿ(ﷺ)ರವರ ಮಾತು ಹೀಗಿದೆ.

«أُذَكِّرُكُمُ اللَّهَ فِي أَهْلِ بَيْتِي»

**"ನನ್ನ ಅಹ್ಲ್‌ಬೈತ್‌ನ ವಿಷಯದಲ್ಲಿ ನಾನು ನಿಮಗೆ ಅಲ್ಲಾಹುವನ್ನು ನೆನಪಿಸುತ್ತೇನೆ."** [356]

ಅಹ್ಲುಸುನ್ನತ್ ವಲ್‌ಜಮಾಅತ್ ಅವರನ್ನು ಪ್ರೀತಿಸುತ್ತದೆ ಮತ್ತವರಿಗೆ ಶ್ರೇಷ್ಠತೆ ನೀಡುತ್ತದೆ. ಏಕೆಂದರೆ ಇದೂ ಕೂಡಾ ರಸೂಲುಲ್ಲಾಹಿ(ﷺ)ರೊಂದಿಗೆ ಪ್ರೀತಿ ಮತ್ತು ಪ್ರವಾದಿ(ﷺ)ರ ಶ್ರೇಷ್ಠತೆ ಮತ್ತು ಗೌರವದ ರೀತಿಯಾಗಿದೆ. ಆದರೆ ಈ ಶರ್ತದೊಂದಿಗೆ, ಅದೇನೆಂದರೆ ಅವರು ಸುನ್ನತ್‌ನ ಅನುಸರಣೆಯಲ್ಲಿ ಖಾಯಂ ಇರಬೇಕು. ಹೇಗೆಂದರೆ ಇವರ ಸಜ್ಜನ ಮುಂಗಾಮಿಗಳಾದ ಹ. ಅಬ್ಬಾಸ್(رضي الله عنه) ಮತ್ತವರ ಮಕ್ಕಳು, ಅಲಿ (رضي الله عنه) ಮತ್ತವರ ಮಕ್ಕಳು ಯಾವ ರೀತಿ ಇದ್ದರೋ ಹಾಗೆ. ಇನ್ನು ಅವರಲ್ಲಿ ಒಬ್ಬನು ಅಲ್ಲಾಹನ ಸಂದೇಶವಾಹಕರ(ﷺ) ಸುನ್ನತ್‌ನ ವಿರುದ್ಧ ವರ್ತಿಸುವವನಾಗಿದ್ದರೆ ಮತ್ತು ಧರ್ಮದಲ್ಲಿ ದೃಢನಾಗಿಲ್ಲದಿದ್ದರೆ ಅವರೊಂದಿಗೆ ಪ್ರೀತಿ, ಗೆಳೆತನ ಸಮ್ಮತವಲ್ಲ. ಅವರು ಅಹ್ಲ್‌ಬೈತ್‌ನಲ್ಲಿದ್ದರೂ ಸರಿ.

ಅಹ್ಲ್‌ಬೈತ್‌ನ ಕುರಿತು ಅಹ್ಲುಸುನ್ನತ್ ವಲ್‌ಜಮಾಅತ್‌ನ ನಿಲುವು ನ್ಯಾಯಯುತವೂ, ನಿಷ್ಪಕ್ಷಪಾತವೂ ಆಗಿದೆ. ಅಹ್ಲ್‌ಬೈತ್‌ನ ಯಾರು ಧರ್ಮ ವಿಶ್ವಾಸದಲ್ಲಿ ಖಾಯಂ ಆಗಿರುತ್ತಾರೋ ಅವರೊಂದಿಗೆ ಆಳವಾದ ಪ್ರೀತಿಯನ್ನಿರಿಸುತ್ತಾರೆ ಮತ್ತು ಯಾರು ಸುನ್ನತ್‌ನ ವಿರುದ್ಧವಾಗಿರುತ್ತಾರೋ ಮತ್ತು ಧರ್ಮದಿಂದ ದೂರವಿರುತ್ತಾರೋ

356 ಮುಸ್ಲಿಮ್

ಅವರಿಂದ ದೂರವಿರುತ್ತಾರೆ.ನ ಅವರು ಅಹ್ಲ್‌ಬೈತ್‌ನ ವಂಶಸ್ಥರಾಗಿದ್ದರೂ ಸರಿ. ಏಕೆಂದರೆ ಅಲ್ಲಾಹುವಿನ ಧರ್ಮದಲ್ಲಿ ಖಾಯಂ ಇಲ್ಲದಿದ್ದರೆ ಆತ ಅಹ್ಲ್ ಬೈತ್ ಹಾಗೂ ರಸೂಲುಲ್ಲಾಹಿ(ﷺ)ರ ಸಮೀಪಸ್ಥನಾಗಿದ್ದರೂ ದೀನ್ ನಲ್ಲಿ ದೃಢನಾಗುವ ತನಕ ಯಾವುದೇ ಪ್ರಯೋಜನವಿಲ್ಲ. ಅಬೂ ಹುರೈರಾ(رضي الله عنه) ವರದಿ ಮಾಡುತ್ತಾರೆ. ಪ್ರವಾದಿ (ﷺ) ಮೇಲೆ

﴿ وَأَنذِرْ عَشِيرَتَكَ ٱلْأَقْرَبِينَ ﴿٢١٤﴾ ﴾

**"ಮತ್ತು ನಿಮ್ಮ ಸಮೀಪದ ಸಂಬಂಧಿಕರನ್ನು ಎಚ್ಚರಿಸಿರಿ."** [357]

ಎಂಬ ಸೂಕ್ತವು ಅವತೀರ್ಣವಾದಾಗ ಪ್ರವಾದಿ(ﷺ) ನಿಂತುಕೊಂಡು ಹೇಳಿದರು:

**"ಓ ಕುರೈಶರೇ! (ಅಥವಾ ಅಂತಹದೇ ಪದ) ನೀವು ನಿಮ್ಮನ್ನು ಖರೀದಿಸಿರಿ, ಅಲ್ಲಾಹುವಿನ ಮುಂದೆ ನಿಮಗೆ ನಾನೇನೂ ಮಾಡಲಾರೆ, ಓ ಸಫಿಯ್ಯಾ, ಅಲ್ಲಾಹನ ಸಂದೇಶವಾಹಕರ ಅತ್ತೆ! ಅಲ್ಲಾಹುವಿನ ಮುಂದೆ ನಿಮಗಾಗಿ ನಾನೇನೂ ಮಾಡಲಾರೆ, ಓ ಮುಹಮ್ಮದ್‌ನ ಮಗಳು ಫಾತಿಮಾ ! ನನ್ನ ಸೊತ್ತಿನಿಂದ ನಿನಗಿಷ್ಟ ಬಂದುದನ್ನು ಕೇಳು. ಆದರೆ ಅಲ್ಲಾಹುವಿನ ಎದುರು ನಾನು ನಿನಗೇನು ಮಾಡಲಾರೆ"**

ಇನ್ನೊಂದು ಹದೀಸ್‌ನಲ್ಲಿ ಬಂದಿರುವುದನ್ನು ಗಮನಿಸಿರಿ:

«مَنْ بَطَّأَ عَمَلُهُ لَمْ يُسْرِعْ بِهِ نَسَبُهُ»

**"ಯಾರ ಕರ್ಮವು ನಿಧಾನವಾಯಿತೋ ಅವನ ಮನೆತನವು ಅವನನ್ನು ವೇಗಗೊಳಿಸಲಾರದು."** [358]

ಅಹ್ಲು ಸುನ್ನತ್ ವಲ್‌ಜಮಾಅತ್, ರಾಫಿದೀ ಶಿಯಾಗಳ ಮಿಥ್ಯ ವಿಶ್ವಾಸಗಳಿಂದ ಪರಿಶುದ್ಧವಾಗಿದೆ. ಅವರು ಅಹ್ಲ್‌ಬೈತ್‌ಗಳ ವಿಷಯದಲ್ಲಿ ಅತಿಶಯವಾದ ವಾದ ಹೊಂದಿರುತ್ತಾ ಅವರ ಆಜ್ಞಾನುಸರಣೆ ಮಾಡುವಂತೆ ವಾದಿಸುತ್ತಾರೆ. ಇದೇ ರೀತಿ ನವಾಸಿಬ್‌ಗಳ ದಾರಿತಪ್ಪಿದ ಕ್ರಮದಿಂದಲೂ ಪರಿಶುದ್ಧವಾಗಿದೆ. ಅವರು ಅಹ್ಲುಬೈತ್‌ನ ವ್ಯಕ್ತಿಗಳೊಂದಿಗೆ ದ್ವೇಷ ಮತ್ತು ವೈರತ್ವ ವಿರಿಸುತ್ತಾರೆ. ಅವರಿಗೆ ಶಾಪ, ಬೈಗುಳ ಹಾಕುತ್ತಾರೆ. ಅಹ್ಲ್‌ಬೈತ್‌ನ ಜನರನ್ನು ವಸೀಲಃ ಮಾಡುವವರ ಮತ್ತು ಅಲ್ಲಾಹನ ಹೊರತು ಅವರನ್ನು ಪ್ರಭುಗಳಾಗಿ ನಂಬುವ ನೂತನವಾದಿ ಮತ್ತು ಕುರಾಫಿಗಳ ದಾರಿ ತಪ್ಪುವಿಕೆಯಿಂದಲೂ ಪರಿಶುದ್ಧವಾಗಿದೆ. ಈ ಕುರಿತು ಮೇಲಿನ ವಿಷಯಗಳಲ್ಲಿ ನ್ಯಾಯಯುತವಾದ ನಿಲುವು ಮತ್ತು ಸಿರಾತೇ ಮುಸ್ತಕೀಮ್‌ನಲ್ಲಿ ದೃಢವಾಗಿದೆ ಎಂಬುದು ನಿಸ್ಸಂಶಯ. ಈ ವಿಷಯದಲ್ಲಿ ಯಾವುದೇ ಅತಿಶಯವಿಲ್ಲ ಮತ್ತು ಅಹ್ಲ್‌ಬೈತ್‌ನ ವಿಷಯದಲ್ಲಿ ಮಿತಿಮೀರುವಿಕೆಯೂ

---

**357** ಕುರ್‌ಆನ್ 26:214

**358** ವರದಿ ಮುಸ್ಲಿಮ್

ಇಲ್ಲ. ಸ್ವತಃ ಧರ್ಮದಲ್ಲಿ ಖಾಯಂ ಆಗಿರುವ ಅಹ್ಲ್‌ಬೈತ್‌ನವರೇ ತಮ್ಮ ಬಗ್ಗೆ ಮಿತಿಮೀರುವಿಕೆಯನ್ನು ಇಷ್ಟಪಡುವುದಿಲ್ಲ. ಅಲ್ಲದೇ ಮಿತಿಮೀರುವವರ ಕುರಿತು ಅಭಯ ಯಾಚಿಸುತ್ತಾರೆ. ಸ್ವತಃ ಹ.ಅಲೀ(ﷺ) ತಮ್ಮ ಕುರಿತು ಮಿತಿಮೀರುವವರನ್ನು ಬೆಂಕಿಯಲ್ಲಿ ಸುಟ್ಟು ಹಾಕಿಸಿದ್ದರು. ಅಲ್ಲದೆ ಹ. ಅಬ್ಬಾಸ್(ﷺ) ಆ ಜನರ ಹತ್ಯೆಯನ್ನು ಧರ್ಮ ಸಮ್ಮತವೆಂದಿದ್ದರು. ಆದರೆ ಬೆಂಕಿಯ ಬದಲಿಗೆ ಖಡ್ಗದ ಅಭಿಪ್ರಾಯ ಹೊಂದಿದ್ದರು. ಹ. ಅಲೀ(ﷺ) ಮಿತಿಮೀರುವವರ ಸರದಾರ ಅಬ್ದುಲ್ಲಾ ಬಿನ್ ಸಬಾನನ್ನು ಕೊಲ್ಲುವುದಕ್ಕಾಗಿ ಆತನನ್ನು ಹುಡುಕುವಂತೆ ಆದೇಶವಿತ್ತಿದ್ದರು. ಆದರೆ ಅವನು ಓಡಿ ತಪ್ಪಿಸಿಕೊಂಡನು.

## ಅಧ್ಯಾಯ –5

# ಸಹಾಬಿಗಳ ಶ್ರೇಷ್ಠತೆ ಅವರ ಕುರಿತು ಅಗತ್ಯವಾದ ವಿಶ್ವಾಸ ಮತ್ತು ಅವರ ನಡುವಿನ ಭಿನ್ನಾಭಿಪ್ರಾಯದ ಬಗ್ಗೆ ಅಹ್ಲುಸ್ಸುನ್ನತ್ ವಲ್ ಜಮಾಅತ್‌ನ ನಿಲುವು

ಸಹಾಬಾ ಎಂದರೆ ಯಾರು ಮತ್ತು ಅವರ ಕುರಿತು ನಮ್ಮ ವಿಶ್ವಾಸ(ಅಕೀದ) ಏನು?

ಸಹಾಬಾ ಎಂದರೆ ಸಹಾಬಿ ಎಂಬುದರ ಬಹು ವಚನವಾಗಿದೆ. ಇದರ ಅರ್ಥವು ಸತ್ಯವಿಶ್ವಾಸಿಯಾಗಿರುವ ಸ್ಥಿತಿಯಲ್ಲಿ ಅಲ್ಲಾಹನ ಸಂದೇಶವಾಹಕರು(ﷺ)ರನ್ನು ಭೇಟಿಯಾಗಿರುವ ಮತ್ತು ಸತ್ಯವಿಶ್ವಾಸದ ಸ್ಥಿತಿಯಲ್ಲೇ ಮರಣ ಹೊಂದಿದವರು. ಅವರು ಉಮ್ಮತ್‌ನಲ್ಲಿ ಶ್ರೇಷ್ಠ ಜನರಾಗಿರುವರು. ಅವರ ಕಾಲವು ಖೈರುಲ್ ಕುರೂನ್ ಆಗಿತ್ತು ಮತ್ತು ಇಸ್ಲಾಮ್‌ನೆಡೆಗೆ ಇವರ ಆದ್ಯತೆ ರಸೂಲುಲ್ಲಾಹಿ(ﷺ)ರ ಸಹವಾಸದಲ್ಲಿ ಅವರ ಇಷ್ಟ, ಪ್ರವಾದಿ(ﷺ)ರೊಂದಿಗೆ ಜಿಹಾದ್, ಶರೀಅತ್‌ನ ನಿಯಮಗಳನ್ನು ಪಾಲಿಸುವುದಕ್ಕೆ ಮತ್ತು ನಂತರದವರಿಗೆ ತಲುಪಿಸುವುದಕ್ಕೆ ಈ ಎಲ್ಲಾ ಕಾರಣಗಳಿಂದ ಅವರಿಗೆ ಈ ಬಿರುದು ಲಭಿಸಿದೆ. ಅಲ್ಲಾಹು ಪವಿತ್ರ ಕುರ್‌ಆನ್‌ನಲ್ಲಿ ಅವರನ್ನು ಹೊಗಳಿರುವನು, ಆತನ ವಚನವು ಹೀಗಿದೆ.

﴿ وَٱلسَّٰبِقُونَ ٱلْأَوَّلُونَ مِنَ ٱلْمُهَٰجِرِينَ وَٱلْأَنصَارِ وَٱلَّذِينَ ٱتَّبَعُوهُم بِإِحْسَٰنٍ رَّضِيَ ٱللَّهُ عَنْهُمْ وَرَضُوا۟ عَنْهُ وَأَعَدَّ لَهُمْ جَنَّٰتٍ تَجْرِى تَحْتَهَا ٱلْأَنْهَٰرُ خَٰلِدِينَ فِيهَآ أَبَدًا ۚ ذَٰلِكَ ٱلْفَوْزُ ٱلْعَظِيمُ ﴿١٠٠﴾ ﴾

**"ಮುಹಾಜಿರ್‌ರಲ್ಲಿ ಮತ್ತು ಅನ್ಸಾರ್‌ಗಳಲ್ಲಿ ಮೊದಲು ವಿಶ್ವಾಸ ತಂದವರು ಮತ್ತು ಉತ್ತಮ ರೀತಿಯಲ್ಲಿ ಅವರನ್ನು ಹಿಂಬಾಲಿಸಿದವರು. ಅಲ್ಲಾಹ್ ಅವರ ಬಗ್ಗೆ ಸಂತೃಪ್ತನು.**

ಮತ್ತು ಅವರು ಅಲ್ಲಾಹನಲ್ಲಿ ಸಂತೃಪ್ತರು ಮತ್ತು ಅವನು ಅವರಿಗಾಗಿ ತಳಭಾಗದಲ್ಲಿ ನದಿಗಳು ಹರಿಯುತ್ತಿರುವ ತೋಟಗಳನ್ನು ತಯಾರು ಮಾಡಿರುವನು. (ಮತ್ತು) ಅವರು ಅದರಲ್ಲಿ ಶಾಶ್ವತವಾಗಿರುವರು. ಇದು ಬಹಳ ದೊಡ್ಡ ವಿಜಯವಾಗಿದೆ.” (359)

ಇನ್ನೊಂದು ಕಡೆಯಲ್ಲಿ ಹೀಗಿದೆ:

﴿ مُّحَمَّدٌ رَّسُولُ ٱللَّهِ ۚ وَٱلَّذِينَ مَعَهُۥٓ أَشِدَّآءُ عَلَى ٱلْكُفَّارِ رُحَمَآءُ بَيْنَهُمْ ۖ تَرَىٰهُمْ رُكَّعًا سُجَّدًا يَبْتَغُونَ فَضْلًا مِّنَ ٱللَّهِ وَرِضْوَٰنًا ۖ سِيمَاهُمْ فِى وُجُوهِهِم مِّنْ أَثَرِ ٱلسُّجُودِ ۚ ذَٰلِكَ مَثَلُهُمْ فِى ٱلتَّوْرَىٰةِ ۚ وَمَثَلُهُمْ فِى ٱلْإِنجِيلِ كَزَرْعٍ أَخْرَجَ شَطْـَٔهُۥ فَـَٔازَرَهُۥ فَٱسْتَغْلَظَ فَٱسْتَوَىٰ عَلَىٰ سُوقِهِۦ يُعْجِبُ ٱلزُّرَّاعَ لِيَغِيظَ بِهِمُ ٱلْكُفَّارَ ۗ وَعَدَ ٱللَّهُ ٱلَّذِينَ ءَامَنُوا۟ وَعَمِلُوا۟ ٱلصَّٰلِحَٰتِ مِنْهُم مَّغْفِرَةً وَأَجْرًا عَظِيمًۢا ﴿٢٩﴾ ﴾

“ಮುಹಮ್ಮದ್ ಅಲ್ಲಾಹುವಿನ ಸಂದೇಶವಾಹಕರಾಗಿರುವರು ಮತ್ತು ಅವರೊಂದಿಗಿರುವ ಜನರು ಸತ್ಯ ನಿಷೇಧಿಗಳೊಂದಿಗೆ ಕಾಠಿಣ್ಯವುಳ್ಳವರು, ಸತ್ಯ ವಿಶ್ವಾಸಿಗಳ ನಡುವೆ ಕರುಣೆಯುಳ್ಳವರಾಗಿರುವರು. ನೀನು ಅವರನ್ನು (ಅಲ್ಲಾಹನ ಮುಂದೆ) ಬಾಗಿದ ರೀತಿಯಲ್ಲಿ ಕಾಣುತ್ತಿ ಮತ್ತು ಅಲ್ಲಾಹುವಿನ ಅನುಗ್ರಹ ಮತ್ತು ಆತನ ಸಂತೃಪ್ತಿಯನ್ನು ಬಯಸುತ್ತಾ ಇರುತ್ತಾರೆ (ಹೆಚ್ಚು) ಸಾಷ್ಟಾಂಗದ ಪರಿಣಾಮವಾಗಿ ಅವರ ಹಣೆಯಲ್ಲಿ ಗುರುತು ಇದೆ. ಇವರ ಇದೇ ವಿವರಣೆಯು ತೌರಾತ್‌ನಲ್ಲಿದೆ ಮತ್ತು ಇಂಜೀಲ್‌ನಲ್ಲಿ ಹೀಗಿದೆ. “ಒಂದು ಬಿತ್ತಿದ ಬೀಜದಂತೆ. ಅದು ತನ್ನ ಬೆಳೆಯನ್ನು ಹೊರತಂದಿತು. ಮತ್ತು ಅದನ್ನು ಬಲವಾಗಿಸಿತು ಮತ್ತು ಅದು ದಪ್ಪವಾಯಿತು ಮತ್ತು ಅದು ತನ್ನ ಕಾಂಡದಲ್ಲಿ ನೇರವಾಗಿ ನಿಂತಿತು ಮತ್ತು ಕೃಷಿಕರನ್ನು ಸಂತೋಷಗೊಳಿಸತೊಡಗಿತು. ಅದರಿಂದ ಕಾಫಿರರಿಗೆ ಎದೆಉರಿಸಲೆಂದಾಗಿದೆ. ಅವರಲ್ಲಿ ಯಾರು ವಿಶ್ವಾಸವಿರಿಸುತ್ತಾರೋ ಮತ್ತು ಸತ್ಕರ್ಮಗಳನ್ನೆಸಗುತ್ತಾರೋ ಅವರಿಗೆ ಅಲ್ಲಾಹು ಪಾಪಗಳ ಕ್ಷಮೆ ಮತ್ತು ಶ್ರೇಷ್ಠ ಪ್ರತಿಫಲದ ವಾಗ್ದಾನವಿತ್ತಿರುವನು.” (360)

ಮತ್ತೊಂದು ಕಡೆಯಲ್ಲಿ ಹೀಗಿದೆ.

﴿ لِلْفُقَرَآءِ ٱلْمُهَٰجِرِينَ ٱلَّذِينَ أُخْرِجُوا۟ مِن دِيَٰرِهِمْ وَأَمْوَٰلِهِمْ يَبْتَغُونَ فَضْلًا مِّنَ ٱللَّهِ وَرِضْوَٰنًا وَيَنصُرُونَ ٱللَّهَ وَرَسُولَهُۥٓ ۚ أُو۟لَـٰٓئِكَ هُمُ ٱلصَّٰدِقُونَ ﴿٨﴾ وَٱلَّذِينَ تَبَوَّءُو ٱلدَّارَ وَٱلْإِيمَٰنَ مِن قَبْلِهِمْ يُحِبُّونَ مَنْ هَاجَرَ إِلَيْهِمْ وَلَا يَجِدُونَ فِى صُدُورِهِمْ حَاجَةً مِّمَّآ أُوتُوا۟ وَيُؤْثِرُونَ

359 ಕುರ್‌ಆನ್ 9:100

360 ಕುರ್‌ಆನ್ 48:29

عَلَىٰٓ أَنفُسِهِمۡ وَلَوۡ كَانَ بِهِمۡ خَصَاصَةٞۚ وَمَن يُوقَ شُحَّ نَفۡسِهِۦ فَأُوْلَٰٓئِكَ هُمُ ٱلۡمُفۡلِحُونَ ﴿٩﴾

**"ಮತ್ತು ತಮ್ಮ ಮನೆಗಳಿಂದ, ಸೊತ್ತುಗಳಿಂದ ಹೊರಹಾಕಲ್ಪಟ್ಟಿರುವ ಬಡ ಮುಹಾಜಿರ್‌ಗಳು ಅವರು ಅಲ್ಲಾಹನ ಅನುಗ್ರಹ ಮತ್ತು ಆತನ ಸಂತೃಪ್ತಿಯ ಆಕಾಂಕ್ಷಿಗಳಾಗಿರುವರು ಮತ್ತು ಅವರು ಅಲ್ಲಾಹನನ್ನು ಮತ್ತು ಅವನ ಸಂದೇಶವಾಹಕರನ್ನು ಸಹಾಯ ಮಾಡುತ್ತಾರೆ. ಇವರೇ ಸತ್ಯ ಸಂಧರು. ಮತ್ತು (ಜನರಿಗೂ ಕೂಡಾ) ಮುಹಾಜಿರ್‌ಗಳಿಗಿಂತ ಮುಂಚೆ ಮದೀನಾದಲ್ಲಿ ನೆಲೆಸಿದವರು ಮತ್ತು ವಿಶ್ವಾಸದಲಿ(ದೃಢವಾಗಿ) ಇದ್ದವರು ಮತ್ತು ಯಾರು ವಲಸೆ ಮಾಡಿ ಅವರ ಬಳಿ ಬರುತ್ತಾರೋ ಅವರನ್ನು ಪ್ರೀತಿಸುವವರು ಮತ್ತು ತಮಗೆ ಕೊಡಲ್ಪಟ್ಟುದರಲ್ಲಿ ಯಾವುದೇ ಅಸೂಯೆ ತೋರದವರು ಮತ್ತು ತಮಗೆ ಅಗತ್ಯವಿದ್ದರೂ ಕೂಡಾ ವಲಸಿಗರಿಗೆ ಸ್ವತಃ ತಮಗಿಂತ ಆದ್ಯತೆ ನೀಡುವವರು ಮತ್ತು ಯಾರು ತನ್ನ ದೇಹೇಚ್ಛೆಗಳಿಂದ ತನ್ನನ್ನು ರಕ್ಷಿಸಿದನೋ ಇಂತಹ ಜನರೇ ಯಶಸ್ವಿಗಳು."** (361)

ಈ ಸೂಕ್ತಿಗಳಲ್ಲಿ ಅಲ್ಲಾಹು ಮುಹಾಜಿರ್‌ಗಳು ಮತ್ತು ಅನ್ಸಾರ್‌ಗಳನ್ನು ಬಹಳ ಹೊಗಳಿರುವನು ಮತ್ತು ಅವರನ್ನು ಒಳಿತಿನ ಕಡೆಗೆ ಮೊದಲು ಬರುವವರೆಂದು ಹೇಳಿರುವನು. ತಾನು ಅವರೊಂದಿಗೆ ಸಂತೃಪ್ತನೆಂದೂ, ಅವರಿಗಾಗಿ ಸ್ವರ್ಗೀಯ ತೋಟಗಳನ್ನು ತಯಾರು ಮಾಡಿರುವೆನೆಂದೂ ಹೇಳಿರುವನು. ಇದೇ ರೀತಿ ಅವರು ಪರಸ್ಪರ ಕರುಣಾಳುಗಳೆಂದೂ ಸತ್ಯನಿಷೇಧಿಗಳೊಂದಿಗೆ ಕಠಿಣತೆಯಿರುವವರೆಂದೂ ಹೇಳಿರುವನು. ಇದೇ ರೀತಿ ಅವರ ಲಕ್ಷಣಗಳನ್ನು ಹೇಳುತ್ತಾ ಅವರು ಹೆಚ್ಚು ರುಕೂಅ ಮತ್ತು ಸುಜೂದ್ ಮಾಡುವವರೆಂದು ತಿಳಿಸಿರುವನು. ಅವರ ಹೃದಯಗಳು ಪರಿಶುದ್ಧವಾಗಿವೆ. ಅವರ ಮುಖಗಳಲ್ಲಿ ವಿಧೇಯತೆ ಮತ್ತು ಈಮಾನ್‌ನ ಲಕ್ಷಣ ಪ್ರಕಾಶವಿದೆ. ಅದರ ಮೂಲಕ ಅವರು ಗುರುತಿಸಲ್ಪಡುತ್ತಾರೆ. ಅಲ್ಲಾಹು ಅವರನ್ನು ತನ್ನ ಪ್ರವಾದಿಯ ಸಂಗಾತಿಗಳಾಗಿ ಆರಿಸಿರುವನು. ಸತ್ಯನಿಷೇಧಿಗಳು ಕುಪಿತರಾಗಲೆಂದು, ಮುಹಾಜಿರ್‌ಗಳನ್ನು ಹೊಗಳುತ್ತಾ ಅಲ್ಲಾಹು ಹೇಳಿದ್ದೇನೆಂದರೆ ಅವರು ಕೇವಲ ಅಲ್ಲಾಹುವಿಗಾಗಿ ಮತ್ತು ಅವರ ಧರ್ಮದ ಸಹಾಯಕ್ಕಾಗಿ ವಾಸ, ಸೊತ್ತು ಸಂಪತ್ತುಗಳನ್ನೆಲ್ಲಾ ತ್ಯಜಿಸಿ ಬಂದರು ಮತ್ತು ಅವನ ಅನುಗ್ರಹ ಹಾಗೂ ಸಂತೃಪ್ತಿಯನ್ನು ಬಯಸುತ್ತಾರೆ. ಅವರು ಈ ವಿಚಾರದಲ್ಲಿ ಸತ್ಯವಂತರಾಗಿದ್ದರು.

ಅನ್ಸಾರ್‌ಗಳನ್ನು ಹೊಗಳುತ್ತಾ ಅಲ್ಲಾಹು ಅವರು ಹಿಜ್ರತ್, ಸಹಾಯ, ಸತ್ಯವಿಶ್ವಾಸದ ಮನೆಯವರಾಗಿರುವರು. ಅವರು ತಮ್ಮ ಮುಹಾಜಿರ್ ಸಹೋದರರನ್ನು ಪ್ರೀತಿಸುತ್ತಿದ್ದರು. ತಮಗಿಂತ ಹೆಚ್ಚಿನ ಆದ್ಯತೆಯವನ್ನು ಅವರಿಗೆ ನೀಡುತ್ತಿದ್ದರು. ಅವರೊಂದಿಗೆ ಅನುಕಂಪ ತೋರುತ್ತಿದ್ದರು. ಅವರು ಜಿಪುಣತೆಯಿಂದ ಮುಕ್ತರಾಗಿದ್ದರು, ಅದರಿಂದಾಗಿ ಯಶಸ್ಸು

**361** ಕುರ್‌ಆನ್ 59:8–9

ಅವರನ್ನು ಸಮೀಪಿಸಿತ್ತು. ಉಭಯ ಗುಂಪಿನವರೂ ಉತ್ತಮರಾಗಿದ್ದರು.

ಇದಲ್ಲದೇ, ಇನ್ನೂ ಕೆಲವು ವಿಶೇಷತೆಗಳು ಇವೆ. ಇದು ಅವರ ಇಸ್ಲಾಮ್‌ನೆಡೆಗೆ ಆಗಮನದಲ್ಲಿನ ಪ್ರಥಮತೆ, ಜಿಹಾದ್, ಹಿಜ್ರಾದ ಕಾರಣಗಳಿಂದಾಗಿದೆ. ಆದ್ದರಿಂದ ಎಲ್ಲರಿಗಿಂತ ಶ್ರೇಷ್ಠ ಸಹಾಬಿಗಳು ನಾಲ್ಕು ಖಲೀಫರಾಗಿದ್ದಾರೆ. ಹ. ಅಬೂಬಕ್ಕರ್ (ﷺ) ಉಮರ್(ﷺ) ಉಸ್ಮಾನ್(ﷺ), ಅಲೀ(ﷺ), ಆಗಿದ್ದರು. ಅವರ ಬಳಿಕ ಹತ್ತು ಮಂದಿಯಲ್ಲಿ ಉಳಿದವರಾದ ಸ್ವರ್ಗದ ಸುವಾರ್ತೆ ಲಭಿಸಿದ ತಲ್ಹಾ(ﷺ), ಝುಬೈರ್(ﷺ), ಅಬ್ದುರ್ರಹ್‌ಮಾನ್ ಬಿನ್ ಔಫ್(ﷺ), ಅಬೂ ಉಬೈದ ಬಿನ್‌ಅಲ್ ಜರ್ರಾಹ್(ﷺ), ಸಅದ್ ಬಿನ್ ಅಬೀ ವಕ್ಕಾಸ್(ﷺ), ಸಈದ್ ಬಿನ್ ಝೈದ್(ﷺ). ಮುಹಾಜಿರ್‌ಗಳಿಗೆ ಅನ್ಸಾರ್‌ಗಳಿಗಿಂತ ಶ್ರೇಷ್ಠತೆ ನೀಡಲಾಗಿದೆ.

ಸಹಾಬಿಗಳ ನಡುವೆ ನಡೆದ ಭಿನ್ನಾಭಿಪ್ರಾಯ, ರಕ್ತಪಾತ, ಕ್ಷೋಭೆ, ಪಿತೂರಿಗಳ ಕುರಿತು ಅಹ್ಲುಸ್ಸುನ್ನತ್ ವಲ್‌ಜಮಾಅತ್‌ನ ನಿಲುವು

ಸಹಾಬಿಗಳ ನಡುವೆ ಫಿತ್ನವು ಹಬ್ಬವುದರ ಕಾರಣವು ಇಸ್ಲಾಮ್ ಮತ್ತು ವಕ್ತಾರರ ವಿರುದ್ಧ ಯಹೂದ್ಯರು ನಡೆಸಿದ ಪಿತೂರಿಯಾಗಿದೆ. ಯಮನ್‌ನ ಅಬ್ದುಲ್ಲಾ ಬಿನ್ ಸಬಾ ಎಂಬ ದುಷ್ಟ, ನೀಚ ಯಹೂದಿಯೊಬ್ಬನನ್ನು ಯಹೂದ್ಯರು ನಿಯಮಿಸಿದರು. ಅವನು ತಾನು ಇಸ್ಲಾಮ್ ಸ್ವೀಕರಿಸಿದೆನೆಂದು ಸುಳ್ಳು ಪ್ರತಿಜ್ಞೆ ಮಾಡಿದನು. ನಂತರ ಈ ನೀಚ ಯಹೂದನು ತನ್ನ ದ್ವೇಷಾಸೂಯೆಯ ವಿಷಯವನ್ನು ಮೂರನೆಯ ಖಲೀಫರಾದ ಉಸ್ಮಾನ್(ﷺ)ರ ವಿರುದ್ಧ ಉಗುಳತೊಡಗಿದನು. ಅವರ ವಿರುದ್ಧ ತನಗಿಷ್ಟ ಬಂದಂತೆ ಆರೋಪ ಸಿಧ್ಧಮಾಡಿ ಹಬ್ಬಿಸತೊಡಗಿದನು. ಕೆಲವು ದುರ್ಬಲ ಈಮಾನ್‌ನವರು, ನೀಚತನ ಹಾಗೂ ಫಿತ್ನವನ್ನು ಇಷ್ಟಪಡುವವರು ಆತನ ಮಾತುಗಳಿಂದ ವಂಚಿತರಾಗಿ ಆತನ ಸುತ್ತಮುತ್ತ ಸೇರತೊಡಗಿದರು. ಈ ಕುತಂತ್ರದ ಕಾರಣದಿಂದಲೇ ಹ. ಉಸ್ಮಾನ್ (ﷺ) ಆಕ್ರಮಿಸಲ್ಪಟ್ಟ ಸ್ಥಿತಿಯಲ್ಲಿ ಹುತಾತ್ಮರಾದರು. ಹ. ಉಸ್ಮಾನ್(ﷺ) ಹುತಾತ್ಮರಾದ ತಕ್ಷಣವೇ ಮುಸಲ್ಮಾನರಲ್ಲಿ ಒಡಕು ಪ್ರಾರಂಭವಾಯಿತು ಮತ್ತು ಆ ಯಹೂದಿ ಮತ್ತು ಅವನ ಹಿಂಬಾಲಕರಿಂದಾಗಿ ಫಿತ್ನವು ತಲೆಯೆತ್ತಿತು ಮತ್ತು ಸಹಾಬಿಗಳು ತಮ್ಮ ತಮ್ಮ ಇಜ್ತಿಹಾದ್‌ನ ಪ್ರಕಾರ ಪರಸ್ಪರ ಹೋರಾಡತೊಡಗಿದರು.

ಕಿತಾಬ್ 'ಅತ್ತಹಾವಿಯ' ದ ವ್ಯಾಖ್ಯಾನಗಾರ ಬರೆಯುತ್ತಾರೆ. ರಫ್‌ಳ್‌ನ ಫಿತ್ನವನ್ನು ಒಬ್ಬ ಕಪಟ ವಿಶ್ವಾಸಿ ಹಾಗೂ ನೀಚ ಆರಂಭಿಸಿದನು. ಇಸ್ಲಾಮ್ ಧರ್ಮವನ್ನು ಮುಗಿಸುವುದು ಮತ್ತು ರಸೂಲುಲ್ಲಾಹಿ(ﷺ)ರ ವ್ಯಕ್ತಿತ್ವಕ್ಕೆ ಕಳಂಕ ಬಳಿಯುವುದು ಅವನ ಉದ್ದೇಶವಾಗಿತ್ತು. ವಿದ್ವಾಂಸರುಗಳು ಹೇಳುವಂತೆ ನಿಸ್ಸಂಶಯವಾಗಿ ಅಬ್ದುಲ್ಲಾ ಬಿನ್ ಸಬಾ ಇಸ್ಲಾಮ್ ಸ್ವೀಕರಿಸಿದಾಗ ಅವನು ತನ್ನ ನೀಚತನ ಹಾಗೂ ಕುಟಿಲತನದಿಂದ ಇಸ್ಲಾಮ್‌ನೊಳಗೆ ಕ್ಷೋಭೆಯನ್ನು ಹಬ್ಬಿಸಲು ಬಯಸಿದನು. ಪೌಲನು ಕ್ರೈಸ್ತರೊಂದಿಗೆ ಮಾಡಿದ ಹಾಗೆ, ಅಬ್ದುಲ್ಲಾ ಬಿನ್ ಸಬಾ ಮೊದಲು ತನ್ನ ಇಬಾದತ್‌ಅನ್ನು ಒಪ್ಪಿಕೊಂಡನು.

ಎಷ್ಟರವರೆಗೆಂದರೆ ಇವನು ಹ. ಉಸ್ಮಾನ್(ﷺ)ರವರ ವಿರುದ್ಧ ಫಿತ್ನ ಹಬ್ಬಿಸಲು ಮತ್ತು ಅವರನ್ನು ಹತ್ಯೆ ಮಾಡಲು ಪ್ರಯತ್ನಿಸಿದನು. ನಂತರ ಅವನು ಕೂಫಾಕ್ಕೆ ಬಂದಾಗ ಅಲೀ (ﷺ)ರ ಕುರಿತು "ಗುಲೂ" (ಅತಿಶಯತೆ) ಯನ್ನು ಸ್ವೀಕರಿಸಿದನು ಮತ್ತು ಅವರಿಗೆ ಸಹಾಯ ಮಾಡಲು ಬಯಸಿದನು. ಇದು ತನ್ನ ನೀಚ ಉದ್ದೇಶವನ್ನು ಸಾಧಿಸುವುದಕ್ಕಾಗಿತ್ತು. ಅಲೀ(ﷺ)ರಿಗೆ ಅದರ ಸುದ್ದಿ ತಿಳಿದಾಗ ಅವರು ಅವನನ್ನು ಕೊಲ್ಲಲು ಆದೇಶಿಸಿದರು. ಆದರೆ ಆ ಅಧಮನು ಖರ್ ಖೀಸ್ ಕಡೆಗೆ ಪರಾರಿಯಾದನು. ಇದರ ಉಲ್ಲೇಖವು ಚರಿತ್ರೆಯಲ್ಲಿ ಪ್ರಸಿದ್ಧವಾಗಿದೆ.

ಶೇಖ್ ಇಬ್ನ್ ತೈಮಿಯ್ಯ ಬರೆಯುತ್ತಾರೆ: ಉಸ್ಮಾನ್ ಗನೀ(ﷺ) ರವರ ಹತ್ಯೆಯಾದಾಗ ಮುಸ್ಲಿಮರ ಮನಸ್ಸು ತಲ್ಲಣಗೊಂಡಿದ್ದವು. ಆಪತ್ತುಗಳ ಪರ್ವತವೇ ಅವರ ಮುಂದೆ ಒಡೆದುಬಿತ್ತು. ಕುಟಿಲ ಹಾಗೂ ಕಳಂಕ ವ್ಯಕ್ತಿಗಳು ರಂಗ ಪ್ರವೇಶಮಾಡಿದರು ಮತ್ತು ಒಳ್ಳೆಯ ಜನರು ಕಳಂಕ ಹಚ್ಚಲ್ಪಟ್ಟರು. ತಮಗೆ ಈ ವರೆಗೆ ಏನೂ ಮಾಡಲು ಸಾಧ್ಯವಿರದಂತಹ ನೀಚರು ಫಿತ್ನ ಹಬ್ಬಿಸತೊಡಗಿದರು. ಸುಧಾರಣೆ ಮತ್ತು ಒಳಿತನ್ನು ಬಯಸಿದ ಜನರು ಅಲೀ (ﷺ) ರವರಿಗೆ ಬೈಅತ್ ಮಾಡಿದರು. ಆ ಸಮಯದಲ್ಲಿ ಖಿಲಾಫತ್‌ಗಾಗಿ ಅವರು ಅತ್ಯಂತ ಸೂಕ್ತ ವ್ಯಕ್ತಿಯಾಗಿದ್ದರು. ಆಗ ಇದ್ದ ಉಳಿದೆಲ್ಲಾ ಸಹಾಬಿಗಳಿಗಿಂತ ಉತ್ತಮರಾಗಿದ್ದರು. ಆದರೆ ಜನರು ತಲ್ಲಣಗೊಂಡಿದ್ದರಿಂದ ಮತ್ತು ಫಿತ್ನದ ಬೆಂಕಿಯು ಹರಡುತ್ತಿದ್ದುದರಿಂದ ಜನರ ಸಂಪೂರ್ಣ ಸಮ್ಮತವಿರಲಿಲ್ಲ. ಜಮಾಅತ್ ಸಂಘಟಿತಗೊಂಡಿರಲಿಲ್ಲ. ಆದ್ದ-ರಿಂದ ಖಲೀಫರ ಕಾಲದ ಮತ್ತು ಸಮುದಾಯದ ಉತ್ತಮ ಜನರೂ ಕೂಡಾ ತಾವು ಬಯಸಿದ್ದನ್ನು ಮಾಡಲಾಗಲಿಲ್ಲ. ಕೆಲವು ಜನರು ಫಿತ್ನ ಫಸಾದ್‌ನೊಳಗೆ ಬಿದ್ದುಬಿಟ್ಟರು. ನಂತರ ನಡೆದದ್ದು ಎಲ್ಲರಿಗೂ ತಿಳಿದಿದೆ.

ಹ. ಅಲೀ(ﷺ) ಮತ್ತು ಹ. ಮುಆವಿಯಾ(ﷺ)ರವರ ನಡುವೆ ಯುದ್ಧದಲ್ಲಿ ಸಹಾಬಿಗಳ ನಡುವಿನ ಜಗಳ ಮತ್ತು ಯುದ್ಧವನ್ನು ವಿವರಿಸುತ್ತಾ ಇಬ್ನ್ ತೈಮಿಯ್ಯ ಮುಂದೆ ಬರೆಯುತ್ತಾರೆ.

ಹ. ಮುಆವಿಯಾ(ﷺ) ಅಲೀ(ﷺ)ರೊಂದಿಗಿನ ಯುದ್ಧದ ಸಮಯದಲ್ಲಿ ಖಿಲಾಫತ್‌ಗಾಗಿ ವಾದಿಸಿರಲಿಲ್ಲ ಅಥವಾ ಇದಕ್ಕಾಗಿ ಅವರೊಂದಿಗೆ ಬೈಅತ್ ಕೂಡಾ ಆಗಿರಲಿಲ್ಲ ಮತ್ತು ತಾನು ಖಲೀಫಾ ಎಂದುಕೊಂಡು ಅಲೀ(ﷺ)ರೊಂದಿಗೆ ಯುದ್ಧವನ್ನು ಮಾಡಿರಲಿಲ್ಲ ಮತ್ತು ಅವರು ತಮ್ಮನ್ನು ಖಿಲಾಫತ್‌ನ ಹಕ್ಕುದಾರ ಎಂದೂ ತಿಳಿದಿರಲಿಲ್ಲ. ಮುಆವಿಯಾ(ﷺ)ರೊಂದಿಗೆ ಈ ಬಗ್ಗೆ ಯಾರು ವಿಚಾರಿಸಿದರೂ ಅವರಿಗೆ ಉತ್ತರವಾಗಿ ಅವರು ಈ ವಿಷಯವನ್ನು ಒಪ್ಪಿಕೊಳ್ಳುತ್ತಿದ್ದರು. ಮುಆವಿಯಾ(ﷺ) ಮತ್ತು ಅವರ ಈ ಜೊತೆಗಾರರು ಅಲೀ(ﷺ) ಮತ್ತವರ ಸಂಗಾತಿಗಳೊಂದಿಗೆ ತಾವು ಮೊದಲು ಯುದ್ಧ ಪ್ರಾರಂಭಿಸಬೇಕೆಂದು ಬಯಸಿರಲಿಲ್ಲ. ಬದಲಾಗಿ ಅಲೀ(ﷺ) ಮತ್ತವರ ಜೊತೆಗಾರರು ಏನು ತಿಳಿದ್ದಿದ್ದರೆಂದರೆ ಮುಆವಿಯಾ(ﷺ) ಮತ್ತವರ ಜೊತೆಗಾರರು

ತಮ್ಮನ್ನು ಅನುಸರಿಸುವುದು ಮತ್ತು ತಮ್ಮೊಂದಿಗೆ ಬೈಅತ್ ಮಾಡುವುದು ಅಗತ್ಯ ಎಂದು ತಿಳಿದಿದ್ದರು. ಏಕೆಂದರೆ ಮುಸ್ಲಿಮರಿಗೆ ಒಂದೇ ಖಲೀಫಾ ಇರಬೇಕೆಂಬುದು ಅವರ ಉದ್ದೇಶವಾಗಿತ್ತು. ಆದ್ದರಿಂದ ಈ ಕಾರಣದಿಂದ ಮುಆವಿಯಾ(ﷺ) ಮತ್ತು ಅವರ ಸಂಗಾತಿಗಳು ಸಮಅ ಮತ್ತು ಇತಾಅತ್ (ಕೇಳುವುದು ಮತ್ತು ಅನುಸರಿಸುವುದು) ನಿಂದ ಹೊರಗಿರುವವರು ಮತ್ತು ಒಂದು ಕಡ್ಡಾಯ ಕಾರ್ಯವನ್ನು ಅವರು ನಿರಾಕರಿಸಿದ್ದರು. ಅವರು ಆಗ ಬಲಾಢ್ಯರೂ ಆಗಿದ್ದರು. ಆದ್ದರಿಂದ ಅವರು ಅವರೊಂದಿಗೆ ಯುದ್ಧ ಮಾಡುವುದು ಅಗತ್ಯವೆಂದು ತಿಳಿದರು. ಏಕೆಂದರೆ ಆ ಜನರು ಈ ಕಡ್ಡಾಯ ಕರ್ಮವನ್ನು ಮಾಡಲು ಹಾಗೂ ಖಲೀಫಾರಿಗೆ ವಿಧೇಯತೆ ತೋರಲು ಮತ್ತು ಜಮಾಅತ್‌ನ ಒಗ್ಗಟ್ಟು ಇರಲಿಕ್ಕಾಗಿ ಆಗಿತ್ತು. ಆದರೆ ಮುಆವಿಯಾ(ﷺ)ರವರ ಹೇಳಿಕೆಯೇನೆಂದರೆ ಅಲೀ(ﷺ) ರವರ ಬೈಅತ್ ತಮ್ಮ ಮೇಲೆ ಕಡ್ಡಾಯವಲ್ಲ. ಅದಕ್ಕಾಗಿ ತಮ್ಮೊಂದಿಗೆ ಯುದ್ಧವಾದರೆ ನಾವು ಆಕ್ರಮಿಸಲ್ಪಟ್ಟವರಾಗುವುದು. ಇವರು ಹಾಗೆ ಹೇಳಿದ ಕಾರಣವೇನೆಂದರೆ ಉಸ್ಮಾನ್ (ﷺ)ರವರು ಆಕ್ರಮಣಕ್ಕೊಳಗಾದ ಸ್ಥಿತಿಯಲ್ಲಿ ಶಹೀದ್ ಮಾಡಲ್ಪಟ್ಟರು ಮತ್ತು ಅವರ ಕೊಲೆಗಾರರೂ ಅಲೀ(ﷺ)ರವರ ಸೈನ್ಯದಲ್ಲಿ ಸೇರಿದ್ದಾರೆ. ಸೈನ್ಯದಲ್ಲಿ ಅವರ ಶಕ್ತಿಯಿದೆ. ನಾವು ಹೇಳಿದರೆ ಅವರು ನಮ್ಮ ಮೇಲೆ ಹೆಚ್ಚು ಆಕ್ರಮವನ್ನು ಮಾಡುವರು. ಹ. ಅಲೀ (ﷺ)ರಿಗೂ ಅವರನ್ನು ಉಸ್ಮಾನ್(ﷺ)ರ ವಿಚಾರದಲ್ಲಿ ತಡೆಯಲು ಸಾಧ್ಯವಾಗಲಾರದು. ಆದ್ದರಿಂದ ತಮಗೆ ನ್ಯಾಯ ನೀಡುವಂತಹ ಮತ್ತು ತಮಗಾಗಿ ನ್ಯಾಯದೊಂದಿಗೆ ಪ್ರಯತ್ನಿಸುವಂತಹ ಒಬ್ಬರು ಖಲೀಫರ ಬೈಅತ್ ಮಾಡುತ್ತೇವೆ ಎಂಬುದಾಗಿತ್ತು.

ಸಹಾಬಿಗಳ ನಡುವಿನ ಭಿನ್ನಾಭಿಪ್ರಾಯಗಳು ಮತ್ತು ಯುದ್ಧ ಜಗಳಗಳ ಕುರಿತು ಅಹ್ಲುಸ್ಸುನ್ನತ್ ವಲ್‌ಜಮಾಅತ್‌ನ ನಿಲುವನ್ನು ಪರಿಶೀಲಿಸಿದರೆ ಎರಡು ವಿಷಯಗಳು ಮುಂದೆ ಬರುತ್ತದೆ.

ಮೊದಲನೆಯದು :ಅಹ್ಲುಸ್ಸುನ್ನತ್ ವಲ್‌ಜಮಾಅತ್ ಸಹಾಬಿಗಳ ನಡುವಿನ ಯುದ್ಧ ಘರ್ಷಣೆಗಳ ಬಗ್ಗೆ ಮೌನ ವಹಿಸುತ್ತದೆ. ಮತ್ತು ಇದರ ಬಗ್ಗೆ ಚಕಾರವೆತ್ತುವುದಿಲ್ಲ. ಏಕೆಂದರೆ ಸುಮ್ಮನಿರುವುದೇ ಸುರಕ್ಷಿತ ಮಾರ್ಗ. ವಿಶೇಷವಾಗಿ ಇಂತಹ ವಿಷಯಗಳಲ್ಲಿ ಮತ್ತು ಇವರ ಪ್ರಾರ್ಥನೆಯು ಹೀಗೆ ಇರುತ್ತದೆ.

﴿ وَٱلَّذِينَ جَآءُو مِنۢ بَعۡدِهِمۡ يَقُولُونَ رَبَّنَا ٱغۡفِرۡ لَنَا وَلِإِخۡوَٰنِنَا ٱلَّذِينَ سَبَقُونَا بِٱلۡإِيمَٰنِ وَلَا تَجۡعَلۡ فِي قُلُوبِنَا غِلّٗا لِّلَّذِينَ ءَامَنُواْ رَبَّنَآ إِنَّكَ رَءُوفٞ رَّحِيمٌ ١٠ ﴾

**“ಓ ನಮ್ಮ ಪ್ರಭೂ ನಮ್ಮನ್ನು ನಮಗಿಂತ ಮುಂಚೆ ವಿಶ್ವಾಸ ತಂದವರನ್ನು ಕ್ಷಮಿಸು ಮತ್ತು ನಮ್ಮ ಹೃದಯಗಳಲ್ಲಿ ಸತ್ಯ ವಿಶ್ವಾಸಿಗಳ ಮೇಲೆ ಯಾವುದೇ ದ್ವೇಷವನ್ನಿರಿಸಬೇಡ. ಓ ನಮ್ಮ ಪ್ರಭು ನೀನು ಮಹಾ ವಾತ್ಸಲ್ಯಪೂರ್ಣನೂ , ಅತ್ಯಂತ ಕರುಣಾಮಯಿಯೂ ಆಗಿರುತ್ತಿ.”** [362]

**362** ಕುರ್‌ಆನ್ 59:10

ಎರಡನೆಯದು: ಸಹಾಬಿಗಳ ವಿಷಯದಲ್ಲಿ ಕೆಟ್ಟದ್ದಕ್ಕೆ ಸಂಬಂಧಿಸಿರುವ ವರದಿಗಳಿವೆಯೋ ಅವುಗಳಿಗೆ ಕೆಳಗೆ ಕೊಟ್ಟಿರುವ ರೀತಿಯಲ್ಲಿ ಉತ್ತರ ನೀಡುವುದು,

ಮೊದಲನೆಯ ರೀತಿ: ಅಂತಹ ಎಲ್ಲಾ ವರದಿಗಳು ಸುಳ್ಳು ಆಗಿವೆ. ಮತ್ತು ಇಸ್ಲಾಮ್(ಮುಸ್ಲಿಮರ)ನ ಶತ್ರುಗಳು ಸಹಾಬಿಗಳಿಗೆ ಕಳಂಕ ಹಚ್ಚಲು ಉಂಟು ಮಾಡಿದವುಗಳಾಗಿವೆ.

ಎರಡನೆಯ ರೀತಿ: ಈ ವರದಿಗಳಲ್ಲಿ ಮಿತಿಮೀರುವಿಕೆಯನ್ನು ಮಾಡಿದ್ದಾರೆ.ಅಥವಾ ಅದರ ನೈಜ ಸ್ವರೂಪವು ತಿರುಚಲ್ಪಟ್ಟಿದೆ. ಅದರಲ್ಲಿ ಸುಳ್ಳನ್ನು ಸೇರಿಸಲಾಗಿದೆ. ಆದ್ದರಿಂದ ಇದು ಕಲಬೆರಕೆಯಾಗಿದೆ. ಇವುಗಳೆಡೆಗೆ ಮರಳುವುದು ಸರಿಯಲ್ಲ.

ಮೂರನೆಯ ರೀತಿ: ಈ ವಿಷಯದಲ್ಲಿ ಅಧಿಕೃತ ವರದಿಯಾಗಿರುವ ಆಸಾರ್ (ಸಹಾಬಿಗಳ ವರದಿ) ಮತ್ತು ಹದೀಸ್‌ಗಳು ಬಹಳ ಕಡಿಮೆ. ಒಂದು ವೇಳೆ ಈ ವರದಿಗಳು ಸಹೀಹ್ ಆಗಿದ್ದರೆ ಸಹಾಬಿಗಳು ತಕ್ಕ ಕಾರಣಗಳನ್ನು ಹೊಂದಿದ್ದಾರೆ. ಏಕೆಂದರೆ ಎಲ್ಲಾ ಸಹಾಬಿಗಳೂ ಮುಜ್ತಹಿದ್ ಆಗಿದ್ದರು. ಒಂದೋ ಅವರು ತಮ್ಮ ಇಜ್ತಿಹಾದ್‌ನಲ್ಲಿ ಸರಿಯಾದ ತೀರ್ಪು ಮಾಡಿರುವರು ಅಥವಾ ತಪ್ಪು ತೀರ್ಪು ನೀಡಿರುವರು. ಒಂದು ವೇಳೆ ಸರಿಯಾದ ತೀರ್ಪು ಮಾಡಿದ್ದರೆ ಅವರಿಗೆ ಎರಡು ಪುಣ್ಯವಿದೆ. ಒಂದು ವೇಳೆ ತೀರ್ಪಿನಲ್ಲಿ ತಪ್ಪಾಗಿದ್ದರೆ ಅವರಿಗೆ ಒಂದು ಪುಣ್ಯವಿದೆ. ಅವರ ತಪ್ಪು ಕ್ಷಮಿಸಲ್ಪಡುತ್ತದೆ. ಪ್ರವಾದಿ(ﷺ) ಹೇಳಿರುವರು.

**“ತೀರ್ಪು ನೀಡುವವನು ಇಜ್ತಿಹಾದ್ ಮಾಡಿದರೆ ಮತ್ತು ಅದು ಸರಿಯಾದರೆ ಅದಕ್ಕೆ ಎರಡು ಪ್ರತಿಫಲವಿರುವುದು ಮತ್ತು ತಪ್ಪು ಮಾಡಿದರೆ ಒಂದು ಪ್ರತಿಫಲವಿರುವುದು.”** [363]

ನಾಲ್ಕನೆಯ ರೀತಿ: ಅವರೂ ಕೂಡಾ ನಮ್ಮಂತೆ ಮನುಷ್ಯರಾಗಿದ್ದರು. ಅವರಲ್ಲೂ ತಪ್ಪು ಸಂಭವಿಸುವುದು, ಅವರು ಯಾರೂ ‘ಮಅಸೂಮ್’(ಪಾಪ ಸಂಭವಿಸದವರು) ಆಗಿರಲಿಲ್ಲ ಮತ್ತು ಅವರಿಂದ ಸ್ವಲ್ಪ ತಪ್ಪು ಆದರೂ ಕೂಡಾ ಅವರ ಬಳಿ ಸಾವಿರಾರು ಸತ್ಕರ್ಮಗಳು ಇವೆ. ಅವರ ತಪ್ಪುಗಳನ್ನು ಅಳಿಸುಲು ಅವರ ಬಳಿ ತೌಬಾ ಇದೆ. ಅದು ಎಲ್ಲಾ ತಪ್ಪುಗಳನ್ನು ತಿಂದುಬಿಡುವುದು. ಕ್ಷಮೆ ಸಿಗಲು ಅವರಲ್ಲಿ ಉತ್ತಮವಾದ ಸತ್ಕರ್ಮಗಳಿವೆ. ಅಲ್ಲಾಹು ಹೇಳುತ್ತಾನೆ.

﴿إِنَّ ٱلۡحَسَنَٰتِ يُذۡهِبۡنَ ٱلسَّيِّـَٔاتِۚ﴾

**“ನಿಸ್ಸಂದೇಹವಾಗಿಯೂ ಸತ್ಕರ್ಮಗಳು ದುಷ್ಕರ್ಮಗಳನ್ನು ಅಳಿಸಿ ಹಾಕುತ್ತವೆ.”** [364]

ಇವರಿಗೆ ಪ್ರವಾದಿ(ﷺ)ರ ಸಂಗಾತಿಗಳಾಗುವ ಭಾಗ್ಯ ಲಭಿಸಿದೆ. ಅವರೊಂದಿಗೆ(ﷺ) ಜಿಹಾದ್‌ನಲ್ಲಿ ಭಾಗವಹಿಸುವ ಭಾಗ್ಯವು ಲಭಿಸಿದೆ. ಇದು ಇವರ ಸಾಮಾನ್ಯ ತಪ್ಪುಗಳನ್ನು

**363** ಬುಖಾರಿ ಮುಸ್ಲಿಮ್

**364** ಕುರ್‌ಆನ್ 11:114

ತೊಳೆಯಲು ಧಾರಾಳ ಸಾಕು.

ಇತರರ ಪುಣ್ಯಗಳಿಗೆ ಹೋಲಿಸಿದರೆ ಇವರ ಪುಣ್ಯಗಳು ಬಹಳ ಅಧಿಕ ಮಾಡಲ್ಪಡುತ್ತದೆ. ಅವರ ಶ್ರೇಷ್ಠತೆಯನ್ನು ಯಾರೂ ಗಳಿಸಲು ಸಾಧ್ಯವಿಲ್ಲ. ಅವರದು ಉತ್ತಮ ಪೀಳಿಗೆಯಾಗಿತ್ತು. ಅವರ ಒಂದು 'ಮುದ್ದ್' ಬೊಗಸೆಯಷ್ಟು ದಾನವು ಇತರರ ಒಂದು ಉಹುದ್ ಬೆಟ್ಟದಷ್ಟು ಚಿನ್ನದ ದಾನಕ್ಕಿಂತ ಉತ್ತಮ ಹಾಗೂ ಶ್ರೇಷ್ಠವಾದುದಾಗಿರುತ್ತದೆ. ಅಲ್ಲಾಹು ಅವರೊಂದಿಗೆ ಸಂತೃಪ್ತನು ಮತ್ತು ಅವರು ಅವನೊಂದಿಗೆ ಸಂತೃಪ್ತರು.

ಶೈಖುಲ್ ಇಸ್ಲಾಮ್ ಇಬ್ನ್ ತೈಮಿಯ(ﷺ) ಹೇಳುತ್ತಾರೆ. "ಸಹಾಬಿಗಳಲ್ಲಿ ಯಾರೂ 'ಮಅಸೂಮ್' (ಪಾಪ ಸಂಭವಿಸದವರು) ಅಲ್ಲವೆಂಬುದರ ಬಗ್ಗೆ ಅಹ್ಲುಸ್ಸುನ್ನತ್ ವಲ್ ಜಮಾಅತ್‌ನ ಎಲ್ಲರಿಗೂ ಒಮ್ಮತಾಭಿಪ್ರಾಯವಿದೆ. ಅದು ಮೊದಲು ವಿಶ್ವಾಸ ಸ್ವೀಕರಿಸಿದವರಾಗಿರಲಿ ಅಥವಾ ನಂತರ ವಿಶ್ವಾಸ ಸ್ವೀಕರಿಸಿದವರಾಗಿರಲಿ ಅವರಿಂದಲೂ ತಪ್ಪು ಸಂಭವಿಸುವ ಸಾಧ್ಯತೆ ಇದೆ. ಅಲ್ಲಾಹು ತೌಬಾದ ಮೂಲಕ ಅವರ ದೋಷಗಳನ್ನು ಕ್ಷಮಿಸುವನು. ಅವರ ದರ್ಜೆಯನ್ನು ಏರಿಸುವನು ಮತ್ತು ಅವರ ಸತ್ಕರ್ಮಗಳ ಕಾರಣದಿಂದ ಅವರ ತಪ್ಪುಗಳು ಅಳಿಸಲ್ಪಡುವವು ಅಥವಾ ಇತರ ಕಾರಣಗಳಿಂದ ಅವರಿಗೆ ಕ್ಷಮೆ ದೊರಕುವುದು. ಅಲ್ಲಾಹು ಹೇಳುತ್ತಾನೆ:

﴿ وَٱلَّذِى جَآءَ بِٱلصِّدْقِ وَصَدَّقَ بِهِۦٓ ۙ أُو۟لَـٰٓئِكَ هُمُ ٱلْمُتَّقُونَ ﴿٣٣﴾ لَهُم مَّا يَشَآءُونَ عِندَ رَبِّهِمْ ۚ ذَٰلِكَ جَزَآءُ ٱلْمُحْسِنِينَ ﴿٣٤﴾ لِيُكَفِّرَ ٱللَّهُ عَنْهُمْ أَسْوَأَ ٱلَّذِى عَمِلُوا۟ وَيَجْزِيَهُمْ أَجْرَهُم بِأَحْسَنِ ٱلَّذِى كَانُوا۟ يَعْمَلُونَ ﴿٣٥﴾ ﴾

**"ಮತ್ತು ಒಬ್ಬ ಸತ್ಯ ವಿಷಯವನ್ನು ತಂದವನು ಮತ್ತು ಜನರ ಪೈಕಿ ಯಾರು ಅದನ್ನು ಸತ್ಯಗೊಳಿಸಿದರೋ ಅವರು ಮುತ್ತಕೀಗಳು (ಭಯಭಕ್ತಿಯುಳ್ಳವರು) ಅವರ ಪ್ರಭುವಿನ ಬಳಿ ಅವರೇನು ಬಯಸುತ್ತಾರೋ ಅದು ಇದೆ. ಸತ್ಕರ್ಮಿಗಳಿಗೆ ಇದೇ ಸತ್ಫಲ. ಅಲ್ಲಾಹು ಅವರಿಂದ ಅವರು ಮಾಡಿರುವ ಕೆಡುಕುಗಳನ್ನು ದೂರೀಕರಿಸಲು ಮತ್ತು ಅವರು ಮಾಡುತ್ತಿದ್ದ ಸತ್ಕರ್ಮಗಳಿಗೆ ಪ್ರತಿಫಲ ನೀಡಲು ಆಗಿರುತ್ತದೆ."** [(365)]

ಇನ್ನೊಂದು ಕಡೆಯಲ್ಲಿ ಹೀಗಿದೆ:

﴿ حَتَّىٰٓ إِذَا بَلَغَ أَشُدَّهُۥ وَبَلَغَ أَرْبَعِينَ سَنَةً قَالَ رَبِّ أَوْزِعْنِىٓ أَنْ أَشْكُرَ نِعْمَتَكَ ٱلَّتِىٓ أَنْعَمْتَ عَلَىَّ وَعَلَىٰ وَٰلِدَىَّ وَأَنْ أَعْمَلَ صَـٰلِحًا تَرْضَىٰهُ وَأَصْلِحْ لِى فِى ذُرِّيَّتِىٓ ۖ إِنِّى تُبْتُ إِلَيْكَ وَإِنِّى مِنَ ٱلْمُسْلِمِينَ ﴿١٥﴾ أُو۟لَـٰٓئِكَ ٱلَّذِينَ نَتَقَبَّلُ عَنْهُمْ أَحْسَنَ مَا عَمِلُوا۟ وَنَتَجَاوَزُ عَن

**365** ಕುರ್‌ಆನ್ 39:33–35

سَيِّـَٔاتِهِمْ فِىٓ أَصْحَٰبِ ٱلْجَنَّةِ ﴾

**"ಅವನು ಪೂರ್ತಿ ಯುವಕನಾಗುವಾಗ ಮತ್ತು ನಲ್ವತ್ತು ವರ್ಷವನ್ನು ತಲುಪುವಾಗ ಅವನು ಹೇಳಿದನು "ಓ ನನ್ನ ಪ್ರಭುವೇ! ನೀನು ನನ್ನ ಮೇಲೆ ಮತ್ತು ನನ್ನ ಮಾತಾಪಿತರ ಮೇಲೆ ಕರುಣೆಸಿರುವ ಅನುಗ್ರಹಕ್ಕೆ ಕೃತಜ್ಞತೆಯನ್ನು ಸಲ್ಲಿಸುವ ಹಾಗೂ ನೀನು ಸಂತೃಪ್ತನಾಗುವಂತಹ ಸತ್ಕರ್ಮಗಳನ್ನು ಮಾಡುವ ಸೌಭಾಗ್ಯವನ್ನು ನನಗೆ ನೀಡು. ಸಂತಾನಗಳಲ್ಲಿ ಒಳ್ಳೆಯವರನ್ನಾಗಿ ಮಾಡಿ ನನಗೆ ಸುಖ ನೀಡು. ನಿಜವಾಗಿಯೂ ನಾನು ನಿನ್ನ ಕಡೆಗೆ ಪಶ್ಚಾತ್ತಾಪದಿಂದ ಮರಳಿದ್ದೇನೆ ಮತ್ತು ಸತ್ಯವಾಗಿಯೂ ನಾನು ಮುಸ್ಲಿಮರಲ್ಲಾಗಿರುವೆನು. ನಾವು ಇವರ ಸತ್ಕರ್ಮಗಳನ್ನು ಸ್ವೀಕರಿಸುವೆವು ಮತ್ತು ಅವರ ತಪ್ಪುಗಳನ್ನು ಮನ್ನಿಸುವೆವು. ಅವರೊಡನೆ ಮಾಡಲಾಗುತ್ತಿರುವ ಸತ್ಯ ವಾಗ್ದಾನಗಳ ಪ್ರಕಾರ ಅವರು ಸ್ವರ್ಗದವರೊಂದಿಗೆ ಸೇರಿಕೊಳ್ಳುವರು."** (366)

ಸಹಾಬಿಗಳ ನಡುವೆ ಸಂಭವಿಸಿದ ಭಿನ್ನಾಭಿಪ್ರಾಯ, ಘರ್ಷಣೆ, ಯುದ್ಧದ ಫಿತ್ನವು ಎದ್ದಾಗ ಇಸ್ಲಾಮ್ ಧರ್ಮದ ಶತ್ರುಗಳು ಸಹಾಬಿಗಳ ವ್ಯಕ್ತಿತ್ವ, ಗೌರವಗಳ ಮೇಲೆ ಆಕ್ರಮಣ ನಡೆಸಲು ಕಾರಣವನ್ನಾಗಿ ಮಾಡಿದರು . ಇಂತಹ ನೀಚ ಕೆಲಸದಲ್ಲಿ ಇಂದಿನ ಕೆಲವು ಲೇಖಕರು ತಲ್ಲೀನರಾಗಿದ್ದಾರೆ. ಧರ್ಮದ ಜ್ಞಾನವಿಲ್ಲದೆ ಇವರು ಬಾಯಿಗೆ ಬಂದಂತೆ ಬೊಗಳುತ್ತಾರೆ. ಸ್ವತಃ ತಮ್ಮನ್ನು ಸಹಾಬಿಗಳ ಕುರಿತಿರುವ ತೀರ್ಪುಗಾರರನ್ನಾಗಿ ಮಾಡುತ್ತಾರೆ ಮತ್ತು ಯಾವುದೇ ಆಧಾರ ಪ್ರಮಾಣವಿಲ್ಲದೆ ಕೆಲವು ಸಹಾಬಿಗಳನ್ನು ಸತ್ಯವಂತರೆಂದೂ ಮತ್ತು ಕೆಲವರನ್ನೂ ತಪ್ಪಿತಸ್ಥರೆಂದೂ ಚಿತ್ರೀಕರಿಸುತ್ತಾರೆ. ಇವುಗಳೆಲ್ಲ ಮೂಢತನ(ಜಾಹಿಲಿಯ್ಯತ್) ದೇಹೇಚ್ಚೆಗಳ ಅನುಸರಣೆ, ಅಸೂಯಾಳುಗಳಾದ ಪಾಶ್ಚಾತ್ಯ ಶತ್ರುಗಳ ಮತ್ತವರ ಅನುಕರಣೆಗಳಿಂದ ಮಾಡಲಾಗುತ್ತದೆ. ಈ ಜನರು ತಮ್ಮ ದುಷ್ಕರ್ಮಗಳಿಂದ ಇಸ್ಲಾಮೀ ಚರಿತ್ರೆ ಮತ್ತು ಸಜ್ಜನ ಮುಂಗಾಮಿಗಳ ಬಗ್ಗೆ ತಿಳಿಯದ ಕೆಲವು ಯುವಕರ ಮನಸ್ಸಿನಲ್ಲಿ ಸಂಶಯದ ಬೀಜವನ್ನು ಬಿತ್ತುತ್ತಾರೆ. ಇದೇ ರೀತಿಯಲ್ಲಿ ಇವರು ಇಸ್ಲಾಮ್‌ನೊಳಗಿಂದಲೇ ಇಸ್ಲಾಮ್‌ಗೆ ಕಠಾರಿ ಹಾಕಲು ಬಯಸುತ್ತಾರೆ. ಮುಸ್ಲಿಮರ ನಡುವೆ ವಿಚ್ಛಿದ್ರತೆ ಉಂಟು ಮಾಡಲು ಬಯಸುತ್ತಾರೆ ಮತ್ತು ಈ ಸಮುದಾಯದ ಜನಾಂಗದ ಮೇಲೆ ಮುಂಗಾಮಿಗಳ ಕುರಿತು ದ್ವೇಷ ಮೂಡಿಸಲು ಪ್ರಯತ್ನಿಸುತ್ತಾರೆ. ಗೌರವಾನ್ವಿತ ಸಹಾಬಿಗಳನ್ನು ಅನುಸರಿಸಬಾರದೆಂಬುದು ಇವರ ಉದ್ದೇಶವಾಗಿದೆ. ಅಲ್ಲಾಹುವಿನ ಸೂಕ್ತಿಯು ಹೀಗಿದೆ.

﴿ وَٱلَّذِينَ جَآءُو مِنۢ بَعْدِهِمْ يَقُولُونَ رَبَّنَا ٱغْفِرْ لَنَا وَلِإِخْوَٰنِنَا ٱلَّذِينَ سَبَقُونَا بِٱلْإِيمَٰنِ وَلَا تَجْعَلْ فِى قُلُوبِنَا غِلًّا لِّلَّذِينَ ءَامَنُوا۟ رَبَّنَآ إِنَّكَ رَءُوفٌ رَّحِيمٌ ﴿١٠﴾ ﴾

366 ಕುರ್‌ಆನ್ 46:15–16

**"ಮತ್ತು ಅವರಿಗಾಗಿ ಅವರ ನಂತರ ಬಂದವರು ಅವರು ಹೇಳುತ್ತಾರೆ, "ನಮ್ಮ ಪ್ರಭೂ! ನಮ್ಮನ್ನು ಕ್ಷಮಿಸು ಮತ್ತು ನಮಗಿಂತ ಮುಂಚೆ ವಿಶ್ವಾಸ ಸ್ವೀಕರಿಸಿದವರನ್ನು ಕ್ಷಮಿಸು ಮತ್ತು ಸತ್ಯವಿಶ್ವಾಸಿಗಳ ಕುರಿತು ನಮ್ಮ ಹೃದಯದಲ್ಲಿ ದ್ವೇಷವನ್ನಿರಿಸಬೇಡ. ಓ ನಮ್ಮ ಪ್ರಭೂ ನೀನು ದಯೆಯುಳ್ಳವನೂ, ಕರುಣಾಮಯಿಯೂ ಆಗಿರುತ್ತೀ."** (367)

### ಅಧ್ಯಾಯ–6

## ಸಹಾಬಿಗಳ ಮತ್ತು ಇಮಾಮರುಗಳನ್ನು ದೂಷಿಸುವುದರ ಕುರಿತು ನಿಷೇಧದ ವಿವರಣೆ

1. ಸಹಾಬಿಗಳಿಗೆ ಕೆಟ್ಟದ್ದನ್ನು ಹೇಳುವುದರ ನಿಷೇಧ

ಅಹ್ಲುಸ್ಸುನ್ನತ್ ವಲ್ ಜಮಾಅತ್‌ನ ವಿಶ್ವಾಸವೆಂದರೆ ಮಾನ್ಯರಾದ ಸಹಾಬಿಗಳ ವಿಷಯದಲ್ಲಿ ಅವರ ಹೃದಯವು ಶುದ್ಧವಾಗಿದೆ ಮತ್ತು ಅವರ ನಾಲಗೆಯು ಶುದ್ಧವಾಗಿದೆ. ಅಲ್ಲಾಹು ಅವರನ್ನು ಈ ರೀತಿ ವಿಶ್ಲೇಷಿಸುತ್ತಾನೆ.

﴿وَٱلَّذِينَ جَآءُو مِنۢ بَعۡدِهِمۡ يَقُولُونَ رَبَّنَا ٱغۡفِرۡ لَنَا وَلِإِخۡوَٰنِنَا ٱلَّذِينَ سَبَقُونَا بِٱلۡإِيمَٰنِ وَلَا تَجۡعَلۡ فِي قُلُوبِنَا غِلّٗا لِّلَّذِينَ ءَامَنُواْ رَبَّنَآ إِنَّكَ رَءُوفٞ رَّحِيمٌ ١٠﴾

**"ಮತ್ತು (ಅವರಿಗಾಗಿ)ಅದರ ನಂತರ ಬಂದವರು ಅವರು ಹೇಳುತ್ತಾರೆ, "ನಮ್ಮ ಪ್ರಭುವೇ! ನಮ್ಮನ್ನು ಕ್ಷಮಿಸು ಮತ್ತು ನಮಗಿಂತ ಮುಂಚೆ ವಿಶ್ವಾಸವಿರಿಸಿದವರನ್ನೂ ಕ್ಷಮಿಸು ಮತ್ತು ಸತ್ಯವಿಶ್ವಾಸಿಗಳ ಬಗ್ಗೆ ನಮ್ಮ ಹೃದಯದಲ್ಲಿ ದ್ವೇಷವನ್ನಿರಿಸಬೇಡ. ನಮ್ಮ ಪ್ರಭೂ, ನೀನು ದಯೆಯುಳ್ಳವನೂ, ಕರುಣಾಮಯಿಯೂ ಆಗಿರುತ್ತಿ."** (368)

ಮತ್ತು ಅವರು ಅಲ್ಲಾಹನ ಸಂದೇಶವಾಹಕರ ಈ ವಚನದ ಮೇಲೆ ದೃಢವಾಗಿ ಅನುಸರಿಸುತ್ತಾರೆ.

«لَا تَسُبُّوا أَصْحَابِي فَوَالَّذِي نَفْسِي بِيَدِهِ لَوْ أَنْفَقَ أَحَدُكُمْ مِثْلُ أُحْدٍ ذَهَبًا مَا بَلَغَ مُدَّ أَحَدِهِمْ وَلَا نَصِيفَهُ»

**"ನನ್ನ ಸಹಾಬಿಗಳನ್ನು ತೆಗಳಬೇಡಿರಿ, ಯಾರ ಕೈಯಲ್ಲಿ ನನ್ನ ಜೀವವಿದೆಯೋ ಅವನ ಆಣೆ, ಒಂದು ವೇಳೆ ನಿಮ್ಮಲ್ಲಿ ಯಾರಾದರೂ ಉಹುದ್ (ಬೆಟ್ಟದಷ್ಟು)ನಷ್ಟು**

**367** ಕುರ್‌ಆನ್ 59:10

**368** ಕುರ್‌ಆನ್ 59:10

**ಚಿನ್ನವನ್ನು ಖರ್ಚುಮಾಡಿದರೂ ಅವರ ಒಂದು ಮುದ್ದ್ ಅಥವಾ ಅದರ ಅರ್ಧದಷ್ಟಕ್ಕೂ ತಲುಪಲಾರದು."** [369]

ಅದು ರವಾಫಿಳ್ ಮತ್ತು ಖವಾರಿಜ್ ಗುಂಪುಗಳ ದಾರಿತಪ್ಪಿದ ಕ್ರಮಗಳಿಂದೆಲ್ಲ ಪರಿಶುದ್ಧವಾಗಿದೆ. ಈ ಗುಂಪುಗಳು ಸಹಾಬಿಗಳನ್ನು ನಿಂದಿಸುತ್ತವೆ. ಅವರ ಬಗ್ಗೆ ದ್ವೇಷವಿರಿಸುತ್ತವೆ ಮತ್ತು ಅವರ ಶ್ರೇಷ್ಠತೆಯನ್ನು ನಿಷೇಧಿಸುತ್ತವೆ ಮತ್ತು ಆ ಸಹಾಬಿಗಳಲ್ಲಿ ಹೆಚ್ಚಿನವರ ಮೇಲೆ ಕುಫ್ರಿನ ಫತ್ವಾವನ್ನು ನೀಡುತ್ತವೆ.

ಕುರ್‌ಆನ್ ಸುನ್ನತ್‌ನಲ್ಲಿ ಸಹಾಬಿಗಳು ಕುರಿತು ಯಾವುದೆಲ್ಲ ಶ್ರೇಷ್ಠತೆಗಳಿವೆಯೋ ಅವುಗಳನ್ನು ಅಹ್ಲುಸ್ಸುನ್ನತ್ ವಲ್‌ಜಮಾಅತ್ ಅಂಗೀಕರಿಸುತ್ತದೆ ಮತ್ತು ಸಹಾಬಿಗಳು ಉಮ್ಮತ್‌ನ ಅತ್ಯುತ್ತಮ ಜಮಾಅತ್ ಎಂದು ನಂಬುತ್ತದೆ. ಪ್ರವಾದಿ(ﷺ)ವರ್ಯರು ಹೀಗೆ ನುಡಿದಿದ್ದಾರೆ.

«خَيْرُكُمْ قَرْنِي ....»

**"ನಿಮ್ಮಲ್ಲಿ ಉತ್ತಮರು ನನ್ನ ಕಾಲದವರು."** [370]

ಅಹ್ಲುಸ್ಸುನ್ನತ್ ವಲ್ ಜಮಾತ್ ಯಾರು? ಅವರನ್ನು ಒಂದು ಹದೀಸ್‌ನ ಮೂಲಕ ತಿಳಿಯಬಹುದು. ಒಮ್ಮೆ ರಸೂಲುಲ್ಲಾಹಿ(ﷺ) ಹೇಳಿದರು. ಈ ಸಮುದಾಯವು 73 ಭಾಗಗಳಾಗಿ ವಿಭಜನೆಗೊಳ್ಳುವುದು. ಒಂದು ವಿಭಾಗದ ಹೊರತು ಉಳಿದೆಲ್ಲವೂ ನರಕಕ್ಕೆ ಹೋಗುವುದು. ಆಗ ಜನರು ಆ ಜಮಾಅತ್‌ನ ಕುರಿತು ಕೇಳಿದಾಗ ಅವರು(ﷺ) ಉತ್ತರಿಸಿದರು: **"ನಾನು ಮತ್ತು ನನ್ನ ಸಹಾಬಿಗಳನ್ನು ಅನುಸರಿಸುವವರು"** [371]

ಇಮಾಮ್ ಮುಸ್ಲಿಮ್‌ರವರ ಅತ್ಯಂತ ಹಿರಿಯ ಶೈಖ್‌ರಾದ ಇಮಾಮ್ ಅಬೂಝುರ್‌ಆ ಹೀಗೆಂದಿದ್ದಾರೆ. "ಒಬ್ಬ ವ್ಯಕ್ತಿಯು ಸಹಾಬಿಗಳಲ್ಲಿ ಯಾರದಾದರೂ ಕುಂದು ಕೊರತೆಗಳನ್ನು ಹುಡುಕುತ್ತಿದ್ದರೆ ಅವನು "ಝಿಂದೀಖ್" (ನಿರೀಶ್ವರವಾದಿ) ಯೆಂದು ನೀ ತಿಳಿದುಕೋ. ಏಕೆಂದರೆ ಕುರ್‌ಆನ್ ಸತ್ಯವಾಗಿದೆ. ರಸೂಲ್ ಸತ್ಯವಾಗಿರುವರು. ರಸೂಲುಲ್ಲಾಹಿ(ﷺ) ತಂದಿರುವ ಶರೀಅತ್ ಸತ್ಯವಾಗಿದೆ. ರಸೂಲುಲ್ಲಾಹಿ(ﷺ)ರವರು ತಂದ ಶಿಕ್ಷಣವನ್ನು ನಮ್ಮ ತನಕ ತಲುಪಿಸಿರುವುದು ಸಹಾಬಿಗಳೇ ಆಗಿರುವರು ಎಂಬುವುದು ಎಲ್ಲರಿಗೂ ತಿಳಿದಿದೆ. ಆದ್ದರಿಂದ ಅವರನ್ನು ಜರಹ್ (ನಿಂದೆ) ಮಾಡುವುದು ವಾಸ್ತವದಲ್ಲಿ ಇಸ್ಲಾಮೀ ಶಿಕ್ಷಣವನ್ನೂ, ಕುರ್‌ಆನ್ ಸುನ್ನತ್‌ಅನ್ನೂ ಬಾತಿಲ್(ನಿರಾಧಾರ)ಮಾಡುವುದಾಗಿದೆ. ಆದ್ದರಿಂದ ಸಹಾಬಿಗಳನ್ನು ನಿಂದಿಸುವವನನ್ನು ಝಿಂದೀಖ್ ಮತ್ತು ನಾಸ್ತಿಕನೆಂದು ಕರೆಯುವುದು ಸೂಕ್ತವಾಗಿದೆ.

**369** ಬುಖಾರಿ ಮುಸ್ಲಿಮ್

**370** ಸಹೀಹೈನ್

**371** ಇಮಾಮ್ ಅಹ್ಮದ್ ಮತ್ತಿರರು

ವಿದ್ವಾಂಸರಾದ ಹಮ್‌ದಾನ್ ತಮ್ಮ ಗ್ರಂಥ 'ನಿಹಾಯತುಲ್ ಮುಬ್ತದೀನ್' ನಲ್ಲಿ ಬರೆಯುತ್ತಾರೆ **"ಯಾರಾದರೂ ಸಹಾಬಿಗಳನ್ನು ನಿಂದಿಸುತ್ತಾನೆ ಹಾಗೂ ಅದು ಸರಿ ಎಂದರೆ ಅವನು ಕಾಫಿರ್, ಮತ್ತು ಒಬ್ಬ ನಿಂದಿಸುತ್ತಾನೆ ಆದರೆ ಅದನ್ನು ಸರಿ ಎಂದುಕೊಳ್ಳುವುದಿಲ್ಲವೆಂದಾದರೆ ಅವನು ಫಾಸಿಖ್(ದುರಾಚಾರಿ) ಆಗಿರುವನು. ಆದ್ದ-ರಿಂದ ನಿಸ್ಸಂಶಯ ಕಾಫಿರ್ ಆಗುತ್ತಾನೆ ಮತ್ತು ಯಾರಾದರೂ ಒಂದು ಸಹಾಬಿಯ ಮೇಲೆ ಫಿಸ್ಕ್(ದುರಾಚಾರ)ನ ತೀರ್ಪು ಮಾಡಿದರೆ ಅಥವಾ ಅವರ ಧರ್ಮವನ್ನು ನಿಂದೆ ಮಾಡಿದರೆ ಅಥವಾ ಅವರ ಮೇಲೆ ಕುಫ್ರ್‌ನ ಫತ್ವಾ ಕೊಡುತ್ತಾನೆ ಎಂದಾದರೆ ಅವನೂ ಕಾಫಿರ್ ಅಗಿದ್ದಾನೆ."** (372)

2. ಇಮಾಮರನ್ನು ಮತ್ತು ಉಲೆಮಾಗಳನ್ನು ನಿಂದಿಸುವುದರ ನಿಷೇಧ

ಗೌರವಾನ್ವಿತ ಸಹಾಬಿಗಳ ನಂತರ ಶ್ರೇಷ್ಠ ಮತ್ತು ಗೌರವದ, ಉತ್ತಮ ಸ್ಥಾನದ ವಿಷಯದಲ್ಲಿ ದೀನ್‌ನ ಇಮಾಮರು ಮತ್ತು ಸಮುದಾಯದ ಉಲೆಮಾಗಳು ಬರುತ್ತಾರೆ. ಇವರಲ್ಲಿ ತಾಬಈನ್, ತಬಅ ತಾಬಈನ್, ಮತ್ತು ಅವರ ನಂತರ ಬರುವ ಅವರ ಮುತ್ತಬಈನ್ ಇರುವರು. ಅಲ್ಲಾಹು ಹೇಳುತ್ತಾನೆ.

﴿ وَٱلسَّٰبِقُونَ ٱلْأَوَّلُونَ مِنَ ٱلْمُهَٰجِرِينَ وَٱلْأَنصَارِ وَٱلَّذِينَ ٱتَّبَعُوهُم بِإِحْسَٰنٍ رَّضِىَ ٱللَّهُ عَنْهُمْ وَرَضُوا۟ عَنْهُ ﴾

**"ಈಮಾನಿನ ಕಡೆಗೆ ಓಗೊಡುವುದರಲ್ಲಿ ಮೊದಲಿಗರಾದ ಮುಹಾಜಿರ್‌ಗಳು ಅನ್ಸಾರರೊಂದಿಗೂ, ಅನಂತರ ಒಳಿತಿನೊಂದಿಗೂ ಅವರನ್ನು ಹಿಂಬಾಲಿಸಿದವರೊಂದಿಗೂ ಅವರು ಅಲ್ಲಾಹನೊಂದಿಗೆ ಸಂತೃಪ್ತರಾದರು . ಅಲ್ಲಾಹನು ಅವರೊಂದಿಗೆ ಪ್ರಸನ್ನನಾದನು."** (373)

ಆದ್ದರಿಂದ ಅವರನ್ನು ಕೀಳು ಮಾಡುವುದು ಅಥವಾ ಅವರನ್ನು ನಿಂದಿಸುವುದು ಯಾವುದೇ ಸ್ಥಿತಿಯಲ್ಲೂ ಸರಿಯಲ್ಲ. ಏಕೆಂದರೆ ಅವರು ಸನ್ಮಾರ್ಗದ ಜ್ಞಾನವನ್ನು ಹೊಂದಿರುವವರಾಗಿದ್ದಾರೆ. ಅಲ್ಲಾಹು ಹೇಳುತ್ತಾನೆ.

﴿ وَمَن يُشَاقِقِ ٱلرَّسُولَ مِنۢ بَعْدِ مَا تَبَيَّنَ لَهُ ٱلْهُدَىٰ وَيَتَّبِعْ غَيْرَ سَبِيلِ ٱلْمُؤْمِنِينَ نُوَلِّهِۦ مَا تَوَلَّىٰ وَنُصْلِهِۦ جَهَنَّمَ ۖ وَسَآءَتْ مَصِيرًا ﴿١١٥﴾ ﴾

**"ಮತ್ತು ಯಾರು ನೇರ ಮಾರ್ಗವನ್ನು ಅರಿತ ಬಳಿಕವೂ ಸಂದೇಶವಾಹಕರನ್ನು ಕಡೆಗಣಿಸಿದರೆ ಮತ್ತು ಸತ್ಯ ವಿಶ್ವಾಸಿಗಳ ದಾರಿಯ ಹೊರತು ಬೇರೆ ದಾರಿಯಲ್ಲಿ ನಡೆದರೆ**

---

**372** ಶರಹ್ ಅಕೀದ ತುಸ್ಸಿಫಾರೈನಿ 2-388-389

**373** ಕುರ್‌ಆನ್ 9:100

**ಅವನು ಎಲ್ಲಿಗೆ ಹೋಗುತ್ತಾನೋ ನಾವು ಅವನನ್ನು ಅಲ್ಲಿಗೇ ತಿರುಗಿಸುವೆವು ಮತ್ತು (ಅಂತ್ಯದಿನದಂದು) ನರಕಕ್ಕೆ ಹಾಕುವೆವು ಮತ್ತದು ಅತ್ಯಂತ ನಿಕೃಷ್ಟ ತಂಗುದಾಣವಾಗಿದೆ.”** (374)

ಅತ್ತಹಾವಿಯಾದ ವ್ಯಾಖ್ಯಾನಕಾರ ಹೇಳುತ್ತಾರೆ “ಕುರ್‌ಆನ್‌ನಲ್ಲಿ ಹೇಳಿದಂತೆ ಅಲ್ಲಾಹುವಿನೊಂದಿಗೆ ಮತ್ತವನ ಸಂದೇಶವಾಹಕರೊಂದಿಗೆ(ﷺ) ಮಿತ್ರತ್ವದ ಬಳಿಕ ಸತ್ಯ ವಿಶ್ವಾಸಿಗಳೊಂದಿಗೂ ಮಿತ್ರತ್ವ ಹಾಗೂ ಅನುಕಂಪಾತ್ಮಕ ಸ್ವಭಾವವಿಡುವುದು ಪ್ರತಿಯೊಂದು ಸತ್ಯವಿಶ್ವಾಸಿಯ ಮೇಲೆ ಕಡ್ಡಾಯವಾಗಿದೆ. ವಿಶೇಷವಾಗಿ ಅಂಬಿಯಾಗಳ ವಾರೀಸುದಾರ(ಉಲಮಾಗಳು)ರೊಂದಿಗೆ ಸಂಪರ್ಕ ಮಿತ್ರತ್ವ ಅತ್ಯಗತ್ಯವಾಗಿದೆ. ಅವರನ್ನು ಅಲ್ಲಾಹು ಭೂಭಾಗ, ಕಡಲ್ಭಾಗದ ಕತ್ತಲೆಯಲ್ಲಿ ದಾರಿಯನ್ನು ತೋರಿಸಲು ಸಹಾಯಕವಾಗುವು ನಕ್ಷತ್ರಗಳಿಗೆ ಹೋಲಿಸಿರುವನು. ಅವರ ಸನ್ಮಾರ್ಗ, ತಿಳುವಳಿಕೆ, ಬುದ್ಧಿಗಳಲ್ಲಿ ಯಾವುದೇ ಕೊರತೆ ಇಲ್ಲವೆಂಬುವುದುರ ಬಗ್ಗೆ ಎಲ್ಲಾ ಮುಸ್ಲಿಮರ ಒಮ್ಮತಾಭಿಪ್ರಾಯ (ಇಜ್‌ಮಾಅ)ಇದೆ.

ನಿಜವಾಗಿ ಇವರು ರಸೂಲುಲ್ಲಾಹಿ(ﷺ)ರ ಸಮುದಾಯದ ಸ್ವತಃ ಪ್ರವಾದಿಯವರ ಖಲೀಫರುಗಳಾಗಿರುವರು. ನಿರ್ಜೀವಗೊಂಡಿರುವ ಸುನ್ನತ್‌ಗಳಿಗೆ ಇವರು ಜೀವ ತುಂಬುವರು, ಇವರಿಂದಲೇ ಅಲ್ಲಾಹುವಿನ ಗ್ರಂಥವು ಖಾಯಂ ಆಗಿರುತ್ತದೆ. ಗ್ರಂಥವು ಇವರ ಭಾಷೆಯನ್ನು ಮಾತನಾಡುತ್ತದೆ ಮತ್ತು ಅವರು ಗ್ರಂಥದ ಭಾಷೆಯನ್ನು ಮಾತನಾಡುತ್ತಾರೆ. ಅವರೆಲ್ಲರೂ ರಸೂಲುಲ್ಲಾಹಿ(ﷺ)ರವರ ಅನುಸರಣೆ ಕಡ್ಡಾಯವೆಂಬ ವಿಷಯದಲ್ಲಿ ಒಮ್ಮತಾಭಿಪ್ರಾಯಕಾರರಾಗಿದ್ದಾರೆ. ಆದರೆ ಇವರಲ್ಲಿ ಯಾರದಾದರೂ ಮಾತು ಹದೀಸ್‌ಗೆ ನೇರ ವಿರುದ್ಧವಿದ್ದಲ್ಲಿ ಅವರ ಮಾತನ್ನು ಈ ಕೆಳಗಿನ ಕಾರಣಗಳಿಂದ ಬಿಟ್ಟುಬಿಡುವುದು ಅಗತ್ಯವಾಗಿದೆ.

ಕಾರಣಗಳಲ್ಲಿ ಮೂರು ವಿಧಗಳಿವೆ

1. ರಸೂಲುಲ್ಲಾಹಿ(ﷺ) ಹೀಗೆ ಹೇಳಿಲ್ಲ ಎಂಬ ಅವನ ವಿಶ್ವಾಸ

2. ರಸೂಲುಲ್ಲಾಹಿ(ﷺ) ಹೀಗೆ ಹೇಳಿ, ಈ ಧರ್ಮವಿಧಿ ಉದ್ದೇಶಿಸಿರಲಿಲ್ಲವೆಂಬ ನಂಬಿಕೆ.

3. ಈ ಮಾತು ಮನ್‌ಸೂಖ್(ನಿರ್ವೀಯಗೊಳಿಸಲಾದುದು)ಎಂಬ ನಂಬಿಕೆ

ಮತ್ತು ನಮಗಿಂತ ಮೊದಲು ಇವರು ಇಸ್ಲಾಮೀ ಶಿಕ್ಷಣದ ಹೊಣೆಗಾರಿಕೆಯನ್ನೂ ಹೊತ್ತರು. ಅದನ್ನು ಸುರಕ್ಷಿತವಾಗಿ ನಮ್ಮ ತನಕ ತಲುಪಿಸಿದರು. ಅದರ ಅವಶ್ಯಕವಾದ ವಿಷಯಗಳನ್ನು ವಿವರಿಸಿದರು. ಅಲ್ಲಾಹು ಅವರಲ್ಲಿ ಸಂತೃಪ್ತನಾಗಲಿ ಮತ್ತು ಅವರು ಅವನಿಂದ ಸಂತೃಪ್ತರಾಗಲಿ.

---

**374** ಕುರ್‌ಆನ್ 4:115

﴿ رَبَّنَا ٱغْفِرْ لَنَا وَلِإِخْوَٰنِنَا ٱلَّذِينَ سَبَقُونَا بِٱلْإِيمَـٰنِ وَلَا تَجْعَلْ فِى قُلُوبِنَا غِلًّا لِّلَّذِينَ ءَامَنُوا۟ رَبَّنَآ إِنَّكَ رَءُوفٌ رَّحِيمٌ ۝١٠ ﴾

**“ಓ ನಮ್ಮ ಪ್ರಭೂ! ನಮ್ಮನ್ನು ಮತ್ತು ನಮಗಿಂತ ಮುಂಚೆ ವಿಶ್ವಾಸವನ್ನು ಸ್ವೀಕರಿಸಿದ ನಮ್ಮ ಸಹೋದರರ ತಪ್ಪುಗಳನ್ನು ಕ್ಷಮಿಸು ಮತ್ತು ಸತ್ಯ ವಿಶ್ವಾಸಿಗಳ ಬಗ್ಗೆ ನಮ್ಮ ಹೃದಯದಲ್ಲಿ ದ್ವೇಷವನ್ನಿರಿಸಬೇಡ. ಓ ನಮ್ಮ ಪ್ರಭೂ ನೀನು ಬಹಳ ದಯಾಪೂರ್ಣನೂ ಕರುಣಾಮಯಿಯೂ ಆಗಿರುತ್ತೀ.”** [375]

ಉಲೆಮಾಗಳ ಸ್ಥಾನವನ್ನು ಕೀಳಾಗಿಸುವುದು ಅವರ ಇಜ್ತಿಹಾದ್‌ನಲ್ಲಿ ತಪ್ಪಾದರೆ ಅವರನ್ನು ನಿಂದಿಸುವುದು ಮುಂತಾದವುಗಳು ನೂತನವಾದಿಗಳ ಕ್ರಮವಾಗಿವೆ ಮತ್ತು ಇಸ್ಲಾಮ್‌ನ ಶತ್ರುಗಳ ಒಂದು ದೊಡ್ಡ ಕುತಂತ್ರವಾಗಿದೆ. ಈ ಸಮುದಾಯದ ಹಿಂಗಾಮಿಗಳು ತಮ್ಮ ಮುಂಗಾಮಿಗಳಿಂದ ಬೇರ್ಪಡಬೇಕೆಂಬುದು ಮಾತ್ರವಲ್ಲ ಮತ್ತು ಯುವಕರ ಮಧ್ಯೆ ಬಿರುಕುಂಟಾಗಬೇಕೆಂಬುದೇ ಇವರ ಉದ್ದೇಶವಾಗಿದೆ. ಪ್ರಾಥಮಿಕ ವಿದ್ಯಾರ್ಥಿಗಳಿಗೊಂದು ಎಚ್ಚರಿಕೆಯಿದು. ಈ ಬಿದ್‌ಅತೀಗಳು ಸಮುದಾಯದ ಫುಕಹಾಗಳ ಸ್ಥಾನ ಶ್ರೇಷ್ಠತೆಯನ್ನು ಕೀಳಾಗಿಸುತ್ತಾರೆ ಮತ್ತು ಇಸ್ಲಾಮ್‌ನ ಕರ್ಮಶಾಸ್ತ್ರದ ಸ್ಥಾನವನ್ನು ಕಡಿಮೆಮಾಡುತ್ತಾರೆ. ಅದನ್ನು ಓದುವುದಕ್ಕೆ, ಕಲಿಸುವುದಕ್ಕೆ ಅಸಡ್ಡೆ ತೋರಿಸುತ್ತಾರೆ ಮತ್ತು ಅದರ ಒಳಗೆ ಸತ್ಯದ ಮತ್ತು ಒಳ್ಳೆಯ ವಿಷಯಗಳನ್ನು ಸ್ವೀಕರಿಸಲು ನಿರಾಕರಿಸುತ್ತಾರೆ. ನಿಜವಾಗಿ ಅವರು ತಮ್ಮ ಜ್ಞಾನದ ಮೇಲೆ ಗೌರವವನ್ನು ಹೊಂದಬೇಕು ಮತ್ತು ತಮ್ಮ ಉಲೆಮಾಗಳು, ಫುಕಹಾಗಳನ್ನು ಗೌರವಿಸಬೇಕು ಮತ್ತು ದಾರಿ ತಪ್ಪಿದ ತತ್ವಾದರ್ಶಗಳಿಂದ ಪ್ರಭಾವಿತರಾಗಬಾರದು ಮತ್ತು ಯಾರದೇ ವಂಚನೆಗೆ ಒಳಗಾಗಬಾರದು.

---

**375** ಕುರ್‌ಆನ್ 59:10

## ಭಾಗ–6

# ನವೀನಾಚಾರಗಳು

ಈ ವಿಷಯದಲ್ಲಿ ಕೆಳಗಿನ ಈ ಅಧ್ಯಾಯಗಳಿರುವುದು

ಅಧ್ಯಾಯ –1 :

ಬಿದ್‌ಅತ್‌ನ ಅರ್ಥ ಮತ್ತು ಅದರ ವಿಧಗಳು – ಆದೇಶಗಳು

ಅಧ್ಯಾಯ –2 :

ಮುಸ್ಲಿಮರ ಜೀವನದಲ್ಲಿ ಬಿದ್‌ಅತ್‌ನ ಉದ್ಭವ ಮತ್ತು ಅವುಗಳ ಕಾರಣಗಳು

ಅಧ್ಯಾಯ –3

ಬಿದ್‌ಅತ್‌ಗಳ ಕುರಿತು ಮುಸ್ಲಿಮ್ ಉಮ್ಮತ್‌ನ ನಿಲುವು ಮತ್ತು ಅದರ ನಿರ್ನಾಮಕ್ಕಾಗಿ ಅಹ್ಲುಸ್ಸುನ್ನತ್ ವಲ್‌ಜಮಾಅತ್‌ನ ಕ್ರಮ

ಅಧ್ಯಾಯ –4 :

ಇಂದಿನ ಕೆಲವು ಹೊಸ ಬಿದ್‌ಅತ್‌ಗಳ ನಮೂನೆಗಳು

1. ಮಿಲಾದುನ್ನಬೀ ಸಡಗರ, ಉತ್ಸವ

2. ಕೆಲವು ಸ್ಥಳಗಳು, ಕುರುಹುಗಳು ಮತ್ತು ಜೀವಂತ ಅಥವಾ ಮೃತ ವ್ಯಕ್ತಿಗಳ ಬರ್ಕತ್ ಪಡೆಯುವುದು.

3. ಇಬಾದತ್ ಮತ್ತು ಸಾಮಿಪ್ಯದ ಕ್ಷೇತ್ರದಲ್ಲಿ ಬಿದ್‌ಅತ್

## ಅಧ್ಯಾಯ -1

# ಬಿದ್‌ಅತ್‌ನ ಪರಿಚಯ ಅರ್ಥ ಮತ್ತು ಅದರ ವಿಧಗಳು ಆದೇಶಗಳು

1. ಬಿದ್‌ಅತ್‌ನ ಅರ್ಥ : ಭಾಷಾರ್ಥದಲ್ಲಿ ಬಿದ್‌ಅತ್ ಶಬ್ದವು ಬದ್‌ಅ ನಿಂದ ಬಂದಿದೆ. ಇದು ಯಾವುದೇ ಪೂರ್ವ ಮಾದರಿಯಿಲ್ಲದೇ ಒಂದನ್ನು ಉಂಟುಮಾಡುವುದರ ಅರ್ಥ ಬರುತ್ತದೆ. ಅಲ್ಲಾಹುವಿನ ವಚನವು ಹೀಗಿದೆ.

﴿ بَدِيعُ ٱلسَّمَٰوَٰتِ وَٱلْأَرْضِ ﴾

**"(ಅವನೇ) ಆಕಾಶ ಭೂಮಿಗಳನ್ನು ಉಂಟು ಮಾಡಿದನು."** [376]

ಅಂದರೆ ಯಾವುದೇ ಪರಿಚಿತ ಮಾದರಿಯಿಲ್ಲದೇ ಅವನು ಭೂಮ್ಯಾಕಾಶಗಳನ್ನು ಉಂಟು ಮಾಡುವವನಾಗಿರುವನು. ಇನ್ನೊಂದು ಕಡೆಯಲ್ಲಿ ಸರ್ವೋನ್ನತನ ವಚನವು ಹೀಗಿದೆ.

﴿ قُلْ مَا كُنتُ بِدْعًا مِّنَ ٱلرُّسُلِ ﴾

**"ಹೇಳಿರಿ, ಸಂದೇಶವಾಹಕರಲ್ಲಿ ನಾನೇನೂ ಹೊಸತಲ್ಲ."** [377]

ಅಂದರೆ ಅಲ್ಲಾಹನ ಕಡೆಯಿಂದ ಸಂದೇಶವನ್ನು ದಾಸರಿಗೆ ನಾನೇ ಮೊದಲು ತಂದಿರುವುದಲ್ಲ ನನಗಿಂತ ಮುಂಚೆ ಎಷ್ಟೋ ಪ್ರವಾದಿಗಳು ಬಂದಿರುವರು ಎಂಬುದು ಇದರ ತಾತ್ಪರ್ಯ. ಸಾಮಾನ್ಯವಾಗಿ ಹೇಳಲಾಗುತ್ತದೆ. ಇಂತಹ ವ್ಯಕ್ತಿ ಮುಂಚೆ ಇಲ್ಲದಂತಹ ಬಿದ್‌ಅತನ್ನು ಪ್ರಾರಂಭಿಸಿದನು.

ಬಿದ್‌ಅತ್(ನವೀನಾಚಾರದಲ್ಲಿ) ಎರಡು ವಿಧಗಳಿವೆ

ಅಭ್ಯಾಸಗಳ ಅಥವಾ ಜನಜೀವನ ಶೈಲಿಯ ಬಿದ್‌ಅತ್ ಅಂದರೆ ಲೌಕಿಕ ಹೊಸ ಸಂಶೋಧನೆಗಳ ಬಿದ್‌ಅತ್, ಇದು ಅನುಮತಿಸಲ್ಪಟ್ಟಿದೆ. ಏಕೆಂದರೆ ಇದರ ಮೂಲ ಹಲಾಲ್ ಆಗಿದೆ. ಎರಡನೆಯ ರೀತಿಯ ನವೀನಾಚಾರವು ಧರ್ಮದ ಒಳಗೆ ನವೀನಾಚಾರ ಮಾಡುವುದು. ಈ ನವೀನಾಚಾರವು ಹರಾಮ್ ಆಗಿದೆ. ಏಕೆಂದರೆ ಶರೀಅತ್-ದೀನ್ ಇವುಗಳು ವಾಸ್ತವದಲ್ಲಿ ತೌಖೀಫ್ ಗಳಾಗಿವೆ. ಅಂದರೆ ಅಲ್ಲಾಹು ಮತ್ತು ಅಲ್ಲಾಹುವಿನ ಸಂದೇಶವಾಹಕರ ಆದೇಶವಾಗಿದೆ. ಅಲ್ಲಾಹನ ಸಂದೇಶವಾಹಕರು(ﷺ) ಹೇಳುತ್ತಾರೆ.

«مَنْ أَحْدَثَ فِي أَمْرِنَا هَذَا مَا لَيْسَ مِنْهُ فَهُوَ رَدٌّ»

**"ಯಾರಾದರೂ ನಮ್ಮ ಈ ವಿಷಯದಲ್ಲಿ ಹೊಸದನ್ನು ಉಂಟುಮಾಡಿದ್ದರೆ, ಅದು**

**376** ಕುರ್‌ಆನ್ 2:117

**377** ಕುರ್‌ಆನ್ 46:9

**ಅದರಲ್ಲಿ ಇಲ್ಲದಿದ್ದರೆ ಅದು ತಿರಸ್ಕರಿಸಲ್ಪಡುವುದು."** (378)

ಇನ್ನೊಂದು ಕಡೆಯಲ್ಲಿ ನಬಿ ವಚನವು ಹೀಗಿದೆ.

«مَنْ عَمِلَ عَمَلًا لَيْسَ عَلَيْهِ أَمْرُنَا فَهُوَ رَدٌّ»

**"ಯಾರಾದರೂ ನಮ್ಮ ವಿಷಯದಲ್ಲಿ(ಧರ್ಮದಲ್ಲಿ) ಇಲ್ಲದಂತಹ ಕಾರ್ಯವನ್ನು ಕೈಗೊಂಡರೆ ಅದು ತಿರಸ್ಕರಿಸಲ್ಪಡುವಂತಹದಾಗಿದೆ."** (379)

2. ಬಿದ್‌ಅತ್‌ನ ವಿಧಗಳು

ಧರ್ಮದಲ್ಲಿ ನವೀನಾಚಾರ (ಬಿದ್‌ಅತ್)ದಲ್ಲೂ ಎರಡು ವಿಧಗಳಿವೆ.

ಮೊದಲ ವಿಧ: ಮಾತಿನ ಅಥವಾ ಅಕೀದ ಪರವಾದ ಬಿದ್‌ಅತ್ , ಜಹ್‌ಮಿಯ್ಯ, ಮುಅತಝಿಲ. ರಾಫಿದ್ ಮತ್ತು ಎಲ್ಲಾ ವ್ಯತಿಚಲಿತ ಗುಂಪುಗಳ ಹೇಳಿಕೆಗಳು ಮತ್ತು ಅವರ ವಿಶ್ವಾಸ ಇದರಲ್ಲಿ ಬರುತ್ತದೆ.

ಎರಡನೆ ವಿಧ: ಆರಾಧನೆಯ ಒಳಗೆ ಬಿದ್‌ಅತ್. ಅಂದರೆ ಇಬಾದತ್‌ನಲ್ಲಿ, ಇಸ್ಲಾಮ್‌ನಲ್ಲಿ ದೃಢಪಡದಂತಹ ಕ್ರಮವನ್ನು ಹಾಕುವುದು. ಇದರಲ್ಲೂ ಕೂಡಾ ಬಹಳ ವಿಧಗಳಿವೆ. ಅವುಗಳನ್ನು ಕೆಳಗೆ ಕೊಡಲಾಗಿದೆ.

1. ಮೂಲ ಅಂದರೆ ಶರೀಅತ್‌ನಲ್ಲಿ ಆಧಾರವಿಲ್ಲದಂತಹ ಹೊಸ ಇಬಾದತ್‌ನ ಕ್ರಮವನ್ನು ಉಂಟುಮಾಡುವುದು. ಆಧಾರವಿಲ್ಲದ ಉಪವಾಸ ಹಿಡಿಯುವುದು ಅಥವಾ ಹೊಸತೊಂದು ಹಬ್ಬವನ್ನು ಆಚರಿಸುವುದು. ಉದಾ : ಪ್ರವಾದಿ ಜನ್ಮದಿನವನ್ನು ಹಬ್ಬವಾಗಿ ಆಚರಿಸುವುದು.

2. ಆರಾಧನೆಯಲ್ಲಿ ಯಾವುದಾದರೂ ಒಂದು ವಸ್ತುವನ್ನು ಹೆಚ್ಚಿಸುವುದು ಉದಾ : ಝುಹರ್ ಅಥವಾ ಅಸರ್ ನಮಾಝ್‌ನಲ್ಲಿ ಒಂದು ರಕಅತ್ ಹೆಚ್ಚಿಸಿ ಐದು ರಕಅತ್ ಮಾಡುವುದು ಇತ್ಯಾದಿ.

3. ಆಧಾರವಿರುವ ಆರಾಧನೆಗಳನ್ನು ನಿರ್ವಹಿಸುವುದರಲ್ಲಿ ನವೀನಾಚಾರ ಮಾಡುವುದು. ಉದಾಹರಣೆಗೆ ಸುನ್ನತ್‌ನಲ್ಲಿರುವ ಪ್ರಾರ್ಥನೆಗಳನ್ನು ಹಾಡಿ ಹಾಡಿ ಓದುವುದು ಅಥವಾ ಆರಾಧನೆಯಲ್ಲಿ ರಸೂಲುಲ್ಲಾಹಿ(ﷺ)ರ ಸುನ್ನತ್‌ನಿಂದ ಹೊರಹೋಗುವಷ್ಟು ತೀವ್ರತೆ ತೋರುವುದು.

4. ಯಾವುದಾದರೂ ಸರಿಯಾದ ಆಧಾರವಿರುವ ಇಬಾದತ್‌ಗೆ ಪ್ರಮಾಣವಿಲ್ಲದ ಸಮಯವನ್ನು ನಿಗದಿಪಡಿಸುವುದು. ಉದಾಹರಣೆಗೆ ಯೌಮೆ ಆಶೂರಾ(ಮುಹರ್ರಮ್ ಹತ್ತನೇ ದಿನ) ವನ್ನು ಆರಾಧನೆಗಾಗಿ ವಿಶೇಷವಾಗಿ ಮೀಸಲಿರಿಸುವುದು, ಶಅಬಾನ್ 15

**378** ಬುಖಾರಿ ಮುಸ್ಲಿಮ್

**379** ಮುಸ್ಲಿಮ್

ರಂದು ಉಪವಾಸ ಹಿಡಿಯುವ ಹಾಗೆ ವಿಶೇಷ ದಿನದಲ್ಲಿ ಉಪವಾಸ ಹಿಡಿಯುವುದು, ಯಾವುದಾದರೊಂದು ದಿನ ರಾತ್ರಿಯಿಡೀ ನಮಾಝ್ ಮಾಡುವುದು , ನಮಾಝ್, ಉಪವಾಸಗಳಿಗೆ ಆಧಾರವಿದ್ದರೂ ಅದನ್ನು ಯಾವುದೇ ಆಧಾರವಿಲ್ಲದೇ ವಿಶೇಷ ಸಮಯದಲ್ಲಿ ಮಾಡುವುದು ಸಮ್ಮತವಲ್ಲ.

3. ಧರ್ಮದಲ್ಲಿ ಬಿದ್‌ಅತ್ ಮತ್ತು ಅದರ ಎಲ್ಲಾ ವಿಧಗಳ ಕುರಿತು ತೀರ್ಪು

ಧರ್ಮದಲ್ಲಿ ಎಲ್ಲಾ ಬಿದ್‌ಅತ್ ಹರಾಮ್ ಮತ್ತು ದಾರಿ ತಪ್ಪಿದವುಗಳಾಗಿವೆ. ರಸೂಲುಲ್ಲಾಹಿ(ﷺ) ಹೀಗೆಂದಿರುವರು.

«وَإِيَّاكُمْ وَمُحْدَثَاتِ الْأُمُورِ فَإِنَّ كُلَّ مُحْدَثَةٍ بِدْعَةٌ وَكُلَّ بِدْعَةٍ ضَلَالَةٌ»

**"ಹೊಸ ವಿಷಯಗಳ ಬಗ್ಗೆ ಜಾಗೃತರಾಗಿರಿ, ಎಲ್ಲಾ ಹೊಸ ವಿಷಯವು ಬಿದ್‌ಅತ್ ಆಗಿದೆ ಮತ್ತು ಎಲ್ಲಾ ಬಿದ್‌ಅತ್ ದಾರಿ ತಪ್ಪುವಿಕೆಯಾಗಿದೆ."** [380]

ಇನ್ನೊಂದು ಪ್ರವಾದಿ ವಚನವು ಹೀಗಿದೆ:

«مَنْ عَمِلَ عَمَلًا لَيْسَ عَلَيْهِ أَمْرُنَا فَهُوَ رَدٌّ»

**"ಯಾರಾದರೂ ನಮ್ಮ ವಿಷಯದಲ್ಲಿ (ಧರ್ಮದಲ್ಲಿ) ಇಲ್ಲದಂತಹ ಕಾರ್ಯವನ್ನು ಕೈಗೊಂಡರೆ ಅದು ತಿರಸ್ಕರಿಸಲ್ಪಡುವಂತಹದಾಗಿದೆ."** [381]

ಈ ಹದೀಸ್‌ಗಳಿಂದ ಒಂದು ವಿಷಯವು ಸ್ಪಷ್ಟವಾಗುತ್ತದೇನೆಂದರೆ, ಧರ್ಮದ ಒಳಗೆ ಹುಟ್ಟಿದ ಪ್ರತಿಯೊಂದು ವಸ್ತುವೂ ಬಿದ್‌ಅತ್ ಆಗಿದೆ ಮತ್ತು ಪ್ರತಿಯೊಂದು ಬಿದ್‌ಅತ್ ತಿರಸ್ಕರಿಸಲ್ಪಡುವಂತಹ ದಾರಿತಪ್ಪುವಿಕೆಯಾಗಿದೆ. ಇದರರ್ಥ ಆರಾಧನೆ ಮತ್ತು ವಿಶ್ವಾಸಗಳಲ್ಲಿ ಬಿದ್‌ಅತ್ ಹರಾಮ್ ಆಗಿದೆ. ಆದರೆ ಬಿದ್‌ಅತ್‌ನ ವಿಧಗಳ ಮೇಲೆ ಅದರ ನಿಷಿದ್ಧತೆಯ ವ್ಯತ್ಯಾಸವಿರುವುದು. ಏಕೆಂದರೆ ಕೆಲವು ಬಿದ್‌ಅತ್‌ಗಳು ಸ್ಪಷ್ಟ ಕುಫ್ರ್ ಆಗಿದೆ.

ಉದಾಹರಣೆಗೆ ಗೋರಿಗೆ ತವಾಫ್(ಪ್ರದಕ್ಷಿಣೆ)ಹಾಕುವುದು, ಗೋರಿಗೆ ಕಾಣಿಕೆ ಹರಕೆಗಳನ್ನಿಡುವುದು, ಗೋರಿಯೊಳಗಿರುವವರಲ್ಲಿ ಪ್ರಾರ್ಥಿಸುವುದು, ಅವರೊಂದಿಗೆ ಇಸ್ತಿಗಾಸ ಮಾಡುವದು , ಇದೇ ರೀತಿಯಲ್ಲಿ ಮಿತಿಮೀರಿದಂತಹ ಜಹ್ಮೀ, ಮುಅತಝಿಲಿಗಳ ಮಾತುಗಳೂ ಬರುತ್ತವೆ ಮತ್ತು ಕೆಲವು ಬಿದ್‌ಅತ್‌ಗಳು ಶಿರ್ಕ್‌ನೆಡೆಗೆ ಕೊಂಡೊಯ್ಯುತ್ತದೆ. ಉದಾಹರಣೆಗೆ ಗೋರಿಯ ಮೇಲೆ ಕಟ್ಟಡ ನಿರ್ಮಾಣ ಅಲ್ಲಿ ನಮಾಝ್, ದುಆ ಇತ್ಯಾದಿ ಕೆಲವು ಬಿದ್‌ಅತ್‌ಗಳು ವಿಶ್ವಾಸದಲ್ಲಿ ಫಿಸ್ಕ್‌ನ ದರ್ಜೆಗೆ ಬರುತ್ತದೆ. ಹೇಗೆಂದರೆ ಖವಾರಿಜ್, ಖದರಿಯ್ಯ, ಮುರ್ಜಿಯ್ಯ ಮುಂತಾದವುಗಳ ಬಿದ್‌ಅತ್ ಇವುಗಳೆಲ್ಲ ಶರೀಅತ್‌ನ ವಿರುದ್ಧ ಬಿದ್‌ಅತ್‌ಗಳಾಗಿವೆ. ಇವುಗಳಲ್ಲಿ ಕೆಲವು ಬಿದ್‌ಅತ್‌ಗಳು ಅಪರಾಧ, ಪಾಪ ಗಳಾಗಿವೆ,

380 ತಿರ್ಮಿದಿ

381 ಮುಸ್ಲಿಮ್

ಅವುಗಳೆಂದರೆ ಸನ್ಯಾಸ, ಬಿಸಿಲಿನಲ್ಲಿ ನಿಂತು ಉಪವಾಸ ಹಿಡಿಯುವ ಬಿದ್‌ಅತ್ ಮತ್ತು ಲೈಂಗಿಕಾಸಕ್ತಿಯನ್ನು ಇಲ್ಲದಾಗಿಸಲು ಶಸ್ತ್ರಚಿಕಿತ್ಸೆ ಇತ್ಯಾದಿ ಬಿದ್‌ಅತ್ (ಅಲ್ -ಇಅತಿಶಾಮ್ ಲಿಶ್ಶಾತಿಬೀ 2/37)

ಒಂದು ಎಚ್ಚರಿಕೆ

ಒಬ್ಬನು ಬಿದ್‌ಅತ್‌ಅನ್ನು ಎರಡಾಗಿ ವಿಭಜಿಸಿದರೆ ಅಂದರೆ ಬಿದ್‌ಅತ್ ಹಸನಃ(ಒಳ್ಳೆಯ ಬಿದ್‌ಅತ್) ಮತ್ತು ಬಿದ್‌ಅತ್ ಸಯ್ಯಿಅ(ಕೆಟ್ಟ ಬಿದ್‌ಅತ್)ಎಂದು ಮಾಡಿದರೆ ತಪ್ಪು ದಾರಿಯಲ್ಲಿರುವನು. ಅವನು ಸಂದೇಶವಾಹಕರ(ﷺ)ರ ಮಾತಿನ ವಿರೋಧಿಯಾಗಿರುವನು. ಏಕೆಂದರೆ ಅವರು(ﷺ) ಹೇಳುತ್ತಾರೆ.

**“ಎಲ್ಲಾ ಬಿದ್‌ಅತ್‌ಗಳು ದಾರಿ ತಪ್ಪಿದವುಗಳಾಗಿವೆ.”**

ರಸೂಲುಲ್ಲಾಹಿ(ﷺ)ರವರು ಎಲ್ಲಾ ಬಿದ್‌ಅತ್‌ಗಳನ್ನು ದಾರಿತಪ್ಪಿದವುಗಳೆಂದು ಹೇಳಿರುವರು. ಕೆಲವರು ಕೆಲವು ಬಿದ್‌ಅತ್‌ಗಳನ್ನು “ಒಳ್ಳೆಯ ಬಿದ್‌ಅತ್” ಎಂದು ಹೇಳುತ್ತಾರೆ. ಎಲ್ಲಾ ಬಿದ್‌ಅತ್‌ನ್ನು ದಾರಿತಪ್ಪಿದವುಗಳೆಂದು ಹೇಳುವುದಿಲ್ಲ.

ಹಾಫಿಝ್ ಇಬ್ನ್ ರಜಬ್(رحمه الله) ತಮ್ಮ ‘ಶರಹುಲ್ ಅರ್‌ಬಈನ್’ ನಲ್ಲಿ ಬರೆಯುತ್ತಾರೆ. ರಸೂಲುಲ್ಲಾಹಿ(ﷺ)ರ **“ಎಲ್ಲಾ ಬಿದ್‌ಅತ್‌ಗಳು ದಾರಿ ತಪ್ಪಿದವುಗಳಾಗಿವೆ”** ಎಂಬ ಮಾತು ಎಲ್ಲವೂ ಒಳಗೊಂಡಂತಹ ಮಾತುಗಳಲ್ಲೊಂದಾಗಿದೆ. ಇದರಿಂದ ಯಾವುದೇ ಬಿದ್‌ಅತ್ ಹೊರ ಬರಲಾರದು. ಇದು ಧರ್ಮದ ಮೂಲಭೂತ ಕಾಯ್ದೆಗಳಲ್ಲೊಂದಾಗಿದೆ. ಇದು ರಸೂಲುಲ್ಲಾಹಿ(ﷺ)ರ ಎರಡನೆಯ ಮಾತಿಗೆ ಅನುಗುಣವಾಗಿದೆ. ಅದರಲ್ಲಿ ರಸೂಲುಲ್ಲಾಹಿ (ﷺ) ಹೀಗೆಂದಿರುವರು:

**“ಯಾರಾದರೂ ನಮ್ಮ ಈ ವಿಷಯದಲ್ಲಿ ಹೊಸದನ್ನುಂಟುಮಾಡಿದರೆ, ಅದು ಅದರಲ್ಲಿ ಇಲ್ಲದಿದ್ದರೆ, ತಿರಸ್ಕರಿಸಲ್ಪಡುವುದು.”** (382)

ಆದ್ದರಿಂದ ಧರ್ಮಕ್ಕೆ ಸೇರಿಸಲ್ಪಟ್ಟ ಪ್ರತಿಯೊಂದು ಹೊಸ ವಸ್ತುವು ಧರ್ಮದಲ್ಲಿಲ್ಲ. ಅದಕ್ಕೆ ಆಧಾರವಿಲ್ಲದಿದ್ದರೆ ಅದರ ದಾರಿ ತಪ್ಪುವಿಕೆಯಲ್ಲಿ ಯಾವುದೇ ಸಂಶಯವಿಲ್ಲ ಮತ್ತು ಧರ್ಮವು ಅದರಿಂದ ಮುಕ್ತವಾಗಿದೆ. ಅದು ವಿಶ್ವಾಸ ಪರವಾದ ಕಾರ್ಯವಾಗಿದ್ದರೂ ಅಥವಾ ಬಾಹ್ಯ ಅಥವಾ ಆಂತರಿಕ ಮಾತು ಅಥವಾ ಕೃತಿಯಾಗಿದ್ದರೂ ಕೂಡಾ. (ಜಾಮಿಉಲ್‌ಉಲೂಮ್ ವಲ್‌ಹುಕ್ಮ್–233)

ಒಳ್ಳೆಯ ಬಿದ್‌ಅತ್ ಎಂದು ಹೇಳುವವರ ಬಳಿ ಉಮರ್(رضي الله عنه)ರವರ ಒಂದು ಮಾತಿನ ಹೊರತು ಬೇರಾವುದೇ ಆಧಾರವಿಲ್ಲ, ಉಮರ್(رضي الله عنه) ತರಾವೀಹ್‌ನ ಕುರಿತು ಹೀಗೆಂದಿದ್ದರು.

**“ಎಷ್ಟೊಂದು ಒಳ್ಳೆಯ ಬಿದ್‌ಅತ್”**

**382** ಬುಖಾರಿ ಮುಸ್ಲಿಮ್

ಒಳ್ಳೆಯ ಬಿದ್‌ಅತ್‌ನ ಬೆಂಬಲಿಗರು ಹೀಗೆ ಹೇಳುತ್ತಾರೆ, “ಇಸ್ಲಾಮ್‌ನಲ್ಲಿ ಬಹಳ ವಸ್ತುಗಳನ್ನು ಹೊಸದಾಗಿ ಉಂಟು ಮಾಡಲಾಗಿದೆ. ಆದರೆ ನಮ್ಮ ಮುಂಗಾಮಿಗಳು, ಸಹಾಬಿಗಳು ಅದನ್ನು ನಿರಾಕರಿಸಲಿಲ್ಲ. ಉದಾಹರಣೆಗೆ ಒಂದೇ ಹೊತ್ತಗೆಯಲ್ಲಿ ಕುರ್‌ಆನ್ ಕ್ರೋಢೀಕರಣ, ಹದೀಸ್‌ನ್ನು ಬರೆದಿಡುವುದು, ಕ್ರೋಢೀಕರಣ ಇತ್ಯಾದಿಗಳು. ಇಂತಹ ಪ್ರಶ್ನೆಗಳಿಗೆ ನಮ್ಮ ಬಳಿ ಉತ್ತರವಿದೆ. ಇಂತಹ ವಿಷಯಗಳಿಗೆ ಮೂಲಾಧಾರವು ನಮ್ಮ ಶರೀಅತ್‌ನಲ್ಲಿ ಪ್ರಸ್ತುತವಿದೆ. ಆದ್ದರಿಂದ ಇದು ಬಿದ್‌ಅತ್ ಆಗುವುದಿಲ್ಲ ಮತ್ತು ಹ. ಉಮರ್(ﷺ) ರವರ ಮಾತು ಕೂಡಾ ಸಹೀಹ್ ಆಗಿದೆ. ಇಲ್ಲಿ ಅವರು ಬಿದ್‌ಅತ್‌ನ ಭಾಷಾರ್ಥವನ್ನು ತೆಗೆದುಕೊಂಡಿದ್ದಾರೆಯೇ ಹೊರತು ಶರಈ ಅರ್ಥವನ್ನಲ್ಲ.

ಆದ್ದರಿಂದ ಯಾವ ಬಿದ್‌ಅತ್‌ನ್ನು ಶರೀಅತ್‌ನಲ್ಲಿ ಸಮ್ಮತವೆಂದು ಹೇಳಿದೆಯೋ ಆ ಬಿದ್‌ಅತ್ ಎಂದರೆ ಭಾಷಾರ್ಥದಲ್ಲಿ ಬಿದ್‌ಅತ್ ಹೊರತು ಶರಈ ಅರ್ಥದಲ್ಲಲ್ಲ. ಯಾಕೆಂದರೆ ಶರಈ ಬಿದ್‌ಅತ್ ಎಂದರೆ ಅದಕ್ಕೆ ಶರೀಅತ್‌ನಲ್ಲಿ ಯಾವುದೇ ಮೂಲ ಇರುವುದಿಲ್ಲ. ಕುರ್‌ಆನನ್ನು ಒಂದೇ ಕಡೆಯಲ್ಲಿ ಕ್ರೋಢೀಕರಿಸುವುದಕ್ಕೆ ಶರೀಅತ್‌ನಲ್ಲಿ ಪ್ರಮಾಣ ಇದೆ. ಪ್ರವಾದಿ(ﷺ) ಸ್ವಯಂ ಕುರ್‌ಆನನ್ನು ಬರೆದಿಡಲು ಸೂಚಿಸುತ್ತಿದ್ದರು. ಆದರೆ ಅದು ವಿವಿಧ ಸ್ಥಳಗಳಲ್ಲಿ ಬರೆಯಲ್ಪಟ್ಟಿತ್ತು. ಸಹಾಬಿಗಳು ಅದರ ಸಂರಕ್ಷಣೆಗಾಗಿ ಅದನ್ನು ಒಂದು ಕಡೆಯಲ್ಲಿ ಕ್ರೋಢೀಕರಿಸಿದರು. ಇದು ಅದರ ಸಂರಕ್ಷಣೆಗಾಗಿ ಮಾಡಲಾಯಿತು. ರಸೂಲುಲ್ಲಾಹಿ(ﷺ) ಕೆಲವು ರಾತ್ರಿಗಳಲ್ಲಿ ತರಾವೀಹ್ ನಮಾಝ್ ಮಾಡಿರುವರು ಮತ್ತು ಬಿಟ್ಟುಬಿಟ್ಟರು. ಕಡ್ಡಾಯವಾಗಬಹುದೋ ಎಂಬ ಭಯದಿಂದ ಹೀಗೆ ಮಾಡಿದ್ದರು . ಆದರೆ ಸಹಾಬಿಗಳು ಯಾವಾಗಲೂ ಅದನ್ನು ನಿರ್ವಹಿಸುತ್ತಿದ್ದರು ಮತ್ತು ರಸೂಲುಲ್ಲಾಹಿ(ﷺ)ರ ಜೀವಿತ ಕಾಲದಲ್ಲಿ ಮತ್ತು ನಂತರವು ಬೇರೆ ಬೇರೆ ವಿಧದಲ್ಲಿ ನಿರ್ವಹಿಸುತ್ತಿದ್ದರು. ಕೊನೆಗೆ ಉಮರ್(ﷺ)ರವರು ಎಲ್ಲರನ್ನೂ ಒಂದು ಇಮಾಮ್‌ನ ಹಿಂದೆ ಸೇರಿಸಿದರು. ಪ್ರವಾದಿ (ﷺ)ರ ಹಿಂದೆ ನಿರ್ವಹಿಸಿದ ಹಾಗೆ. ಆದ್ದರಿಂದ ಧರ್ಮದೊಳಗೆ ಇದು ಬಿದ್‌ಅತ್ ಅಲ್ಲ. ಹದೀಸ್‌ನ ಕ್ರೋಢೀಕರಣಕ್ಕೂ ಶರೀಅತ್‌ನಲ್ಲಿ ಮೂಲ ಆಧಾರ ಇದೆ. ಸ್ವಯಂ ಪ್ರವಾದಿ (ﷺ) ಕೆಲವು ಸಹಾಬಿಗಳ ಕೋರಿಕೆಯ ಮೇಲೆ ಕೆಲವು ಹದೀಸ್‌ಗಳನ್ನು ಬರೆದಿಡಲು ಆದೇಶಿಸಿದ್ದರು. ನಬಿ(ﷺ)ರ ಕಾಲದಲ್ಲಿ ಉಬೂಹುರೈರ(ﷺ) ಹದೀಸ್ ಬರೆಯುತ್ತಿದ್ದರು. ಆದರೆ ಅವರಿಗೆ ಹದೀಸ್ ಮತ್ತು ಖುರ್‌ಆನ್ ಬೆರೆತು ಹೋಗುವ ಆತಂಕವಿತ್ತು. ಪ್ರವಾದಿ (ﷺ)ರ ಮರಣಾನಂತರ ಹದೀಸ್‌ನ ಕ್ರೋಢೀಕರಣವು ಆದ ಸಮಯವೂ ಮುಗಿಯಿತು. ಏಕೆಂದರೆ ಪ್ರವಾದಿ(ﷺ)ರ ಸಮಯದಲ್ಲೇ ಕುರ್‌ಆನ್ ಸಂಪೂರ್ಣವಾಗಿತ್ತು. ಆದ್ದರಿಂದ ಪ್ರವಾದಿ(ﷺ)ರವರ ಮರಣಾ ನಂತರ ಮುಸ್ಲಿಮರು ಕುರ್‌ಆನನ್ನು ಕ್ರೋಢೀಕರಿಸಿದರು ಮತ್ತು ಕಳೆದುಹೋಗದಂತೆ ಅದನ್ನು ಸಂರಕ್ಷಿಸಿದರು. ಅಲ್ಲಾಹು ಅವರಿಗೆ ಉತ್ತಮ ಪ್ರತಿಫಲವನ್ನು ನೀಡಲಿ (ಆಮೀನ್)

## ಅಧ್ಯಾಯ –2

# ಮುಸ್ಲಿಮರ ಜೀವನದಲ್ಲಿ ಬಿದ್‌ಅತ್‌ನ ಉದ್ಭವ ಮತ್ತು ಅದರ ಕಾರಣಗಳು

ಮುಸ್ಲಿಮರ ಜೀವನದಲ್ಲಿ ಬಿದ್‌ಅತ್‌ನ ಉದ್ಭವ ಈ ಕುರಿತು ಎರಡು ವಿಷಯಗಳನ್ನು ವಿವರಿಸಲಾಗುತ್ತದೆ.

ವಿಷಯ 1 : ಬಿದ್‌ಅತ್‌ನ ಪ್ರಕಟವಾಗತೊಡಗಿದ ಸಮಯ

ಶೈಖುಲ್ ಇಸ್ಲಾಮ್ ಇಬ್ನ್ ತೈಮಿಯ್ಯ ಹೇಳುತ್ತಾರೆ: ತಿಳಿದುಕೊಳ್ಳಬೇಕಾದ ವಿಷಯವೇನೆಂದರೆ ಜ್ಞಾನ ಮತ್ತು ಆರಾಧನೆಗಳಿಗೆ ಸಂಬಂಧಿಸಿ ಎಲ್ಲಾ ಬಿದ್‌ಅತ್‌ಗಳು ಸಮುದಾಯದ ಒಳಗೆ ನಾಲ್ವರು ಖಲೀಫರ ಕೊನೆಯ ಸಮಯದಿಂದಲೇ ಕಾಣತೊಡಗಿತ್ತು ಮತ್ತು ಅದರ ಕುರಿತು ರಸೂಲುಲ್ಲಾಹಿ(ﷺ) ಮೊದಲೇ ಮಾಹಿತಿ ನೀಡಿದ್ದರು. ಅವರು (ﷺ) ಹೀಗೆಂದಿದ್ದಾರೆ.

«مَنْ يَعِشْ مِنْكُمْ فَسَيَرَى اخْتِلَافًا كَثِيرًا فَعَلَيْكُمْ بِسُنَّتِي وَسُنَّةِ الْخُلَفَاءِ الرَّاشِدِينَ الْمَهْدِيِّينَ»

**“ನಿಮ್ಮಲ್ಲಿ ಯಾರು ಜೀವಂತವಿರುವನೋ ಅವನಿಗೆ ಬಹಳ ಭಿನ್ನಾಭಿಪ್ರಾಯಗಳು ಕಾಣುವುವು. ಆದ್ದರಿಂದ ಇಂತಹ ಸಮಯದಲ್ಲಿ ನನ್ನ ಸುನ್ನತ್ ಅನ್ನು ಖುಲಫಾ ರಾಶಿದೀನ್‌ಗಳ ಸುನ್ನತ್ ರೀತಿಅನ್ನು ಭದ್ರವಾಗಿ ಹಿಡಿಯಲಿ.”** [383]

ಸಮುದಾಯದಲ್ಲಿ ಮೊದಮೊದಲು ಖದರಿಯ್ಯ, ಮುರ್ಜಿಅ, ಶಿಯಾ ಮತ್ತು ಖವಾರಿಜ್ ಗಳ ಬಿದ್‌ಅತ್‌ಗಳು ಕಂಡುಬಂದವು. ನಂತರ ಉಸ್ಮಾನ್(ؓ)ರವರ ಹತ್ಯೆಯ ಬಳಿಕ ಉಮ್ಮತ್‌ನಲ್ಲಿ ವಿಭಜನೆ ಪ್ರಾರಂಭವಾದಾಗ ಹರೂರಿಯ್ಯದ ಬಿದ್‌ಅತ್ ಕಂಡು ಬಂತು. ನಂತರ ಸಹಾಬಿಗಳ ಕೊನೆಯ ಕಾಲದಲ್ಲಿ ಖದರಿಯ್ಯಃದ ನೂತನವಾದ ಪ್ರಾರಂಭವಾಯಿತು. ನಂತರ ಹ. ಇಬ್ನು ಉಮರ್(ؓ), ಇಬ್ನ್ ಅಬ್ಬಾಸ್(ؓ), ಜಾಬಿರ್ (ؓ)ರ ಕೊನೆಯ ಸಮಯದಲ್ಲಿ ಮುರ್ಜಿಅ ಉದ್ಭವಗೊಂಡಿತು. ಇನ್ನು ಜಹ್ಮಿಯ್ಯವು, ತಾಬಈನ್‌ಗಳ ಕೊನೆಯ ಸಮಯದಲ್ಲಿ ಮತ್ತು ಹ. ಉಮರ್ ಬಿನ್ ಅಬ್ದುಲ್ ಅಝೀಝ್‌ರ ಮರಣಾ ನಂತರ ಕಾಣತೊಡಗಿತು. ಹ. ಉಮರ್ ಬಿನ್ ಅಬ್ದುಲ್ ಅಝೀಝ್(ؓ) ಅವರ ಬಗ್ಗೆ ಜನರನ್ನು ಎಚ್ಚರಿಸಿದ್ದರು. ಜಹ್ಮ್ ಖುರಾಸಾನ್‌ನಲ್ಲಿ ಖಲೀಫಾ ಹಿಷಾಮ್ ಬಿನ್ ಅಬ್ದುಲ್ ಮಲಿಕ್‌ರ ಆಡಳಿತ ಸಮಯದಲ್ಲಿ ಉದ್ಭವವಾಯಿತು.

ನವೀನಾಚಾರಗಳು ಹಿಜ್ರಾ ಎರಡನೆಯ ಶತಮಾನದಲ್ಲಿ ಕಂಡುಬಂತು. ಆಗ

**383** ಅಬೂದಾವೂದ್, ಅತ್ತಿರ್ಮಿದೀ

ಸಹಾಬಿಗಳು ಪ್ರಸ್ತುತರಿದ್ದರು. ಸಹಾಬಿಗಳು ಇಂತಹ ಬಿದ್‌ಅತ್‌ಗಳನ್ನು ವಿರೋಧಿಸಿದ್ದರು. ಆ ಬಳಿಕ ಮುಅತಝಿಲದ ನೂತನವಾದವು ಪ್ರಾರಂಭವಾಯಿತು. ನಂತರ ಜನರಲ್ಲಿ ಭಿನ್ನಾಭಿಪ್ರಾಯಗಳು ಮತ್ತು ಬಿದ್‌ಅತ್ ಸ್ವೇಚ್ಛೆಯೆಡೆಗೆ ವಾಲುವುದು ಕಾಣತೊಡಗಿತು. ಸೂಫಿಸಂನ ಬಿದ್‌ಅತ್, ಕಬರ್‌ಗಳನ್ನು ಎತ್ತರಿಸಿ ಕಟ್ಟುವ ಬಿದ್‌ಅತ್‌ಗಳು ಮುಂದೆ ಬಂದವು. ಹೀಗೆ ಕಾಲ ಕಳೆಯುತ್ತಾ ಹೋದಂತೆ ಹೊಸ ಹೊಸ ನೂತನವಾದಗಳು ಬರುತ್ತಾ ಇದ್ದವು ಮತ್ತು ಅವುಗಳ ಶಾಖೆಗಳು ಹಬ್ಬುತ್ತಾ ಇದ್ದವು.

ವಿಷಯ 2. ಬಿದ್‌ಅತ್ ಕಾಣತೊಡಗಿದ ಸ್ಥಳ

ಬಿದ್‌ಅತ್ ಕಂಡು ಬರುವ ವಿಷಯದಲ್ಲಿ ವಿವಿಧ ಇಸ್ಲಾಮೀ ರಾಷ್ಟ್ರಗಳ ವಾತಾವರಣಗಳಿಂದ ಹಾದು ಹೋಗುತ್ತಿದೆ. ಶೈಖುಲ್ ಇಸ್ಲಾಮ್ ಇಬ್ನ್ ತೈಮಿಯ್ಯ ಹೇಳುತ್ತಾರೆ. “ಸಹಾಬಿಗಳು ವಾಸ್ತವ್ಯ ಹೂಡಿದ ಮತ್ತು ಜ್ಞಾನ ಹಾಗೂ ವಿಶ್ವಾಸದ ಕಿರಣಗಳು ಹರಡಿದ ಪ್ರದೇಶಗಳು ಐದು ಇವೆ. ಹರಮೈನ್ (ಮಕ್ಕಾ ಮತ್ತು ಮದೀನಾ) ಇರಾಕೈನ್ (ಕೂಫಾ ಮತ್ತು ಬಸ್ರಾ) ಮತ್ತು ಶಾಮ್(ಸಿರಿಯಾ). ಇದೇ ಐದು ನಗರಗಳಿಂದ ಕುರ್‌ಆನ್ ಮತ್ತು ಹದೀಸ್, ಜ್ಞಾನ ಆರಾಧನೆಗಳು ಮತ್ತು ಅವುಗಳಲ್ಲದೆ ಇಸ್ಲಾಮ್‌ನ ವಿವಿಧ ವಿಷಯಗಳಿಗೆ ಮರು ಚೈತನ್ಯ ಬಂತು ಮತ್ತು ಮದೀನಾದ ಹೊರತು ಇದೇ ನಗರಗಳಲ್ಲೇ ಬಿದ್‌ಅತ್‌ನ ಮೂಲಗಳು ಹುಟ್ಟಿದವು. ಕೂಫಾದಲ್ಲಿ ಮುರ್ಜಿಅ, ಶೀಅದ ಬಿದ್‌ಅತ್ ಹುಟ್ಟಿಕೊಂಡಿತು ಮತ್ತು ಅಲ್ಲಿಂದ ಬೇರೆ ಕಡೆಗಳಿಗೆ ಹರಡಿತು. ಬಸ್ರಾದಲ್ಲಿ ಖದರಿಯ್ಯ ಇಅತಿಝಾಲ್ ಮತ್ತು ಇತರ ಕೆಟ್ಟ ರೀತಿಯ ಬಿದ್‌ಅತ್ ಗಳು ಪ್ರಕಟಕೊಂಡವು ಮತ್ತು ಅದು ಬೇರೆ ನಗರಗಳಿಗೆ ಹಬ್ಬಿದವು. ಸಿರಿಯಾದಿಂದ ನಾಸಿಬಿಯ್ಯ ಮತ್ತು ಖದರಿಯ್ಯದ ಬಿದ್‌ಅತ್‌ಗಳು ಹಬ್ಬಿದವು . ಅತ್ಯಂತ ಕೆಟ್ಟ ಬಿದ್‌ಅತ್ ಆದ ಜಹ್‌ಮಿಯ್ಯವು ಖುರಾಸಾನ್ ನಿಂದ ಹೊರಡಿತು. ಮದೀನಾದಿಂದ ಹೆಚ್ಚು ದೂರವಿದ್ದ ಪ್ರದೇಶಗಳಲ್ಲಿ ಬಿದ್‌ಅತ್ ಹೆಚ್ಚಿತು. ವಿಶೇಷವಾಗಿ ಉಸ್ಮಾನ್(ﷺ)ರವರು ಹುತಾತ್ಮರಾದ ಬಳಿಕ ಹುರೂರಿಯ್ಯ ನೂತನವಾದವು ಬೆಳಕಿಗೆ ಬಂದಾಗ ಬಿದ್‌ಅತ್‌ನ ಮಾರುಕಟ್ಟೆಯು ಬಹಳ ಬಿಸಿಯಾಯಿತು. ಆದರೆ ಮದೀನಾವು ಬಿದ್‌ಅತ್, ಕುರಾಫತ್‌ಗಳಿಂದ ಮುಕ್ತವಾಗಿತ್ತು. ಯಾರಾದರೂ ಬಿದ್‌ಅತ್ ಹಬ್ಬಿಸಲು ನೋಡಿದರೆ ಅವನು ಅಲ್ಲಿ ನಿಂದ್ಯನಾಗುತ್ತಿದ್ದ. ಖದರಿಯ್ಯ, ಮುರ್ಜಿಆ ಗುಂಪಿನವರು ಕೂಡಾ ತಮ್ಮ ಬೇಳೆ ಬೇಯಿಸಲು ನೋಡಿದರು. ಆದರೆ ಅವರು ನಿಷ್ಫಲರಾಗಿ ಸೋತು ಹೋದರು. ಆದರೆ ನಗರಗಳಲ್ಲಿ ಬಿದ್‌ಅತ್ ಮತ್ತು ಕುರಾಫಿಗಳ ಸಂಖ್ಯೆಯು ಹೆಚ್ಚಾಗತೊಡಗಿತು. ಕೂಫಾದಲ್ಲಿ ಶಿಯಾ ಮತ್ತು ಮತ್ತು ಮುರ್ಜಿಆಗಳು ಹಬ್ಬಿದವು ಬಸ್ರಾದಲ್ಲಿ ‘ಇಅತಿಝಾಲ’ ಭಾರೀ ಮೆರೆಯಿತು. ಶಾಮ್(ಸಿರಿಯಾ)ದಲ್ಲಿ ‘ನಾಸಿಬ’ ಹಬ್ಬಿತು. ರಸೂಲುಲ್ಲಾಹಿ(ﷺ) ನಿಜ ಹೇಳಿದ್ದರು. “ದಜ್ಜಾಲ್” ಪಾವನ ಮದೀನಕ್ಕೆ ಪ್ರವೇಶಿಸಲಾರ. ಇದರ ಪರಿಣಾಮವಾಗಿ ಮದೀನಾವು ಇಮಾಮ್ ಮಾಲಿಕ್ (ಇವರು ನಾಲ್ಕನೇ ಶತಮಾನದ ವಿದ್ವಾಂಸರಾಗಿದ್ದರು)ರ

ಕಾಲದವರೆಗೆ ಜ್ಞಾನ ಹಾಗೂ ವಿಶ್ವಾಸದ ತೊಟ್ಟಿಲಾಗಿತ್ತು.

ಇಸ್ಲಾಮ್ ನ ಅತ್ಯುಚ್ಚ ಕಾಲವಾಗಿದ್ದ ಮೊದಲ ಮೂರು ಶತಮಾನಗಳಲ್ಲಿ ಮದೀನಾ ಮುನವ್ವರದಲ್ಲಿ ಯಾವುದೇ ಬಾಹ್ಯ ಬಿದ್ಅತ್‌ಗಳು ಪ್ರಕಟಗೊಳ್ಳಲಿಲ್ಲ. ಇತರ ಪ್ರದೇಶಗಳಲ್ಲಿದ್ದಂತೆ ಧರ್ಮದ ಮೂಲಭೂತ ವಿಷಯಗಳ ಕುರಿತು ಯಾವುದೇ ನೂತನವಾದವೂ ಇಲ್ಲಿ ಪ್ರಕಟವಾಗಿಲ್ಲ.

!!. ಬಿದ್ಅತ್‌ನ ಪ್ರಕಟವಾಗುವಿಕೆಯ ಕಾರಣಗಳು

ಕುರ್ಆನ್ ಮತ್ತು ಸುನ್ನತ್‌ಅನ್ನು ಗಟ್ಟಿಯಾಗಿ ಹಿಡಿದುಕೊಂಡರೆ ಬಿದ್ಅತ್‌ನಿಂದ ಸುರಕ್ಷಿತವಾಗಿರುತ್ತಾರೆ ಎಂಬುವುದರಲ್ಲಿ ಸಂಶಯವೇ ಇಲ್ಲ. ಅಲ್ಲಾಹು ಹೇಳುತ್ತಾನೆ.

﴿ وَأَنَّ هَٰذَا صِرَٰطِي مُسْتَقِيمًا فَٱتَّبِعُوهُ ۖ وَلَا تَتَّبِعُوا۟ ٱلسُّبُلَ فَتَفَرَّقَ بِكُمْ عَن سَبِيلِهِۦ ۚ ذَٰلِكُمْ وَصَّىٰكُم بِهِۦ لَعَلَّكُمْ تَتَّقُونَ ﴿١٥٣﴾ ﴾

**“ಮತ್ತು ಇದುವೇ ನನ್ನ ನೇರ ಮಾರ್ಗ. ಆದ್ದರಿಂದ ನೀವು ಅದನ್ನು ಅನುಸರಿಸಿರಿ ಮತ್ತು ಬೇರೆ ಮಾರ್ಗವನ್ನು ಅನುಸರಿಸದಿರಿ. ಅವು ನಿಮ್ಮನ್ನು ನೇರಮಾರ್ಗದಿಂದ ಬೇರ್ಪಡಿಸುವವು”** (384)

ಈ ಕುರಿತು ಪ್ರವಾದಿ(ﷺ) ಒಂದು ಹದೀಸ್‌ನಲ್ಲಿ ತಿಳಿಸಿದ್ದಾರೆ, ಹ. ಇಬ್ನು ಮಸ್‌ಊದ್ (رضي الله عنه) ವರದಿ ಮಾಡಿರುವರು.

خَطَّ لَنَا رَسُولُ اللَّهِ (ﷺ) خَطًّا فَقَالَ: «هَذَا سَبِيلُ اللَّهِ» ثُمَّ خَطَّ خُطُوطًا عَنْ يَمِينِهِ وَشِمَالِهِ ثُمَّ قَالَ : «وَهَذِهِ سُبُلٌ عَلَى كُلِّ سَبِيلٍ مِنْهَا شَيْطَانٌ يَدْعُو إِلَيْهِ»

**“ಅಲ್ಲಾಹನ ಸಂದೇಶವಾಹಕರು(ﷺ) ನಮಗಾಗಿ ಒಂದು ಗೆರೆ ಎಳೆದರು ಮತ್ತು ಹೇಳಿದರು, ಇದು ಅಲ್ಲಾಹನ ಮಾರ್ಗ. ನಂತರ ಅದರ ಬಲಗಡೆಗೂ, ಎಡಗಡೆಗೂ ಗೆರೆಗಳನ್ನೆಳೆದರು ಮತ್ತು ಹೇಳಿದರು, “ಇವುಗಳೆಲ್ಲಾ ಬೇರೆ ಬೇರೆ ಮಾರ್ಗಗಳು. ಇವುಗಳಲ್ಲಿ ಪ್ರತಿಯೊಂದರಲ್ಲೂ ಒಬ್ಬ ಶೈತಾನನು ಕುಳಿತುಕೊಂಡಿದ್ದಾನೆ ಮತ್ತು ತನ್ನೆಡೆಗೆ ಕರೆಯುತ್ತಿದ್ದಾನೆ.”**(385)

ಆನಂತರ ಈ ಆಯತ್ ಪಾರಾಯಣವನ್ನು ಮಾಡಿದರು.

﴿ وَأَنَّ هَٰذَا صِرَٰطِي مُسْتَقِيمًا فَٱتَّبِعُوهُ ۖ وَلَا تَتَّبِعُوا۟ ٱلسُّبُلَ فَتَفَرَّقَ بِكُمْ عَن سَبِيلِهِۦ ۚ ذَٰلِكُمْ وَصَّىٰكُم بِهِۦ لَعَلَّكُمْ تَتَّقُونَ ﴿١٥٣﴾ ﴾

**384** ಕುರ್ಆನ್ 6:153

**385** ಅಹ್ಮದ್,ಅಲ್ ಹಾಕಿಮ್, ಇಬ್ನ್ ಮಾಜ ಮತ್ತಿರರು

**“ಮತ್ತು ಇದುವೇ ನನ್ನ ನೇರಮಾರ್ಗ, ಆದ್ದರಿಂದ ನೀವು ಇದನ್ನು ಅನುಸರಿಸಿರಿ ಮತ್ತು ಬೇರೆ ಮಾರ್ಗವನ್ನು ಅನುಸರಿಸದಿರಿ. ಅವು ನಿಮ್ಮನ್ನು ನೇರಮಾರ್ಗದಿಂದ ಬೇರ್ಪಡಿಸುವವು.”** (386)

ಆದ್ದರಿಂದ ಯಾರು ಕುರ್‌ಆನ್ ಮತ್ತು ಸುನ್ನತ್‌ನ ಭದ್ರವಾದ ಹಗ್ಗವನ್ನು ಕೈ ಬಿಡುತ್ತಾನೋ ಅವನನ್ನು ದಾರಿತಪ್ಪಿದ ಮಾರ್ಗಗಳು, ನೂತನವಾದಗಳು, ಕುರಾಫಾತ್‌ಗಳು ತಮ್ಮೆಡೆಗೆ ಸೆಳೆಯುವವು.

ಬಿದ್‌ಅತ್‌ನ ಪ್ರಕಟವಾಗುವಿಕೆಗೆ ಕಾರಣಗಳು ಮತ್ತು ಕಾರ್ಯಗಳು ಈ ಕೆಳಗಿನಂತಿವೆ.

ಧರ್ಮದ ಆದೇಶಗಳ ಬಗ್ಗೆ ಅಜ್ಞಾನ, ದೇಹೇಚ್ಛೆಗಳ ಅನುಸರಣೆ, ವ್ಯಕ್ತಿಗಳು ಮತ್ತು ಅಭಿಪ್ರಾಯಗಳಿಗೆ ಆದ್ಯತೆ, ಕಾಫಿರರ ನಕಲು ಮತ್ತು ಅನುಸರಣೆ ಮುಂತಾದವುಗಳು. ಇವುಗಳ ಸ್ವಲ್ಪ ವಿವರಣೆಯು ಹೀಗಿದೆ.

1) ಧರ್ಮದ ಆದೇಶಗಳ ಬಗ್ಗೆ ಅಜ್ಞಾನ : ಕಾಲ ಕಳೆಯುತ್ತಾ ಹೋದಂತೆ, ಜನರು ಸಂದೇಶವಾಹಕತ್ವದ ಆಧಾರ ಪ್ರಮಾಣಗಳಿಂದ ದೂರ ಸರಿಯುತ್ತಾ ಹೋಗುತ್ತಾರೆ. ಜ್ಞಾನವು ಕಡಿಮೆಯಾಗುತ್ತಾ ಹೋಗುವುದು, ಜಾಹಿಲಿಯ್ಯತ್ ಹೆಚ್ಚುತ್ತಾ ಹೋಗುವುದು. ಪ್ರವಾದಿ(ﷺ) ಇದರ ಬಗ್ಗೆ ಹೀಗೆ ತಿಳಿಸಿದ್ದರು.

«مَنْ يَعِشْ مِنْكُمْ فَسَيَرَى اخْتِلَافًا كَثِيرًا»

**“ನಿಮ್ಮಲ್ಲಿ ಯಾರು ಬದುಕುಳಿಯುತ್ತಾನೋ ಅವನು ಬಹಳ ಭಿನ್ನಾಭಿಪ್ರಾಯಗಳನ್ನು ಕಾಣುವನು”** (387)

«إِنَّ اللَّهَ لَا يَقْبِضُ الْعِلْمَ انْتِزَاعًا يَنْتَزِعُهُ مِنَ الْعِبَادِ وَلَكِنْ يَقْبِضُ الْعِلْمَ بِقَبْضِ الْعُلَمَاءِ حَتَّى إِذَا لَمْ يُبْقِ عَالِمًا اتَّخَذَ النَّاسُ رُءُوسًا جُهَّالًا فَسَأَلُوا فَأَفْتَوْا بِغَيْرِ عِلْمٍ فَضَلُّوا وَأَضَلُّوا»

**“ನಿಶ್ಚಯವಾಗಿಯೂ ಅಲ್ಲಾಹು ಜ್ಞಾನವನ್ನು ದಾಸರಿಂದ ಒಮ್ಮಲೇ ಕಸಿದುಕೊಳ್ಳುವುದಿಲ್ಲ. ಬದಲಾಗಿ ವಿದ್ವಾಂಸರನ್ನು ಎತ್ತಿಕೊಂಡು ಜ್ಞಾನವನ್ನು ಎತ್ತಿಕೊಳ್ಳುತ್ತಾನೆ. ಎಷ್ಟರವರೆಗೆಂದರೆ ಒಬ್ಬ ವಿದ್ವಾಂಸನೂ ಬಾಕಿಯುಳಿಯುವುದಿಲ್ಲ. ಆಗ ಅವರು ಯಾವುದೇ ಜ್ಞಾನವಿಲ್ಲದೆ ಫತ್ವಾ(ವಿಧಿ) ನೀಡುತ್ತಾರೆ ಮತ್ತು ಸ್ವಯಂ ತಾವೂ ದಾರಿ ತಪ್ಪುತ್ತಾರೆ ಮತ್ತು ಇತರರನ್ನೂ ದಾರಿ ತಪ್ಪಿಸುತ್ತಾರೆ.”** (388)

---

**386** ಕುರ್‌ಆನ್ 6:153

**387** ಅಬೂದಾವೂದ್ ತಿರ್ಮಿದಿ

**388** ಜಾಮಿಅ್ ಬಯಾನುಲ್ ಇಲ್ಮ್ ವ ಫಳ್‌ಲಿಹಿ ಇಬ್ನ್ ಅಬ್ದುಲ್‌ಬರ್ರ್ 1/180

ಇದರಿಂದ ತಿಳಿಯುವುದೇನೆಂದರೆ ಕೇವಲ ಉಲೆಮಾಗಳು ಬಿದ್‌ಅತ್‌ಅನ್ನು ಕಿತ್ತೊಗೆಯುವ ಕೆಲಸ ಮಾಡುತ್ತಾರೆ. ಆದ್ದರಿಂದ ಉಲೆಮಾಗಳು ಇಲ್ಲದಾದಾಗ ಬಿದ್‌ಅತ್ ಹರಡಲು ಅವಕಾಶ ದೊರೆಯುತ್ತದೆ ಮತ್ತು ಬಿದ್‌ಅತ್ ವ್ಯಾಪಕವಾಗುವುದು.

ಆ) ದೇಹೇಚ್ಛೆಯ ಅನುಸರಣೆ: ಯಾರು ಖುರ್‌ಆನ್ ಮತ್ತು ಸುನ್ನತ್‌ನ ಅನುಸರಣೆಯಿಂದ ದೂರ ಓಡುತ್ತಾನೋ, ಅವನು ಖಂಡಿತವಾಗಿಯೂ ತನ್ನ ದೇಹೇಚ್ಛೆಗಳನ್ನು ಅನುಸರಿಸುತ್ತಾನೆ. ಅಲ್ಲಾಹುವಿನ ವಚನವು ಹೀಗಿದೆ.

﴿ فَإِن لَّمۡ يَسۡتَجِيبُواْ لَكَ فَٱعۡلَمۡ أَنَّمَا يَتَّبِعُونَ أَهۡوَآءَهُمۡۚ وَمَنۡ أَضَلُّ مِمَّنِ ٱتَّبَعَ هَوَىٰهُ بِغَيۡرِ هُدٗى مِّنَ ٱللَّهِۚ ﴾

**“ಇನ್ನು ಒಂದು ವೇಳೆ ಇವರು ನಿಮ್ಮ ಮಾತನ್ನು ಸ್ವೀಕರಿಸದಿದ್ದರೆ ತಿಳಿದುಕೊಳ್ಳಿರಿ ಇವರು ತಮ್ಮ ದೇಹೇಚ್ಛೆಗಳನ್ನು ಅನುಸರಿಸುತ್ತಾರೆ ಮತ್ತು ಅಲ್ಲಾಹನ ಸನ್ಮಾರ್ಗವನ್ನು ಬಿಟ್ಟು ತನ್ನ ದೇಹೇಚ್ಛೆಗಳ ಹಿಂದೆ ಹೋದವನಿಗಿಂತ ದಾರಿ ತಪ್ಪಿದವನು ಯಾರಿರಬಹುದು?”** (389)

ಇನ್ನೊಂದು ಕಡೆಯಲ್ಲಿ ಹೀಗಿದೆ:

﴿ أَفَرَءَيۡتَ مَنِ ٱتَّخَذَ إِلَٰهَهُۥ هَوَىٰهُ وَأَضَلَّهُ ٱللَّهُ عَلَىٰ عِلۡمٖ وَخَتَمَ عَلَىٰ سَمۡعِهِۦ وَقَلۡبِهِۦ وَجَعَلَ عَلَىٰ بَصَرِهِۦ غِشَٰوَةٗ فَمَن يَهۡدِيهِ مِنۢ بَعۡدِ ٱللَّهِۚ ﴾

**“ತನ್ನ ದೇಹೇಚ್ಛೆಗಳನ್ನೇ ತನ್ನ ಆರಾಧ್ಯನನ್ನಾಗಿ ಮಾಡಿರುವವನನ್ನು ನೀವು ಕಂಡಿರುವಿರಾ ಮತ್ತು ಅಲ್ಲಾಹು (ಅವನು ಹೇಗೆಂದು)ಗೊತ್ತಿದ್ದೂ, ಅವನನ್ನು ದಾರಿ ತಪ್ಪಿಸಿದನು. ಮತ್ತು ಅವನ ಕಿವಿ ಮತ್ತು ಹೃದಯಕ್ಕೆ ಮುದ್ರೆಯೊತ್ತಿರುವನು ಮತ್ತು ಅವನ ಕಣ್ಣಿಗೆ ತೆರೆಯೆಳೆದನು. ಅಲ್ಲಾಹನ ಬಳಿಕ ಅವನಿಗೆ ಯಾರು ಮಾರ್ಗದರ್ಶನ ನೀಡುವವರು ಇನ್ಯಾರಿದ್ದಾರೆ?”** (390)

ಬಿದ್‌ಅತ್ ದೇಹೇಚ್ಛೆಯ ಅನುಸರಣೆಗಳ ಜಾಲವಾಗಿದೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ.

ಇ) ಅಭಿಪ್ರಾಯ ಹಾಗೂ ವ್ಯಕ್ತಿಗಳಿಗೆ ನಿಷ್ಠೆ ತೋರುವುದು : ಅಭಿಪ್ರಾಯಗಳಿಗೆ ಹಾಗೂ ವ್ಯಕ್ತಿಗಳಿಗೆ ನಿಷ್ಠೆ ತೋರುವಿಕೆಯು ವಾಸ್ತವದಲ್ಲಿ ಒಬ್ಬ ವ್ಯಕ್ತಿಯ ಹಾಗೂ ಆಧಾರ ಪ್ರಮಾಣಗಳ ಅನುಸರಿಸುವಿಕೆಯ ನಡುವೆ ಅಡ್ಡ ಗೋಡೆಯನ್ನು ಸೃಷ್ಟಿಸುತ್ತದೆ.

﴿ وَإِذَا قِيلَ لَهُمُ ٱتَّبِعُواْ مَآ أَنزَلَ ٱللَّهُ قَالُواْ بَلۡ نَتَّبِعُ مَآ أَلۡفَيۡنَا عَلَيۡهِ ءَابَآءَنَآۗ ﴾

**“ಮತ್ತು ಈ ಜನರೊಂದಿಗೆ ಅಲ್ಲಾಹು ಅವತೀರ್ಣಗೊಳಿಸಿರುವುದನ್ನು ಪಾಲಿಸಿರಿ**

**389** ಖುರ್‌ಆನ್ 28:50

**390** ಖುರ್‌ಆನ್ 45:23

**ಎಂದು ಹೇಳಲಾದಾಗ ಇವರು ಹೇಳುತ್ತಾರೆ: (ಇಲ್ಲ) ನಾವು ನಮ್ಮ ತಂದೆ ತಾತಂದಿರನ್ನು ಯಾವುದರಲ್ಲಿ ಕಂಡೆವೋ ಅದನ್ನೇ ಮಾಡುತ್ತೇವೆ ಎನ್ನುತ್ತಾರೆ."** (391)

ಇಂದಿನ ವಿವಿಧ ಗುಂಪುಗಳ ಮತ್ತು ಗೋರಿಯಾರಾಧಕರ ಅವಸ್ಥೆಯೂ ಇದೇ ಆಗಿದೆ. ಇವರು ತಮ್ಮ ಹಟದಲ್ಲಿ ಅಂಧರಾಗಿದ್ದಾರೆ. ಇವರನ್ನು ಕುರ್‌ಆನ್ ಮತ್ತು ಸುನ್ನತ್‌ನೆಡೆಗೆ ಆಹ್ವಾನಿಸಿದರೆ ಕುರ್‌ಆನ್ ಸುನ್ನತ್‌ಗೆ ವಿರುದ್ಧವಾದ ಪ್ರವರ್ತನೆಗಳಿಂದ ತಡೆದರೆ ಇವರನ್ನು ತಮ್ಮ ಶೇಖ್‌ಗಳೆಡೆಗೆ ಉಲ್ಲೇಖಿಸುತ್ತಾರೆ ಮತ್ತು ತಮ್ಮ ತಂದೆ ತಾತಂದಿರ ವಿಧಾನದಿಂದ ಆಧಾರವಿಡುತ್ತಾರೆ.

ಈ) ಕಾಫಿರರ ತಕ್‌ಲೀದ್ (ಅಂಧಾನುಕರಣೆ) : ಅನ್ಯ ಧರ್ಮಗಳ ಅಂಧಾನುಕರಣೆಯು ಮುಸ್ಲಿಮರನ್ನು ಎಲ್ಲಕ್ಕಿಂತ ಹೆಚ್ಚು ಬಿದ್‌ಅತ್ ಮತ್ತು ಕುರಾಫಾತ್‌ನಲ್ಲಿ ಹಾಕುತ್ತದೆ. ಅಬೀ ವಾಕಿದುಲ್ಲಯ್ಸೀ(ﷺ) ಹೇಳುತ್ತಾರೆ : ಒಮ್ಮೆ ನಾವು ರಸೂಲುಲ್ಲಾಹಿ(ﷺ)ರೊಂದಿಗೆ ಹುನೈನ್ ಕಡೆಗೆ ಹೊರಟೆವು. ನಾವು ಹೊಸದಾಗಿ ಇಸ್ಲಾಮ್ ಸ್ವೀಕರಿಸಿದವರಾಗಿದ್ದೆವು. ಆ ಸಮಯದಲ್ಲಿ ಮುಶ್ರಿಕರ ಒಂದು ಮರವಿತ್ತು. ಅವರು ಅದನ್ನು ಆರಾಧಿಸುತ್ತಿದ್ದರು.

ಮತ್ತು ತಮ್ಮ ಆಯುಧಗಳನ್ನು ಅದರಲ್ಲಿ ತೂಗು ಹಾಕುತ್ತಿದ್ದರು. ಇದಕ್ಕೆ "ದಾತ್ ಅನ್ ವಾತ್" ಎಂದೂ ಕರೆಯುತ್ತಿದ್ದರು. ನಾವು ಆ ಮರದ ಬಳಿಯಿಂದ ಹಾದು ಹೋದಾಗ ನಾವು ಅಲ್ಲಾಹನ ಸಂದೇಶವಾಹಕ(ﷺ)ರೊಂದಿಗೆ ಕೇಳಿದೆವು. ಯಾ ರಸೂಲಲ್ಲಾಹ್! ಮುಶ್ರಿಕರಿಗಿರುವಂತೆ ನಮಗೂ ಒಂದು "ದಾತ್ ಅನ್‌ವಾತ್" ಅನ್ನು ಮಾಡಿ. ಇದನ್ನು ಕೇಳಿ ರಸೂಲುಲ್ಲಾಹಿ(ﷺ) ಹೇಳಿದರು.

ಅಲ್ಲಾಹು ಅಕ್ಬರ್! ಇದುವೇ ಹಿಂದಿನವರ ಕ್ರಮ– ಯಾರ ಕೈಯಲ್ಲಿ ನನ್ನ ಜೀವವಿದೆಯೋ ಅವನಾಣೆ! ನೀವು ನನ್ನೊಂದಿಗೆ ಬನೀ ಇಸ್ರಾಈಲರು ಮೂಸಾ(عليه السلام) ರೊಂದಿಗೆ ಕೇಳಿದಂತೆಯೇ ಹೇಳಿದಿರಿ. ಆ ಜನರು ಹೀಗೆಂದಿದ್ದರು.

﴿ ٱجۡعَل لَّنَآ إِلَٰهٗا كَمَا لَهُمۡ ءَالِهَةٞۚ قَالَ إِنَّكُمۡ قَوۡمٞ تَجۡهَلُونَ ١٣٨ ﴾

**"ಅವರಿಗೆ ದೇವನಿರುವಂತೆ ನಮಗೂ ಒಂದು ಇಲಾಹ್‌ಅನ್ನು ಮಾಡಿರಿ. ಆಗ ಮೂಸಾ(ಅಲೈಹಿಸ್ಸಲಾಮ್) ಹೇಳಿದರು "ನೀವು ದೊಡ್ಡ ಮೂಢ ಜನರಾಗಿರುವಿರಿ."** (392)

«لَتَرْكَبُنَّ سُنَنَ مَنْ قَبْلَكُمْ»

**"ನೀವು ಖಂಡಿತವಾಗಿಯೂ ನಿಮ್ಮ ಹಿಂದಿನ ಜನರ ಕ್ರಮಗಳನ್ನು ಅನುಸರಿಸುವಿರಿ"** (393)

ಕಾಫಿರರ ತಕ್‌ಲೀದ್(ಅಂಧಾನುಕರಣೆ)ಯೇ ಬನೀ ಇಸ್ರಾಈಲರನ್ನು ಇಂತಹ ನೀಚ

---

**391** ಕುರ್‌ಆನ್ 2:170

**392** ಕುರ್‌ಆನ್ 7:138

**393** ಅತ್ತಿರ್ಮಿದೀ

ಪ್ರಶ್ನೆ ಕೇಳುವಂತೆ ಪ್ರೇರೇಪಿಸಿತೆಂದು ಇದರಿಂದ ವ್ಯಕ್ತವಾಗುತ್ತದೆ. ತಮಗೂ ಆರಾಧಿಸಲಿಕ್ಕೆ ಒಂದು ಮೂರ್ತಿ ಬೇಕೆಂದು ಅವರು ಕೇಳಿದ್ದರು. ಇದುವೇ ರಸೂಲುಲ್ಲಾಹಿ(ﷺ) ರನ್ನು ತಮಗೂ ಒಂದು ಬರ್ಕತ್ ಪಡೆಯಲು ಮರವನ್ನು ಮಾಡಿಕೊಡಬೇಕೆಂದು ಸಹಾಬಿಗಳು ಕೇಳುವಂತೆ ಪ್ರೇರೇಪಿಸಿತು. ಇಂದು ಮುಸ್ಲಿಮರ ಅವಸ್ಥೆಯೂ ಹೀಗೆಯೇ ಇದೆ. ಮುಸ್ಲಿಮರಿಂದು ಕಾಫಿರರ ತಖ್ ಲೀದ್ ನಲ್ಲಿ ಮುಶ್ರಿಕರ ಕಾರ್ಯಗಳಲ್ಲಿ ಮತ್ತು ಬಿದ್‌ಅತ್ ಕುರಾಫಾತ್‌ನಲ್ಲಿ ನಿರತರಾಗಿದ್ದಾರೆ. ಬರ್ತ್‌ಡೇಯನ್ನು ಭಾರೀ ಭರ್ಜರಿಯಾಗಿ ಆಚರಿಸಲಾಗುತ್ತದೆ. ವಿಶೇಷ ಕಾರ್ಯಗಳಿಗಾಗಿ ದಿನ ಮತ್ತು ವಾರವನ್ನು ನಿಶ್ಚಯಿಸಲಾಗುತ್ತದೆ. ವಿಭಿನ್ನ ವಿಭಿನ್ನ ಧಾರ್ಮಿಕ ಮತ್ತು ಸ್ಮರಣೀಯ ಸಮಯಗಳಲ್ಲಿ ಉತ್ಸವ ಆಚರಿಸಲಾಗುತ್ತದೆ. ಪ್ರತಿಮೆಗಳನ್ನು, ಸ್ಮಾರಕಗಳನ್ನು ಸ್ಥಾಪಿಸಲಾಗುತ್ತದೆ. ಮಜ್ಲಿಸ್ ಗಳನ್ನೇರ್ಪಡಿಸಲಾಗುತ್ತದೆ. ಶೋಕ ಸಭೆ, ಸಮಿತಿ ಏರ್ಪಡಿಸಲಾಗುತ್ತದೆ. ಗೋರಿಗಳನ್ನು ಎತ್ತರಿಸುವುದು ಅವುಗಳ ಮೇಲೆ ಕಟ್ಟಡ ನಿರ್ಮಾಣ ಸರ್ವೇ ಸಾಮಾನ್ಯವಾಗಿದೆ.

### ಅಧ್ಯಾಯ –3

## ನೂತನವಾದಿಗಳ ಬಗ್ಗೆ ಮುಸ್ಲಿಮ್ ಉಮ್ಮತ್‌ನ ನಿಲುವು ಮತ್ತು ಅದನ್ನು ಕಿತ್ತೆಸೆಯುವುದರಲ್ಲಿ ಅಹ್ಲುಸ್ಸುನ್ನತ್ ವಲ್ ಜಮಾಅತ್‌ನ ವಿಧಾನ.

ಅಹ್ಲುಸ್ಸುನ್ನತ್ ವಲ್‌ಜಮಾಅತ್ ಕಠಿಣವಾಗಿ ನೂತನವಾದಿಗಳಿಗೆ ಉತ್ತರ ನೀಡುತ್ತಾ ಬಂದಿದೆ ಮತ್ತು ಅವರ ಬಿದ್‌ಅತ್ ಮತ್ತು ಕುರಾಫಾತ್‌ಗಳನ್ನು ಖಡಾಖಂಡಿತವಾಗಿ ನಿರಾಕರಿಸುತ್ತದೆ ಮತ್ತು ಅವರನ್ನು ಶಿರ್ಕ್ ಬಿದ್‌ಅತ್‌ಗಳಿಂದ ತಡೆಯುತ್ತದೆ. ಅವುಗಳ ಕೆಲವು ಮಾದರಿಗಳು ಇಂತಿವೆ.

ಅ) **ಉಮ್ಮುದ್ದರ್ದಾ(ﷺ) ಹೇಳುತ್ತಾರೆ. ಒಮ್ಮೆ ಅಬೂದರ್ದಾ(ﷺ) ಬಹಳ ಕೋಪಾಕ್ರಾಂತರಾಗಿ ಮನೆ ಪ್ರವೇಶಿಸಿದರು. ನಿಮಗೆ ಏನಾಯಿತೆಂದು ನಾನು ಕೇಳಿದೆ. ಅವರು ಹೇಳಿದರು: "ಅಲ್ಲಾಹುವಿನಾಣೆ ಇಂದು ರಸೂಲುಲ್ಲಾಹಿ(ﷺ)ರ ಕಾಲದ ಯಾವುದೇ ವಸ್ತು ಉಳಿದಿಲ್ಲ. ಸಾಮೂಹಿಕವಾಗಿ ನಮಾಝ್ ಮಾಡುತ್ತಿರುವುದೊಂದನ್ನು ಬಿಟ್ಟು."** [394]

ಆ) ಉಮರ್ ಬಿನ್ ಯಹ್ಯಾ(ﷺ) ಹೇಳುತ್ತಾರೆ, ನಾನು ನನ್ನ ತಂದೆಯಿಂದ ಕೇಳಿದ್ದೇನೆ: ಅವರು ಅವರ ತಂದೆಯಿಂದ ಕೇಳಿದ್ದರು: ನಾವು ಝುಹರ್ ನಮಾಝ್‌ಗಿಂತ ಮುಂಚೆ ಅಬ್ದುಲ್ಲಾಹ್ ಬಿನ್ ಮಸ್‌ಊದ್(ﷺ)ರವರ ಬಾಗಿಲ ಬಳಿ ಕುಳಿತು ಕೊಳ್ಳುತ್ತಿದ್ದೆವು. ಅವರು ಹೊರಟಾಗ ಅವರ ಜೊತೆ ನಾವೂ ಮಸೀದಿಗೆ ಹೊರಡುತ್ತಿದ್ದೆವು. ಒಂದು ದಿನ

394 ಬುಖಾರಿ

ಅಬೂ ಮೂಸಾ ಅಲ್ ಅಶ್‌ಅರೀ(ﷺ) ಆಗಮಿಸಿದರು ಮತ್ತು ಕೇಳಿದರು "ಅಬೂ ಅಬ್ದುರ್ರಹ್ಮಾನ್ ಬಂದರೇ? ನಾವು ಇಲ್ಲವೆಂದೆವು. ಅವರೂ ಕೂಡಾ ನಮ್ಮೊಂದಿಗೆ ಕುಳಿತುಕೊಂಡರು. ಅಬೂ ಅಬ್ದುರ್ರಹ್ಮಾನ್ ಹೊರಗೆ ಬರುವವರೆಗೂ ಕುಳಿತೆವು. ಅವರು ಹೊರಗೆ ಬಂದಾಗ ನಾವೆಲ್ಲರೂ ಅವರ ಬಳಿ ಹೋದೆವು. .ಅವರು ಹೇಳಿದರು "ಓ ಅಬೂ ಅಬ್ದುರ್ರಹ್ಮಾನ್ ನಾವು ಸ್ವಲ್ಪ ಹೊತ್ತಿನ ಹಿಂದೆ ಮಸೀದಿಯಲ್ಲಿ ಒಂದು ಹೊಸ ವಿಷಯವನ್ನು ನೋಡಿದೆವು. ನನ್ನ ಅಭಿಪ್ರಾಯದಂತೆ ಅಲ್ ಹಮ್ದುಲಿಲ್ಲಾಹ್ ಒಳ್ಳೆಯದಿರಬೇಕು. ಅವರು ಕೇಳಿದರು ಏನದು? ಅವರು ಹೀಗೆ ಹೇಳಿದರು. ಒಂದು ವೇಳೆ ನೀವು ಜೀವಂತವಾಗಿದ್ದರೆ ನೀವೂ ಸ್ವಯಂ ಅದನ್ನು ನೋಡುವಿರಿ. ಅವರು ಹೇಳಿದರು. "ನಾನು ಮಸೀದಿಯಲ್ಲಿ ಒಂದು ಜಮಾಅತ್‌ಅನ್ನು ನೋಡಿದೆ. ಅವರು ವೃತ್ತಾಕಾರವಾಗಿ ಕುಳಿತುಕೊಂಡಿದ್ದರು ಮತ್ತು ನಮಾಝ್‌ಗಾಗಿ ಕಾದು ಕೊಂಡಿದ್ದರು. ಪ್ರತೀ ವೃತ್ತದಲ್ಲಿ ಒಬ್ಬ ವ್ಯಕ್ತಿ ಇರುತ್ತಾನೆ ಮತ್ತು ಎಲ್ಲರ ಕೈಯಲ್ಲಿ ಚಿಕ್ಕ ಕಲ್ಲುಗಳಿರುತ್ತವೆ. ಆ ವ್ಯಕ್ತಿ ಹೇಳುತ್ತಾನೆ, ನೂರು ಬಾರಿ ತಕ್ಬೀರ್(ಅಲ್ಲಾಹು ಅಕ್ಬರ್)ಹೇಳಿರಿ, ಆಗ ಆ ಜನರು ನೂರು ಬಾರಿ ತಕ್‌ಬೀರ್ ಹೇಳುತ್ತಿದ್ದರು. ನಂತರ ಆ ವ್ಯಕ್ತಿ ಹೇಳುತ್ತಾನೆ. "ನೂರು ಬಾರಿ ಅಲ್‌ಹಮ್ದುಲಿಲ್ಲಾಹ್ ಹೇಳಿರಿ" ಆಗ ಅವರು ನೂರು ಬಾರಿ ಅಲ್‌ಹಮ್ದುಲಿಲ್ಲಾಹ್ ಹೇಳುತ್ತಾರೆ. ನಂತರ ಅವನು ಹೇಳುತ್ತಾನೆ. "ನೂರು ಬಾರಿ ಸುಬ್‌ಹಾನಲ್ಲಾಹ್ ಹೇಳಿರಿ "ಆಗ ಅವರು ನೂರು ಬಾರಿ ಸುಬ್‌ಹಾನಲ್ಲಾಹ್ ಹೇಳುತ್ತಿದ್ದರು. ಆಗ ಅವರು ಇಬ್ನ್ ಮಸ್‌ಊದ್ (ﷺ) ಹೇಳಿದರು: ನೀನೇನು ಹೇಳಿದೆ? ಅದಕ್ಕೆ ನಾನು ಹೀಗೆ ಉತ್ತರ ಕೊಟ್ಟೆ. ನಾನು ಅವರಿಗೆ ಏನೂ ಹೇಳಲಿಲ್ಲ. ಇದರಲ್ಲಿ ನಿಮ್ಮ ಅಭಿಪ್ರಾಯದ ನಿರೀಕ್ಷೆಯಿದೆ ಅಥವಾ ನಿಮ್ಮ ಆದೇಶದ ನಿರೀಕ್ಷೆಯಿದೆ. ಅವರು ಹೇಳಿದರು : ಅವರಿಗೆ ಅವರು ತಮ್ಮ ತಪ್ಪುಗಳನ್ನು ಎಣಿಸಲಿ ಎಂದೇಕೆ ಹೇಳಲಿಲ್ಲ? ಅವರ ಸತ್ಕರ್ಮಗಳು ನಷ್ಟ ಹೊಂದಲಾರವೆಂಬ ಖಾತರಿಯನ್ನು ನೀನು ಕೊಟ್ಟುಬಿಟ್ಟೆಯಾ?"

ಹೀಗೆ ಅವರು ಹೊರಟರು. ನಾವು ಕೂಡಾ ಅವರ ಹಿಂದೆ ಹೋದೆವು. ಎಲ್ಲಿಯವರೆಗೆಂದರೆ ಅವರು ಆ ವೃತ್ತಗಳಲ್ಲಿ ಒಂದು ವೃತ್ತದ ಹತ್ತಿರ ಹೋದರು. ಅಲ್ಲಿ ನಿಂತು ಹೀಗೆಂದರು. ನಾವು ನೋಡುತ್ತಿರುವುದೇನು? ನೀವು ಎಂಥ ಕೆಲಸ ಮಾಡುತ್ತಿದ್ದೀರಿ? ಆ ಜನರು ಹೇಳಿದರು: ಓ ಅಬೂ ಅಬ್ದುರ್ರಹ್ಮಾನ್ ಇವು ಚಿಕ್ಕ ಕಲ್ಲುಗಳಾಗಿವೆ. ಇವುಗಳ ಮೂಲಕ ನಾವು ತಕ್‌ಬೀರ್, ತಹ್‌ಲೀಲ್, ತಸ್‌ಬೀಹ್, ತಹ್‌ಮೀದ್‌ಗಳನ್ನು ಎಣಿಸುತ್ತಿದ್ದೆವು. ಇದನ್ನು ಕೇಳಿ ಅವರು ಹೇಳಿದರು. "ನಿಮ್ಮ ಪಾಪಗಳನ್ನು ಎಣಿಸಿರಿ. ನಿಮ್ಮ ಈ ಒಳಿತುಗಳು ಯಾವ ಪ್ರಯೋಜನಕ್ಕೂ ಬರಲಾರವೆಂಬುದಕ್ಕೆ ನಾನು ಸಾಕ್ಷಿಯಾಗಿದ್ದೇನೆ. ನಿಮಗೇನಾಗಿದೆ ಓ ಮುಹಮ್ಮದ್ (ﷺ)ರ ಸಮುದಾಯವೇ? ಇಷ್ಟು ಬೇಗ ಏಕೆ ವಿನಾಶದತ್ತ ಮುಂದುವರಿಯುತ್ತಿದ್ದೀರಿ? ಇಂದು ಸಹಾಬಿಗಳು ಬಹುಸಂಖ್ಯೆಯಲ್ಲಿದ್ದಾರೆ. ಇಂದು ರಸೂಲುಲ್ಲಾಹಿ(ﷺ)ರ

ಬಟ್ಟೆಯೂ ಹಳತಾಗಿಲ್ಲ. ಅವರ ಪಾತ್ರೆಗಳೂ ಜೋಪಾನವಾಗಿದೆ. ಯಾರ ಕೈಯಲ್ಲಿ ನನ್ನ ಆತ್ಮವಿದೆಯೋ ಅವನ ಆಣೆ, ನಿಮ್ಮ ಕ್ರಮವು ಮುಹಮ್ಮದ್(ﷺ)ರ ಕ್ರಮಕ್ಕಿಂತಲೂ ಉತ್ತಮವಾಗಿದೆಯೇ ಅಥವಾ ನೀವು ದಾರಿ ತಪ್ಪುವಿಕೆಯ ಬಾಗಿಲು ತೆರೆಯುತ್ತಿರುವಿರೋ? ಅವರು ಹೇಳಿದರು : ಅಲ್ಲಾಹುವಿನಾಣೆ, ಓ ಅಬೂಅಬ್ದುರ್ರಹ್ಮಾನ್! ನಮ್ಮ ನಿಯ್ಯತ್ ಅಂತೂ ಒಳಿತಿನದ್ದಾಗಿದೆ. ಅದಕ್ಕೆ ಅವರು ಹೀಗೆಂದರು ಬಹಳ ಮಂದಿ ಒಳಿತನ್ನು ಬಯಸುತ್ತಾರೆ. ಆದರೆ ಒಳಿತಿನವರೆಗೆ ತಲುಪುವುದಿಲ್ಲ. ರಸೂಲುಲ್ಲಾಹಿ(ﷺ) ಹೇಳಿದ್ದಾರೆ : ಕೆಲವು ಜನರಿದ್ದಾರೆ ಅವರು ಕುರ್‌ಆನನ್ನು ಓದುತ್ತಾರೆ. ಆದರೆ ಕುರ್‌ಆನ್ ಅವರ ಗಂಟಲಿಗಿಂತ ಕೆಳಗೆ ಇಳಿಯಲಾರದು. ಅಲ್ಲಾಹನಾಣೆ, ಬಹುಶಃ ಅವರಲ್ಲಿ ಹೆಚ್ಚಿನವರು ನಿಮ್ಮಿಂದಲೇ ಆಗಿರುವರು. ಹೀಗೆ ಅಲ್ಲಿಂದ ಹೊರಟರು. ಉಮರುಬ್ನು ಸಲ್ಮಾರು ಹೇಳುತ್ತಾರೆ. "ನಾವು ಅವರಲ್ಲಿ ಬಹಳ ಮಂದಿಯನ್ನೂ, ನಹರ್‌ವಾನ್‌ನ ಸಮಯದಲ್ಲಿ ಖವಾರಿಜ್‌ಗಳೊಂದಿಗೆ ಸೇರಿ ನಮಗೆ ಬೈಯ್ಯುವುದನ್ನು, ಬೈಗುಳ ಹಾಕುತ್ತಿದ್ದುದನ್ನು ಕಂಡಿದ್ದೇವೆ." [395]

ಈ ಒಮ್ಮೆ ಒಬ್ಬ ವ್ಯಕ್ತಿಯು ಇಮಾಮ್ ಮಾಲಿಕ್ ಬಿನ್ ಅನಸ್ (رحمه الله)ರ ಬಳಿ ಬಂದು ಹೇಳಿದರು : ಎಲ್ಲಿಂದ ಇಹ್ರಾಮ್ ಕಟ್ಟಲಿ? ಪ್ರವಾದಿ(ﷺ)ಯವರು ಇಹ್ರಾಂ ಕಟ್ಟಿದ ಮೀಖಾತ್‌ನಿಂದ ಕಟ್ಟಬೇಕು ಎಂದು ಅವರುತ್ತರಿಸಿದರು. ಆಗ ಆ ವ್ಯಕ್ತಿ ಹೇಳಿದರು, ಒಂದು ವೇಳೆ ನಾನು ಅಲ್ಲಿಗಿಂತ ಮುಂಚೆಯೇ ಇಹ್ರಾಮ್ ಕಟ್ಟಿದರೆ? ಇಮಾಮ್ ಮಾಲಿಕ್ ಹೇಳಿದರು, "ನನ್ನ ಪ್ರಕಾರ ಇದು ಸರಿಯಲ್ಲ. ಆ ವ್ಯಕ್ತಿ ಹೇಳಿದರು: ಅದರಲ್ಲಿ ನೀವು ಯಾವ ತಪ್ಪನ್ನು ಕಾಣುತ್ತಿರುವಿರಿ. ಮಾಲಿಕ್ ಹೇಳಿದರು: ವಾಸ್ತವದಲ್ಲಿ ನಾನು ನಿನಗಾಗಿ ಫಿತ್ನವನ್ನು ಇಷ್ಟಪಡಲಾರೆ. ಆಗ ಆ ವ್ಯಕ್ತಿ ಕೇಳಿದರು. "ಹೆಚ್ಚು ಹೆಚ್ಚು ಪುಣ್ಯ ಪಡೆದುಕೊಳ್ಳುವುದರಲ್ಲಿ ಫಿತ್ನ ಏನಿದೆ? ಇಮಾಮ್ ಮಾಲಿಕ್(رحمه الله) ಹೇಳಿದರು, ಅಲ್ಲಾಹುವಿನ ವಚನವು ಹೀಗಿದೆ.

﴿ فَلْيَحْذَرِ ٱلَّذِينَ يُخَالِفُونَ عَنْ أَمْرِهِۦٓ أَن تُصِيبَهُمْ فِتْنَةٌ أَوْ يُصِيبَهُمْ عَذَابٌ أَلِيمٌ ﴿٦٣﴾ ﴾

**"ಮತ್ತು ಅವರ ಆದೇಶವನ್ನು ನಿರಾಕರಿಸುತ್ತಾರೋ ಅವರು ತಮ್ಮ ಮೇಲೆ ಯಾವುದೇ ವಿಪತ್ತು ಬರಬಹುದೆಂದು ಅಥವಾ ವೇದನಾಯುಕ್ತ ಶಿಕ್ಷೆಯು ಎರಗಬಹುದೆಂದು ಭಯಪಡಲಿ"** [396]

ರಸೂಲುಲ್ಲಾಹಿ(ﷺ)ರವರು ತಿಳಿಸಿದಂತಹ ಒಂದು ವಿಶೇಷ ಕಾರ್ಯವನ್ನೂ ನಿಗದಿಪಡಿಸುವುದಕ್ಕಿಂತ ದೊಡ್ಡ ಫಿತ್ನವು ಯಾವುದಿರಬಹುದು?(ಅಬೂಶಾಮ)

ಇದು ಒಂದು ನಮೂನೆಯಾಗಿದೆ. ನಮ್ಮ ಉಲೆಮಾಗಳು ಬಿದ್‌ಅತ್‌ನ ಕೃತ್ಯಗಳನ್ನು

**395** ದಾರಿಮೀ

**396** ಕುರ್‌ಆನ್ 24:63

ಖಂಡಿಸುತ್ತಾ ಬಂದಿದ್ದಾರೆ ಮತ್ತು ಇಂದಿಗೂ ಮಾಡುತ್ತಿದ್ದಾರೆ–ಅಲ್ ಹಮ್ದುಲಿಲ್ಲಾಹ್.

2. ನೂತನವಾದಿಗಳನ್ನು ಖಂಡಿಸುವುದರಲ್ಲಿ ಅಹ್ಲುಸ್ಸುನ್ನತ್ ವಲ್ ಜಮಾಅತ್‌ನ ವಿಧಾನ ಇವರ ಮನ್‌ಹಜ್ ಯಾ ವಿಧಾನವು ಕುರ್‌ಆನ್ ನಸುನ್ನತ್‌ನ ಮೇಲೆ ಆಧಾರಿತವಾಗಿದೆ. ಇದು ಅತ್ಯಂತ ಹೆಚ್ಚು ಪ್ರಾಮಾಣೀಕೃತ ಮತ್ತು ಅವಿರೋಧಿ ಕ್ರಮವಾಗಿದೆ. ಮೊದಲು ಬಿದ್‌ಅತ್‌ನ ಕೆಡುಕುಗಳನ್ನು ಹೇಳಲಾಗುತ್ತದೆ. ನಂತರ ಅದರ ಮೂಲವಿಲ್ಲದ ಆಧಾರಗಳನ್ನು ಮುರಿಯಲಾಗುತ್ತದೆ. ಕಿತಾಬ್ –ಸುನ್ನತ್‌ನ ಆಧಾರಗಳಿಂದ, ಕುರ್‌ಆನ್ ಸುನ್ನತ್‌ಅನ್ನು ಭದ್ರವಾಗಿ ಹಿಡಿಯುವುದು ಕಡ್ಡಾಯವೆಂದೂ ಮತ್ತು ಶಿರ್ಕ್ ಬಿದ್‌ಅತ್ ಮತ್ತು ಧರ್ಮದಲ್ಲಿ ಹೊಸತಾಗಿ ಕಾರ್ಯವನ್ನೂ ಉಂಟುಮಾಡುವುದು ಹರಾಮ್ ಎಂದು ಹೇಳಲಾಗುತ್ತದೆ. ಈ ವಿಷಯದಲ್ಲಿ ಬಹಳಷ್ಟು ಪುಸ್ತಕಗಳನ್ನು ರಚಿಸಲಾಗಿದೆ. ಅಕೀದಃದ ಪುಸ್ತಕಗಳಲ್ಲಿ ಶಿಯಾ, ಖವಾರಿಜ್, ಜಹ್‌ಮಿಯ್ಯ, ಮುಅತಝಿಲ ಅಶಾಇರಃಗಳಿಗೆ ಉತ್ತರನೀಡಲಾಗಿದೆ. ಇಮಾಮ್ ಅಹ್ಮದ್(ﷺ) ಜಹ್ಮಿಯ್ಯದ ವಿರುದ್ಧ ಒಂದು ಪುಸ್ತಕವನ್ನು ಬರೆದಿದ್ದಾರೆ. ಇವರಲ್ಲದೆ ಉಸ್ಮಾನ್ ಬಿನ್ ಸಈದ್ ಅದ್ದಾರಿಮೀ, ಶೈಖುಲ್ ಇಸ್ಲಾಮ್ ಇಬ್ನ್ ತೈಮಿಯ್ಯ ಅವರ ಶಿಷ್ಯರಾದ ಇಮಾಮ್ ಇಬ್ನ್ ಖೈಯ್ಯಿಮ್, ಮುಹಮ್ಮದ್ ಬಿನ್ ಅಬ್ದುಲ್ ವಹ್ಹಾಬ್ ಮುಂತಾದವರು ಈ ವಿಷಯದಲ್ಲಿ ಬಹಳಷ್ಟು ಬರೆದಿರುವರು. ಇವರು ಸೂಫಿಸಂ, ಗೋರಿ ಪೂಜಕರು ಮತ್ತು ಇತರ ದಾರಿ ತಪ್ಪಿದ ಗುಂಪುಗಳಿಗೆ ಉತ್ತರಿಸಿರುವರು. ಬಿದ್‌ಅತ್‌ನ ವಿರುದ್ಧ ಬಹಳಷ್ಟು ಪುಸ್ತಕಗಳು ಬರೆಯಲ್ಪಟ್ಟಿವೆ. ಅವುಗಳಲ್ಲಿ ಕೆಲವು ಹೆಸರುಗಳನ್ನು ಕೆಳಗೆ ಕೊಡಲಾಗಿದೆ.

1. ಇಮಾಮ್ ಶಾತಿಬೀಯವರ ಕಿತಾಬುಲ್ ಇಅತಿಸಾಮ್.

2. ಕಿತಾಬ್ ಇಕ್‌ತಿದ್ವಾಉಸ್ಸಿರಾತುಲ್ ಮುಸ್ತಕೀಂ, ಶೈಖ್ ಇಬ್ನ್ ತೈಮಿಯ್ಯ, ಇದರಲ್ಲಿ ನೂತನವಾದಿಗಳ ಮೇಲೆ ಬಹಳ ಉತ್ತಮವಾಗಿ ಚರ್ಚಿಸಲಾಗಿದೆ. ಪುಸ್ತಕದ ಹೆಚ್ಚಿನ ಭಾಗವು ಬಿದ್‌ಅತ್‌ನ ವಿಷಯದಲ್ಲೇ ಇದೆ.

3. ಕಿತಾಬ್ ಇನ್‌ಕಾರುಲ್ ಹವಾದೀಸ್ ವಲ್ ಬಿದಅ–ಇಬ್ನು ವಝ್ಝಾಅ

4. ಕಿತಾಬುಲ್  ಹವಾದೀಸ್ ವಲ್ ಬಿದಅ -ಅತ್ತರ್‌ತೂಷೀ

5. ಕಿತಾಬುಲ್ ಬಾಇಸ್ ಅಲಾ ಇನ್‌ಕಾರಿಲ್ ಬಿದಅ ವಲ್ ಹವಾದೀಸ್ - ಅಬೀಶಾಮಃ

ಕೆಲವು ಸರ್ವಕಾಲೀನ ಪುಸ್ತಕಗಳು

1. ಕಿತಾಬುಲ್ ಇಬ್ದಾಇ ಫೀ ಮುಝಾರಿಲ್ ಇಬ್‌ತಿದಾಅ–ಶೇಖ್ ಅಲೀಮಹ್‌ಫೂಝ್

2. ಕಿತಾಬುಸ್ಸುನನ್ ವಲ್ ಮುಬ್ತಅತ್ತುಲ್ ಮುತಅಲಿಕ್ ಬಿಲ್ ಅಝ್‌ಕಾರ್ ವಸ್ಸಲಾತ್–ಶೈಖ್ ಮುಹಮ್ಮದ್ ಇಬ್ನ್ ಅಹ್ಮದ್ ಅಶ್ಶಕೀರೀ ಅಲ್ ಹವಾಮೀ

3. ರಿಸಾಲತುತ್ತಹ್‌ಝೀರ್ ಮಿನಲ್ ಬಿದಅ–ಶೈಖ್ ಅಬ್ದುಲ್ ಅಝೀಝ್ ಬಿನ್

ಬಾರ್ಝ್

ಅಲ್ ಹಮ್ದುಲಿಲ್ಲಾಹ್ ಇಂದೂ ಕೂಡಾ ಉಲೆಮಾಗಳ ದೊಡ್ಡ ಸಮೂಹವು ಬಿದ್‌ಅತ್ ಅನ್ನು ಕಿತ್ತೊಗೆಯಲು ಮತ್ತು ನೂತನವಾದಿಗಳನ್ನು ನೇರ ಮಾರ್ಗಕ್ಕೆ ತರಲು ಪ್ರಯತ್ನಿಸುತ್ತಿರುವರು. ಪತ್ರಿಕೆಗಳು, ರೇಡಿಯೋ, ಜುಮ್‌ಅ ಖುತ್‌ಬಾ, ಸೆಮಿನಾರ್‌ಗಳು, ಸಮ್ಮೇಳನಗಳು ಇತ್ಯಾದಿಗಳ ಮೂಲಕ ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿರುವರು. ಇದು ಮುಸ್ಲಿಮರನ್ನು ಎಚ್ಚರಿಸುವಲ್ಲಿ ಮತ್ತು ಬಿದ್‌ಅತ್ ಅನ್ನು ನಿರ್ಮೂಲನ ಮಾಡುವಲ್ಲಿ ಮತ್ತು ಬಿದ್‌ಅತೀಗಳನ್ನು ನೇರಮಾರ್ಗಕ್ಕೆ ತರುವಲ್ಲಿ ಬಹಳ ಪರಿಣಾಮಕಾರಿಯಾಗಿದೆ.

## ಅಧ್ಯಾಯ–4

## ಇಂದಿನ ಕಾಲದ ಕೆಲವು ಹೊಸ ಬಿದ್‌ಅತ್‌ಗಳ ನಮೂನೆಗಳು

### 1. ಮಿಲಾದುನ್ನಬಿಯ ಉತ್ಸವಗಳು

### 2. ಹಲವು ಚಿಹ್ನೆಗಳು, ಮುಕಾಮ್‌ಗಳು, ಮೃತರೊಂದಿಗೆ ತಬರ್ರುಕ್

### 3. ಆರಾಧನೆಗಳು ಮತ್ತು ಸಾಮೀಪ್ಯದ ರಂಗದಲ್ಲಿ ಬಿದ್‌ಅತ್‌ಗಳು

ಕೆಲವು ಕಾರಣಗಳಿಂದಾಗಿ ಆಧುನಿಕ ಬಿದ್‌ಅತ್‌ಗಳು ಸಾಕಷ್ಟು ಹೆಚ್ಚಾಗಿವೆ. ಅಂತಹ ಕಾರಣಗಳಲ್ಲಿ ಜಾಹಿಲಿಯ್ಯತ್ ಅಥವಾ ಅಜ್ಞಾನವು ಸೇರಿದೆ. ಮೊದಲ ಶತಮಾನ ಮತ್ತು ಉಳಿದ ಶತಮಾನಗಳ ನಡುವಿನ ಅಂತರ, ನಂತರ ಬಿದ್‌ಅತ್‌ನೆಡೆಗೆ ಮತ್ತು ಭಿನ್ನತೆಯೆಡೆಗೆ ಕರೆಯುವರ ಹೆಚ್ಚಳ, ನಂತರ ಮುಸ್ಲಿಮೇತರ ಸಮೂಹಗಳ ರೀತಿ ರಿವಾಜು ಶೈಲಿಗಳ ತಕ್‌ಲೀದ್(ಅಂಧಾನುಕರಣೆ) ಕೂಡಾ ಒಂದು ದೊಡ್ಡ ಕಾರಣವಾಗಿದೆ. ಪ್ರವಾದಿ (ﷺ) ಸತ್ಯ ನುಡಿದಿದ್ದರು.

«لَتَتَّبِعُنَّ سُنَنَ مَنْ كَانَ قَبْلَكُمْ»

**"ನೀವು ಖಂಡಿತವಾಗಿಯೂ ನಿಮ್ಮ ಹಿಂದಿನ ಸಮೂಹಗಳನ್ನು ಹಿಂಬಾಲಿಸುವಿರಿ"** (397)

1. ರಬೀಉಲ್ ಅವ್ವಲ್ ತಿಂಗಳಲ್ಲಿ ಮೀಲಾದುನ್ನಬೀ ಆಚರಣೆ

ಮಿಲಾದುನ್ನಬೀ ಆಚರಣೆಯು ಕ್ರೈಸ್ತರ ಅಂಧಾನುಕರಣೆಯಾಗಿದೆ. ಅವರು ಈಸಾ (عليه السلام)ರ ಜನ್ಮದಿನವನ್ನು ಆಚರಿಸುತ್ತಾರೆ. ಇದು ಇಸ್ಲಾಮ್‌ನಲ್ಲಿಲ್ಲ. ಆದರೆ ಹೆಚ್ಚಿನ ಜಾಹಿಲ್ ಮುಸ್ಲಿಮರು ಮತ್ತು ದಾರಿ ತಪ್ಪಿದ ಉಲೆಮಾಗಳು ಪ್ರತೀ ವರ್ಷ ರಬೀಉಲ್ ಅವ್ವಲ್ ತಿಂಗಳಲ್ಲಿ ಮಿಲಾದುನ್ನಬಿಯ ಹೆಸರಿನಲ್ಲಿ ಉತ್ಸವ ಆಚರಿಸುತ್ತಾರೆ. ಕೆಲವು

**397** ಅತ್ತಿರ್ಮಿದಿ

ಜನರು ಇಂತಹ ಆಚರಣೆಗಳನ್ನು ಮಸೀದಿಯಲೇ ಆಚರಿಸುತ್ತಾರೆ. ಕೆಲವರು ತಮ್ಮ ಮನೆಗಳಲ್ಲಿ, ಮೈದಾನಗಳಲ್ಲಿ ಬಹಳ ವಿಜೃಂಭಣೆಯಿಂದ ಆಚರಿಸುತ್ತಾರೆ. ಸಾವಿರಾರು ಮೂಢ ಜನರು ಅದರಲ್ಲಿ ಭಾಗವಹಿಸುತ್ತಾರೆ. ಇವರೆಲ್ಲಾ ಕ್ರೈಸ್ತರ ಜನ್ಮ ದಿನವನ್ನು ಹೇಗೆ ಆಚರಿಸುತ್ತಾರೋ ಅದೇ ರೀತಿಯಲ್ಲಿ ಮುಸ್ಲಿಮರೂ ರಸೂಲುಲ್ಲಾಹಿ(ﷺ)ರ ಜನ್ಮ ದಿನವನ್ನು ಆಚರಿಸುತ್ತಾರೆ ಮತ್ತು ಮೀಲಾದ್‌ನ ಪ್ರತಿಯೊಂದರಲ್ಲಿಯೂ ಅದರ ತಕ್‌ಲೀದ್ ಮಾಡುತ್ತಾರೆ. ಇಂತಹ ಉತ್ಸವ, ಮೆರವಣಿಗೆ, ಬಿದ್‌ಅತ್ ಕುರಾಫಾತ್‌ಗಳು ಮತ್ತು ಕ್ರೈಸ್ತರ ತಕ್‌ಲೀದ್‌ನ ಜೊತೆಗೆ ಹಲವು ರೀತಿಯ ಶಿರ್ಕ್‌ಗಳು ಮಾಡಲ್ಪಡುತ್ತವೆ ಮತ್ತು ನಿಷಿದ್ಧ ವಿಷಯಗಳು ಜರಗುತ್ತವೆ. ಮಾಲೆಗಳು ಕವಿತೆಗಳಲ್ಲಿ ರಸೂಲುಲ್ಲಾಹಿ(ﷺ)ರ ಕುರಿತು ಮಿತಿಮೀರುವಿಕೆ ಮಾಡಲಾಗುತ್ತದೆ. ನಂತರ ಪರಮ ಪಾವನನಾದ ಅಲ್ಲಾಹುವಿನ ಬದಲಿಗೆ ಮುಹ್ಮದ್(ﷺ)ರನ್ನು ಎಲ್ಲವನ್ನೂ ಅರಿಯುವವರು, ನೋಡುವವರು ಎಂದು ತಿಳಿದು ಅವರೊಂದಿಗೇ ಪ್ರಾರ್ಥಿಸಲಾಗುತ್ತದೆ. ತನ್ನ ಹೊಗಳುವಿಕೆಯಲ್ಲಿ ಮಿತಿಮೀರುವುದನ್ನು ಪ್ರವಾದಿ(ﷺ) ತಡೆದಿರುವರು.

«لَا تُطْرُونِي كَمَا أَطْرَتِ النَّصَارَى عِيسَى بْنَ مَرْيَمَ»

**“ಅವರು(ﷺ) ಹೀಗೆಂದಿರುವರು. ಈಸಾ ಬಿನ್ ಮರ್ಯಮರನ್ನು ಕ್ರೈಸ್ತರು ಅತಿಶಯದಿಂದ ಹೊಗಳಿದ ಹಾಗೆ ನೀವು ನನ್ನನ್ನು ಪ್ರಶಂಸಿಸಬೇಡಿರಿ.”** [398]

ಇಂತಹ ಸಭೆ ಸಮಾರಂಭಗಳಲ್ಲಿ ಸ್ತ್ರೀ ಪುರುಷರ ಮುಕ್ತ ಒಡನಾಟ, ದುಷ್ಕೃತ್ಯಗಳ ಹಾಗೂ ಅಮಲು ಪದಾರ್ಥಗಳಿರುವುದು ಸಾಮಾನ್ಯವಾಗಿರುತ್ತದೆ.

ಹದೀಸ್‌ನಲ್ಲಿ ಬಂದ ಇತ್‌ರಾಅ ಶಬ್ದದ ಅರ್ಥವು ಪ್ರಶಂಸೆಯಲ್ಲಿ ಮಿತಿಮೀರುವುದು ಎಂದಾಗಿದೆ. ಮಿಲಾದುನ್ನಬಿಯ ಉತ್ಸವಗಳಲ್ಲಿ ಜನರು ಸ್ವತಹ ಪ್ರವಾದಿ ಮುಹಮ್ಮದ್ (ﷺ) ಪ್ರತ್ಯಕ್ಷರಾಗುವರು ಎಂಬ ನಂಬಿಕೆ ಹೊಂದಿರುವರು, ಇದಲ್ಲದೆ ಇನ್ನೂ ಅನೇಕ ಕೆಡುಕುಗಳು ಇದರಲ್ಲಿ ಕಾಣಸಿಗುತ್ತದೆ. ಜನರು ಒಟ್ಟು ಸೇರಿ ಹಾಡುಗಳನ್ನು ಹಾಡುತ್ತಾರೆ. ಹಾಡು ವಾದ್ಯಗಳು ಇರುತ್ತದೆ ಸೂಫಿಯರ ಸ್ಮರಣೆ ಮುಂತಾದವುಗಳನ್ನು ಓದಲಾಗುತ್ತದೆ. ಗಂಡು ಹೆಣ್ಣುಗಳು ಬೆರೆಯುತ್ತಾರೆ. ಇದರಿಂದ ಫಿತ್ನ ಫಸಾದ್ ಉಂಟಾಗುತ್ತದೆ. ಜನರು ಅಶ್ಲೀಲತೆಯಲ್ಲಿ ಬೀಳುವ ಎಲ್ಲಾ ಅಪಾಯಗಳೂ ಇರುತ್ತದೆ. ಒಂದು ವೇಳೆ ಇಂತಹ ಸಮ್ಮೇಳನಗಳು ಕೆಡುಕುಗಳಿಂದ ಮುಕ್ತವಾಗಿದ್ದರೂ ಕೂಡಾ ಜನರು ಇದಕ್ಕಾಗಿ ಸೇರುವುದು ಸಾಮೂಹಿಕವಾಗಿ ಆಹಾರ, ಪಾನೀಯ ಸೇವನೆ,ಸಂತೋಷ ವಾಚರಿಸುವುದು ಬಿದ್‌ಅತ್ ಆಗಿದೆ ಮತ್ತು ಧರ್ಮದಲ್ಲಿ ಹೊಸತನ್ನು ಸೃಷ್ಟಿಸುವುದಾಗಿದೆ. “ಪ್ರತಿಯೊಂದು ಹೊಸದಾಗಿ ಸೃಷ್ಟಿಸಲ್ಪಟ್ಟವುಗಳು ನವೀನಾಚಾರಗಳಾಗಿವೆ. ಮತ್ತು ಎಲ್ಲಾ ನವೀನಾಚಾರಗಳು ದಾರಿ ತಪ್ಪುವಿಕೆಯಾಗಿದೆ. ಸ್ವಲ್ಪ ಸ್ವಲ್ಪವಾಗಿ ಇಂತಹ ಸಮ್ಮೇಳನಗಳಿಗೆ ಕೆಡುಕುಗಳು ಬರುವುದರಲ್ಲಿ

---

**398** ಬುಖಾರಿ, ಮುಸ್ಲಿಮ್

ಸಂಶಯವಿಲ್ಲ. ಇದು ಎಲ್ಲಾ ಕಡೆಯಲ್ಲೂ ಆಗುತ್ತದೆ.

ಮಿಲಾದುನ್ನಬೀ ಆಚರಿಸುವುದು ನನ್ನ ಪ್ರಕಾರ ಬಿದ್‌ಅತ್ ಆಗಿದೆ, ಕುರ್‌ಆನ್‌ನಲ್ಲಾಗಲೀ, ಸುನ್ನತ್‌ನಲ್ಲಾಗಲೀ, ಸಲಫುಸ್ಸಾಲಿಹೀನ್ ಮತ್ತು ಉತ್ತಮ ಸಮುದಾಯಗಳಲ್ಲಿ ಇದಕ್ಕೆ ಯಾವುದೇ ಆಧಾರವಿಲ್ಲ. ಇದು ನಾಲ್ಕನೇ ಶತಮಾನದ ಅಂತ್ಯದಲ್ಲಿ ಹುಟ್ಟಿಕೊಂಡದ್ದು. ಫಾತಿಮೀ ಶಿಯಾಗಳು ಇದನ್ನು ಹುಟ್ಟು ಹಾಕಿದರು. ಇಮಾಮ್ ಅಬೂ ಹಫ್ಸ್ ತಾಜುದ್ದೀನ್ ಅಲ್‌ಫಾಕ್‌ಹಾನಿ(ﷺ) ಹೇಳುತ್ತಾರೆ. ಮುಬಾರಕೀಗಳ ಒಂದು ಸಮೂಹವು ನನ್ನ ಬಳಿ ಆಗಾಗ ಬಂದು ರಬೀವುಲ್ ಅವ್ವಲ್ ತಿಂಗಳಲ್ಲಿ ಮಿಲಾದುನ್ನಬೀ ಆಚರಿಸುವುದಕ್ಕೆ ಧರ್ಮದಲ್ಲಿ ಯಾವುದೇ ಆಧಾರವಿದೆಯೇ ಎಂದು ಕೇಳುತ್ತಿದ್ದರು. ಪ್ರಶ್ನೆಯನ್ನು ಸ್ಪಷ್ಟವಾಗಿ ಕೇಳಲಾಗಿದೆ. ಆದ್ದರಿಂದ ಸ್ಪಷ್ಟತೆಯೊಂದಿಗೆ ನನ್ನ ಉತ್ತರವೇನೆಂದರೆ, ಖುರ್‌ಆನ್ ಸುನ್ನತ್‌ನಲ್ಲಿ ಇದಕ್ಕೆ ಯಾವುದೇ ಆಧಾರವಿಲ್ಲ. ನಮಗೆ ಮಾದರಿಯಾಗಬಲ್ಲಂತಹ ಮತ್ತು ಆಧಾರಗಳನ್ನು ಭದ್ರವಾಗಿ ಹಿಡಿದಿಟ್ಟುಕೊಳ್ಳುವಂತಹ ಯಾವುದೇ ಉಲೆಮಾಗಳಿಂದ ಇದು ನಿರ್ವಹಿಸಲ್ಪಟ್ಟಿಲ್ಲ. ನನ್ನ ಬಳಿ ಇದೊಂದು ಬಿದ್‌ಅತ್ ಆಗಿದೆ. ಕೆಲವು ನಿಷ್ಪ್ರಯೋಜಕ ಹಾಗೂ ಮೈಗಳ್ಳ ಜನರು ಮಾಡಿರುವಂತಹದು ಇದು. ಇನ್ನು ಕೆಲವು ತಿಂಡಿಪೋತರು ತಿನ್ನಲು ಕುಡಿಯಲು ಇದನ್ನು ಒಂದು ಅಡ್ಡ ಮಾರ್ಗವಾಗಿ ಮಾಡಿದ್ದಾರೆ.

ಶೇಖುಲ್ ಇಸ್ಲಾಮ್ ಇಬ್ನ್ ತೈಮಿಯ್ಯ(ﷺ) ಬರೆಯುತ್ತಾರೆ, "ಇಂದು ಮಿಲಾದುನ್ನಬೀ ಮಾಡುವವರು ಒಂದೋ ಕ್ರೈಸ್ತರ ತಕ್‌ಲೀದ್‌ನಲ್ಲಿ ಮಾಡುತ್ತಾರೆ ಅಥವಾ ಅವರೊಂದಿಗೆ ಪೈಪೋಟಿ ನಡೆಸುತ್ತಾರೆ. ಕಾರಣ ಕ್ರೈಸ್ತರು ಕೂಡಾ ಈಸಾ(عليه السلام)ರ ಜನ್ಮ ದಿನವನ್ನು ಆಚರಿಸುತ್ತಾರೆ. ಇನ್ನೊಂದು ಕಾರಣವೆಂದರೆ ಈ ಜನರು ರಸೂಲುಲ್ಲಾಹ್(ﷺ)ರ ಮೇಲೆ ಪ್ರೀತಿ ಅಥವಾ ಗೌರವದಲ್ಲಿ ಮಿಲಾದುನ್ನಬಿ ಮಾಡುತ್ತಾರೆ. ಪ್ರವಾದಿ(ﷺ)ರವರ ಜನ್ಮ ದಿನದ ತಾರೀಕಿನ ಬಗ್ಗೆ ಇತಿಹಾಸಕಾರರು, ಸಂಶೋಧಕರ ನಡುವೆ ಭಿನ್ನಾಭಿಪ್ರಾಯವಿದೆ. ಇಂತಹ ಮೀಲಾದ್‌ಅನ್ನು ನಮ್ಮ ಸಲಫುಸ್ಸಾಲಿಹ್‌ಗಳು ಎಂದೂ ಆಚರಿಸಿಲ್ಲ. ಇದೊಂದು ವೇಳೆ ಒಳಿತಿನ ಕಾರ್ಯವಾಗಿದ್ದರೆ ಆ ಸಜ್ಜನರಾದ ಮುಂಗಾಮಿಗಳು ಖಂಡಿತವಾಗಿಯೂ ಮಾಡುತ್ತಿದ್ದರು. ಏಕೆಂದರೆ ಅವರು ನಮಗಿಂತ ಹೆಚ್ಚು ರಸೂಲುಲ್ಲಾಹಿ(ﷺ)ರ ಮೇಲೆ ಗೌರವವುಳ್ಳವರೂ, ಪ್ರವಾದಿ(ﷺ)ರನ್ನು ನಮಗಿಂತ ಹೆಚ್ಚು ಪ್ರೀತಿಸುವವರು ಆಗಿರುವರು. ಅವರಂತೂ ಪ್ರವಾದಿ(ﷺ)ರ ಅನುಸರಣೆ ಮತ್ತು ಒಂದು ಸುನ್ನತ್‌ಅನ್ನು ಜೀವಂತಗೊಳಿಸಲು ಏನು ಬೇಕಾದರೂ ಮಾಡಲು ತಯಾರಿದ್ದರು. ಅವರು ನಮಗಿಂತ ಹೆಚ್ಚು ಸತ್ಕರ್ಮದ ಆಕಾಂಕ್ಷೆಯುಳ್ಳವರಾಗಿದ್ದರು. ಕಾರಣ ಪ್ರವಾದಿ(ﷺ)ರೊಂದಿಗೆ ಪ್ರೀತಿ ಗೌರವದ ಮೂಲಕ ಅವರು ಪ್ರವಾದಿ(ﷺ)ರ ಅನುಸರಣೆ, ಇತ್ತಿಬಾಅ, ಅವರ(ﷺ) ಸುನ್ನತ್‌ಅನ್ನು ಜೀವಂತಗೊಳಿಸುವುದು ಇದನ್ನೆಲ್ಲಾ ಇಸ್ಲಾಮ್ ಧರ್ಮದ ಪ್ರಕಾಶ ಮತ್ತು ಅವರನ್ನು ಒಳ್ಳೆಯ ರೀತಿಯಲ್ಲಿ ಅನುಸರಿಸಿದ ಸತ್ಯಸಂಧರದ್ದಾಗಿತ್ತು.

ಈ ಬಿದ್‌ಅತ್‌ನ ನಿರಾಕರಣೆಯಲ್ಲಿ ಹಿಂದೆಯೂ ಪ್ರಸ್ತುತ ಕಾಲದಲ್ಲೂ ವಿವಿಧ

ಗ್ರಂಥಗಳು ರಚಿಸಲ್ಪಟ್ಟಿವೆ. ಈ ಮಿಲಾದುನ್ನಬೀ ಆಚರಣೆಯು ಒಂದು ಬಿದ್‌ಅತ್ ಮಾತ್ರವಲ್ಲ. ಅದು ಇತರ ಔಲಿಯಾಗಳ ಜನ್ಮದಿನವನ್ನು ಆಚರಿಸುವುದಕ್ಕೆ ಬಾಗಿಲನ್ನು ತೆರೆಯುತ್ತದೆ. ಇದರಿಂದಾಗಿ ಕೆಡುಕು ಪಿತೂರಿಗಳ ವಿವಿಧ ಬಾಗಿಲುಗಳು ತೆರೆಯಲ್ಪಡುವವು.

ಅವಶೇಷಗಳು :

2. ಕೆಲವು ಸ್ಥಳ, ಮತ್ತು ಜೀವಂತ ವ್ಯಕ್ತಿಗಳ ಮತ್ತು ಮೃತ ವ್ಯಕ್ತಿಗಳ ತಬರ್ರುಕ್‌ಅನ್ನು ಪಡೆಯುವುದು:

ಸೃಷ್ಟಿಗಳಿಂದ ಬರ್ಕತ್ ಪಡೆಯುವುದೂ ಒಂದು ಬಿದ್‌ಅತ್ ಆಗಿದೆ. ಇದು ಈ ಕಾಲದಲ್ಲಿ ಬಹಳ ವಿಪುಲವಾಗಿದೆ. ಇದು ವಿಗ್ರಹಾರಾಧನೆಯ ಒಂದು ರೂಪವಾಗಿದೆ. ಇದೊಂದು ಹೊಟ್ಟೆ ಹೊರೆಯುವವರ ಜಾಲವಾಗಿದೆ. ಇದರಲ್ಲಿ ಇವರು ಅಮಾಯಕ ಜನರನ್ನು ಸಿಲುಕಿಸಿ ತಮ್ಮ ಹೊಟ್ಟೆ ಹೊರೆಯುತ್ತಾರೆ.

'ತಬರ್ರುಕ್' ಶಬ್ಧದ ಅರ್ಥವು ಬರ್ಕತ್‌ನ ಆಕಾಂಕ್ಷೆ ಅಥವಾ ಅದರಲ್ಲಿ ಹೆಚ್ಚಳದ ಬಯಕೆಯನ್ನು ಅದರ ನೈಜ ಒಡೆಯನಲ್ಲಿ ಮತ್ತು ಅದರ ಸಾಮರ್ಥ್ಯವುಳ್ಳವನಲ್ಲಿ ಮಾತ್ರ ಬೇಡಬಹುದು. ಅದು ಅಲ್ಲಾಹನ ಹೊರತು ಇನ್ನಾರಾಗಲು ಸಾಧ್ಯ? ಅವನೇ ಬರ್ಕತ್‌ಅನ್ನು ನೀಡುವವನು. ಅದನ್ನು ಸ್ಥಿರವಾಗಿ ನಿಲ್ಲಿಸುವವನು. ಇನ್ನು ಸೃಷ್ಟಿಗಳಾದರೆ ಬರ್ಕತ್ ನೀಡಲು ಅಥವಾ ಅದನ್ನು ಸೃಷ್ಟಿಸಲು ಮತ್ತು ಜೀವಂತ ಅಥವಾ ಮೃತ ವ್ಯಕ್ತಿಗಳ ಬರ್ಕತ್‌ಅನ್ನು ಪಡೆಯುವುದು ಯಾವುದೇ ಸಮಯದಲ್ಲೂ ಸಮ್ಮತವಲ್ಲ. ಒಬ್ಬನು ಯಾವುದಾದರೂ ವಸ್ತು ಬರ್ಕತ್‌ಅನ್ನು ನೀಡುತ್ತದೆ ಎಂದು ವಿಶ್ವಾಸ ಹೊಂದಿದ್ದರೆ ಅದು ಶಿರ್ಕ್‌ನೆಡೆಗೆ ಕೊಂಡೊಯ್ಯುವ ಮಾರ್ಗವಾಗಿದೆ ಮತ್ತು ಒಬ್ಬನು ಯಾವುದಾದರೂ ವಸ್ತುವಿನ ಝಿಯಾರತ್‌ನಿಂದ ಅಥವಾ ಯಾರನ್ನಾದರೂ ಸ್ಪರ್ಶಿಸುವುದರಿಂದ ಅಥವಾ ಯಾರಿಗಾದರೂ ಕೈ ತಾಗಿಸುವುದರಿಂದ ಅಲ್ಲಾಹುವಿನ ಸಾಮಿಪ್ಯವು ದೊರಕುತ್ತದೆ ಎಂದು ವಿಶ್ವಾಸವಿಟ್ಟರೆ ಅದೂ ಕೂಡಾ ಶಿರ್ಕ್‌ನ ಕಡೆಗಿರುವ ಒಂದು ಬಾಗಿಲು ಆಗಿದೆ. ಆದರೆ ಸಹಾಬಿಗಳು ಪ್ರವಾದಿ(ﷺ)ರವರ ಉಗುಳನ್ನು ಮತ್ತು ಅವರ ಪಾವನ ದೇಹದಿಂದ ಹೊರಬರುವ ಇತರ ವಸ್ತುಗಳಿಂದ ಬರ್ಕತ್ ಪಡೆಯುತ್ತಿದ್ದರು. ಇದು ಪ್ರವಾದಿ(ﷺ)ರ ವಿಶೇಷತೆಯಾಗಿತ್ತು. ಅದೂ ಕೂಡಾ ಪ್ರತ್ಯೇಕವಾಗಿ ಪ್ರವಾದಿ(ﷺ) ಜೀವಂತವಾಗಿರುವ ಸಮಯದಲ್ಲಿ ಮಾತ್ರ ಆಗಿತ್ತು. ಏಕೆಂದರೆ ಪ್ರವಾದಿ(ﷺ)ರ ಮರಣಾನಂತರ ಸಹಾಬಿಗಳು ಅವರ ಕೋಣೆ, ಅವರ ರೌದಾ ಇತ್ಯಾದಿಗಳಿಂದ ಎಂದಿಗೂ ಬರ್ಕತ್ ಹುಡುಕಲಿಲ್ಲ ಮತ್ತು ಎಂದಿಗೂ ಯಾರೂ ಬರ್ಕತ್ ಮತ್ತು ಒಳಿತಿನ ಸಂಕಲ್ಪದೊಂದಿಗೆ ಪ್ರವಾದಿ (ﷺ) ನಮಾಝ್ ಮಾಡಿದ ಮತ್ತು ಅವರು ಕುಳಿತಿದ್ದ ಸ್ಥಳಗಳ ಬರ್ಕತ್ ಕೇಳಿರಲಿಲ್ಲ. ಹಾಗಾದರೆ ಔಲಿಯಾಗಳ ಮತ್ತು ಮಹಾತ್ಮರ ಸ್ಥಳಗಳ ಬರ್ಕತ್ ಅನ್ನು ಪಡೆಯುವುದು ಹೇಗೆ ಸಾಧ್ಯವಿದೆ? ಸ್ವತಃ ರಸೂಲುಲ್ಲಾಹಿ(ﷺ)ರ ಕುರುಹುಗಳಿಂದಲೇ ಬರ್ಕತ್ ಪಡೆಯಲು ಸಾಧ್ಯವಿಲ್ಲದಿರುವಾಗ ಉಳಿದವರದು ಹೇಗೆ ಸಾಧ್ಯ? ಇದೇ ರೀತಿ

ರಸೂಲುಲ್ಲಾಹಿ(ﷺ)ರ ಮರಣಾನಂತರ ಯಾವುದೇ ಸಹಾಬಿಯೂ ಬರ್ಕತ್‌ಅನ್ನು ಪಡೆಯಲಿಲ್ಲ. ಯಾವುದೇ ಸಹಾಬಿಯು ಗುಹೆಗೆ ಹೋಗಿ ನಮಾಝ್ ಮಾಡಿದ್ದಾಗಲೀ ಅಥವಾ ಅಲ್ಲಿ ಪ್ರಾರ್ಥಿಸಿದ್ದಾಗಲೀ ಒಮ್ಮೆಯೂ ಮಾಡಿಲ್ಲ. ಅಥವಾ ಅವರು ಮೂಸಾ (عليه السلام)ರೊಂದಿಗೆ ಅಲ್ಲಾಹು ಮಾತನಾಡಿದ ತೂರ್ ಪರ್ವತಕ್ಕೆ ಹೋಗಿ ಅಥವಾ ಬೇರೆ ಯಾವುದೇ ಪ್ರವಾದಿಯ ಹೆಸರಾಂತ ಸ್ಥಳ ಅಥವಾ ಪರ್ವತಗಳ ಗುರುತುಗಳ ಬಳಿ ಹೋಗಿ ಪ್ರಾರ್ಥಿಸಿದ್ದಾಗಲೀ ನಮಾಝ್ ಮಾಡಿದ್ದಾಗಲೀ ಮಾಡಿರಲಿಲ್ಲ. ಇದೇ ರೀತಿ ಮಸ್ಜಿದ್ ನಬವಿಯಲ್ಲಿ ಪ್ರವಾದಿ(ﷺ)ರವರು ಯಾವಾಗಲೂ ನಮಾಝ್ ಮಾಡುತ್ತಿದ್ದ ಸ್ಥಳವನ್ನು ತಾವು ಸ್ಪರ್ಶಿಸಿದ್ದಾಗಲೀ, ಅದನ್ನು ಚುಂಬಿಸುವುದಾಗಲೀ ಅಥವಾ ಪವಿತ್ರ ಮಕ್ಕಾದಲ್ಲಿ ಪ್ರವಾದಿ(ﷺ) ನಮಾಝ್ ಮಾಡಿದ ಸ್ಥಳದ ಬಗ್ಗೆಯಾಗಲೀ ಈ ರೀತಿ ಸಜ್ಜನ ಮುಂಗಾಮಿಗಳು ಹೇಳಿರುವುದು ವರದಿಯಾಗಿಲ್ಲ. ಪ್ರವಾದಿ(ﷺ) ಯಾವ ಸ್ಥಳದಲ್ಲಿ ನಮಾಝ್ ನಿರ್ವಹಿಸಿದರೋ ಆ ಸ್ಥಳದ ಬಗ್ಗೆ ಶರೀಅತ್‌ನಲ್ಲಿ ಬರ್ಕತ್‌ನ ಸ್ಥಳವೆಂದೇನೂ ಕರಾರು ಮಾಡಿಲ್ಲ ಅಥವಾ ಅದನ್ನು ಮುಟ್ಟುವುದಾದಕ್ಕಾಗಲೀ ಅದರಿಂದ ಬರ್ಕತ್ ಪಡೆಯುವುದಕ್ಕಾಗಲೀ ಅವಕಾಶ ಕೊಡಲಿಲ್ಲ ಎಂದಾದರೆ ಬೇರೆಯವರ ಬಗ್ಗೆ ಹೇಗೆ ಹೇಳಲು ಸಾಧ್ಯ? ಎಂಬುದು ಅತ್ಯಂತ ಸ್ಪಷ್ಟವಾಗಿದೆ. ಇಂತಿಂಥವರು ಇಂತಿಂಥ ಸ್ಥಳದಲ್ಲಿ ನಮಾಝ್ ಮಾಡಿದ್ದರು, ಅಂದರೆ ಇವರು ಖೈಲೂಲತ್ ಮಲಗಿದ್ದರು. ಮಧ್ಯಾಹ್ನದ ನಂತರ ಕಿರುನಿದ್ದೆ ಮಾಡಿದ್ದರು. ಮಾನ್ಯರು ಇಲ್ಲಿ ಕುಳಿತು ದುಆ ಮಾಡಿದ್ದರು, ಮಾನ್ಯರು ಇಲ್ಲಿ ವಝೂ ಮಾಡಿದರು ಇತ್ಯಾದಿ. ಆದ್ದರಿಂದ ಈ ಜಾಗಗಳಿಗೆ ಚುಂಬಿಸುವುದು ಬರ್ಕತ್ ಎಂದು ನಂಬುವುದು. ಇಂತಹ ಕಾರ್ಯಗಳು ಪ್ರವಾದಿ(ﷺ)ರ ಶರೀಅತ್‌ನಲ್ಲಿಲ್ಲವೆಂದು ಎಲ್ಲಾ ಧಾರ್ಮಿಕ ವಿದ್ವಾಂಸರು ಮತ್ತು ಉಮ್ಮತ್‌ನ ಸಜ್ಜನರಿಗೆ ತಿಳಿದಿದೆ.

3 . ಆರಾಧನೆಗಳು ಮತ್ತು ಅಲ್ಲಾಹುವಿನ ಸಾಮಿಪ್ಯದ ರಂಗದಲ್ಲಿ ಬಿದ್‌ಅತ್‌ಗಳು

ಇಂದಿನ ಕಾಲದಲ್ಲಿ ಆರಾಧನೆಗಳಿಗೆ ಸಂಬಂಧಿಸಿ ಜನರು ಹುಟ್ಟು ಹಾಕಿರುವ ನವೀನಾಚಾರಗಳು ಕಡಿಮೆಯೇನಿಲ್ಲ. ಎಲ್ಲಾ ಇಬಾದತ್‌ಗಳೂ ಅತ್ತೌಖೀಫ್ ಆಗಿದೆ. ಇದರಲ್ಲಿ ಹೆಚ್ಚು ಕಡಿಮೆ ಮಾಡುವುದು, ರದ್ದು ಮಾಡುವುದು, ಬದಲಾಯಿಸುವುದು ಇವುಗಳ ಬಗ್ಗೆ ಆಲೋಚನೆ ಅವಕಾಶವೇ ಇಲ್ಲ. ಯಾವುದಾದರೊಂದು ಆಧಾರಗಳ ಮೂಲಕವೇ ಇದರ ಕುರಿತು ಏನಾದರೂ ಹೇಳಬಹುದು. ಆಧಾರವಿಲ್ಲದೇ ಮಾಡುವುದು ಬಿದ್‌ಅತ್ ಆಗಿದೆ. ಪ್ರವಾದಿ(ﷺ) ಹೇಳಿದ್ದಾರೆ,

«مَنْ عَمِلَ عَمَلًا لَيْسَ عَلَيْهِ أَمْرُنَا فَهُوَ رَدٌّ»

**“ನಮ್ಮ ಶರೀಅತ್‌ನಲ್ಲಿ ಆಧಾರವಿಲ್ಲದ ಯಾವುದಾದರೂ ಕಾರ್ಯವನ್ನೂ ಒಬ್ಬ ಕೈಗೊಂಡರೆ ಅದು ತಿರಸ್ಕೃತವಾದುದಾಗಿದೆ.”** (399)

399 ಮುಸ್ಲಿಮ್

ಇಬಾದತ್‌ನಲ್ಲಿನ ಕೆಲವು ಬಿದ್‌ಅತ್‌ಗಳು

ಇವು ಸಾಕಷ್ಟಿವೆ. ಅವುಗಳಲ್ಲಿ

ನಮಾಝ್‌ನ ನಿಯ್ಯತ್‌ಅನ್ನು ಜೋರಾಗಿ ಓದುವುದು: ಅಂದರೆ ನಾನು ಅಲ್ಲಾಹುಗಾಗಿ ನಮಾಝ್ ಮಾಡುವ ಸಂಕಲ್ಪ ಮಾಡುತ್ತೇನೆ ಇತ್ಯಾದಿ. ಇದು ರಸೂಲುಲ್ಲಾಹಿ(ﷺ)ರ ಸುನ್ನತ್‌ನಲ್ಲಿ ಸಾಬೀತಾಗಿಲ್ಲವಾದ್ದರಿಂದ ಇದು ಬಿದ್‌ಅತ್ ಆಗಿದೆ. ಅಲ್ಲಾಹು ಹೇಳುತ್ತಾನೆ.

﴿ قُلْ أَتُعَلِّمُونَ ٱللَّهَ بِدِينِكُمْ وَٱللَّهُ يَعْلَمُ مَا فِى ٱلسَّمَٰوَٰتِ وَمَا فِى ٱلْأَرْضِ ۚ وَٱللَّهُ بِكُلِّ شَىْءٍ عَلِيمٌ ﴿١٦﴾ ﴾

**"(ಸಂದೇಶವಾಹಕರೇ) ಅವರೊಂದಿಗೆ ಹೇಳಿರಿ, ನೀವು ಅಲ್ಲಾಹನಿಗೆ ನಿಮ್ಮ ಧರ್ಮವನ್ನು ತಿಳಿಸುತ್ತಿದ್ದೀರಾ ಮತ್ತು ಅಲ್ಲಾಹನಾದರೋ ಆಕಾಶಗಳು ಮತ್ತು ಭೂಮಿಯಲ್ಲಿರುವುದನ್ನು ಅರಿತಿರುತ್ತಾನೆ. ಮತ್ತು ಅಲ್ಲಾಹು ಸಕಲ ವಿಷಯಗಳ ಜ್ಞಾನವುಳ್ಳವನಾಗಿರುತ್ತಾನೆ."** [400]

ನಿಯ್ಯತ್‌ನ ಜಾಗವು ಹೃದಯವಾಗಿದೆ. ನಿಯ್ಯತ್ ಮಾಡುವುದು ಮಾನಸಿಕವಾದ ಕ್ರಿಯೆಯಾಗಿದೆ. ನಾಲಗೆಗೆ ಇದಕ್ಕೆ ಸಂಬಂಧವಿಲ್ಲ.

ಇನ್ನೊಂದು ಬಿದ್‌ಅತ್ ಎಂದರೆ ನಮಾಝ್‌ನ ಬಳಿಕ ಸಾಮೂಹಿಕ ಝಿಕ್ರ್ : ಸುನ್ನತ್‌ನಲ್ಲಿ ಹೇಳಲಾದ ಝಿಕ್ರ್‌ಗಳನ್ನು ಪ್ರತಿಯೊಬ್ಬ ವ್ಯಕ್ತಿಯು ಪ್ರತ್ಯೇಕವಾಗಿ ಹೇಳುವುದು ಸುನ್ನತ್ ಆಗಿದೆ

ಇನ್ನೊಂದು ಬಿದ್‌ಅತ್ ಪ್ರತ್ಯೇಕ ಸಮಯಗಳಲ್ಲಿ ಫಾತಿಹಾ ಓದುವುದು, ವಿಶೇಷವಾಗಿ ಮೃತರಿಗಾಗಿ ಪ್ರಾರ್ಥನೆಯ ಬಳಿಕ ಇದೇ ರೀತಿ ಮೃತರಿಗಾಗಿ ಸಂತಾಪ ಸೂಚಕ ಸಭೆ, ಸಿಹಿ ತಿಂಡಿ , ಪಾಯಸ ಹಂಚುವುದು, ಕುರಾನ್ ಓದುವವರನ್ನು ಹಣ ಕೊಟ್ಟು ಕರೆಸುವುದು ಇತ್ಯಾದಿ, ಇದರಿಂದ ಮೃತರಿಗೆ ಪ್ರಯೋಜನವಾಗುತ್ತದೆ ಎಂಬ ಭಾವನೆಯಿಂದ ಮಾಡಲಾಗುತ್ತದೆ. ಇವೆಲ್ಲವೂ ನವೀನಾಚಾರಗಳಾಗಿವೆ. ಇವುಗಳಿಗೆ ಶರೀಅತ್‌ನಲ್ಲಾಗಲೀ, ಸುನ್ನತ್‌ನಲ್ಲಾಗಲೀ ಯಾವುದೇ ಆಧಾರವಿಲ್ಲ ಮತ್ತು ಅಲ್ಲಾಹು ಇವುಗಳಿಗೆ ಯಾವುದೇ ಆಧಾರ ಪ್ರಮಾಣವನ್ನು ತಿಳಿಸಿಲ್ಲ.

ಐತಿಹಾಸಿಕ ದಿನಗಳಲ್ಲಿ ಸಂಭ್ರಮಾಚರಣೆ

ಶಬೇ ಮಿಅರಾಜ್, ಪ್ರವಾದಿ ಮುಹಮ್ಮದ್(ﷺ)ರ ಹಿಜ್ರಾ ದಿನ ಯಾ ಇಂತಹ ಇತರ ದಿನಗಳಲ್ಲಿ ಯಾವುದೇ ರೀತಿಯ ಸಂಭ್ರಮ, ಮೆರವಣಿಗೆಗಳನ್ನು ಆಚರಿಸುವುದು ಏರ್ಪಡಿಸುವುದು ಆಗಿದೆ. ಶರೀಅತ್‌ನಲ್ಲಿ ಇದಕ್ಕೆ ಯಾವುದೇ ಆಧಾರವಿಲ್ಲ.

ರಜಬ್ ತಿಂಗಳ ಆಚರಣೆಗಳೂ ಇದರಲ್ಲಿ ಸೇರುತ್ತದೆ. ರಜಬ್ ತಿಂಗಳ ಉಮ್ರಾ, ಅದರಲ್ಲಿ ನಫಿಲ್ ನಮಾಝ್ ಮತ್ತು ಐಚ್ಛಿಕ ಉಪವಾಸಗಳನ್ನು ವಿಶೇಷವಾಗಿ

400 ಕುರ್‌ಆನ್ 49:16

ಹಿಡಿಯುವುದು ಇತ್ಯಾದಿಗಳು. ರಜಬ್ ತಿಂಗಳಲ್ಲಿ ಯಾವುದೇ ವಿಶೇಷತೆ ಇಲ್ಲ .ಉಮ್ರಾಕ್ಕೆ ಸಂಬಂಧಿಸಿ, ವಿಶೇಷ ನಮಾಝ್ ಯಾ ಉಪವಾಸ ಅಥವಾ ಕುರ್ಬಾನಿಗೆ(ಬಲಿದಾನಕ್ಕೆ) ಸಂಬಂಧಿಸಿ ಯಾವುದೇ ವಿಶೇಷತೆ ಇಲ್ಲ.

ಸೂಫೀಗಳ ದಿಕ್ರ್‌ಗಳು

ಇವರ ಎಲ್ಲಾ ಕ್ರಮಗಳು ಸಂಪೂರ್ಣ ಬಿದ್‌ಅತ್‌ಗಳು ನವೀನಾಚಾರಗಳಾಗಿವೆ. ಏಕೆಂದರೆ ಅದರಿಂದ ಶರೀಅತ್‌ನ ದಿಕ್ರ್‌ಗಳು ಮತ್ತು ಅದರ ಕ್ರಮಗಳು ಮತ್ತು ಅದರ ಸಮಯಗಳಿಗೆ ವಿರೋಧ ಉಂಟಾಗುತ್ತದೆ.

ಶಾಬಾನ್ ಹದಿನೈದರ ರಾತ್ರಿಯಲ್ಲಿ ನಮಾಝ್ ಮತ್ತು ಅದರ ಹಗಲಲ್ಲಿ ಉಪವಾಸವನ್ನು ಪ್ರತ್ಯೇಕ ಆಚರಿಸುವುದು.

ಇದಕ್ಕೆ ಸಂಬಂಧಿಸಿ ರಸೂಲುಲ್ಲಾಹಿ (ﷺ)ರಿಂದ ಏನೂ ಸಾಬೀತಾಗಿಲ್ಲ. ಇದೇ ರೀತಿ ಗೋರಿಗಳನ್ನು ಎತ್ತರಿಸುವುದು , ಅವುಗಳ ಮೇಲೆ ಕಟ್ಟಡ ನಿರ್ಮಾಣ, ಅವುಗಳನ್ನು ಮಸೀದಿಯನ್ನಾಗಿ ಮಾಡುವುದು ಅವುಗಳಿಂದ ಬರ್ಕತ್‌ಗಾಗಿ ಅವುಗಳ ಝಿಯಾರತ್ ಮಾಡುವುದು ಮರಣ ಹೊಂದಿದವರ ವಸೀಲದಿಂದ ಅಲ್ಲಾಹುವಿನ ಸಾಮೀಪ್ಯ ಗಳಿಸುವುದು. ಇವುಗಳಲ್ಲದೇ ಇತರ ಶಿರ್ಕ್‌ನ ಕೃತ್ಯಗಳು ಮತ್ತು ಹೆಂಗಸರು ಕಬರ್ ಝಿಯಾರತ್ ಮಾಡುವ ಮಹಿಳೆಯರನ್ನು ಮತ್ತು ಗೋರಿಗಳನ್ನು ಮಸೀದಿಯನ್ನಾಗಿ ಮಾಡುವವರನ್ನು ಮತ್ತು ಅವುಗಳ ಮೇಲೆ ದೀಪಾಲಂಕಾರ ಮಾಡುವವರನ್ನು ಶಪಿಸಿರುವರು.

ಕೊನೆಯ ಮಾತು

ಕೊನೆಯದಾಗಿ ಹೇಳುವುದೇನೆಂದರೆ, ಬಿದ್‌ಅತ್ ಕುಫ್ರ್‌ನ್ನು ಹುಟ್ಟು ಹಾಕುತ್ತದೆ. ಅಲ್ಲಾಹು ಮತ್ತು ಆತನ ಸಂದೇಶವಾಹಕರು ಆದೇಶಿಸಿದ ಧರ್ಮದಲ್ಲಿ ಇದು ಹೆಚ್ಚಳವಾಗಿದೆ. ಬಿದ್‌ಅತ್ ದೊಡ್ಡ ಪಾಪಗಳಿಗಿಂತಲೂ ಕೆಟ್ಟದ್ದು. ಬಿದ್‌ಅತ್‌ನಿಂದ ಶೈತಾನ್ ಎಷ್ಟು ಸಂತೋಷ ಗೊಳ್ಳುತ್ತಾನೆಂದರೆ, ದೊಡ್ಡ ಪಾಪ ಮಾಡಿದಾಗಲೂ ಅವನು ಅಷ್ಟು ಸಂತೋಷಗೊಳ್ಳುವುದಿಲ್ಲ. ಏಕೆಂದರೆ ದೊಡ್ಡ ಪಾಪ ಮಾಡಿದವನು ತನ್ನ ಪಾಪಕ್ಕೆ ಪಶ್ಚಾತ್ತಾಪ ಪಟ್ಟುಕೊಳ್ಳುತ್ತಾನೆ. ಆದರೆ ಬಿದ್‌ಅತ್ ಮಾಡುವವರು ತಾವು ಬಿದ್‌ಅತ್ ಮಾಡುವಾಗ ಇದು ಧರ್ಮದಲ್ಲಿ ಇದೆ ಎಂದೆ ಭಾವಿಸುತ್ತಾರೆ. ಇದರ ಮೂಲಕ ಅವನು ಅಲ್ಲಾಹುವಿನ ಸಾಮೀಪ್ಯಗಳಿಸಲು ಪ್ರಯತ್ನಿಸುತ್ತಾರೆ. ಆದ್ದರಿಂದ ಅವರು ತಮಗೆ ತೌಬಾದ ಅಗತ್ಯವಿದೆಯೆಂದು ಕಾಣುವುದಿಲ್ಲ. ಬಿದ್‌ಅತ್ ಬೆಳೆಯುವಾಗ ಸುನ್ನತ್ ಅಳಿಯುತ್ತದೆ ಮತ್ತು ಬಿದ್‌ಅತ್ ಮಾಡುವ ವ್ಯಕ್ತಿಗೆ ಸುನ್ನತ್ ಒಂದು ದ್ವೇಷಾಕಾರಿ ವಿಷಯವಾಗಿ ಬಿಡುತ್ತದೆ. ಇಲ್ಲಿಂದಲೇ ಅವರು ಅಹ್ಲುಸ್ಸುನ್ನತ್‌ಗಳನ್ನು ದ್ವೇಷಿಸಲಾರಂಭಿಸುತ್ತಾರೆ. ಬಿದ್‌ಅತ್ ದಾಸನನ್ನು ಅಲ್ಲಾಹುವಿನಿಂದ ದೂರಗೊಳಿಸುತ್ತದೆ. ಆತನ ಕೋಪಕ್ಕೆ ಪಾತ್ರಗೊಳಿಸುತ್ತದೆ.

ಹೃದಯದಲ್ಲಿ ಫಸಾದ್ ಮತ್ತು ವ್ಯತಿಚಲನೆಯನ್ನು ಉಂಟು ಮಾಡುತ್ತದೆ.

ಉ) ಬಿದ್‌ಅತೀ(ನೂತನವಾದಿ)ಗಳೊಂದಿಗೆ ನಮ್ಮ ನಡವಳಿಕೆ ಹೇಗಿರಬೇಕು?

ಬಿದ್‌ಅತ್‌ಗಳೊಂದಿಗೆ ಇರುವುದು, ಅವರೊಟ್ಟಿಗೆ ಸೇರುವುದು ಹರಾಮ್ ಆಗಿದೆ. ಅವರನ್ನು ನೇರ ದಾರಿಗೆ ತರಲು ಮತ್ತು ತಿಳಿಹೇಳಲು ಮತ್ತು ಬಿದ್‌ಅತ್‌ಅನ್ನು ನಿಷೇಧಿಸಲು ಮಾತ್ರ ಹೀಗೆ ಮಾಡಬಹುದು . ಅವರೊಂದಿಗೆ ಒಟ್ಟು ಸೇರುವುದರಿಂದ ಕೆಟ್ಟ ಪ್ರಭಾವ ಬೀಳುತ್ತದೆ. ಸಾಧ್ಯವಾದಷ್ಟು ನಮ್ಮನ್ನು ನಾವು ರಕ್ಷಿಸಿಕೊಳ್ಳಬೇಕು. ಆದ್ದರಿಂದ ಇವರ ಕೆಡುಕಿನಿಂದ ದೂರವಿರಬೇಕು. ಇವುಗಳೆಲ್ಲ ಇವರನ್ನು ಹಿಡಿಯಲು ಅಥವಾ ತಡೆಯಲು ಸಾಮರ್ಥ್ಯವಿಲ್ಲದಿದ್ದಲ್ಲಿ ಮಾತ್ರ. ಇನ್ನು ಅವರನ್ನು ಬಂಧಿಸುವ ಸಾಮರ್ಥ್ಯವಿದ್ದಲ್ಲಿ ಇಸ್ಲಾಮ್‌ನ ವಿದ್ವಾಂಸರು ಮತ್ತು ಆಡಳಿತಾಧಿಕಾರಿಗಳು ಅಂತಹವರನ್ನು ನಿಗ್ರಹದಲ್ಲಿಡುವುದು ಅವರ ಮೇಲೆ ಕಣ್ಣೋಟವಿಡುವುದು. ಅವರು ಕೆಡುಕನ್ನು ಹಬ್ಬಿಸದಂತೆ ತಡೆಯುವುದು ಕಡ್ಡಾಯವಾಗಿದೆ. ಏಕೆಂದರೆ ಇದು ಇಸ್ಲಾಮ್‌ಗೆ ಬಹಳ ಅಪಾಯಕಾರಿಯಾದ ವಿಷಯವಾಗಿದೆ. ಇಂತಹ ಸಂದರ್ಭದಲ್ಲಿ ಇನ್ನೊಂದು ನೆನಪಿಡಬೇಕಾದಂತಹ ವಿಷಯವೇನೆಂದರೆ ಕಾಫಿರ್ ಆಡಳಿತಗಳು ತಮ್ಮಲ್ಲಿ ಬಿದ್‌ಅತ್‌ಗಾರರನ್ನು ಬಹು ಸಂಖ್ಯೆಯಲ್ಲಿ ಹೊಂದಿರುತ್ತವೆ. ಅವು ಬಿದ್‌ಅತ್‌ಅನ್ನು ವ್ಯಾಪಿಸಲು ಸಂಪೂರ್ಣ ಅವಕಾಶ ನೀಡುತ್ತದೆ. ವಿವಿಧ ರೀತಿಯಲ್ಲಿ ಅವರಿಗೆ ಸಹಾಯವನ್ನು ಮಾಡುತ್ತದೆ. ಏಕೆಂದರೆ ಇದ–ರಿಂದ ಇಸ್ಲಾಮ್‌ನ ಅಂತ್ಯವಾಗುತ್ತದೆ ಮತ್ತು ಅದರ ರೂಪವು ಕೆಡುತ್ತದೆ.

ಸರ್ವ ಶ್ರೇಷ್ಠನಾದ ಪರಮ ಪಾವನನಾದ ಅಲ್ಲಾಹುವಿನಲ್ಲಿ ನಮ್ಮ ಪ್ರಾರ್ಥನೆಯೇನೆಂದರೆ ಅವನು ತನ್ನ ಧರ್ಮವನ್ನು ಸಂರಕ್ಷಿಸಲಿ. ತನ್ನ ಮಾತನ್ನು ಉನ್ನತಗೊಳಿಸಲಿ, ತನ್ನ ಶತ್ರುಗಳನ್ನು ನಿಂದ್ಯಗೊಳಿಸಲಿ, ಪ್ರವಾದಿ(ﷺ)ರ ಮೇಲೆ ಮತ್ತು ಅವರ ಕುಟುಂಬ, ಮಕ್ಕಳ ಮೇಲೆ ಮತ್ತು ಅವರ ಸಹಾಬಿಗಳ ಮೇಲೆ ಅಲ್ಲಾಹುವಿನ ಸ್ವಲಾತ್ ಸಲಾಮ್ ಇರಲಿ, (ಆಮೀನ್)

ಇಸ್ಲಾಮಿನ ಕುರಿತು ಮುಸ್ಲಿಮ್ ಮತ್ತು ಮುಸ್ಲಿಮೇತರರಲ್ಲಿರುವ
ತಪ್ಪುಕಲ್ಪನೆಗಳ ನಿವಾರಣೆಗಾಗಿ

# ಸತ್ಯ ಸಾರಥಿ

ಮಾಸಿಕ




ಓದಿರಿ... ಪ್ರೋತ್ಸಾಹಿಸಿರಿ... ಚಂದಾದಾರರಾಗಿರಿ...

ಚಂದಾದರ ವಾರ್ಷಿಕ : ₹ 120.00
ಅರ್ಧವಾರ್ಷಿಕ : ₹ 60.00

ಹೆಚ್ಚಿನ ಮಾಹಿತಿಗಳಿಗಾಗಿ ಸಂಪರ್ಕಿಸಿರಿ:

ಸತ್ಯಸಾರಥಿ ಕನ್ನಡ ಮಾಸಿಕ,
14–37 ಜಿ(1), ವಿನಾಯಕ ಕಾಂಪ್ಲೆಕ್ಸ್,
ಕೈಕಂಬ, ಬಿ. ಸಿ. ರೋಡ್, ಬಂಟ್ವಾಳ ದ.ಕ.
ಮೊಬೈಲ್: 9632897299
*email: satyasarathi2011@gmail.com*